ರಾಮಾಯಣವು ರಘುವಂಶದ ಹೃದಯ. ಇಲ್ಲಿ ರಾಮನಿಗೆ ಇರುವ ಪ್ರಾಮುಖ್ಯ ಬೇರೆಯವರಿಗೆ ಇಲ್ಲ. ದಿಲೀಪ ಧರ್ಮವನ್ನೂ, ರಘು ಅರ್ಥವನ್ನೂ ಅಜ ಕಾಮವನ್ನೂ ಪ್ರತಿನಿಧಿಸುವರು. ದಶರಥ ಯಾವುದನ್ನೂ ಸಮರ್ಥವಾಗಿ ಪ್ರತಿನಿಧಿಸದ ಶಾಪಗ್ರಸ್ತ ವ್ಯಕ್ತಿ. ಆದರೆ ಆ ಮೂರನ್ನೂ ಪ್ರತಿನಿಧಿಸುವ ಪುರುಷೋತ್ತಮ ರಾಮನಿಗೆ ಜನ್ಮ ಕೊಟ್ಟ ಹಿರಿಮೆ ಆತನದು. ದಶರಥನಿಗೆ ಶಾಪವೂ ವರವಾಯಿತಂತೆ!

**ಶಾಪೋಽಪ್ಯದೃಷ್ಟತನಯಾನನಪದ್ಮಶೋಭೇ**
**ಸಾನುಗ್ರಹೋ ಭಗವತಾ ಮಯಿ ಪಾತಿತೋಽಯಮ್**
**ಕೃಷ್ಯಾಂ ದಹನ್ನಪಿ ಖಲು ಕ್ಷಿತಿಮಿಂಧನೇದ್ಧೋ**
**ಬೀಜಪ್ರರೋಹಜನನೀಂ ಜ್ವಲನಃ ಕರೋತಿ**

(ಮಗನ ಮುದ್ದು ಮುಖವನ್ನೆ ಕಾಣದ ನನಗೆ (ದಶರಥನಿಗೆ) ತಾವು (ಶ್ರವಣಕುಮಾರನ ತಂದೆ) ಎಸೆದ ಶಾಪವೂ ವರವಾಯಿತು! ಹೊಲಕ್ಕೆ ಹಚ್ಚಿದ ಬೆಂಕಿ ಭೂಮಿಯನ್ನು ಮತ್ತಷ್ಟು ಫಲವತ್ತಾಗಿಸುತ್ತದಲ್ಲ!)

ಕುಶನಲ್ಲಿ ಪುನರ್ನಿರ್ಮಾಣದ ಕನಸು. ಉಳಿದವರು ಹಾಗೂ ಹೀಗೂ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋದವರು. ಅಲ್ಲೇ ಆರಂಭವಾದ ಪತನ ಅಗ್ನಿವರ್ಣನಲ್ಲಿ ಪೂರ್ಣವಾಗುತ್ತದೆ. ಅಗ್ನಿವರ್ಣ ಕಾಮುಕ; ವಿಷಯ ಲಂಪಟ. ಆತನದು ಅಧಾರ್ಮಿಕ ಕಾಮ; ಅರ್ಥನಾಶಕ ವಿಲಾಸ. ಅದರ ಪರಿಣಾಮ ಎಳೆ ವಯಸ್ಸಿನಲ್ಲೇ ಕ್ಷಯ. ಆತನಿಗೆ ಮಾತ್ರವಲ್ಲ; ಕುಲಕ್ಕೆ, ರಾಷ್ಟ್ರಕ್ಕೆ, ವ್ಯವಸ್ಥೆಗೆ. ಕೊನೆಯ ಸರ್ಗ ಅಗ್ನಿವರ್ಣ ಶೃಂಗಾರ. ಧ್ವನಿಪೂರ್ಣ ಶೀರ್ಷಿಕೆ. (ರಾಮ ಪತ್ನಿಯನ್ನು ಪರಿತ್ಯಜಿಸಿಯೂ ಏಕಪತ್ನೀವ್ರತಕ್ಕೆ ಅಂಟಿಕೊಂಡವನು). ಅದು ಕಾಳಿದಾಸದರ್ಶನ. ಅದಕ್ಕನುಗುಣವಾಗಿ ರಘುವಂಶದ ವಸ್ತುರಚನಾವಿನ್ಯಾಸ. ರಾಜ ಚರಿತದಲ್ಲಿ ಇತ್ಯಾತ್ಮಕ ನೇತ್ಯಾತ್ಮಕಗಳೆರಡನ್ನೂ ಪರಾಮರ್ಶಿಸಿದ ಮಹಾಕಾವ್ಯ ರಘುವಂಶ.

**ಸೂತ್ರಗತಿ:**

ರಘುವಂಶದಲ್ಲಿ ರಾಮಾಯಣಕಥೆಯ ಪಾಲು ದೊಡ್ಡದು. ಏಳು ಸರ್ಗಗಳಲ್ಲಿ (9 ರಿಂದ 15) 634 ಶ್ಲೋಕಗಳಲ್ಲಿ ವಾಲ್ಮೀಕಿ ರಾಮಾಯಣದ ಏಳು ಕಾಂಡಗಳ ಕಥೆಯೂ ಅಡಕವಾಗಿದೆ. ಅಲ್ಲಿ ಕಾಂಡಗಳೂ ಏಳು, ಇಲ್ಲಿ ಸರ್ಗಗಳೂ ಏಳು. ಆದರೆ ವಿಭಾಗ ಶೀರ್ಷಿಕೆ ಮೂಲ ರಾಮಾಯಣಕ್ಕೆ ಭಿನ್ನ ಎನ್ನುವುದನ್ನು ಆಗಲೇ ನೋಡಿದ್ದೇವೆ.

ಕಾಳಿದಾಸನು ರಾಮಾಯಣದ ಕತೆಯ ಹಂದರವನ್ನು ಯಥಾವತ್ತಾಗಿ ಅನುಸರಿಸಿದ್ದಾನೆ. ಅಲ್ಲಿ ಲೋಪವಾಗಲೀ ಮಾರ್ಪಾಡಾಗಲೀ ಇಲ್ಲ. ಅದಕ್ಕೆ ಕಾಳಿದಾಸನಿಗೆ ವಾಲ್ಮೀಕಿಯಲ್ಲಿದ್ದ ಗೌರವವೂ ಕಾರಣವಾಗಿರಬಹುದು. ಆತನಿಗೆ ವಾಲ್ಮೀಕಿಯ ಬಗ್ಗೆ ಅಪಾರ ಗೌರವ. ತುಂಬ ಹಿರಿಯರ, ಪೂಜ್ಯರ ಹೆಸರು ಹಿಡಿದು ಕರೆಯದಿರುವ ಸಂಪ್ರದಾಯವನ್ನು ಕಾಳಿದಾಸ ಪಾಲಿಸಿದ್ದಾನೆ. ವಾಲ್ಮೀಕಿಯ ಹೆಸರು ಹೇಳದೆ ಆತನನ್ನು ಕವಿ, ಮುನಿ, ಗುರು ವಿನೇತಾ, ಕಾರುಣಿಕ ಎನ್ನುವ ವಿಶೇಷಣಗಳಿಂದ ಗೌರವಿಸುತ್ತಾನೆ. ರಾಮಾಯಣವನ್ನು 'ಪ್ರಾಚೇತಸೋಪಜ್ಞ' ಎಂದು ಕರೆದಿದ್ದಾನೆ. (ಉಪಜ್ಞಾ ಜ್ಞಾನಂ ಆದ್ಯಂ ಸ್ಯಾತ್-ಅಮರಕೋಶ). ರಾಮಾಯಣ ಆದಿಕಾವ್ಯ; ವಾಲ್ಮೀಕಿ ಆದಿಕವಿ ತಾನೆ! ಕಾಳಿದಾಸನ ಗುರುಗೌರವಕ್ಕೆ ಸಾಕ್ಷಿ ಈ ಪದ್ಯ :

**ತಾಮಭ್ಯಗಚ್ಛದ್ ರುದಿತಾನುಸಾರೀ**
**ಕವಿಃ ಕುಶೇಧ್ಮಾಹರಣಾಯ ಯಾತಃ ।**
**ನಿಷಾದವಿದ್ಧಾಂಡಜದರ್ಶನೋತ್ಥಃ**
**ಶ್ಲೋಕತ್ವಮಾಪದ್ಯತ ಯಸ್ಯ ಶೋಕಃ ॥**

(ಅಳುವನ್ನು ಅನುಸರಿಸುವ ಕವಿ ಅವಳಿದ್ದಲ್ಲಿಗೆ (ಸೀತೆಯಿದ್ದಲ್ಲಿಗೆ) ಬಂದನು. ಬೇಡನು ಹೊಡೆದುರುಳಿಸಿದ್ದ ಹಕ್ಕಿಯನ್ನು ಕಂಡು ಉಕ್ಕಿದ ಅಳು ಆತನಿಂದ ಹಾಡಾಗಿ ಹೊಮ್ಮಿತಲ್ಲ!). ಸೀತೆ ಕಾಡುಪಾಲಾಗಿ ಗೋಳಿಡುತ್ತಿದ್ದ ಸಂದರ್ಭದಲ್ಲಿ ಆಗಮಿಸಿದ ಕವಿ ವಾಲ್ಮೀಕಿಯನ್ನು ಕಾಳಿದಾಸನು ಚಿತ್ರಿಸಿದ ರೀತಿ ಇದು. 'ಅಳುವನ್ನು ಅನುಸರಿಸುವವನು ಕವಿ' ಎನ್ನುವ ಮಾತು ಕವಿ ಶಬ್ದದ ನಿರ್ವಚನದಂತಿದೆ.

ವಾಲ್ಮೀಕಿರಾಮಾಯಣದ ಓಘವನ್ನು ಯಥಾವತ್ತಾಗಿ ಅನುಸರಿಸಿಯೂ, ಕಥನಕ್ರಮ ಮಾತ್ರ ಕಾಳಿದಾಸನಲ್ಲಿ ಇಡಿಯಾಗಿ ಭಿನ್ನವಾಗಿದೆ. ವಾಲ್ಮೀಕಿಯ ಕಥಾ ನಿರೂಪಣ ವಿಸ್ತಾರ ಇಲ್ಲಿ ಕಾಣದು. ಕಥೆ ಇಲ್ಲಿ ಬಿಂದು ಮಾತ್ರವೇ. ಕಾವ್ಯಾಂಶ ಇಲ್ಲಿ ಮೇಲುಗೈಯಾಗಿದೆ. ಕಲಾತ್ಮಕ ಕವಿತಾಭಿವ್ಯಕ್ತಿಗೆ ಕತೆ ಊರುಗೋಲು ಅಷ್ಟೆ. ಕಾಳಿದಾಸ ಸೋಪಜ್ಞ ಕವಿ, ಅನುಕರಣಶೀಲನಲ್ಲ.

**ಅಥವಾ ಕೃತವಾಗ್‌ದ್ವಾರೇ ವಂಶೇಸ್ಮಿನ್ ಪೂರ್ವಸೂರಿಭಿಃ ।**
**ಮಣೌ ವಜ್ರಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ ಮೇ ಗತಿಃ ॥**

(ಪೂರ್ವಸೂರಿಗಳು ಸೂರ್ಯವಂಶದಲ್ಲಿ ಮಾತಿನ ಕದ ತೆರೆದಿಟ್ಟಿದ್ದಾರೆ. ತೂತು ಕೊರೆದ ಮಣಿಗಳಲ್ಲಿ ದಾರ ಪೋಣಿಸುವುದಷ್ಟೆ ನನ್ನ ಕೆಲಸ). ಮಣಿಗಳನ್ನು ಪೋಣಿಸುವುದಾಗಿ ಕಾಳಿದಾಸ ಹೇಳಿಕೊಂಡಿದ್ದರೂ ಮಣಿಗಳ ಆಯ್ಕೆಯಲ್ಲಿ, ಗ್ರಥನವಿನ್ಯಾಸದಲ್ಲಿ ಸ್ವಂತಿಕೆಯ ಛಾಪು ಇದೆ. ವಾಲ್ಮೀಕಿಯೇ ಮೊದಲಾದ ಕವಿಗಳು ಬರೆದ ರಘುವಂಶೀಯ ರಾಜರ ಕತೆ ವಜ್ರದಿಂದ ತೂತು ಕೊರೆದ ಮಣಿ. ಅದನ್ನು ಏಕಸೂತ್ರಕ್ಕೆ ಪೋಣಿಸುವುದು ಕಾಳಿದಾಸನ ಕೆಲಸ. ಮಣಿಗಳನ್ನು ಅಳವಡಿಸುವಲ್ಲಿ ಪೋಣಿಸುವವನ ಸೌಂದರ್ಯಾಭಿರುಚಿ ಮತ್ತು ಔಚಿತ್ಯಪ್ರಜ್ಞೆ ಕೆಲಸಮಾಡುತ್ತದೆ. ಕಥೆ ಹಳೆಯದೇ ಆದರೂ ಕಾಳಿದಾಸನ ಕಥಾಸಂವಿಧಾನ, ಘಟನೆಗಳ ಸಂಯೋಜನೆ, ಕಾವ್ಯಾತ್ಮಕ ಅಭಿವ್ಯಕ್ತಿ ನೂತನವಾಗಿದೆ.

### ಮೃಗಯಾವರ್ಣನ :

ಅಜಮಹಾರಾಜನ ನಂತರಮಹಾರಥಿ ದಶರಥ ರಾಜ್ಯವನ್ನಾಳಿದ. ಆತ ಧ್ಯಾನಶೀಲನಾದ ಜಿತೇಂದ್ರಿಯ. ಆತನಲ್ಲಿ ರಾಜರಿಗೆ ಸಹಜವಾದ ಮದ್ಯ ಮಾನಿನಿ ಜೂಜು ಬೇಟೆಗಳ ಹುಚ್ಚು ಇರಲಿಲ್ಲವಂತೆ. ಆತನ ಆಳ್ವಿಕೆ ಆದರ್ಶಪ್ರಾಯವಾಗಿತ್ತು. ಆತನಿಗೆ ಮೂವರು ಹೆಂಡಿರು-ಮಗಧ, ಕೋಸಲ, ಕೇಕಯ ರಾಜ ಕುವರಿಯರು. ಆತ ಅಶ್ವಮೇಧ ಯಾಗ ಮಾಡಿದವ. ದಶ ದಿಕ್ಕುಗಳಲ್ಲಿ ಆತನ ರಥ ಸಂಚಾರ. ಇಂದ್ರನಿಗೂ ಯುದ್ಧದಲ್ಲಿ ಆತನ ಸಹಾಯಹಸ್ತ. ಹೀಗಿರಲೊಮ್ಮೆ ವಸಂತದಾಗಮನ; ವಸಂತೋತ್ಸವ. ಕುಮಾರಸಂಭವ ಮಹಾಕಾವ್ಯದಲ್ಲಿ ಅಕಾಲವಸಂತದ ವರ್ಣನೆಯಿದ್ದರೆ ಇಲ್ಲಿ ಸಕಾಲವಸಂತದ ವರ್ಣನೆ. ದಶರಥನಿಗೆ ಮಕ್ಕಳಿಲ್ಲದ ಕೊರಗು. ಅದನ್ನು ದಾಟಲಿಕ್ಕೋ ಏನೊ, ದಶರಥನಿಗೆ ಬೇಟೆಯ ಗೀಳು ಹತ್ತಿತು. ದಶರಥನದು ತಾಯ ಕರುಳು. ಆತ ಪ್ರಾಣಿಗಳನ್ನು ಕೊಲ್ಲಲಾರ. ಅವನ ಬೇಟೆಯೆಂದರೆ ವನವಿಹಾರ :

**ಗ್ರಥಿತಮೌಲಿರಸೌ ವನಮಾಲಯಾ**
**ತರುಪಲಾಶಸವರ್ಣತನುಚ್ಛದಃ ।**
**ತುರಗವಲ್ಗನಚಂಚಲಕುಂಡಲೋ**
**ವಿರರುಚೇ ರುರುಚೇಷ್ಟಿತಭೂಮಿಷು ॥**

(ತಲೆಯಲ್ಲಿ ಕಾಡುಹೂಗಳ ಮಾಲೆ ಮುಡಿದಿದ್ದಾನೆ. ಪ್ರಾಣಿ ಸಂಕುಲಕ್ಕೆ ವಿಶ್ವಾಸ ಬರಲೆಂದು ಎಲೆಯ ಬಣ್ಣದ ಕವಚ ತೊಟ್ಟಿದ್ದಾನೆ. ಕುದುರೆಯ ಗಂಭೀರ ನಡಿಗೆಗೆ ಅನುಗುಣವಾಗಿ ಆತನ ಕಿವಿಯ ಓಲೆಗಳು ಹೊಯ್ದಾಡುತ್ತಿವೆ. ಅಂತು ದಶರಥನು ಮೃಗಗಳು ನಡೆದಾಡಿದ ನೆಲದಲ್ಲಿ ಶೋಭಿಸಿದ). ಕಾಳಿದಾಸನದೂ ಹೆಂಗರುಳು. ಇವನ ಬೇಟೆಯ ವರ್ಣನೆಯೇ ವಿಚಿತ್ರ-ವಿಶಿಷ್ಟ. ಕಾಳಿದಾಸನ ಜೀವಪ್ರೀತಿ, ಪ್ರಕೃತಿಪ್ರೇಮ ಬೇಟೆಗೂ ಮಾರ್ದವತೆಯನ್ನು ನೀಡಿದೆ. ಅನುಕಂಪಾಮೃದುವಾದ ಕಾಳಿದಾಸನ ಮನಸ್ಸು ಬೇಟೆಯ ಕ್ರೌರ್ಯವನ್ನು ಚಿತ್ರಿಸಲಾರದು. ಇಲ್ಲಿ ಒಂದೊಂದು ಮೃಗವನ್ನು ಕಂಡಾಗಲೂ ಬದುಕಿನ ರಮ್ಯಸ್ಮೃತಿ ಮೇಲೆದ್ದು ದಶರಥ ಮೃಗವನ್ನು ಕೊಲ್ಲಲಾರದೆ ಹೋಗುತ್ತಾನೆ. ಕಾಳಿದಾಸನ ದಶರಥನಿಗೆ ಬೇಟೆಯಲ್ಲೂ ಬೇಟದ ನೆನಪು :

**ಅಪಿ ತುರಗ ಸಮೀಪಾದುತ್ಪತಂತಂ ಮಯೂರಂ**
**ನ ಸ ರುಚಿರಕಲಾಪಂ ಬಾಣಲಕ್ಷ್ಯೀಚಕಾರ ।**
**ಸಪದಿ ಗತಮನಸ್ಕಶ್ಚಿತ್ರಮಾಲ್ಯಾನುಕೀರ್ಣೇ**
**ರತಿವಿಗಲಿತಬಂಧೇ ಕೇಶಪಾಶೇ ಪ್ರಿಯಾಯಾಃ ॥**

(ಕುದುರೆಯ ಪಕ್ಕದಲ್ಲೇ ನವಿಲು ಕುಪ್ಪಳಿಸುತ್ತಿದ್ದರೂ, ಸುಂದರವಾಗಿ ಬಿಚ್ಚಿದ ಸೋಗೆಯನ್ನು ಕಂಡ ದಶರಥನಿಗೆ ರತಿಬಂಧ ಸಡಿಲಿದ ಸಂದರ್ಭದಲ್ಲಿ ಬಣ್ಣ ಬಣ್ಣದ ಚೆದುರಿದ ಹೂಗಳ ಮಾಲೆ ಮುಡಿದ ಹೆಂಡತಿಯ ಮೊದೆಗೂದಲ ನೆನಪಾಗಿ ಬಾಣ ಹೊಡೆಯಲಾಗಲಿಲ್ಲ). ಕಾಳಿದಾಸನ ಜೀವಪ್ರೀತಿ, ಪ್ರಕೃತಿ ಪ್ರೇಮ ಇಂಥದು. ನಮ್ಮ ಕನ್ನಡದ ಪಂಪ ಕಾಳಿದಾಸನ ತಮ್ಮ. ವಿಕ್ರಮಾರ್ಜುನನ ಬೇಟೆಯ ಸಂದರ್ಭದಲ್ಲಿ ಇದೇ ಪದ್ಯವನ್ನು ಸೊಗಸಾಗಿ ಅನುವಾದಿಸಿದ್ದಾನೆ :

**ಜವಮುಟಿದೊಂದು ಸೋಗೆನವಿಲೊಯ್ಯನೆ ಕರ್ಕಡೆಗಾಸಿಯಾಗಿ ಪಾ**
**ಱುವುದುಮಿದೆನ್ನ ನಲ್ಲಳ ರತಿಶ್ರಮ ವಿಶ್ಲಥ ಕೇಶಪಾಶದೊಳ್**
**ಸವಸವನಾಗಿ ತೋಱಿದಪುದೆಂಬುದೆ ಕಾರಣದಿಂದದಂ ಗುಣಾ**
**ರ್ಣವನಿಡಲೊಲ್ದನಿಲ್ಲ ಹಯವಲ್ಗನ ಸಂಚಳ ರತ್ನಕುಂಡಳಂ**

ಬೇಟೆ ದಶರಥನನ್ನು ಕ್ರಮೇಣ ಜಾಣೆ ಕಾಮಿನಿಯಂತೆ ಸೆಳೆಯಿತಂತೆ. ರಾತ್ರಿ ಹೊತ್ತೂ ಕಾಡಿನಲ್ಲೇ ಮಲಗುತ್ತಿದ್ದನಂತೆ. ಬೆಳಗಿನ ಜಾವ ಆನೆಗಳ ಕಿವಿ ಬಡಿತದ ಸಪ್ಪಳ ನಗಾರಿಯ ಬಡಿತವಾಗಿ ಅವನನ್ನು ಎಬ್ಬಿಸಿಬಿಡುತ್ತಿತ್ತು. ಇಂಪಾದ ಹಕ್ಕಿಗಳ ಕಲರವ ಅರಮನೆಯ ವಂದಿಮಾಗದರ ಮಂಗಲಗೀತವಾಗುತ್ತಿತ್ತು. ಹೀಗಿರುವಾಗ ಒಮ್ಮೆ ಬೆಳಕು ಹರಿಯುವ ಮುನ್ನ ಹತ್ತಿರದ ಹೊಳೆಯ(ತಮಸಾ) ನೀರಿನಲ್ಲಿ ಬಿಂದಿಗೆ ಮುಳುಗಿಸಿದ ಬುಡುಬುಡು-ಬುಳುಬುಳು ಶಬ್ದ. ಒಡನೆಯೇ ಆತನಲ್ಲಿ ಶಬ್ದವೇಧ ಜಾಗ್ರತವಾಯ್ತು. ಆನೆ ಸೊಂಡಿಲಿನಲ್ಲಿ ನೀರು ತುಂಬುವ ಸಪ್ಪಳವೆಂದು ಭಾವಿಸಿ ಶಬ್ದಪಾತಿ ಬಾಣವನ್ನು ಎಸೆದುಬಿಟ್ಟ. ಅಷ್ಟೇ ಶೀಘ್ರವಾಗಿ 'ಅಯ್ಯೋ ಅಪ್ಪ ಅಮ್ಮ' ಆರ್ತನಾದ ಅಪ್ಪಳಿಸಿ ಬಂತು. ದಶರಥ ಕುಸಿದು ಹೋದ; ತನ್ನ ಎದೆಗೇ ಬಾಣ ಬಡಿದ ಅನುಭವ! ಕಾಳಿದಾಸನೂ ನಿಟ್ಟುಸಿರು ಬಿಟ್ಟ :

**ನೃಪತೇಃ ಪ್ರತಿಷಿದ್ಧಮೇವ ತತ್ ಕೃತವಾನ್ ಪಂಕ್ತಿರಥೋ ವಿಲಂಘ್ಯ ಯತ್ ।**
**ಅಪಥೇ ಪದಮರ್ಪಯಂತಿ ಹಿ ಶ್ರುತವಂತೋಽಪಿ ರಜೋನಿಮೀಲಿತಾಃ ॥**

(ರಾಜರಿಗೆ ನಿಷಿದ್ಧವಾದದ್ದನ್ನು ದಶರಥ ಮೀರಿ ಮಾಡಿಬಿಟ್ಟ. ಛೇ! ಎಲ್ಲವನು ಬಲ್ಲವರೂ ಕೂಡ ರಜೋಗುಣ ಮೇಲೆದ್ದು ಬಂದಾಗ ಹಾದಿ ತಪ್ಪಿ ನಡೆದುಬಿಡುತ್ತಾರೆ!) ಯುದ್ಧದಲ್ಲಲ್ಲದೆ ಬೇರೆಡೆ ಆನೆಯ ಹತ್ಯೆ ನಿಷಿದ್ಧ (ಲಕ್ಷ್ಮೀಕಾಮೋ ಯುದ್ಧಾದನ್ಯತ್ರ ಕರಿವಧಂ ನ ಕುರ್ಯಾತ್) ಎನ್ನುವುದು ಶಾಸ್ತ್ರೋಕ್ತಿ.

ದಶರಥನಿಗೆ ಇದು ತಿಳಿದಿತ್ತು. ಆ ಕ್ಷಣದ ದೌರ್ಬಲ್ಯ. ಮನಸ್ಸು ರಜೋಗುಣಕ್ಕೆ ಪಕ್ಕಾಯಿತು. ಅದು ಅವನ ವಿಧಿ. ದಶರಥ ಶಾಪವನ್ನು

ಹೊತ್ತು ಮರಳಿದ. ಮೌನಿಯಾದ; ಅದು ಕೊರಗೋ! ಧ್ಯಾನವೋ! ಅಂತೂ ಕಡಲ ಗಾಂಭೀರ್ಯ ಅವನನ್ನಾವರಿಸಿತು.

**ಪ್ರಾಪ್ತನುಗಃ ಸಪದಿ ಶಾಸನಮಸ್ಯ ರಾಜಾ**
**ಸಂಪಾದ್ಯ ಪಾತಕವಿಲುಪ್ತಧೃತಿರ್ನಿವೃತ್ತಃ ।**
**ಅಂತರ್ನಿವಿಷ್ಟಪದಮಾತ್ಮವಿನಾಶಹೇತುಂ**
**ಶಾಪಂ ದಧಜ್ಜ್ವಲನಮೌರ್ವಮಿವಾಂಬುರಾಶಿಃ ॥**

(ರಾಜ ಅನುಚರರೊಡನೆ ಮರಳಿ ಬಂದ. ಆತನ ಮುನಿಯ ಶಾಪವನ್ನು ಗಳಿಸಿದ್ದ. ಪಾಪಪ್ರಜ್ಞೆಯಿಂದ ಆತನ ಉತ್ಸಾಹ ಉಡುಗಿಹೋಗಿತ್ತು. ಒಡಲೊಳಗೆ ಬಡಬಾಗ್ನಿಯನ್ನು ಬಚ್ಚಿಟ್ಟುಕೊಂಡ ಕಡಲಿನಂತೆ ನನ್ನ ಸಾವಿನ ಶಾಪವನ್ನು ತನ್ನೊಳಗೇ ಬಚ್ಚಿಟ್ಟುಕೊಂಡ). ಧ್ಯಾನ ಮೌನಿಯಾದ ದಶರಥ ರಾಮೋದಯಕ್ಕೆ ಕಾರಣನಾದ.

ಈ ಸರ್ಗದ ಕವಿತಾ ನಿರ್ಮಾಣ ಕೌಶಲ್ಯವೂ ಮನಃಸ್ಪರ್ಶಿಯಾದದ್ದು. ವಸಂತ ವರ್ಣನೆಯಷ್ಟೇ ಅಲ್ಲದೆ ಮೃಗಯಾವರ್ಣನೆ ಕೂಡ ಮೃದು ಮಧುರ ಪದಶಯ್ಯೆಯಿಂದ ಮನಸೆಳೆಯುತ್ತದೆ. ಉದ್ದಕ್ಕೂ ಯಮಕ ಮನಮೋಹಕವಾಗಿದೆ. ಛಂದಸ್ಸಿನ ಲಾಸ್ಯದ ಸೊಗಸೇ ಸೊಗಸು. ದ್ರುತವಿಲಂಬಿತ, ವಸಂತತಿಲಕ. ಶಾಲಿನೀ, ಔಪಚ್ಛಂದಸಿಕ, ರಥೋದ್ಧತಾ, ಪುಷ್ಪಿತಾಗ್ರಾ, ಸ್ವಾಗತಾ, ವೈತಾಲೀಯ, ಮತ್ತಮಯೂರ ವೃತ್ತಗಳ ನಡೆಯಿಂದಾಗಿ ಕಥೆ ದೃಶ್ಯವತ್ತಾಗಿ ಮೂಡಿದೆ. ರೂಪಕಗಳ, ಚಿತ್ರಗಳ ಸಾಲು ಸಾಲು ಮೆರವಣಿಗೆ, ಕವಿತೆಯ ಸುಸಾಧ್ಯತೆಗಳನ್ನೆಲ್ಲ ಇಲ್ಲಿ ಸೂರೆಗೊಂಡು, ರಾಮಾಯಣಕತೆಯ ಆರಂಭದಲ್ಲೇ ಪೂರ್ವಸೂರಿಗೆ ಕವಿತಾಕಾಣಿಕೆಯನ್ನು ಎತ್ತಿ ಹಿಡಿದಂತಿದೆ ಈ ಸರ್ಗ ನಿರ್ಮಿತಿ.

**ರಾಮಾವತಾರ :**

ಶಾಪದ ಕಾರಣದಿಂದಾದರೂ ಮಕ್ಕಳಾದಾವೆಂದು ದಶರಥ ಕಾಯುತ್ತಲೇ ಇದ್ದ. ಹತ್ತು ಸಾವಿರ ವರ್ಷ ಕಳೆದರೂ ಶೋಕದ ಕತ್ತಲ ಕಳೆಯುವ ಮಕ್ಕಳೆಂಬ ಬೆಳಕು ಹುಟ್ಟಿಬರಲೇ ಇಲ್ಲ. ಋಷ್ಯಶೃಂಗಾದಿಗಳು ರಾಜನಿಗೆ ಸಂತಾನ ಬಯಸಿ ಪುತ್ರಕಾಮೇಷ್ಟಿಯನ್ನು ಮಾಡಿದರು. ರಾವಣನ ಉಪಟಳಕ್ಕೊಳಗಾದ ದೇವತೆಗಳು ಇದೇ ಸಂದರ್ಭವನ್ನು ಬಳಸಿಕೊಂಡು ಶ್ರೀಹರಿಗೆ ಶರಣಾದರು – ಬಿಸಿಲ ಬೇಗೆಯಿಂದ ಬಳಲಿದ ದಾರಿಹೋಕರು ತಣ್ಣೆಳಲ ಮರವನ್ನು ಆಶ್ರಯಿಸುವಂತೆ ಆ ದೇವತೆಗಳಿಗೆ ಶ್ರೀಹರಿ ಶರತ್ಕಾಲದ ಬೆಳಗಿನ ಬಿಸಿಲಿನಂತೆ (ಹಿತವಾಗಿ) ಕಂಡನಂತೆ. ಆತನಿಗೆ ನಮಸ್ಕರಿಸಿ ದೇವತೆಗಳು, ಮಾತಿಗೂ ಮನಸ್ಸಿಗೂ ನಿಲುಕದ ಆತನನ್ನು ಮಾತಿನಿಂದಲೇ ಸ್ತುತಿಸುತ್ತಾರೆ:

**ನಮೋ ವಿಶ್ವಸೃಜೇ ಪೂರ್ವಂ ವಿಶ್ವಂ ತದನು ಬಿಭ್ರತೇ ।**
**ಅಥ ವಿಶ್ವಸ್ಯ ಸಂಹರ್ತ್ರೇ ತುಭ್ಯಂ ತ್ರೇಧಾ ಸ್ಥಿತಾತ್ಮನೇ ॥**

(ಈ ಜಗವನ್ನು ಸೃಷ್ಟಿಸಿದವನು; ತದನಂತರ ಪರಿಪಾಲಿಸಿದವನು; ಆ ಬಳಿಕ ಸಂಹಾರ ಮಾಡಿದವನು ನೀನು. ಸೃಷ್ಟಿ – ಸ್ಥಿತಿ – ಸಂಹಾರಕರ್ತ (ಬ್ರಹ್ಮ–ವಿಷ್ಣು–ಶಿವ)ನಾದ ಪರಮಾತ್ಮ ನೀನು. ನಿನಗೆ ನಮನಗಳು.)

**ರಸಾಂತರಾಣ್ಯೇಕರಸಂ ಯಥಾ ದಿವ್ಯಂ ಪಯೋಽಶ್ನುತೇ ।**
**ದೇಶೇ ದೇಶೇ ಗುಣೇಷ್ವೇವಮವಸ್ಥಾಸ್ತ್ವಮವಿಕ್ರಿಯಃ ॥**

(ಮುಗಿಲಿಂದ ಬಿದ್ದ ಮಳೆ (ಒಂದೇ ರುಚಿಯುಳ್ಳದ್ದು) ಆಯಾ ಪ್ರದೇಶಗಳ ಮಣ್ಣಿನ ಗುಣದಿಂದಾಗಿ ಬೇರೆ ಬೇರೆ ರುಚಿಯುಳ್ಳದ್ದಾಗುವಂತೆ ಬದಲಾಗದ ನೀನು ವಿಭಿನ್ನ ಗುಣ ಸಂಪರ್ಕದಿಂದ ಭಿನ್ನನಾಗಿ ತೋರುವೆ.)

**ಬಹುಧಾಪ್ಯಾಗಮೈರ್ಭಿನ್ನಾಃ ಪಂಥಾನಃ ಸಿದ್ಧಿಹೇತವಃ ।**
**ತ್ವಯ್ಯೇವ ನಿಪತಂತ್ಯೋಘಾ ಜಾಹ್ನವೀಯಾ ಇವಾರ್ಣವೇ ॥**

(ಪರಮಾರ್ಥಸಿದ್ಧಿಯ ಮಾರ್ಗಗಳು ನಾನಾ ಬಗೆಯವು ಆಗಿದ್ದರೂ, ಅವೆಲ್ಲವೂ ನಿನ್ನನ್ನೇ ಸೇರುತ್ತವೆ. ಗಂಗೆಯ (ಉಪನದಿಗಳನ್ನು ಒಳಗೊಂಡ) ಪ್ರವಾಹ ಸಂತತಿ ಕಡಲನ್ನೇ ಸೇರುತ್ತವಲ್ಲ!)

ದೇವತಾಸ್ತುತಿಗಳಿಂದ ಪ್ರೀತನಾದ ಶ್ರೀಹರಿಯು ರಾವಣನ ತಪಸ್ಸಿನ ಸಂಗತಿಯನ್ನೂ ಬ್ರಹ್ಮದೇವನು ಆತನಿಗೆ ನೀಡಿದ ವರದ ವಿಚಾರವನ್ನೂ ತಿಳಿಸಿದನು. ಮನುಷ್ಯನಾಗಿ ಅವತರಿಸಿ ರಾವಣನ ತಲೆ ಕಡಿಯುವುದಾಗಿ ಭರವಸೆ ನೀಡಿದನು. ರಾವಣನೆಂಬ ಬರಗಾಲದಿಂದ ಪೀಡಿತರಾದ ದೇವತೆಗಳಿಗೆ ಮಾತಿನ ಅಮೃತಧಾರೆಯ ತಂಪೆರೆದನು. ದೇವತೆಗಳೆಂಬ ಸಸ್ಯಗಳಿಗೆ ನೀರೆರೆದ ಮೇಘಶ್ಯಾಮ ಕೂಡಲೇ ಮರೆಯಾಯಿತು. ಹೂಗಳು ತಮ್ಮ ಅಂಶವಾದ ಸುರಭಿಯೊಂದಿಗೆ ಗಾಳಿಯನ್ನು ಹಿಂಬಾಲಿಸಿದಂತೆ, ದೇವತೆಗಳು ವಿಷ್ಣು ಸಹಾಯಕ್ಕಾಗಿ ಸ್ವಾಂಶದಿಂದ ಆತನನ್ನು ಹಿಂಬಾಲಿಸಿ ನಾನು ಜನ್ಮತಳೆಯುವರು.

ದಶರಥನ ಪುತ್ರಕಾಮೇಷ್ಟಿಯ ಅಗ್ನಿಕುಂಡದಿಂದ ದೇವಪುರುಷನೊಬ್ಬ ಎದ್ದು ಬಂದು ರಾಜನಿಗೆ ಪಾಯಸಾನ್ನವನ್ನ ನೀಡಿದನು. ಸಮುದ್ರವು ತನ್ನ ಸಾರವನ್ನು (ಆವಿಯನ್ನು) ನೀಡಿದಾಗ ಅದನ್ನು ಸ್ವೀಕರಿಸುವ ಇಂದ್ರನಂತೆ ದಶರಥನು ಪಾಯಸಾನ್ನವನ್ನು ಪಡೆದು ತನ್ನ ರಾಣಿಯರಿಗೆ ಹಂಚಿದನು. ಕೌಸಲ್ಯೆ ಕೈಕೇಯಿಯರಿಗೆ ಅರ್ಧಭಾಗವನ್ನು ಸಮನಾಗಿ ನೀಡಿದನು. ಅವರು ಅದರಲ್ಲಿ ಅರ್ಧಭಾಗವನ್ನು ಸುಮಿತ್ರೆಗೆ ನೀಡಿದರು. ಅವರು ಫಲಸಂಪತ್ತನ್ನು ತಮ್ಮೊಳಗೆ ಬಚ್ಚಿಟ್ಟುಕೊಂಡಂತೆ ಬಸಿರಾದರು. ಅವರೆಲ್ಲರಿಗೂ ಒಂದೇ ಬಗೆಯ ಕನಸು ಬಿತ್ತು. ಕನಸಿನಲ್ಲಿ ಖಡ್ಗ, ಗದೆ, ಶಾರ್ಙ್ಗ, ಶಂಖ, ಚಕ್ರಗಳನ್ನುಳ್ಳ ವಾಮನಮೂರ್ತಿ ರಕ್ಷಕನಾಗಿ ಕಾಣಿಸಿಕೊಂಡನು. ಚಿನ್ನದ ಗರಿಯ ಗರುಡ ಅವನನ್ನು ಹೊತ್ತಿದ್ದ. ಆತನ ಎದೆಯಲ್ಲಿ ಕೌಸ್ತುಭ; ಬಳಿಯಲ್ಲಿ ಕಮಲದ ಬೀಸಣಿಕೆಯಿಂದ ಗಾಳಿಬಿಸುವ ಲಕ್ಷ್ಮಿ; ದೇವಗಂಗೆಯಲ್ಲಿ ಮಿಂದು ಮಡಿಯಾಗಿ ವೇದರಹಸ್ಯವನ್ನು ಪಠಿಸುವ ಸಪ್ತರ್ಷಿಗಳು. ಇದನ್ನು ಕೇಳಿ ದಶರಥನಿಗೆ ಜಗದ್ಗುರುವಿಗೆ ನಾನು ಗುರು (ತಂದೆ) ಆದನೆಂದು ಅನಿಸಿತಂತೆ. ಪರಿಪೂರ್ಣನಾದ ಅದ್ವಿತೀಯನಾದ ವಿಭು ಆ ರಾಣಿಯರ ಗರ್ಭದಲ್ಲಿ ನಾಲ್ಕಾಗಿ ವಿಭಕ್ತನಾದನು – ನಿರ್ಮಲವಾದ ನೀರಿನ ತೆರೆಗಳಲ್ಲಿ ಬಹುವಾಗಿ ತೋರುವ ಚಂದ್ರಬಿಂಬದಂತೆ. ಕೌಸಲ್ಯೆಗೆ ಮಗುವಾಯಿತು. ಮುದ್ದಾಗ ಮಗು. ಅದಕ್ಕಾಗಿ ರಾಮ (ಸಂತೋಷದಾಯಕ) ಎಂದು ತಂದೆ ಹೆಸರಿಟ್ಟ. ಆ ಹೆಸರು 'ಜಗತ್ ಪ್ರಥಮಮಂಗಲ'. (ಆನಂದದಾಯಕವಾದ ಆದಿಕಾವ್ಯಕ್ಕೆ ಕಾರಣ). ರಾಮ ರಘುವಂಶಪ್ರದೀಪ. ಅವನ ಹೊಳಪಿಗೆ ಸೂತಿಕಾಗೃಹದ ದೀಪಗಳೆಲ್ಲ ಮಂಕಾದವಂತೆ. ಕೈಕೇಯಿಗೆ ಹುಟ್ಟಿದ ಮಗು ಭರತ. ಸಂಪತ್ತಿನೊಂದಿಗೆ ವಿನಯವೂ ಸೇರಿದಂತೆ ಭರತ ತಾಯ ಮಡಿಲಲ್ಲಿ ಶೋಭಿಸಿದ. ಸುಮಿತ್ರೆಗೆ ಅವಳಿ ಮಕ್ಕಳು – ಲಕ್ಷ್ಮಣ, ಶತ್ರುಘ್ನ.

**ಸುತೌ ಲಕ್ಷ್ಮಣಶತ್ರುಘ್ನೌ ಸುಮಿತ್ರಾ ಸುಷುವೇ ಯಮೌ**
**ಸಮ್ಯಗಾರಾಧಿತಾ ವಿದ್ಯಾ ಪ್ರಬೋಧವಿನಯಾವಿವ**

ಲಕ್ಷ್ಮಣ ಶತ್ರುಘ್ನರ ಜನ್ಮವನ್ನು ನೆಪಮಾಡಿಕೊಂಡು ಕವಿ ಶಿಕ್ಷಣದ ಬಗ್ಗೆ ಮಹತ್ವದ ಮಾತನ್ನಾಡಿದ್ದಾನೆ. (ಸರಿಯಾದ ಕ್ರಮದಲ್ಲಿ ಕಲಿಸಿದ – ಕಲಿತ ವಿದ್ಯೆ ವಿಷಯ ಪರಿಣಿತಿ ಮತ್ತು ಹೃದಯ ಸಂಸ್ಕಾರ ರೂಪ ವಿನಯವನ್ನು ಹಡೆಯುತ್ತದೆ). ಕೇವಲ ವಿಷಯಪರಿಣಿತಿ ವಿದ್ಯೆಯ ಫಲವಾದರೆ ಮನುಷ್ಯ ರಾಕ್ಷಸನಾಗಿಬಿಡುತ್ತಾನೆ. ವ್ಯಕ್ತಿತ್ವವನ್ನು ಪರಿವರ್ತಿಸುವುದು, ಉನ್ನತೀಕರಿಸುವುದು ವಿದ್ಯೆಯ ಫಲವಾಗಬೇಕು. ಕಾಳದಾಸ ಉದ್ದಕ್ಕೂ, ವಿನಯ ಪದವನ್ನು ಶಿಕ್ಷಣ ಎನ್ನುವ ಅರ್ಥದಲ್ಲಿ ಬಳಸಿದ್ದಾನೆ. ಸಮಷ್ಟಿಹಿತವನ್ನು ಸಾಧಿಸುವ ದಿಶೆಯಲ್ಲಿ ರೂಪಿತವಾಗಬೇಕಾದ ಅಗತ್ಯವನ್ನು ಆತ ಮನಗಂಡಿದ್ದ. ಸುಮಿತ್ರೆಯ ಪ್ರಸವದ ಸಂದರ್ಭದಲ್ಲಿ ವಿದ್ಯೆಯ ಬಗ್ಗೆ ಮಾತನಾಡಿದ ಕವಿ ವಿದ್ಯೆಯೇ ಮಾನವನಿಗೆ ಒಳ್ಳೆಯ ಮಿತ್ರ ಎನ್ನುವುದನ್ನೂ ಧ್ವನಿಸಿದ್ದಾನೆ.

**ಸ್ವಾಭಾವಿಕಂ ವಿನೀತತ್ವಂ ತೇಷಾಂ ವಿನಯಕರ್ಮಣಾ ।**
**ಮುಮೂರ್ಚ್ಛ ಸಹಜಂ ತೇಜೋ ಹವಿಷೇವ ಹವಿರ್ಭುಜಾಮ್ ॥**

(ಆ ಮಕ್ಕಳು ಸಹಜವಾಗೇ ಸಂಸ್ಕಾರವಂತರು; ಅವರಿಗೆ ಶಿಕ್ಷಣ ನೀಡಿದಾಗ ಅವರು ಮತ್ತಷ್ಟು ಸುಸಂಸ್ಕೃತರಾದರು – ಅಗ್ನಿಗೆ ಪ್ರಭೆ ಸಹಜ; ತುಪ್ಪ ಹಾಕಿದಾಗ ಅದು ಪ್ರಭಾಪುಂಜವಾಗಿ ಬೆಳಗುವುದು ಹೇಗೋ

ಹಾಗೆ). ವಿಭಿನ್ನ ಸ್ವಭಾವದ ಆ ನಾಲ್ವರು ರಘುಕುಲವನ್ನು ಬೆಳೆಸಿದರು - ವಿರುದ್ಧ ಸ್ವಭಾವದ ಋತುಗಳು ಕಾಡನ್ನು ಬೆಳೆಸಿ ಉಳಿಸುವಂತೆ. ಸೌಭ್ರಾತತ್ವ ಅವರಲ್ಲಿ ಸಮನಾಗಿದ್ದರೂ ರಾಮ-ಲಕ್ಷ್ಮಣ, ಭರತ-ಶತ್ರುಘ್ನ ಜೊತೆಯಾಗಿರುತ್ತಿದ್ದರು. ಗಾಳಿ-ಬೆಂಕಿ, ಚಂದ್ರ-ಕಡಲು ಅವರ ಸಂಬಂಧ. ರಾಜನಿಗೋ ಅವರು ಧರ್ಮ-ಅರ್ಥ-ಕಾಮ-ಮೋಕ್ಷಗಳ ಪ್ರತಿನಿಧಿಗಳಂತೆ ಕಂಡರು. ಕಥನದ ಓಟಕ್ಕೆ ಅನುಕೂಲವಾದ 'ಅನುಷ್ಟುಪ್' ವೃತ್ತದ, ಸರಳ ಶೈಲಿಯಲ್ಲಿ ಈ ಸರ್ಗರಚನೆ ಇದೆ. ಇಲ್ಲಿ ಉಪಮಾನಗಳ ಚೆಲುವು ವಿಶೇಷ.

**ಸೀತಾವಿವಾಹವರ್ಣನ :**

ಇಲಿಯ ಕತೆ ಉತ್ಸಾಹ ಭಾವದ್ದು. ಅದಕ್ಕೆ ಹೊಂದುವ ರಥೋದ್ಧತಾ ವೃತ್ತದಲ್ಲಿ ಈ ಸರ್ಗ ರಚಿತವಾಗಿದೆ. ವೀರ ಭಾವ ಈ ಸರ್ಗದಲ್ಲಿ ಮೇಲ್ಪಟ್ಟು ತೋರುತ್ತದೆ.

ಯಜ್ಞರಕ್ಷಣೆಗಾಗಿ ವಿಶ್ವಾಮಿತ್ರನು ಬಾಲಕರಾದ ರಾಮ-ಲಕ್ಷ್ಮಣರನ್ನು ಯಾಚಿಸಿದನು. **ತೇಜಸಾಂ ಹಿ ನ ವಯಃ ಸಮೀಕ್ಷ್ಯತೇ!** (ಸಾಮರ್ಥ್ಯವನ್ನು ಲಕ್ಷಿಸುವುದೇ ವಿನಾ ವಯಸ್ಸನ್ನಲ್ಲ). ದಶರಥನ ಅಪ್ಪಣೆಯಂತೆ ವಿಶ್ವಾಮಿತ್ರನೊಂದಿಗೆ ಹೊರಟ ಬಾಲಕರು ತಂದೆಯ ಕಾಲಿಗೆ ಬಾಗಿದರು. ಅವರ ಕಣ್ಣೀರು ತಂದೆಯ ಕಾಲಿಗೆ; ತಂದೆಯ ಕಣ್ಣೀರು ಆ ಬಾಲಕರ ತಲೆಗೆ! ವಿಶ್ವಾಮಿತ್ರನು ಅವರಿಗೆ ಬಲಾತಿಬಲ ವಿದ್ಯೆಯನ್ನು ನೀಡಿದ. ಆ ವಿದ್ಯೆಯ ಬಲದಿಂದ ದೂರದ ದಾರಿ ಸಾಗಿದರೂ ಬಳಲದೆ, ತಾಯ ಬಳಿ ಇದ್ದ ಮಕ್ಕಳಂತೆ ಅವರು ಗುರು ವಿಶ್ವಾಮಿತ್ರನ ಜೊತೆ ಸಾಗಿದರು. ತಮ್ಮ ನಾಡಿನ ಕಥೆ ಕೇಳುತ್ತ ಸಾಗಿದ ಆ ರಾಜಕುಮಾರರಿಗೆ ಕಾಲ್ನಡಿಗೆಯ ಕಷ್ಟ ಕಾಣಲೇ ಇಲ್ಲ. ತಮ್ಮ ನಾಡಿನ ಸಿಹಿನೀರ ಕೆರೆ-ತೊರೆ, ಹಕ್ಕಿಗಳ ಚಿಲಿಪಿಲಿ, ಉರಿ, ಆಗಾಗ ಕಾಣಿಸಿ ಮರೆಯಾಗುವ ಮೋಡಗಳ ನೆಳಲು ಅವರಿಗೆ ಅಪ್ಯಾಯಮಾನವೆನಿಸಿತು. ನಾಡಿನ ಚಾರಿತ್ರಿಕ ಪ್ರಜ್ಞೆ ಮತ್ತು ವರ್ತಮಾನದ ಪ್ರಕೃತಿ ಪ್ರೇಮ ಈ ನೆಲವನ್ನಾಳುವವರಿಗೆ ಬಲ ಮತ್ತು ಅತಿಬಲ ಎಂದು ಕವಿ ಮುಗುಮ್ಮಾಗಿ ಸೂಚಿಸಿದ್ದಾನೆ.

ಸುಕೇತು ಎನ್ನುವ ಯಕ್ಷನ ಮಗಳು ತಾಟಕಾ ಅಗಸ್ತ್ಯರ ಶಾಪದಿಂದ ನರಭಕ್ಷಕ ರಾಕ್ಷಸಿಯಾದ ಕಥೆ ಕೇಳಿ, ರಾಮನು ಬಿಲ್ಲನ್ನು ಠೇಂಕರಿಸಿದ. ಇದನ್ನು ಕೇಳಿದ ಆ ಕೃಷ್ಣಪಕ್ಷದ ರಾತ್ರಿಯಂತಿದ್ದ ತಾಟಕಿ ಸಿಂಹಗರ್ಜನೆ ಮಾಡುತ್ತ ಬಿರುಗಾಳಿಯಂತೆ ಎರಗಿದಳು. ಅವಳನ್ನು ಕಂಡ ರಾಮ ಸ್ತ್ರೀವಧೆಯ ಕರುಣೆಯನ್ನೂ, ಬಾಣವನ್ನೂ ಒಟ್ಟಿಗೇ ಬಿಟ್ಟನಂತೆ. ತಾಟಕಾವಧೆ ರಾಕ್ಷಸನಾಶಕ್ಕೆ ಬಾಗಿಲು ತೆರೆಯಿತು! ಆಕೆಯ ಪತನಕ್ಕೆ ಕಾಡಿನ ನೆಲ ಮಾತ್ರ ನಡುಗಲಿಲ್ಲ; ರಾವಣನ ಸಿರಿ-ಸಂಪತ್ತೂ ನಡುಗಿತು. ಸೂರ್ಯನಿಂದ ಬೆಂಕಿಗೆ ದಾಹಕ ಶಕ್ತಿ ಒದಗುವಂತೆ ವಿಶ್ವಾಮಿತ್ರನಿಂದ ರಾಮನಿಗೆ ಮಂತ್ರಾಸ್ತ್ರಗಳೆಲ್ಲ ಲಭಿಸಿದವು. ವಿಶ್ವಾಮಿತ್ರನು ವಾಮನನು ನಡೆದಾಡಿದ ನೆಲಕ್ಕೆ ರಾಮನನ್ನು ಕರೆದೊಯ್ದ. ತನ್ನ ಹಿಂದಿನ ಜನ್ಮದ ನೆನಪು ರಾಮನಿಗೆ ಬರದಿದ್ದರೂ ಕತೆ ಕೇಳಿದ ರಾಮನಿಗೆ ಮಾನಸಿಕ ಉತ್ಸಾಹ ಉನ್ಮುಖವಾಯಿತು. ಚಂದ್ರ ಸೂರ್ಯರು ರಾತ್ರಿ ಹಗಲು ಲೋಕದ ಕತ್ತಲು ಕಳೆವಂತೆ ದಶರಥನ ಮಕ್ಕಳು ಯಜ್ಞದೀಕ್ಷಿತನಾದ ವಿಶ್ವಾಮಿತ್ರನ ಅಡ್ಡಿ - ಆತಂಕವನ್ನು ಕಳೆದರು. ಯಜ್ಞಕ್ಕೆ ಅಡ್ಡಿ ಮಾಡಿದ ಮಾರೀಚನನ್ನು ವಾಯ್ವಸ್ತ್ರದಿಂದ ಹಣ್ಣೆಲೆಯಂತೆ ದೂರಕ್ಕೆ ಎಸೆದು ಬೀಳಿಸಿದರು; ಸುಬಾಹುವನ್ನು ಕೊಂದು ರಣಹದ್ದುಗಳಿಗೆ ಬಲಿ ಹಾಕಿದರು.

ವಿಘ್ನಗಳೆಲ್ಲ ದೂರವಾಗಿ ಯಜ್ಞ ಪರಿಸಮಾಪ್ತಿಯಾಯಿತು. ಮಹಾಮುನಿ ವಿಶ್ವಾಮಿತ್ರನು ಅವಭೃತ ಸ್ನಾನ ಮಾಡಿ ರಾಮಲಕ್ಷ್ಮಣರ ಬೆನ್ನು ಸವರಿ ಹರಿಸಿದ. ಜನಕನ ಆಮಂತ್ರಣದ ಮೇರೆಗೆ ತನ್ನೊಂದಿಗೆ ರಾಮಲಕ್ಷ್ಮಣರನ್ನೂ ಕರೆದೊಯ್ದ. ಅವರಿಗೂ ಬಿಲ್ಲಿನ ಬಗ್ಗೆ ಕೇಳಿ ಕುತೂಹಲವುಂಟಾಯಿತಂತೆ. ದಾರಿಯಲ್ಲಿ ಅವರು ಗೌತಮರ ಆಶ್ರಮ ಪರಿಸರದಲ್ಲಿ ಮರದಡಿ ರಾತ್ರಿ ಕಳೆದರು. ರಾಮಪಾದಧೂಲಿಯ ಅನುಗ್ರಹದಿಂದ ಅಹಲ್ಯೆ ತನ್ನ ಚೆಲುವಿನ ಮೈ ಪಡೆದಳು. ಮಿಥಿಲೆಯಲ್ಲಿ ಜನಕ ಮಹಾರಾಜನು ರಾಮ ಲಕ್ಷ್ಮಣರಿಂದೊಡಗೂಡಿದ ವಿಶ್ವಾಮಿತ್ರನನ್ನು, ಅರ್ಥಕಾಮ ಗಳಿಂದೊಡಗೂಡಿದ ಧರ್ಮದಂತೆ ಬರಮಾಡಿಕೊಂಡನು. ರಾಮನು ಬಿಲ್ಲನ್ನು ನೋಡಲು ಉತ್ಸುಕನಾಗಿದ್ದಾನೆ ಎನ್ನುವುದನ್ನು

ವಿಶ್ವಾಮಿತ್ರನು ಜನಕನಿಗೆ ಅರುಹಿದ. ಈ ಬಾಲಕನ ಕೋಮಲ ಶರೀರವನ್ನು ಕಂಡ ಜನಕನಿಗೆ ಸೀತೆಯನ್ನು ಕೊಡುವ ಆಸೆ. ಆದರೆ ವಧೂದಕ್ಷಿಣೆಯಾದ ಬಿಲ್ಲಿಗೆ ಹೆದೆಯೇರಿಸಲು ಇವನಿಂದ ಆದೀತೇ ಎನ್ನುವ ಅಳುಕು! "ಸಲಗಗಳಿಗೇ ಆಗದ ಕೆಲಸವನ್ನು ಮರಿ ಆನೆ ಮಾಡಲಾದೀತೆ! ಭಾರೀ ಬಿಲ್ಲುಗಾರರೇ ಕೈಚೆಲ್ಲಿ ಅವಮಾನಗೊಂಡಿದ್ದಾರೆ. ತಮ್ಮ ತೋಳ್ಬಲಕ್ಕೇ ಧಿಕ್ಕಾರವೆಂದು ಹೊರಟು ಹೋಗಿದ್ದಾರೆ. ನಾನು ಇದಕ್ಕೆ ಅವಕಾಶ ಕೊಡಲಾರೆ" ಎಂದ ದಶರಥ. ಅದಕ್ಕೆ ವಿಶ್ವಾಮಿತ್ರ ಹೇಳಿದ – "ಈತನ ಶಕ್ತಿಯನ್ನು ಬಣ್ಣಿಸಿ ಏನು ಪ್ರಯೋಜನ. ನಿನ್ನ ಬಿಲ್ಲೇ ಅದಕ್ಕೆ ಸಾಕ್ಷಿಯಾಗಲಿ. ಸಣ್ಣ ಸಿಡಿಲು ಬೆಟ್ಟವನ್ನೇ ಸೀಳದೆ!" ವಿಶ್ವಾಮಿತ್ರನ ಆಪ್ತಮಾತಿಗೆ ಜನಕ ಸಮ್ಮತಿಸಿದ. ಮಿಂಚಿನ ಹುಳದ ಗಾತ್ರದ ಬೆಂಕಿ ಕಿಡಿಯ ದಾಹಶಕ್ತಿಯನ್ನು ಊಹಿಸಲಾದೀತೇ! ಇಂದ್ರನು ಕಾಮನ ಬಿಲ್ಲನ್ನೂ ಮೂಡಿಸಲು ಮೋಡಗಳಿಗೆ ಅಪ್ಪಣೆ ನೀಡಿದಂತೆ, ಜನಕ ತನ್ನಾಳುಗಳಿಗೆ ಬಿಲ್ಲನ್ನು ತರಲು ಆದೇಶಿಸಿದ. ಸರ್ಪರಾಜ ತೆಪ್ಪಗೆ ಮಲಗಿದಂತಿತ್ತು ಆ ಬಿಲ್ಲು. ದಕ್ಷಯಜ್ಞದಲ್ಲಿ ಶಿವ ಎತ್ತಿದ ಬಿಲ್ಲು ಅದು. ಬೆಟ್ಟದ ಭಾರದ ಆ ಬಿಲ್ಲನ್ನು ಆ ರಾಮ ಕೋಮಲವಾದ ಹೂ ಬಿಲ್ಲು ಎನ್ನುವಷ್ಟು ಹಗುರಾಗಿ ಎತ್ತಿದ. ಸಭೆ ಮೂಕ ವಿಸ್ಮಿತವಾಯ್ತು. ರಾಮ ಬಿಲ್ಲಿಗೆ ಹೆದೆಯೇರಿಸಿದ. ಹೆದೆಯನ್ನು ಬಿಗಿಗೊಳಿಸುತ್ತಿದ್ದಂತೆ ಬಿಲ್ಲು ಮುರಿಯಿತು. ಭಾರೀ ಗುಡುಗಿನ ಶಬ್ದ ಭೋರ್ಗರೆಯಿತು. "ಮತ್ತೆ ಕ್ಷತ್ರಿಯ ತಲೆ ಎತ್ತಿದ" ಎಂದು ಕ್ಷತ್ರಿಯಾಂತಕ ಪರಶುರಾಮನಿಗೆ ಕೂಗಿ ಹೇಳಿದಂತಿತ್ತು ಅದು. ಸೀತಾಕಲ್ಯಾಣವಾಯಿತು. ಲಕ್ಷ್ಮಣನು ಜನಕನ ಮಗಳು ಊರ್ಮಿಳೆಯನ್ನು ವಿವಾಹವಾದ. ಜನಕನ ತಮ್ಮ ಕುಶಧ್ವಜ. ಆತನ ಮಕ್ಕಳು ಮಾಂಡವಿ, ಶ್ರುತಕೀರ್ತಿ. ಅವರನ್ನು ಭರತ ಶತ್ರುಘ್ನರು ಮದುವೆಯಾದರು. ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳಿಗೆ ಸಿದ್ಧಿ ಲಭಿಸಿದಂತೆ ನಾಲ್ಕು ಮಕ್ಕಳಿಗೆ ಸೊಸೆಯಂದಿರು ಸಿದ್ಧಿಸಿದರು. ಮೂಲ ಶಬ್ದಕ್ಕೆ (ಪ್ರಕೃತಿಗೆ) ಪ್ರತ್ಯಯವನ್ನು ಸೇರಿಸಿದಾಗಲೇ ಅದು ಅರ್ಥಪೂರ್ಣ. ಆಗ ಮಾತ್ರ ಅದು ಪೂರ್ಣ ಅರ್ಥವನ್ನು ಕೊಡುತ್ತದೆ ಈ ವರವಧೂ ಸಮಾಗಮವು ಪ್ರತ್ಯಯ ಪ್ರಕೃತಿಯೋಗವಿದ್ದಂತೆ ಎನ್ನುತ್ತಾನೆ ಕಾಳಿದಾಸ. ವ್ಯಾಕರಣ ಕೂಡ ಕಾಳಿದಾಸನಲ್ಲಿ ಸಾರ್ಥಕ ಕಾವ್ಯಪರಿಕರವಾಗಿ ಬಿಡುತ್ತದೆ. (ಸೋಽಭವದ್ವರವಧೂಸಮಾಗಮಃ ಪ್ರತ್ಯಯಪ್ರಕೃತಿಯೋಗಸಂನಿಭಃ). ಮದುಮಕ್ಕಳೊಂದಿಗೆ ದಶರಥ ಅಯೋಧ್ಯೆಗೆ ಹಿಂತಿರುಗಿ ಹೊರಟ. ದಾರಿಯಲ್ಲಿ ಅಪಶಕುನಗಳ ಸರಣಿ, ಹಿಮ್ಮುಖವಾಗಿ ಬೀಸುವ ಗಾಳಿ, ಗರುಡ ಕಚ್ಚಿ ಹಿಡಿದ ಸರ್ಪದ ತಲೆಯಿಂದ ಕಳಚಿ ಬೀಳುತ್ತಿರುವ ಮಣಿಯಂತೆ ಕಾಣುವ ಕೊಡೆಕಟ್ಟಿದ (ಪರಿವೇಷ) ಸೂರ್ಯಮಂಡಲ, ರಕ್ತಸಿಕ್ತ ರಜಸ್ವಲೆಯಂತೆ ತೋರುವ ಸಂಜೆಯ ಮೋಡ, ನರಿಗಳ ಊಳಿಡುವಿಕೆ ಇತ್ಯಾದಿ. ಈ ಅಪಶಕುನಗಳಿಗೆ ಶಮನೋಪಾಯವೇನೆಂದು ದಶರಥನು ವಸಿಷ್ಠರನ್ನು ಕೇಳಿದ. ಒಳ್ಳೆಯದೇ ಆಗುತ್ತದೆ ಎಂದು ಹೇಳಿ ವಸಿಷ್ಠರು ಅವನ ದುಗುಡವನ್ನು ಕಡಿಮೆ ಮಾಡಿದರು. ಅಷ್ಟರಲ್ಲಿ ಎದುರಿಗೆ ಕಣ್ಣುಕುಕ್ಕುವ ಪುರುಷಾಕೃತಿಯ ತೇಜೋರಾಶಿ! ಕ್ರುದ್ಧ ಪರಶುರಾಮ! ತಂದೆಯಿಂದ ಬಂದ ಯಜ್ಞೋಪವೀತ; ಕ್ಷತ್ರಿಯ ಕುಲ ಮೂಲದ ತಾಯಿಯಿಂದ ಬಂದ ಬಿಲ್ಲು! ಚಂದ್ರನಿಂದೊಡಗೂಡಿದ ಸೂರ್ಯ! ಹಾವು ಸುತ್ತಿದ ಚಂದನ ತರು! ಕೋಪ ಕಠೋರನಾದ ಈತ ತಂದೆಯ ಮಾತಿನಂತೆ ತಾಯಿಯನ್ನೇ ಕೊಂದ, ತದನಂತರ ಕ್ಷತ್ರಿಯ ಕುಲವನ್ನೇ ತರಿದ ನಿಷ್ಕರುಣಿ. ಆತನ ರುದ್ರಾಕ್ಷಿ ಮಾಲೆಯು, ಕ್ಷತ್ರಿಯ ಕುಲ ನಾಶಕ್ಕಾಗಿ ಆತ ಭೂಪ್ರದಕ್ಷಿಣೆ ಮಾಡಿದ ಲೆಕ್ಕವನ್ನು ನೆನಪಿಟ್ಟುಕೊಳ್ಳಲು ಹಾಕಿಕೊಂಡ ಎಣಿಕೆಯ ಜಪಮಾಲೆಯಂತೆ ತೋರಿತು ದಶರಥನಿಗೆ. ತಂದೆಯ ಕೊಲೆಗೈದವನೊಬ್ಬನ ತಪ್ಪಿಗೆ ಕ್ಷತ್ರಿಯ ಕುಲವನ್ನೇ ನಾಶ ಮಾಡಿದ ಈ ದ್ವೇಷಪಿಂಡದೆದುರು ಎಳೆಯ ಮಕ್ಕಳನ್ನು ಕಂಡು ದಶರಥ ಹೌಹಾರಿದ. 'ರಾಮ' ಎನ್ನುವುದು ಒಂದೇ ಹೆಸರು ತನ್ನ ಮಗನಿಗೂ; ಆತನಿಗೂ, ಆದರೆ ಒಂದು ರತ್ನದ ಹಾರ! ಮತ್ತೊಂದು ಹೆಡೆಯಲ್ಲಿ ರತ್ನದ ಮಣಿಹೊತ್ತ ಸರ್ಪ! ಒಂದು ಹೃದಯಂಗಮ! ಇನ್ನೊಂದು ಭಯಂಕರ! 'ಅರ್ಘ್ಯ, ಅರ್ಘ್ಯ' ಎಂದು ಹಲಬುತ್ತಿದ್ದ ದಶರಥನನ್ನು ಕಣ್ಣೆತ್ತಿಯೂ ನೋಡದೆ, ಪರಶುರಾಮ ಕೋಪದ ಸುಡುಗಣ್ಣಿಂದ ರಾಮನನ್ನೇ ನೋಡುತ್ತಿದ್ದ. ಮುಷ್ಟಿಯಲ್ಲಿ ಬಿಲ್ಲನ್ನು ಹಿಡಿದು ಬೆರಳುಗಳ ನಡುವೆ

ಬಾಣವಾಡಿಸುತ್ತ ನೇರವಾಗಿ ನುಡಿದ – "ಕ್ಷತ್ರಿಯ ವೈರ ಬಹುತೇಕ ಶಮನವಾಗಿತ್ತು. ನಿನ್ನ ಪರಾಕ್ರಮದ ಸುದ್ದಿ ಕೇಳಿ ದೊಣ್ಣೆಯಿಂದ ಹುತ್ತ ಬಡಿದು ಮಲಗಿದ ಸರ್ಪವನ್ನು ಕೆರಳಿಸಿದಂತಾಗಿದೆ. ನನ್ನ ಕೀರ್ತಿಯ ಶಿಖರವನ್ನು ಮುಕ್ಕು ಮಾಡಿರುವೆ! ಈವರೆಗೆ ರಾಮ ಎಂದರೆ ನಾನೊಬ್ಬನೇ. ಈಗ ನೀನು ಆ ಹೆಸರಿಗೆ ಸಲ್ಲುತ್ತಿರುವುದು ನನಗೆ ಅವಮಾನ! ಹಸುವಿನ ಕರುವನ್ನು ಕದ್ದೊಯ್ದ ಆ ಹೈಹಯ ಮತ್ತು ಕೀರ್ತಿಯನ್ನು ಕಸಿದುಕೊಂಡ ನೀನು ಇಬ್ಬರೇ ನನಗೆ ವೈರಿಗಳು. ನಿನ್ನನ್ನು ಗೆಲ್ಲದಿದ್ದರೆ ನನಗೆ ನೆಮ್ಮದಿ ಇಲ್ಲ. ಹುಲ್ಲಿನ ಮೆದೆಯನ್ನು ಸುಡುವ ಬೆಂಕಿ ಸಾಗರದ ತಳದಲ್ಲೂ ಉರಿಯುತ್ತದೆ; ನನ್ನ ಈ ಬಿಲ್ಲನ್ನು ಹಿಡಿ; ಶರಸಂಧಾನ ಮಾಡು. ಅಷ್ಟು ಸಾಕು! ಯುದ್ಧ ಬೇಕಿಲ್ಲ. ನಿನಗೆ ನನ್ನ ತೋಳ್ಬಲವಿದೆಯೆಂದಾದರೆ ನನ್ನನ್ನು ನೀನು ಗೆದ್ದಂತೆ. ನನ್ನ ಕೊಡಲಿಯ ಅಲಗನ್ನು ಕಂಡು ಹೆದರಿದೆಯಾ? ಹಾಗಿದ್ದರೆ ಹೆದೆಯೆಳೆದು ಕೈ ನೋಯಿಸಿಕೊಳ್ಳಬೇಡ; ರಕ್ಷಿಸೆಂದು ಕೈಜೋಡಿಸು." ಈ ಮಾತುಗಳನ್ನು ಕೇಳಿ ರಾಮ ಮೆಲ್ಲಗೆ ಮುಗುಳ್ನಕ್ಕ. ಬಿಲ್ಲು ಹಿಡಿಯುವುದೆ ತಕ್ಕ ಉತ್ತರವೆಂದು ಭಾವಿಸಿದ. ಅದು ವೈಷ್ಣವ ಧನುಸ್ಸು. ರಾಮನ ಹಿಂದಿನ ಜನ್ಮದ್ದು. ಮಳೆ ಮೋಡವೇ ಸುಂದರ; ಮತ್ತೆ ಮಳೆಬಿಲ್ಲು ಕಟ್ಟಿತೋ, ಅದೆಷ್ಟು ಕಳೆಕಟ್ಟೀತು! ಇಂತು ಶೋಭಿಸಿದ ಕೋದಂಡ ರಾಮ ಬಿಲ್ಲನ ಒಂದು ತುದಿಯನ್ನು ನೆಲಕ್ಕೆ ತಗುಲಿಸಿ ಹಿಡಿದು ಶರಸಂಧಾನ ಮಾಡಿದ. ಹೊಗೆಯುಳಿದ ಬೆಂಕಿಯಂತೆ ಪರಶುರಾಮ ಕಳೆಗುಂದಿದ. ಒಬ್ಬನ ಕಳೆ ಕುಂದಿತು; ಇನ್ನೊಬ್ಬನದು ಹೆಚ್ಚಿತು– ಹುಣ್ಣಿಮೆ ಸಂಜೆಯ ಸೂರ್ಯ ಚಂದ್ರರಂತೆ. ದೇವ ಸೇನಾನಿಯಂತೆ ಕಂಗೊಳಿಸಿದ ರಾಮ ಒಡನೆಯೇ ಕರುಣಾಮೃದು ಆದ. ಒಮ್ಮೆ ಭಾರ್ಗವರಾಮನನ್ನೂ, ಬಳಿಕ ಅಮೋಘ ಬಾಣವನ್ನೂ ಅರ್ಥಪೂರ್ಣವಾಗಿ ನೋಡಿ ನುಡಿದ – "ನೀನು ಬ್ರಾಹ್ಮಣ; ನಿನ್ನನ್ನು ಕೊಲ್ಲಲಾರೆ. ಹೇಳು, ನಿನ್ನ ಗಮನ ಸಾಮರ್ಥ್ಯವನ್ನು (ಕಾಲು ಕತ್ತರಿಸಿ) ಅಪಹರಿಸಲೆ? ಅಥವಾ ಯಜ್ಞಾಚರಣೆಯಿಂದ ಸಂಪಾದಿಸಿದ ಲೋಕವನ್ನು (ಸ್ವರ್ಗಪ್ರಾಪ್ತಿಯ ಪುಣ್ಯವನ್ನು) ಕಿತ್ತುಕೊಳ್ಳಲೇ?" ಋಷಿ ಮಾರ್ನುಡಿದ – "ನೀನು ಪುರಾಣ ಪುರುಷ ಎನ್ನುವ ಪರಮಾರ್ಥ ನನಗೆ ತಿಳಿದಿಲ್ಲವೆಂದಲ್ಲ. ಈ ನೆಲಕ್ಕಿಳಿದ ವೈಷ್ಣವ ತೇಜಸ್ಸನ್ನು ನೋಡ ಬಯಸಿ ನಿನ್ನನ್ನು ಕೆರಳಿಸಿದೆ ಅಷ್ಟೆ. ತಂದೆಯ ದ್ವೇಷಿಯನ್ನು ಸುಟ್ಟು ಬೂದಿ ಮಾಡಿದ್ದೇನೆ; ಸಾಗರ ಪರ್ಯಂತ ಪಸರಿಸಿದ ಭೂಮಿಯನ್ನು ದಾನ ಮಾಡಿದ್ದೇನೆ; ಕೃತಕೃತ್ಯನಾದ ನನಗೆ ಪರಮ ಪುರುಷನಾದ ನಿನ್ನಿಂದಾದ ಸೋಲೂ ಕೂಡ ಗೆಲುವೇ. ಪ್ರಾಜ್ಞನೇ! ನಾನು ತೀರ್ಥಕ್ಷೇತ್ರ ಸಂಚಾರ ಮಾಡಬೇಕಿದೆ; ನನ್ನ ಕಾಲು ಕಿತ್ತುಕೊಳ್ಳಬೇಡ. ನನಗೆ ಭೋಗದ ಇಚ್ಛೆ ಇಲ್ಲ. ನಾನು ಸ್ವರ್ಗಕ್ಕೆ ಹೋಗದಂತೆ ತಡೆದರೆ ನನಗೇನೂ ಬೇಸರವಿಲ್ಲ." ಹಾಗೇ ಆಗಲೆಂದು ಶ್ರೀರಾಮ ಬಾಣವನ್ನು ಪೂರ್ವದಿಕ್ಕಿಗೆ ಎಸೆದನು. ಅದು ಭಾರ್ಗವನ ಸ್ವರ್ಗ ಮಾರ್ಗಕ್ಕೆ ಅಡ್ಡಿಯಾಯಿತು. ಕ್ಷಮಿಸು ಎಂದು ಬೇಡುತ್ತ ಶ್ರೀರಾಮ ಪರಶುರಾಮನ ಕಾಲಿಗೆರಗಿದ. ಬಲಶಾಲಿಗಳನ್ನು ಬಲದಿಂದ ಗೆದ್ದಮೇಲೆ ಬಾಗುವುದೆ ಕೀರ್ತಿಕರ! "ತಾಯಿಯಿಂದ ಬಳುವಳಿಯಾಗಿ ಬಂದ ರಾಜಸಗುಣವನ್ನು ಕಳೆದುಕೊಂಡು, ಪಿತ್ರಾರ್ಜಿತವಾಗಿ ಬಂದ ಶಮ(ಮನಶ್ಯಾಂತಿ)ವನ್ನು ಪಡೆದನು. ನೀನು ಮಾಡಿದ ಪ್ರತೀಕಾರವೂ ನನಗೆ ಉಪಕಾರವೇ ಆಯಿತು. ನಾನಿನ್ನು ಹೊರಡುವೆ. ದೇವಕಾರ್ಯದಲ್ಲಿ ನಿನಗೆ ವಿಘ್ನ ಉಂಟಾಗದಿರಲಿ." ಪರಶುರಾಮ ಕಣ್ಮರೆಯಾದ. ದಶರಥ ರಾಮನನ್ನು ಬಿಗಿದಪ್ಪಿಕೊಂಡ. ಆತ ಮತ್ತೊಮ್ಮೆ ಹುಟ್ಟಿ ಬಂದನೆಂದು ಭಾವಿಸಿದ. ಕಾಡ್ಗಿಚ್ಚು ಅಡರಿದ ಕಾಡ ಗಿಡಕ್ಕೆ ಮಳೆ ಸುರಿದಂತೆ ದಶರಥ ಚೇತರಿಸಿಕೊಂಡು ಅಯೋಧ್ಯೆಗೆ ಮರಳಿದ. ರಾಜಮಾರ್ಗದ ಬದಿಯ ಮನೆಗಳ ಕಿಡಕಿಗಳಲ್ಲಿ ನಿಂತು ಸೀತೆಯನ್ನು ನೋಡುವ ಕುತೂಹಲ ಪೌರಾಂಗನೆಯರಿಗೆ, ಕಿಡಕಿಯ ತುಂಬ ಕನ್ನೈದಿಲೆಯ ರಾಶಿರಾಶಿ!

ಶೌರ್ಯ ಕರುಣೆಗಳ ಸಮ್ಮಿಶ್ರಣ ರಾಮ. ಈ ಸಮತೋಲ ಕಾಳಿದಾಸನಿಗೆ, ಅಂತೆಯೇ ಭವಭೂತಿಗೆ ಇಷ್ಟ. ಪರಶುರಾಮನಲ್ಲಿ ಎಣೆಯಿಲ್ಲದ ಶೌರ್ಯವಿದ್ದರೂ ನಿಷ್ಕರುಣೆಯಿಂದಾಗಿ ಅದು ಮೌಲ್ಯವೆನಿಸದೆ ಹೋಯಿತು. ಕಥಾ ಸಂಕ್ಷೇಪದಲ್ಲೂ ರಾಮಪರಶುರಾಮ ಪ್ರಸಂಗವನ್ನು ವಿಸ್ತರಿಸಿ ಚಿತ್ರಿಸಿದ್ದಾರೆ. ಇಬ್ಬರೂ ಮಹಾಕವಿಗಳು. ಭವಭೂತಿ

‘ಮಹಾವೀರಚರಿತ’ದಲ್ಲಿ ನಾಟಕವಾಗಿಸಿದರೆ, ನಾಟಕ ಪ್ರತಿಭೆಯ ಕಾಳಿದಾಸ ರಘುವಂಶ ಕಾವ್ಯದಲ್ಲಿ ಉಜ್ವಲವಾಗಿ ನಾಟಕೀಯವಾಗಿಸಿದ್ದಾನೆ.

**ರಾವಣವಧ :**

ದಶರಥನಿಗೆ ಮೋಕ್ಷವನ್ನು ಚಿಂತಿಸುವ ಕಾಲ ಸನ್ನಿಹಿತವಾಯ್ತು. ಇಷ್ಟು ಕಾಲ ಇಂದ್ರಿಯ ವಿಷಯಗಳನ್ನೂ, ರಾಜ್ಯಾಡಳಿತವನ್ನೂ ಆತ ಅನುಭವಿಸಿದ್ದ. ರಾತ್ರಿಯೆಲ್ಲ ಉರಿಯುವ ಎಣ್ಣೆದೀಪಕ್ಕೆ ಇನ್ನೇನು ಆರಿಹೋಗುವ ಬೆಳಗಿನ ಜಾವದ ಜ್ವಾಲೆಯಂತಾದ ಆತ. ಆತನ ಕಿವಿಯ ಬಳಿಯೊ ಕೂದಲು ಹಣ್ಣಾಗುವ ನೆಪದಲ್ಲಿ ಮುಪ್ಪು ಅಡರತೊಡಗಿತು. ಕೈಕೇಯಿಯ ಭಯದಿಂದ ಅದು ಕಿವಿಯಲ್ಲಿ ‘ರಾಮನಿಗೆ ರಾಜ್ಯ ಒಪ್ಪಿಸಿಬಿಡೋ’ ಎಂದು ಪಿಸುಗುಟ್ಟಿದಂತಿತ್ತು. ಕಾಲುವೆಯ ಬಳಿಯ ಒಂದೊಂದು ಮರವೂ ನೀರುಂಡಂತೆ ಪ್ರತಿಯೊಬ್ಬ ಪಟ್ಟಣಿಗನೂ ರಾಮನ ಏಳಿಗೆಯ ಸುದ್ದಿ ಕೇಳಿ ಆಹ್ಲಾದಗೊಂಡರು. ಕಠಿಣ ನಿರ್ಧಾರದ ಕೈಕೇಯಿ ಪಟ್ಟಾಭಿಷೇಕದ ಒಂದೊಂದು ಸಾಮಗ್ರಿಯನ್ನೂ ರಾಜನ, ಕಣ್ಣೀರಿನಿಂದ ಕೆಡಿಸಿಬಿಟ್ಟಳು. ಮಳೆ ಬಿದ್ದಾಗ ನೆಲದ ಬಿಲದಲ್ಲಿ ಮಲಗಿದ ಜೋಡಿ ಹಾವು ಹೊರಬಂದಂತೆ, ಹಿಂದೆ ಆಕೆಗೆ ಕೊಟ್ಟ ಎರಡು ವರಗಳನ್ನು ಈಗ ಹೊರತೆಗೆದಳು. ಅವುಗಳಲ್ಲೊಂದು ವರದಿಂದ ರಾಮನನ್ನು ಹದಿನಾಲ್ಕು ವರ್ಷಗಳ ಕಾಲ ಕಾಡಿಗಟ್ಟಿದಳು. ಎರಡನೆಯ ವರದಿಂದ ಮಗನಿಗೆ ಸಂಪದವನ್ನು ಬಯಸಿದಳು. ಆದರೆ ಅದಕ್ಕೆ ವೈಧವ್ಯವೇ ಫಲವಾಯ್ತು! ರಾಮ ಮೊದಲು ಅಳುಕುತ್ತಲೇ ತಂದೆಯಿಂದ ರಾಜ್ಯವನ್ನು ಒಪ್ಪಿಕೊಂಡಿದ್ದ. ವನಕ್ಕೆ ಹೋಗು ಎನ್ನುವ ಆಜ್ಞೆಯನ್ನು ಈಗ ಸಂತಸದಿಂದಲೇ ಸ್ವೀಕರಿಸಿದ. ಪೀತಾಂಬರವನ್ನುಟ್ಟಾಗಲೂ, ನಾರುಡೆಯನ್ನು ತೊಟ್ಟಾಗಲೂ ಆತನ ಮುಖದ ಕಳೆ ಒಂದೇ ತೆರನಾಗಿತ್ತು! ಜನಕ್ಕೆಲ್ಲ ಆಶ್ಚರ್ಯ. ತಂದೆಯ ಸತ್ಯ ಕೆಡದಂತೆ ಆತ ಸೀತೆ ಲಕ್ಷ್ಮಣರೊಂದಿಗೆ ದಂಡಕಾರಣ್ಯವನ್ನು ಹೊಕ್ಕ- ಪ್ರತಿಯೊಬ್ಬರ ಮನಸ್ಸನ್ನೂ ಕೂಡ! ದಶರಥನಿಗೋ ಅಗಲಿಕೆಯ ಶೋಕ ತನಗೊದಗಿದ ಶಾಪದ ಕನವರಿಕೆ. ಅದಕ್ಕೆ ಮರಣವೇ ಶರಣೆಂದುಕೊಂಡ. ರಾಜ್ಯ ಅನಾಯಕ! ಅನಾಥ ಪ್ರಜೆಗಳು ಸೋದರ ಮಾನವ ಮನೆಯಲಿ ನೆಲಸಿದ ಭರತನನ್ನು ಗುಟ್ಟು ಬಿಡದೆ ಮನವೊಲಿಸಿ ಮಂತ್ರಿಯ ಮೂಲಕ ಕರೆಸಿಕೊಂಡರು. ತಾಯಿಯಿಂದಾಗಿ ತಂದೆಗೆ ಸಾವು ಒದಗಿಬಂತೆಂದು ತಿಳಿದು, ಭರತನು ಆಕೆಯನ್ನಷ್ಟೇ ಅಲ್ಲದೆ ಆಕೆ ಒದಗಿಸಿಕೊಟ್ಟ ಸಂಪತ್ತನ್ನೂ ಕಣ್ಣೆತ್ತಿ ನೋಡಲೇ ಇಲ್ಲ. ಸೈನ್ಯದೊಂದಿಗೆ ರಾಮನನ್ನು ಹುಡುಕಿ ಹೊರಟ. ವನವಾಸಿಗಳು ತೋರಿದ ದಾರಿಯಲ್ಲಿ ಸಾಗಿದ. ಮರದಡಿಯಲ್ಲಿ ಲಕ್ಷ್ಮಣನೊಂದಿಗೆ ನಿಂತ ರಾಮನನ್ನು ಕಂಡು ಬಿಕ್ಕಿ ಅತ್ತ. ಚಿತ್ರಕೂಟದಲ್ಲಿದ್ದ ರಾಮನಿಗೆ ತಂದೆಯ ಮರಣವನ್ನರುಹಿದ. ತಾನು ಒಪ್ಪಿಕೊಳ್ಳದ ರಾಜ್ಯಸಂಪತ್ತನ್ನು ಒಪ್ಪಿಸಿಕೋ ಎಂದು ಬೇಡಿದ. ನೀನು ಒಪ್ಪಿಕೊಳ್ಳದಿದ್ದರೆ, ಅಣ್ಣನಿಗೆ ಮದುವೆಯಾಗದೆ ತಮ್ಮನಿಗೆ ಮದುವೆಯಾದಂತೆ ತನ್ನ ಸ್ಥಿತಿ ಎಂದು ಅಂಗಲಾಚಿದ. ರಾಮನನ್ನು ತಂದೆಯ ಆದೇಶದಿಂದ ಹಿಂತಿರುಗಿಸಲಾಗದೆಂದು ಅರಿವಾದಾಗ, ರಾಜ್ಯಾಧಿದೇವತೆಯನ್ನಾಗಿ ಮಾಡಲು ಆತನ ಪಾದುಕೆಗಳನ್ನು ಕೊಡೆಂದು ಬೇಡಿಕೊಂಡ. ರಾಮನು ಹಾಗೇ ಆಗಲೆಂದು ಆತನನ್ನು ಬೀಳ್ಕೊಟ್ಟ. ಭರತ ನಂದಿಗ್ರಾಮದಲ್ಲಿ ನೆಲಸಿದ; ರಾಜ್ಯವನ್ನು ಅಡವಿಟ್ಟ ನಿಧಿಯಂತೆ ಕಾಪಾಡಿಕೊಂಡ. ಅಧಿಕಾರಕ್ಕೆ ಆಸೆ ಪಡದೆ, ಅಣ್ಣನಲ್ಲಿ ತೋರಿದ ಭಕ್ತಿ ತಾಯಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೋ ಎನ್ನುವಂತಿತ್ತು. ರಾಮನೂ ವನದಲ್ಲಿ ಲಭ್ಯವಾದ ಆಹಾರವನ್ನು ಸೇವಿಸುತ್ತ ಸೀತಾಲಕ್ಷ್ಮಣರೊಂದಿಗೆ ಶಾಂತನಾಗಿ ಅಲ್ಲೇ ನೆಲಸಿದ್ದ. ಇಕ್ಷ್ವಾಕುಕುಲದ ವಯಸ್ಸಾದ ರಾಜರು ಆಚರಿಸುತ್ತಿದ್ದ ವಾನಪ್ರಸ್ಥ ರಾಮನಿಗೆ ತಾರುಣ್ಯದಲ್ಲೇ ಒದಗಿಬಂದಿತ್ತು. ಒಂದು ದಿನ ರಾಮನು ಮರದಡಿಯ ನೆಳಲಲ್ಲಿ ಸೀತೆಯ ತೊಡೆಯ ಮೇಲೆ ತಲೆಯಿಟ್ಟು ವಿಶ್ರಮಿಸಿದ ಹೊತ್ತು ಇಂದ್ರನ ಮಗ ಕಾಗೆಯ ರೂಪದಲ್ಲಿ ಬಂದು ಕಾಲುಗುರಿನಿಂದ ಸೀತೆಯ ಎದೆಯನ್ನು ತರಚಿದ. ಸೀತೆ ರಾಮನನ್ನು ಎಬ್ಬಿಸಿದಳು. ರಾಮನು ದರ್ಭೆಯನ್ನೇ ಮಂತ್ರಿಸಿ ಅಸ್ತ್ರ ಪ್ರಯೋಗ ಮಾಡಿದ. ಕಾಗೆ ಅದಕ್ಕೆ ಒಂದು ಕಣ್ಣನ್ನು ಬಲಿಕೊಡಬೇಕಾಯಿತು. ಚಿತ್ರಕೂಟ ಅಯೋಧ್ಯೆಗೆ ಹತ್ತಿರವಿದ್ದುದರಿಂದ ಭರತನು ಮತ್ತೆ ಮತ್ತೆ ಬಂದಾನೆಂದು ರಾಮ ಉತ್ಸಾಹಿ ಜಿಂಕೆಗಳ ಚಿತ್ರಕೂಟವನ್ನು ತೊರೆದು

ಹೋದನು. ಋಷ್ಯಾಶ್ರಮಗಳಲ್ಲಿ ಅತಿಥಿ ಸತ್ಕಾರ ಪಡೆಯುತ್ತ ದಕ್ಷಿಣಕ್ಕೆ ಸಾಗಿದ. ಸೂರ್ಯನೂ ಮಳೆಗಾಲದಲ್ಲಿ ದಕ್ಷಿಣ ದಿಕ್ಕಿನತ್ತ ಚಲಿಸುವನಷ್ಟೆ. ಅನಸೂಯೆಯು ಸೀತೆಗೆ ಪರಿಮಳದ ಅಂಗರಾಗವನ್ನು ನೀಡಿದಳು. ಅದರ ಸುರಭಿಗೆ ಕಾಡ ಹೂವಿಗೆ ಮುತ್ತಿದ ದುಂಬಿಗಳೆಲ್ಲ ಮೇಲೆದ್ದವು. ಸಂಜೆಯ ಮೋಡದಂತೆ ಕಡುಕಂದು ಬಣ್ಣದ ವಿರಾಧನೆಂಬ ರಕ್ಕಸನು, ಚಂದ್ರನಿಗೆ ರಾಹು ಅಡ್ಡಬಂದಂತೆ ರಾಮನನ್ನು ಅಡ್ಡಗಟ್ಟಿದನು. ಶ್ರಾವಣ-ಭಾದ್ರಪದ ಮಾಸಗಳ ನಡುವೆ ಮಳೆಯನ್ನು ಅನಾವೃಷ್ಟಿ ಅಪಹರಿಸಿದಂತೆ, ರಾಮ ಲಕ್ಷ್ಮಣರ ನುಡವೆ ಇರುವ ಸೀತೆಯನ್ನು ಆ ರಕ್ಕಸ ಹೊತ್ತೊಯ್ದನು. ರಾಮ ಲಕ್ಷ್ಮಣರು ಆತನನ್ನು ಕೊಂದರು. ಆತನಿದ್ದೆಡೆಯೆಲ್ಲ ದುರ್ಗಂಧ. ಅದಕ್ಕಾಗಿ ಆತನನ್ನು ನೆಲದಲ್ಲಿ ಹೂಳಿದರು. ಆ ಬಳಿಕ ಅಗಸ್ತ್ಯರ ಆದೇಶದಂತೆ ಅವರು ಪಂಚವಟಿಯಲ್ಲಿ ವಿನಯದಿಂದ ವಾಸಿಸಿದರು. ಅಗಸ್ತ್ಯರ ಆದೇಶಕ್ಕನುಗುಣವಾಗಿ ವಿಂಧ್ಯಪರ್ವತವು ಬಾಗಿ ಮೂಲಸ್ಥಿತಿಯಲ್ಲಿ ನಿಂತಂತೆ. ಬಿಸಿಲ ಬೇಗೆಗೆ ಬಳಲಿದ ಹೆಣ್ಣು ಹಾವು ಮಲಯ ಚಂದನವನ್ನು ಬಳಿಸಾರಿದಂತೆ ಕಾಮಜ್ವರ ಪೀಡಿತಳಾದ ರಾವಣಾನುಜೆ ರಾಮನ ಬಳಿ ಬಂದಳು. ತನ್ನ ಕುಲಗೋತ್ರಗಳ ಹಿರಿಮೆಯನ್ನು ಹೊಗಳಿಕೊಳ್ಳುತ್ತ ಸೀತೆಯ ಎದುರಲ್ಲೇ ರಾಮನನ್ನು ವರಿಸಿದಳು. "ಹುಡುಗಿ! ನನಗೆ ಹೆಂಡತಿಯಿದ್ದಾಳೆ. ನನ್ನ ತಮ್ಮನನ್ನು ಸೇರು" ಎಂದು ರಾಮನು ಆ ಕಾಮುಕಿಗೆ ನುಡಿದ. ಮೊದಲು ಅಣ್ಣನಿದ್ದಲ್ಲಿಗೆ ಹೋದುದರಿಂದ ಲಕ್ಷ್ಮಣನೂ ಒಪ್ಪಿಕೊಳ್ಳಲಾರೆ ಎಂದನು. ಮತ್ತೆ ರಾಮನೆಡೆಗೇ ಬಂದಳು. ಹುಚ್ಚು ಪ್ರವಾಹ ನದಿಯ ಎರಡೂ ದಡಗಳಿಗೆ ಎಡತಾಕುವುದಿಲ್ಲವೇ! ಕ್ಷಣ ಕಾಲ ಸೌಮ್ಯಳಾಗಿದ್ದ ಶೂರ್ಪಣಖಿಯನ್ನು ಸೀತೆಯ ನಗು ಕೆರಳಿಸಿತು- ಗಾಳಿ ಬೀಸದೆ ನಿಂತ ಸಮುದ್ರವನ್ನು ಬೆಳದಿಂಗಳು ಉಕ್ಕೇರಿಸಿದಂತೆ. "ನಿನ್ನ ನಗುವಿನ ಫಲವನ್ನು ಇಷ್ಟರಲ್ಲೇ ಅನುಭವಿಸುವೆ. ಹುಲ್ಲೆ ಹುಲಿಯನ್ನು ಕೆಣಕಿದೆ." ಹೀಗೆ ಹೇಳಿ ತನ್ನ ನಿಜರೂಪವನ್ನು ತೋರಿದಳು. ಮಂಜುಳವಾದ ಕೋಗಿಲೆಯ ಕೂಜನ ಈಗ ನರಿ ಊಳಿಡುತ್ತಿರುವಂತೆ ಅನಿಸಿತು ಲಕ್ಷ್ಮಣನಿಗೆ. ಮೊದಲೇ ವಿಕಾರ ವೇಷದ ಆಕೆಯ ಕಿವಿ ಮೂಗುಗಳನ್ನು ಕತ್ತರಿಸಿ ಮತ್ತಷ್ಟು ವಿಕಾರ ಮಾಡಿದ. ಮೊರದಗಲದ ಡೊಂಕು ಉಗುರು ಆಕೆಯದು. ಆಕೆ ಆಕಾಶಕ್ಕೆ ನೆಗೆದು ಹುಳು ಕೊರೆದ ಬಿದಿರಿನಂತೆ ಕೀರಲು ಸ್ವರದಲ್ಲಿ ಹೆದರಿಸಿ ಹೊರಟುಹೋದಳು. ಜನಸ್ಥಾನಕ್ಕೆ ಹೋಗಿ ಖರಾದಿಗಳಿಗೆ, ಇದು ರಾಕ್ಷಸರಿಗಾದ ಅವಮಾನವೆಂದು ದೂರಿತ್ತಳು. ಮುಖದ ಅಂಗಗಳು ತರಿದು ಹೋದ ಆಕೆಯನ್ನೇ ಮುಂದಿಟ್ಟುಕೊಂಡು ಆ ರಾಕ್ಷಸರು ರಾಮನ ಮೇಲೆರಗಿದರು. ಅದೇ ಅವರಿಗೆ ಅಮಂಗಲವಾಯ್ತು. ಸೀತೆಯನ್ನು ಲಕ್ಷ್ಮಣನ ರಕ್ಷಣೆಗೆ ಒಪ್ಪಿಸಿ ರಾಮ ರಾಕ್ಷಸರಿಗೆದುರಾದ. ಸಾವಿರ ಸಾವಿರ ರಾಕ್ಷಸರು; ರಾಮ ಒಬ್ಬನೇ. ಅವನ ಬಿಲ್ವಿದ್ಯೆಯ ಕೈಚಳಕ ಎಷ್ಟಿತ್ತೆಂದರೆ, ರಾಕ್ಷಸರಿಗೆ ಸಾವಿರ ಸಾವಿರ ರಾಮರಿದ್ದಂತೆನಿಸಿತು. ತನ್ನಲ್ಲಿ ದೋಷವನ್ನು ಎಂದೂ ಸಹಿಸದ ರಾಮ, ತನ್ನಲ್ಲಿ ಕಂಡ ದೋಷದಂತೆ ದೂಷಣನನ್ನು ದೂರೀಕರಿಸಿದ. ಖರ ತ್ರಿಶಿರಸರನ್ನು ಕೊಂದ. ಹರಿತವಾದ ಬಾಣಗಳಿಂದ ಅವರ ಆಯುಸ್ಸನ್ನು ಹೀರಿದ; ಬಾಣಗಳು ಅವರ ರಕ್ತ ಹೀರಿದವು. ಆ ಪ್ರದೇಶವೆಲ್ಲ ತಲೆಗಳಿಲ್ಲದ ಮುಂಡಗಳಿಂದ ತುಂಬಿಹೋಯಿತು. ಹದ್ದುಗಳು ಮುತ್ತಿದವು. ಕೊನೆಗೆ ರಾವಣನಿಗೆ ಕೆಟ್ಟ ಸುದ್ದಿಯನ್ನು ಕೊಡಲಿಕ್ಕಾಗಿ ಶೂರ್ಪಣಖಿಯೊಬ್ಬಳೇ ಬದುಕಿ ಉಳಿದಳು. ಒಂದೆಡೆ ತಂಗಿಯ ಅಂಗಚ್ಛೇದ; ಮತ್ತೊಂದೆಡೆ ಬಂಧುಗಳ ಮಸಣ. ರಾವಣನಿಗೆ ಈ ರಾಮ ತನ್ನ ಹತ್ತೂ ತಲೆಗಳ ಮೇಲೆ ಕಾಲಿಟ್ಟಂತೆನಿಸಿತು. ಮಾರೀಚನು ಮೃಗರೂಪಿಯಾಗಿ ಬಂದು ಮೋಸಗೊಳಿಸಿದ; ಜಟಾಯು ಕ್ಷಣ ತಡೆಯಿತು. ಆದರೆ ಇದನ್ನು ಲೆಕ್ಕಿಸದೆ ಕತ್ತರಿಸಿ ಬಿದ್ದ ಜಟಾಯಿವಿಗೆ ಇನ್ನೇನು ಪ್ರಾಣ ಹಾರಿಹೋಗುವ ಸ್ಥಿತಿ ಒದಗಿದ್ದನ್ನು ಕಂಡರು. ಮೈಥಿಲಿಯನ್ನು ರಾವಣ ಹೊತ್ತೊಯ್ಯುತ್ತಿರುವಾಗ ತಾನು ಹೋರಾಡಿ ಮೈಯೆಲ್ಲ ಗಾಯಮಾಡಿಕೊಂಡಿದ್ದನ್ನು ಹೇಳಿ ಜಟಾಯು ಪ್ರಾಣಬಿಟ್ಟ. ಆತ ದಶರಥನ ಮಿತ್ರ. ರಾಮನಿಗೆ ತಂದೆಯ ಸಾವು ಮರುಕಳಿಸಿದಂತೆನಿಸಿತು. ತಂದೆಯಂತೆಯೇ ಆತನಿಗೆ ಊರ್ಧ್ವ ಸಂಸ್ಕಾರ ಮಾಡಿದನು. ಕಬಂಧನ ವಧೆಯಿಂದ ಆತನ ಶಾಪ ವಿಮೋಚನೆಯಾಯ್ತು. 'ಸುಗ್ರೀವ ನೀನು ಸಮಾನದುಃಖಿಗಳು; ಆತನಲ್ಲಿಗೆ ಹೋಗು' ಎಂದು ಆತ ಹೇಳಿದ. ವಾಲಿಯನ್ನು ಕೊಂದು ಸುಗ್ರೀವನನ್ನು ರಾಜನನ್ನಾಗಿ ಮಾಡಿದ. ಧಾತುವಿಗೆ

ಆದೇಶ ಆದಂತೆ. (ಇದು ವ್ಯಾಕರಣದ ಪ್ರಕ್ರಿಯೆ. ಅಸ್‌ಧಾತುವಿಗೆ 'ಭೂ' ಆದೇಶವಾಗುತ್ತದೆ. ಅಸ್ತೇರ್ಭೂಃ ಎನ್ನುವುದು ನಿಯಮ). ವೈದೇಹಿಯನ್ನು ಹುಡುಕಲು ಸುಗ್ರೀವ ಕಪಿಗಳನ್ನು ಅಟ್ಟಿದ. ವಿರಹಾತುರನಾದ ರಾಮನ ಮನೋರಥದಂತೆ ಅವರು ನಾನಾ ದಿಕ್ಕುಗಳಲ್ಲಿ ಸಂಚರಿಸಿದರು. ಸಂಪಾತಿಯಿಂದ ಆಕೆಯ ಸುಳಿವು ಸಿಕ್ಕಮೇಲೆ, ಮಮಕಾರ ತೊರೆದವನು ಸಂಸಾರವನ್ನು ದಾಟಿದಂತೆ ಮಾರುತಿಯು ಸಾಗರವನ್ನು ದಾಟಿಹೋದನು. ಲಂಕೆಯಲ್ಲಿ ಹುಡುಕುತ್ತಿರುವಾಗ ವಿಷದ ಬಳ್ಳಿಗಳು ಸುತ್ತುವರಿದ ಸಂಜೀವಿನಿಯಂತೆ ರಾಕ್ಷಿಸಿಯರು ಸುತ್ತುಗಟ್ಟಿದ ಸೀತೆಯನ್ನು ಕಂಡನು. ಅವಳಿಗೆ ಗಂಡನ ಅಭಿಜ್ಞಾನವಾದ ಉಂಗುರವನ್ನು ಕೊಟ್ಟನು. ತಣ್ಣನೆಯ ಆನಂದಾಶ್ರುವಿನಿಂದ ಆಕೆ ಅದನ್ನು ಸ್ವಾಗತಿಸಿದಂತೆ ತೋರಿತು. ಆ ಕಪಿ ರಾಮನ ಸಂದೇಶವನ್ನರುಹಿ ಸೀತೆಗೆ ನಿರಾಳ ಉಂಟುಮಾಡಿದ. ಅಕ್ಷಯನನ್ನು ಕೊಂದ. ಕ್ಷಣಕಾಲ ವೈರಿಯ ಬಂಧನಕ್ಕೆ ಒಳಗಾಗಿ ಲಂಕೆಗೇ ಬೆಂಕಿಯಿಟ್ಟ. ಸೀತೆಯ ಹೃದಯವೇ ಮೈವೆತ್ತು ಬಂದಂತಿದ್ದ ಪ್ರತ್ಯಭಿಜ್ಞಾನ ರತ್ನವನ್ನು ತಂದು ರಾಮನಿಗೆ ತೋರಿದನು. ಅದನ್ನು ಎದೆಯ ಮೇಲಿಟ್ಟು ರಾಮನು ತುಸು ಹೊತ್ತು ಕಣ್ಣು ಮುಚ್ಚಿದನು. ಅವನಿಗೆ ಸೀತೆಯನ್ನೇ ಆಲಂಗಿಸಿಕೊಂಡಷ್ಟು ನಿರಾಳವೆನಿಸಿತು. ನಲ್ಲೆಯ ಸುದ್ದಿ ತಿಳಿದೊಡನೆಯೇ ರಾಮನಿಗೆ ಅವಳನ್ನು ಕಾಣಬೇಕೆಂಬ ಉತ್ಸುಕತೆ ಉಂಟಾಯಿತು. ಆ ಮಹಾಸಾಗರವೂ ಆತನನಿಗೆ ಕೊತ್ತಳದಂತೆ ಅಡ್ಡಿ ಎನಿಸಲಿಲ್ಲ. ನೆಲದಲ್ಲಷ್ಟೆ ಅಲ್ಲದೆ ಆಕಾಶದಲ್ಲೂ ನೆಗೆಯುತ್ತಿದ್ದ ಕಪಿಸೈನ್ಯದೊಂದಿಗೆ ರಾಮನು ವೈರಿನಾಶಕ್ಕೆಂದು ಹೊರಟನು. ಕಡಲ ದಡದಲ್ಲಿ ವಿಭೀಷಣನು ಕಾಣಿಸಿಕೊಂಡನು. ರಾಕ್ಷಸ ರಾಜ್ಯಲಕ್ಷ್ಮಿಯು ಅವನ ಮೇಲಿನ ಸ್ನೇಹದಿಂದ ಅವನನ್ನು ಪ್ರಚೋದಿಸಿರಬೇಕು. ರಾಘವನು ರಾಕ್ಷಸರಾಜ್ಯವನ್ನು ಕೊಡಿಸುವುದಾಗಿ ಆತನಿಗೆ ಮಾತುಕೊಟ್ಟನು. ಸಕಾಲದಲ್ಲಿ ಬಿತ್ತಿದ ರಾಜನೀತಿ ಮುಂದೆ ಫಲಿಸುತ್ತದೆ. ಮಹಾವಿಷ್ಣುವಿನ ಶಯನವಾದ ಆದಿಶೇಷನು ಪಾತಳದಿಂದ ಮೇಲೆದ್ದು ಬಂದಂತಿದ್ದ ಸೇತುವೆಯನ್ನು ರಾಮ ಕಪಿಗಳಿಂದ ಕಟ್ಟಿಸಿದನು. ಸಾಗರವನ್ನು ದಾಟಿ ಕೆಂಪು ಮೂತಿಯ ಕಪಿಗಳು ಲಂಕೆಯನ್ನು ಇನ್ನೊಂದು ಚಿನ್ನದ ಕೋಟೆಯೋ ಎಂಬಂತೆ ಸುತ್ತುಗಟ್ಟಿದರು. ಕಪಿಗಳಿಗೂ ರಾಕ್ಷಸರಿಗೂ ಭೀಕರ ಯುದ್ಧ ಆರಂಭವಾಯ್ತು. ರಾಮ-ರಾವಣರ ಜಯಘೋಷ ಮುಗಿಲು ಮುಟ್ಟಿತು. ಮರಗಳನ್ನೇ ಎತ್ತಿ ಬಡಿದು ಹೆಬ್ಬಾಗಿಲನ್ನು ಒಡೆದರು. ಮುದ್ಗರಗಳನ್ನು ಕಲ್ಲಿನಿಂದ ಜಜ್ಜಿ ಪುಡಿಮಾಡಿದರು. ಶಸ್ತ್ರಗಳಿಗಿಂತಲೂ ಚೂಪಾದ ಉಗುರುಗಳಿಂದ ಚಿವುಟಿದರು. ಶಿಖರಗಳನ್ನೆತ್ತಿ ಆನೆಗಳನ್ನು ಬಡಿದರು. ಕತ್ತರಿಸಿದ ರಾಮನ ತಲೆಯನ್ನು ಕಂಡ ಸೀತೆಗೆ ಬವಳಿ ಬಂದಿತು. ಅದು ಕೇವಲ ಮಾಯೆಯಂದು ಹೇಳಿ ತ್ರಿಜಟೆ ಸೀತೆಯನ್ನು ಬದುಕಿಸಿದಳು. ಇಂದ್ರಜಿತು ನಾಗಪಾಶದಿಂದ ಕ್ಷಣಕಾಲ ರಾಮಲಕ್ಷ್ಮಣರನ್ನು ನಿದ್ದೆಗೆ ದೂಡಿದನು. ಆ ಬಳಿಕ ರಾವಣನು ಶಕ್ತ್ಯಾಯುಧದಿಂದ ಲಕ್ಷ್ಮಣನ ಎದೆಯೊಡೆದನು. ರಾಮನಿಗೆ ಆಯುಧ ಬಡಿಯದಿದ್ದರೂ ಶೋಕದಿಂದ ಎದೆಯೊಡೆಯಿತು. ಮಾರುತಿ ಸಂಜೀವಿನಿಯನ್ನು ತಂದು ಲಕ್ಷ್ಮಣನನ್ನು ಬದುಕಿಸಿದನು. ಲಕ್ಷ್ಮಣನು ಶರತ್ಕಾಲದಂತೆ ಮೇಘನಾದನನ್ನೂ ಅವನ ಬಿಲ್ಲನ್ನೂ ನಿಶ್ಶೇಷ ಮಾಡಿದ. ಶರತ್ಕಾಲದಲ್ಲಿ ಮೋಡದ ಗುಡುಗೂ ಮಳೆಬಿಲ್ಲೂ ನಿಶ್ಶೇಷವಾಗುತ್ತದಷ್ಟೆ! ಕುಂಭಕರ್ಣನಿಗೂ ಅವನ ತಂಗಿಯದೇ ಗತಿ. (ಕರ್ಣನಾಸಾಭೇದ) ಚಾಣ ಬಡಿದ ಕೆಂಪು ಶಿಲೆಯಂತೆ ಕಾಣುತ್ತಿದ್ದ ಆತ ಬೆಟ್ಟದಂತೆ ರಾಮನನ್ನ ಅಡ್ಡಗಟ್ಟಿದ. ನಿದ್ದೆಯನ್ನು ತುಂಬ ಇಷ್ಟಪಡುವ ನಿನ್ನನ್ನು ನಿನ್ನಣ್ಣ ವ್ಯರ್ಥವಾಗಿ ಅಕಾಲದಲ್ಲಿ ಎಬ್ಬಿಸಿಬಿಟ್ಟನಲ್ಲವೇ ಎನ್ನುವಂತೆ ರಾಮಬಾಣ ಅವನನ್ನು ಚಿರನಿದ್ರೆಗೆ ದೂಡಿತು. ವಾನರ ಕೋಟಿಯಿಂದ ಎದ್ದ ದೂಳು ರಕ್ತದ ಮಡುವಿನಲ್ಲಿ ಬಿದ್ದಂತೆ ರಾಕ್ಷಸರೆಲ್ಲ ರಕ್ತದ ಮಡುವಿಗೆ ಬಿದ್ದರು. ಇಂದು ಈ ಜಾಗ ರಾವಣನಿಲ್ಲದ್ದಾಗಬೇಕು, ಇಲ್ಲವೇ ರಾಮನಿಲ್ಲದ್ದಾಗಬೇಕು ಎಂದು ನಿಶ್ಚಯಿಸಿದ ರಾವಣ ಸ್ವಯಂ ಯುದ್ಧಕ್ಕೆ ಧುಮುಕಿದನು. ರಾಮ ಕಾಲಾಳು, ರಾವಣ ರಥಿಕ. ಇದನ್ನು ಕಂಡು ಇಂದ್ರ ಕಂದುಬಣ್ಣದ ಕುದುರೆಗಳ ರಥವನ್ನು ಕಳುಹಿಸಿಕೊಟ್ಟನು. ದೇವಗಂಗೆಯ ತೆರೆಗಳಿಂದೆದ್ದ ಗಾಳಿಯಿಂದ ರಥದ ಬಾವುಟ ಹಾರಾಡುತ್ತಿತ್ತು. ಮಾತಲಿಯ ಕೈಹಿಡಿದು ರಾಮ ಜೈತ್ರ ರಥವನ್ನೇರಿದ. ಮಾತಲಿಯು ಇಂದ್ರನ ಕವಚವನ್ನೇ ರಾಮನಿಗೆ ತೊಡಿಸಿದನು. ಅದಕ್ಕೆ ಬಡಿಯುವ ಬಾಣಗಳೆಲ್ಲ ಕಮಲದ

ಎಲೆಯಂತೆ ಮೃದುವಾಗಿ ಬಿಡುತ್ತಿದ್ದವು. ಬಹಳ ಕಾಲದ ನಂತರ ಪರಸ್ಪರ ಕಂಡು ಕಾದಾಡುವ ವಿಕ್ರಮಾವಕಾಶ! ರಾಮರಾವಣ ಯುದ್ಧ ಇಂತು ಸಫಲವಾಯ್ತು. ರಾವಣ ಒಬ್ಬನೇ. ಬಂಧು-ಬಾಂಧವರೆಲ್ಲ ನಾಶವಾಗಿದ್ದರು. ಆದರೆ ಹಲವು ತೋಳು, ತಲೆ, ಕೈಕಾಲ್ಗಳು. ಅದರಿಂದಾಗಿ ಅವನೇ ಅನೇಕರಂತೆ ಕಂಡು ತಾಯಿಯ ಕುಲವನ್ನು ನೆನಪಿಸಿದ. (ರಾವಣನ ತಾಯಿ ರಾಕ್ಷಸ ಕುಲದವಳು, ತಂದೆ ಋಷಿಕುಲದವನು). ದಿಕ್ಪಾಲಕರನ್ನು ಗೆದ್ದವನು. ತನ್ನ ತಲೆಯನ್ನೇ ತರಿದು ಶಿವನನ್ನು ಅರ್ಚಿಸಿದವನು, ಕೈಲಾಸವನ್ನೇ ಎತ್ತಿ ತೂಗಿದವನು ಈ ರಾವಣ. ಈಗ ತನಗೆ ಸರಿಸಾಟಿ ಎಂದುಕೊಂಡನಂತೆ ರಾಮ. ಸೀತಾಸಂಗಮವನ್ನು ಸೂಚಿಸುವ ಶಕುನವಾಗಿ ರಾಮನ ಬಲಭುಜ ಅದುರಿತಂತೆ. ಇದರಿಂದ ಮತ್ತುಷ್ಟು ಕೋಪಗೊಂಡ ರಾವಣನು ಅಲ್ಲಿಗೇ ಗುರಿಯಿಟ್ಟು ಬಾಣ ಹೊಡೆದ. ರಾಮನು ಎಸೆದ ಬಾಣ ರಾವಣನ ಎದೆಗೆ ಬಡಿದು, ಪಾತಾಳಕ್ಕೆ ಮರಳಿ ಬರುವನೆಂಬ ಪ್ರಿಯವಾರ್ತೆಯನ್ನು ಅರುಹುತ್ತಿದೆಯೋ ಎಂಬಂತೆ ನೆಲವನ್ನು ಹೊಕ್ಕಿತು. ಮಾತಿಗೆ ಮಾತು, ಪೆಟ್ಟಿಗೆ ಪೆಟ್ಟು, ವಾದಪಂಡಿತರಂತೆ ಗೆಲುವಿಗಾಗಿ ಸೆಣಸಾಟ. ಗೆಲವು ಇಬ್ಬರಿಗೂ ಇಲ್ಲ. ಒಮ್ಮೆ ಅವನು ಇನ್ನೊಮ್ಮೆ ಇವನು. ಮೇಲೆ ಆಗಸದಲ್ಲಿ ಸುರಾಸುರರು ಹೂಮಳೆಗರೆಯುತ್ತಿದ್ದರು. ಅದು ಸಹನೀಯವಾಗುತ್ತಿಲ್ಲವೋ ಎನ್ನುವಂತೆ ರಾಮ ರಾವಣರ ಬಾಣಗಳು ಅಂತರಿಕ್ಷದಲ್ಲಿ ತೂರಿದವು. ಯಮನ ಕೂಟಶಾಲ್ಮಲಿ (ಮುಳ್ಳುಕಂಬಿಗಳ ಮರ) ಆಯುಧದಂತಿದ್ದ ಶತಘ್ನಿ ಎನ್ನುವ ಲೋಹದ ಆಯುಧವನ್ನು ರಾವಣನು ಎಸೆದನು. ಅದು ತೇರನ್ನು ತಲುಪುವುದಕ್ಕೆ ಮುನ್ನವೇ ಅರ್ಧಚಂದ್ರಾಕೃತಿಯ ಬಾಣದಿಂದ ಅದನ್ನೂ ರಾಕ್ಷಸರ ಗೆಲುವಿನ ಆಸೆಯನ್ನೂ ಬಾಳೆಗಿಡದಂತೆ ತರಿದುಹಾಕಿದ. ಅದ್ವಿತೀಯ ಧನುರ್ಧಾರಿಯಾದ ರಾಮ ಪ್ರಿಯಾಶೋಕಶಲ್ಯಕ್ಕೆ ನಿವಾರಕ ಔಷಧಿಯೋ ಎಂಬಂತೆ ಬ್ರಹ್ಮಾಸ್ತ್ರವನ್ನು ಸಂಧಾನಮಾಡಿದನು. ಅದು ಆಗಸದಲ್ಲಿ ನೂರಾರು ಹೆಡೆ ಬಿಚ್ಚಿ ಹೆಡೆಗಳನ್ನು ಎತ್ತಿದ ಮಹೋರಗದಂತೆ ಪ್ರಜ್ವಲಿಸಿತು. ಆ ಮಂತ್ರಾಸ್ತ್ರವು ತಲೆ ಕತ್ತರಿಸಿದ ನೋವು ಅರಿವಿಗೆ ಬರದಷ್ಟು ಶೀಘ್ರವಾಗಿ ರಾವಣನ ಸಾಲುತಲೆಗಳನ್ನು ತರಿದು ಹಾಕಿತು. ಇನ್ನೇನು ಅವನ ದೇಹ ನೆಲಕ್ಕೊರಗಬೇಕು. ಅಷ್ಟರಲ್ಲಿ ಅವನ ತಲೆಯಿಲ್ಲದ ರಕ್ತಸಿಕ್ತ ಕೊರಳುಗಳು ಅಲೆಗಳಲ್ಲಿ ಹಲವಾಗಿ ಕಾಣುವ ಎಳೆಸೂರ್ಯನ ಪ್ರತಿಬಿಂಬದಂತೆ ಕಂಡವು. ರಾಮನ ಮೇಲೆ ಹೂಮಳೆಗರೆದರು. ರಾಮನ ಅಪ್ಪಣೆ ಪಡೆದು ಮಾತಲಿ ರಥದೊಂದಿಗೆ ಏರಿಹೋದನು. ಅಗ್ನಿಪರೀಕ್ಷೆಗೆ ಒಳಗಾದ ಸೀತೆಯನ್ನು ರಾಮ ಸ್ವೀಕರಿಸಿದ. ವಿಭೀಷಣನಿಗೆ ಪಟ್ಟ ಕಟ್ಟಿದ. ಸೀತೆ, ಲಕ್ಷ್ಮಣ, ಸುಗ್ರೀವರೊಂದಿಗೆ, ತಾನೇ ತೋಳ್ಬಲದಿಂದ ಗೆದ್ದ ಪುಷ್ಪಕವನ್ನೇರಿ ಅಯೋಧ್ಯೆಯತ್ತ ಹೊರಟ. ಇಲ್ಲಿಯೂ ಕಥನಕ್ಕೆ ಪೋಷಕವಾದ ಅನುಷ್ಟುಪ್ ವೃತ್ತ. ಕಥೆ ಅತ್ಯಂತ ಸಂಕ್ಷಿಪ್ತ. ಇಲ್ಲಿ ಭಾವವನ್ನು ಉದ್ದೀಪಿಸುವ ಸಾರ್ಥಕ ಉಪಮೆಗಳನ್ನು ಮೃದು ಕರ್ಕಶ ವರ್ಣ ವಿನ್ಯಾಸಗಳ ಸಮಾಸ ಗುಂಫನವನ್ನು ಪರಿಭಾವಿಸುವುದೇ ಸೊಗಸು.

### ದಂಡಕಾಪ್ರತ್ಯಾಗಮನ :

ವಿಮಾನದಲ್ಲಿ ಸಂಚರಿಸುತ್ತ ಸಾಗರದ ಹಿರಿಮೆಯನ್ನು ರಾಮ ಸೀತೆಗೆ ಬಣ್ಣಿಸಿದ. "ಇದು ನನ್ನ ಪೂರ್ವಜ ಸಗರನ ಕಾರಣದಿಂದಾಗಿ ಸಾಗರ ಎಂದೇ ಖ್ಯಾತಿಪಡೆದಿದೆ. ಸೂರ್ಯಕಿರಣಗಳು ಈ ಕಡಲ ಒಡಲಲ್ಲಿ ಗರ್ಭಧರಿಸುತ್ತವೆ. ಲೋಕಕ್ಕೆ ಮಳೆ ಸುರಿಯುವುದಲ್ಲದೆ ಅಪಾರ ಸಮೃದ್ಧಿ ಇದರೊಳಗಡಗಿರುತ್ತದೆ. ಸಾಗರದ ನೀರು ಬಡಬಾಗ್ನಿಗೂ, ಆಹ್ಲಾದಕರ ಚಂದ್ರನಿಗೂ ಜನ್ಮಕೊಟ್ಟಿದೆ. ನಾನು ಕಟ್ಟಿಸಿದ ಸೇತುವೆ ಕಡಲನ್ನು ಇಬ್ಭಾಗ ಮಾಡಿದೆ – ಛಾಯಾಪಥ ಬೆಳಕನ್ನು ಇಬ್ಭಾಗ ಮಾಡಿದಂತೆ ಸೇತುವೆಗೆ ಅಪ್ಪಳಿಸುವ ತೆರೆಗಳ ನೊರೆಯ ರಾಶಿಯನ್ನು ನೋಡು." ಇಲ್ಲಿ ವಿಸ್ತಾರವಾದ ಸಮುದ್ರದ ಕಾವ್ಯಮಯ ವರ್ಣನೆ ಇದೆ. ಮುಂದೆ ಕಾಡಿನ ವರ್ಣನೆ. ಸೀತೆಯನ್ನು ಕಳೆದುಕೊಂಡು ರಾಮ ಅನುಭವಿಸಿದ ವಿಯೋಗಯಾತನೆ ಉದ್ದಕ್ಕೂ ಮರ್ಮಸ್ಪರ್ಶಿಯಾಗಿದೆ. "ಮಳೆ ಬೀಳುವಾಗ ಜಲಾಶಯಗಳ ಪರಿಮಳ, ಮೊಗ್ಗು ಬಿಟ್ಟ ಕಾದಂಬ ವೃಕ್ಷಗಳು ಮನೋಜ್ಞವಾದ ಸೋಗೆಯ ನವಿಲುಗಳ ಕೇಕಾರವ ಮತ್ತು ನರ್ತನ

ಯಾವುದೂ ನೀನಿಲ್ಲದ ವೇಳೆ ನನಗೆ ಆಸ್ವಾದ್ಯವೂ ಆಗಲಿಲ್ಲ; ಸಹನೀಯವೂ ಆಗಲಿಲ್ಲ" ಎನ್ನುತ್ತಾನೆ ರಾಮ. ಮುಂದೆ ಆಶ್ರಮಗಳಿಂದ ಮೇಲೆದ್ದು ಬರುವ ಹೋಮ-ಧೂಮ ನಮ್ಮ ಮನದ ರಜೋಗುಣವನ್ನು ಕಳೆಯುತ್ತದೆ ಎನ್ನುತ್ತಾನೆ ರಾಮ. ಶಾತಕರ್ಣ, ಸುತೀಕ್ಷ್ಣ, ಶರಭಂಗ ಮುನಿಗಳ ಪರಿಚಯವಿದೆ. ತಾವು ಒಟ್ಟಿಗೆ ನಡೆದಾಡಿದ ಚಿತ್ರಕೂಟವನ್ನು, ಮಂದಾಕಿನಿಯನ್ನು ತೋರಿಸಿ ರಾಮ ಭಾವುಕನಾಗುತ್ತಾನೆ. ತಮ್ಮ ದಾಂಪತ್ಯ ಫಲಿಸಲೆಂದು ಬೇಡಿದ ವಟವೃಕ್ಷವನ್ನು ತೋರಿ ರಾಮ ಹೇಳುತ್ತಾನೆ "ಸಣ್ಣ ಸಣ್ಣ ಕೆಂಪು ಹಣ್ಣುಗಳುಳ್ಳ ಈ ವಟವೃಕ್ಷ ಗರುಡ ಮಣಿಗಳ ರಾಶಿಯಂತೆ ತೋರುತ್ತದೆ." ಆಶ್ರಮದ ಯಜ್ಞವೇದಿಯ ಮೇಲಿದ್ದ ಮರಗಳೂ ಗಾಳಿ ಇಲ್ಲದಾದಾಗ ಧ್ಯಾನಸ್ಥ ಮುನಿಗಳಂತೆ ತೋರುತ್ತವಂತೆ. ಮುಂದೆ ಗಂಗಾ ಯಮುನಾ ಸಂಗಮದ ಪ್ರಯಾಗದ ವರ್ಣನೆ. ಇಲ್ಲಿ ಭಕ್ತಿಭಾವ, ತುಂಬಿ ತುಳುಕಿದೆ. ಒಟ್ಟಲ್ಲಿ ಕಪ್ಪು ಹಾವುಗಳೊಂದಿಗೆ ಭಸ್ಮಲೇಪಿಸಿಕೊಂಡ ಈಶ್ವರ ತನುವಿನಂತೆ ಈ ಸಂಗಮ ಕವಿಗೆ ತೋರಿದೆ. ಮುಂದೆ ಆಪ್ತನಾದ ಗುಹನ ನೆನಪು; ಸರಯೂ ದರ್ಶನ. ತಂದೆ ದಶರಥ ತೊರೆದು ಹೋದ ಈ ಸರಯೂ ನದಿ ತನ್ನ ತಂಪಾದ ಕಣಗಳೊಂದಿಗೆ ಗಾಳಿ ಕೈಯಲ್ಲಿ ಬೀಸಿಬಂದು ನನ್ನ ತಾಯಿಯಂತೆ ಆಲಂಗಿಸಿಕೊಳ್ಳುತ್ತಿದೆ ಎನ್ನುವ ರಾಮನ ಮಾತು ಕಾಳಿದಾಸನ ಪ್ರಕೃತಿಪ್ರೇಮಕ್ಕೆ ಇಟ್ಟ ಕಿರೀಟ.

**ಸೇಯಂ ಮದೀಯಾ ಜನನೀವ ತೇನ ಮಾನ್ಯೇನ ರಾಜ್ಞಾ**
**ಸರಯೂರ್ವಿಯುಕ್ತಾ ।**
**ದೂರೇ ವಸಂತಂ ಶಿಶಿರಾನಿಲೈರ್ಮಾಂ ತರಂಗಹಸ್ತೈರುಪಗೂಹತೀವ ॥**

ಹನುಮಂತ ನೀಡಿದ ಸುದ್ದಿ ಕೇಳಿ ಭರತ ಧಾವಿಸಿ ಬಂದ. ವಿಮಾನ ನೆಲಕ್ಕಿಳಿಯಿತು. ರಾಮ-ಭರತ ಸಮಾಗಮ ಭ್ರಾತೃಪ್ರೇಮದ ಚಿರಸ್ಮಾರಕ. ಈ ಸರ್ಗದ ಉದ್ದಕ್ಕೂ ಕಾಳಿದಾಸನ ಕಾವ್ಯಾಭಿವ್ಯಕ್ತಿ ವಿಜೃಂಭಿಸಿದೆ. ಕಾಳಿದಾಸನ ಕಾವ್ಯ ನಿರ್ಮಾಣ ಕೌಶಲಕ್ಕೆ ಇದು ಸಾಕ್ಷಿ. ಮಾತು ಮಾತು ಕಾವ್ಯಮಯ.

### ಸೀತಾಪರಿತ್ಯಾಗ

ಕಾಳಿದಾಸನನ್ನು ತುಂಬ ಕಾಡಿದ ಭಾಗ ಇದು. ಇಲ್ಲಿ ಕಾವ್ಯದ ರಸೋತ್ಕರ್ಷವೆಷ್ಟೋ ಅಷ್ಟೇ ವಿಚಾರ ವಿಮರ್ಶೆಯೂ ಬೆಸೆದುಕೊಂಡಿದೆ. ಒಂದು ರೀತಿಯಲ್ಲಿ ಬುದ್ಧಿ ಭಾವಗಳ ವಿದ್ಯುದಾಲಿಂಗನವನ್ನು ಇಲ್ಲಿ ಕಾಣಬಹುದಾಗಿದೆ. ರಾಜತ್ವ ಮತ್ತು ಮನುಷ್ಯತ್ವಗಳ ಅಂತರೀಕ್ಷಣೆ ಇಲ್ಲಿಯ ವಿಶೇಷತೆ. ಅದು ಪರ್ಯಾಯವಾಗಿ ಪರಿಪೂರ್ಣ ವ್ಯಕ್ತಿತ್ವದ ಸ್ವರೂಪವನ್ನು ಕುರಿತಾಗಿಯೂ ಚಿಂತಿಸುತ್ತದೆ. ಒಂದು ವ್ಯಷ್ಟಿ ಅಥವಾ ವೈಯಕ್ತಿಕ ವ್ಯಕ್ತಿತ್ವ, ಇನ್ನೊಂದು ಸಮಷ್ಟಿ ಅಥವಾ ಸಾಮಾಜಿಕ ವ್ಯಕ್ತಿತ್ವ. ವ್ಯಷ್ಟಿ – ಸಮಷ್ಟಿಗಳಲ್ಲಿ ಸಂಘರ್ಷ ಬರಬಾರದು. ಒಂದು ವೇಳೆ ಸಂಘರ್ಷ ಉಂಟಾದಾಗ ಯಾವುದು ಗೆಲ್ಲಬೇಕು? ಯಾವುದಕ್ಕೆ ಪ್ರಾಧಾನ್ಯ ಸಿಗಬೇಕು?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಕಾಳಿದಾಸನ ರಾಮಾಯಣದಲ್ಲಿದೆ. ವ್ಯಷ್ಟಿ-ಸಮಷ್ಟಿಗಳ ಸಮನ್ವಯ ಸಾಧಿಸುವುದೇ ಜೀವಿತದ ಪರಿ. ಅದು ಸಾಧ್ಯವಾಗದಿದ್ದಾಗ ವ್ಯಷ್ಟಿ ಹಿತಕ್ಕಿಂತ ಸಮಷ್ಟಿ ಹಿತವೇ ಮುಖ್ಯ. ವ್ಯಷ್ಟಿ ಹಿತವನ್ನು ಬಲಿ ಕೊಟ್ಟಾದರೂ ಸಮಷ್ಟಿ ಹಿತವನ್ನು ಕಾಪಾಡಿಕೊಳ್ಳಬೇಕು. ಅದೇ ವ್ಯಕ್ತಿತ್ವದ ಪರಿಪೂರ್ಣತೆ ಎಂಬುದೇ ಕಾಳಿದಾಸನ ದರ್ಶನವಿದ್ದಂತೆ ತೋರುತ್ತದೆ. ರಾಜನಾದವನು, ಆಡಳಿತಗಾರನಾದವನು, ಸಮಾಜ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತವನು ವ್ಯಷ್ಟಿ – ಸಮಷ್ಟಿಗಳಲ್ಲಿ ಸಂಘರ್ಷ ಎದುರಾದಾಗ ಸಮಷ್ಟಿ ಹಿತವನ್ನೇ ಬೆಂಬಲಿಸಬೇಕೆಂಬುದು ಕಾಳಿದಾಸನ ಅಭಿಮತ. "ರಾಜಾ ಪ್ರಕೃತಿರಂಜನಾತ್" ಎಂದು ಕಾಳಿದಾಸನು 'ರಾಜ' ಶಬ್ದದ 'ಶಕ್ತಿ'ಯನ್ನು ಮೀರಿ ವ್ಯಾಖ್ಯಾನಿಸುವುದರ ಮೂಲಕ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾನೆ. ದಿಲೀಪ ಒಂದು ಹಸುವನ್ನು ಕಾಪಾಡಲಿಕ್ಕಾಗಿ ತನ್ನನ್ನೇ ಬಲಿಕೊಡಲು ನಿಶ್ಚಯಿಸಿದ ಕಥೆ ರಘುವಂಶದ ಆರಂಭದಲ್ಲಿದೆ. ಸಿಂಹವು ಅಧಿಕಾರ, ಐಶ್ವರ್ಯ, ದೈಹಿಕ ವಿಲಾಸಗಳ ಪ್ರಲೋಭನೆಯನ್ನು ಒಡ್ಡಿದಾಗ ರಾಜನಾದ ದಿಲೀಪ ಕೊಡುವ ಉತ್ತರವನ್ನು ಗಮನಿಸಬೇಕು.

**ಕ್ಷತಾತ್ ಕಿಲ ತ್ರಾಯತ ಇತ್ಯುದಗ್ರಃ**
**ಕ್ಷತ್ರಸ್ಯ ಶಬ್ದಃ ಭುವನೇಷು ರೂಢಃ**
**ರಾಜ್ಯೇನ ಕಿಂ ತದ್ವಿಪರೀತವೃತ್ತೇಃ ........ (2–53)**

ಕ್ಷತ ಎಂದರೆ ನಾಶ, ಆಪತ್ತು. ಅದರಿಂದ ರಕ್ಷಿಸುವವನು ಕ್ಷತ್ರಿಯ. ಕ್ಷತ ತ್ರಾಣದಿಂದ ವಿಮುಖನಾದವನಿಗೆ ರಾಜ್ಯದಿಂದ ಏನು ಪ್ರಯೋಜನ? ರಾಜ್ಯಕ್ಕೆ ಅವನಿಂದ ಏನು ಪ್ರಯೋಜನ?

ಈ ಹಿನ್ನೆಲೆಯಲ್ಲಿ ಸೀತಾಪರಿತ್ಯಾಗ (14 ನೆಯ ಸರ್ಗ)ವನ್ನು ನೋಡಬೇಕು. ರಾಮಾಯಣವನ್ನು ಸಂಕ್ಷಿಪ್ತವಾಗಿ ರಚಿಸಿದ ಕಾಳಿದಾಸ ಸೀತಾಪರಿತ್ಯಾಗದಲ್ಲಿ ಮಾತು ಬೆಳೆಸುತ್ತಾನೆ. 87 ಶ್ಲೋಕಗಳುಳ್ಳ ಈ ಸರ್ಗದಲ್ಲಿ ಮೊದಲ 30 ಶ್ಲೋಕಗಳಲ್ಲಿ ಅಯೋಧ್ಯೆಗೆ ಪುನರಾಗಮನ ಮತ್ತು ರಾಮರಾಜ್ಯದ ವಿವರಗಳಿವೆ. ಮುಂದಿನ ಭಾಗ ಸೀತಾಪರಿತ್ಯಾಗದ ಕತೆಗೆ ಮೀಸಲು. ರಾಮನ ರಾಜ್ಯಭಾರ ವರ್ಣನೆ, ರಾಮನಿಗೆ ಪ್ರಜೆಗಳಲ್ಲಿದ್ದ ಪ್ರೀತಿ, ಕಾಳಜಿ, ಪ್ರಜಾರಕ್ಷಣ ತತ್ಪರತೆಗಳ ವಿವರಗಳು ಸೀತಾಪರಿತ್ಯಾಗಕ್ಕೆ ಹಿನ್ನೆಲೆಯನ್ನು ಒದಗಿಸಿಕೊಡುತ್ತವೆ; ಸೀತೆಗೆ ಒದಗಿದ ಅಪವಾದವನ್ನು ಕೇಳಿದಾಗ ರಾಮ ಅನುಭವಿಸಿದ ಸಂಕಟ, ಒಳಗುದಿಗಳಿಗೆ ಪರಿವೇಶವನ್ನು ಕಟ್ಟಿಕೊಡುತ್ತವೆ.

**ತೇನಾರ್ಥವಾಂಲ್ಲೋಭಪರಾಙ್ಮುಖೇನ**
**ತೇನ ಘ್ನತಾ ವಿಘ್ನಭಯಂ ಕ್ರಿಯಾವಾನ್ ।**
**ತೇನಾಸ ಲೋಕಃ ಪಿತೃಮಾನ್ ವಿನೇತ್ರಾ**
**ತೇನೈವ ಶೋಕಾಪನುದೇವ ಪುತ್ರೀ (14–23) ॥**

ರಾಜನಾದ ರಾಮ ಲೋಭಿಯಲ್ಲದ್ದರಿಂದ ಪ್ರಜೆಗಳು ಶ್ರೀಮಂತರಾಗಿದ್ದರು. ಅಡ್ಡಿ ಆತಂಕಗಳನ್ನು ದೂರ ಮಾಡಿದ್ದರಿಂದ ಪ್ರಜೆಗಳು ಕಾರ್ಯತತ್ಪರರಾಗಿದ್ದರು. ಶಿಕ್ಷಣ–ಸಂಸ್ಕಾರಗಳನ್ನು ಒದಗಿಸಿದ್ದರಿಂದ ಆತ ಪ್ರಜೆಗಳ ತಂದೆಯ ಸ್ಥಾನ ಪಡೆದಿದ್ದ. ಪ್ರಜೆಗಳ ಶೋಕವನ್ನು ದೂರ ಮಾಡುತ್ತಿದ್ದುದರಿಂದ ಆತನ ಪ್ರಜೆಗಳ ಮಕ್ಕಳ ಸ್ಥಾನವನ್ನೂ ಆಕ್ರಮಿಸಿದ್ದ." ಮೇಲು ನೋಟಕ್ಕೆ ಈ ಪದ್ಯ ಆದರ್ಶಪರವೆನಿಸಿದರೂ ರಾಜ್ಯವ್ಯವಸ್ಥೆಯಲ್ಲಿ ರಾಮ ಇಷ್ಟೊಂದು ಸಮಷ್ಟಿ ತತ್ಪರನಾದ್ದರಿಂದಲೇ ಸೀತೆಗೆ ಒದಗಿದ ಅಪವಾದವನ್ನು ಕೇಳಿದಾಗ ವ್ಯಾಕುಲನಾಗುತ್ತಾನೆ. ಪ್ರಜೆಗಳ ಮಾತನ್ನು ನಿರ್ಲಕ್ಷಿಸಬೇಕೆ? ಸೀತೆಯನ್ನು ತ್ಯಜಿಸಬೇಕೆ? ಇಲ್ಲೇ ವ್ಯಷ್ಟಿ–ಸಮಷ್ಟಿಗಳಿಗೆ ಸಂಘರ್ಷ ಒದಗಿದ್ದು. ಪ್ರಜೆಗಳ ಮಾತನ್ನು ಅಲಕ್ಷಿಸಿದರೆ ಇಂದಿನ ಗುಸುಗುಸು ಕಿವಿಯಿಂದ ಕಿವಿಗೆ ಹಬ್ಬಿ ಬೆಳೆದು ಮುಂದೆ ಅರಾಜಕತೆಗೆ ಕಾರಣವಾದೀತು. ಜನರು ಯಾವಾಗಲೂ ಆಳುವವರ ಚಾರಿತ್ರ್ಯವನ್ನು ಗಮನಿಸುತ್ತಾರೆ. ಅಲ್ಲದೆ ತಾನು ಶುದ್ಧ ಚಾರಿತ್ರ್ಯದವನು, ನಿಸ್ವಾರ್ಥಿ ಎಂಬುದನ್ನು ಪ್ರಜೆಗಳಿಗೆ ರಾಜ ಮನವರಿಕೆ ಮಾಡಿಕೊಡಬೇಕಾಗುತ್ತದೆ. ರಾಜ ಪ್ರಜೆಗಳಿಗೆ ಜವಾಬ್ದಾರ. ಹಾಗಲ್ಲದಿದ್ದರೆ ಸಣ್ಣ ಸಂಗತಿ ಕೂಡ ಭಾರೀ ಅನರ್ಥದ ಅರಾಜಕತೆಗೆ ಕಾರಣವಾಗುತ್ತದೆ. "ನೀರ ಕೊಳದಲ್ಲಿ ಬಿದ್ದ ಎಣ್ಣೆಯ ಹನಿಯಂತೆ ಆ ಅಪವಾದ ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕಿವಿಯಿಂದ ಕಿವಿಗೆ ಹಬ್ಬುತ್ತಲೇ ಹೋಗುತ್ತದೆ. ಕಂಬಕ್ಕೆ ಕಟ್ಟಿದ ಆನೆಯಂತೆ ಈ ಕಳಂಕವನ್ನು ಸಹಿಸಲಾರೆ." ಎರಡೂ ಸಾರ್ಥಕ ಉಪಮೆಗಳು. ಸೀತೆ ಪಾಪರಹಿತಳೆಂಬುದು ರಾಮನಿಗೆ ಗೊತ್ತು. **'ಅವೈಮಿ ಚೈನಾಮನಘೇತಿ ಕಿಂತು, ಲೋಕಾಪವಾದೋ ಬಲವಾನ್ಮತೋ ಮೇ'** ಆದರೂ ಲೋಕಾಪವಾದ ಬಲವತ್ತರವಾದುದೆಂದು ರಾಮನ ಅಭಿಮತ. ರಾಮ ಸೀತೆಯನ್ನು ತ್ಯಜಿಸುವ ನಿರ್ಧಾರಕ್ಕೆ ಬಂದ. ರಾಜನಾಗಿ ಪ್ರಜಾರಂಜನೆಯನ್ನು ಸಾಧಿಸಿದ.

ಇದರಿಂದ ಸೀತೆಗೆ ಅನ್ಯಾಯವಾಗಲಿಲ್ಲವೇ? ಯಾರದೋ ಅಜ್ಞಾನದಿಂದಾಗಿ ಯಾರಿಗೋ ಶಿಕ್ಷೆ! ಬದುಕು, ವ್ಯವಸ್ಥೆ ಎಷ್ಟು ಕ್ರೂರ! ಜೀವನದ ವೈಚಿತ್ರ್ಯ ಇದು. ಸೀತೆಯ ಒಳತೋಟಿ, ಅಸಹನೀಯ ದುಃಖ, ಹತಾಶ ಸ್ಥಿತಿಗಳನ್ನೆಲ್ಲ ಕಾಳಿದಾಸ ತುಂಬ ಮರ್ಮಸ್ಪರ್ಶಿಯಾಗಿ ಚಿತ್ರಿಸಿದ್ದಾನೆ. ಪ್ರಕೃತಿಯ ಪ್ರತಿಕ್ರಿಯೆಯನ್ನು ಕೊಡುವ ನೆವದಲ್ಲಿ ಕಾಳಿದಾಸ ಮನುಷ್ಯನ ಸಣ್ಣತನಕ್ಕೆ ಕನ್ನಡಿ ಹಿಡಿದಿದ್ದಾನೆ. ಎಷ್ಟು ಧ್ವನಿಪೂರ್ಣ ಪದ್ಯ!

**ನೃತ್ಯಂ ಮಯೂರಾಃ ಕುಸುಮಾನಿ ವೃಕ್ಷಾಃ**
**ದರ್ಭಾನುಪಾತ್ತಾನ್ ವಿಜಹುರ್ಜರಿಣ್ಯಃ ।**
**ತಾಸ್ಯಾಃ ಪ್ರಪನ್ನೇ ಸಮದುಃಖಭಾಜಮ್**
**ಅತ್ಯಂತಮಾಸೀದ್ ರುದಿತಂ ವನೇಽಪಿ (14–69) ॥**

"ನವಿಲುಗಳು ನರ್ತನವನ್ನು, ಮರಗಳು ಹೂಗಳನ್ನು, ಜಿಂಕೆಗಳು ಬಾಯಲ್ಲಿ ಮೆಂದ ಹುಲ್ಲನ್ನು ತೊರೆದವು. ಮೂಕ ಜೀವಿಗಳು ಸೀತೆಯ ದುಃಖಕ್ಕೆ ಸಮನಾದ ದುಃಖವನ್ನು ತಳೆದವು. ಇಡೀ ಕಾಡು ಅಳುತ್ತಿತ್ತು" ಆದರೆ ನಾಡು? ಒಡನೆಯೇ ಪ್ರಶ್ನೆ ಎದುರಾಗುತ್ತದೆ. ಸೀತೆಯ ದುಃಖಕ್ಕೆ ಸ್ಪಂದಿಸುವುದು ಹಾಗಿರಲಿ. ಸೀತೆಯ ದುಃಖಕ್ಕೆ ಮೂಲವೇ ಈ ನಾಡು. ಎಂಥ ವೈಚಿತ್ರ್ಯ! ನಂಬಿಕೆ, ಅಪನಂಬಿಕೆ, ಸಂಸ್ಕೃತಿ, ವಿಕೃತಿಗಳೆಲ್ಲದರ ಚರ್ಚೆ ಇಲ್ಲಿ ಮೌನವಾಗಿ ನಡೆದಿದೆ.

ರಾಮನೇನೋ ಸಮಷ್ಟಿಯನ್ನು ಎತ್ತಿ ಹಿಡಿದು ವ್ಯಷ್ಟಿಯನ್ನು ತ್ಯಜಿಸಿರಬಹುದು. ಆದರೆ ವ್ಯಷ್ಟಿ – ಸಮಷ್ಟಿಗಳ ಸಮನ್ವಯ ಸಾಧ್ಯವಿರಲಿಲ್ಲವೇ? ಕಾಳಿದಾಸ ಈ ಪ್ರಶ್ನೆಯನ್ನೆತ್ತಿದ್ದಾನೆ.

**ಉತ್ಖಾತಲೋಕತ್ರಯಕಂಟಕೇಽಪಿ**
**ಸತ್ಯಪ್ರತಿಜ್ಞೇಪಿ ಅವಿಕತ್ಥನೇಽಪಿ ।**
**ತ್ವಾಂ ಪ್ರತ್ಯಕಸ್ಮಾತ್ ಕಲುಷಪ್ರವೃತ್ತಾ**
**ಅಸ್ತ್ಯೇವ ಮನ್ಯುಃ ಭರತಾಗ್ರಜೇ ಮೇ (14–73)**

"ರಾಮ ಮೂರು ಲೋಕದ ಮುಳ್ಳನ್ನು ಕಿತ್ತೆಸೆದಿದ್ದಿರಬಹುದು; ಆಡಿದ ಮಾತನ್ನು ಈಡೇರಿಸಿರಬಹುದು: ಆತ್ಮಶ್ಲಾಘನೆ ಮಾಡದವನಾಗಿರಬಹುದು; ಆದರೆ ನಿನ್ನಲ್ಲಿ ಇದ್ದಕ್ಕಿದ್ದಂತೆ ಕೆಟ್ಟದಾಗಿ ನಡೆದುಕೊಂಡನಲ್ಲ! ಆ ಭರತನ ಅಣ್ಣನ ಮೇಲೆ ನನಗೆ ಕೋಪ ಇದೆ." ವಾಲ್ಮೀಕಿಯಿಂದ ಕಾಳಿದಾಸ ಆಡಿಸುವ ಮಾತು ಇದು. ಭರತ ವ್ಯಷ್ಟಿ–ಸಮಷ್ಟಿ ಸಂಘರ್ಷದಲ್ಲಿ ದೇಶ ಆಳಿಯೂ ರಾಜನಾಗದೆ ಸಮನ್ವಯ ಸಾಧಿಸಿದ. ಅದು ರಾಮನಿಗೇಕೆ ಆಗಲಿಲ್ಲ? ಅದಕ್ಕಾಗಿ ಇಲ್ಲಿ ಭರತನ ಉಲ್ಲೇಖ.

ಎಲ್ಲ ಲೋಕಮೋಹಗಳನ್ನು ತೊರೆದ ವಾಲ್ಮೀಕಿ ಮನುಷ್ಯ ಪ್ರೀತಿಯನ್ನು – ಜೀವ ಪ್ರೀತಿಯನ್ನು ತೊರೆಯಲಿಲ್ಲ. ಕಾಳಿದಾಸನ ಕಣ್ವನೂ ಅಂಥವನೇ. "ಪ್ರಾಪ್ತಾಸಿ ವೈದೇಹಿ ಪಿತುರ್ನಿಕೇತಮ್." "ವೈದೇಹಿ, ನೀನು ತಂದೆಯ ಮನೆಗೆ ಬಂದಿದ್ದೀಯಮ್ಮ" ಎಂದು ವಾಲ್ಮೀಕಿ ಸೀತೆಯನ್ನು ಸಂತೈಸಿದನು. ನಿಜ 'ವಿದೇಹಿ' (ದೇಹವಿಲ್ಲದ) ಸೀತೆಗೆ ವಾಲ್ಮೀಕಿಯೇ ನಿಜವಾದ ತಂದೆ. ಕಾವ್ಯ ಕವಿಯ ಮಾನಸಪುತ್ರಿ ಎಂದು ಒಮ್ಮೆ ಪುತಿನ ಹೇಳಿದ್ದರು.

ವಾಲ್ಮೀಕಿ ಮಹರ್ಷಿ ಸೀತೆಗೆ ತಾಯ್ತನವನ್ನು ಕಲಿಸಿಕೊಡುವ ಪದ್ಯ ತುಂಬ ಸುಂದರ. ಕಾಳಿದಾಸನ ಸುಸಂಸ್ಕೃತ ವ್ಯಕ್ತಿತ್ವದ ಮಧುರ ಮನಸ್ಸಿನ ಪ್ರತಿಬಿಂಬ ಇದು.

**ಪಯೋಘಟೈರಾಶ್ರಮಬಾಲವೃಕ್ಷಾನ್**
**ಸಂವರ್ಧಯಂತೀ ಸ್ವಬಲಾನುರೂಪೈಃ ।**
**ಅಸಂಶಯಂ ಪ್ರಾಕ್ತನಯೋಪಪತ್ತೇಃ**
**ಸ್ತನಂಧಯಪ್ರೀತಿಮವಾಪ್ಸ್ಯಸಿ ತ್ವಮ್ (14–78) ॥**

"ಸ್ವಶಕ್ತಿಗೆ ಅನುಗುಣವಾಗಿ ನೀರ ಕೊಡಗಳಿಂದ ಆಶ್ರಮದ ಎಳೆಗಿಡಗಳನ್ನು ನೀರುಣಿಸಿ ಬೆಳೆಸು. ಅದರಿಂದ ನೀನು ಮಕ್ಕಳು ಹುಟ್ಟುವುದಕ್ಕೆ ಮೊದಲೇ ನಿಸ್ಸಂಶಯವಾಗಿ ಶಿಶುಪ್ರೀತಿಯನ್ನೂ–ತಾಯ್ತನವನ್ನೂ ಪಡೆಯುವೆ". ಪಯಃ (ನೀರು – ಹಾಲು), ಬಾಲ, ತನಯ, ಸ್ತನಂಧಯ, ಪ್ರೀತಿ, ಸಂವರ್ಧನ ಪದಗಳು ಪದ್ಯದ ನೇರ ಅರ್ಥದ ನೈಜ ನೆಲೆಯಿಂದ ಅಯಾಚಿತವಾಗಿ ಮೇಲಕ್ಕೆದ್ದು, ಸೀತೆಗೆ ಸದ್ಯದಲ್ಲಿ ದೊರಕಲಿರುವ ತಾಯ್ತನದ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತವೆ. 'ಸ್ವಬಲಾನುರೂಪ' ಪದ ಪ್ರಯೋಗವೂ ಅತ್ಯಂತ ಔಚಿತ್ಯ ಪೂರ್ಣವಾಗಿದೆ.

ಕಾಳಿದಾಸನ ಕವಿತ್ವಕ್ಕೆ ಸಮಸಮನಾಗಿ ವಸ್ತುನಿರ್ವಹಣಾ ಕೌಶಲ್ಯ ಇಲ್ಲಿ ತೋರುತ್ತದೆ. ಸೀತೆ ಸದ್ಯದ ಸ್ಥಿತಿಗೆ ಒಗ್ಗಿಕೊಂಡು ಆಶ್ರಮದ ಪರಿಸರದಲ್ಲಿ

ಕಾಲಕಳೆಯುತ್ತಿದ್ದಳೆಂಬಲ್ಲಿಗೆ ಹದಿನಾಲ್ಕನೆಯ ಸರ್ಗ ಮುಕ್ತಾಯವಾಗುತ್ತದೆ. ಇದು ಕೊನೆಯ ಪದ್ಯ.

**ಸೀತಾಂ ಹಿತ್ವಾ ದಶಮುಖರಿಪುಃ ನೋಪಯೇಮೇ ಯದನ್ಯಾಮ್**
**ತಸ್ಯಾ ಏವ ಪ್ರತಿಕೃತಿಸಖೋ ಯತ್ಕ್ರತೂನಾಜಹಾರ ।**
**ವೃತ್ತಾಂತೇನ ಶ್ರವಣವಿಷಯಪ್ರಾಪಿಣಾ ತೇನ ಭರ್ತುಃ**
**ಸಾ ದುರ್ವಾರಂ ಕಥಾಮಪಿ ಪರಿತ್ಯಾಗದುಃಖಂ ವಿಷೇಹೇ ॥**

"ರಾವಣನ ವೈರಿಯಾದ ರಾಮ ಸೀತೆಯನ್ನು ಬಿಟ್ಟು ಬೇರೆ ಯಾರನ್ನೂ ಮತ್ತೆ ಮದುವೆಯಾಗಲಿಲ್ಲ. ಅವಳ ಪ್ರತಿಮೆಯ ಸಖನಾಗಿ ಯಾಗ ಮಾಡಿದ – ಈ ಸುದ್ದಿ ಸೀತೆಯ ಕಿವಿಗೆ ತಲುಪಿತು. ಅದರಿಂದ ಆಕೆ ಅಸಹನೀಯ ದುಃಖವನ್ನು ಹೇಗೋ ಸಹಿಸಿಕೊಂಡಳು." ರಾಮನಿಗೆ "ದಶಮುಖರಿಪು" ಮತ್ತು 'ಪ್ರತಿಕೃತಿ ಸಖ' ಎನ್ನುವುದು ಎಷ್ಟು ಔಚಿತ್ಯಪೂರ್ಣ, ಧ್ವನಿಗರ್ಭಿತ ವಿಶೇಷಣಗಳು ಎಂಬುದನ್ನು ಬೇರೆ ಹೇಳಬೇಕಿಲ್ಲ. ಈ ಪದ್ಯದ ಅರ್ಥ ವ್ಯಾಪ್ತಿ ತುಂಬ ವಿಶಾಲವಾದದ್ದು.

ರಾಮ ರಾವಣಸಂಸ್ಕೃತಿಗೆ ವಿರೋಧಿಯಾದವನು. ಸಮಷ್ಟಿಸಮಾಧಾನಕ್ಕಾಗಿ ಸೀತೆಯನ್ನು ತೊರೆದೂ ಮಾನಸಿಕ ಸಖ್ಯವನ್ನು ತೊರೆಯಲಾರದವನು. ಅದಕ್ಕಾಗಿ 'ರಜೋರಿಕ್ತ ಮನಸ್ಕನಾಗಿ ರಾಜ್ಯವನ್ನಾಳಿದವನು. ಸಪ್ತಪದಿಯಲ್ಲಿ ಕಟ್ಟಿಕೊಂಡ ಸಖ್ಯವನ್ನು ತೊರೆಯಲಾರದೆ ತೊಳಲಿದವನು. ವ್ಯಷ್ಟಿಹಿತವನ್ನು ತ್ಯಜಿಸಿ ಸಮಷ್ಟಿ ಹಿತವನ್ನು ಆಯ್ದುಕೊಂಡವನು. ರಘುವಂಶ ಆಳಕ್ಕೆ ಅಗೆದಷ್ಟೂ ಗೆರೆಮಿರಿವ ಚಿನ್ನದದಿರು ದೊರೆಯುವ ಅಕ್ಷಯ ಖನಿ.

### ಶ್ರೀರಾಮ ಸ್ವರ್ಗಾರೋಹಣ :

ಲವಣನೆಂಬ ರಾಕ್ಷಸನ ಉಪಟಳಕ್ಕೆ ಒಳಗಾದ ಮುನಿಗಳು ರಾಮನಲ್ಲಿಗೆ ಬಂದು ರಕ್ಷಣೆಯನ್ನು ಬೇಡಿದರು. "ಶಾಪ ನೀಡಿದರೆ ನಮ್ಮ ತಪಸ್ಸು ಕ್ಷೀಣಿಸುವುದು, ಆತ ಶಿವನು ಅನುಗ್ರಹಿಸಿದ ಶೂಲವನ್ನು ಸದಾ ಇಟ್ಟುಕೊಂಡಿರುತ್ತಾನೆ. ಅದು ಅವನ ಬಳಿ ಇಲ್ಲದಾಗ ಅವನನ್ನು ಕೊಲ್ಲಬೇಕು" ಎಂದು ಹೇಳಿದರು. ಸಾಮಾನ್ಯ ನಿಯಮಕ್ಕೆ ವಿಶೇಷ ನಿಯಮವು ಬದಲಿಯಾಗಿ ಬರುವಂತೆ ರಾಮನು ಈ ಕಾರ್ಯವನ್ನು ತಮ್ಮನಾದ ಶತ್ರುಘ್ನನಿಗೆ ಒಪ್ಪಿಸಿದನು. ಆತ ಸೇನೆಯೊಂದಿಗೆ ಸಾಗಿ ವಾಲ್ಮೀಕಿ ಮುನಿಗಳ ಆಶ್ರಮ ಪ್ರಾಂತದಲ್ಲಿ ಬೀಡುಬಿಟ್ಟನು. ಋಷಿಯು ಆತನಿಗೆ ತಪಃ ಪ್ರಭಾವದಿಂದ ಸೌಕರ್ಯಗಳನ್ನೊದಗಿಸಿಕೊಟ್ಟನು. ಅದೇ ರಾತ್ರಿ ಸೀತೆ ಅವಳಿ ಮಕ್ಕಳನ್ನು ಹಡೆದಳು. ಅವರು ಭೂಮಿಗೆ ಪರಿಪೂರ್ಣವಾದ ಕೋಶ ಮತ್ತು ಸೇನೆಯಂತಿದ್ದರು. ಶತ್ರುಘ್ನನಿಗೆ ಸಂತಸವಾಯ್ತು. ವಾಲ್ಮೀಕಿಗೆ ನಮಿಸಿ ಅಲ್ಲಿಂದ ಹೊರಟನು. ಅವನು ಅಲ್ಲಿಂದ ಲವಣಾಪುರಕ್ಕೆ ಹೋದನು. ರಾವಣನ ತಂಗಿ ಕುಂಭೀನಸಿಯ ಮಗ ಲವಣ ಕಾಡಿನಿಂದ ಕರವನ್ನು ಸಂಗ್ರಹಿಸಿದಂತೆ ಪ್ರಾಣಿಗಳ ರಾಶಿಯನ್ನು ಕೊಂದು ತಂದ. ಹೊಗೆಯಂತೆ ಕಂದು ಬಣ್ಣ, ನೆಣದ ವಾಸನೆ, ಜ್ವಾಲೆಯಂಥ ಕೆಂಗೂದಲು, ಮಾಂಸಾಹಾರಿ ಅನುಚರರು– ನಡೆದಾಡುವ ಥೇಟ್ ಚಿತೆಯ ಬೆಂಕಿ! ಆಗ ಶೂಲ ಅವನ ಬಳಿ ಇರಲಿಲ್ಲ. ಶತ್ರುಘ್ನ ಅವನನ್ನು ಅಡ್ಡಗಟ್ಟಿದ. ಮರವನ್ನು ಕಿತ್ತೆಸೆದ, ಕಲ್ಲು ತೂರಿದ. ಆದರೆ ಶತ್ರುಘ್ನನು ಐಂದ್ರಾಸ್ತ್ರವನ್ನು ಪ್ರಯೋಗಿಸಿದನು. ಪರಮಾಣುವಿನಂತೆ ಪುಡಿಪುಡಿಯಾಗಿ ಹೋದ. ಶತ್ರುಘ್ನನು ಯಮುನೆಯ ದಡದಲ್ಲಿ ಮಥುರಾ ನಗರವನ್ನು ಕಟ್ಟಿದನು.

ಇತ್ತ ವಾಲ್ಮೀಕಿ ಸೀತೆಯ ಮಕ್ಕಳಿಗೆ ಕುಶ–ಲವ ಎಂದು ಹೆಸರಿಟ್ಟ. ಎಲ್ಲ ಸಂಸ್ಕಾರಗಳನ್ನು ನೀಡಿದ. ತನ್ನ ಆದಿ ಕಾವ್ಯವಾದ ರಾಮಾಯಣವನ್ನು ಕಂಠಪಾಠ ಮಾಡಿಸಿದ. ಇಂಪಾಗಿ ಹಾಡುವ ಮಕ್ಕಳಿಂದ ಸೀತೆಯ ಮನ ಹಗುರಾಯಿತು. ರಾಮನ ತಮ್ಮಂದಿರಿಗೂ ಇಬ್ಬಿಬ್ಬರು ಮಕ್ಕಳಾದರು. ಶತ್ರುಘ್ನನು ಮರಳಿ ಬಂದು ಎಲ್ಲವನ್ನೂ ರಾಮನಿಗೆ ಒಪ್ಪಿಸಿದನು. ಆದರೆ ಸೀತೆ ಹಡೆದ ಸುದ್ದಿಯನ್ನು ವಾಲ್ಮೀಕಿಯ ಆದೇಶದಂತೆ ಹೇಳಲೇ ಇಲ್ಲ. ಅಷ್ಟರಲ್ಲಿ ಬ್ರಾಹ್ಮಣನೊಬ್ಬ ಮಗುವನ್ನು ಕಳೆದುಕೊಂಡು ಗೋಳಿಡುತ್ತಿದ್ದ.

ಇದಕ್ಕೆ ಕಾರಣವನ್ನೂ ಹುಡುಕಿ ಹೊರಟ ರಾಮನಿಗೆ ಮರದ ಕೊಂಬೆಗೆ ಕೆಳಮುಖವಾಗಿ ನೇತಾಡುತ್ತ ತಪಸ್ವಿಯೊಬ್ಬ ಕಾಣಿಸಿದ. ಆತನೇ ಶಂಬುಕ. ರಾಮ ಅವನನ್ನು ಕತ್ತರಿಸಿದ. ರಾಮನೇ ಸ್ವಯಂ ದಂಡಿಸಿದ್ದರಿಂದ ಆತನಿಗೆ ತಪಸ್ಸಿನಿಂದಲೂ ಈವರೆಗೆ ಸಿಗದ ಸದ್ಗತಿ ದೊರಕಿಬಿಟ್ಟಿತು. ರಾಮ ಅಶ್ವಮೇಧಕ್ಕೆ ಅಣಿಯಾದ. ಯಜ್ಞಶಾಲೆಯಲ್ಲಿ ಸೀತೆಯ ಚಿನ್ನದ ಪ್ರತಿಮೆ. ಆ ಹೊತ್ತಿಗೆ ಕುಶ ಲವರು ರಾಮಾಯಣವನ್ನು ಅಲ್ಲಲ್ಲಿ ಹಾಡುತ್ತ ಬಂದರು. ರಾಮನ ಕತೆ, ವಾಲ್ಮೀಕಿಯ ಕೃತಿ; ಕಿನ್ನರಕಂಠದ ಗಾಯಕರು, ಸರ್ವಜನಾಕರ್ಷಣೆಗೆ ಇನ್ನೇನು ಬೇಕು! ರಾಮನೂ ಅವರನ್ನು ಕರೆಸಿ ಹಾಡಿಸಿದ. ಆ ಹಾಡು ಎಲ್ಲರ ಮನವನ್ನಾಕರ್ಷಿಸಿತು. ಎಲ್ಲರ ಕಣ್ಣಲ್ಲು ಆನಂದಾಶ್ರು – ಬೆಳಗಿನ ಇಬ್ಬನಿ ಸುರಿದ ಕಾಡಿನ ನೆಲದಂತೆ! "ನೀವು ಯಾರು? ಯಾರ ಕೃತಿ ಇದು?" ಎಂದು ರಾಮ ಕೇಳಿದ. ಅವರು "ವಾಲ್ಮೀಕಿ ಮುನಿ" ಎಂದು ಉತ್ತರವಿತ್ತರು. ರಾಮ ತಮ್ಮಂದಿರೊಂದಿಗೆ ನೇರವಾಗಿ ವಾಲ್ಮೀಕಿಯಿದ್ದಲ್ಲಿಗೆ ಬಂದನು. ಅವರು ಸೀತೆಯ ಮಕ್ಕಳೆಂದು ತಿಳಿಯಿತು. 'ಈಗಲಾದರೂ ಸೀತೆಯನ್ನು ಒಪ್ಪಿಸಿಕೋ' ಎಂದು ವಾಲ್ಮೀಕಿ ಆಗ್ರಹಿಸಿದ. ರಾಮನದು ಮತ್ತೆ ಅದೇ ಹಾಡು! "ಸೀತೆ ಪರಿಶುದ್ಧಳು; ನನಗೆ ಗೊತ್ತಿದೆ. ಆದರೆ ರಾಕ್ಷಸರ ದುಷ್ಟತನದಿಂದಾಗಿ ನನ್ನ ಪ್ರಜೆಗಳು ನಂಬುತ್ತಿಲ್ಲ. ಅವಳು ತನ್ನ ಚಾರಿತ್ರ್ಯದ ಬಗ್ಗೆ ಜನಕ್ಕೆ ತಿಳಿಹೇಳಿ ಒಪ್ಪಿಸಿದರೆ ಸ್ವೀಕರಿಸುತ್ತೇನೆ." ಮಾರನೆಯ ದಿನ ಅಲ್ಲಿಗೆ ಪ್ರಜೆಗಳೂ ಬಂದರು. ಕಾವಿ ಬಣ್ಣದ ನಾರುಡೆಯನ್ನು ಉಟ್ಟು, ಕೆಳಮುಖಮಾಡಿಕೊಂಡಿದ್ದ ಸೀತೆಯ ಆ ಶಾಂತ ಮೂರ್ತಿಯನ್ನು ಕಂಡಾಗ ಯಾರಿಗೂ ಆಕೆ ಪರಿಶುದ್ಧೆ ಅನ್ನಿಸಲೇಬೇಕು. ಜನರೂ ಬಲಿತ ಬತ್ತದ ತೆನೆಯಂತೆ ಮುಖ ಕೆಳಗು ಮಾಡಿದರು. ಸೀತೆ ಉಲಿದಳು– "ವಿಶ್ವವನ್ನೇ ಒಡಲಲ್ಲಿಟ್ಟುಕೊಂಡ ಅಮ್ಮಾ ಭೂದೇವಿ! ಮನೋವಾಕ್‍ಕಾಯಗಳಿಂದ ನನ್ನ ಗಂಡನನ್ನು ವಂಚಿಸದಿರುವುದು ನಿಜವೇ ಆಗಿದ್ದರೆ, ನನ್ನನ್ನು ನಿನ್ನ ಒಡಲೊಳಗೆ ಕರೆದುಕೋ." ಇಷ್ಟು ಹೇಳಿದ್ದೇ ನೆಲ ಬಿರುಕುಬಿಟ್ಟಿತು. ಅಲ್ಲಿಂದ ಮಿಂಚಿನ ಪ್ರಭಾವಲಯ ಮೇಲೆದ್ದು ಬರುವುದು ಗೋಚರಿಸಿತು. ಸರ್ಪದ ಹೆಡೆಯುಳ್ಳ ಸಿಂಹಾಸನದಲ್ಲಿ ಭೂದೇವಿ ಕಾಣಿಸಿಕೊಂಡಳು. ಸೀತೆಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಪಾತಾಳದತ್ತ ನಡೆದಳು. 'ಬೇಡ! ಬೇಡ! ಎಂದು ರಾಮ ಕೂಗುತ್ತಲೆ ಇದ್ದ ಯಜ್ಞ ಸಮಾಪ್ತಿಯಾಯಿತು. ಸೀತೆಯ ಮೇಲಿನ ಪ್ರೀತಿಯನ್ನು ರಾಮ ಮಕ್ಕಳ ಮೇಲಿಟ್ಟನು.

ಯುಧಾಜಿತನ ಸಲಹೆಯಂತೆ ಸಿಂಧುದೇಶವನ್ನು ಭರತನಿಗೆ ಒಪ್ಪಿಸಿದನು. ಭರತನು ಅಲ್ಲಿರುವ ವೈರಿಗಳನ್ನು ಗೆದ್ದು ಆಯುಧ ತ್ಯಾಗ ಮಾಡಿ ವೀಣೆಯನ್ನು ಹಿಡಿದನು. ತಕ್ಷಪುಷ್ಕಲರೆಂಬ ಮಕ್ಕಳಿಗೆ ರಾಜ್ಯವನ್ನೊಪ್ಪಿಸಿ ಮರಳಿ ರಾಮನಲ್ಲಿಗೆ ಬಂದನು. ಶತ್ರುಘ್ನನೂ ಮಥುರಾ ರಾಜ್ಯವನ್ನು ಮಗ ಸಂಬಾಹುವಿಗೆ ಒಪ್ಪಿಸಿದನು. ರಾಮನ ಆಜ್ಞೆಯ ಮೇರೆಗೆ ಲಕ್ಷ್ಮಣನು ಅಂಗದ ಚಂದ್ರಕೇತು ಎನ್ನುವ ತನ್ನ ಮಕ್ಕಳಿಗೆ ಕಾರಾಪಥದ ಆಡಳಿತವನ್ನು ಒಪ್ಪಿಸಿದನು. ಅಷ್ಟರಲ್ಲಿ ತೀರಿಕೊಂಡ ತಾಯಂದಿರಿಗೆ ಶ್ರಾದ್ಧಾದಿ ಕರ್ಮಗಳನ್ನು ನೆರವೇರಿಸಿದರು. ಮಹಾಪ್ರಸ್ಥಾನಕಾಲ ಸನ್ನಿಹಿತವಾಯಿತು. ಕಾಲನು ಮುನಿಯ ವೇಷ ತಳೆದು ರಾಮನಿಗೆ ಹೇಳಿದ– "ಗುಟ್ಟಾಗಿ ಮಾತನಾಡಬೇಕು. ಈ ನಡುವೆ ಯಾರಾದರೂ ಇಲ್ಲಿಗೆ ಬಂದರೆ ಅವನನ್ನು ತ್ಯಜಿಸಬೇಕು." ಲಕ್ಷ್ಮಣನೇ ಕಾವಲುಗಾರನಾಗಿ ನಿಂತ. ಕಾಲ ನಿಜರೂಪವನ್ನು ತೋರಿ, ಬ್ರಹ್ಮಾದೇಶದಂತೆ ನೀನು ದ್ಯುಲೋಕಕ್ಕೆ ತೆರಳು ಸಿದ್ಧನಾಗು ಎಂದನು. ತಿಳಿದೂ ತಿಳಿದೂ ಲಕ್ಷ್ಮಣನು ನಿಯಮವನ್ನು ಮೀರಬೇಕಾಯಿತು. ಆತ ರಾಮಸಂದರ್ಶನಾರ್ಥಿಯಾಗಿ ಬಂದ ದುರ್ವಾಸನ ಶಾಪಕ್ಕೆ ಅಂಜಿದ. ಲಕ್ಷ್ಮಣನು ಸರಯೂ ನದಿಯಲ್ಲಿ ದೇಹತ್ಯಾಗ ಮಾಡಿದ. ಅಣ್ಣನ ಪ್ರತಿಜ್ಞೆಯನ್ನು ತಾನಾಗೇ ಪಾಲಿಸಿದ. ರಾಮನ ಒಂದಂಗ ನಶಿಸಿಹೋಯಿತು – ಆತ ಈಗ ಮೂರೇ ಕಾಲಿನ ಧರ್ಮಪಶು. ರಾಮನು ಕುಶಾವತಿಯಲ್ಲಿ ಕುಶನನ್ನು ನೆಲೆಗೊಳಿಸಿದನು. ಶರಾವತೀ ಪುರದಲ್ಲಿ ಲವನನ್ನು ಇಟ್ಟನು. ಬೆಂಕಿಯನ್ನು ಹಿಡಿದು ಇನ್ನಿಬ್ಬರು ತಮ್ಮಂದಿರೊಂದಿಗೆ ಉತ್ತರಾಭಿಮುಖವಾಗಿ ಚಲಿಸಿದನು. ಅವನನ್ನು ಹಿಂಬಾಲಿಸಿ ಅಯೋಧ್ಯೆಯ ಮನೆಗಳೆಲ್ಲ ಬರಿದಾದವು. ಅಲ್ಲಿಗೆ ಬಂದಿಳಿದ ವಿಮಾನವೇರಿ ಹೊರಟ. ಭಕ್ತಾನುಕಂಪಿಯಾದ ಶ್ರೀರಾಮನು ತನ್ನ ಅನುಯಾಯಿಗಳಿಗೆ ಸರಯೂ ನದಿಯೇ ಸ್ವರ್ಗದ ಮೆಟ್ಟಿಲಾಗಲಿ

ಎಂದು ಹರಸಿದನು. ನದಿಯಲ್ಲಿ ಇಳಿದು ಹಸುಗಳನ್ನು ದಾಟಿಸುವರು. ಹಾಗೆ ಸರಯೂಗೆ ಇಳಿದವರು ಭವವನ್ನೆ ದಾಟುವರು. ಅದಕ್ಕೆ ಆ ಮಹಾಪ್ರಸ್ಥಾನದ ಜಾಗ **'ಗೋಪ್ರತರ'** ಎಂದೇ ಪ್ರಸಿದ್ಧವಾಯಿತು. ದೇವತಾಂಶದಿಂದ ಕಪಿಗಳಾಗಿ ಬಂದವರಿಗೆಲ್ಲ ಮೂಲಸ್ಥಾನವನ್ನು ಕರುಣಿಸಿದನು. ದಕ್ಷಿಣದಲ್ಲಿ ವಿಭೀಷಣ, ಉತ್ತರದಲ್ಲಿ ಹನುಮಂತ ಇಬ್ಬರೇ ಅವನ ಕೀರ್ತಿಸ್ತಂಭಗಳಾಗಿ ಉಳಿದರು.

ಈ ಸರ್ಗದ ರಚನೆ ಪುರಾಣದ ಓಟಕ್ಕೆ ಹತ್ತಿರವಾಗಿದೆ. ಸರ್ಗದ ಕೊನೆಯಲ್ಲಿ ಸೀತಾಂತರ್ಧಾನ ಮತ್ತು ಮಹಾಪ್ರಸ್ಥಾನದ ಭಾಗಗಳಲ್ಲಿ ಕಾಳಿದಾಸನ ಪ್ರಸನ್ನಗಂಭೀರ ಭಾಷೆಯನ್ನೂ, ಪ್ರಸಂಗರಚನಾಕೌಶಲವನ್ನೂ ಅನುಭವಿಸಬಹುದಾಗಿದೆ.

Bhavan
BANGALORE
&
Srila Prabhupada's
ISKCON
BANGALORE
ರಾಮಾಯಣದ ಸಂದೇಶ

*Shri P.B.Mahishi presenting his paper during the conference.*

# ಕ್ಷೇಮೇಂದ್ರನ ರಾಮಾಯಣ ಮಂಜರಿ

ಡಾ. ಆರೆಯಾರ್ ಶ್ರೀರಾಮ ಶರ್ಮ

**ಮೂ**ಲ ವಾಲ್ಮೀಕಿ ರಾಮಾಯಣದಿಂದ ಕ್ಷೇಮೇಂದ್ರನು ಸರಿಯಾಗಿ ಇನ್ನೂರು ವಿಷಯಗಳನ್ನು ಸಾರವಾಗಿ ಆಯ್ಕೆ ಮಾಡಿ ಎತ್ತಿಕೊಂಡಿದ್ದಾನೆ. ಇವುಗಳಿಗೆ ತಕ್ಕ ನಿರ್ದಿಷ್ಟ ಹೆಸರುಗಳನ್ನು ಕೊಟ್ಟಿರುವುದು ಇವನ ವಿಶೇಷ.

ವಾಲ್ಮೀಕಿಯ ರಾಮಾಯಣದ 24000 (ಇಪ್ಪತ್ತನಾಲ್ಕು ಸಾವಿರ) ಶ್ಲೋಕ ಸಂಖ್ಯೆಯನ್ನು ಆರು ಸಾವಿರಕ್ಕಿಳಿಸಿದರೂ ಮಂಜರಿಯಲ್ಲಿ ರಾಮಾಯಣವು ಹಿಗ್ಗಿನಿಂದ ಹಿಗ್ಗಿರುವಂತಿದೆ. “ಪಾದಶೇಷ” ನಾಲ್ಕನೆಯ ಒಂದರಷ್ಟಕ್ಕೆ ಭಟ್ಟಿ ಇಳಿಸಿದ ರಸಪಾಕ ಶ್ರೀಕ್ಷೇಮೇಂದ್ರನ ಈ ಸಾಹಿತ್ಯ ಪರಮೌಷದ.

**ಕ್ಷೇಮೇಂದ್ರಾಯ ನಮಸ್ತ್ಯಸ್ಮೈ ವ್ಯಾಸದಾಸಾಭಿಘಾಜುಷೇ ।**
**ಇತಿಹಾಸ ಪುರಾಣಾನಾಂಪುಷ್ಟೇ ಕಾಶ್ಮೀರ ಚಕ್ಷುಷೇ ॥**

ಕ್ಷೇಮೇಂದ್ರ ಮಹಾಕವಿಯು ಕಾಶ್ಮೀರಕ ಪರಮ ವೈಷ್ಣವ. ಇವನ ತಂದೆ ಪ್ರಕಾಶೇಂದ್ರ ದಾನಧರ್ಮಗಳಿಂದ ಬಹುಜನರಿಗೆ ಬೇಕಾದವ. ಇವನ ಮನೆಯಲ್ಲಿ ವಿದ್ವಾಂಸರು ನಿರಂತರವಾಗಿ ಸೇರುತ್ತಿದ್ದರು. ಹೀಗೆ ತಂದೆ-ತಾಯಿಯರ ವಿದ್ವತ್ ಸೇವೆಗಳಿಂದ ಇವನ ಮನೆ ಯಾವಾಗಲೂ ಧರ್ಮ ಸ್ಥಾನವಾಗಿ ಬೆಳಗಿತ್ತು. ಬಾಲ್ಯದಿಂದಲೇ ವಿದ್ವಾಂಸರ ಅನುಗ್ರಹಕ್ಕೆ ಪಾತ್ರನಾದ ಕ್ಷೇಮೇಂದ್ರನು ತನ್ನನ್ನು "ವಿದುಷಾಂ ನಿತ್ಯ ಶಿಷ್ಯ" ವಿದ್ವಾಂಸರಿಗೆ ಎಂದೆಂದೂ ನಾನು ಶಿಷ್ಯನೇ ಅಹುದು ಎಂದು ವಿನಯದಿಂದಲೇ ಕರೆದುಕೊಳ್ಳುತ್ತಾನೆ. ಹೀಗೆ ಇವನ ವಿದ್ವತ್ತು ವ್ಯಾಸ ವಾಲ್ಮೀಕಿಗಳ ಪ್ರಭಾವದಿಂದ ಮೇಲೇರಿರುತ್ತದೆ. ಇವನಿಗೆ ಹೀಗಾಗಿ ವ್ಯಾಸದಾಸ ಎಂಬ ಉಪನಾಮವು ಪ್ರಸಿದ್ಧವಾಗುತ್ತದೆ.

ವ್ಯಾಸರಂತೆ ಕಥನಕಲೆ ಇವನಿಗೆ ಕರಗತವಾಗಿದೆ. ರಾಮಾಯಣ ಮಹಾಭಾರತ, ಬೃಹತ್ ಕಥೆ, ಬೌದ್ಧಜಾತಕ ಕಥೆಗಳು ಸಮಕಾಲದಲ್ಲಿ ಸಮಾಜದಲ್ಲಿ ನಡೆಯುತ್ತಿದ್ದ ಇತಿಹಾಸಗಳು ನೀತಿ ರೀತಿಗಳು ಯಾವುದೊಂದನ್ನೂ ಬಿಡದೆ ಕ್ಷೇಮೇಂದ್ರನು ತನ್ನ ಅಪಾರವಾದ ಸಾಹಿತ್ಯ ಕೃಷಿಯಲ್ಲಿ ಸಪುಲಗೊಳಿಸಿದಾನೆ.

ಸಂಸ್ಕೃತದ ಯಾವುದೇ ಪ್ರಕಾರದ ಶಾಸ್ತ್ರ ಕಾವ್ಯವಾಙ್ಮಯವಾಗಲಿ. ಇವನ ಸಾಹಿತ್ಯ ಮೂಷೆಯಲ್ಲಿ ಕರಗಿ ಅಪರಂಜಿ ಚಿನ್ನದಂತೆ ಹೊಚ್ಚ ಹೊಸದಾಗಿ ಬೆಳಗುತ್ತದೆ. ನೂರಾರು ಗ್ರಂಥಗಳನ್ನು ರಚಿಸಿರುವ ಈತನ ಐತಿಹಾಸಿಕ ಪ್ರಜ್ಞೆ ಪ್ರಬಲವಾದುದು. ತಾನು ಯಾರಿಗಾಗಿ ಏತಕ್ಕಾಗಿ ಯಾವಾಗ ಈ ಗ್ರಂಥ ಬರೆದೆ ಎನ್ನುವುದನ್ನೂ ತನ್ನ ಗ್ರಂಥಗಳಲ್ಲೇ ದಾಖಲಿಸುತ್ತಾನೆ. ಇವನ ಶಿಷ್ಯರೂ, ಮಿತ್ರರೂ, ರಾಜ-ರಾಣಿಯರು, ಮಂತ್ರಿಗಳು, ಸೇನಾಪತಿಗಳು, ವರ್ತಕರು, ಅಸಂಖ್ಯಾತರು. ಕಾಶ್ಮೀರದ ಮಹಾಮಹಿಮ ಪಂಡಿತ ಸಹೃದಯ ಶ್ರೀಮತ್ ಆನಂದವರ್ಧನಾಚಾರ್ಯ ಪರಮ ವಿಷ್ಣುಭಕ್ತ. ಅವನ ಧ್ವನಿ ಸಿದ್ಧಾಂತ ಇಂದಿಗೂ ಸಾಹಿತ್ಯದ ವಿಶ್ವಮೇರು. ಅವನ ಪರಂಪರೆಯಲ್ಲಿ ಶ್ರೀಮತ್ ಅಭಿನವಗುಪ್ತಪಾದಾಚಾರ್ಯ ಅದೇ ಪರಂಪರೆ ಮುಂದುವರೆದು ಧ್ವನಿ ಪ್ರಸ್ಥಾನ ಪರಮಾಚಾರ್ಯರ ಹೆಗ್ಗಳಿಕೆಗೆ ಪಾತ್ರನಾದವನು ಕ್ಷೇಮೇಂದ್ರ. ಇವನ "ಔಚಿತ್ಯಸಿದ್ಧಾಂತ" ಧ್ವನಿ ಸಿದ್ಧಾಂತದ ಮುಂದುವರಿಕೆ ಇದು ಇಂದಿಗೂ ಸರ್ವಮಾನ್ಯ.

ಕಾಶ್ಮೀರವನ್ನು ಸುತ್ತಮುತ್ತಲಿನ ಉತ್ತರ ರಾಜ್ಯಗಳೊಡನೆ ಏಕಾಧಿಪತ್ಯವಾಗಿ ಅರವತ್ತು ವರ್ಷಕಾಲ ಆಳಿದ ಅನಂತ ರಾಜನ ಆಸ್ಥಾನ ಕವಿ ಕ್ಷೇಮೇಂದ್ರ. ರಾಣಿ ಸೂರ್ಯಮತಿ ರಾಜನ ಪಟ್ಟಮಹಿಷಿ. ಸಾಹಿತ್ಯವಾಙ್ಮಯ ಸಂರಕ್ಷಣೆಯ ಅವಳ ಆಭಿರುಚಿ ಅಪಾರವಾದುದು. ರಾಮಾಯಣ ಭಾರತಗಳಿಗೆ ಸರಿ ಸಮಾನವಾದ ಬೃಹತ್ಕಥೆಯನ್ನೂ ಅವಳು ಕ್ಷೇಮೇಂದ್ರನ ಮೂಲಕ ಅಧ್ಯಯನ ಮಾಡಿ ಅವನಿಂದಲೇ ಅವುಗಳ ಸಂಗ್ರಹ ಬರೆಸಿದ್ದಾಳೆ. ಪಿಶಾಚ ಭಾಷೆ ಮಾತನಾಡುವ ಪಿಶಾಚ ದೇಶಗಳಲ್ಲಿ ಬಳಕೆಯಲ್ಲಿದ್ದ ಬೃಹತ್ ಕಥೆಯು ಕಾಶ್ಮೀರ ದೇಶದಲ್ಲಿ ಸಂಸ್ಕೃತಕ್ಕೆ ಮೊದಲು ಭಾಷಾಂತರವಾಗಿ ಬಂದುದು ಈ ಕ್ಷೇಮೇಂದ್ರನಿಂದ. ಅನಂತರ ಸೋಮದೇವನಿಂದ ಕಥಾಸರಿತ್ಸಾಗರವಾಯಿತು. ಇದುಕ್ಕೂ ಹಿಂದೆ ಏಳುನೂರು ವರ್ಷಗಳ ಹಿಂದೆ ಕನ್ನಡನಾಡಿನ ಗಂಗ ರಾಜ್ಯದ ಮಂತ್ರಿ ಬುಧಸ್ವಾಮಿ ಇದನ್ನು ಸಂಸ್ಕೃತಕ್ಕೆ ತಂದಿರುವುದು ಬೃಹತ್ಕಥಾ ಶ್ಲೋಕ ಸಂಗ್ರಹಿಸಿದೆ. ತಮಿಳಿಗೆ ಇದು 'ಪೆರುಂಗತ್ಯೆ' ಆಗಿದೆ. ಸಂಸ್ಕೃತದವರಿಗೆ ರಾಮಾಯಣ ಭಾರತಗಳು ದೀರ್ಘವಾದರೂ ಓದಲು ಮೂಲರೂಪದಲ್ಲೇ ಸಿಗುತ್ತಿದ್ದವು. ಈಗ ಅವುಗಳನ್ನೂ ಮೂಲಕ್ಕೆ ಚ್ಯುತಿ ಬಾರದಂತೆ ಸಂಗ್ರಹಿಸಿರುವ ಪ್ರಯತ್ನ ಕೇಳುಗರ ಸೌಲಭ್ಯಕ್ಕಾಗಿ ಕ್ಷೇಮೇಂದ್ರನಿಂದಲೇ ಮೊದಲಾಗಿರುವುದು ವಿಶೇಷ. ಈ ಹಿಂದೆ ಕಾಳಿದಾಸಾದಿಗಗಳು ಅಂಶತಃ ರಾಮಾಯಣ ಭಾರತ ಬೃಹತ್ಕಥೆಗಳಿಂದ ಆಧರಿಸಿದ ಕಾವ್ಯ ನಾಟಕಗಳನ್ನು ಬರೆದಿದ್ದರೂ ಸಂಪೂರ್ಣ ರಾಮಾಯಣ ಕಥಾ ನಿರೂಪಣೆ ಅವುಗಳಲ್ಲಿಲ್ಲ. ಹೀಗಾಗಿ ವಿಶ್ವ ಸಾಹಿತ್ಯ ವಾಙ್ಮಯ ಕ್ಷೇತ್ರದಲ್ಲಿ ಕ್ಷೇಮೇಂದ್ರನ ರಾಮಾಯಣ ಮಂಜರಿಗೆ ಪ್ರಥಮ ಸ್ಥಾನವಿದೆ.

ಹೀಗೆ ಕ್ಷೇಮೇಂದ್ರನು ಸಕಲ ಭಾರತೀಯ ವಿಶ್ವ ಸಾಹಿತ್ಯವಾಙ್ಮಯಗಳಿಗೆ ಮೂಲಾಧಾರವಾದ ರಾಮಾಯಣ ಭಾರತ ಬೃಹತ್ಕಥೆಗಳನ್ನೂ ತನ್ನದೇ ಮಧುರವಾಣಿಯಲ್ಲಿ ಸಂಸ್ಕೃತದಲ್ಲಿ ಬರೆದುಕೊಟ್ಟು ಮಹೋಪಕಾರ ಮಾಡಿರುವನು.

ತುರ್ಕಿ (ಟರ್ಕಿ) ಸ್ಥಾನದಿಂದ ಕಾಶ್ಮೀರಕ್ಕೆ ಲಗ್ಗೆ ಹಾಕಿ ರಾಜರ ಆಸ್ಥಾನಗಳಿಗೆ ಒಳಹೊಕ್ಕು ಕಾಶ್ಮೀರವನ್ನು ತುರುಷ್ಕಮಯವಾಗಿ ಮಾಡಲು ಆರಂಭಿಸಿದ ಸಮಯದಲ್ಲಿ, ಕ್ಷೇಮೇಂದ್ರನಂತಹ ಸಾವಿರಾರು ವಿದ್ವಾಂಸರೂ, ರಾಜ-ರಾಣಿಯರೂ, ಭೃಗುಪತನ ಎಂಬ ಕ್ರಮದಿಂದ ಬೆಟ್ಟದ ಶಿಖರದಿಂದ ಪ್ರಪಾತಕ್ಕೆ ಜಿಗಿದು ಪ್ರಾಣಬಿಟ್ಟು ಸದ್ಗತಿ ಹೊಂದಿದರು ಎಂಬ ನಿಜವಾದ ಇತಿಹಾಸವು ಕಲ್ಹಣನ ಕಾಶ್ಮೀರ ರಾಜ ತರಂಗಿಣಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದೆ. ಇಂತಹ ದುರಾಡಳಿತಕ್ಕೆ ಬೇಸರಿಸಿ ಬಿಲ್ಹಣ ಮಹಾಕವಿ ಕನ್ನಡ ನಾಡಿಗೆ ಬಂದು ಚಾಲುಕ್ಯ ಆಹವಮಲ್ಲನ ಆಸ್ಥಾನ ಕವಿಯಾಗಿ ಕನ್ನಡ ನಾಡಿನ ಸದಾಚಾರವನ್ನು ಮೆಚ್ಚಿ ಇಲ್ಲೇ ನೆಲೆಸಿದ ಇತಿಹಾಸ ಆತನದೇ ವಿಕ್ರಮಾಂಕದೇವ ಚರಿತೆಯಲ್ಲಿದೆ. ಇದು ಆಗಿ ಹೋದುದು ಆದರೆ ಯಶಸ್ಸಿನಿಂದ ಗ್ರಂಥಗಳಿಂದ ಸಂಸ್ಕೃತ ಸಾಹಿತ್ಯ ಪರಂಪರೆಯಲ್ಲಿ ಉಳಿದುಕೊಂಡಿರುವ ಕ್ಷೇಮೇಂದ್ರನ ಸಾರಸ್ವತ ದಿವ್ಯಶಕ್ತಿಗೆ ಒಂದು ಉದಾಹರಣೆ ಈ ರಾಮಾಯಣಮಂಜರಿ.

ವಿಶ್ವದಲ್ಲಿ ಸಿದ್ಧಚಾರಣರಿಂದ ಇಂದಿನ ವೃತ್ತ ಪತ್ರಿಕೆಗಳಂತೆ ಪ್ರಚಾರ ಸಾಧನಗಳಾಗಿದ್ದ ಹಾಡುಗಬ್ಬಗಳು, ಕಿರು ನಾಟಕ ದೃಶ್ಯಗಳು ರಾಮಾಯಣವನ್ನು ವಿಶ್ವ ವ್ಯಾಪ್ತಿಯಾಗಿಸಿದ್ದವು. ಈ ತುಣುಕುಗಳೆಲ್ಲವೂ ವಿಶ್ವಸಂಚಾರಿ ನಾರದ ಮಹರ್ಷಿಯಿಂದ ವಾಲ್ಮೀಕಿಗೆ ಉಪದೇಶವಾಗಿ ಬಂದಿದ್ದವೆಂಬ ವಿಷಯ ವಾಲ್ಮೀಕಿ ರಾಮಾಯಣದಲ್ಲೇ ಇದೆ. ಬ್ರಹ್ಮದೇವನ ವರದ ಬಲ ಋತಂಭರಾ ಯೋಗಶಕ್ತಿ ಮತ್ತು ಸಾರಸ್ವತ ಅನುಗ್ರಹ ರಾಮಾಯಣ ಮಹಾಕಾವ್ಯ ರಚನೆಗೆ ಮೂಲ. ರಾಮನಿಂದ ಪರಿತ್ಯಕ್ತಳಾದ ಮಹಾಮಾತೆ ಸೀತೆಯ ನೋವು ತನ್ನ ಆಶ್ರಮದಲ್ಲಿ ಅವಳನ್ನು ವೃದ್ದೆಯರಿಂದ ಕಾಪಾಡಿದ ವಾಲ್ಮೀಕಿಗೆ ಹೃದಯ ವಿದ್ರಾವಕವಾಗಿ ಕಂಡಿದ್ದು ಒಂದು ನಿಮಿತ್ತ. ಅನಂತರ ಅದೇ ಒಳಗುದಿಯಲ್ಲಿ ವಾಲ್ಮೀಕಿಗೆ ಕ್ರೌಂಚಮಿಥುನದ  ಅವಗಡ ಒಂದು ಬಾಹ್ಯ ನಿಮಿತ್ತ. ಅನಂತರ ದಿವ್ಯ ನಿಮಿತ್ತ ಸಹಕಾರಗಳು ದೊರೆತು ರಾಮಾಯಣ ಐದು ಕಾಂಡಗಳನ್ನು ರಚಿಸಿ ಪೂರ್ವೋತ್ತಮರಾಮ ಬಂಧಗಳಾಗಿ ಬಾಲ ಉತ್ತರಕಾಂಡ ರಚಿಸಿದುದು ವಾಲ್ಮೀಕಿಯ ಹಿರಿಮೆ. ಎಲ್ಲರೂ ಆದರದಿಂದ ಸ್ವೀಕರಿಸಿದ ರಾಮಾಯಣ ಆದಿ ಕಾವ್ಯವೆನಿಸಿತು. ಗದ್ಯದ ಸರಳ ವಾಕ್ಯದ ಕವಿತೆಗಳು ಮೊದಮೊದಲು ಇದ್ದವು. ಅನಂತರ ದಿವ್ಯ ಮತ್ತು ಮರ್ತ್ಯ ಪಾತಾಳಗಳಲ್ಲಿ ಮುಕ್ತಕ ಬಿಡಿ ಬಿಡಿ ಪದ್ಯಗಳು ವೇದಗಳಂತೆ ಎಲ್ಲರ ಬಾಯಲ್ಲೂ ಪ್ರಮಾಣಗಳಾಗಿ ಹೊರ ಬೀಳುತ್ತಿದ್ದವಷ್ಟೆ. ಸರ್ಗ ಕಾಂಡಗಳೆಂಬ ಮಹಾವಿಭಾಗದಿಂದ ಏಕನಾಯಕ ಕಾವ್ಯ ಲೋಕದಲ್ಲಿ ಬಂದುದು ಇದೇ ಮೊದಲು. ಇದೇ ರಾಮಾಯಣ ವರ್ಣನೆಗಳಿಂದ ಕಾವ್ಯವೆನಿಸಿದ ಇತಿಹಾಸ ಇದು ಶಾಸ್ತ್ರದಲ್ಲಿ ಇದಕ್ಕೆ "ಪರಿಪ್ರಿಯಾ" ಎಂದು ಹೆಸರು. ಮಹಾಭಾರತವು "ಪುರಾಕಲ್ಪ" ಇದು ಬಹುನಾಯಕ ಸಮಾಜೇತಿಹಾಸ.

**ಪರಿಕ್ರಿಯಾ ಪುರಾಕಲ್ಪಂ ಇತಿಹಾಸಗತಿರ್ದ್ವಿಧಾ ।**
**ಸ್ಯಾದೇಕನಾಯಕಾ ಪೂರ್ವಾ ದ್ವಿತೀಯಾ ಬಹುನಾಯಕಾ ॥**

"ಸರ್ಗಬಂಧೋ ಮಹಾಕಾವ್ಯಂ" ಎಂಬ ಲಕ್ಷಣದಂತೆ ರಾಮಾಯಣವು ಮಹಾಕಾವ್ಯ. ಮಹಾಕಾವ್ಯದ ಸಕಲಾಂಶಗಳೂ ಕ್ಷೇಮೇಂದ್ರನ ರಾಮಾಯಣ ಮಂಜರಿಯಲ್ಲಿ ಕರಗಿ ಎರಕವಾಗಿ ಹೊಸರೂಪ ಪಡೆದಿವೆ. ವಸ್ತು ಹಳೆಯದು ಪ್ರಾಯಶಃ ಬದಲಾಗಿಲ್ಲ. ರಾಮಾಯಣದ ಇಪ್ಪತ್ತನಾಲ್ಕು ಸಾವಿರ ಪದ್ಯಗಳನ್ನು ವರ್ಣನೆಗಳನ್ನು ಐತಿಹಾಸಿಕ ಅಂಶಗಳನ್ನು ಸಾಮಾಜಿಕ ಅರ್ಥಶಾಸ್ತ್ರಗಳ ಸಾರಗಳನ್ನು ನಯ-ನೀತಿಗಳನ್ನೂ ದಾರ್ಶನಿಕ ಅರ್ಥಗಳನ್ನೂ ಬಿಡದೆ ಬರಿಯ ಆರು ಸಾವಿರ ಶ್ಲೋಕಗಳಲ್ಲಿ ರಮಣೀಯವಾಗಿ ಸಂಗ್ರಹಿಸಿರುವುದು ವ್ಯಾಸದಾಸನೆನಿಸಿದ ಕ್ಷೇಮೇಂದ್ರನ ಪಾಂಡಿತ್ಯ ಸಹೃದಯತೆಗಳ ಒಕ್ಕೂಟದ ಹಿರಿಮೆ. ಭಟ್ಟಿ ಇಳಿಸಿದ ರಾಮಾಯಣದ ಮಧರ ಕಷಾಯೌಷದ ಈ ರಾಮಾಯಣ ಮಂಜರಿ.

ಈಗ ಉಪಲಬ್ಧವಿರುವ ರಾಮಾಯಣದ ಪಾಠಗಳಲ್ಲಿ ದಾಕ್ಷಿಣಾತ್ಯ ಪಾಠ, ಪ್ರಾಚ್ಯಗೌಡಪಾಠ, ಪಶ್ಚಿಮೋತ್ತರದ ಪಾಠ, ಈಗಿನ ಆಫ್ಘಾನಿಸ್ತಾನದ ಪಾಠ ಇಂಡೊನೇಷಿಯಾ, ಮಲೇಷಿಯಾ ಪಾಠಗಳು, ಉತ್ತರ ದೇಶದ ಪಾಠ, ವಿಶ್ವದ ನಾನಾ ದ್ವೀಪಗಳಲ್ಲಿ ರಾಮಕಥೆಯ ಅನೇಕ ಚಾರಣ ಸಿದ್ಧ ಗಂಧರ್ವ ಜಾನಪದ ಪಾಠ ವಿಶೇಷಗಳು ಉಳಿದಿವೆ. ಹೀಗೆ ವಾಲ್ಮೀಕಿ ರಾಮಾಯಣದ ಕಾಶ್ಮೀರ ಪಾಠವೊಂದರ ಸುಳಿವು ಸಾಕಷ್ಟು ರಾಮಾಯಣ ಮಂಜರಿಯಲ್ಲಿದೆ.

ಕಾಶ್ಮೀರ ಪಂಡಿತರು ಕರ್ನಾಟಕದಿಂದ ಶ್ರೀ ಜಯಾದಿತ್ಯರಾಜನ ಕಾಲದಲ್ಲಿ ಕಾಶ್ಮೀರಕ್ಕೆ ಬಂದು ನೆಲೆಸಿ ಸರ್ವವಿದ್ಯಾ ಪ್ರವರ್ತನೆ ಮಾಡಿದ ಇತಿಹಾಸ

ಕಲ್ಹಣನ ಕಾಶ್ಮೀರ ರಾಜ ತರಂಗಿಣಿಯಲ್ಲಿದೆ. ವಿದ್ವಾಂಸರು ಸ್ಥಳೀಯ ಅಂಶಗಳನ್ನು ಕಡೆಗಣಿಸದೆ ಮುಖ್ಯವಾಗಿ ಗಮನಿಸಿ ರಮಣೀಯ ಅಂಶಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವುದು ರಾಮಾಯಣದ ವ್ಯಾಪಕತೆಯ ಐತಿಹಾಸಿಕ ಸತ್ಯ. ಈ ಸತ್ಯ ವಿಚಾರಗಳು ಈಗಿರುವ ಮೂಲ ರಾಮಾಯಣದಲ್ಲಿ ಸೂಕ್ಷ್ಮವಾಗಿದ್ದು, ಸ್ಪಷ್ಟವಾಗಿಲ್ಲದಿರಬಹುದು. ಆದರೆ ರಾಮಾಯಣ ಮಂಜರಿಯಂತಹ ಗ್ರಂಥಗಳಲ್ಲಿ ಅವುಗಳ ಎಳೆಗಳು ಸಿಗುತ್ತವೆ. ಹೀಗೆ ವಾಲ್ಮೀಕಿಯ ಇಂದು ಉಪಲಬ್ಧವಿರುವ ರಾಮಾಯಣದಲ್ಲಿ ನೇರವಾಗಿ ಸಿಗದಂತಹ ಕೆಲವು ಮರ್ಮಗಳು ಕಾಶ್ಮೀರ ಪಾತ್ರದಲ್ಲಿ ಕ್ಷೇಮೇಂದ್ರನಿಗೆ ಸಹಜವಾಗಿ ಸಿಕ್ಕಿರಬಹುದು.

(ಮರ ಗಿಡಗಳಲ್ಲಿ ಹೂ–ಹಣ್ಣು ಚಿಗುರುಗಳಲ್ಲಿ ಕಾಣುವ ವಾಸನೆ, ರುಚಿ, ಬಣ್ಣ, ಅಂಟುಗಳು, ಬೇರು, ಕಾಂಡ, ಕೊಂಬೆಗಳಲ್ಲಿ ಸ್ಪಷ್ಟವಾಗಿರುವುದಿಲ್ಲ. ಹೂಗೊಂಚಲುಗಳಿಗೆ ಮಂಜರಿ ವಲ್ಲರಿ ಎಂಬ ಹೆಸರಿದೆ. ಬಳ್ಳಿಗಳ ಹೊಸ ಕಳೆಗಳಿಗೂ ಈ ಹೆಸರಿದೆ. ಹೀಗೆ ರಾಮಾಯಣದ ರಸರಮಣೀಯ ಕಥಾಸಾರ ಕ್ಷೇಮೇಂದ್ರನ ರಾಮಾಯಣ ಮಂಜರಿಯಲ್ಲಿ ಸ್ಪಷ್ಟವಾಗಿ ಸುಂದರವಾಗಿ ಕಾಣಿಸುತ್ತದೆ)

ವ್ಯಾಸರು ರಾಮಾಯಣದ ಪ್ರಥಮ ಬೀಜ ಶ್ಲೋಕವನ್ನು ತಮ್ಮ ತಂದೆ ಪರಾಶರರಿಂದ ಮೊಟ್ಟಮೊದಲು ಉಪದೇಶವಾಗಿ ಅಕ್ಷರಾಭ್ಯಾಸದಲ್ಲೇ ಕಲಿತಿದ್ದರಿಂದ ಒಂದು ಲಕ್ಷ ಅಥವಾ ಒಂದೂ ಕಾಲು ಲಕ್ಷ ಶ್ಲೋಕಗಳ ಮಹಾಭಾರತ ರಚನೆ ಮಾಡಲು ಶಕ್ತರಾದರೆಂಬ ವಿಷಯ ಕಾವ್ಯ ಶಾಸ್ತ್ರದಲ್ಲಿದೆ. ಹೀಗೆ ವ್ಯಾಸದಾಸನೆನಿಸಿದ ಕ್ಷೇಮೇಂದ್ರನಿಗೆ ರಾಮಾಯಣದ ಪಾಠ ಪಾರಾಯಣಗಳಿಂದ ಸಿದ್ಧಿಯಾಗಿರಬೇಕು. ವಾಲ್ಮೀಕಿಯಿಂದ ವ್ಯಾಸರು ಬೆಳೆದಂತೆ ವಾಲ್ಮೀಕಿ ವ್ಯಾಸರಿಬ್ಬರಿಂದಲೂ ಕ್ಷೇಮೇಂದ್ರ ಬೆಳೆದಿದ್ದಾನೆ ಮತ್ತು ಅವರನ್ನು ಬೆಳೆಸಿದ್ದಾನೆ.

ವಾಲ್ಮೀಕಿ ಪ್ರಚೇತಸ್ ಎಂಬ ಬ್ರಹ್ಮಪುತ್ರ ಪ್ರಜಾಪತಿಯ ವಂಶದಲ್ಲಿ ಹುಟ್ಟಿದವನು. ಸಹವಾಸ ದೋಷದಿಂದ ಬೇಡರ ವೃತ್ತಿ ಹಿಡಿಯಬೇಕಾಗಿ ಬಂದುದೂ ಕ್ಷಾಮ ಡಾಮರಗಳ ಆಪತ್ಕಾಲದಲ್ಲಿ ಋಷಿ ವಾಕ್ಯದಿಂದ ತನ್ನ ಪೂರ್ವಸ್ಥಿತಿ ಅರಿವಾಗಿ ತಪಸ್ಸಿಗೆ ತೊಡಗಿದನು. ಅಚಲ ತಪಸ್ಸಿನಲ್ಲಿ ಇವನ ಸುತ್ತ ಗಿಡ ಗಂಟಿಗಳು, ಗೆದ್ದಲು ಹತ್ತಿ ಹುತ್ತ ಬೆಳೆದು, ಋಷಿಗಳ ಸಹಾಯದಿಂದ ಹುತ್ತದಿಂದ ಮೇಲೆದ್ದು ಬಂದು ವಾಲ್ಮೀಕಿಯಾದ. ಪತಂಜಲಿ ಮಹರ್ಷಿ ಹೀಗೆಯೇ ನೆಲದೊಳಗೆ ಸೇರಿದ್ದು ಯಜ್ಞಕ್ಕಾಗಿ ಪುಷ್ಯಮಿತ್ರರಾಜ ನೆಲ ಅಗೆದಾಗ ಮೇಲೆದ್ದು ಬಂದು ವ್ಯಾಕರಣ ಯೋಗ ಆಯುರ್ವೇದಗಳನ್ನು ಉದ್ಧರಿಸಿದ. ಸೀತೆಯೂ ಹೀಗೆ ಸಮುದ್ರದಲ್ಲಿ ಕೊಚ್ಚಿ ಹೋದ ದೇಹದಿಂದ ನೆಲದೊಳಗೆ ಸೇರಿ ಎದ್ದು ಬಂದವಳು. ರಾವಣ ಕೈಮುಟ್ಟಿದ ಎಂಬ ಕಾರಣದಿಂದ ಲಕ್ಷ್ಮೀಯ ಅಂಶವಾಗಿ ಹುಟ್ಟಿದ್ದ ವೇದವತಿಯೇ ತನ್ನ ಹೋಮಾಗ್ನಿಯಲ್ಲಿ ಬಿದ್ದು ಪ್ರಾಣ ಬಿಟ್ಟು ವಿಷ್ಣುವನ್ನೇ ಮದುವೆಯಾಗಲು ಪಣತೊಟ್ಟಿದ್ದ ವಿಷಯವು ರಾಮಾಯಣದ ಉತ್ತರಕಾಂಡದಲ್ಲಿದೆ. ಹೀಗೆ ಸೀತೆಗೂ ವಾಲ್ಮೀಕಿಗೂ ಅಚಿಂತಿತವಾದ ಒಂದು ಹೋಲಿಕೆ ಇದೆ. ವಾಲ್ಮೀಕಿಯ ಆಶ್ರಮಗಳು ಭಾರತದಲ್ಲಿ ಅನೇಕ ಕಡೆ ಸ್ಥಾಪಿತವಾಗಿದ್ದರೂ ಅಯೋಧ್ಯೆಯ ಸಮೀಪದ ತಮಸಾ ನದಿಯ ತಟದಲ್ಲಿ ಆತನ ಮುಖ್ಯವಾದ ಆಶ್ರಮ. ಭರದ್ವಾಜಾದಿಗಳು ಆತನ ಶಿಷ್ಯರು ಅವನು ಹಿರಿಯ ಗುರುಕುಲದ ಕುಲಪತಿ ಯಜ್ಞ, ಯಾಗ, ತಪಸ್ಸು, ಅಧ್ಯಯನ ಅಧ್ಯಾಪನಗಳಲ್ಲಿ ನಿರತ. ಈ ಪ್ರಾಚೇತಸ ವಾಲ್ಮೀಕಿ ಅಕಲ್ಮಷ, ಸಹೃದಯ, ಕರುಣಾಳು.

ವಾಲ್ಮೀಕಿಯ ಆಶ್ರಮ ತಮಸಾ ನದಿ ತೀರ ಭಾರತದ ಪೂರ್ವ ಭಾಗದ ಪ್ರಾಚ್ಯದೇಶ. ವ್ಯಾಸರು ವಿಷ್ಣುವಿನ ಅವತಾರವೆನಿಸಿ ಪರಾಶರ ಮಹರ್ಷಿಯ ಜಾರ ಸಪುತ್ರರು. ಅಯೋನಿಜೆಯಾದ ಸತ್ಯವತಿಯ ಹೊಟ್ಟೆಯಲ್ಲಿ ಹುಟ್ಟಿದವರು ಇವಳ ಸಾಕು ತಂದೆ ದಾಶರಾಜ. ಇವರು ಹುಟ್ಟಿದುದು ಗಂಗಾನದಿಯ ಒಂದು ನಡುಗಡ್ಡೆ. ಎಲಚಿ ಮುಳ್ಳು ಮರಗಳ ಪೊದೆಗಳ ದ್ವೀಪ ಅದು. ಇದು ನಮ್ಮ ಭಾರತ ದೇಶದ ನಡುರೇಖೆಯಂತಿರುವ ಸಬರ್‌ಮತಿ ಅಥವಾ ಶರಾವತಿ ನದಿಯ ಪಶ್ಚಿಮಕ್ಕೆ ಇದೆ. ಭಾರತದ ದಕ್ಷಿಣ ಪೂರ್ವಭಾಗದ ಮೂಲ ಸಾಹಿತ್ಯ ಶೈಲಿ ವೈದರ್ಭಿ ಇದು ಮಾದುಮಧುರ. ಬಂಗಾಳದ ಕಡೆಗೆ ಸಾಗಿದರೆ ಈ ಶೈಲಿ ಶಬ್ದಾಡಂಬರದ್ದು. ಪಶ್ಚಿಮದ ವ್ಯಾಸರ ಶೈಲಿ, ಪಾಂಚಾಲೀ ಶೈಲಿ ಇದು ಮಿಶ್ರ ಶೈಲಿ, ಕ್ಷೇಮೇಂದ್ರನದು ಉತ್ತರದ ಕಾಶ್ಮೀರದ ಶೈಲಿಯಾದರೂ ದಕ್ಷಿಣದ ವೈದರ್ಭ ಕಾಳಿದಾಸನ ಉಪಮಾಲಂಕಾರ ವಿಶಿಷ್ಟವಾದ ಮೃದು ಮಧುರ ಶೈಲಿ ಇದು ಇವನಿಗೆ ಒಲಿದಿದೆ. ಕರ್ನಾಟಕದಿಂದ ಕಾಶ್ಮೀರಕ್ಕೆ ವಿದ್ವಾಂಸರು ಹೋಗಿ ನೆಲೆಸಿದ ಪ್ರಭಾವ ಇದಿರಬೇಕು.

[ಇತಿಹಾಸ ಪುರಾಣ ಕಥೆಗಳನ್ನು ಜನರಿಗೆ ಮನ ಮುಟ್ಟುವಂತೆ ಹೇಳುವ ಆಲಂಕಾರಿಕ ಕಥನಕಲೆ ವ್ಯಾಸರಿಂದ ಕ್ಷೇಮೇಂದ್ರನಿಗೆ ಸಿದ್ಧಿಸಿದೆ. ಚಿಕ್ಕ ಚೊಕ್ಕ ಮಾತುಗಳು ನೀತಿಗಳು ಕಥೆಯ ಬೆಲೆಯನ್ನು ಹೆಚ್ಚಿಸಿವೆ. ವಾಲ್ಮೀಕಿ ರಾಮಾಯಣದ ಈಗಿನ ಪ್ರತಿಗಳಲ್ಲಿ ಸಿಗದಂತಹ ಹಲವಾರು ವಿಷಯಗಳು ರಾಮಾಯಣ ಮಂಜರಿಯಲ್ಲಿವೆ. ಮೂಲ ರಾಮಾಯಣದ ಕಥಾ ಶಬ್ಧ ವಿಸ್ತಾರ ಬಿಟ್ಟು ರಸವಿಸ್ತಾರ ಮಾಡಿರುವ ಚಮತ್ಕಾರ ಕ್ಷೇಮೇಂದ್ರನದು. ಇದಕ್ಕಾಗಿ ರಾಮಾಯಣಕ್ಕಿಂತ ರಾಮಾಯಣಮಂಜರಿ ಓದುವುದು ಲೇಸು.

ಈಗ ಈ ವಿಶೇಷಗಳನ್ನು ಪಟ್ಟಿಮಾಡಿ ಕೆಲವು ಸ್ವಾರಸ್ಯಕರ ಮತ್ತು ವಿಶೇಷಗಳನ್ನು ಈ ಪ್ರಬಂಧದಲ್ಲಿ ಉಲ್ಲೇಖಿಸಲಾಗುವುದು.]

ಮೂಲ ವಾಲ್ಮೀಕಿ ರಾಮಾಯಣದಿಂದ ಕ್ಷೇಮೇಂದ್ರನು ಸರಿಯಾಗಿ ಇನ್ನೂರು ವಿಷಯಗಳನ್ನು ಸಾರವಾಗಿ ಆಯ್ಕೆ ಮಾಡಿ ಎತ್ತಿಕೊಂಡಿದ್ದಾನೆ. ಇವುಗಳಿಗೆ ತಕ್ಕ ನಿರ್ದಿಷ್ಟ ಹೆಸರುಗಳನ್ನು ಕೊಟ್ಟಿರುವುದು ಇವನ ವಿಶೇಷ.

ಇದರಲ್ಲಿ ಋಷ್ಯಶೃಂಗೋಪಾಖ್ಯಾನ ಮೊದಲನೆಯದು. ಮೂಲ ರಾಮಾಯಣದಲ್ಲಿ 'ಋಶ್ಯ' ಎಂದಿರುವುದು ಇಲ್ಲಿ ಲಿಪಿಯಲ್ಲಿ ಋಶ್ಯ ಆಗಿದೆ. ಈ ಋಶ್ಯ ಎಂಬುದು ಒಂದು ಸುಂದರ ಜಾತಿಯ ಜಿಂಕೆ. ಕಿಷ್ಕಿಂಧಾಕಾಂಡದಲ್ಲೂ ಋಷ್ಯ ಮೂಕ ಎಂದೇ ಹಂಪೆಯನಾಡಿನ ಬೆಟ್ಟದ ಹೆಸರು ಸ್ಪಷ್ಟವಾಗಿದೆ. ಅಮರ ಕೋಶದ ಕ್ಷೀರಸ್ವಾಮಿ ಟೀಕೆಯೂ ಇದನ್ನೇ ದೃಢಪಡಿಸಿದೆ. ಆಖ್ಯಾನ ಆಖ್ಯಾಯಿಕೆಗಳು ಇತಿಹಾಸವಾಗಿ ಉಪಲಬ್ಧವಾದ ನೇರವಾದ ವಿಷಯಗಳ ನಿರೂಪಣೆ, ಇವುಗಳಲ್ಲಿ ಪ್ರಸಂಗಕ್ಕೆ ಆವಶ್ಯಕವಾದ ಇತಿಹಾಸಗಳು ಇಲ್ಲಿ ಉಪಾಖ್ಯಾನವೆನಿಸುತ್ತದೆ. ರಾಮಾವತಾರಕ್ಕೆ ಋಶ್ಯ ಶೃಂಗ ಮಾಡಿಸುವ ದಶರಥನ ಪುತ್ರಕಾಮೇಷ್ಟಿ ಉಪವಿಷಯವಾಗಿದೆ. ಈಚಿನ ವಿದ್ವಾಂಸರಲ್ಲಿ ಕೆಲವರು ಇಂತಹವುಗಳನ್ನು ತಮಗೆ ಬೇಡವೆನಿಸಿದ್ದರಿಂದ ಪ್ರಕ್ಷಿಪ್ತವೆಂದು ಕರೆಯುತ್ತಾರೆ. ನಿಕ್ಷಿಪ್ತ ಎಂದರೆ ಒಳಗೆ ಸೇರಿಸಿದುದು ಪ್ರಕ್ಷಿಪ್ತ ಎಂದರೆ ಹೊರಗೆಸೆದುದು ಎಂಬ ಶಬ್ದಾರ್ಥ ರಹಸ್ಯ ಇಂದಿನವರಿಗೆ ತಿಳಿದಿರತಕ್ಕದ್ದು. ಕ್ಷೇಮೇಂದ್ರನ ಮಂಜರಿಯಲ್ಲಿ ಇದು ಪ್ರಕ್ಷಿಪ್ತವೂ ಅಲ್ಲ ನಿಕ್ಷಿಪ್ತವೂ ಅಲ್ಲ, ಮೂಲ ರಾಮಾಯಣದಲ್ಲೇ ಇರುವಂತಹುದು. ಆಖ್ಯಾನಕ್ಕೆ ಪೂರಕವಾದುದು ಉಪಖ್ಯಾನ.

ರಾಮಾಯಣದಲ್ಲಿ ರಾವಣವಧಕ್ಕಾಗಿ ರಾಮಚರಿತೆ. ನಿಜವಾಗಿ ತಿಳಿಯಬೇಕಾದುದು ಸೀತೆಯ ಚರಿತೆ ಎನ್ನುತ್ತಾರೆ ವಾಲ್ಮೀಕಿ.

**"ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್"**
(ರಾಮಾ–ಬಾಲ–4–7)

ಕರುಣಾಮೂರ್ತಿ ಸೀತೆಗೆ ಆಶ್ರಯ ಕೊಟ್ಟು ಕಾಪಾಡಿದ ಕರುಣಾಳು ವಾಲ್ಮೀಕಿಗೆ ಸೀತೆಯ ಆದರ್ಶ ಮುಖ್ಯವಲ್ಲವೆ. ಹೆಸರಿಗೆ ರಾಮಾಯಣ. ಇದಕ್ಕೂ ಮೊದಲು ಕೊಟ್ಟ ಹೆಸರು ಲೋಕದೃಷ್ಟಿಯಿಂದ ರಾವಣವಧ ಕಾವ್ಯ ಆಸುರೀ ಸಂಪತ್ತಿನ ಮೇಲೆ ದೈವೀ ಸಂಪತ್ತಿನ ವಿಜಯ ಇಲ್ಲಿದೆ. ಸೀತಾದೇವಿಯ ನಿಶ್ಚಲ ಮನೋವೃತ್ತಿಯೇ ಸೀತಾ ಚರಿತೆಯ ಸಾರ. ಸೀತೆಗಾಗಿ ರಾಮ, ರಾಮನಿಗಾಗಿ ಸೀತೆಯಲ್ಲ ಎಂಬುದು ಕವಿಯ ಭಾವ. ರಾವಣ ಸೀತೆಯನ್ನು ಅಪಹರಿಸದಿದ್ದರೆ, ರಾವಣವಧಕ್ಕೆ ಒಂದು ನೆಪ ಸಿಗುತ್ತಿರಲಿಲ್ಲ. ರಾಮನು ಮಾಯಾಮಾರೀಚೆ ಮೃಗವನ್ನು ಹೊಡೆದುದೂ ಸೀತೆಗಾಗಿ, ಸೇತು ಕಟ್ಟಿಸಿದುದೂ ಸೀತೆಗಾಗಿ ಕಾಡಿಗೆ ಅವಳನ್ನು ಕಳುಹಿಸಿದೂ ಅವಳ ಬಸುರಿನ ಬಯಕೆಗಾಗಿ. ಪ್ರಜಾವತ್ಸಲ ರಾಮನು ಸೀತಾವತ್ಸಲನೂ ಅಹುದು. ಈ ಮಾತು ಸ್ಪಷ್ಟವಾಗಿ ಇಂಡೋನೇಶಿಯಾದ ಬಾಲಿದ್ವೀಪ ರಾಮಾಯಣದಲ್ಲಿದೆ "ಸೀತಾವತ್ಸಲ ರಾಘವಃ" ಈ ವಿಷಯ ರಾಮಾಯಣಕ್ಕಿಂತ ಮಂಜರಿಯಲ್ಲಿ ಸ್ಪಷ್ಟವಾಗಿದೆ. ತನಗಿಂತ ಸೀತೆಯೇ ತನ್ನ ಸ್ಥಿರಗುಣಗಳಿಂದಾಗಿ ಮೇಲು ಎಂಬುದನ್ನು ತೋರಿಸಿಕೊಡುವುದೇ ರಾಮನ ಮುಖ್ಯೋದ್ದೇಶ್ಯ ಎನ್ನುವುದೇ ರಾಮಾಯಣವು ಸೀತಾಚರಿತೆ ಎನ್ನಲು ಮುಖ್ಯ ಕಾರಣ. ರಾಮ ತನ್ನ ಅಂತರಂಗ ಅಭಿಪ್ರಾಯಗಳನ್ನು ತಾನಾಗಿ ಹೊರಗಡೆ ತೋರಿಸಿಕೊಳ್ಳುತ್ತಿರಲಿಲ್ಲ, ಇತರರಿಂದ ಅದೇ ಅಭಿಪ್ರಾಯಬಂದಾಗ ಅದರಂತೆ ನಡೆಯುವುದು ಅವನ ಗುಣ. ಮನುಷ್ಯರಾಗಿ ಹುಟ್ಟಿ ಬಂದುದು ದೇವತೆಗಳ ಪ್ರಾರ್ಥನೆಯಂತೆ, ತಾಟಕಾವಧ ವಿಶ್ವಮಿತ್ರರ ಆಣತಿಯಂತೆ, ಸೀತಾ ವಿವಾಹ ಜನಕರಾಜನ ಮಾತಿನಂತೆ, ಪರಶುರಾಮನನ್ನು ಎದುರಿಸಿದುದು ವಸಿಷ್ಠರ ಮಾತಿನಂತೆ, ವನವಾಸಕ್ಕೆ ಹೊರಟುದು ಕೈಕೇಯಿ ಹೇಳಿದ ಮಾತಿನಂತೆ, ಭರತನಿಗೆ ಪಾದುಕಾ ಪ್ರಧಾನ ಮಾಡಿದುದು ಭರತನ ಇಚ್ಛೆಯಂತೆ, ಚಿತ್ರ ಕೂಟದಲ್ಲಿ ವಾಸಿಸಿದುದು ಭರದ್ವಾಜರ ಅಪ್ಪಣೆಯಂತೆ, ದಂಡಕಾರಣ್ಯದಲ್ಲಿ

ದಕ್ಷಿಣಭಾರತ ಪೂರ್ತಿ ರಾಕ್ಷಸರನ್ನು ಅಲ್ಲಲ್ಲೇ ಹೋಗಿ ಸಂಹರಿಸಿದುದು ಋಷಿಗಳ ಮಾತಿಗೆ ಒಪ್ಪಿದುದರಿಂದ, ಮಾಯಾಮೃಗವನ್ನು ಹಿಂಬಾಲಿಸಿದುದು ಸೀತೆಯ ಮಾತಿನಿಂದ, ಶಬರಿಯನ್ನೂ ಕಂಡುದು ಕಬಂಧನ ಮಾತಿನಿಂದ, ಸುಗ್ರೀವ ಸುಖ್ಯ ಮಾಡಿದುದು ಆಂಜನೇಯನ ಮಾತಿನಿಂದ, ವಾಲಿವಧೆ ಸುಗ್ರೀವನ ಮಾತಿನಂತೆ, ಶತ್ರು ಪಕ್ಷದ ವಿಭೀಷಣನ್ನು ತನ್ನ ಪಕ್ಷಕ್ಕೆ ಕೊಂಡದ್ದು ಹನುಮಂತನ ಮಾತಿನಿಂದ, ಸೇತು ಬಂಧನ ಮಾಡಿಸಿದ್ದು ಸಮುದ್ರ ರಾಜನ ಮಾತಿನಿಂದ, ರಾವಣನನ್ನು ಕೊಂದುದು ಅಗಸ್ತ್ಯರು ಕೊಟ್ಟ ಆದಿತ್ಯ ಹೃದಯ ಬ್ರಹ್ಮಾಸ್ತ್ರದ ಪ್ರಯೋಗ ಮಾಡು ಎಂದು ಮಾತಲಿ ಹೇಳಿದುದರಿಂದ, ಸೀತೆಯನ್ನು ಪರಿಗ್ರಹಿಸಿದುದು ಅಗ್ನಿದೇವನ ಮಾತಿನಿಂದ, ಮುಂದೆ ಪಟ್ಟಾಭಿಷೇಕವಾದುದು ಪ್ರಜೆಗಳ ಭರತನ ತಾಯಂದಿರ ಸರ್ವ ಸಮ್ಮತಿಯಿಂದ, ಸೀತೆಯನ್ನು ವಾಲ್ಮೀಕಿ ಆಶ್ರಮದ ಬಳಿ ಕಾಡಿನಲ್ಲಿ ಬಿಡಿಸಿದುದು ಒಬ್ಬ ಪ್ರಜೆ ಅಗಸನ ಮಾತಿಗೆ ಬೆಲೆ ಕೊಟ್ಟುದು ಮತ್ತು ಸೀತೆಯ ಬಯಕೆಗಾಗಿ, ಈ ಮುಂದೆ ಅಶ್ವಮೇಧ ಮಾಡಿದುದು ಋಷಿಗಳ ಧರ್ಮದ ಮಾತಿನಂತೆ, ಸೀತೆಯು ಧರಣಿಗೆ ಇಳಿದು ಹೋದಾಗ ಲವಕುಶರನ್ನು ಸ್ವೀಕರಿಸಿದುದು ಆಗಿನ ಬ್ರಹ್ಮನ ವಾಣಿಯಿಂದ, ಭರತನನ್ನೇ ಯುವರಾಜನನ್ನಾಗಿ ಮಾಡಿದುದು ಕೈಕೇಯಿಗೆ ದಶರಥ ಹಿಂದೆ ಕೊಟ್ಟಿದ್ದವರದ ಮಾತಿನಿಂದ, ಅನಂತರ ವೈಕುಂಠಕ್ಕೆ ಹಾರಿದುದು ಕಾಲ ಪುರುಷನ ಮಾತಿನಿಂದ, ಹೀಗೆ ರಾಮ ತನ್ನ ಇಷ್ಟವನ್ನು ಮುಚ್ಚಿಟ್ಟುಕೊಂಡಿದ್ದ, ಆದರೆ ಸೀತೆ ಕಪಟವಿಲ್ಲದ ನಡತೆಯವಳು, ಯಾರಿಗೂ ಅವಳು ಕೋಪಿಸಿಕೊಂಡ ಪ್ರಸಂಗ ಯಾವ ರಾಮಾಯಣದಲ್ಲೂ ಇಲ್ಲ. ರಾಮನ ಬಗ್ಗೆಯೂ ಅವಳಿಗೆ ಕೋಪವಿಲ್ಲ ತನ್ನಧೀರನಡತೆಯಿಂದ ಬಂದ ಕಷ್ಟಗಳನ್ನು ಒಪ್ಪಿಕೊಂಡವಳು ರಾಮನಿಗೆ ಹೃತ್ಪೂರ್ವಕವಾಗಿ ನೀತಿ ಅರುಹಿದವಳು, ರಾಮನು ಹತ್ತು ವರ್ಷಗಳ ಕಾಲ ದಂಡಕಾರಣ್ಯದಲ್ಲಿ ರಾಕ್ಷಸರನ್ನು ಹೆಕ್ಕಿ ಹೆಕ್ಕಿ ಕೊಂದು ಬಂದಾಗ, ಅದನು ಮಾಡಿದುದನ್ನು ಇವಳು ನೇರವಾಗಿ ತಪ್ಪು ಎನ್ನುತ್ತಾಳೆ. ಅರಣ್ಯದಲ್ಲಿ ಹಿಂದಿನಿಂದಲೂ ಇದ್ದವರು ಇವರು ನಾವು ಹೊಸಬರು ಆಶ್ರಮ ಕಟ್ಟಿಕೊಂಡು ೧೪ ವರ್ಷಗಳ ವನವಾಸ ಮುಗಿಸಿ ನೆಮ್ಮದಿಯಾಗಿ ಹಿಂತಿರುಗೋಣ, ರಾಕ್ಷಸರು ನಮಗೇನೂ ತೊಂದರೆ ಮಾಡಿಲ್ಲ ಅವರ ಉಸಾಬರಿ ಏಕೆ, ಇದರಿಂದ ನಮಗೆ ಮುಂದೆ ಅನರ್ಥಗಳು ಬರುವುವು ಎಂದು ಎಚ್ಚರಿಸುತ್ತಾಳೆ, ರಾಮ ಪ್ರತಿಜ್ಞೆ ಮಾಡಿ ಬಿಟ್ಟಿದ್ದೇನೆ ಋಷಿಗಳಿಗಾಗಿ ಕ್ಷತ್ರಿಯರು ಸತ್ಯವ್ರತರು ಎಷ್ಟೇ ಕಷ್ಟ ಬಂದರೂ ದಂಡಕಾರಣ್ಯ ಶೋಧನೆ ನಾನು ಬಿಡಲಾರೆ ಎನ್ನುತ್ತಾನೆ, ಸೀತೆಗೆ ಏಳುನೂರು ರಾಕ್ಷಸಿಯರು ಪ್ರತಿದಿನ ಹಿಂಸೆ ಕೊಟ್ಟಿದ್ದರೂ ಅವರಿಗೆ ಹನುಮಂತ ಶಿಕ್ಷಿಸಬೇಕೆಂದಾಗ ಸೀತೆ ಅವರದೇನೂ ತಪ್ಪಿಲ್ಲ ಎನ್ನುತ್ತಾಳೆ, ರಾವಣ ಹೇಳಿದ ಕೆಲಸ ಮಾಡುವುದಷ್ಟೇ ಅವರ ಕರ್ತವ್ಯವಾಗಿತ್ತು. ಪ್ರಪಂಚದಲ್ಲಿ ತಪ್ಪು ಮಾಡದವರಾರು? ಆರ್ಯ ಮರ್ಯಾದೆಯಿರುವವರು ಕ್ಷಮಿಸಬೇಕು ತಪ್ಪಿತಸ್ತರಿಗೆ ಕರುಣೆ ತೋರಬೇಕು ಎನ್ನುತ್ತಾಳೆ. ಇಷ್ಟು ಮಾತ್ರವಲ್ಲದೆ ರಾಮನ ಯಜ್ಞ ಸಭೆಯಲ್ಲಿ ವಾಲ್ಮೀಕಿಯ ಹಿಂದೆ ಮಗಳಂತೆ ಬಂದ ಸೀತೆ ರಾಮನನ್ನು ಕಣ್ಣೆತ್ತಿಯೂ ನೋಡುವುದಿಲ್ಲ, ನೆಲವನ್ನೇ ನೋಡುತ್ತಿರುತ್ತಾಳೆ ರಾಮನು ಸೀತೆ ಪ್ರತಿಜ್ಞೆ ಮಾಡಲಿ ಎಂದಾಂಗ ಕಪಟವಿಲ್ಲದೆ ಮೂರು ಬಾರಿ ನ್ಯಾಯಾಲಯದಲ್ಲಿ ಹೇಳುವಂತೆ ರಾಮನನ್ನೂ ಬಿಟ್ಟು ನನಗೆ ಬೇರೆ ಯಾರಲ್ಲೂ ಮನಸ್ಸು ಎಂದಿಗೂ ಹೋಗಿಲ್ಲ ಎನ್ನುತ್ತಾಳೆ. ಅಗ್ನಿ ದೇವನು ಸೀತೆ ಪರಿಶುದ್ಧಳೆಂದು ಅಂದು ಲಂಕೆಯಲ್ಲಿದ್ದವರಿಗೆ ಗೊತ್ತು ಅಯೋಧ್ಯೆಯ ಜನರಿಗೇನು ಗೊತ್ತು ಪಾಪ! ಒಬ್ಬ ಅಗಸ ತನ್ನ ಹೆಂಡತಿಗಾಗಿ ಸೀತೆಯ ಬಗ್ಗೆ ತಪ್ಪು ಮಾತಾಡಿ ಬಿಟ್ಟ ಆದುದು ಅಷ್ಟೇ, ಪ್ರಜಾಪಾಲಕ ರಾಮ ತನ್ನ ಸ್ವಂತಿಕೆಯನ್ನು ಕಳೆದುಕೊಂಡಿದ್ದ, ಇದೆಲ್ಲ ಇರಲಿ ಸಭೆಯಲ್ಲಿ ಸೀತೆಯ ನಡತೆ ಮೆಚ್ಚಿಕೊಳ್ಳಬೇಕಾದುದು ಸೀತೆ ರಾಮನನ್ನು ಕಣ್ಣೆತ್ತಿಯೂ ನೋಡಲಿಲ್ಲ ಎಂಬ ಅಂಶ ರಾಮಾಯಣದಲ್ಲಿ ಸೂಕ್ಷ್ಮವಾಗಿದೆ, ಏಕೆ ಎನ್ನುವ ಕಾರಣ ಅಲ್ಲಿಲ್ಲ ಕ್ಷೇಮೇಂದ್ರನ ಮಂಜರಿಯಲ್ಲಿದೆ.

1. ಸೀತಾ ರಾಮರದು ಅಚಲ ದಾಂಪತ್ಯ, ಪರನಾರಿಯನ್ನು ಪರಪುರುಷರನ್ನು ಕಣ್ಣೆತ್ತಿ ನೋಡದ ಐಕಮತ್ಯ, ಈ ಐಕಮತ್ಯ ರಾಮನಿಂದ ಭಂಗವಾಗಿದೆ; ಸೀತೆಯಿಂದಲ್ಲ, ರಾಮ ಸೀತೆಗೆ ಸ್ವರ್ಣಸೀತೆ (ರೋಬೋ)ಯನ್ನು ಪಕ್ಕದಲ್ಲಿಟ್ಟುಕೊಂಡಿರುವ ವಿಷಯ ತಿಳಿದಿತ್ತು, ರಾಮನನ್ನು ನೋಡಿದರೆ ಸವತಿಯನ್ನೂ ನೋಡಬೇಕಾಗುವುದು ಏಕ ಪತ್ನೀವ್ರತಸ್ಥ ಹೀಗಾದಲ್ಲಾ ಅವನನ್ನು ನೋಡುವುದು ತರವಲ್ಲ, ಇಷ್ಟು ಮಾತ್ರವಲ್ಲ ಸವತಿ ಸ್ವರ್ಣಸೀತೆಯ ಬಗ್ಗೆ ಸೀತೆಗೆ ಸ್ವಲ್ಪ ಅಸೂಯೆಯೂ ಉಂಟಾಗಿತ್ತು, ಹೀಗಾಗಿ ಅವಳು

ದೃಢ ನಿರ್ಧಾರದಿಂದ ನೆಲವನ್ನೇ ನೋಡುತ್ತ ವಾಲ್ಮೀಕಿಯ ಹಿಂದೆ ಮರೆಯಾಗಿಯೇ ಇದ್ದಳು ಎಂಬ ಹೊಸ ವಿಷಯವನ್ನು ಮಂಜರೀಕಾರ ಕ್ಷೇಮೇಂದ್ರ ಹೊರಗೆಡಹಿದ್ದಾನೆ, ಪತಿ ತಪ್ಪು ಮಾಡಿದರೂ ತಾನು ತಪ್ಪು ಮಾಡಲಾರೆನೆಂಬ ದೃಢತೆ ಸೀತೆಯದು ಈ ಪ್ರಸಂಗವನ್ನು ಸೀತಾಪರಿತ್ಯಾಗದ ಕೊನೆಯ ಪುಟ ಎಂದು ಎಲ್ಲ ರಾಮಾಯಣಗಳೂ ಹೇಳುತ್ತವೆ. ಆದರೆ ಕ್ಷೇಮೇಂದ್ರ ಇದನ್ನೂ "ವಸುಧಾ ಪ್ರವೇಶ" ಎನ್ನುತ್ತಾನೆ. ಭೂಮಿತಾಯಿಯ ಮಡಿಲಿಂದ ಎದ್ದು ಬಂದವಳು ತಾಯಿಯ ಮಡಿಲಿಗೇ ಸೇರಿದಳು. ಭೂಪತಿ ಎನಿಸಿದ ರಾಮ ಬಿದ್ದ; ಭೂತಾಯಿಯ ಮಡಿಲ ಸೇರಿದ ಸೀತೆಗೆದ್ದಳು; ಇದು ಕವಿಯ ಆಶಯ. ವಾಲ್ಮೀಕಿ ಸೀತೆಗೆ ಆಸರೆಯಾದಂತೆ ಸೀತೆಯ ಚರಿತೆಗೆ ಕ್ಷೇಮೇಂದ್ರ ಆಸರೆ.

ಸೀತೆಯ ಪ್ರತಿಜ್ಞೆಯ ಅಂತರಾರ್ಥ ಜನರಿಗೆ ಅಲ್ಲಿ ತಿಳಿಯಿತೋ ಇಲ್ಲವೋ! ಆದರೆ ಸೀತೆಯನ್ನು ಅವಳ ತಾಯಿ ಭೂದೇವಿ ಅಷ್ಟನಾಗಗಳ ಸಿಂಹಾಸನದಲ್ಲಿ ಕುಳಿತು ಮೇಲೆದ್ದು ಬಂದು ಸೀತೆಯನ್ನು ತಬ್ಬಿ ತನ್ನ ಮಡಿಲಲ್ಲಿ ಇರಿಸಿಕೊಂಡು ಪಾತಾಳಕ್ಕೆ ಹೋಗುವ ಅದ್ಭುತವೇ ಇಲ್ಲಿ ಎಲ್ಲರೂ ನೋಡಿದ್ದು ಸೀತೆ ತನ್ನ ಮಹಾಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳಲು ಭೂತಾಯಿಯನ್ನೇ ಬೇಡಿಕೊಂಡಳು ಮಗಳಿಗೆ ತಾಯಿ ಒತ್ತಾಸೆಯಾದಳು. ರಾಮನು ಚಡಪಡಿಸಿದ. ಸೀತೆಯನ್ನು ಮತ್ತೆ ಪಡೆಯಲು ಭೂಮಿಯನ್ನೇ ಸೀಳುವೆನೆಂದ ಸೀತೆಯನ್ನು ಬಿಟ್ಟಿರಲಾರದ ಅನನ್ಯ ಸಂಬಂಧ ಇದು ಇದು ಈಗ ಅವನ್ನು ಎಚ್ಚರಿಸಿತ್ತು. ದೇವತೆಗಳು ಬ್ರಹ್ಮನು ಭೂಮಿಯ ಅಶರೀರವಾಣಿ ಇವೆಲ್ಲವೂ ರಾಮನನ್ನು ತಡೆದುಬಿಟ್ಟವು. ರಾಮ ಸೋತ, ಸೀತೆ ಗೆದ್ದಳು, ರಾಮ ಸೀತೆಯೊಡನಿರಲು ಬಯಸಿ ಭೂಮಿಯನ್ನು ಮತ್ತೆ ತನಗೆ ತೋರು ಎಂದು ಕೇಳಿಕೊಂಡರೂ, ಭೂಮಿ ಸೀತೆಗೆ ಬಿಲವನ್ನು ತೋರು ಎಂದು ಕೇಳಿಕೊಂಡರೂ, ಭೂಮಿ ಸೀತೆಗೆ ಬಿಲ ತೋರಿದಂತೆ ರಾಮನಿಗೆ ತೋರಲಿಲ್ಲ ಸೀತೆಯಿಲ್ಲದಿದ್ದರೇನು; ಸೀತೆಯ ಮತ್ತು ನಿನ್ನ ಪ್ರತಿಬಿಂಬದಂತಿರುವ ಲವಕುಶರನ್ನು ನೋಡುತ್ತಾ ಸಂತೋಷದಿಂದಿರು ಎಂಬ ಅಶರೀರವಾಣಿ ರಾಮನಿಗೆ ಸ್ವಲ್ಪ ಸಮಾಧಾನ ಕೊಡುತ್ತದೆ. ಈ ಮುಖ್ಯ ವಿಷಯವನ್ನು ಕ್ಷೇಮೇಂದ್ರ ಕವಿ ರಾಮಾಯಣ ಮಂಜರಿಯಲ್ಲಿ ಬಿಡದೆ ಮೂಲರಾಮಾಯಣವನ್ನು ಕನ್ನಡಿಯಲ್ಲಿ ಕಾಣಿಸಿದಂತೆ ಸ್ಪಷ್ಟ ಚಿತ್ರಣ ಕೊಡುತ್ತಾನೆ.

2. ರಾಮಾಯಣದ ಬೀಜ ಶ್ಲೋಕ ಭರತಖಂಡದಲ್ಲಿ ಪ್ರಸಿದ್ಧವಾಗಿದೆ.

**ಮಾನಿಷಾದ ಪ್ರತಿಷ್ಠಾಂತ್ವಂ ಅಗಮಃ ಶಾಶ್ವತೀಸ್ಸಮಾಃ ।**
**ಯತ್ ಕ್ರೌಂಚಮಿಥುನಾದೇಕಂ ಅವಧೀಃ ಕಾಮಮೋಹಿತಂ ॥**
ರಾ.ಬಾ. 2–15

ಇಲ್ಲಿಯ 'ಅಗಮಃ' ಎಂಬ ಪದಕ್ಕೆ ಬದಲು ರಾಮಾಯಣ ಮಂಜರಿಯಲ್ಲಿ 'ಅಲಬ್ಧಾಃ' ಎಂಬ ಪದವಿದೆ. ಇದು ಮೂಲದ ಅಕ್ಷರಾನುವಾದವಾಗಿದ್ದರೆ, ಬದಲಾವಣೆಗೆ ಅವಕಾಶವಿಲ್ಲ ಸ್ವಂತ ಕವಿತೆಯಾದರೆ ಮೂರು ಪದಗಳಿಗಿಂತ ಹೆಚ್ಚು ಇತರರ ಕವಿತೆಯನ್ನು ಬಳಸುವಂತಿಲ್ಲ ಎಂಬುದು ಕಾವ್ಯ ಮೀಮಾಂಸೆಯ ನಿಯಮ. ಇರಲಿ ಇದು ಕವಿಗೆ ಸಿಕ್ಕಿದ ಮೂಲ ಪಾಠವೇ ಕಾಶ್ಮೀರದಲ್ಲಿ ಹೀಗಿದ್ದಿರ ಬಹುದು. ಇಂತಹ ಪಾಠ ಸಂಹಿತಾಭೇದಗಳಿಗೆ ಗುರುತು ಗಾಂಧಾರ ದೇಶದ ಈಗಿನ ಆಫಘಾನಿಸ್ತಾನದ ಪಾಠವೂ ಒಂದು ಉದಾಹರಣೆ. ರಾಮಾಯಣದ ಮೊದಲ ಶ್ಲೋಕ **ತಪಸ್ಸ್ವಾಧ್ಯಾಯ ನಿರತಂ** ಎಂಬುದು ಅದರಲ್ಲಿ ಈಗಿರುವಂತೆ ಇಲ್ಲ. ಕೂರ್ಮ ಪುರಾಣವು ಇತಿಹಾಸ ಪುರಾಣಗಳಿಗೆ **"ಚತಸ್ರಃ ಮೂಲ ಸಂಹಿತಾಃ"** ಎಂದು ವಿಭಾಗ ಕಾಣಿಸಿದೆ. ಪಾಠ ಭೇದಗಳನ್ನು ಒಪ್ಪಿರುತ್ತದೆ. ಹೀಗೆ ಮೂಲ ರಾಮಾಯಣದಲ್ಲೇ ಮೂಲತಃ ನಾಲ್ಕು ಪಾಠಗಳಿವೆ ಎಂದು ಸಾಂಪ್ರದಾಯಿಕವಾಗಿ ಒಪ್ಪಬಹುದು. ರಾಮ ಸೀತೆಯರಿಬ್ಬರೂ ಪರಸ್ಪರ ಸ್ವಂತ ಜೀವನದಲ್ಲಿ ಕಷ್ಟಕ್ಕೆ ಸಿಲಿಕಿದ್ದು, ರಾಮಾಯಣದ ಕರುಣ ರಸಕ್ಕೆ ಒಂದು ಮೂಲಭಾವವಾಗಿದೆ ಎಂಬುದು ವಾಲ್ಮೀಕಿಯ ಮನೋವೇದನೆ. ಇದು ಕ್ರೌಂಚ ಪಕ್ಷಿ ಮಿಥುನದ ಉಪಮೆಯಿಂದ ಹೊರಹೊಮ್ಮಿದೆ. ಮಹಾಕಾವ್ಯಗಳಿಗೆ ಶೃಂಗಾರ ಮತ್ತು ವೀರರಸಗಳು ಮುಖ್ಯವಾಗಿರಬೇಕೆಂದು ಸಾಹಿತ್ಯ ಲಕ್ಷಣ ಶಾಸ್ತ್ರ ಅಗ್ನಿ ಪುರಾಣದಲ್ಲೂ ಇದೆ ಆದರೆ ವಾಲ್ಮೀಕಿ ಶೃಂಗಾರದಲ್ಲಿ ವಿಪ್ರಲಂಭ ಶೃಂಗಾರವನ್ನೂ

ವೀರವನ್ನು ಬಳಸಿಕೊಂಡು ಒಟ್ಟು ವೃತ್ತಾಂತದಲ್ಲಿ ಕರುಣ ರಸವನ್ನು ರಮಣೀಯಗೊಳಿಸಿ ಮುಖ್ಯವಾಗಿಸಿದ್ದಾನೆ ಹೀಗೆ ವ್ಯಾಸರು ಭಾರತದಲ್ಲಿ ಶಾಂತರಸದಲ್ಲಿ ಆಖ್ಯಾನ ಕೊನೆಗೊಳಿಸಿದ್ದಾರೆ ಲಾಕ್ಷಣಿಕರ ದೃಷ್ಟಿಯಿಂದ ಇವು ಹೊಸ ಪ್ರಯೋಗಗಳು. ನಾವು ರಾಮಾಯಣವನ್ನು ಓದಿ ತಿಳಿದು ಅನುಭವಿಸಿದಾಗ ರಾಮನ ಬಗ್ಗೆ ನಮಗೆ ಅಯ್ಯೋ! ಎನಿಸುವುದು ಸೀತೆಯನ್ನು ಕಾಡಿಗೆ ಕಳಿಸಿದಾಗ ಸೀತೆಯ ಬಗ್ಗೆ ಅಯ್ಯೋ ಎನಿಸಿದಂತೆ. ಸೀತೆಯ ವಸುಧಾ ಪ್ರವೇಶವಾದ ಮೇಲೆ ರಾಮನ ದುಃಖ ಮತ್ತು ಕೋಪಕ್ಕೆ ಸವಾಲಾದ ಆಕಾಶವಾಣಿಗಳು ಒಂದಷ್ಟು ಸಮಾಧಾನ ಕೊಡಬಹುದು.

3. ಆಕಾಶವು ಎಂದಿಗೂ ಬಿಡಲಾಗದ ಹಗಲು ರಾತ್ರಿಗಳಂತೆ, ರಾಮನು ಸೀತಾ ಲಕ್ಷ್ಮಣರನ್ನು ಬಿಡಲಾರೆ ಎಂದ ಮಾತು ವ್ಯರ್ಥವಾಯಿತು. "ತ್ವಾಂ ವಾ ಸೀತೇ! ಸಲಕ್ಷ್ಮಣಾಂ" ನಿನ್ನನ್ನೂ ಲಕ್ಷ್ಮಣನನ್ನೂ ಬಿಟ್ಟರೂ ಸಜ್ಜನ ಪ್ರಜೆಗಳಿಗೆ ಕೊಟ್ಟ ಮಾತು ತಪ್ಪಲಾರೆ ಎಂಬ ಹಠ ಮತ್ತು ರಾಮರಾಜ್ಯವೆಂಬ ಕೀರ್ತಿ ಕಾಮನೆ ರಾಮನಿಗೆ ಹೆಚ್ಚಾಗಿತ್ತು ಎಂಬ ಮಾತು ರಾಮಾಯಣ ಮಂಜರಿಯಲ್ಲಿ ರಾಮನ ಮಾತಿನಿಂದಲ್ಲೇ ತಿಳಿದುಬರುವದು.

**ನಿರ್ದೋಷಾಂ ಭಗ್ವನ್ ಜಾನೇ ಜಾನಕೀಂ, ಜನ ಸಂಭವಾತ್ ।**
**ಅಪವಾದ ಭಯಾತ್ ತ್ಯಕ್ತಾ ಕೀರ್ತಿಲುಬ್ಧೇನ ಕೇವಲಂ ॥**
(ರಾ. ಮಂ. ಉತ್ತರಕಾಂಡ 1185 ಶ್ಲೋಕ)

4. ಸೀತೆಯ ಪ್ರಸಂಗಗಳಲ್ಲಿ ಎಷ್ಟು ಹೇಳಿದರೂ ಪುನರುಕ್ತಿಯಿಲ್ಲ ಒಂದೊಂದು ಹೊಸ ಅಂಶವಿರುತ್ತದೆ. ಸೀತೆ ವಾಲ್ಮೀಕಿಯ ಮಗಳಂತೆ ಅವನ ಜತೆ ಯಜ್ಞ ಸಭೆಗೆ ಬಂದಾಗ ಅವಳ ಕಣ್ಣು ಕೆಂಪಾಗಿ ಕಣ್ಣೀರು ಬಂದಿತ್ತು. ಇದಕ್ಕೆ ಕಾರಣವೊಂದು ರಾಮಾಯಣದಲ್ಲಿಲ್ಲವಾದರೂ ಮಂಜರಿಯಲ್ಲಿದೆ.

ಶಿಲ್ಪಿಗಳು ನಮ್ಮ ಈ ಕಾಲದ ರೋಬೋ ಯಂತ್ರ ಮಾನವನಂತೆ ಚಿನ್ನದ ಯಂತ್ರ ಸೀತೆಯನ್ನು ಮಾಡಿ ರಾಮನಿಗೆ ಒಪ್ಪಿಸಿದ್ದರು. ವನದಿಂದ ನಿಜವಾದ ಸೀತೆಯೇ ಬಂದಿರುವಂತಿತ್ತು, ಸೀತೆಯ ಗೊಂಬೆ ಯಜ್ಞದಲ್ಲಿ ಪತ್ನಿ ಹೇಳಬೇಕಾದ ಮಂತ್ರ, ಹವಿಸ್ಸಿಗೆ ಪ್ರೋಕ್ಷಿಸಿ ಅನುಮತಿಸುವುದು, ರಾಮನ ಜತೆ ಅಗ್ನಿ ಪ್ರದಕ್ಷಿಣೆ, ಕೂರುವುದು ಏಳುವುದು, ಈ ಎಲ್ಲವನ್ನೂ ಈ ಸುವರ್ಣ ಸೀತೆಯೇ ಮಾಡುತ್ತಿದ್ದಳು. (ಮಹಾಭಾರತದಲ್ಲಿ ಬರುವ ಭೀಮನ ಯಂತ್ರ ಮೂರ್ತಿ ಬೃಹತ್ಕಥೆಯಲ್ಲಿ ಬರುವ ದ್ವೀಪಾಂತರ ಶಿಲ್ಪಿ, ಇತ್ತೀಚಿನ ಮೈಸೂರರಸರ ಕಾಲದ ಕುಸ್ತಿ ಮಾಡುವ ಹುಲಿಯಂತ್ರ ಗೊಂಬೆ)

ಏಕಪತ್ನೀವ್ರತಸ್ಥನಾದ ರಾಮನಿಗೆ ಈ ಸುವರ್ಣ ಸೀತೆ ಹೇಗೆ ಗಂಟುಬಿದ್ದಳು! ಎಂಬ ಸವತಿ ಮಾತ್ಸರ್ಯದಿಂದ ನಿಜ ಸೀತೆಗೆ ಕಣ್ಣು ಕೆಂಪಾಗಿತ್ತಂತೆ, ರಾಮನು ಹೀಗಾದನಲ್ಲಾ ಎಂದು ಕಣ್ಣೀರು ಬಂತಂತೆ. ಇಂತಹ ಅಪೂರ್ವ ಚಿತ್ರಣಗಳು ರಾಮಾಯಣ ಮಂಜರಿಯ ರಮಣೀಯ ವರ್ಣನೆಗಳಲ್ಲಿವೆ. ರಾಮನಿಗಾಗಿ ಸೀತೆ ಅಳುವಳು ಸೀತೆಗಾಗಿ ರಾಮ ಅಳುವನು. ಇವರಿಬ್ಬರ ಪರಸ್ಪರ ಪ್ರೇಮವೇ ಕರುಣ ಶೃಂಗಾರ. ಇದನ್ನು ಸಾಹಿತ್ಯ ಶಾಸ್ತ್ರವು ವಿಪ್ರಲಂಭ ಶೃಂಗಾರ ಎನ್ನುತ್ತದೆ. ಈ ರಾಮನ ಅಳಲು ಅರಣ್ಯಕಾಂಡದ ಪಂಪಾನದೀಸರಸ್ಸಿನ ಬಳಿ ರಾಮನಿಗೆ ಹೆಚ್ಚಾಗಿ ವರ್ಣಿತವಾಗಿದೆ. ವಿಪ್ರಲಂಭ ಶೃಂಗಾರ ಕರುಣಕ್ಕೆ ಪೋಷಕವಾಗುವುದು. ಇದು ಸೀತಾರಾಮರ ವಿರಹ ಕಾಲದ ನಡವಳಿಕೆ ತಿಳಿದ ಸಹೃದಯ ಸಾಮಾಜಿಕರಿಗೆ. "ಏಕೋರಸಃ ಕರುಣ ಏವ" ಎಂಬುದು ಮಹಾಕವಿ ಭವಭೂತಿಯ ಶ್ರೀಕಂಠದ ನುಡಿ, ಇಂತಹ ಸಹೃದಯ ಸಾಮಾಜಿಕ ಪ್ರವರ ಪ್ರಾಚೇತಸ ವಾಲ್ಮೀಕಿ ಎದೆ ಕರಗಿಸುವ ಸನ್ನಿವೇಶಗಳೇ ನವರಸಗಳಲ್ಲಿ ಮುಖ್ಯವಾಗಿರುವುದರಿಂದ ಒಳರಸ ಕರುಣವೇ ಅಹುದು. ಇದರ ರೂಪಾಂತರಗಳೇ ಇತರ ರಸಗಳು ವಾಲ್ಮೀಕಿಗೆ ಹೃದಯ ಕರಗಿದುದು ಸೀತೆಯ ರೋದನದಿಂದ; ಅನಂತರ ಅವಳ ಬಾಯಿಂದಲೇ ಅವಳ ವೃತ್ತಾಂತ ಕೇಳಿದ್ದರಿಂದ ಹೀಗಾಗಿ ರಾಮಚರಿತ ಮಹಾಕಾವ್ಯ ಬರೆದ ಅಭಿನಂದ ಕವಿ ಕಥೆಯನ್ನು ಮಾಲ್ಯವಂತ ಪರ್ವತದ ನಿವಾಸದ ರಾಮನ ವಿರಹ ದುಃಖದಿಂದಲೇ ಆರಂಭಿಸಿದ್ದಾನೆ. ಇವನು ಮಹಾ ಸರಸ ಶಾಸ್ತ್ರಜ್ಞನಾಗಿದ್ದ ಜಯಂತ ಭಟ್ಟನ ಮಗ. ವಾಲ್ಮೀಕಿಯು ಸೀತಾರಾಮರನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದರೂ, ಸೀತೆ ತಪ್ಪಿಸಿಕೊಂಡು ಬಿಡುತ್ತಾಳೆ. ಇದು

ದೈವದ ಮುಂದೆ ವಾಲ್ಮೀಕಿಯಾಗಲಿ ರಾಮನಾಗಲಿ ಯಾರೇ ಆಗಲಿ ಸೋತರೆಂಬುದೇ ಇಲ್ಲಿಯ ಒಂದು ಮರ್ಮ. ಸೀತೆ ತಾಯಿ ಭೂದೇವಿಯ ಸಹಾಯದಿಂದ ಗೆದ್ದಳು.

5. ರಾಮನ ಜೀವನ ಕಷ್ಟಮಯ ದುಃಖಮಯ, ಸೀತೆಯದೂ ಅಷ್ಟೇ, ರಾಮಾಯಣ ಮಂಜರಿಯ ಕೊನೆಮಾತು ಇದು–

**‘ಸರ್ವಂ ದುಃಖಮಯಂ ತದಸ್ತು ಭವತಾಂ ಶ್ಲಾಘೋವಿವೇಕೋದಯಃ’**

ಓ ! ಜನರೇ ! ರಾಮಾಯಣ ಓದಿ ನಿಮಗೆ ಒಳ್ಳೆಯ ವಿವೇಕ ಬರಲಿ ಇದು ಕವಿಯ ಘೋಷವಾಕ್ಯ.

ರಾಮಾಯಶಸನೆಂಬ ವಿಪ್ರನು ರಾಮಾಯಣ ಕಥೆಯ ರಾಮಾಯಣ ಮಂಜರಿಯ ಹಿನ್ನಲೆ ಸಾರವನ್ನು ಸರಸವಾಗಿ ಕೋಮಲವಾಗಿ ಹೇಳಬೇಕೆಂದು ಶ್ರೀ ಕ್ಷೇಮೇಂದ್ರನನ್ನು ಪ್ರಾರ್ಥಿಸಿದಾಗ; ಅವನಿಗಾಗಿ ಮೈತ್ರಿಯಿಂದಾಗಿ ಬೇರೆ ಪ್ರತಿಫಲಾಪೇಕ್ಷೆ ಇಲ್ಲದೆ ಈ ಗ್ರಂಥ ರಚನೆಯಾಗಿದೆ.

ಗುಣಗಳು ಗುಣಗಳಾಗಿಯೇ ತೋರುವಾಗ ಆಶ್ಚರ್ಯವೇನಿದೆ ? ಗುಣವಿಲ್ಲದಿದ್ದರೂ ಗುಣಗಳನ್ನು ಹೇಳುವುದರಿಂದ ನಷ್ಟವೇನು ? ಹೇಳಿದ ಗುಣವನ್ನು ಗ್ರಹಿಸಿ ಅನುಸರಿಸಿ ತಮ್ಮದಾಗಿಸಿಕೊಂಡರೆ ಅವರೇ ಎಲ್ಲರಿಗಿಂತ ಮಿಗಿಲಾದವರು.

ಹೀಗೆ ಕ್ಷೇಮೇಂದ್ರನು ರಾಮಾಯಣ ಮತ್ತು ತನ್ನ ರಾಮಾಯಣ ಕಥಾ ಸಾರದ ಬಗ್ಗೆ ಈ ಮಾತನ್ನು ಹೇಳಿದ್ದಾನೋ ಅಥವಾ ಸಮಾಜದಲ್ಲಿ ಗುಣವಂತರಾಗಲು ಈ ರೀತಿ ನೀತಿ ನಿರ್ದೇಶನ ಮಾಡಿರುವನೋ; ಇದು ಅವನ ಕಡೆಯ ಹೇಳಿಕೆ. ವಸ್ತುವಿನಲ್ಲಿ ರಸವಿದೆಯೋ ಇಲ್ಲವೋ, “ಕವಿವಾಚಿ ರಸಃ ಸ್ವತಃ” ಕವಿ ಮಾತಿನಿಂದ ಅಲ್ಲಿ ರಸ ಭಾವನೆಯು ಉಂಟಾಗುವುದು. ರಸವುಂಟಾದಲ್ಲಿ ಗುಣಗಳು ಅಲ್ಲಿ ತಾವಾಗಿಯೇ ಹೊಮ್ಮುವುವು. **ಇದು ಸಾಹಿತ್ಯ ಸಿದ್ಧಾಂತ.**

ಒಬ್ಬರಿಗೆ ವೀರ ಎಂದು ಬಿರುದು ಕೊಟ್ಟರೆ, ಅದಕ್ಕಾಗಿಯಾದರೂ ಅವನು ಸ್ವಲ್ಪ ವೀರತ್ವವನ್ನು ಸಂಪಾದಿಸಬೇಕಾಗುವುದು. ಇದು ಸಮಾಜದ ಒಂದು ಎಲ್ಲೆ ಕಟ್ಟು ಮರ್ಯಾದೆ. ಹೀಗೆಯೇ ಒಬ್ಬನನ್ನು ವಿದ್ವಾಂಸನೆಂದು ಜನ ನಿಜ ತಿಳಿಯದೆ ಹೊಗಳಿದರೂ ಅವನು ಅದಕ್ಕಾಗಿಯಾದರೂ ವಿದ್ವತ್ತನ್ನು ಸಂಪಾದಿಸಬೇಕಾಗುವುದು. ಹೀಗೆ ಗುಣವಿಲ್ಲದಿದ್ದರೂ ಗುಣವಂತರೆಂದು ನಾವು ಹೊಗಳಿದರೆ ಈ ಮಾತು ಮುಂದೆ ಆ ವ್ಯಕ್ತಿಗಳು ಗುಣವಂತಿಕೆ ಪಡೆಯಲು ಪ್ರೇರಣೆ ಕೊಡುವುದಲ್ಲವೆ.

**ಜಿತಂ ಭಗವತಾ ತೇನ ನಿರ್ಗುಣೇನ ಗುಣಾತ್ಮನಾ ।**
**ಅಜೇನ ವಿಶ್ವರೂಪೇಣ ಹರಿಣಾ ಲೋಕ ಧಾರಿಣಾ ॥**

ಈ ಮಂಗಳ ಪದ್ಯವು ಮಂಜರಿಯ ಆದಿ ಮಧ್ಯ ಅಂತ್ಯಗಳಲ್ಲೂ ಅಡಿಗಡಿಗೆ ಬಂದಿದೆ. ಇದು ನಿರ್ಗುಣ ಬ್ರಹ್ಮದ ಸಗುಣತ್ವಕ್ಕೆ ರಾಮಾಯಣವೇ ನಿದರ್ಶನ ಎಂಬುದು ಕವಿಯ ದಾರ್ಶನಿಕವಾದ ಜಾಣ್ಮೆಯ ಮಾತು.

25–12–2017

ಇಲ್ಲಿ ಪರಾಶರರ ವಿಷ್ಣು ಪುರಾಣದಲ್ಲಿರುವ ಒಂದು ಪದ್ಯದ ಸಾರಾಂಶವೇ ಇದು–ಆ ಪದ್ಯ ಹೀಗಿದೆ;

**ಪರಃಪರಾಣಾಂ ಸಕಲಾ ನಯತ್ರ ಕ್ಲೇಶಾದಯಸ್ಸಂತಿ ಪರಾವರೇಶೇ ।**
**ಸಮಸ್ತ ಕಲ್ಯಾಣ ಗುಣಾತ್ಮಕೋಸೌ ಸ್ವಶಕ್ತಿ ಲೇಶೋದ್ಧೃತ ಭೂತ ಸರ್ಗಃ ॥**

ಹೀಗೆ

**ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।**
**ಸದೈಕರೂಪರೂಪಾಯ ವಿಷ್ಣುವೇ ಸರ್ವಜಿಷ್ಣವೇ ॥**

ಹೀಗೆ ಕ್ಷೇಮೇಂದ್ರನು ಕವಿ ಮಾತ್ರವಲ್ಲ ದಾರ್ಶನಿಕನೂ ಅಹುದು ಅವನ ನಾನಾ ಶಾಸ್ತ್ರಗ್ರಂಥಗಳ ರಚನೆಯಲ್ಲಿ ವೇದಾನ್ತಕ್ಕೆ ಪುರಾಣಗಳ ಉಪಬೃಂಹಣ ಮುಖ್ಯವಾದುದು. ಅದರಲ್ಲಿ ಒಂದು ಈ ರಾಮಾಯಣ ಮಂಜರಿಂ.

ಪರಮಾತ್ಮನಿಗೆ ಪ್ರಕೃತಿಯಲ್ಲಿರುವ ತ್ರಿಗುಣವಿಲ್ಲದುದರಿಂದ ನಿರ್ಗುಣ ಜ್ಞಾನ ಶಕ್ತ್ಯಾದಿ ದಿವ್ಯ ಗುಣಗಳಿರುವುದರಿಂದ ಅವನು ಗುಣಾತ್ಮ.

6. ರಾಮಾಯಣ ಪಾರಾಯಣವು ನಿತ್ಯವೂ ಭಾರತ ದೇಶದಲ್ಲಿ ಮನೆ ಮನೆಗಳಲ್ಲೂ ನಡೆಯುತ್ತಿದ್ದವು. ಪಾರಾಯಣ ಮಾಡಿದ ಫಲವನ್ನು ವಿದ್ವಾಂಸರು ರಾಷ್ಟ್ರಕ್ಕೆ ಅರ್ಪಿಸುತ್ತಿದ್ದರು ಈ ವ್ಯವಸ್ಥೆ ಕನ್ನಡನಾಡಿನಲ್ಲಿ ಹೊಯ್ಸಳ, ಗಂಗ, ರಾಷ್ಟ್ರಕೂಟ, ಚೋಳ, ಪಾಂಡ್ಯ, ವಿಜಯನಗರ ಮೈಸೂರು ಅರಸರ ಕಾಲಗಳಲ್ಲೂ ನಿಯಮದಿಂದ ನಡೆಯುತ್ತ ಇತ್ತು ರಾಜ್ಯಕ್ಕೆ ಕ್ಷೇಮ ಸುಭಿಕ್ಷಗಳು ಆಗುತ್ತಿದ್ದವು. ಕಾಶ್ಮೀರದಲ್ಲೂ ಈ ಪದ್ಧತಿ ಇದ್ದಂತಿದೆ ಕ್ಷೇಮೇಂದ್ರನು ರಾಮಾಯಣ ಪಾರಾಯಣ ಪ್ರವಚನಗಳಿಂದ ವಾಲ್ಮೀಕಿಯ ಸಾಹಿತ್ಯವನ್ನು ಕೂಲಂಕಷವಾಗಿ ತಿಳಿದು ತನ್ನದನ್ನಾಗಿಸಿಕೊಂಡಿದ್ದ ಎಂಬುದು ಇವನ ರಾಮಾಯಣ ಮಂಜರಿಯಿಂದ ಸ್ಪಷ್ಟವಾಗಿ ತಿಳಿದು ಬರುವುದು ಇತ್ತೀಚಿನವರು ರಾಮಾಯಣದಲ್ಲಿ ಯಾರು ಯಾರೋ ಏನೇನನ್ನೋ ಸೇರಿಸಿ ಬಿಟ್ಟಿದ್ದಾರೆ ಎಂದು ಮೂಲ ಪಾಠಗಳನ್ನು ಸರಿಯಾಗಿ ಅರಿಯದೆ ಕಿತ್ತುಹಾಕುವ ಪ್ರಸಂಗಗಳು ಆಂಗ್ಲ ಆಡಳಿತದಿಂದೀಚೆಗೆ ರಾಮಾಯಣ ಭಾರತಗಳ ಬಗ್ಗೆ ಆಗಿವೆ ಯುದ್ಧಕಾಂಡದ ಬ್ರಹ್ಮಸ್ತುತಿ, ದೇವಸ್ತುತಿ, ಆದಿತ್ಯ ಹೃದಯ, ಮಂಡೋದರಿ ಸ್ತುತಿ, ಅರಣ್ಯ ಕಾಂಡದಲ್ಲಿ ಬರುವ ಕಾಕಾಸುರ ವೃತ್ತಾಂತ ಇತ್ಯಾದಿಗಳು, ಉತ್ತರಕಾಂಡದ ಮಹಾಪುರುಷದರ್ಶನ ಮುಂತಾದವು, ಪ್ರಕ್ಷಿಪ್ತಗಳೆಂದು ತಮಗಿಷ್ಟವಿಲ್ಲದ ಇವುಗಳನ್ನು ಪ್ರತ್ಯೇಕಿಸುವ ಚಟ ಇತ್ತೀಚಿನವರ ಧಾರಣೆ, ಕ್ಷೇಮೇಂದ್ರನ ಮಂಜರಿಯಲ್ಲಿ ಇವೆಲ್ಲವೂ ಸಂಕ್ಷೇಪವಾಗಿವೆಯಾಗಿ, ನೂತನರ ಆಕ್ಷೇಪಗಳು ಇಲ್ಲಿ ಸರಿಯಲ್ಲವೆಂದು ತೋರುವುದು.

ಕಾಕಾಸುರ ವೃತ್ತಾಂತ, ಸೀತೆಯೊಡನೆ ರಾಮನಿಗೆ ಮಾತ್ರ ತಿಳಿದ ತಿಲಕ ಹಚ್ಚುವ ವಿಷಯ, ರಾಮನ ಅಂಗಸಾಮುದ್ರಿಕ ವಿವರಣೆ, ಈ ಮೂರು ಆಂಜನೇಯ ಸೀತೆಗೆ ನಂಬಿಕೆ ಬರಲು ತಿಳಿಸಿದವುಗಳು. ರಾಮ ಅವನಿಗೆ ಮಾತ್ರ ತಿಳಿಸಿದ್ದು ಇದು ಸುಂದರಕಾಂಡ ದಲ್ಲಿರುವುದು ಸರಿ ಅರಣ್ಯ ಕಾಂಡದಲ್ಲೇ ವಾಲ್ಮೀಕಿ ಹೇಳಿದುದು ಹೇಗೆ? ವಾಲ್ಮೀಕಿಗೆ ರಾಮನ ನಡವಳಿಕೆಯಲ್ಲಿ ಮೊದಲೇ ತಿಳಿದಂತೆ ಎರಡು ಬಾರಿ ಕಾಕಾಸುರ ವೃತ್ತಾಂತ ಬರುವುದರ ಔಚಿತ್ಯವೇನು? ಇತ್ಯಾದಿ ಆಕ್ಷೇಪಗಳು ಸಾಧಾರಣ. ಆದರೂ ವಾಲ್ಮೀಕಿ ರಾಮಾಯಣದಲ್ಲಿರುವಂತೆಯೇ ಇವುಗಳನ್ನೂ ಅಲ್ಲಲ್ಲೇ ಕ್ಷೇಮೇಂದ್ರ ಸಂಗ್ರಹಿಸಿದ್ದಾನೆ ಈ ಆಕ್ಷೇಪಗಳು ಅವನಿಗೆ ಮಾಡಲು ತಿಳಿಯದೆ! ತಿಳಿದು ಅದರ ಪರಿಹಾರವೂ ತಿಳಿದಿದ್ದರಿಂದ ಮಾಡಿಲ್ಲ. ಮುಂದೆ ನೋಡಿ :-

ವಾಲ್ಮೀಕಿ ಯೋಗ ಸಿದ್ಧಿಯಲ್ಲಿ ಋತಂಭರಾ ಸ್ಥಿತಿಯಲ್ಲಿದ್ದು; ಧರ್ಮವೀರ್ಯ ಜ್ಞಾನ ಬಲದಿಂದ ಎಲ್ಲವನ್ನೂ ಅರಿತು ರಾಮಾಯಣ ರಚಿಸಿದ್ದು. ಯೋಗಿಗಳಿಗೆ ಸಂಪ್ರಜ್ಞಾತ ಸಮಾಧಿಯಲ್ಲಿ ಸಾಕ್ಷಾತ್ಕಾರವಾಗುವ ಭಗವಂತನ ರೂಪಕ್ಕೆ "ಧರ್ಮಮೇಘ" ಎಂದು ಶಾಸ್ತ್ರೀಯ ಹೆಸರು. ಮೋಡ ಮಳೆಗೆರೆಯುವಂತೆ ಈ ರೂಪವು ಸಕಲ ಸೂಕ್ಷ್ಮ ಭೂತ ಭವಿಷ್ಯದ್ ವರ್ತಮಾನಗಳನ್ನೂ ತಿಳಿಸುತ್ತದೆ. ಭೀಮಸೇನನನ್ನು ಭೀಮ ಎನ್ನುವಂತೆ ಬಲಭದ್ರನನ್ನು ಬಲ ಎನ್ನುವಂತೆ 'ಧರ್ಮ' ಎಂಬುದು ಇಂತಹ ಭಗವಂತನ ಹೆಸರು ಚತುರ್ಮುಖಬ್ರಹ್ಮನ ವರ ವಾಲ್ಮೀಕಿಗೆ ಆಗಿದೆ. ಅವರದೇ ಮಾತು-

**ಹಸಿತಂ ಭಾಷಿತಂ ಚೈವ ಗತಿರ್ಯಾಯಚ್ಚ ಚೇಷ್ಟಿತಮ್ ।**
**ತತ್ಸರ್ವಂ ಧರ್ಮವೀರ್ಯೇಣ ಯಥಾವತ್ ಸಂಪ್ರಪಶ್ಯಸಿ ॥**

ರಾ.ಬಾ. 3-4

ವಾಲ್ಮೀಕಿಗೆ ಅರಣ್ಯಕಾಂಡದಲ್ಲಿ ಹೇಳಿರುವ ಕಾಕಾಸುರ ಪ್ರಸಂಗಾದಿಗಳು ಹೀಗೆ ತಿಳಿದಿತ್ತು ಹಾಗೂ ಸುಂದರಕಾಂಡದಲ್ಲಿ ಇದನ್ನು ಹನುಮಂತ ಸೀತೆಗೆ ಹೇಳಿದ್ದೂ ಹೀಗೆ ತಿಳಿದಿತ್ತು. ತಿಳಿದುದನ್ನು ಅಲ್ಲಲ್ಲೇ ಪ್ರಬಂಧೀಕರಿಸಿದ್ದರಿಂದ ಪುನರುಕ್ತಿಯಾಗಲಿ, ಪಲ್ಲಟವಾಗಲಿ, ಆಗಿಲ್ಲ ಎಂಬುದು ಪೂರ್ವಾಚಾರ್ಯರ ಪರಂಪರೆಯ ಕ್ಷೇಮೇಂದ್ರನ ತಿಳುವಳಿಕೆ.

7. ಕ್ಷೇಮೇಂದ್ರನು ವಾಲ್ಮೀಕಿಯ ಪಾಠಗಳನ್ನೇ ಅನುಸರಿಸಿದರೂ ತನ್ನ ಗ್ರಂಥವನ್ನು ಒಂಬತ್ತು ಭಾಗವಾಗಿ ವಿಂಗಡಿಸಿಕೊಂಡಿದ್ದಾನೆ.

ಕಾಂಡವಿಭಾಗಗಳು ಏಳು' ಮೂಲರಾಮಾಯಣದಲ್ಲಿ ಬಾಲ ಉತ್ತರಕಾಂಡ ಸಂಪುಟಸಹಿತ ಇವೆ. ವಾಲ್ಮೀಕಿ ಬಾಲಕಾಂಡ ಉತ್ತರಕಾಂಡ ಬರೆಯಲಿಲ್ಲ ಎಂಬ ಮಾತು ಇತ್ತೀಚಿನವರ ಕುಹಕ.

ರಾಮಾಯಣ ಆರಂಭವಾಗುವುದೇ ಅಯೋಧ್ಯಾನಗರಿಯ ವರ್ಣನೆಯಿಂದ. ಇದು ಬಾಲಕಾಂಡದ ಈಗಿನ ಐದನೆಯ ಸರ್ಗ.

**ಪರ್ವಾಪೂರ್ವಮಿಯಂಯೇಷಾಂ ಆಸೀತ್ ಕೃತ್ಸ್ನಾವಸುಂಧರಾ ।**
**ಪ್ರಜಾಪತಿಮುಪಾದಾಯ ನೃಪಾಣಾಂ ಜಯಶಾಲಿನಾಂ ॥**

ಈಗಿರುವ ಅಯೋಧ್ಯಾಕಾಂಡದ ಆರಂಭ ಭರತ ಕೇಕೆಯ ನಗರಕ್ಕೆ ಹೋದ ಎಂಬ ಮಧ್ಯಂತರದಿಂದ ಆಗಿರುವುದು ಹೊಂದುವುದಿಲ್ಲ. ಹೀಗಾಗಿ ಕ್ಷೇಮೇಂದ್ರ ಬಾಲಕಾಂಡ ಎಂಬ ಹೆಸರನ್ನು ಬಿಟ್ಟು ಅಯೋಧ್ಯಾಕಾಂಡ ಎಂದೇ ಹೆಸರಿಸಿದ್ದಾನೆ. ಈಗಿನ ಬಾಲಕಾಂಡದ ನಾಲ್ಕು ಸರ್ಗಗಳು ಮಾತ್ರ ರಾಮಾಯಣ ರಚನೆಯ ಹಿನ್ನಲೆ ಗ್ರಂಥಕ್ಕೆ ಮುನ್ನುಡಿಯಂತಿದೆ ಅಷ್ಟೇ ವಾಲ್ಮೀಕಿಯೇ ಅನಂತರ ಮುನ್ನುಡಿ ಬರೆದು ಉತ್ತರ ಕಾಂಡ ಅನುಬಂಧ ಸೇರಿಸಿ ಭರದ್ವಾಜ ಮುಂತಾದ ಶಿಷ್ಯರಿಗೆ ಉಪದೇಶಿಸಿದ್ದಾನೆ. ಲವಕುಶರು ವಾಲ್ಮೀಕಿಯ ಪಟ್ಟ ಶಿಷ್ಯರು ಇವರು ದೇಶವಿದೇಶಗಳಲ್ಲಿ ರಾಜಾಸ್ಥಾನಗಳಲ್ಲಿ ರಾಮಾಯಣವನ್ನು ಹಾಡಿ ತೋರಿಸಿದ್ದರೆಂದೂ ರಾಮಾಶ್ವಮೇಧದಲ್ಲಿ ತಾವು ರಾಮಪುತ್ರರೆಂಬುದನ್ನು ತೋರಿಸಿಕೊಳ್ಳದೆ ಹಾಡಿದರೆಂದೂ ಮಂಜರಿಯಲ್ಲಿದೆ.

ಭಾರತಮಂಜರಿ ಬರೆದ ವ್ಯಾಸ ದಾಸ ಕ್ಷೇಮೇಂದ್ರ ತನ್ನ ರಾಮಾಯಣ ಮಂಜರಿಯಲ್ಲಿ 'ಪರ್ವ' ವಿಭಾಗ ಮಾಡಿಕೊಂಡನೋ, ಅಥವಾ ಕಾಶ್ಮೀರ ಪಾಠದಲ್ಲಿ ರಾಮಾಯಣದಲ್ಲಿ ಹಾಗಿತ್ತೋ ನಿಶ್ಚಯವಿಲ್ಲ. ರಾಮಾಯಣ ಮೂಲಗ್ರಂಥದ ಒಳವಿಭಾಗಗಳು ಸಾರಸಂಗ್ರಹಕ್ಕೆ ತಕ್ಕಂತೆ ಬದಲಾಗಿರುವುದುಂಟು.

| | | |
|---|---|---|
| 1. ಅಯೋಧ್ಯಾ ಕಾಂಡ | 987 | ಶ್ಲೋಕ |
| 2. ಅರಣ್ಯ ಪರ್ವ | 1158 | ಶ್ಲೋಕ |
| 3. ಕಿಷ್ಕಿಂಧಾ ಪರ್ವ | 214 | ಶ್ಲೋಕ |
| 4. ಕಿಷ್ಕಿಂಧಾ ಕಾಂಡ | 573 | ಶ್ಲೋಕ |
| 5. ಸುಂದರ ಕಾಂಡ | 705 | ಶ್ಲೋಕ |
| 6. ಯುದ್ಧ ಕಾಂಡ | 1298 | ಶ್ಲೋಕ |
| 7. ರಾಮಾಭಿಷೇಕ | 193 | ಶ್ಲೋಕ |
| 8. ಉತ್ತರ ಕಾಂಡ | 1263 | ಶ್ಲೋಕ |
| 9. ಕವಿಯಸ್ವಾಪದೇಶ | 9 | ಶ್ಲೋಕ |
| **ಒಟ್ಟು** | **6400** | **ಶ್ಲೋಕ** |

ಹೀಗೆ ವಾಲ್ಮೀಕಿಯ ರಾಮಾಯಣದ 24000 (ಇಪ್ಪತ್ತನಾಲ್ಕು ಸಾವಿರ) ಶ್ಲೋಕ ಸಂಖ್ಯೆಯನ್ನು ಆರು ಸಾವಿರಕ್ಕಿಳಿಸಿದರೂ ಮಂಜರಿಯಲ್ಲಿ ರಾಮಾಯಣವು ಹಿಗ್ಗಿನಿಂದ ಹಿಗ್ಗಿರುವಂತಿದೆ. "ಪಾದಶೇಷ" ನಾಲ್ಕನೆಯ ಒಂದರಷ್ಟಕ್ಕೆ ಭಟ್ಟಿ ಇಳಿಸಿದ ರಸಪಾಕ ಶ್ರೀಕ್ಷೇಮೇಂದ್ರನ ಈ ಸಾಹಿತ್ಯ ಪರಮೌಷದ.

ವಾಲ್ಮೀಕಿಯು ಬಾಲಕಾಂಡದಲ್ಲಿ ಹೇಳಿದ್ದೆಲ್ಲ ಅಯೋಧ್ಯಾ ಕಾಂಡದ ಮೊದಲ ಭಾಗಕ್ಕೆ ಸೇರಿ ದಶರಥ ವಿಪತ್ತಿನವರೆಗೆ ಮಂಜರಿಯಲ್ಲಿ ಅಯೋಧ್ಯೆಯ ಪುರವಣಿಯಾಗಿದೆ. ರಾಮನ ವನವಾಸಕ್ಕೆ ಕಾರಣವಾದ ಹಿನ್ನೆಲೆಯಲ್ಲಿ ಇಲ್ಲಿ ಅರಣ್ಯ ಪರ್ವಕ್ಕೆ ಸೇರಿದೆ. ಕಾಂಡವೆಂದರೆ ದೊಡ್ಡ ಕೊಂಬೆ ಅದರ ಗಿಣ್ಣುಗಳು ಪರ್ವಗಳು ವಾಲ್ಮೀಕಿ ರಾಮಾಯಣದಲ್ಲಿ ದಂಡಕಾರಣ್ಯ ಪ್ರವೇಶದಿಂದ ಅರಣ್ಯಕಾಂಡ ಆರಂಭ. ಕ್ಷೇಮೇಂದ್ರನ ಸಮಕಾಲಿಕ ಭೋಜರಾಜನ ಚಂಪೂ ರಾಮಾಯಣವೂ ವಾಲ್ಮೀಕಿಯ ವಿಭಾಗಕ್ಕೆ ಸರಿಯಾಗಿದೆ ಕರ್ಣಾಟಕ ಕವಿಚೂತವನ ಚೈತ್ರ ಎಂಬ ಹೆಗ್ಗಳಿಕೆಯ ದೇವನೂರಿನ ಲಕ್ಷ್ಮೀಶ ಮಹಾಕವಿಯೂ ಕೂಡ "ದುರ್ಧರದರಣ್ಯ ಪ್ರವೇಶಯಂ ಮಾಡಿದಂರಾವಣಾಂ" ಎಂದೇ ಹೇಳಿ ದಂಡಕಾರಣ್ಯ ಪ್ರವೇಶದಿಂದ ಅರಣ್ಯಕಾಂಡ ಎನ್ನುತ್ತಾನೆ 'ಪರ್ವ' ಎಂದು ಬಿಡಿಸಿದ್ದು ಕ್ಷೇಮೇಂದ್ರನ ಔಚಿತ್ಯಪೂರ್ಣ ವಿಭಾಗ. ಸಾಹಿತ್ಯ ಕ್ಷೇತ್ರದಲ್ಲಿ ಕ್ಷೇಮೇಂದ್ರನದು "ಔಚಿತ್ಯ ಸಿದ್ಧಾಂತ" ಸರ್ವಸಮಾನ್ಯ.

ಭರತನನ್ನು ಕೇಕೆಯ ದೇಶದಿಂದ ಕರೆತರುವ ಪ್ರಸಂಗದಿಂದಲೇ ರಾಮಾಯಣ ಮಂಜರಿಯಲ್ಲಿ ಅರಣ್ಯ ಪರ್ವದ ಆರಂಭ.

8. [ಹೀಗೆ ಸೀತಾ ವಿಯೋಗದಿಂದ ವಸನ್ತ ಋತುವಿನ ಮಲಯ ಮಾರುತಕ್ಕೆ ಸಿಕ್ಕಿ ಅಳುತ್ತಿದ್ದರೂ, ಧೀರನಾಗಿ ಧನುರ್ಧಾರಿಯಾದ

ರಾಮನ ಜತೆಗೆ ಲಕ್ಷ್ಮಣನೂ ಇರುವುದನ್ನು ಕಂಡು, ಸುಗ್ರೀವನು ಗಾಬರಿಗೊಳ್ಳುವವರೆಗೆ ಅರಣ್ಯಕಾಂಡದ ಔಚಿತ್ಯ. ಇದು ಆರಣ್ಯಪರ್ವ.

ಇಲ್ಲಿಂದ ಮುಂದೆ ಕಿಷ್ಕಿಂಧಾ ಪರ್ವ ಸುಗ್ರೀವ ಪಟ್ಟಾಭೀಷೇಕದವರೆಗೆ, ಅಲ್ಲಿಂದ ಸಾಗರಲಂಘನ, ಹನುಮಂತ ಲಂಕೆಯ ಹೊರಗೆ ಪ್ರಲಂಬಾಸ್ಯ ಗಿರಿಯ ಶಿಖರದ ಅಡಿಯಲ್ಲಿ ಇಳಿದು, ತನ್ನ ಬೃಹದಾಕಾರವನ್ನು ಸಣ್ಣದಾಗಿಸಿಕೊಂಡವರೆಗೆ ಕಿಷ್ಕಿಂಧಾಕಾಂಡ.

ಇಲ್ಲಿಂದ ಮುಂದೆ ಲಂಕೆಯಲ್ಲಿ ನಡೆದ ಹನುಮಂತನ ಪರಾಕ್ರಮ, ಅಲ್ಲಿಂದ ಹಿಂದಿರುಗಿ ಬಂದುದು, ಸುಗ್ರೀವ ಸೈನ್ಯದೊಡನೆ ರಾಮ ಲಕ್ಷ್ಮಣರು ದಕ್ಷಿಣ ಸಮುದ್ರರ ತೀರ ಸೇರಿದುದು, ಸೀತೆಯ ಬಗ್ಗೆ ರಾಮನ ಆಶೋತ್ತರ, ಹೀಗೆ ಇಲ್ಲಿಯವರೆಗೆ ಸುಂದರಕಾಂಡ, ವಿರಹಿಗಳಿಗೆ ಮಾನಸಿಕವಾಗಿ ಸುಂದರ ಸಮಾಗಮ. ಭೌತಿಕ ದೇಹ ಸಮಾಗಮಕ್ಕಿಂತ ಮಾನಸಿಕ ದಂಪತಿ ಸಮಾಗಮಕ್ಕೆ "ಸುಂದರ" ಎಂಬ ಹೆಸರು ಪುರಾಣಾಗಮಗಳಲ್ಲಿದೆ. ಹೀಗೆ ಇದು ಔಚಿತ್ಯ ಪೂರ್ಣವಾದ ಸುಂದರಕಾಂಡ.

ಇಲ್ಲಿಂದೆ ಮುಂದೆ ರಾವಣನ ತಾಯಿ ತನ್ನ ಚಿಕ್ಕಮಗ ವಿಭೀಷಣನಿಗೆ ತಿಳಿಸಿ ರಾವಣನಿಗೆ ಬುದ್ಧಿಹೇಳು ಎಂದ ವಿಷಯದಿಂದ ಆರಂಭವಾಗಿ ರಾವಣವಧೆಯವರೆಗೆ ಲಂಕಾಕಾಂಡ ಎನ್ನಬಹುದಾದ ಯುದ್ಧ ಕಾಂಡ. ರಾಮಾಯಣಕ್ಕೆ ವಾಲ್ಮೀಕಿ ಮೊದಲು "ರಾವಣವಧ" ಎಂದು ಹೆಸರಿಟ್ಟಿದ್ದು ಇಲ್ಲಿ ಗಮ್ಯ. ರಾಮಾಭಿಷೇಕವು ವಿಭೀಷಾಣಾಭಿಷೇಕದಿಂದ ಶಾಸ್ತ್ರೀಯವಾಗಿ ಆರಂಭವಾಗಿ ಮುಗಿಯುವುದು. ಇದು ಯುದ್ಧ ಕಾಂಡವಲ್ಲ. ಇದು ರಾಮಾಯಣ ಮಂಜರಿಯ ಏಳನೆಯ ಭಾಗ ಎಂಬುದು ಕ್ಷೇಮೇಂದ್ರನ ಔಚಿತ್ಯ ವಿಚಾರ.

ಇಲ್ಲಿಂದ ಮುಂದೆ ಉತ್ತರಕಾಂಡ ರಾಮನು ಸಪರಿವಾರನಾಗಿ ಸರಯೂ ನದಿಯಲ್ಲಿ ಮಹಾಪ್ರಸ್ಥಾನ ಯಜ್ಞ ಸಫಲವಾಗಲು ಸಂಕಲ್ಪ ಪೂರ್ವಕ ಧರ್ಮ ರೀತಿಯಿಂದ ಸ್ವರ್ಗಾರೋಹಣ ಮಾಡಿದುದು. ಇದರ ಮಧ್ಯೆ ರಾಮರಾಜ್ಯದ ಹಿರಿಮೆಯ ಅಶ್ವಮೇಧ ಯಜ್ಞದ ವಿರಾಮ ಕಾಲದಲ್ಲಿ ಅಗಸ್ತ್ಯ ಮುಂತಾದ ಋಷಿಗಳು ಹೇಳಿದ ಪ್ರಾಚೀನ ಇತಿಹಾಸಗಳು. ರಾವಣನ ಚರಿತ್ರೆಯೇ ಇದರಲ್ಲಿ ಮುಖ್ಯ. ಹೀಗೆ ಹನುಮಂತನ ವಿಷಯ ಇತ್ಯಾದಿ ಪೂರಕ ಅಂಶಗಳೆಲ್ಲವೂ ಇಲ್ಲಿ ಸಂಗೃಹೀತವಾಗಿವೆ ಚಂದ್ರವಂಶದರಾಜರ ಚರಿತ್ರೆಯೂ ಇದೆ. ಸೀತೆಯ ವಸುಧಾ ಪ್ರವೇಶ, ರಾಮನ ಆಂತರ್ಯ. ಇಲ್ಲಿಗೆ ಅಶ್ವಮೇಧ ಪ್ರಕರಣ ಮುಗಿಯುತ್ತದೆ.

ಮುಂದೆ ರಾಮರಾಜ್ಯದ ವಿಸ್ತರಣೆ, ಯುವರಾಜ ಭರತ ಮುಂತಾದವರಿಂದಾದ ಚರಿತ್ರೆಗಳಲ್ಲಿದೆ. ಇದು ಪ್ರಾಚ್ಯದೇಶವೆನಿಸಿದ ಅಯೋಧ್ಯೆಯ ರಾಜ್ಯ ಪಶ್ಚಿಮಭಾರತ ಭಾಗ ಮತ್ತು ಇಂದಿನ ಇರಾಕ್ ಇರಾನ್‌ವರೆಗೂ ಬಿಡಾಯಿಸಿದ್ದ ವಿಷಯ. ರಘು ಮಹಾರಾಜವಂಶದ ದಶರಥನ ಪೌತ್ರರ ಆಡಳಿತ ಸುರಾಜ್ಯ ಸ್ಥಾಪನೆ ಇಲ್ಲಿದೆ. ಈಅನಂತರ ರಾಮನು ಹಿಂದೆ ಸೀತೆಯನ್ನು ತ್ಯಾಗಮಾಡಬೇಕಾಗಿ ಬಂದಂತೆ ಲಕ್ಷ್ಮಣನನ್ನೂ ತ್ಯಾಗಮಾಡಬೇಕಾದ ದೂರ್ವಾಸಮುನಿ ಪ್ರಸಂಗ, ಅನಂತರ ರಾಮನು ತನ್ನ ದಿವ್ಯ ಲೋಕಕ್ಕೆ ಹೋಗಿ ಸೇರಿದುದು, ಇದಿಷ್ಟು ರಾಮಪಟ್ಟಾಭಿಷೇಕಾನಂತರ ಉತ್ತರ ಕಾಂಡದಲ್ಲಿ ಇರುವ ವಿಷಯ. ಇಲ್ಲಿಗೆ ಉತ್ತರಕಾಂಡ ಸಮಾಪ್ತಿ.

ಇಲ್ಲಿಂದ ಮುಂದೆ ಕ್ಷೇಮೇಂದ್ರನ ಸ್ವಂತ ವಿಷಯಗಳು ಒಂಬತ್ತು ಶ್ಲೋಕಗಳಲ್ಲಿ ನಡೆದು ರಾಮಾಯಣ ಸಾರವಾದ ನೀತಿಯಿಂದ "ರಾಮಾಯಣ ಮಂಜರಿ" ರಾಮಾಯಣ ಕಥಾಸಾರ ಮುಗಿಯುತ್ತದೆ.]

27.12.2017

ರಾಮಾಯಣ ಮೂಲಗ್ರಂಥದ ಈಗ ಪ್ರಚಲಿತವಿರುವ ಪಾಠಗಳಲ್ಲಿ ರಾಮಾಯಣ ಕಾಲದಲ್ಲಿದ್ದ ಎಷ್ಟೋ ವಿಷಯಗಳು ಜಾನಪದ ಜೀವಿಗಳ ಅರಣ್ಯಕಜೀವಿಗಳ ಸ್ವಭಾವದಿಂದ ಹಿಡಿದು ಉತ್ತಮ ವೇದಾಂತ ತತ್ವ ನಿರ್ಣಯಗಳವರೆಗೆ ಇರುವಂತೆಲ್ಲ ನಿರೂಪಿತವಾಗಿವೆ. ಇಂದಿನ ನಮ್ಮ ಪರಿಸರ ಸಂಸ್ಕಾರ ಸಂಪನ್ನ ಬುದ್ಧಿಗೆ ಹೊಂದದ ವಿಷಯಗಳೂ ಇವೆ. ಐತಿಹಾಸಿಕವಾಗಿ ದಾರ್ಶನಿಕವಾಗಿ ಕಾವ್ಯರಸಾನುಭೂತಿಯೊಳಗೆ ಇವುಗಳನ್ನು ಮನನ ಮಾಡಲು ರಾಮಾಯಣವು ಹೇಗೆ ಒಂದು ಪ್ರಾಚೀನ ಸಾಧನವಾಗಿದೆ ಎಂಬುದನ್ನು ಮನೋಹರವಾದ ತನ್ನದೇ ಶಬ್ಧ

ಅರ್ಥ ಅಲಂಕಾರಯುಕ್ತವಾದ ಶೈಲಿಯಲ್ಲಿ ವಸ್ತುವಿನ್ಯಾಸಕ್ಕೆ ಭಂಗ ಬರದಂತೆ ಮೂಲಭಾಷೆಯಾದ ಸಂಸ್ಕೃತದಲ್ಲೇ ನಿರೂಪಿಸಿರುವುದು ಸರಸ್ವತೀ ಪೀಠದಿಂದ ಮಹಿಮೆಗೊಂಡ ಕಾಶ್ಮೀರ ಪಂಡಿತರ ಒಂದು ಶುದ್ಧ ಮಾದರಿಯ ರಸಿಕ ವಿದ್ವಾಂಸ ಕ್ಷೇಮೇಂದ್ರನ ಹಿರಿಮೆ.

ರಾಮಾಯಣವು ಜಗತ್ತಿನಲ್ಲಿ ನಡೆದುಹೋದ ಒಂದು ಲೀಲೆ. ಇದೊಂದು 'ಕಣ್ಣಾಮುಚ್ಚಾಲೆ' ಮಕ್ಕಳಾಟ ಎಂಬಂತೆ ಕರ್ನಾಟ ಜನಪದ ಕನ್ನಡದ ವಚನವು ಒಗಟೆಯಾಗಿ ತಿಳಿಸುತ್ತದೆ:-

**ಕಣ್ಣಾಮುಚ್ಚೆ, ಕಾಡೇಗೂಡೆ,**
**ಉದ್ದಿನ ಮೂಟೆ, ಉರುಳೇ ಹೋಯ್ತು**
**ನಮ್ಮಕ್ಕಿ ನಿಮ್ಮಕ್ಕಿ, ಹಿಡಿದುಕೊಳ್ಳಿರೋ,**

ಇದೊಂದು ಹಳೆಯ ಮಕ್ಕಳಾಟದ ಹಾಡು

ರಾಮನಿಗೆ ಯುವರಾಜ್ಯಪಟ್ಟಾಭಿಷೇಕ ಪ್ರಜೆಗಳ ಇಷ್ಟದಂತೆ ದಶರಥ ಏರ್ಪಡಿಸಿದ. ನಾಳೆಯೇ ಪಟ್ಟಾಭಿಷೇಕ ಎಂದಾಗ ಮೊದಲ ರಾತ್ರಿ ಅಯೋಧ್ಯೆಯ ಜನ ನೆಮ್ಮದಿಯಿಂದ ಕಣ್ಮುಚ್ಚಿ ನಿದ್ದೆ ಮಾಡಿದರು. ಮಾರನೆಯ ದಿನ ದಶರಥನ ಇಷ್ಟ ನೆರವೇರಲಿಲ್ಲ ದಶರಥನೂ ಕಣ್ ಮುಚ್ಚಿದ. ಇದೇ ಕಣ್ಣಾಮುಚ್ಚೆ ಕಾಡೇಗೂಡೆ ಎಂಬುದು ಮಕ್ಕಳು ಬದಲಿಸಿ ಹೇಳುವ ಶಬ್ಧಗಳು ಕಾಡೇ ಕೂಡೆ ಎಂಬುದು ಮೂಲಶಬ್ಧ. ಇಲ್ಲಿ ರಾಮನಿಗೆ ಕಾಡೇ ಕೂಡಿಕೊಳ್ಳುವಂತಾಯಿತು ಎಂದು ಅರ್ಥ ಮಾತ್ರವಲ್ಲ ಭರತ ಅಯೋಧ್ಯೆಗೆ ಬಂದಾಗ ದಶರಥ ರಾಮಲಕ್ಷ್ಮಣ ಸೀತೆಯರು ಇಲ್ಲದ ಕಾರಣ ಅಯೋಧ್ಯೆ ಸುಡುಗಾಡಿನಂತಾಗಿತ್ತು ಎಂಬುದೂ ರಾಮಾಯಣ ವರ್ಣಿತ ಅರ್ಥ... ಉದ್ದಿನ ಮೂಟೆ ಎಂದರೆ ಉದ್ದಿನಕಾಳಿನ ರಕ್ಷಣೆಗಾಗಿ ಮಾಡಿದ ಪೆಟ್ಟೆ ಹುಲ್ಲಿನಿಂದ ಮಾಡಿದ ಮೂಟೆ. ಉರುಳಿಯೇ ಹೋಯಿತು. ಬಿದ್ದು ಹಾಳಾಯ್ತು ಎಂಬ ಮಾತು ರಾವಣನು ರಣರಂಗದಲ್ಲಿ ಸತ್ತು ಬಿದ್ದ ವಿಷಯ. ರಾವಣ ಹೇಗಿದ್ದ? ಉದ್ದಿನ ಕಾಳಿನ ರಾಶಿಯಂತಿದ್ದ ಎಂಬ ಚಿತ್ರಣ ವಾಲ್ಮೀಕಿ ರಾಮಾಯಣದಲ್ಲೇ ಇದೆ. "ಮಾಷರಾಶಿ ಪ್ರತೀಕಾಶಂ" ಕಾಗೆಗಿಂತ ಕಪ್ಪಗೆ ಇದ್ದ ರಾವಣ ಹೊಳೆಯುವ ಆಭರಣ ಆಯುಧಗಳ ಧಾರಣೆಯಿಂದ ಬಿಳೀ ಪಟ್ಟೆಗಳನ್ನು ಉದ್ದಿನಕಾಳಿನ ಬಾಯಿಯ ಬಿಳೀ ರೇಖೆಗಳಂತೆ ಹೊಂದಿದ್ದ ಎನ್ನೂವುದು ವಾಲ್ಮೀಕಿಯ ಜಾನಪದ ಪ್ರಸಿದ್ಧ ಉಪಮಾನ. ಇಂದಿನ ನಮಗೆ ನಗರೀಕರಣದಿಂದಾಗಿ ಉದ್ದಿನಕಾಳಾಗಲಿ ಮೂಟೆಯಾಗಲಿ ಸುಲಭವಾಗಿಲ್ಲ. ಈಗ ನಮ್ಮಕ್ಕಿ ನಿಮ್ಮಕ್ಕಿ ಎಂದರೆ ನಮ್ಮ ಹಕ್ಕಿ ನಿಮ್ಮ ಹಕ್ಕಿ. ರಾಮಾಯಣದಲ್ಲಿ ನಿಜವಾದ ತಾತ್ವಿಕ ದಾರ್ಶನಿಕ ಭಾಷೆಯಲ್ಲಿ ಹೇಳುವುದಾದರೆ ಜೀವಾತ್ಮ ಪರಮಾತ್ಮಗಳು. ಸೀತಾರಾಮರೇ ಇಲ್ಲಿ ಹಕ್ಕಿಗಳು. ಕಣ್ಣಾಮುಚ್ಚಾಲೆ ಆಟದಲ್ಲಿ ಕಣ್ಣು ಮುಚ್ಚಿಕೊಂಡೇ ಆಟದ ಇತರರನ್ನು ಸ್ಪರ್ಶದಿಂದ ಹಿಡಿಯಬೇಕು. ಮನೋಬಲ ಗುರುತಿಸುವ ಶಕ್ತಿ ಮತ್ತು ದಿಕ್‌ಜ್ಞಾನ ಸೂಕ್ಷ್ಮ ಸದ್ದು ನೆರಳುಗಳನ್ನು ಗಮನಿಸುವುದು ಇದೆಲ್ಲ ಬೇಕು. ಎರಡು ಪಂಗಡವಾಗಿರುವ ಆಟದ ಮಕ್ಕಳಲ್ಲಿ ಯಾರನ್ನೂ ಬೇಕಾದರೂ ಹಿಡಿಯಬಹುದು. ನಾವು ರಾಮಾಯಣದಲ್ಲಿ ರಾಮನ ಪಕ್ಷವೋ ಸೀತೆಯ ಪಕ್ಷವೋ ತೀರ್ಮಾನವಾಗಬೇಕು. ನಿಜವಾಗಿ ವಾಲ್ಮೀಕಿ ಸೀತೆಯ ಪಕ್ಷ, ಮಿಥಿಲಾನಗರದ ಜನ ಸೀತೆಯ ಪಕ್ಷ. ಅಯೋಧ್ಯೆಯ ಜನ ರಾಮನ ಪಕ್ಷ. ಭೂಮಿಯಲ್ಲಿ ರಾಷ್ಟ್ರದಲ್ಲಿ ಸೀತೆಯ ಧೈರ್ಯ, ಸತ್ಯ ಸರಳತೆ, ನೀತಿಗಳು ನಮಗೆ ಮಾದರಿಯಾಗಿರಬೇಕು. ಎಂಬುದೇ ವಾಲ್ಮೀಕಿಯ ಉದ್ದೇಶ್ಯ. ರಾಮನ ಆದರ್ಶ ಅನುಸರಿಸುವುದು ಕಷ್ಟ. ಅದು ಮಿಶ್ರ. ಸೀತೆಯ ಆದರ್ಶ ಪರಿಶುದ್ಧ. ಇಂತಹ ವಿವೇಕ ರಾಮಾಯಣ ಕಥಾಸಾರವಾದ ಮಂಜರಿಯ ಅಧ್ಯಯನದಿಂದ ನಮಗೆ ಬರಲಿ ಎಂಬುದು ಕ್ಷೇಮೇಂದ್ರನ ಕೊನೆಯ ಮಾತು.

**ಇತಿ ದುರಿತ ವಿರಾಮಃ, ಕೀರ್ತಿಕಾನ್ತಾಭಿರಾಮಃ, ।**
**ಸುಜನ ಹೃದಯರಾಮಃ, ಕೋಽಪ್ಯಭೂಧ್‌ಯಸ್ಸ ರಾಮಃ ॥**

**ಪ್ರಕೃತ ಮನುಸರಾಮಃ, ಪಾಪಪಾಶಂ ತರಾಮಃ, ।**
**ಸುಕೃತ ಭುವಿ ಚರಾಮಃ, ತಸ್ಯನಾಮ ಸ್ಮರಾಮಃ ॥**

ರಾಮ ಇದ್ದ ಹೋದ, ಅವನ ಕೀರ್ತಿ ಇಲ್ಲಿ ಉಳಿದಿದೆ ಸಜ್ಜನರ ಹೃದಯದಲ್ಲಿ ಅವನು ನೆಲೆಸಿದ್ದಾನೆ. ಈಗ ನಾವು ಸೀತೆಯ ತಾಯಿಯೆನಿಸಿದ ಈ ಪುಣ್ಯ ಭೂಮಿಯಲ್ಲಿ ಸಂಚರಿಸುತ್ತ ಬಾಳೋಣ, ನಮ್ಮ ಪಾಪದ ಬಂಧಗಳನ್ನು ಕಳೆಯೋಣ. ಅದಕ್ಕಾಗಿ ರಾಮ ನಾಮ ಸ್ಮರಣೆ ಮಾಡೋಣ ಹೀಗೆ ಯಾವಾಗಲೂ ರಾಮಸ್ಮರಣೆಯಲ್ಲೇ ಇದ್ದ

ಸೀತೆಯ ಚರಿತ್ರೆ ಇದು. ನಮ್ಮ ಹಕ್ಕಿ ಇಲ್ಲಿ ಸೀತೆ, ನಿಮ್ಮ ಹಕ್ಕಿ ಅಲ್ಲಿ ರಾಮ. ವಿಶ್ವದ ಈ ಕಣ್ಣಾಮುಚ್ಚಾಲೆ ಆಟ ನಡೆಯುತ್ತಲೇ ಇದೆ ಇದರಲ್ಲಿ ನಿಮಗೆ ವಿವೇಕ ಬರಬೇಕು. ಬರಲಿ.

**"ತದಸ್ತು ಭವತಾಂ ಶ್ಲಾಘ್ಯೋ ವಿವೇಕೋದಯಃ"**

ಮಂಜರಿಯ ಉತ್ತರ ಕಾಂಡದ ಸ್ವರ್ಗಾರೋಹಣ ಪರ್ವದ ೧೨೬೩ನೇ ಪದ್ಯ ಮತ್ತು ಅನುಬಂಧ ೧ ನೇ ಪದ್ಯ

**ಸವಃಪುನಾತು ವಾಲ್ಮೀಕೇಃ (ಕಿಃ)**
**ಸೂಕ್ತಾಮೃತ ಮಹೋದಧಿಃ ।**
**ಓಂಕಾರ ಇವ ವರ್ಣಾನಾಂ**
**ಕವೀನಾಂ ಪ್ರಥಮೋಮುನಿಃ** (ಅನುಬಂಧ ೨)

ಆದೌ ರಾಮ ತಪೋವನಾಭಿನಮನಂ, ಹತ್ವಾಮೃಗಂ ಕಾಂಚನಂ
ವೈದೇಹೀಹರಣಂ, ಜಟಾಯುಮರಣಂ, ಸುಗ್ರೀವ ಸಂಭಾಷಣಂ
ವಾಲೀನಿಗ್ರಹಣಂ, ಸಮುದ್ರತರಣಂ, ಲಂಕಾಪುರೀದಾಹನಂ, ಪಶ್ಚಾದ್
ರಾವಣಕುಂಭಕರ್ಣಹನನಂ, ಚೈತದ್ಧಿ ರಾಮಾಯಣಂ.

(ಪ್ರಾಚೀನ ಪದ್ಯ)

ಈ ಪದ್ಯವೂ ರಾಮಾಯಣ ಸಂಗ್ರಹ. ವಜ್ರರತ್ನದ ಪಟ್ಟೆಗಳಂತೆ ವಿವಿಧವಾದ ಅರ್ಥಗಳು ಇಲ್ಲಿ ಸಂಗ್ರಹವಾಗಿ ಹೊಳೆಯುತ್ತದೆ.

೧. ತಪೋವನಾಭಿಗಮನ ವಿಶ್ವಾಮಿತ್ರರೊಡನೆ ರಾಮ ಲಕ್ಷ್ಮಣರು ಕಾಡಿಗೆ ಹೋದುದು ಕೈಕೇಯಿಯ ಮಾತಿನಿಂದ ತಪಸ್ವಿಯಾಗಿ ೧೪ ವರ್ಷ ಇರಲು ಕಾಡಿಗೆ ಹೋದುದು. ಋಷಿಗಳ ಮಾತಿನಂತೆ ದಂಡಕಾರಣ್ಯ ಪ್ರವೇಶ ಮಾಡಿದುದು, ಕಿಷ್ಕಿಂಧೆಯ ಹೊರಗೆ ಅಭಿಮತವಾದ ಗಿರಿಕಾನನದಲ್ಲಿ ವಾಸವಿದ್ದುದು ಇದಿಷ್ಟೂ ಇಲ್ಲಿ ಸಂಗೃಹೀತ.

೨.&೩.ಈ ವನವಾಸದ ಮಧ್ಯೆ ಚಿನ್ನದ ಜಿಂಕೆಯನ್ನು ವಧಿಸಿದುದು, ಈ ಸಮಯದಲ್ಲಿ ವಿದೇಹರಾಜನ ಮಗಳಾದ ಸೀತೆಯನ್ನು ರಾವಣ ಅಪಹರಿಸಿದ್ದು

೪. ಜಟಾಯು ಮರಣಂ ನ್ಯಾಯಮಾರ್ಗದಲ್ಲಿರುವರಿಗೆ ಪ್ರಾಣಿ ಪಕ್ಷಿಗಳೂ ಸಹಾಯ ಮಾಡುತ್ತವೆ ಎಂಬ ರಾಮಾಯಣ ಸಾರಾಂಶ ಇದು.

೫. ಸುಗ್ರೀವ ಸಂಭಾಷಣೆ ಹನುಮಂತನ ಮಾತಿನ ವೈಖರಿಯಿಂದ ಬೆರಗಾದ ರಾಮ ಸುಗ್ರೀವ ಸಖ್ಯ ಮಾಡಿದುದು

೬. ವಾಲೀ ನಿಗ್ರಹಣ ನಿಗ್ರಹವೆಂದರೆ ಶಿಕ್ಷೆ ಕೊಟ್ಟು ತಪ್ಪಿತಸ್ತರ ತಪ್ಪನ್ನು ಪರಿಹರಿಸುವುದು. ಇಲ್ಲಿ ವಾಲಿಯವಧೆ ಮುಖ್ಯವಲ್ಲ, ವಾಲಿಯ ಕೆಟ್ಟ ಅಭಿಪ್ರಾಯಗಳನ್ನು ಮೆಟ್ಟ ಹಾಕಿದುದು ಮುಖ್ಯ. ವಾಲಿನ್ ಎಂಬ ಶಬ್ಧ ಸಮಾಸದಲ್ಲಿ ವಾಲಿ ನಿಗ್ರಹಣ ಎಂದಾಗಬೇಕು ಇಲ್ಲಿ ವಾಲಿ ವಾಲಿಯ ಇ ಎಂದರೆ ಕಾಮನೆ ಕೆಟ್ಟಭಾವನೆ ಎಂದರ್ಥ.ಅಃ=ವಿಷ್ಣುಃ, ಇಃ=ಕಾಮಃ, ಉಃ=ಶಿವಃ, ಈಃ=ಲಕ್ಷ್ಮೀಃ, ಕಃ=ಚತುರ್ಮುಖ ಬ್ರಹ್ಮಾ ಎಂಬಂತಹ ಬೀಜಾಕ್ಷರ ನಿಘಂಟು ಕೋಶ ನೆರವಾಗುತ್ತದೆ.

ಈ ಅರ್ಥ ರಾಮಾಯಣಮಂಜರಿಯಲ್ಲಿ ಸ್ಪಷ್ಟವಾಗಿದೆ. ವಾಲ್ಮೀಕಿಯು ಇದನ್ನು ಒಂದೇ ಶ್ಲೋಕದಲ್ಲಿ ಒಗಟಿನಂತೆ ಹೇಳಿದ್ದಾರೆ
ರಾಮಾಯಣದ ಶ್ಲೋಕ

**ಸೂಕ್ಷ್ಮ ಪರಮದುರ್ಜ್ಞೇಯಃ ಸತಾಂ ಧರ್ಮ ಪ್ಲವಂಗಮ! ।**
**ಹೃದಿಸ್ಥಃ ಸರ್ವಭೂತಾನಾಂ ಆತ್ಮಾವೇದ ಶುಭಾಶುಭಂ ॥**
ಕಿಷ್ಕಂ 18–15

ಮಂಜರಿಯಲ್ಲಿ:–

**ಔಚಿತ್ಯ ಚಾರುಚರಿತೇ ಶಚ್ಚಾಮೇ ನಾಭವತ್ ಕ್ವಯಿ** ॥ 168.
**ವಾಲೀವಿಗಲಿತ ಕ್ರೋಧಃ ಕ್ಷಮ್ಯತಾಮಿತ್ಯುವಾಚತಂ** ॥
ಕಿಷ್ಕಿಂಧಾಪರ್ವ 179]

ಹೀಗೆ ವಾಲಿ ಸಾಯುವ ಮುಂಚೆ ರಾಮನಲ್ಲಿ ತನ್ನ ತಪ್ಪಿಗಾಗಿ ಕ್ಷಮೆ ಬೇಡಿದ ಎಂಬ ಸ್ಪಷ್ಟವಾದ ಮಾತು ಮಂಜರಿಯಲ್ಲಿದೆ. ಈ ಅಂಶ ವಾಲ್ಮೀಕಿಯ ಶ್ಲೋಕದಲ್ಲಿ ರಾಮ ವಾಲಿ ಇಬ್ಬರ ಸಂವಾದ ರೂಪದಲ್ಲಿದ್ದು "ಆತ್ಮಾ ಅಶುಭಂ ವೇದ" ಎಂಬ ಅಂಶದಿಂದ ವಾಲಿಯ ತಪ್ಪೊಪ್ಪಿಗೆ ಇರುವುದನ್ನು ಸಂಪ್ರಾದಾಯ ವಿದ್ವಾಂಸರು ತಿಳಿಸುತ್ತಾರೆ. ಇಂತಹ ಸೂಕ್ಷ್ಮ ಒಗಟುಮಾತು ಬಿಡಿಸಿ ಸ್ಪಷ್ಟಪಡಿಸುವ ಕ್ಷೇಮೇಂದ್ರನ ಸೂಕ್ತಿ ಬಹಳ ಮುಖ್ಯವಾದುದು.

೭. ಸಮುದ್ರತರಣ ಹನುಮಂತ ಮಾಡಿದ್ದು ಸೇತುವಿನ ಮೂಲಕ ರಾಮಾದಿಗಳು ಮಾಡಿದ್ದು ಮತ್ತೆ ಪುಷ್ಪಕ ವಿಮಾನದ ಮೂಲಕ ಸಮುದ್ರ ದಾಟುತ್ತಾ ಸೀತೆಗೆ ರಾಮ ಎಲ್ಲ ತೋರಿಸಿದುದು ತ್ರಿಕಾಲ ಚರಿತೆಯಾ ಸಂಗೃಹೀತ.

೮. ಲಂಕಾಪುರೀ ದಾಹನಂ ಹನುಮಂತ ಮಾಡಿದ್ದು ಯುದ್ಧದಲ್ಲಿ ವಾನರ ಸೈನ್ಯ ರಾಮಾಸ್ತ್ರಗಳು ಮಾಡಿದ್ದು.

೯. ರಾವಣ ಕುಂಭಕರ್ಣಹನನಂ ರಾವಣ ಕುಂಭಕರ್ಣರಿಗೆ ರಾಮಾನುಗತಿ ಕಾಣಿಸಿದುದು.

೧೦. ಚ = ಇವುಗಳೊಡನೆ ರಾಮಾಭಿಷೇಕಾದಿಗಳು ಉತ್ತರಕಾಂಡ ವೃತ್ತಾಂತಗಳು ಎಲ್ಲವೂ, ಹಿ = ಪ್ರಸಿದ್ಧವಾದ ರಾಮಾಯಣಂ= ರಾಮಾಯಣ ಗ್ರಂಥದ ವೃತ್ತಾಂತಗಳ ಪಟ್ಟಿಕೆ.

[ನಮ್ಮ ಕನ್ನಡನಾಡಿನ ಪ್ರಖ್ಯಾತ ಸರಸಕವಿ ಕುಮಾರವ್ಯಾಸ ತಿಣುಕಿದನು ಪುಣಿರಾಯ ರಾಮಾಯಣಗಳ ಭಾರದಲಿ ಎಂದು ಹೇಳಿದ ಮಾತು ನಿಜ. ರಾಮಾಯಣ ಕಥೆಯನ್ನು ತಮ್ಮಿಷ್ಟಕ್ಕೆ ಬಳಸಿಕೊಂಡು ಲಕ್ಷಕ್ಕಿಂತ ಹೆಚ್ಚು ರಾಮಾಯಣ ಕಾವ್ಯನಾಟಕ, ಯಕ್ಷಗಾನ, ಹರಿಕಥೆ, ಗದ್ಯ ಪದ್ಯ ಭಾಷಾಂತರ ಪ್ರಬಂಧಗಳು ವಿಶ್ವದಲ್ಲಿ ಈ ಭೂಮಿಯ ಮೇಲೆ ಆಗಿವೆ. ನಾರದರೇ ಹೇಳುವಂತೆ ರಾಮಾಯಣವು ಮೂರು ಲೋಕಗಳಲ್ಲೂ "ಶತಕೋಟಿ ಪ್ರವಿಸ್ತರ" ಒಂದಕ್ಷರ ಹೇಳಿದರೂ ಮಹಾಪಾತಕನಾಶನ. ಹೀಗಿದ್ದರೂ ಕ್ಷೇಮೇಂದ್ರನ ರಾಮಾಯಣ ಮಂಜರಿ ಒಂದು ಮಾತ್ರ ಭೂಮಿಯನ್ನು ಹೊತ್ತ ಫಣಿರಾಯನಿಗೆ ಭಾರವಾಗಿಲ್ಲ. ಅವನ ಶಿರೋ ರತ್ನದಂತೆ ಅವನಿಗೆ ಒಪ್ಪವಾಗಿ ಪ್ರಕಾಶಿಸುತ್ತದೆ ಎಂದು ಓದಿದ ಯಾರಿಗಾದರೂ ಅನ್ನಿಸದೆ ಇರದು. ಕ್ಷೇಮೇಂದ್ರನ ಮಾತು ಒಂದೊಂದೂ ರತ್ನದಂತಹ ಅಮೂಲ್ಯವಾದುದು. ವಾಲ್ಮೀಕಿಯನ್ನು ಇವನು ಹೊಗಳುವಾಗ "ಸೂಕ್ತಾಮೃತ ಮಹೋದಧಿ" ಒಳ್ಳೆಯ ಮಾತುಗಳಿಗೆ ಹಾಲ್ಗಡಲಿನಂತೆ ಎನ್ನುತ್ತಾ. ಆ ಹಾಲ್ಗಡಲನ್ನು ಕಡೆದಾಗ ಬಂದ ಶ್ರೇಷ್ಠವಾದ ನಾನಾ ವಸ್ತುಗಳಂತೆ ಅವರವರಿಗೆ ಬೇಕಾದಂತೆ ಸ್ವೀಕರಿಸಬಹುದಾದ ಸೂಕ್ತಿಗಳು ಕ್ಷೇಮೇಂದ್ರನವು. ಇವುಗಳನ್ನು ಮುಂದೆ ಕೆಲವಾರು ಪ್ರಸಂಗಗಳೊಡನೆ ತಿಳಿಸಿಕೊಡಲಾಗುವುದು.]

ರಾಮಾಯಣ ಇತಿಹಾಸವು ಕಥಾ ರೂಪವನ್ನು ಪಡೆಯುವಾಗ ಶಾಪ ಮತ್ತು ವರಗಳೆರಡರ ಹೆಣಿಕೆಯಲ್ಲಿರುವ ಅಂಶವನ್ನೂ, ಈ ರಾಮಾಯಣ ಮಂಜರೀಕಾರ ಮರೆಯದೇ ತಿಳಿಸುತ್ತಾನೆ. ಇದರಿಂದ ಇತಿಹಾಸದಲ್ಲಾಗುವ ಅವಗಡಗಳಿಗೆ ಒಂದೊಂದು ಸಣ್ಣ ಕಾರಣಗಳು ಅಲ್ಲಲ್ಲಿ ಸಿಗುತ್ತವೆ. ಮನಸ್ಸು ಭೌತಿಕವಸ್ತು ಉಳಿದ ಇಂದ್ರಿಯಗಳಿಗಿಂತಲೂ ಪ್ರಬಲ. ತಿಳಿದ ವಿಷಯಗಳನ್ನೂ ಹೇಗೆ ಬೇಕಾದರೂ ಹಿಗ್ಗಿಸಲು, ಕುಗ್ಗಿಸಲು ಅದಕ್ಕೆ ಜೀವಿಗಳ ಜ್ಞಾನದ ಬೆಂಬಲವಿದೆ. ಶಾಪ ವರಗಳು ಇಂತಹ ಪ್ರಬಲ ಮನಸ್ಸಿನ ಶಕ್ತಿಗೆ ಅಧೀನವಾಗಿ, ನಮಗೆ ನೇರ ತಿಳಿಯಲಾಗದ ಕೆಲವು ಕಾರ್ಯಗಳನ್ನೂ ಮಾಡಿಸಿ ಬಿಡುತ್ತವೆ. ಇದು ಲೋಕಾನುಭವ ಮತ್ತು ಶಾಸ್ತ್ರಾನುಭವಗಳಲ್ಲಿ ಸಿದ್ಧವಾಗುತ್ತದೆ. ಎಲ್ಲವನ್ನೂ ತಮ್ಮಿಷ್ಟದಂತೆ ಅಲ್ಲಗಳೆಯುವ ಜನರಿಗೆ ಈಸತ್ಯ ತಿಳಿಯುವುದು ಕಷ್ಟ. ಈ ಸೂಕ್ಷ್ಮ ಕಾರಣಗಳಲ್ಲಿ ಕೆಲವು ಗಮನಿಸದೆ ಬಿಟ್ಟುಹೋದವು, ಕೆಲವು ಸ್ಪಷ್ಟವಾಗಿರುವುವು. ಈ ವರ ಮತ್ತು ಶಾಪಗಳಿಗೆ ಅಧೀನವಾಗಿ ವ್ಯಕ್ತಿಗಳು ಇಲ್ಲಿ ತಮ್ಮನ್ನು ಇತಿಹಾಸಕ್ಕೆ ಅರ್ಪಿಸಿಕೊಳ್ಳುತ್ತಾರೆ. ರಾಮನು ವರಕ್ಕೆ ಅಧೀನ ಮತ್ತು ವರಪ್ರದ. ದಶರಥ ಮುಂತಾದವರು ಶಾಪಗಳಿಗೆ ಸಿಕ್ಕಿಕೊಂಡವರು. ಹೀಗೆ ಯಾವುದಕ್ಕೂ ಸಿಲುಕದೆ ಇದ್ದವಳು ಸೀತೆ. ರಾಮನನ್ನು ಕರುಣಾಕಾಕುತ್ಸ್ಥನನ್ನಾಗಿಸಿದಾಳೆ ಸೀತೆ ಎಂಬುದು ನಿಚ್ಚಳ. ಕರುಣೆಯ ಸಾಕಾರ ಮೂರ್ತಿ ಸೀತೆ. ಹೀಗಾಗಿ ರಾಮಾಯಣವು ಸೀತೆಯ ಹಿರಿಯ ಇತಿಹಾಸ ಎಂದು ವಾಲ್ಮೀಕಿ ಹೇಳುವ ಮಾತು ಸತ್ಯ.

೧೧. ವಾಲಿಯ ಪತ್ನಿ ರಾಮನ ದಿವ್ಯ ಸಾಕ್ಷಾತ್ಕಾರ ಪಡೆದ ಮಹಾಮಾತೆಯರಲ್ಲಿ ಒಬ್ಬಳು. ಮಂಡೋದರಿಯಂತೆಯೇ ಇವಳು ಉತ್ತಮಳು. ತಾರೆ ರಾಮನಿಗೆ ನೀನು ಸೀತೆಯನ್ನು ನಿಜವಾಗಿ ಪಡೆದರೂ ಬಹುಕಾಲ ಅವಳೊಡನೆ ಬಾಳಲಾರೆ ಎಂದು

ಶಪಿಸಿದಳೆಂಬ ಮಾತು ಮೂಲರಾಮಾಯಣದಲ್ಲಿಲ್ಲ. ಮಂಜರಿಯಲ್ಲಿದೆ ಇದು ತಾರೆಯ ರಾಮ ಭಕ್ತಿಗೆ ಹೊಂದುವುದಿಲ್ಲ. ಈ ಭಾಗ ಪ್ರಕ್ಷಿಪ್ತವಲ್ಲ ನಿಕ್ಷಿಪ್ತ ಎನ್ನಬಹುದು. ಕೆಲವು ಶಾಪ ವೃಂತ್ತಾತಗಳು ನಿಜವಾದರೂ ಮೂಲರಾಮಾಯಣದಲ್ಲಿಲ್ಲ ಮತ್ತೆ ಕೆಲವು ಕಟ್ಟುಕತೆಗಳು. ವಾಲ್ಮೀಕಿಗೆ ಮತ್ತು ಪರಾಶರರಿಗೆ ವರವಿದೆ ಬ್ರಹ್ಮವಸಿಷ್ಠ ಪುಲಸ್ತ್ಯರು ವರಪ್ರದರು.

**“ನ ತೇ ವಾಗನೃತಾ ಕಾವ್ಯೇಕಾಚಿದತ್ರ ಭವಿಷ್ಯತಿ”** (ರಾ.ಭಾ. 2–35)

ಇದು ವಾಲ್ಮೀಕಿ ಬ್ರಹ್ಮನವರ ಉಳಿದವುಗಳಿಗೆ ಇಂತಹ ವರಬಲ ಹೆಚ್ಚಾಗಿದ್ದಂತೆ ಕಾಣುವುದಿಲ್ಲ.

ರಾಮನು ಸೀತೆ ಮತ್ತು ಲಕ್ಷ್ಮಣರನ್ನು ಕಳೆದುಕೊಂಡರೆ ತಾನು ಬದುಕಲಾರೆ ಎಂದು ಹೇಳಿದ ಮಾತು ಸತ್ಯವಾಗಿದೆ. ನಿಜ ಸೀತೆಯನ್ನು ಕಳೆದುಕೊಂಡ ಮೇಲೆ ಲಕ್ಷ್ಮಣ ಪಕ್ಕಬಲವಿದ್ದುದರಿಂದ ಬದುಕಿದ್ದ. ಲಕ್ಷ್ಮಣನೂ ಕಾಲಪುರುಷ ಪ್ರಸಂಗದಿಂದ ತನ್ನ ಮೂಲಸ್ಥಾನಕ್ಕೆ ಹೋಗಿ ಸೇರಿದಾಗ ; ರಾಮ ಮಹಾಪ್ರಸ್ಥಾನ ಮಾಡಲು ಅಣಿಯಾಗುತ್ತಾನೆ. ರಾಮಾಯಣ ಅಧ್ಯಯನ ಪಾರಾಯಣ ಮಾಡುವವರು ಈಪ್ರಸಂಗವನ್ನು ಮನ ನೋಯುತ್ತದೆಂಬುದಾಗಿ ತೇಲಿಸಿ ಬಿಡುತ್ತಾರೆ. ಇಲ್ಲೇ ಇರುವುದು ಧರ್ಮಮರ್ಮ. “ರಾಮೋ ವಿಗ್ರಹವಾನ್ ಧರ್ಮಃ” ಎಂದು ಧರ್ಮದ ಸಾಕಾರಮೂರ್ತಿಯಾದ ರಾಮನು ಸರಯೂ ನದಿಯಲ್ಲಿ ಶಾಸ್ತ್ರೋಕ್ತವಿಧಿ ವಿಧಾನಗಳ ಮೂಲಕ ಮಹಾಪ್ರಸ್ಥಾನ ಸಂಕಲ್ಪ ಮಾಡಿದಾಗ ಸದಾ ರಾಮ ರಾಮ ರಾಮ ಎಂದು ರಾಮನನ್ನೇ ಧ್ಯಾನಮಾಡುತ್ತಾ ಜಪಿಸುತ್ತಿದ್ದ ಅಯೋಧ್ಯೆಯ ಜೀವಿಗಳೂ ಅವನನ್ನೂ ಅನುಸರಿಸುತ್ತಾರೆ. ರಾಮನು ಇವರಿಗಾಗಿ ಬ್ರಹ್ಮಾಂಡಾಧಿಪತಿ ಚತುರ್ಮುಖನಿಗೆ ಇವರಿಗೆಲ್ಲ ನೀನು ಶಾಶ್ವತ ನೆಲೆಗಾಗಿ ಲೋಕಗಳನ್ನೂ ಸೃಷ್ಟಿಸಿಕೊಡು ಎನ್ನುತ್ತಾನೆ. ಇವುಗಳಿಗೆ ‘ಸಾನ್ತಾನಿಕ’, ‘ಸಂತಾನ’ ಎಂಬ ಹೆಸರು ರಾಮಾಯಣದಲ್ಲಿದೆ. ಮಂಜರಿಯಲ್ಲಿ ‘ಸಂತಾನಕ’ ಎಂದಿದೆ. ಈಹೆಸರಿನ ಸೂಕ್ಷ್ಮಾರ್ಥ ಉಪನಿಷತ್ ಪುರಾಣ ಬ್ರಹ್ಮಸೂತ್ರಗಳಲ್ಲಿವೆ.

ಇಲ್ಲಿ ಬ್ರಹ್ಮನು ತ್ರಿಲೋಕಗಳನ್ನು ಒಪ್ಪಿಕೊಡಬೇಕು. ಏಕೆಂದರೆ ರಾಮನ ಅನುಯಾಯಿಗಳೆಲ್ಲ ಚತುರ್ಮುಖ ಬ್ರಹ್ಮಸೃಷ್ಟಿಯಲ್ಲಿರುವವರು. ನಮ್ಮ ಕೇಂದ್ರ ಸರಕಾರ ಹೀಗೆ ಮಾಡಬೇಕೆಂದರೂ, ರಾಜ್ಯ ಸರಕಾರದ ಒಪ್ಪಿಗೆ ಆವಶ್ಯಕ, ಎಂಬಂತೆ ಇದು. ಕೇಂದ್ರ್ರದ ಅಭಿಪ್ರಾಯವನ್ನು ರಾಜ್ಯವು ಪ್ರಜೆಗಳಿಗೆ ನಿರ್ದೇಶಿಸದೆ ಇದ್ದರೆ ಕೇಂದ್ರವು ರಾಜ್ಯದಲ್ಲಿ ಏನೂ ಮಾಡಲಾಗದು ಎಂಬ ನೀತಿ ಇಲ್ಲಿ ರಾಮಾಯಣದಲ್ಲಿದೆ. ಇಲ್ಲಿ ಬ್ರಹ್ಮನು ಈ ಲೋಕಗಳನ್ನು ಹೊಸದಾಗಿಯೇ ನಿರ್ಮಿಸಿದನು ಎಂಬ ಅರ್ಥವನ್ನು ರಾಮಾಯಣ ಮಂಜರಿಯಲ್ಲಿ ಕಾಣುತ್ತೇವೆ.

ಕಾಳಿದಾಸನು ರಘುವಂಶ ಕಾವ್ಯದಲ್ಲಿ ದಾರ್ಶನಿಕ ಸೂಕ್ಷ್ಮಗಳನ್ನು ಸ್ಪಷ್ಟಪಡಿಸುವಾಗ ರಾಮನು ತನ್ನವರನ್ನೆಲ್ಲ ಸೈನ್ಯದಂತೆ ಕಟ್ಟಿಕೊಂಡು ತಾನು ಸೇನಾಪತಿಯಂತೆ ಮುಂದಾಗಿದ್ದು, ಸರ್ವಲೋಕಗಳಿಗೂ ಮೂಲ ಬಿಂದುವಾದ ತನ್ನ ದಿವ್ಯ ದೇಹದಂತಹ ವೈಕುಂಠ ಲೋಕವನ್ನು ಸೇರಿದನು ಎಂದು ತಿಳಿಸಿದ್ದಾನೆ:-

**“ವಿಷ್ವಕ್ಸೇನಃ ಸ್ವತನುಮವಿಶತ್ ಸರ್ವಲೋಕ ಪ್ರತಿಷ್ಠಾಂ”** (ರಘು 15)

ಹೇಗಿದ್ದರೂ ಈ ಲೋಕಗಳು ಚತುರ್ಮುಖ ಬ್ರಹ್ಮಲೋಕಕ್ಕಿಂತ ಅನನ್ತರ ಮೇಲೆ ಇರುವವು ಎಂಬ ಮೂಲ ರಾಮಾಯಣ ಸ್ಪಷ್ಟವಾಗಿದೆ.
(ಉತ್ತರ 110–20)

ಎಲ್ಲರೂ ‘ತ್ರಿದಿವ’ಕ್ಕೆ ಹೋದರೆಂಬ ಮಾತು ರಾಮಾಯಣದಲ್ಲೂ ಮಂಜರಿಯಲ್ಲೂ ಸ್ಪಷ್ಟವಾಗಿದೆ. “ವೈಷ್ಣವ ತೇಜಸ್ಸಿನಲ್ಲಿ ವೈಷ್ಣವ ತನುವಿನಲ್ಲಿ ಸನಾತನವಾದ ಆಕಾಶದಲ್ಲಿ ನಿನಗೆ ಇಷ್ಟವಾದ ಆ(ನಿನ್ನ ಮೂಲ) ಶರೀರದಲ್ಲಿ ಸೇರಿಕೋ” ಎಂಬ ಚತುರ್ಮುಖ ಬ್ರಹ್ಮನ ಪ್ರಾರ್ಥನೆಗೆ ಇಂಬುಗೊಟ್ಟು, ರಾಮನು ತನ್ನವರಿಗೂ ಲೋಕವನ್ನು ಕೊಡು ಎನ್ನುತ್ತಾನೆ. ಇಲ್ಲಿ ಸಂತಾನಲೋಕ, ಸಾಂತಾನಿಕಲೋಕ, ತ್ರಿದಿವ, ದೇವಲೋಕ, ಸ್ವರ್ಗ, ಸ್ವರ್ಗದ ಮಹಾಸ್ವರ್ಗ ಎಂಬ ಪದಗಳು ರಾಮಾಯಣದಲ್ಲಿವೆ. ವೈಷ್ಣವ ತೇಜೋಮಯ ಸನಾತನ ಆಕಾಶ ಎಂದೂ ಇದೆ. ಇದೆಲ್ಲವನ್ನೂ ಕ್ರೋಡೀಕರಿಸಿ ಕಾಳಿದಾಸನು ಒಂದೇ ಮಾತಿನಲ್ಲಿ ಹೇಳಿದಾನೆ. ವೇದ ವ್ಯಾಸರು ಬ್ರಹ್ಮಸೂತ್ರದಲ್ಲಿ ಕಠೋಪನಿಷತ್ತಿನಲ್ಲಿ ಬರುವ “ತದ್ ವಿಷ್ಣೋಃ

ಪರಮಂ ಪದಂ" ಎಂಬುದನ್ನು ನಿರ್ಣಯಿಸಿ ಸ್ವರ್ಗಲೋಕ ಶಬ್ಧಕ್ಕೆ ಅಮೃತತ್ವವೆಂಬ ಪುನರ್ಜನ್ಮ ರಹಿತವಾದ ಮೋಕ್ಷಸ್ಥಾನ ಎಂದು ತಿಳಿಸಿದ್ದಾರೆ. ಮೋಕ್ಷಾನಂತರ ಸಿಗುವ ಸ್ಥಾನವೇ ಸರ್ವಲೋಕ ಪ್ರತಿಷ್ಠಾ ಸ್ಥಾನ. ಇದೇ ನಿತ್ಯ ವೈಕುಂಠ ಸ್ಥಾನ. ಪ್ರಕೃತಿ ಮಂಡಲದಿಂದ ಹೊರಗೆ ಇರುವುದು. ಪ್ರಕೃತಿ ಮಂಡಲದೊಳಗೆ ಕಾರ್ಯ ವೈಕುಂಠ ತ್ರಿಲೋಕಗಳು ಅನೇಕ ಇವೆ. ಇವುಗಳ ವಿವರಣೆ ಪುರಾಣಗಳಲ್ಲಿವೆ. ಚತುರ್ಮುಖ ಬ್ರಹ್ಮಸೃಷ್ಟಿಗೆ ಇವು ಒಳಪಟ್ಟಿವೆ. ನಿತ್ಯ ವೈಕುಂಠವು ಹೀಗೆಲ್ಲ ಎಂದು ಸುಬಾಲ ಕೌಷೀತಕೀ ತ್ರಿಪಾದ್ ವಿಭೂತಿ ಮುಂತಾದ ಉಪನಿಷತ್ತುಗಳು ತಿಳಿಸಿವೆ. ಚತುರ್ಮುಖನಿಗೆ ಸೇರಿದ ಲೋಕಗಳಿಗೆ ಹೋದವರು ಕೂಡ ಚತುರ್ಮುಖನ ಆಯುಸ್ಸು ಮುಗಿದು ನಿತ್ಯ ವೈಕುಂಠಕ್ಕೆ ಹೋಗುವಾಗ ಅವನೊಡನೆ ಹೋಗುವರೆಂದು ಕೂರ್ಮಪುರಾಣ ವಚನವು ತಿಳಿಸುತ್ತದೆ. ಹೀಗಾಗಿ ವಾನರಾದಿಗಳು ಸರಯೂ ನದಿಯಲ್ಲಿ ತಾವೂ ಮುಳುಗಿ ದೇಹ ತ್ಯಾಗ ಮಾಡಿ ತಮ್ಮ ತಮ್ಮ ಮೂಲಾಂಶವಿರುವ ದೇಹ ಸೇರಿ ಆಯಾ ಲೋಕಗಳಿಗೆ ಹೋದರು. ತ್ರಿದಿವ ಸ್ವರ್ಗಕ್ಕೆ ಹೋದರು ಎಂಬ ಮಾತೂ ರಾಮಾಯಣದಲ್ಲಿದೆ. ಇವರೆಲ್ಲರಿಗೂ ಕ್ರಮಮುಕ್ತಿಯಿಂದ ವೈಕುಂಠ ಪ್ರಾಪ್ತಿ. ಸನ್ತಾನ ಲೋಕಕ್ಕೆ ಹೋದವರಿಗೂ ಹೀಗೆಯೇ. ಕೊನೆಯ ಸ್ಥಾನವನ್ನೂ ಗಮನಿಸಿ ಎಲ್ಲರನ್ನೂ ರಾಮ ಮೋಕ್ಷಸ್ಥಾನವಾದ ತನ್ನಲೋಕಕ್ಕೆ ಕರೆದೊಯ್ದ ಎಂಬ ಮಾತು ಬಂದಿದೆ. ಉತ್ತರಕಾಂಡವನ್ನು ಹೆಚ್ಚು ಜನ ಓದದೆ ಬಿಟ್ಟಿರುವುದರಿಂದ ಈ ಸಂಗತಿಯನ್ನು ಇಲ್ಲಿ ವಿಶಿಷ್ಯ ಬರೆಯಬೇಕಾಯ್ತು.

ಶಬರಿಯು ತಾನು ಕಚ್ಚಿ ತಿಂದು ಸ್ವಲ್ಪ ರುಚಿ ನೋಡಿ ಚೆನ್ನಾಗಿದೆ ಎಂದು ರಾಮನಿಗೆ ಹಣ್ಣುಗಳನ್ನು ಇಟ್ಟಿದ್ದಳು ರಾಮ ಆ ಎಂಜಲು ಹಣ್ಣನ್ನು ಪ್ರೀತಿಯಿಂದ ಅವಳ ಭಕ್ತಿಭಾವ ನೋಡಿ ಸ್ವೀಕರಿಸಿದ ಎಂಬ ಕಥೆ ಪ್ರಚಲಿತವಿದೆ ಹಿಂದಿಯಲ್ಲಿ "ಜೂಠೇ ಬೇರ್" ಎಂದೇ ಪ್ರಸಿದ್ಧಿ. ಆ ಹಣ್ಣು ಎಲಚಿ=ಬದರೀ ಹಣ್ಣು ಎಂದು. ಈ ರೀತಿ ರಾಮ ಎಂಜಲು ತಿಂದ ವೃತ್ತಾಂತ ಮೂಲ ರಾಮಾಯಣದಲ್ಲಿಲ್ಲ ಮಂಜರಿಯಲ್ಲೂ ಇಲ್ಲ. ಕಾಲು ತೊಳೆದು ಕೈ ತೊಳೆಯಲು ನೀರು ಕೊಟ್ಟಳು. ಎಂದಷ್ಟೇ ಇದೆ ಗಿಣಿ ಕಚ್ಚಿದ ಹಣ್ಣು ರುಚಿ ಎಂಬಂತಹ ಹೋಲಿಕೆಯೂ ಇಲ್ಲ. ಮಂಜರಿ ರಾಮಾಯಣವನ್ನು ಅನುಸರಿಸಿದೆ. ಬದಲಾಯಿಸಲಿಲ್ಲ." ಕಬಂಧ ಒಬ್ಬ ದನುಪುತ್ರ. ಅವನು ರಾಕ್ಷಸನಲ್ಲ. ವಿರಾಧ ರಾಕ್ಷಸ. ರಾಕ್ಷಸ ಜಾತಿ ಹತ್ತು ದೇವಯೋನಿ ಜಾತಿಗೆ ಸೇರಿದ ಒಂದು ಜಾತಿ. ಇವರಿಗೆ ಅಗ್ನಿ ಸಂಸ್ಕಾರವಿಲ್ಲ. ರಾವಣ ರಾಕ್ಷಸ ಜಾತಿಯಲ್ಲ ರಾಕ್ಷಸನಂತಾದವನು, ಬ್ರಾಹ್ಮಣ. ಜಟಾಯು ಜ್ಞಾನಿ. ವಾನರರಲ್ಲಿ ಹನುಮಂತ ಜ್ಞಾನಿ. ವಾಲಿ ಸುಗ್ರೀವರು ರಾಕ್ಷಸ ಜಾತಿಯಲ್ಲ, ರಾಮನು ಇವರಲ್ಲಿ ವಿರಾಧನಿಗೆ ಅವನ ಜಾತಿಗೆ ತಕ್ಕಂತೆ ಅವನ ಮಾತಿನಂತೆ ಖನನ ನೆಲದಲ್ಲಿ ಹೂಳುವ ಶವ ಸಂಸ್ಕಾರ ಮಾಡಿದಾನೆ. ಕಂಬಂಧನಿಗೆ ಅವನ ಜಾತಿ ಮಾತಿನಂತೆ ಅಗ್ನಿಸಂಸ್ಕಾರ ಮಾಡಿದ್ದಾನೆ, ಜಟಾಯುವಿಗೆ ಬ್ರಹ್ಮಜ್ಞಾನಿಗೆ ಮಾಡುವಂತೆ ಬ್ರಹ್ಮವೇಧ ಎಂಬ ಅಗ್ನಿಸಂಸ್ಕಾರ ಮಾಡಿದ್ದಾನೆ, ವಾಲಿಗೆ ಅಗ್ನಿಸಂಸ್ಕಾರ ಮಾಡಿಸಿದ್ದಾನೆ, ರಾವಣನಿಗೆ ಪಿತೃಮೇಧ ಅಗ್ನಿಸಂಸ್ಕಾರ ಮಾಡಿದ್ದಾನೆ, ಇದೆಲ್ಲಾ ಮೂಲ ರಾಮಾಯಣದಲ್ಲೇ ಸ್ಪಷ್ಟವಾಗಿದೆ.

ಕಬಂಧ ದನುವಿನ ಪುತ್ರ ಎಂದರೆ ದಾನವ ಎಂಬ ಅರ್ಥವಿದೆ. ರಾಮಾಯಣ ಮಂಜರಿಯಲ್ಲಿ ಲಿಪಿಕಾರ ಕೈತಪ್ಪಿನಿಂದ "ದನು" ಎಂಬುದು "ಮನು" ಎಂದಾಗಿದೆ. ಇಂತಹ ತಪ್ಪುಗಳ ಮುದ್ರಿತ ಪುಸ್ತಕದಲ್ಲಿ ಅನೇಕ ಇವೆ ಕೆಲವನ್ನು ಮೂಲ ರಾಮಾಯಣ ನೋಡಿ ತಿದ್ದಿಕೊಳ್ಳಬಹುದು.

ಇಂದ್ರ ಅಹಲ್ಯಾ ವೃತ್ತಾಂತ ಭೂತ ಭವಿಷ್ಯದ್ ವರ್ತಮಾನ ತ್ರಿಕಾಲ ವೃತ್ತಾಂತಗಳ ನಾಡೀಶಾಸ್ತ್ರದ ವಚನ ರೂಪದಲ್ಲಿ ವೇದಗಳಲ್ಲೂ ಇದೆ. ಈಗ ರಾಮಾಯಣದಲ್ಲಿ ಆಕಾಲದ ವರ್ತಮಾನ ಸಂಗತಿ ಇದೆ. ಅವಳು ಗೌತಮ ಶಾಪದಿಂದ ಅದೃಶ್ಯಳಾಗಿದ್ದಳು, ರಾಮದರ್ಶನ ಮಾಡಿದೊಡನೆ ತನ್ನ ರೂಪ ಪಡೆದಳು, ಎಂದಷ್ಟೇ ರಾಮಾಯಣದಲ್ಲಿದೆ ಗೌತಮನ ಶಾಪ ಮತ್ತು ಶಾಪ ನಿವಾರಣ ವಚನಗಳಿಂದ ಸ್ಪಷ್ಟವಾಗಿದೆ. ಮಂಜರಿಯಲ್ಲೂ ಹಾಗೆಯೇ ಇದೆ.

**ಅದೃಶ್ಯಾ ಪ್ರಾಪ್ಸ್ಯಸಿ ಶುಚಂ ರಾಮಸಂದರ್ಶನಾವಧಿ** ॥ 307

(ಅಯೋಧ್ಯಾ ಕಾಂಡ)

ಹೀಗೆಯೇ ರಾಮಲಕ್ಷ್ಮಣರು ಸ್ವರೂಪ ಪಡೆದ ಅಹಲ್ಯೆಗೆಪಾದ ಮುಟ್ಟಿ ನಮಸ್ಕರಿಸಿದರೆಂಬ ಮಾತು ರಾಮಾಯಣ ಮತ್ತು ಮಂಜರಿಗಳಲ್ಲಿ

ಸ್ಪಷ್ಟವಾಗಿದೆ. ಕಲ್ಲಾಗಿದ್ದು ಭೂಮಿಯೊಳಗೆ ಸೇರಿದ್ದಳು ಇತ್ಯಾದಿ ವೃತ್ತಾಂತಗಳು ಇಲ್ಲ.

ಅಹಲ್ಯಾವೃತ್ತಾಂತದಲ್ಲಿ ಇಂದ್ರ ಮಾಡಿದ ತಪ್ಪಿಗೆ ಅವನು "ಅಫಲ"ನಾಗುವಂತೆ ಗೌತಮ ಶಾಪ ಸ್ಪಷ್ಟ. ಅನಂತರ ಬಾಲಕಾಂಡಕ್ಕಿಂತ ಸ್ವಲ್ಪ ಭಿನ್ನವಾದ ಆದರೆ ಹೊಂದಿಸಬಹುದಾದ ವೃತ್ತಾಂತ ಉತ್ತರಕಾಂಡದಲ್ಲಿದೆ. ರಾವಣ ಇಂದ್ರಜಿತ್ತುಗಳು ಇಂದ್ರನನ್ನು ಜಯಿಸಿದ ಮೇಲೆ ಪ್ರಜಾಪತಿಯು ಇಂದ್ರ ಸೋತುದಕ್ಕೆ ಕಾರಣ ಪತಿವ್ರತೆಯ ಮಾನಭಂಗವೇ ಎಂದು ತಿಳಿಸಿ, ನೀನು ದುಂಬಿಯ ಹಾಗೆ ಅವಳ ಭಗಮಂಡಲದೊಳಗೆ ಸೇರಿ ನಿನ್ನ ರೂಪ ಮರೆಸಿಕೊಂಡೆ. ಇದನ್ನು ತಿಳಿದ ಗೌತಮ ನಿನ್ನ ಮೈಯ್ಯೆಲ್ಲ ಭಗಮಂಡಲದಂತೆ ಆಗಲೆಂದು ಶಪಿಸಿದ (ಇಂದ್ರ ಸಹಸ್ರಾಕ್ಷ ಎಂಬ ಉಪನಾಮ ಪಡೆದ ವಿಷಯ ಇದು). ದೇವತೆಗಳು ಅವನಿಗೆ ಚಿಕಿತ್ಸೆ ಮಾಡಿಸಿ ಟಗರಿನ ವೃಷ್ಣ ಇರಿಸಿದರೆಂದು ಬಾಲಕಾಂಡದಲ್ಲಿದೆ: ಸಹಸ್ರಾತತ್ವವು ಮತ್ತೊಂದು ಗುರುತಾಗಿ ಉಳಿಯಿತಷ್ಟೆ. ಈ ಪ್ರಸಂಗದಲ್ಲಿ ರಾಮಾಯಣ ಮಂಜರಿಯಲ್ಲೇ "ದುಲಿ" ಎಂಬ ಪದ ಭಗಮಂಡಲಕ್ಕೆ ಸಮಾನಾರ್ಥಕವಾಗಿದೆ. ಕಾಶ್ಮೀರ ಶಾರದಾ ಲಿಪಿ ಪುಸ್ತಕದಲ್ಲಿ ದುಲಿಗೆ ಬದಲು ಯೋನಿ ಎಂದಿದೆ. 'ದುಲಿ' ಶಬ್ಧ ದೇಶೀ ಜನ ಬಳಸುವ ಸಂಸ್ಕೃತ ಪದ. ನಾಗರಿಕ ಜನ ಹೆಚ್ಚು ಬಳಸುತ್ತಿಲ್ಲ. ಇದಕ್ಕಾಗಿಯೇ ಕ್ಷೇಮೇಂದ್ರ 'ದೇಶೀನಾಮಮಾಲಾ' ಎಂಬ ಕೋಶವನ್ನೇ ಸಂಸ್ಕೃತದಲ್ಲಿ ರಚಿಸಿದ್ದಾನೆ. ಕೇಶವನ ಕಲ್ಪದ್ರು ಕೋಶದಲ್ಲಿ 'ಬುಲಿ' ಎಂಬ ಪದವೂ ಹೀಗೆಯೇ ಇದೆ. ದುಲ=ಉತ್‌ಕ್ಷೇಪೇ, ಬುಲ=ಮಜ್ಜನೇ ಎಂಬ ಧಾತು ಪಾಠ ಪಾಣಿನಿಯ ಸಂಗ್ರಹದಲ್ಲಿದೆ. ದ್ರಾವಿಡ ದೇಸಿಗಳಲ್ಲಿ ತ-ದಗಳಿಗೆ ಹೆಚ್ಚು ವ್ಯತ್ಯಾಸವಿಲ್ಲ. ಮಲಮಲ್ಲಧಾರರಣೇ ಎಂಬ ಎರಡು ಧಾತು ಪಾಠ ಸಂಸ್ಕೃತದಲ್ಲಿದೆ. ದೇಶೀಯಲ್ಲಿ ಶಿಥಿಲದ್ವಿತ್ವ ಸಮಾನ ವ್ಯಂಜನ ದ್ವಿತ್ವಿಗಳು ಆಯಾ ಭಾಷಾವ್ಯಾಕರಣ ಸಿದ್ಧವಾಗಿವೆ. ಗಂಡನಿಗೆ ಸಂಬಂಧಿಸಿದ್ದು ಬುಲಿ. ಹೆಂಗಸರಿಗೆ ಸಂಬಂಧಿಸಿದ್ದು ದುಲಿ. ಹೀಗೆ ಭಾರತೀಯ ಭಾಷಾಶಾಸ್ತ್ರ ಅಭ್ಯಸಿಸಲು ಕ್ಷೇಮೇಂದ್ರನ ಪದಪ್ರಯೋಗಗಳು ದೇಶೀನಾಮಮಾಲಾ ಮುಂತಾದವು ಸಹಾಯಕಗಳಾಗುತ್ತವೆ. ಬುಲಿ ಒಳಗೇ ಸೇರಿ ಮುಳುಗುತ್ತದೆ. ದುಲಿ ಎತ್ತಿ ಹಾಕುತ್ತದೆ. ಪದ ವಿಚಾರದಲ್ಲಿ ನಾವು ಹೀಗೆ ಗಂಭೀರವಾಗಿ ಬರೆಯಬಹುದು ಅಷ್ಟೆ.

**ಪ್ರವಿಷ್ಟೋ ದುಲಿಮೇತಸ್ಯಾ ಭ್ರಾಮರಂ ರೂಪಮಾಶ್ರಯನ್ ॥ 657**
(ಉತ್ತರಕಾಂಡ)

ಮೂಲರಾಮಾಯಣದಲ್ಲಿ ಈ ರೀತಿ ಸಾವಿರಕಣ್ಣಿನ ಗುರುತು ಮೈಯಲ್ಲಿ ಇಂದ್ರನಿಗೆ ಆಯಿಂತೆಂದಿಲ್ಲಾ ಯುದ್ಧದಲ್ಲಿ ನಿನಗೆ ಸೋಲಾಗುತ್ತದೆ ಎಂದಷ್ಟೆ ಇದೆ. ಭ್ರಮರರೂಪದಲ್ಲಿ ಒಳಸೇರಿ ಮರೆಸಿಕೊಂಡ ವಿಷಯ ಇಲ್ಲ. ಹೀಗೆ ಕಾಶ್ಮೀರದಲ್ಲಿ ಪ್ರಚಲಿತವಾಗಿದ್ದ ಒಂದು ದೇಸಿ ಜಾನಪದ ರಾಮಾಯಣ ವೃತ್ತಾಂತವನ್ನು ಕ್ಷೇಮೇಂದ್ರನು ಬಳಸಿಕೊಂಡಿರುವಂತಿದೆ. ನಲ ಶಬ್ಧ ನಲೀ ಎಂದೂ ಸಂಸ್ಕೃತದಲ್ಲಿದೆ ಇದು ಸಣ್ಣ ಕೊಳವೆ ಎಂಬ ಅರ್ಥದಲ್ಲಿದೆ. ಕನ್ನಡದಲ್ಲಿದೆ ಇದು 'ನಲ್ಲಿ' ಎಂದಾಗಿಲ್ಲವೆ.

[ಇಂದ್ರಿಜಿತ್ತು ರಾಮಲಕ್ಷ್ಮಣರನ್ನು ನಾಗಪಾಶಾಸ್ತ್ರದಿಂದ ಬಂಧಿಸಿದಾಗ ಗರುಡ ಬಂದು ನಾಗಪಾಶ ಬಿಡಿಸಿ ಹೋದ ವೃತ್ತಾಂತ ಮೂಲ ರಾಮಾಯಣದಲ್ಲೂ ಮಂಜರಿಯಲ್ಲೂ ಇದೆ. ಈಮಧ್ಯೆ ನಾರದ ಬಂದು ರಾಮನ ಬಗ್ಗೆ ಸ್ತೋತ್ರಮಾಡಿದ ಅಂಶ ರಾಮಾಯಣದಲ್ಲಿಲ್ಲ ಮಂಜರಿಯಲ್ಲಿದೆ.] ಹೀಗೆ ಕೆಲವು ಅಂಶಗಳು ಕಾಶ್ಮೀರದ ರಾಮಾಯಣ ಮೂಲ ಪಾಠದಲ್ಲಿತ್ತೋ ಏನೋ ! ಅಂತಹ ಪಾಠವೊಂದು ಪೂರ್ಣವಾಗಿ ಸಿಕ್ಕಿದಾಗ ನಿರ್ಣಯಿಸಬಹುದು. ಭಾಗವತ ಪುರಾಣದ ಪ್ರತಿ ಈಗಿರುವ ಪಾರಮಹಂಸ್ಯ ಸಂಹಿತೆಗಿಂತ ಬೇರೆಯಾದ ಒಂದು ಸಂಹಿತೆ ತಾಷ್ಕೆಂಡ್‌ಲ್ಲಿ ಭೂಶೋಧನೆಯಲ್ಲಿ ಸಿಕ್ಕಿರುವುದೆಂದು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ರಷ್ಯಾದೇಶದಲ್ಲಿ ಉಳಲು ನೆಲ ಅಗೆದಾಗ ವಿಷ್ಣು ಮೂರ್ತಿ ಸಿಕ್ಕಿದೆ ಎಂದು ಆ ರೈತನ ತಮ್ಮ ಭಾರತಕ್ಕೆ ಬಂದು ಸಂಸ್ಕೃತ ಓದಿ ವಿದ್ವಾಂಸನಾಗಿ ಸಂಸ್ಕೃತದಲ್ಲೇ ಮಾತನಾಡಿಸಿ ನನಗೆ ವಿಷಯ ತಿಳಿಸಿದ್ದಾನೆ. ಹೀಗೆ ಭಾರತದ ಹೊರಗೂ ರಾಮಾಯಣ ಶತಕೋಡಿ ಪ್ರವಿಸ್ತರವಿರಬಹುದಲ್ಲವೆ!

ರಾಮನು ಅಗಸ್ತ್ಯರು ಕೊಟ್ಟ ಬ್ರಹ್ಮಾಸ್ತ್ರದಿಂದ ಎದೆಗೆ ಹೊಡೆದು ರಾವಣನನ್ನು ಸಾಯಿಸಿದ ಎಂಬ ಮಾತಿನಲ್ಲಿ, ಆದಿತ್ಯ ಹೃದಯಸ್ತೋತ್ರವು ಬ್ರಹ್ಮಾಸ್ತ್ರಕ್ಕೆ ಸೇರಿದ ಸರ್ವದೇವ ಮಯಮಂತ್ರ ಎಂಬ ಅಂಶವನ್ನು ಮಂಜರೀಕಾರ ಸೂಕ್ಷ್ಮವಾಗಿಸಿದ್ದಾನೆ ಮೂಲರಾಮಾಯಣದ ಅನೇಕ ಸರ್ಗಗಳನ್ನೂ ಕೆಲವೇ ಶ್ಲೋಕಗಳಲ್ಲಿ ಸಮರ್ಥವಾಗಿ ಸಂಗ್ರಹಿಸುವ ಜಾಣ್ಮೆ, ವರ್ಣನೆಗಳನ್ನು ವಿಸ್ತರಿಸುವ ಜಾಣ್ಮೆ, ಇತಿಹಾಸಗಳ ಕಾಲ ದೇಶ ವ್ಯಕ್ತಿ

ಹೆಸರುಗಳ ಸೂಕ್ಷ್ಮಗಳನ್ನು ಬಿಡದೆ ತಿಳಿಸುವ ಜಾಣ್ಮೆ, ವಾಲ್ಮೀಕಿಯ ಮಾತಿಗೆ ಅಪಚಾರವಾಗದಂತೆ ಕಥೆಯ ಹಂದರ ಪದರಗಳನ್ನೂ ವಿಂಗಡಿಸಿ ತಿಳಿಸುವ ಜಾಣ್ಮೆ 'ಹತ್ತು ಕಟ್ಟೋಕ್ ಮುತ್ತು ಕಟ್ಟು' ಎಂಬ ಗಾದೆಯಂತೆ ಮುತ್ತಿನಂತಹ ಒಂದೇ ಮಾತಿನಲ್ಲಿ ತಿಳಿಸುವ ಸುಂದರಗೊಳಿಸುವ ಜಾಣ್ಮೆ, ಕ್ಷೇಮೇಂದ್ರನ ರಾಮಾಯಣ ಮಂಜರಿಯಲ್ಲಿ ಕಾಣುತ್ತದೆ. ಮಂತ್ರಾಗಮ ಶಾಸ್ತ್ರದಲ್ಲಿ ಬಲಾತಿಬಲಾ ಮಂತ್ರಗಳು ಬ್ರಹ್ಮಾಸ್ತ್ರ ಬ್ರಹ್ಮದಂಡಾಸ್ತ್ರ ಬ್ರಹ್ಮ ಶಿರೋಸ್ತ್ರಾದಿಗಳು ಸೂರ್ಯಾಧಾರಿತ ಸಹಸ್ರ ಕಿರಣ ಗಾಯತ್ರೀ ಮಂತ್ರದ ಪ್ರಯೋಗ ಎಂಬುದನ್ನು ಗಮನಿಸಿದವರಿಗೆ ರಾಮಾಯಣದ ಅಗಸ್ತ್ಯರು ಕೊಟ್ಟ ಬ್ರಹ್ಮಾಸ್ತ್ರದಲ್ಲಿ ಆದಿತ್ಯ ಹೃದಯವಿರುವುದರಿಂದ ರಾಮಾಯಣದಲ್ಲಿ ಇದನ್ನು ಯಾರೋ ಸೇರಿಸಿ ಬಿಟ್ಟಿದಾರೆ ಎಂಬ ನೂತನರ ಮಾತು ಸೂಕ್ಷ್ಮಕ್ಕೆ ಹೊಂದುವುದಿಲ್ಲ. ಹತ್ತು ತಲೆಗಳನ್ನು ಕಡಿದು ಅರ್ಧಚಂದ್ರಬಾಣದಿಂದ ರಾವಣನನ್ನು ಸಾಯಿಸಿದ ರಾಮ ಎಂಬ ಮಾತು ರಾಮಾಯಣದಲ್ಲೂ ಇಲ್ಲ ಮಂಜರಿಯಲ್ಲೂ ಇಲ್ಲ. ನಾನಾ ಶಿಲ್ಪಗಳಲ್ಲಿ ಮಕ್ಕಳಿಗೆ ರಂಜನೀಯವಾಗಿ ಹೇಳುವ ಲೋಕದ ಮಾತಿನಲ್ಲಿದೆಯಷ್ಟೆ.

8.2.2018

ಈಗಿನ ಪಾಕಿಸ್ತಾನಕ್ಕೆ ಸೇರಿ ಹೋಗಿರುವ "ಪೆಷಾವರ್" ರಾಮಾಯಣ ಕಾಲದಲ್ಲಿ ಭರತ ಜಯಿಸಿ ತನ್ನ ಮಗ ಪುಷ್ಕರನ ಹೆಸರಿನಲ್ಲಿ ನಿರ್ಮಿಸಿದ ನಗರ ಪುಷ್ಕಲಾವತ. ತಕ್ಷಶಿಲೆ ಭರತನ ಮತ್ತೊಬ್ಬ ಮಗ ತಕ್ಷನಿಗಾಗಿ ಆದ ನಗರ ಇವೆರಡೂ ಸಿಂಧೂ ನದಿಯ ಈ ಕಡೆ ಆ ಕಡೆ ನಿರ್ಮಿತವಾದವು ಎಂಬ ಅಂಶ ರಾಮಾಯಣದಲ್ಲೂ ಮಂಜರಿಯಲ್ಲೂ ಸ್ಪಷ್ಟವಾಗಿದೆ. ಉತ್ತರಕಾಂಡವನ್ನು ಹೆಚ್ಚಾಗಿ ಪಾರಾಯಣ ಮಾಡದೆ ಬಿಟ್ಟ ಕಾರಣ ಈ ವಿಷಯ ಜನಜನಿತವಾಗಿಲ್ಲ ಎನ್ನಬಹುದು. ಹರಪ್ಪಾ ಮೊಹೆಂಜೋದಾರೋದಖನನದಲ್ಲಿ ರಾಮಾಯಣ ಕಾಲದ ಸಂಸ್ಕೃತಿ ಕಂಡು ಬಂದರೆ ಆಶ್ಚರ್ಯವಿಲ್ಲ.

ಪರಶುರಾಮನು ಭೂಮಂಡಲವನ್ನೆಲ್ಲ ಜಯಿಸಿ ಕಾಶ್ಯಪನೆಂಬ ಒಬ್ಬ ಬಡ ಬ್ರಾಹ್ಮಣನಿಗೆ ದಾನವಿತ್ತ. ಅವನು ಅದನ್ನೂ ಕ್ಷತ್ರಿಯರಿಗೆ ಬಿಟ್ಟು ಕೊಟ್ಟ ಪರಶುರಾಮ ಪೂರ್ವಸಮುದ್ರದಲ್ಲಿ ಹೊಸದಾಗಿ ಮೇಲೆದ್ದ ಮಹೇಂದ್ರ ದ್ವೀಪಕ್ಕೆ ಹೋಗಿ ಇದ್ದು ಬಿಟ್ಟ. ಕೊಟ್ಟ ಭೂಮಿಯಲ್ಲಿ ವಾಸಿಸಲಿಲ್ಲ. ಈದ್ವೀಪವು ಜಂಬೂ ದ್ವೀಪದಲ್ಲಿ ಪೂರ್ವ ದಿಕ್ಕಿಗೆ ಭಾರತದ ಉಪದ್ವೀಪವಾಗಿದೆ. ಇದು ಲಕ್ಷಣಗಳಿಂದ ಇಂದಿನ ಪೂರ್ವ ಚೀನಾದ ಮೇಲಿರುವ ಕಾಂಬೋಡಿಯ ದೇಶ. ಕಾಂಬೋಡಿಯ ಇದರ ವರ್ಣನೆ ಕಿಷ್ಕಿಂಧಾ ಕಾಂಡದಲ್ಲಿದೆ ಸುಗ್ರೀವನು ತಿಳಿಸುವ ಲಕ್ಷಣಗಳಿಂದಲೂ ತಿಳಿದು ಬರುತ್ತದೆ. ಮಂಜರೀಕಾರ ಅಲ್ಲಲ್ಲಿ ಇದರ ಸೂಕ್ಷ್ಮವರ್ಣನೆ ಬಿಟ್ಟಿಲ್ಲ. ಕನೂಜಿನ ಯಶೋವರ್ಮ ಕಾಂಬೋಡಿಯ ಜಯಿಸಿ ಅಭಿವೃದ್ಧಿಗೊಳಿಸಿದ್ದ. ಇವನು ಕವಿ ಭವಭೂತಿಗೆ ಆಶ್ರಯದಾತ. ಈ ವಿಷಯ ಮತ್ತು ಕಾಂಬೋಡಿಯದ ವರ್ಣನೆ ವಾಕ್‌ಪತಿರಾಜನ 'ಗೌಡವಹೋ' ಪ್ರಾಕೃತ ಕಾವ್ಯದಲ್ಲಿ ವಿಸ್ತಾರವಾಗಿದೆ. ಕಾಂಬೋಡಿಯವು ಭಾರತದ ಉಪ ದ್ವೀಪ ಇದಕ್ಕೆ ಇಂದ್ರ ದ್ವೀಪ ಎಂದೂ ಹೆಸರು ವಿಷ್ಣುವಾಯುಪುರಾಣಗಳಲ್ಲಿ ವಿವರಣೆ ಇದೆ.

12. ಮನ್ಮಥನಿಗೆ ಎಷ್ಟು ಜನ ಪಟ್ಟಮಹಿಷಿಯರು? ಎಂಬ 'ಕ್ವಿಜ್' ಶೀಘ್ರ ಪ್ರಶ್ನೆ ಕೇಳಿದರೆ ಥಟ್ಟನೆ ಉತ್ತರ ಹೇಳಿ ಎಂದರೆ ಸಾಧಾರಣವಾಗಿ ಎಲ್ಲರೂ ರತಿ ಒಬ್ಬಳೇ ಎನ್ನಬಹುದು. ಮಂಜರಿಯಲ್ಲಿ ಕಾನ್ತಿ ಶಕ್ತಿ ರತಿ ಶ್ರೀ ಎಂಬ ನಾಲ್ವರು ಎಂದೂ ಬೃಹತ್ಕಥಾಮಂಜರಿಯಲ್ಲಿ "ರತಿಪ್ರೀತ್ಯೋರಿವ ಸ್ಮರಃ" ಎಂಬ ಕ್ಷೇಮೇಂದ್ರನದೇ ಮಾತಿನಿಂದ ಮನ್ಮಥನಿಗೆ ಐದು ಪುಷ್ಪ ಬಾಣಗಳಿರುವಂತೆ ಐದು ಜನ ಪಟ್ಟಮಹಿಷಿಯರು ಎಂಬ ವಿಷಯ ತಿಳಿಯುತ್ತದೆ. ಹೀಗೆ ಮನ್ಮಥನಿಗೆ ಪ್ರಿಯ ಪತ್ನಿಯರೂ ಬಹಳ ಜನ ಉಂಟೆಂದು ಪುರಾಣಗಳಲ್ಲಿ ತಿಳಿದು ಬರುತ್ತದೆ. ಮನ್ಮಥ ಪ್ರದ್ಯುಮ್ನನಾಗಿ ರುಕ್ಮಿಣಿಗೆ ಕೃಷ್ಣನಿಂದ ಹುಟ್ಟಿದ ಪ್ರಸಂಗದಲ್ಲಿ ಶಂಬರಾಸುರನ ಪತ್ನಿ ಇವನನ್ನು ಅಪಹರಿಸಿ ತನ್ನ ಅನ್ತಃಪುರದಲ್ಲಿಟ್ಟುಕೊಂಡಿದ್ದುಂಟು.

ರಾವಣನ ವೃತ್ತಾಂತಗಳು ಉತ್ತರ ಕಾಂಡದಲ್ಲಿವೆ. ಅವನ ಹುಟ್ಟು ಬೆಳವಣಿಗೆ ಕ್ರೂರತೆ ರೂಪ ಬದಲಾವಣೆಗಳು ಪರಾಕ್ರಮ ವಿಜಯ, ಸ್ತ್ರೀಲೋಲುಪತೆ ಮುಂತಾದುವೆಲ್ಲ ರಾಮಾಯಣದಲ್ಲಿರುವಂತೆಯೇ ಮಂಜರಿಯಲ್ಲೂ ಇವೆ. ರಾವಣನು ಹುಟ್ಟಿದಾಗಲೇ ಭಯಂಕರವಾಗಿ

ಕಿರಿಚಿಕೊಂಡುದರಿಂದ ರಾವಣ ಎನಿಸಿದ ಎಂಬ ಮಾತು ರಾಮಾಯಣದಲ್ಲಿಲ್ಲ, ಮಂಜರಿಯಲ್ಲೂ ಇಲ್ಲ. ಕೈಲಾಸವನ್ನು ಎತ್ತಿದಾಗ ಅದರ ಕೆಳಗೆ ಸಿಕ್ಕಿಕೊಂಡು ಕಿರಿಚಿದ ಆಗ ಪರಮೇಶ್ವರ ಕೊಟ್ಟ ಹೆಸರು ಇದು.

13. ವೇದವತಿ ವೃತ್ತಾಂತದಲ್ಲಿ ದೇವವತೀ ಎಂದು ಮಂಜರಿಯಲ್ಲಾಗಿದೆ. ಬೃಹಸ್ಪತಿಯ ಮಗ ಕುಶ ಧ್ವಜ ಮುನಿಗೆ ಲಕ್ಷ್ಮೀಯ ಅಂಶದಿಂದ ಮಗಳಾಗಿ ವಿಷ್ಣುವನ್ನೇ ವರಿಸಬೇಕೆಂದು ತಪಸ್ಸು ಮಾಡುತ್ತಿದ್ದ ಈಕೆಯ ತಲೆಕೂದಲನ್ನೂ ರಾವಣ ಕೈಯಲ್ಲಿ ಮುಟ್ಟಿದಕ್ಕೇ ಅವಳು ತನ್ನ ಹೋಮಾಗ್ನಿಯಲ್ಲಿ ದೇಹ ತ್ಯಾಗಮಾಡಿ ಸೀತೆಯಾಗಿ ಹುಟ್ಟಿ ವಿಷ್ಣುವಿನ ಅವತಾರವಾದ ರಾಮನನ್ನೇ ವರಿಸಿದಳಂತೆ. ಇದು ರಾಮಾಯಣದಲ್ಲೂ ಇದೆ ಮಂಜರಿಯಲ್ಲೂ ಇದೆ.

ಈಚಿನವರು ರಾವಣ ವೃತ್ತಾಂತಗಳಲ್ಲಿ ಮಾಂಧಾತೃ ವಿಜಯ ಮಹಾಪುರುಷ ದರ್ಶನ ಮುಂತಾದವೆಲ್ಲ ಪ್ರಕ್ಷಿಪ್ತಪಾಠ ಎಂದು ತಮ್ಮ ಮೂಗಿನ ನೇರಕ್ಕೆ ಹೇಳುವುದೆಲ್ಲ, ರಾಮಾಯಣದಲ್ಲಿರುವಂತೆ ಮಂಜರಿಯಲ್ಲೂ ಇದೆ.

ವೇದವತಿ ವಾಙ್ಮಯೀ ಕನ್ಯೆ ಎಂಬ ಮಾತಿಗೆ ತಕ್ಕಂತೆ ವೇದವತಿ ಹೆಸರು ಹೊಂದುವುದು. "ಸಂಸ್ಕೃತಂ ನಾನು ದೈವೀವಾಕ್" ಎನ್ನುವಂತೆ ಈ ವಾಕ್ಕಿಗೆ ಮೂಲವಾದ ನಾರಾಯಣನನ್ನೇವರಿಸಿದ್ದರಿಂದ ಇವಳು ದೇವವತಿ ಆಗಿರಬಹುದು.

ರಾಮಾಯಣ ಮಂಜರಿಯಲ್ಲಿ ಲಿಪಿ ದೋಷಗಳು ಪಾಠಾನ್ತರಗಳು ಬಹಳಷ್ಟು ಇವೆ. ಚರ್ಚಿಸಿ ಶೋಧಿಸಿ ಇರುವ ಟಿಪ್ಪಣಿಗಳನ್ನೂ ಈಗ ವಿಮರ್ಶಿಸಿ ಹೊಸದಾಗಿ ಪ್ರಕಟಿಸಬೇಕಾದ ಆವಶ್ಯಕತೆ ಇದೆ. ತಾಳಪತ್ರ ಭೂರ್ಜ ಪತ್ರಗಳ ಪುಟಗಳು ಹಿಂದು ಮುಂದಾಗಿರುವುದು, ಲೇಖಕರ ಪ್ರಮಾದೊಂದ ಸಮಾನ ರೂಪ ವಾಕ್ಯಗಳ ಪದಗಳ ಪ್ರತಿಲೇಖನ ಕಾಲದಲ್ಲಿ ಬಿಟ್ಟುಹೋಗುವಿಕೆಯೆಂಬುದನ್ನು ನೋಡಿ ಪರಿಶೀಲಿಸಿ, ಪತ್ರಗಳ ಅಂಚಿನಲ್ಲಿ ಅನಂತರ ಬರೆದಿರುವುದನ್ನು ಗಮನಿಸಿ ನಿರ್ಧರಿಸಬೇಕಾಗಿದೆ. ತನಕಶದಧ ಮುಂತಾದ ವ್ಯಂಜನಗಳ ಪಲ್ಲಟ ಹ್ರಸ್ವ ದೀರ್ಘಗಳ ವ್ಯತ್ಯಾಸ ಒತ್ತಕ್ಷರ ಸಂಧ್ಯಕ್ಷರಗಳ ಅಸ್ಪಷ್ಟತೆ ಮುಂತಾದ ಕಾರಣಗಳಿಂದ ಒಂದು ಪ್ರತಿಯಿಂದ ಮತ್ತೊಂದು ಪ್ರತಿ ಮಾಡುವಾಗಿನ ದೋಷಗಳು, ಲಿಪ್ಯಂತರ ಮಾಡುವಾಗಿನ ತಪ್ಪು ಇವೆಲ್ಲ ಮುದ್ರಿತವಾದ ಮಂಜರಿಯಲ್ಲಿ ಹೇರಳವಾಗಿವೆ. ಐರಾವತ ಐರಾವಣ ವಸಿಷ್ಠ ವಶಿಷ್ಠ ಮುಂತಾದ ಪ್ರಾದೇಶಿಕ ರೂಪಗಳು ವ್ಯಾಕರಣ ಸಿದ್ಧವಾದುದರಿಂದ ಕಾಶ್ಮೀರ ರಾಮಾಯಣ ಪಾಠಕ್ಕೆ ಇದ್ದ ರೂಪವನ್ನು ಮುಖ್ಯವಾಗಿ ಕೊಡುವ ಆವಶ್ಯಕತೆ ಇದೆ. ರಾಮಾಯಣವು ನಡೆದುದು ಕಾಶ್ಮೀರದಲ್ಲಲ್ಲ ಆದರೂ ಆಯಾ ಪ್ರಾದೇಶಿಕ ಬಳಕೆಯ ಪದಗಳಿರುವುದನ್ನು ನಾವು ಮರೆಯಲಾಗದು.

"ಆಖ್ಯಾನಾನಿ ಶಂಸಂತಿ"ಎಂಬ ವೇದ ವಾಕ್ಯ ವಿಚಾರಗಳಲ್ಲಿ ಯಾವಾಗಲೋ ಆಗಿ ಹೋದ ವೃತ್ತಾಂತಗಳನ್ನು ಹೇಳುವ ಆಖ್ಯಾನ ಉಪಾಖ್ಯಾನಗಳಲ್ಲಿ ಅತಿಯಾಗಿ ಚರ್ಚೆ ಮಾಡಬಾರದು. ಅಲ್ಲಿ ಹೇಳಿದಷ್ಟೇ ಸಾಕು. ಯಾವುದೋ ಒಂದು ವಿಷಯದ ಫಲಿತಾಂಶವನ್ನು ತಿಳಿಸಿ ಹೊಗಳುವುದಷ್ಟೇ ಇವುಗಳ ಉದ್ದೇಶ್ಯ. **ವೃತ್ರೋಪಾಖ್ಯಾನ ಇಡಾಪುರುಷೀಯ** ಇತ್ಯಾದಿಗಳಲ್ಲಿ ಸೂಕ್ಷ್ಮ ಮಾತ್ರ ಗ್ರಾಹ್ಯ. ನಮ್ಮ ಬುದ್ಧಿಗೆ ಎಟುಕದ ವಿಷಯಗಳನ್ನು ದಿವ್ಯಭೌಮಗಳನ್ನು ದಿವ್ಯ ಪಾತಾಳೀಯಗಳನ್ನು ಈಗಿನ ನಮ್ಮ ಕಾಲದಲ್ಲಿ ನಾವು ಕುತರ್ಕಗಳಿಂದ ದೂಷಿಸುವುದು ಸರಿಯಲ್ಲ. ಕೆಲವು ಭೌತಿಕ ವೈಜ್ಞಾನಿಕ ಸೂಕ್ಷ್ಮಗಳನ್ನು ಇತಿಹಾಸ ಪುರಾಣ ಗ್ರಂಥಗಳಲ್ಲಿ ರೂಪಕ ವಿನ್ಯಾಸಗಳಿಂದಲೂ ಕಥನ ತಂತ್ರಗಳಿಂದಲೂ ತಿಳಿಸಿರುವುದುಂಟು. ಅವುಗಳೆಲ್ಲ ಸುಳ್ಳು ಎಂಬ ಆರೋಪ ಮಾಡುವುದು ಈಗಿನ ಕಾಲದ ನಮಗೆ ತರವಲ್ಲ. ಉದಾಹರಣೆಗೆ ಸಮುದ್ರಲಂಘನ ಹನುಮಂತನ ಗಗನಗಮನ ಇತ್ಯಾದಿ. ನಾಸ್ತಿಕರಿಗೆ ರಾಮನೇ ನಾಸ್ತಿ ರಾಮಾಯಣವೇ ನಾಸ್ತಿ ಎಂದು ನಿಶ್ಚಿತವಾಗಿದ್ದರೆ ಲಂಕೆಗೆ ಕಟ್ಟಿಸಿದ ಸೇತು ಪುಷ್ಪಕವಿಮಾನ ಹತ್ತು ತಲೆ ರಾವಣ ಇತ್ಯಾದಿಗಳ ಬಗ್ಗೆ ಇಲ್ಲದ ಸಂಶಯಪಟ್ಟು ಇಷ್ಟ ಬಂದಂತೆ ಮಾತಾಡದಿರುವುದೇ ಒಳಿತು. ಆಸ್ತಿಕರು ವಾಲ್ಮೀಕಿಯ ಐತಿಹಾಸಿಕ ಮತ್ತು ಕಾವ್ಯ ಮಿಶ್ರಿತವಾದ ಮಾತಿಗೆ ವಿರೋಧವಾಗಿ ಹೇಳಲಾರರು. ರಾಮಕಥೆಯಲ್ಲಿ ಹೊಸ ಹೊಸ ಕಲ್ಪಿತ ಇತಿಹಾಸಗಳಂತೆ ತೋರುವ ವಿಷಯಗಳು ನಾಟಕಾದಿಗಳಲ್ಲಿ ಭ್ರಾಂತಿಗೆ ಕಾರಣವಾಗಿವೆ. ರಾಮ ಮಾಯಾಮೃಗವನ್ನು ಕೊಂದಾಗ ನಿಜ ಸೀತೆ

ಅದರಿಂದಲೇ ಹೊರಬಿದ್ದು ರಾಮನ ಜತೆ ಅಯೋಧ್ಯೆಗೆ ನಡೆದಳು. ರಾವಣವಧವಿಲ್ಲದೆಯೇ ರಾಮಾಯಣ ಮುಗಿದು ಹೋಗುತ್ತದೆ. ಉನ್ಮತ್ತ ರಾಘವ ನಾಟಕದಲ್ಲಿ ರಾಮನಿಗೆ ಜ್ವರ ಸನ್ನಿ ಬಂದು ಅವನು ಬದುಕುವುದೇ ಕಷ್ಟವಾದಾಗ ಶಬರಿ ಆ ಜ್ವರವನ್ನು ತನ್ನ ಮೈಗೆ ಬರಿಸಿಕೊಂಡು ಪ್ರಾಣಬಿಟ್ಟಳು. ಹನುಮಂತ ನೂರು ತಲೆ ಸಾವಿರ ತಲೆಯ ರಾವಣರನ್ನು ಪಾತಾಳಕ್ಕೆ ಹೋಗಿ ಕೊಂದ ಹೀಗೆ ಏನೋ ಇರುವುದುಂಟು. ಕಥಾ ವ್ಯಕ್ತಿಗಳ ಸೃಷ್ಟಿಗೂ ಇತಿಹಾಸ ಪುರುಷರ ಸೃಷ್ಟಿಗೂ ಅಂತರವಿದೆ. ಅಜಗಜಾಂತರ. ಇಂತಹ ವ್ಯತಿರಿಕ್ತ ವೃತ್ತಾಂಗಳಿಲ್ಲದೆ ಮೂಲ ರಾಮಾಯಣಕ್ಕೆ ಅನುಗುಣವಾಗಿದೆ ಕ್ಷೇಮೇಂದ್ರನ ರಾಮಾಯಣ ಮಂಜರಿ.

12. [ಸೀತೆ ರಾವಣ ಭಿಕ್ಷುವೇಷದಿಂದ ಬಂದಾಗ ಆಶ್ರಮದೊಳಗೆ ಕುಳಿತಿದ್ದಳು. ರಾಮನದೇ ಯೋಚನೆ. ರಾವಣನು ದಂಡ ಕಮಂಡಲು ಕಾಷಾಯ ಶಿಖೆ ಧರಿಸಿದ ಸನ್ಯಾಸಿ ವೇಷದಿಂದ ಬಂದ ಎಂದು ವಾಲ್ಮೀಕಿ ರಾಮಾಯಣ ಹೇಳುತ್ತದೆ. ಆದರೆ ಮಂಜರಿಯಲ್ಲಿ ರಾವಣ ಮುಂಡಿತ ಬೋಳುತಲೆ ಮತ್ತು ಮೈನರಗಳು ಎದ್ದು ಕಾಣುವ ಬಡ ಬ್ರಾಹ್ಮಣ ಸನ್ಯಾಸಿ.] ಈಗ ನಾವು ಸಿನಿಮಾ ಟಿ.ವಿ ಗಳಲ್ಲಿ ನೋಡಿವ ನಾರದಾದಿಗಳ ರೂಪ ಪುರಾಣದಲ್ಲಿರುವಂತಿಲ್ಲದೆ ನಾಟಕದಲ್ಲಿ ಹೇಗೋ ಒಂದು ವೇಷ ಹಾಕಿದಂತಿರುವುದಲ್ಲವೆ. ಆಯಾ ಕಾಲದಲ್ಲಿ ಸಮಾಜದಲ್ಲಿ ವೈದಿಕ ಶಿಖೆ ಬಿಟ್ಟ ಸನ್ಯಾಸಿಗಳಂತೆ ಮುಂಡಿತರೂ ಇದ್ದರು. ಶಾಸ್ತ್ರವು ಶಿಖೀಜಡೀಮುಂಡೀ ಎಂದು ಮೂರು ವಿಧವನ್ನೂ ತಿಳಿಸುತ್ತದೆ. ರಾವಣ ಛತ್ರಿಯನ್ನೂ ಹಿಡಿದಿದ್ದ ಎನ್ನುತ್ತದೆ ಮಂಜರಿ. ರಾವಣ ಸೀತೆಯನ್ನೂ ಹೇಗೆ ಎತ್ತಿಕೊಂಡ ಪರ್ಣ ಶಾಲೆಯೊಳಗೆ ಅವಳು ಕೊಟ್ಟ ಅರ್ಘ್ಯ ಪಾದ್ಯ ವನ್ಯಮೂಲ ಫಲಗಳನ್ನು ಸ್ವೀಕರಿಸಿ ಅವಳನ್ನು ವರ್ಣಿಸಿ ನಾನು ರಾವಣ ನನ್ನ ಜತೆ ಬಾ ಸುಖವಾಗಿರುವಿಯಂತೆ ಎಂದಾಗ ಸೀತೆ ಗದರಿಸುತ್ತಾಳೆ. ಅನಂತರ ರಾವಣ ಭಿಕ್ಷು ರೂಪ ತೆಗೆದು ಹಾಕಿ ತನ್ನ ಭಯಂಕರ ರೂಪ ತೋರಿಸಿ ಸೀತೆಯ ತಲೆಗೂದಲನ್ನು ಎಡಗೈಯಿಂದ ಹಿಡಿದೆಳೆದು ಅವಳ ತೊಡೆಗಳಿಗೆ ಬಲಗೈಹಾಕಿ ಬಾಳೆಯ ಕಂಬವನ್ನೂ ಎತ್ತಿಕೊಳ್ಳುವಂತೆ ಎತ್ತಿಕೊಂಡು ಆಕಾಶಕ್ಕೆ ಹಾರಿದ ಇಲ್ಲಿ ಪುಷ್ಪಕ ವಿಮಾನ ಅಥವಾ ತನ್ನ ರಥವನ್ನು ಬಳಸಿದ್ದ ಎಂದೂ ಇದೆ ಚಿತ್ರ ಬರೆಯುವವರು ಈ ಸೂಕ್ಷ್ಮಗಳನ್ನೆಲ್ಲ ಗಮನಿಸಬೇಕು.

13. [ಸೀತಾಪಹಾರವಾದ ಸಮಯದಲ್ಲಿ ಗಗನದಲ್ಲಿ ಅನೇಕ ಗ್ರಹಗಳ ತಾಕಲಾಟಗಳಾಗಿದ್ದವು. ಶನಿ ಚಿತ್ರಾ ನಕ್ಷತ್ರದೊಡನೆ ಬುಧ ರೋಹಿಣಿ ನಕ್ಷತ್ರದೊಡನಿದ್ದ. ಹೀಗೆ ಆ ಮುಹೂರ್ತವು 'ವೃಂದ' ಎನ್ನುತ್ತದೆ ಮಂಜರಿ 'ವಿಂದ' ಎನ್ನುತ್ತದೆ ರಾಮಾಯಣ. ಈ ಮುಹೂರ್ತದಲ್ಲಿ ಕಳವಾದ ವಸ್ತು ಸಿಕ್ಕುವುದು ಎಂದು ಜಟಾಯು ರಾಮನಿಗೆ ತಿಳಿಸುತ್ತಾನೆ. ವಿದ ಧಾತು ವಿಂದಕ್ಕೆ ಮೂಲ. ಲಾಭ ಎಂಬ ಆರ್ಥ. ಜಟಾಯು ಅರುಣನ ಮಗ ರಾಮಾಯಣದಲ್ಲಿ. ಮಂಜರಿಯಲ್ಲಿ (ವರುಣನ ಮಗ)

ಮತಂಗ ಮಹರ್ಷಿಯ ಆಶ್ರಮ ಮಾಲ್ಯವತ್ ಪರ್ವತ ಋಶ್ಯ ಮೂಕ ಪರ್ವತ  ಇದೆಲ್ಲ ಪಂಪಾ ಎಂಬ ಪ್ರಾಚೀನ ಹೆಸರಿನ ತುಂಗಭದ್ರೆಯ ಹಂಪೆ ಪ್ರದೇಶದಲ್ಲಿರುವವು. ಮತಂಗರು ಗಜಶಾಸ್ತ್ರ ಗಜವೈದ್ಯ ಬರೆದವರು. ಆನೆಗಳಿಗೆ ಇವರಿಂದ ಮಾತಂಗ ಎಂಬ ಹೆಸರಾಗಿದೆ. ಋಶ್ಯ ಎಂಬುದು ಸಣ್ಣ ಜಾತಿಯ ಜಿಂಕೆ. ಋಶ್ಯ ಶೃಂಗ ಮಹರ್ಷಿಯ ವಿಷಯ ಬಾಲಕಾಂಡದಲ್ಲಿ ಬಂದಿದೆ. ಋಶ್ಯ ಮೂಕ ಪರ್ವತ ಎಂದು ಮಂಜರಿಯಲ್ಲಿ ಋಶ್ಯ ಎಂದು ಮೂಲ ರಾಮಾಯಣದಲ್ಲಿದೆ ಋಶ್ಯಕೇತು ಎಂದು ಮನ್ಮಥನಿಗೆ ಹೆಸರು ಅಮರಕೋಶ ಕ್ಷೀರಸ್ವಾಮಿಯ ವ್ಯಾಖ್ಯಾನ ಋಶ್ಯ ಪದವು ಸರಿ ಋಷ್ಯ ಅಲ್ಲ ಎಂದು ತಿಳಿಸುತ್ತದೆ. ಆನೆಗಳಿಗೆ ನಾಗ ಎಂದೂ ಹೆಸರು. ಈ ಆನೆಯ ಮರಿಗಳ ಹಿಂಡು ಪಂಪಾನದಿ ಮತ್ತು ಸರೋವರವನ್ನು ಋಶ್ಯ ಮೂಕ ಪರ್ವತವನ್ನು ರಕ್ಷಿಸುತ್ತವೆ. ಯಾರೊಬ್ಬರಿಗೂ ಬೆಟ್ಟವೇರಲು ಬಿಡುವುದಿಲ್ಲ ಎಂದು ರಾಮಾಯಣದಲ್ಲಿದೆ "ಕ್ರೀಡತಾಂ ಶಿಶುನಾಗಾನಾಂ ಆಕ್ರಂದಃ ಶ್ರೂಯತೇ ಮಹಾನ್ ರಾಮ ಪಂಪಾಯಾಂ" ಶಿಶುನಾಗಾಭಿರಕ್ಷಿತಂ" ಇತ್ಯಾದಿ.

ಮಂಜರಿಯಲ್ಲಿ ಎಲಚಿ ಹಣ್ಣುಗಳನ್ನೇ ತಿಂದು ಬದುಕುವ ಶಿಶುಮಾರ ಎಂಬ ದೈತ್ಯ ದೈವಾಸುರ ಯುದ್ಧದಲ್ಲಿ ಶಂಬರಾಸುರನು ಇಂದ್ರನ ಸೈನ್ಯವನ್ನು ನಾಶಮಾಡಿದ. ವೈಜಯಂತ ನಗರದಲ್ಲಿ ಯುದ್ಧ ನಡೆದಿತ್ತು. ದಶರಥ ಇಂದ್ರನಿಗೆ ಸಹಾಯಕನಾಗಿದ್ದ. ಮೈಯೆಲ್ಲಾ ಗಾಯವಾಗಿ ಬಿದ್ದದ್ದ

ಅವನಿಗೆ ನೀನು ನಿನ್ನ ವಿದ್ಯಾಬಲದಿಂದ ರಕ್ಷಣೆ ಮಾಡಿದೆ. ಆಗ ಅವನು ನಿನಗೆ ಎರಡು ವರ ಕೊಟ್ಟಿದ್ದ ನೀನು ವರಗಳನ್ನು ಅವನಲ್ಲೇ ಅಡಮಾನ ಇಟ್ಟಿದ್ದೆ. ಈಗ ಅದನ್ನು ಬಿಡಿಸಿಕೋ ರಾಮ ೧೪ವರ್ಷ ವನವಾಸ ಮಾಡಲಿ ಭತರನಿಗೆ ಪಟ್ಟಾಭಿಷೇಕವಾಗಲಿ ಎಂದು ಮಂಥರೆ ಕೈಕೇಯಿಗೆ ಹೇಳಿಕೊಡುತ್ತಾಳೆ. ಕೈಕೇಯಿ ಬಾಲ್ಯದಲ್ಲಿ ಒಬ್ಬ ಮೂರ್ಖ ಬ್ರಾಹ್ಮಣನನ್ನು ಗೇಲಿ ಮಾಡಿದ್ದಳು. ಅವನು ಅವಳಿಗೆ ನಿನ್ನ ಬುದ್ಧಿಗೆ ಒಳ್ಳೆಯ ಹೆಸರು ಬರುವಂತಹ ಅವಕಾಶವಿಲ್ಲದೆ ಹೋಗಲಿ ಎಂದು ಶಪಿಸಿದ್ದನಂತೆ.

14. [ಮಂಥರೆ ಕೇಕೆಯ ರಾಜನ ಮಗಳ ಜತೆ ದಾಸಿಯಾಗಿ ಬಂದವಳು. ರಾಮ ಬಾಲ್ಯದಲ್ಲಿ ಅವಳನ್ನು ತಿಳಿದೋ ತಿಳಿಯದೆಯೋ ಕಾಲಿನಿಂದ ಒದ್ದಿದ್ದನಂತೆ. ಅದಕ್ಕಾಗಿ ಅವಳಿಗೆ ರಾಮನ ಮೇಲೆ ಕಡು ಕೋಪ. ಹಾಗಾಗಿ ಅವಳು ರಾಮನ ಪಟ್ಟಾಭಿಷೇಕಕ್ಕೆ ತಡೆ ಒಡ್ಡಿದಳಂತೆ ಇದೆಲ್ಲ ಮಂಜರಿಯಲ್ಲಿದೆ.] ಕೇಕೆಯ ದೇಶ ಭರತಖಂಡದ ಐವತ್ತಾರು ದೇಶಗಳಲ್ಲಿ ಒಂದು. ಇದು ಪಶ್ಚಿಮೋತ್ತರದ ಕಡೆಗಿದೆ. ಆ ದೇಶದ ರಾಜನಿಗೆ ಸಹಾಯ ಮಾಡಲು ದಶರಥ ಹೋಗಿದ್ದಾಗ ಆತನ ರಥದ ಸಾರಥಿ ಶಂಬರಾಸುರ ಯುದ್ಧದಲ್ಲಿ ಮಡಿದ. ಆಗ ಸಮರ್ಥಳಾದ ತನ್ನ ಮಗಳನ್ನು ಸಾರಥ್ಯಕ್ಕೆ ರಾಜ ದಶರಥನಿಗೆ ಕೊಡುತ್ತಾನೆ. ಅವಳ ವಿಶೇಷ ಸಹಾಯಕ್ಕೆ ಮೆಚ್ಚಿದ ದಶರಥ ಅವಳಿಗೆ ಎರಡು ವರ ಕೊಡುತ್ತಾನೆ. ಏನು ವರ ಕೇಳಬೇಕೆಂದು ಆಗ ಅವಳಿಗೆ ತೋರಲಿಲ್ಲ. ಹಾಗಾಗಿ ನನಗೆ ಬೇಕಾದಾಗ ಕೇಳಿ ಪಡೆಯುವೆ ಎಂದಿದ್ದಳು. ಈ ವಿಷಯ ಅವಳು ಮರೆತಿದ್ದರೂ ಮಂಥರೆ ಅವಳಿಂದ ತಿಳಿದು ನೆನಪಿಟ್ಟು ಕೊಂಡಿದ್ದಳು. ಇರಾನ್ ಇರಾಕ್ ದೇಶಗಳು ಅಂದು ಗಂಧರ್ವರ ನಾಡಾಗಿತ್ತು. ಅಸುರರು ಅಲ್ಲೆಲ್ಲ ಆಕ್ರಮಿಸುತ್ತಿದ್ದರು. ಅಲ್ಲಿಯ ಮೂಲನಿವಾಸಿಗಳು ಭಾರತದ ಎಲ್ಲೆಗೆ ಸೇರಿದಂತೆ ಪಾರಸೀಕರು ಪಾರ್ಸಿಗಳು. ಅವರ ವೇದ ಝುಂಡ್ ಅವೆಸ್ತಾ ಖುರ್ದ್ ಅವೆಸ್ತಾ ಖುರ್ದಿಸ್ತಾನ ಅವರದು ಆವೇದಗಳಲ್ಲಿ ಅವರ ಮುಖ್ಯದೇವರು ಅಗ್ನಿ ಮತ್ತು ವಿಷ್ಣು. ವಿಷ್ಣು ಅಸುರಾಂರ್ದನ ಅವರ ಭಾಷೆಯಲ್ಲಿ 'ಅಹುರ್‌ಮಸ್ಜ್' ಹೀಗೆ ಕೇಕೆಯ ದೇಶದ ಪಶ್ಚಿಮೋತ್ತರಗಳಲ್ಲಿ ಅಸುರಮರ್ಧನ ಮಾಡುವ ಪ್ರಸಂಗಗಳಿದ್ದವೆಂದು ತಿಳಿಯಬಹುದು. ಹೀಗೆ ಕೇಕೆಯ ದೇಶದ ಬಳಿ ವೈಜಯಂತ ನಗರದಲ್ಲಿ ಅಶ್ವಪತಿ ಎಂಬ ಕೇಕೆಯ ರಾಜನು ದೇವತೆಗಳ ಪಕ್ಷ ಹಿಡಿದಿದ್ದಿರಬೇಕು ಹೀಗಾಗಿ ಇದನ್ನು ದೇವಾಸುರಯುದ್ಧ ಎಂದು ಕರೆಯಲಾಗಿದೆ. ಭಗವದ್ಗೀತೆಯಲ್ಲಿ ಹೇಳುವ ದೈವೀಸಂಪತ್ತುಳ್ಳವರು ದೇವತೆಗಳು ಆಸುರೀಸಂಪತ್ ಉಳ್ಳವರು ಅಸುರರು. ಮೈಮುರಿದು ದುಡಿದು ಉತ್ಪಾದನೆ ಮಾಡುವ ಜನ ಅಯೋಧ್ಯಾ ರಾಜ್ಯದಲ್ಲಿರುವಂತೆ ದೈವಿಕರು. ಕಡಲ್ಗಳ್ಳರಂತಿದ್ದು ಲಂಕೆಯಲ್ಲಿ ಸ್ವರ್ಣಸಮೃದ್ಧಿಯಿಂದ ಮಾಂಸಾಹಾರಿಗಳಾಗಿ ಜಗದ್ವಿರೋಧಿಗಳಾಗಿ ಇತರ ಪ್ರಜಾಕಂಟಕರಾಗಿದ್ದವರು ಶಂಬರ ರಾವಣ ಮುಂತಾದ ಅಸುರರು ಈಮರ್ಮ ತಿಳಿದಿದ್ದರೆ ಕೇಕೆಯ ರಾಜನಿಗೆ ಬಂದ ಅಸುರಯುದ್ಧ ದೇವಾಸುರ ಯುದ್ಧ ಎಂದು ಹೇಳಿದರಲ್ಲಿ ತಪ್ಪಿಲ್ಲ.

[ಕೈಕೇಯಿ ಮಂಥರೆಯರ ಬಗ್ಗೆ :-

**ಕೈಕೇಯ್ಯಾ ಬ್ರಾಹ್ಮಣಃ ಪೂರ್ವಂ ಮೂರ್ಖೋ ಬಾಲ್ಯೇ ವಿಡಂಬಿತಃ ।**
**ತಚ್ಛಾಪಾದಭವತ್ ತಸ್ಯಾಃ ಮತಿಃ ಕೀರ್ತಿಪರಾಙ್ಮುಖೀ** ॥703॥

**ಸಮೇ ಬಹುಮತಃ ಪುತ್ರೋಮಂಥರೇ ॥ ಭರತಾಧಿಕಂ ।**
**ಚಕ್ರೇ ರಾಮಸ್ಯ ಕೈಕೇಯಿ ಗುಣಶ್ಲಾಘಾಂ ಪುನಃ ಪುನಃ ॥**

**ಕೌಮಾರ ದಾಸೀ ಕೈಕೇಯ್ಯಾ ಮಂಥರಾ ವಿಸ್ಮಿತಾಭವತ್ ।**
**ಶೈಶವೇಕಿಲ ರಾಮೇಣ ಪುರಾ ಪ್ರಣಯ ಕೋಪತಃ ।**
**ಚರಣೇನಾಹತಾ ತತ್ರ ಚಿರಂಕೋಪ ಮುವಾಹಸಾ ॥ 667 ॥**
॥ ಅಯೋಧ್ಯಾ ॥

ಸಂಸ್ಕೃತ ಸಾಹಿತ್ಯ ವಾಙ್ಮಯದ ಶಬ್ಧಜೋಡಣೆಯ ಸೌಂದರ್ಯ, ಅರ್ಥವತ್ತಾದ ಮಾತಿನ ರೀತಿ ನೀತಿಗಳು, ರಸವಂತಿಕೆಯ ಉತ್ತುಂಗತೆ, ಇವೆಲ್ಲ ಕ್ಷೇಮೇಂದ್ರನ ಗ್ರಂಥಗಳಲ್ಲಿ ಕಂಡು ಬರುವಂತೆ, ಅವನ ಸಮಕಾಲದ ಸಮಸ್ತ ಭಾರತ ಸಾಹಿತ್ಯ ಸಮರ್ಥರ ಶೈಲಿಯಾಗಿತ್ತು. ಈಗ ನಮ್ಮ ಭಾರತೀಯ ಶಾಸ್ತ್ರ ಕಾವ್ಯ ಸಾಹಿತ್ಯಗಳಲ್ಲಿ ಆಂಗ್ಲಾದಿ ಸಾಹಿತ್ಯದ ಸೊಗಡು ಎಲ್ಲ ಭಾಷೆಗಳಲ್ಲೂ ಇಣುಕಿರುವಂತೆ, ಆಗ ಕೆಲವು ಸಮಾನ

ಭಾವಗಳು ಬಳಕೆಯಾಗುತ್ತಿದ್ದವು. ಆಂಗ್ಲಾಡಳಿತ ಹೋಗಿ ಭಾರತಕ್ಕೆ ಪ್ರಜಾ ಸ್ವಾತಂತ್ರ್ಯ ಬಂದ ಮೇಲೆ ಈ ಭಾರತದಲ್ಲಿ ದಲಿತರ ಬಗ್ಗೆ ಅನುಕಂಪ ಭಾವವು ಪ್ರಸರಿಸಿದಂತೆ, ಹಿಂದಿನವರೆಲ್ಲರೂ ಇದ್ದರೆನ್ನಲು ಶಂಕರ-ರಾಮಾನುಜ ಮಧ್ವಾಚಾರ್ಯರುಗಳ ಒಂದೊಂದು ಪ್ರಸಂಗಗಳನ್ನು ಎತ್ತಿ ಹೇಳುವ ಜನ ಈಗಿರುವಂತೆ, ಕ್ಷೇಮೇಂದ್ರನ ಸಮಯದಲ್ಲಿ ಇತಿಹಾಸ ಪುರಾಣಗಳ ಪ್ರಭಾವ, ವರ್ಣನೆಯ ನೈಪುಣ್ಯ ರಸವತ್ತಾದ ಮಾತುಗಾರಿಕೆ ಮುಂತಾದವು ದಕ್ಷಿಣೋತ್ತರ ಭಾರತಗಳಲ್ಲಿ ಸಮಾನವಾಗಿದ್ದವು. ಸುಮಾರು ಅರವತ್ತು ವರ್ಷಗಳ ಕಾಲ ಕಾಶ್ಮೀರದ ಇಷ್ಟದೇವ ಅನಂತರಾಜರು ಉತ್ತರ ಭಾರತದಲ್ಲೂ ಮಧ್ಯಪ್ರದೇಶದ ಧಾರಾನಗರದ ಭೋಜರಾಜನು ದಕ್ಷಿಣ ಭಾರತದಲ್ಲೂ ಭಾರತ ರಾಷ್ಟ್ರದೊಳಗೆ ವಿದೇಶೀಯರು ಬಂದು ಆಕ್ರಮಿಸದಂತೆ ಸಾಹಿತ್ಯ ಸೀಮೆಯನ್ನೂ ವಿಸ್ತರಿಸಿ ಸುಖೀ ರಾಜ್ಯ ಭಾರತವನ್ನು ರಕ್ಷಿಸಿದ್ದರು. ಈ ವಿಷಯ ಕಲ್ಹಣನ ಕಾಶ್ಮೀರ ರಾಜತರಂಗಿಣಿಯಲ್ಲಿ ಸ್ಪಷ್ಟವಾಗಿದೆ.

**ಸಚ ಭೋಜನರೇಂದ್ರಶ್ಚ ದಾನೋತ್ಕರ್ಷೇಣ ವಿಶ್ರುತೌ ।**
**ಸೂರೀ ತಸ್ಮಿನ್ ಕ್ಷಣೇ ತತ್ರ ದ್ವಾವಾಸ್ತಾಂ ಕವಿಬಾಂಧವೌ ॥**

ಇವರು ಕವಿಗಳಿಗೆ ಕಾಮಧೇನುವಿನಂತೆ ಆಸರೆಯಾಗಿ, ಸ್ವತಃ ತಾವೂ ಕವಿಗಳಾಗಿ ಶಾಸ್ತ್ರಜ್ಞರಾಗಿ ಶಾಸ್ತ್ರಾಕಾರರಾಗಿ ವಿಜ್ಞಾನಿಗಳಾಗಿದ್ದರು ಎನ್ನಲು ಭೋಜ ರಾಜಾದಿಗಳ ಗ್ರಂಥಗಳೇ ಇಂದು ಸಾಕ್ಷಿ. ಅನಂತರಾಜನ ಆಸ್ಥಾನ ಕವಿ ನೀತಿ ಮಂತ್ರಿ ಕ್ಷೇಮೇಂದ್ರ. ಇವನ ನೀತಿಮತಿಯನ್ನು ಮುಂದೆ ಸ್ವಲ್ಪ ವಿವರಿಸಲಾಗುವುದು.

ಭೋಜ ರಾಜ ಮತ್ತು ಕ್ಷೇಮೇಂದ್ರರ ವಾಲ್ಮೀಕಿ ರಾಮಾಯಣ ಸಂಗ್ರಹ ವರ್ಣನೆಗಳಲ್ಲಿ ಕೆಲವು ಸಮಾನತೆಗಳಿವೆ. ಶಬ್ಧ, ಅರ್ಥ, ಅಲಂಕಾರ, ಉಕ್ತಿ, ರಸಗಳ ಓಟ ಒಂದೇ ರೀತಿಯಲ್ಲಿದೆ. ಇದು ಭಾರತದ ಸಾಂಸ್ಕೃತಿಕ ಸಾಹಿತ್ಯಿಕ ಏಕತೆಯ ಗುರುತೂ ಆಗಬಹುದು.

ರಾಮಾಯಣ ಮಂಜರಿಯಲ್ಲಿ ಬರುವ ಮಾತು :- 'ಲಕ್ಷ್ಮಣನು ರಾಮನ ವನವಾಸದ ಬಗ್ಗೆ ಕೋಪಿಸಿಕೊಂಡು ಆಡುವುದು' - ಭರತನೇ ಕೈಕೇಯಿ ಮಂಥರೆಯ ಮೂಲಕ ಈ ಡೊಂಕು ವ್ಯವಹಾರವನ್ನು ನಡೆಸಿರಬಹುದಾದರೆ : ಈಗಾಲೇ ಈ ನನ್ನ ಬಿಲ್ಲು ಡೊಂಕಾಗಿ ಅವನ ಡೊಂಕನ್ನು ಸದೆ ಬಡಿಯಲು ಸಿದ್ಧವಾಗಿದೆ". ಹೀಗೆ ಭೋಜನ ಚಂಪೂ ರಾಮಾಯಣದಲ್ಲಿ "ರಾಮನು ಕೈಕೇಯಿಯ ಮಾತಿಗೆ ತಲೆಬಾಗುವುದು ಬೇಡ ; ನನ್ನ ಹೆದೆಯೇರಿಸಿದ ಬಿಲ್ಲು ಬಾಗಿ ಸಿದ್ಧವಾಗಿದೆ; ಇದು ಲಕ್ಷ್ಮಣನ ಮಾತು.

ಸೀತೆ ವನವಾಸಕ್ಕೆ ತಾನೂ ಬರುವೆನೆಂದಾಗ ರಾಮನು ಕಾಡಿನ ಕಷ್ಟಗಳನ್ನು ತಿಳಿಸುತ್ತಾ ಸೀತೆಯ ಸುಕುಮಾರತೆಯನ್ನು ನೋಡಿನೊಂದರೂ ಹೇಳಬೇಕಾದ ರೀತಿ ಹೇಳುತ್ತಾನೆ. ಭೋಜರಾಜನ ರಾಮಾಯಣ ಚಂಪುವಿನಲ್ಲಿ ಬಾಗೇ ಹೂವಿನಂತೆ ಅತಿ ಮೃದುವಾದ ನಿನ್ನ ಶರೀರ ಕಾಡಿನ ಕರ್ಕಶ ಸನ್ನಿವೇಶಗಳಿಗೆ ತಕ್ಕುದಲ್ಲ. ಕಾಡಿನಲ್ಲಿ ಹೆಣ್ಣು ಜಿಂಕೆಗಳನ್ನು ಹಿಂಬಾಲಿಸಿ ಹಿಂಭಾಗ ಹಿಡಿದು ಕಚ್ಚಿ ಎಳೆದು ರಕ್ತಹೀರಿ ಚಲ್ಲಾಡುವ ಕೆಮ್ಮೂತಿಯ ತೋಳಗಳಿವೆ. ಕಾಡಿನಲ್ಲಿ ನಾನು ನಿನ್ನನ್ನು ಬಾಡಿಸಲಾರೆ ಇಂತಹ ವನವಾಸ ನಿನಗೆ ಸಲ್ಲದು.

ಇಲ್ಲಿಯ ಶಬ್ಧಗಳ ಹೋಲಿಕೆಯನ್ನು ನಾವು ಗಮನಿಸಬಹುದು:-

ಹನುಮಂತ ಆಗಸದಿಂದಲೇ ಲಂಕೆಯ ಸಮುದ್ರತೀರದ ವಿವಿಧ ವೃಕ್ಷಗಳ ಕಾಡಿನ ಸಾಲನ್ನು ನೋಡಿದ. ಮಂಜರಿಯಲ್ಲಿ ಕ್ಷೇಮೇಂದ್ರನ ಪದ್ಯ:-

**ಅಥ ತರಲ ತಮಾಲೋತ್ತಾಲ ತಾಲೀಪ್ರಿಯಾಲಾಂ**
**ಪ್ರಬಲ ಸರಲ ಸಾಲೋದ್ದಾಲ ತಾಲ ಪ್ರವಾಲಾಂ**
**ಅಗುರುತಗರ ಗೌರಸ್ಫಾರಕರ್ಪೂರ ಸಾರಾಂ**
**ಅವಿರಲ ವನಮಾಲಾಂ ಸೋಽಬ್ಧಿಕೂಲೇ ದದರ್ಶ**

(571 ಕಿಷ್ಕಿ)

ಲಂಕೆಯ ವನದ ಸೊಬಗು ಭೋಜರಾಜನ ಗದ್ಯ :-

"ತತಸ್ತಸ್ಯಾಂ ನಾಗಪುನ್ನಾಗ ತಾಲ ಹಿಂತಾಲ ತಮಾಲ ಕೃತಮಾಲ ಸರಲವಕುಲವಂಜುಲ ತಿಲಕಾಮಲಕ ಕಕ್ಕೋಲಾಂ ಕೋಲ ಲಪಂಗ ವಿಕಂಕತ ಕೇತಕೀ ಕದಂಬೋದುಂಬುರ ಕಪಿತ್ಥಾಶ್ವತ್ಥ ಕುರವಕ ಮರುವಕ ಮಾಕನ್ದ ಕುಂದ ತಿಂದುಕ ಚಂದನ ಸ್ಯಂದನ ಚಂಪಕ ಚಾಂಪೇ ಯಾಪನಸ ಪಾಟಲಾ ಪ್ರಿಯಾಲು ಪ್ರಾಯೈಃ" ಇತ್ಯಾದಿ.

Taking away the kingdom, ladies, place, state, relative, and riches, pride, Arrogance, causing harm to the state, destruction (violation) of knowledge, riches, power, virtues and gods (worship), exploitation of friends and their riches, destruction of relative, obstructing the grace of gods (by violating sacred rituals), spoiling the circle of kings, aspiring for the same thing. These are the causes of enmity. Many of above mentioned are the causes for the war between *Rama* and *Ravana*.

1. **मण्डलः** – This is a circle of kings the vijigisu in the middle. This is applicable to each king and kingdom. The total number of the kings is twelve.

1. Vijigisu - desirous to conquer, 2. Ari - Enemy King, 3. Mitra - Ally, 4.Arimitra - Ally of the enemy, 5.Mitrasatru - Enemy of the ally, 6. Arimitra mitra - The ally of ally of enemy, 7. Parasnigraha – Holder of the heel (coming from the back), 8. Akranda - who comes at a cry,
9. Parsnigrahasara – Helper of Parsnigraha, 10. Akranda – Sara (Helper of Akranda), 11.Madhyastha - The middle king, 12. Udasina – The neuternal King.

When a king wishes to proceed on expedition he and his counsel should assess the troops of all these kings. This is found in *Yuddhakanda* of *Rāmāyaṇa.* The poet *Magha* in his '*Sisupalavadha' Mahakāvya* explains this topic through the words of *uddhava*.

10. **द्वियोनीसन्धिविग्रहौ** – The two main sources of *sadgunya* are *Sandhi* and *vigraha*. Thus a perfect frame of polity is presented in *Rāmāyaṇa*.

The message regarding the administration here is applicable to any kingdom. Whether it is democracy or monarchy the leader should be a noble one. The characteristics of a ruler mentioned in *Rāmāyaṇa* and later *Smrtis*, *Arthaśāstra* agree with each other.

The qualities of *Mantri* and *Amatyas* are discussed. The law and order is given importance. The Asamanja who was the son of Sagara was banished from the kingdom for his criminal behavior. No person was exploited by the officers in the regin of *Dasaratha*. When there was drought for quite a long period he made human efforts and divine worships. Sages were happy in the Tapovanas.

Even in Ravana's kingdom the people were happy and prosperous. Except *Vibhisana* all his relatives and subjects followed his orders, whether it was right or wrong. All this focuses on the peaceful and pleasant life of the people in their kingdoms.

No professional rivalry or jelousy existed in the people. Rama's dialogue with Bharata is a guide to the noble administration. A reference book on polity may be brought out with the matter embedded in it.

**यावत् स्थास्यन्ति गिरयः सरितश्च महीतले ।**
**तावद् रामायणकथा लोकेषु प्रचलिष्यति ॥**

**Abbreviations : -**

1. MBH - Mahābhārata.
2. M.S. - Manusmrti
3. Raghu - Raghuvaṃśam
4. Sis - Sisupalavadham
5. K.A. - The Kautiliya Arthaśāstra
6. **अ** - **अयोध्याकाण्डः**
7. **कामन्दक** - **कामन्दकीय नीतिसारः**
8. **बा** - **बालकाण्डः**

**Bibligraphy**

1. Kamandakiya Nitisara - Anandasram series - 136
2. Mahābhārata - Gorakhpur press.
3. Manusmrti - Chowkamba Vidya bhavan.
4. Raghuvaṃśam by Kalidasa - Chowkamba Surabharati prakasam, Varanasi 1983
5. Rāmāyaṇa with telugu commentary by Prof. P. Sri Ramachandrudu, Arshavijnana Trust Hyderabad.
6. Sisupalavadham (Magha) Bharatiya Book corporation, Delhi – 1990.
7. The Kautiliya Arthasastra – R. P.Kangle, Motilal Banarasidas – 1986. ❑

*Prof. Mallepuram G Venkatesh, Former Vice Chancellor, Karnataka Sanskrit University being honored by Shri N Ramanuja, Chairman, B.V.B. and Shri Peeyush Jain, Hon. Treasurer, B.V.B.*

# ವಾಲ್ಮೀಕಿ ಮುನಿಗಳ ಅಲಂಕಾರ ಸೌಭಾಗ್ಯ

ಶತಾವಧಾನಿ ಡಾ॥ ಆರ್. ಗಣೇಶ್

ಭಗವಾನ್ ವಾಲ್ಮೀಕಿ ಮಹರ್ಷಿಗಳ ಆದಿಕಾವ್ಯ ರಾಮಾಯಣವು ಕಾಳಿದಾಸನ ಮಾತಿನಲ್ಲಿ "ಕವಿಪ್ರಥಮಪದ್ಧತಿ" – ಕವಿಗಳ ಪಾಲಿಗೆ ಮೊದಲ ಹೆದ್ದಾರಿ. ಇದು ಬಹ್ವರ್ಥಗ್ರಾಸಿಯಾದ ಯಥಾರ್ಥವರ್ಣನೆ. ರಾಮಾಯಣವು ರಸಿಕರಂಜನೆಯಾಗಿ ಮಾತ್ರವಲ್ಲದೆ ಕವಿ–ಕಲಾವಿದರ ಪಾಲಿಗೂ ನಿರಂಜನಪ್ರೇರಕಸಾಮಾಗ್ರಿಯಾಗಿ ರಾಜಿಸಿದೆ. ಹೀಗೆ ಭಾವಯಿತ್ರೀ ಮತ್ತು ಕಾರಯಿತ್ರೀ ಪ್ರತಿಭೆಗಳೆರಡಕ್ಕೂ ವಾಲ್ಮೀಕಿಮುನಿಗಳ ಒತ್ತಾಸೆ ಮಿಗಿಲಾಗಿದೆ. ಪ್ರಸ್ತುತಲೇಖನವು ಕವಿಗಳ ಪಾಲಿಗೆ ನೆರವಾಗಬಲ್ಲ ರಾಮಾಯಣದ ಒಂದು ಮಹತ್ತ್ವದ ಮುಖವನ್ನು ವಿವೇಚಿಸಲಿರುವುದು ಶೀರ್ಷಿಕೆಯಿಂದಲೇ ಸುವೇದ್ಯ.

ಈ ತಿಳಿಬೆಳಕಿನಲ್ಲಿ ಆದಿಕವಿಗಳ ಅನ್ಯಾದೃಶವಾಗ್ವಿಲಾಸವನ್ನು ಪರಿಕಿಸೋಣ. ಅವರು ಇತಿವೃತ್ತ–ಪಾತ್ರನಿರ್ಮಾಣಗಳಲ್ಲಿ ಹೇಗೆ ದಕ್ಷರೋ ಹಾಗೆಯೇ ಅಲಂಕಾರವಿನ್ಯಾಸ–ವಾಚೋಯುಕ್ತಿವಿಲಾಸಗಳಲ್ಲಿಯೂ ಅಸಮಾನರು. ಹೆಚ್ಚಿನ ಜನತೆಗೆ ಆದಿಕವಿಗಳ ಕಥನತಂತ್ರ ಮತ್ತು ರಸಸೃಷ್ಟಿಗಳ ಬಗೆಗೆ ಸ್ಥೂಲವಾದರೂ ಸ್ಪಷ್ಟವಾದ ಅರಿವಿರುವಂತೆ ವಾಕ್ಯವಕ್ರತೆಯ ಸೊಗಸನ್ನು ಕುರಿತು ತಿಳಿವಿಲ್ಲ. ಈ ಕಾರಣದಿಂದಲೂ ಸದ್ಯದ ಪ್ರಯತ್ನ ಉಪಾದೇಯವಾಗಬಹುದು. ಅಲ್ಲದೆ ಸುಸಂಸ್ಕೃತ ಜಗತ್ತಿನ ಮೊತ್ತಮೊದಲ ಸುಂದರಕಾವ್ಯವೆನೆಸಿದ ರಾಮಾಯಣದಲ್ಲಿ ಅದರ ಅಂದ–ಚಂದಗಳಿಗೆ ಅಲಂಕಾರಗಳ ಯೋಗದಾನ ಅದೆಷ್ಟು ಮುಖ್ಯ ಮತ್ತು ಅನಿವಾರ್ಯವೆಂಬುದೂ ಈ ಮೂಲಕ ತಿಳಿಯದಿರದು.

ವಿವಿಧಘನಾಲಂಕಾರಂ ವಿಚಿತ್ರರ್ಣಾವಲೀಮಯಸ್ಫುರಣಮ್ ।
ಶಕ್ರಾಯುಧಮಿವ ವಕ್ರಂ ವಲ್ಮೀಕಭುವಂ ಕವಿಂ ನೌಮಿ॥
(ಆರ್ಯಾಸಪ್ತಶತೀ ೧.೩೦)

ಭಗವಾನ್ ವಾಲ್ಮೀಕಿ ಮಹರ್ಷಿಗಳ ಆದಿಕಾವ್ಯ ರಾಮಾಯಣವು ಕಾಳಿದಾಸನ ಮಾತಿನಲ್ಲಿ “ಕವಿಪ್ರಥಮಪದ್ಧತಿ” – ಕವಿಗಳ ಪಾಲಿಗೆ ಮೊದಲ ಹೆದ್ದಾರಿ. ಇದು ಬಹ್ವರ್ಥಗ್ರಾಸಿಯಾದ ಯಥಾರ್ಥವರ್ಣನೆ. ರಾಮಾಯಣವು ರಸಿಕರಂಜನೆಯಾಗಿ ಮಾತ್ರವಲ್ಲದೆ ಕವಿ-ಕಲಾವಿದರ ಪಾಲಿಗೂ ನಿರಂಜನಪ್ರೇರಕಸಾಮಾಗ್ರಿಯಾಗಿ ರಾಜಿಸಿದೆ. ಹೀಗೆ ಭಾವಯಿತ್ರೀ ಮತ್ತು ಕಾರಯಿತ್ರೀ ಪ್ರತಿಭೆಗಳೆರಡಕ್ಕೂ ವಾಲ್ಮೀಕಿಮುನಿಗಳ ಒತ್ತಾಸೆ ಮಿಗಿಲಾಗಿದೆ. ಪ್ರಸ್ತುತಲೇಖನವು ಕವಿಗಳ ಪಾಲಿಗೆ ನೆರವಾಗಬಲ್ಲ ರಾಮಾಯಣದ ಒಂದು ಮಹತ್ತ್ವದ ಮುಖವನ್ನು ವಿವೇಚಿಸಲಿರುವುದು ಶೀರ್ಷಿಕೆಯಿಂದಲೇ ಸುವೇದ್ಯ.

ಕವಿಲೋಕವು ಸರ್ವಕಾಲದಲ್ಲಿಯೂ ಉಕ್ತಿವೈಚಿತ್ರ್ಯಕ್ಕಾಗಿ ಹೆಣಗುತ್ತಿರುತ್ತದೆ. ಕಾವ್ಯಶಿಲ್ಪದ ಇಡಿ ಮತ್ತು ಬಿಡಿಗಳನ್ನು ರಸ ಮತ್ತು ವಕ್ರೋಕ್ತಿಗಳು ಕ್ರಮವಾಗಿ ಪ್ರತಿನಿಧಿಸುತ್ತವೆಂಬುದು ಪ್ರಾಯಿಕವಾಗಿ ಎಲ್ಲ ಕಾವ್ಯಮೀಮಾಂಸಕರ ನಿಗಮನ. ಇವೆರಡರಲ್ಲಿ ರಸವು ಕವಿ-ಸಹೃದಯರಿಬ್ಬರಿಗೂ ಸಲ್ಲುವ ಸತ್ತ್ವ, ಆದರೆ ವಕ್ರೋಕ್ತಿಯು ಮಿಗಿಲಾಗಿ ಕವಿಯಲ್ಲಿಯೇ ಸಾಕ್ಷಾತ್ಕರಿಸಬೇಕು. ಅಲ್ಲದೆ ಅವನ ಪಾಲಿಗೆ ಉಳಿಯುವ ಮೂರ್ತವಾದ ಸಾಧನವೆಂದರೆ ಇದೊಂದೇ. ಈ ದೃಷ್ಟಿಯಿಂದಲೇ ವಕ್ರತೆಯನ್ನು ಕವಿದೃಷ್ಟಿಯಿಂದ ಪ್ರಧಾನವೆಂದೂ ರಸಧ್ವನಿಯನ್ನು ಸಹೃದಯದೃಷ್ಟಿಯಿಂದ ಪ್ರಮುಖವೆಂದೂ ಬಗೆಯಲಾಗುತ್ತದೆ. ಕಾವ್ಯನಿರ್ಮಾಣದ ಸ್ವಾರಸ್ಯವನ್ನು ಮುಷ್ಟಿಮೇಯವಾಗಿ ತಿಳಿಸುವಲ್ಲಿ ವಕ್ರತಾವ್ಯಾಪಾರದ ಒಂದು ಮುಖ್ಯಾಂಗವೆನಿಸಿದ ಅಲಂಕಾರವು ಪ್ರಧಾನಪಾತ್ರವನ್ನು ವಹಿಸುತ್ತದೆ. ಇದನ್ನೇ “ವಾಕ್ಯವಕ್ರತೆ”ಯೆಂದು ಕುಂತಕನು ಗುರುತಿಸುತ್ತಾನೆ. ಅವನೇ ವಿಭಾಗೀಕರಿಸುವ ವಿವಿಧಸ್ತರದ ವಕ್ರತೆಗಳ ಪೈಕಿ ವಾಕ್ಯವಕ್ರತೆಯು ಮಧ್ಯಮಣಿ. ಏಕೆಂದರೆ ಪದಪೂರ್ವಾರ್ಧವಕ್ರತೆ ಮತ್ತು ಪ್ರತ್ಯಯವಕ್ರತೆಗಳು ವಾಕ್ಯವೊಂದರ ಘಟಕವಾದ ಪದದಲ್ಲಿಯೇ ಅಡಗುವ ಕಾರಣ ಇವೆರಡೂ ಒಂದು ಮಗ್ಗುಲಿಗೆ ಬಂದರೆ ಪ್ರಕರಣವಕ್ರತೆ ಮತ್ತು ಪ್ರಬಂಧವಕ್ರತೆಗಳು ಅನೇಕ ವಾಕ್ಯಗಳ ಸಮುಚ್ಚಯವಾದ ಸಂದರ್ಭಗಳಲ್ಲಿ ಸೇರುವ ಕಾರಣ ಮತ್ತೊಂದು ಮಗ್ಗುಲಿಗೆ ಬರುತ್ತವೆ. ಹೀಗೆ ವಾಕ್ಯವಕ್ರತೆಯ ಸ್ಥಾನ ಕೀಲಕಪ್ರಾಯವಾದುದು. ಅಷ್ಟೇ ಅಲ್ಲ ಪ್ರಾಯೋಗಿಕ ವಿಮರ್ಶೆಯಲ್ಲಿಯೂ ಚೆನ್ನಾಗಿ ಒದಗಿಬರುವಂಥದ್ದು. ಏಕೆಂದರೆ ಬಿಡಿಯಾದ ಉದಾಹರಣೆಗಳ ಮೂಲಕ ಕಾವ್ಯಸೌಂದರ್ಯವನ್ನು ವಿವೇಚಿಸಲು ಪದ ಮತ್ತು ಪದಾಂಶಗಳು ತುಂಬ ಚಿಕ್ಕವು; ಪ್ರಕರಣ ಮತ್ತು ಪ್ರಬಂಧಗಳು ತುಂಬ ದೊಡ್ಡವು. ಹೀಗಾಗಿ ಇವುಗಳನ್ನು ಯಥಾವತ್ತಾಗಿ ಉದ್ಧರಿಸಿಕೊಂಡು ವಿವೇಚಿಸುವಲ್ಲಿ ಸ್ವಲ್ಪ ತೊಡಕಾದೀತು. ಅಲ್ಲದೆ ಮುಕ್ತಕಕಾವ್ಯದಂಥ-ಅಥವಾ ಭಾವಗೀತದಂಥ-ಏಕಘನರಚನೆಗಳಲ್ಲಿಯೂ ವಾಕ್ಯವಕ್ರತೆಯ ವಲಯಕ್ಕೆ ಬರುವ ಅಲಂಕಾರಗಳ ಯೋಗದಾನ ಅಪಾರ. ಈ ಕಾರಣದಿಂದಲೇ ನಮ್ಮ ಹೆಚ್ಚಿನ ಕಾವ್ಯಮೀಮಾಂಸಕರು ತಮ್ಮ ಗ್ರಂಥಗಳಲ್ಲಿ ಅಲಂಕಾರಗಳ ವಿವೇಚನೆಗೇ ಬಹಳಷ್ಟು ಭಾಗವನ್ನು ಮೀಸಲಿರಿಸಿದ್ದಾರೆ. ಇದನ್ನರಿಯದೆ ಅವರನ್ನೆಲ್ಲ ಧ್ವನಿವಿರೋಧಿಗಳೆಂದೋ ಸಮಗ್ರತೆಯ ಕಲ್ಪನೆಯೇ ಇಲ್ಲದವರೆಂದೋ ಹಣೆಪಟ್ಟಿ ಹಚ್ಚಿ ಸಾರಾಸಗಟಾಗಿ ತಿರಸ್ಕರಿಸುವುದು ಅಯುಕ್ತ.

ಸಾಮಾನ್ಯವಾಗಿ ಅಲಂಕಾರಗಳಹೆಸರನ್ನೆತ್ತಿದೊಡನೆಯೇ ಆಧುನಿಕ ವಿಮರ್ಶಕರು ಹುಬ್ಬೇರಿಸುವುದುಂಟು. ಅವರ ಪ್ರಕಾರ ಇವು ಯಾತಯಾಮ, ಗತರಸ; ಅಲ್ಲದೆ ಇವು ಕ್ಲಿಷ್ಟ ಮತ್ತು ಕೃತಕ. ಆದರೆ ಅಲಂಕಾರಗಳ ಸ್ವರೂಪವನ್ನು ಬಲ್ಲವರಿಗೆ ಯಾವುದೇ ದೇಶ-ಕಾಲವಲಯದಲ್ಲಿಯೂ ಉಕ್ತಿಯೊಂದರ ಚೆಲುವು ಅಲಂಕಾರವನ್ನು ಮಿಗಿಲಾಗಿ ಆಶ್ರಯಿಸಿರುತ್ತದೆಂಬುದು ಸ್ಪಷ್ಟವಾಗಿ ತಿಳಿದಿರುತ್ತದೆ. ಕೇವಲ ನಮ್ಮ ಪ್ರಾಚೀನಾಲಂಕಾರಿಕರ ಪರಿಭಾಷೆಯಲ್ಲಿ ಅವುಗಳ ಹೆಸರುಗಳನ್ನು ಗಮನಿಸಿಕೊಳ್ಳುವುದೊಂದೇ ಅಪರಿತವೂ ಕಷ್ಟಕರವೂ ಆದ ಸಂಗತಿಯಾಗಿ ತೋರಬಹುದು. ಇದಾದರೂ ಬಲುಮಟ್ಟಿಗೆ ಅಪ್ರಸಿದ್ಧವೂ ದುರೂಹ್ಯವೂ ಆದ ಅಲಂಕಾರಗಳ ಬಗೆಗೆ ಸಲ್ಲುವ ಮಾತು. ಆದರೆ ಸಹಜವೂ ಚಿರಂತನವೂ ಆದ ಸುಪ್ರಸಿದ್ಧ-ಸ್ಫುಟಾಲಂಕಾರಗಳಿಗೆ ಇಂಥ ಆಕ್ಷೇಪ

ಸಲ್ಲದು. ಸಂಜ್ಞೆ-ಪರಿಭಾಷೆಗಳು, ಲಕ್ಷ್ಯ-ಲಕ್ಷಣಸಮನ್ವಯಗಳು ಯಾವುದೇ ಶಾಸ್ತ್ರದ ಅನಿವಾರ್ಯ ಧರ್ಮ; ಇದು ಎಲ್ಲ ಜಿಜ್ಞಾಸುಗಳು ಪ್ರಮಾಣಿಕವಾಗಿ ಅರಿತು ಅನುಸಂಧಾನಿಸಬೇಕಾದ ಸಾತ್ತ್ವಿಕಕರ್ಮ.

ಈ ತಿಳಿಬೆಳಕಿನಲ್ಲಿ ಆದಿಕವಿಗಳ ಅನ್ಯಾದೃಶವಾಗ್ವಿಲಾಸವನ್ನು ಪರಿಕಿಸೋಣ. ಅವರು ಇತಿವೃತ್ತ-ಪಾತ್ರನಿರ್ಮಾಣಗಳಲ್ಲಿ ಹೇಗೆ ದಕ್ಷರೋ ಹಾಗೆಯೇ ಅಲಂಕಾರವಿನ್ಯಾಸ-ವಾಚೋಯುಕ್ತಿವಿಲಾಸಗಳಲ್ಲಿಯೂ ಅಸಮಾನರು. ಹೆಚ್ಚಿನ ಜನತೆಗೆ ಆದಿಕವಿಗಳ ಕಥನತಂತ್ರ ಮತ್ತು ರಸಸೃಷ್ಟಿಗಳ ಬಗೆಗೆ ಸ್ಥೂಲವಾದರೂ ಸ್ಪಷ್ಟವಾದ ಅರಿವಿರುವಂತೆ ವಾಕ್ಯವಕ್ರತೆಯ ಸೊಗಸನ್ನು ಕುರಿತು ತಿಳಿವಿಲ್ಲ. ಈ ಕಾರಣದಿಂದಲೂ ಸದ್ಯದ ಪ್ರಯತ್ನ ಉಪಾದೇಯವಾಗಬಹುದು. ಅಲ್ಲದೆ ಸುಸಂಸ್ಕೃತ ಜಗತ್ತಿನ ಮೊತ್ತಮೊದಲ ಸುಂದರಕಾವ್ಯವೆನಿಸಿದ ರಾಮಾಯಣದಲ್ಲಿ ಅದರ ಅಂದ-ಚಂದಗಳಿಗೆ ಅಲಂಕಾರಗಳ ಯೋಗದಾನ ಅದೆಷ್ಟು ಮುಖ್ಯ ಮತ್ತು ಅನಿವಾರ್ಯವೆಂಬುದೂ ಈ ಮೂಲಕ ತಿಳಿಯದಿರದು.

ಸಾಮಾನ್ಯವಾಗಿ ಲಕ್ಷಣೈಕವೇತ್ತರು ಅಲಂಕಾರಗಳೂ ಸೇರಿದಂತೆ ಅನೇಕಕಾವ್ಯತತ್ತ್ವಗಳ ವಿಕಾಸದಲ್ಲಿ ಅದೊಂದು ಬಗೆಯ ರೇಖಾತ್ಮಕ ಪ್ರಗತಿಯನ್ನು ಕಾಣಿಸುವುದುಂಟು. ಅವರ ಪ್ರಕಾರ ಭರತಮುನಿಯಲ್ಲಿದ್ದ ನಾಲ್ಕು ಅಲಂಕಾರಗಳು ದಂಡಿ-ಭಾಮಹ-ವಾಮನ-ರುದ್ರಟ-ಮಮ್ಮಟ-ಭೋಜ-ರುಯ್ಯಕ-ಜಯದೇವ-ಅಪ್ಪಯ್ಯದೀಕ್ಷಿತಾದಿಗಳ ಮೂಲಕ ಹಲವು ಹತ್ತಾಗಿ ನೂರ ಇಪ್ಪತ್ತನಾಲ್ಕರ ಗಡಿಯನ್ನು ಮುಟ್ಟಿತೆಂದು ತಿಳಿಯುತ್ತದೆ. ಆದರೆ ಇದು ಆಂಶಿಕಸತ್ಯ. ಏಕೆಂದರೆ ನ್ಯೂಟನ್ನನಿಗಿಂತ ಮುನ್ನವೇ ಗುರುತ್ವಾಕರ್ಷಣವಿದ್ದ ಹಾಗೆ ಅಲಂಕಾರಿಕರ ಅಸ್ತಿತ್ವಕ್ಕೂ ಮುನ್ನ ಅಲಂಕಾರಗಳಿದ್ದವು. ಕೇವಲ ಅವುಗಳ ಪ್ರತ್ಯಭಿಜ್ಞಾನ ಮತ್ತು ಲಕ್ಷಣೀಕರಣ ಮಾತ್ರ ಉತ್ತರೋತ್ತರ ಬೆಳೆದುಬಂದವು. ಈ ಕಾರಣದಿಂದಲೇ ಆದಿಕವಿಗಳಲ್ಲಿ ಹತ್ತಾರು ಸ್ಮರಣೀಯಸುಂದರವಾದ ಸಹಜಾಲಂಕಾರಗಳ ಸಮೃದ್ಧಿಯುಂಟು. ಅನಂತರದ ವಿದ್ವತ್ಕವಿಗಳ ರಚನೆಗಳಲ್ಲಿ ಪ್ರಯತ್ನಸಿದ್ಧವೆಂಬಂತೆ ಕಾಣುವ ಉಕ್ತಿವೈಚಿತ್ರ್ಯಗಳು ವಾಲ್ಮೀಕಿ ಮುನಿಗಳಲ್ಲಿ ನಿಸರ್ಗರಮಣೀಯತೆಯಿಂದ, ಅಯತ್ನಸೌಂದರ್ಯದಿಂದ, ಸಂದರ್ಭಶುದ್ಧಿಯಿಂದ, ರಸಪೋಷಕತೆಯಿಂದ ಸೊಗಯಿಸುತ್ತವೆ. ಮಾತ್ರವಲ್ಲ, ನೂರಾರು ಅಲಂಕಾರಗಳ ಪೈಕಿ ಯಾವ ಕೆಲವು ಕವಿಲೋಕಕ್ಕೆಲ್ಲ ಎಟುಕಬಲ್ಲ ಸ್ಫುಟ-ಸಹಜ-ಸರಳ-ಸುಂದರವಾದ ವಾಕ್ಯವಿಲಾಸಗಳೆಂದೂ ಮನವರಿಕೆಯಾಗುತ್ತದೆ. ಇದು ನಿಜಕ್ಕೂ ಬೆಲೆಬಾಳುವ ಸಾಕ್ಷಾತ್ಕಾರ. ಹೀಗೆ ಕವಿಶಿಕ್ಷಾಗ್ರಂಥವಾಗಿಯೂ ವಾಲ್ಮೀಕಿವೇದವು ಧ್ವನಿಸುವ ಪರಿ ಮನನೀಯ.

ಅಲ್ಲದೆ ಅನಂತರದ ಆಸ್ಥಾನಕವಿಗಳ ವಿದ್ವತ್ತೆಯೆಲ್ಲ ಸುಂದರಿಯ ಮೊಗವೋ ಕಣ್ಣೋ ತಾವರೆಯಂತೆಯೋ ನೈದಿಲೆಯಂತೆಯೋ ತೋರುತ್ತದೆಂಬ ಸರಳವಾದ ಸಾದೃಶ್ಯವನ್ನು ಸಂಕೀರ್ಣವಾಗಿ ಹೇಳುವ ದುಷ್ಕರಾಲಂಕಾರಗಳ ಅವಿಷ್ಕಾರದಲ್ಲಿಯೋ ಅನುಸಂಧಾನದಲ್ಲಿಯೋ ಕಳೆದುಹೋದರೆ, ಆದಿಕವಿಗಳ ಅಲಂಕಾರವಿಲಾಸವು ವ್ಯಾಪಕವಾದ ಲೋಕಾನುಭವದಲ್ಲಿಯೂ ಆಳವಾದ ಜೀವನದರ್ಶನದಲ್ಲಿಯೂ ಮುಳುಗಿ ಹಚ್ಚಹೊಸತಾದ ವಾಕ್ಯವಕ್ರತೆಯ ಮುತ್ತಗಳನ್ನು ಮತ್ತೆ ಮತ್ತೆ ಮೇಲೆತ್ತಿ ತರುತ್ತದೆ. ಶಾಸ್ತ್ರೀಯವಾಗಿ ಹೇಳುವುದಾದರೆ, ಅವರ ಅಲಂಕಾರಪ್ರಜ್ಞೆಯು ಕೆಲವೇ ಉಪಮಾನಗಳ ಸುತ್ತ ಗಿರಿಕಿಹೊಡೆಯದೆ ವ್ಯಾಪಕವಾದ ಉಪಮಾನ ಸಾಮಾಗ್ರಿಯನ್ನು ಸೂರೆಗೊಳ್ಳುತ್ತದೆ. ಈ ಮೂಲಕ ವಸ್ತುವೈವಿಧ್ಯಕ್ಕೆ ಬಲುಮಟ್ಟಿಗೆ ಕುರುಡಾಗಿ, ಹೇಳುವ ರೀತಿಯೊಂದೇ ಅಲಂಕಾರದ ಜೀವಾಳವೆಂಬ ಏಕದೇಶೀಯವಾದ ವಾಕ್ಯವಕ್ರತಾತತ್ತ್ವಾಭಾಸಕ್ಕೆ ಸಮರ್ಥವಾದ ಪರಿಷ್ಕಾರವನ್ನೂ, ಪರಿಪೂರ್ಣತೆಯನ್ನೂ ತಂದುಕೊಡುತ್ತದೆ. ಇದು ಪ್ರಾಯಿಕವಾಗಿ ಸಾದೃಶ್ಯಮೂಲಾಲಂಕಾರಗಳನ್ನು ಕುರಿತ ಅಭಿಪ್ರಾಯವಾದರೂ ಎಲ್ಲ ಬಗೆಯ ಅಲಂಕಾರಗಳಿಗೂ ಅನ್ವಯಿಸಬಲ್ಲ ತತ್ತ್ವ. ಅಲ್ಲದೆ ಮಹರ್ಷಿಗಳ ಮಾತು ಪ್ರವಾಹಧೋರಣೆಯದು. ಅವರು ಲೆಕ್ಕಾಚಾರದ ಮಾತುಗಳನ್ನಾಡುವ ಶಬ್ಧಲೋಭಿಗಳಲ್ಲ. ಇದು ಅವರ ಅಲಂಕಾರವಿನ್ಯಾಸಕ್ಕೂ ಅನ್ವಯಿಸುವ ಸಂಗತಿ. ಅದುದರಿಂದ ಅದೆಷ್ಟೋ ಕಡೆ ಹಿತ-ಮಿತವಾದಿಗಳ ಪಾಲಿಗೆ ಹೆಚ್ಚೆನಿಸುವಂಥ ವಾಕ್ಯವಕ್ರತಾಪೂರವು ತೋರುವುದುಂಟು. ಆದರೆ ಇದೆಂದೂ ಕಥಾನಕತೀರವನ್ನಾಗಲೀ, ಪಾತ್ರಸಮೂಹದ್ವೀಪಗಳನ್ನಾಗಲಿ ಕೊಚ್ಚಿ ಹಾಕುವುದಿಲ್ಲ; ಬದಲಾಗಿ ಅವುಗಳ ಪರಿವೇಷವನ್ನು ಮತ್ತಷ್ಟು ಚೆಲುವುಗೊಳಿಸುತ್ತದೆ.

ಅಲಂಕಾರಗಳೇನೋ ಅಸಂಖ್ಯ ಅವುಗಳ ಚೆಲುವೂ ಅಪಾರ. ಆದರೆ ಅವುಗಳ ನಿರ್ದಿಷ್ಟ -ನಿರ್ದುಷ್ಟಲಕ್ಷಣೀಕರಣವು ಬಲುಮಟ್ಟಿಗೆ ಅಸಾಧ್ಯ ಅಥವಾ ಕಷ್ಟಸಾಧ್ಯ. ಇದು ಲಕ್ಷಣನಿರ್ಮಾಣದಲ್ಲಿಯೇ ಇರುವ ಸಮಸ್ಯೆಯಾದರೆ, ಇನ್ನು ಲಕ್ಷ್ಯವೆನಿಸಿದ ಮಹಾಕವಿಗಳ ಪ್ರತಿಭಾಪ್ರಸೂನಗಳನ್ನು ಮುಂದಿರಿಸಿಕೊಂಡು ಅವು ಯಾವ ಅಲಂಕಾರಪ್ರಭೇದಕ್ಕೆ ಸಲ್ಲುತ್ತವೆಂದು ನಿಶ್ಚಯಿಸುವುದು ಮತ್ತೂ ಕಷ್ಟಕರ ಅಥವಾ ಕಷ್ಟತಮ. ಏಕೆಂದರೆ ಯಾವ ಸಹಜಕವಿಯೂ ಅಲಂಕಾರಗಳ ಲಕ್ಷಣಗಳನ್ನು ಕಣ್ಣೆದುರು ನಿಲ್ಲಿಸಿಕೊಂಡು ಕವನಿಸುವುದಿಲ್ಲ. ಆತನ ಕಲ್ಪನೆಯು ಸಂಕೀರ್ಣವಾಗಿಯೇ ರೂಪುಗೊಳ್ಳುತ್ತದೆ. ಕೇವಲ ಅಭ್ಯಾಸಿಗಳ ಅನುಕೂಲಕ್ಕಾಗಿ ಕರಾರುವಾಕ್ಕಾದ ಕೆಲವೊಂದು ಉದಾಹರಣೆಗಳ ಮೂಲಕ ಅಲಂಕಾರಿಕರು ಅಲಂಕಾರಗಳ ರೂಪ-ಸ್ವರೂಪಗಳನ್ನು ವಿವರಿಸುವರಲ್ಲದೆ ಎಲ್ಲ ಕವಿಗಳ ಅನನ್ಯಾಭಿರಾಮಕವಿತೆಗಳಿಗೂ ಹದಿನಾರಾಣೆ ಸಲ್ಲುವ ರೀತಿಯಲ್ಲಿ ನಿರ್ದೇಶನವೀಯಲು ಸಾಧ್ಯವಿಲ್ಲ.

ಈ ಕಾರಣದಿಂದಲೇ ಕುಂತಕನಂಥ ಪ್ರಾಜ್ಞರು ತಮ್ಮ ಕಾಲಕ್ಕೇ ಶತಧಾ ವಿಸ್ತರಿಸಿಕೊಳ್ಳುತ್ತಿದ್ದ ಅಲಂಕಾರಗಳನ್ನು ಕೆಲವೊಂದು ಮೂಲಭೂತವಾದ ಮಾದರಿಗಳಿಗೇ ಸೀಮಿತಗೊಳಿಸಿದರು. ಈ ನಿಟ್ಟಿನಲ್ಲಿ ರುದ್ರಟ, ರುಯ್ಯಕ ಮುಂತಾದ ಇನ್ನಿತರರ ಯೋಗದಾನವೂ ಸ್ಮರಣೀಯ. ಲಕ್ಷಣ ನಿರ್ದೇಶನಗಳೇನಿದ್ದರೂ ಲಕ್ಷ್ಯಗಳ ಸ್ಥೂಲಪ್ರತ್ಯಭಿಜ್ಞಾನಕ್ಕೆ ಮಾತ್ರ ಒದಗಿಬರುತ್ತವೆ. ಇದು ಸಂಗೀತದ ರಾಗಲಕ್ಷಣಗಳಿಗೂ ಮನೋಧರ್ಮದಿಂದ ಗಾಯಕವರೇಣ್ಯರು ಹಾಡುವಾಗ ಆಯಾ ರಾಗಗಳು ತಳೆಯುವ ಪ್ರತ್ಯಗ್ರನಾವೀನ್ಯಕ್ಕೂ ಸಂವಾದಿ. ಲಕ್ಷಣಪರಿಷ್ಕಾರದ ಪ್ರಯತ್ನವಷ್ಟೂ ವ್ಯರ್ಥವೆಂದು ಸರ್ವಥಾ ತಾತ್ಪರ್ಯವಲ್ಲ. ಆದರೆ ಲಕ್ಷ್ಯಗಳು ಸರ್ವದಾ ಲಕ್ಷಣಗಳನ್ನು ಮೀರಿ ನಿಲ್ಲುತ್ತವೆಂಬುದು ಸತ್ಯ. ಏನಿದ್ದರೂ ಲಕ್ಷಣವು ಕೈತೂಕ-ಬಾಯಿಬಣ್ಣಗಳ ಮಟ್ಟದ್ದು. ಅವುಗಳಿಲ್ಲದಿದ್ದಲ್ಲಿ ಅವ್ಯವಸ್ಥೆಯೇ ತಾಂಡವಿಸುತ್ತಿದ್ದ ಕಾರಣ ಅವುಗಳಿಗೊಂದು ಅರ್ಥವಿದೆ. ಆದರೆ ಪರಮಾರ್ಥವಿಲ್ಲ. ಇದು ಎಲ್ಲ ಮೃದುಶಾಸ್ತ್ರಗಳ (Soft Sciences) ಸಂಗತಿಯಾಗಿದೆ. ಇದನ್ನರಿಯದೆ ಲಕ್ಷಣೈಕಚಕ್ಷುಗಳಾಗಿ ಆಗ್ರಹಿಸುವುದು ಸರಿಯಲ್ಲ. ಅದೆಷ್ಟೋ ಬಾರಿ ಮೂಲಭೂತವಾದ ಅಲಂಕಾರಗಳೆನಿಸಿದ ಉಪಮೆ, ರೂಪಕ, ಅತಿಶಯ, ವಿರೋಧ ಮುಂತಾದುವುಗಳಲ್ಲಿಯೇ ನಮಗೆ ಸಂದೇಹ ಬರುವುದುಂಟು. ಚಿತ್ರದಲ್ಲಿ ಕಂಡ ಕಾಡನ್ನೋ ನಕ್ಷೆಯಲ್ಲಿ ಕಂಡ ನಾಡನ್ನೋ ಸಾಕ್ಷಾತ್ತಾಗಿ ನೋಡಿದಾಗ ಸಮನ್ವಯಿಸಿಕೊಳ್ಳುವುದು ಅದೆಷ್ಟು ಕಷ್ಟವೆಂಬ ಅರಿವಿದ್ದವರಿಗೆ ಅರ್ಥವಾದಿತು. ವಿಶೇಷತಃ ವಾಲ್ಮೀಕಿಮುನಿಗಳಂಥ ಸಹಜಾತಿಸಹಜಕವಿಗಳ ಪ್ರತಿಭೈಕವಿಶ್ರಾಂತವಾದ ಕಾವ್ಯದಲ್ಲಿ ಇಂಥ ಗೊಂದಲವು ಹೆಜ್ಜೆ ಹೆಜ್ಜೆಗೂ ತೋರುತ್ತದೆ.

ಆದುದರಿಂದ ಪ್ರಕೃತಪ್ರಯತ್ನದಲ್ಲಿ ಲೇಖಕನ ಆಯಾ ಹೊತ್ತಿನ ಅರಿವು-ಅನುಭವಗಳನ್ನು ಅವಲಂಬಿಸಿ ಅಲಂಕಾರನಿಷ್ಕರ್ಷೆಯನ್ನು ಮಾಡಲಾಗಿದೆ. ಈ ನಿಟ್ಟಿನಲ್ಲಿ ಆತನ ನಾಲ್ಕು ದಶಕಗಳ ಸಾಹಿತ್ಯಶಾಸ್ತ್ರಚಿಂತನೆಯೂ ಹಲವು ಹತ್ತು ಬಾರಿ ನಿರ್ಲಜ್ಜವಾಗಿ ಕೈಚೆಲ್ಲಿ ತನ್ನ ಅಸಹಾಯಕತೆಯನ್ನು ತೋರಿರುವುದುಂಟು. ಹೀಗಾಗಿ ಹಲವು ಅಲಂಕಾರಗಳು ಬೆರೆತುಕೊಂಡ ಅನೇಕ ಸಂದರ್ಭಗಳಲ್ಲಿ ಸಂಕರವೆಂದೋ ಸಂಸೃಷ್ಟಿಯೆಂದೋ ಒಂದು ಮಾತಿನಲ್ಲಿ ಹೇಳಿ ಕೈತೊಳೆದುಕೊಂಡು ಸಾಗುವ ಜಾಣ್ಮೆ ತೋರದೆ ಅಲ್ಲಿ ಎದ್ದುತೋರುವ ಪ್ರಧಾನಾಲಂಕಾರವನ್ನು ಗುರುತಿಸಿಕೊಂಡು ಮಿಕ್ಕವನ್ನು ಯಥಾಮತಿ ಗೌಣವಾಗಿಯೋ ನಗಣ್ಯವಾಗಿಯೋ ಕಂಡದ್ದಾಗಿದೆ. ಇಷ್ಟೇ ಅಲ್ಲದೆ, ತೀರ ನಿಕಟವಾಗಿರುವ ದೃಷ್ಟಾಂತ-ನಿದರ್ಶನ, ಐತಿಹ್ಯ-ಲೋಕೋಕ್ತಿ, ವಿರೋಧ-ವಿಷಮ, ದೀಪಕ-ಪ್ರತಿವಸ್ತೂಪಮೆ ಮುಂತಾದ ಅಲಂಕಾರಗಳ ನಿಷ್ಕರ್ಷೆಯಲ್ಲಿ ಆ ಹೊತ್ತಿಗೆ ಸ್ಫುರಿಸಿದ ಸಮನ್ವಯವನ್ನು ನೆಮ್ಮಲಾಗಿದೆ. ಈ ಬಗೆಯ ಸಮಸ್ಯೆ ಆಲಂಕಾರಿಕಲೋಕದಲ್ಲಿಯೇ ಉಂಟೆಂಬುದು ಒಂದು ಸಮಾಧಾನದ ಮಾತು. ಆದರೆ ಇದೇನೂ ಸಂತೋಷದ ಮಾತಲ್ಲ. ಒಂದೇ ಅಲಂಕಾರವನ್ನು ಹಲವರು ಅಲಂಕಾರಿಕರು ಬೇರೆ ಬೇರೆಯಾಗಿ ಲಕ್ಷಣೀಕರಿಸಿರುವುದೂ ಹಲವು ಅಲಂಕಾರಗಳನ್ನು ಒಂದೇ ಅಲಂಕಾರವೆಂಬಂತೆ ಭಾವಿಸಿರುವುದೂ ಇದಕ್ಕೆ ಸಾಕ್ಷಿ. ಒಂದೇ ಪ್ರಸಿದ್ಧಲಕ್ಷ್ಯಪದ್ಯದಲ್ಲಿ ಹಲವು ಬಗೆಯ ಅಲಂಕಾರಗಳನ್ನು ಗುರುತಿಸಿರುವುದೂ ಮತ್ತವು ಪರಸ್ಪರವಿರುದ್ಧವಾಗಿರುವುದೂ ದೃಷ್ಟಚರ. ಹೆಚ್ಚೇನು, ಅದೆಷ್ಟೋ ಸಂದರ್ಭಗಳಲ್ಲಿ ಯಾವುದೇ ಇಬ್ಬರು ಆಲಂಕಾರಿಕರು ಐಕಮತ್ಯಕ್ಕೆ ಬರದಿರುವುದೂ ಉಂಟು! ಆದುದರಿಂದ ಇಲ್ಲಿರುವುದು ಶೃಂಗಗ್ರಾಹಿಯಾದ ಪ್ರಧಾನವ್ಯಪದೇಶ.

ಇರಲಿ; ಮತ್ತೂ ವಿಸ್ತರಿಸಿಕೊಳ್ಳಬಹುದಾದ ಸಾಹಿತ್ಯತತ್ತ್ವ ಮೀಮಾಂಸೆಯನ್ನು ಸದ್ಯಕ್ಕೆ ಬದಿಗಿರಿಸಿ ಪ್ರಕೃತೋದ್ದಿಷ್ಟವಾದ ಆನ್ವಯಿಕಮೀಮಾಂಸೆಯನ್ನು ಆರಂಭಿಸೋಣ. ಸ್ವನಾಮಧನ್ಯರಾದ ಅಲಂಕಾರಶಾಸ್ತ್ರವೇತ್ತ ಕೆ. ಕೃಷ್ಣಮೂರ್ತಿಯವರ ಪಥಪ್ರದರ್ಶಕ ಲೇಖನವೊಂದನ್ನಲ್ಲದೆ[1]. ಈ ನಿಟ್ಟಿನಲ್ಲಿ ಮತ್ತಾವ ಬರವಣಿಗೆಯನ್ನೂ ಪ್ರಕೃತಲೇಖಕನು ಗಮನಿಸಿರದ ಕಾರಣ, ಈ ಬರಹದಲ್ಲಿ ಪ್ರತ್ಯೇಕ ಅಲಂಕಾರಗಳಿಗೂ ಹೆಚ್ಚಿನ ಉದಾಹರಣೆಗಳನ್ನು ಕೊಡುವ ಮೂಲಕ ಪ್ರಾಯಿಕವಾಗಿ ಇಡಿಯ ರಾಮಾಯಣದ ಉಕ್ತಿಸೌಂದರ್ಯವನ್ನೆಲ್ಲ ಒಂದೆಡೆ ಪರಿಶೀಲಿಸುವ ಪ್ರಯತ್ನ ಸಾಗಿದೆ. ಕೆಲವೊಂದು ಶ್ಲೋಕಗಳು ಲುಪ್ತವಾಗಿರಬಹುದಾದರೂ ಹೆಚ್ಚಿನ ಸ್ವಾರಸ್ಯವೆಲ್ಲ ಇಲ್ಲಿ ಅಡಕವಾಗಿದೆಯೆಂಬ ಭರವಸೆಯನ್ನಂತೂ ನೀಡಬಹುದು. ಆದರೆ ವಾಲ್ಮೀಕಿಮುನಿಗಳ ನುಡಿಬೆಡಗಿನಲ್ಲಿ ಮುಖ್ಯವಾದ ಹಾಗೂ ಅವಿಭಾಜ್ಯವೂ ಆದ ಸೊಗಸುಂಟು: ಅದು ನುಡಿಗಟ್ಟು ಅಥವಾ ವಾಚೋಯುಕ್ತಿಗೆ ಸಂಬಂಧಿಸಿದೆ. ಇದನ್ನು ಭಾಷೆಯೊಂದರ ಜೀವಾಳವೆಂದೂ ಹೇಳಬಹುದು. ವಾಕ್ಯಾಲಂಕಾರಗಳಿಗೆ ಈ ಅಂಶವು ಕೆಲಮಟ್ಟಿಗೆ ಹೊರತೇ ಆದ ಕಾರಣ ಸದ್ಯದ ಬರವಣಿಗೆಯಲ್ಲಿ ಇದರ ವಿವೇಚನೆ ಬಹಿರ್ಭೂತವಾಗಿದೆ. ಅದು ಪ್ರತ್ಯೇಕವಾಗಿಯೇ ಕೈಗೊಳ್ಳಬೇಕಿರುವ ಇಷ್ಟೇ ಮಹತ್ವದ ವಿದ್ವತ್ಕಾರ್ಯ.

ಮೊದಲಿಗೆ ಮಹರ್ಷಿಗಳ **ಉಪಮಾಪ್ರಪಂಚ**ವನ್ನು ಪರಿಶೀಲಿಸೋಣ. ಹೇಳಿ ಕೇಳಿ ಉಪಮೆಯ ಸಕಲಾಲಂಕಾರಗಳಿಗೂ ಮಾತೃಭೂತವಾದ ಕಾರಣ ಇದರಿಂದಲೇ ನಮ್ಮ ವಿವೇಚನೆಯನ್ನು ಆರಂಭಿಸುವುದು ಸಮುಚಿತವೂ ಹೌದು[2].

ಆದಿಕವಿಗಳು ಲೋಕವನ್ನು ಚೆನ್ನಾಗಿ ಬಲ್ಲವರಾದ ಕಾರಣ. ಪ್ರಕೃತಿ ಮತ್ತು ಮಾನವಪ್ರಕೃತಿಗಳನ್ನು ಸಂಸ್ಕೃತಿಪುರಸ್ಸರವಾಗಿ ಅರಿತವರಾದ ಕಾರಣ, ಅವರಿಗೆ ಸಾದೃಶ್ಯಗಳೂ ಅವುಗಳ ಅಂತರಂಗದಲ್ಲಿರುವ ಸಾಧರ್ಮ್ಯಗಳೂ ಸಮೃದ್ಧವಾಗಿ ಹೊಳೆಯುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ ರಸಪೇಶಲವಾದ ಮನಸ್ಸು ಅವರದಾದ ಕಾರಣ, ಭಾವುಕೋಪಮೆಗಳಿಗೇ ಅಗ್ರಪೂಜೆ ಸಂದಿದೆ. ಸಂಸ್ಕೃತದ ಮಟ್ಟಿಗಂತೂ ಅವರೇ ನುಡಿಯೊಡತಿಗೆ ಮೊದಲ ಬೆಡಗನ್ನು ತಂದುಕೊಟ್ಟವರಾದ ಕಾರಣ ಅವರ ಪ್ರತಿಯೊಂದು ಹೋಲಿಕೆಗಳಲ್ಲಿಯೂ ತೋರುವ ಹೊಸತನ ಅವಿಸ್ಮರಣೀಯ. ಪರವರ್ತಿಗಳಾದ ಭಾರತೀಯ ಭಾಷೆಗಳ ಸಕಲಕವಿಗಳೂ ಅವರ ಅಡಿಜಾಡಿನಲ್ಲಿಯೇ ನಡೆದವರು. ಆದುದರಿಂದ ಈ ಕಾಲದ ಅಂತರದಲ್ಲಿ ನಮಗೆ ಹಲವೊಮ್ಮೆ ಆದಿಕವಿಗಳ ವಾಕ್ಕಿನಲ್ಲಿ ನಾವೀನ್ಯ ತಗ್ಗಿದೆಯೆಂದು ತೋರಬಹುದು. ಆದರೆ ಇದು ಉತ್ತರಕಾಲೀನ ಕವಿಗಳ ಅನುಕರಣೆಗೆ ಒಗ್ಗಿದ ನಮ್ಮ ಮನಸ್ಸಿನ ಅಸಂವೇದನೆಯಲ್ಲದೆ ಮಹರ್ಷಿಗಳ ಪ್ರತಿಭಾಪ್ರಥಮಪ್ರಸೂನಗಳ ಬಣ್ಣವಾಗಲಿ, ಪರಿಮಳವಾಗಲಿ, ಮಕರಂದಬಂಧುರತೆಯಾಗಲಿ ಮಾಸಿದ ಕಾರಣದಿಂದಲ್ಲ. ಹೆಚ್ಚೇನು ಇಲ್ಲಿರುವ ಅಲಂಕಾರಗಳ ಮೂಲಕ ಸಂವೇದನಶೀಲರಾದ ಸಹೃದಯರು ವಾಲ್ಮೀಕಿಮುನಿಗಳ ಮನಸ್ಸನ್ನೂಅವರ ಕಾವ್ಯದ ಸಮಾಜ ಸಂಸ್ಕೃತಿಯನ್ನೂ ಸೊಗಸಾಗಿ ಪುನರ್ನಿರ್ಮಿಸಬಹುದು. ಈಗ ಕಾಂಡಾನುಸಾರವಾಗಿ ಪರಿಶೀಲಿಸೋಣ:

**ಬಾಲಕಾಂಡ**ದಲ್ಲಿ ಮನಮುಟ್ಟುವ ಉಪಮೆಗಳೇ ವಿರಳ, ಅಷ್ಟೇಕೆ, ಉಳಿದ ಅಲಂಕಾರಗಳೂ ಕಡಮೆ. ಆದರೂ ಪ್ರಾತಿನಿಧಿಕವಾಗಿ ಅತ್ಯುತ್ತಮವೆನ್ನಬಹುದಾದ ಒಂದು ಉದಾಹರಣೆಯನ್ನು ಕಾಣಬಹುದು:

---

1. Ref: *"Alaṅkāra-s in Vālmīki-Rāmāyaṇa,"* Krishnamoorthy, K. *Indian Literary Theories: A Reappraisal.* New Delhi: Meharchand Lachhmands Publishres, 1985. pp.148-162
2. ಉಪಮೇಯ ಬೀಜವಿರುವುದು ಸಾದೃಶ್ಯವಾದರೋ ರಾಗ-ದ್ವೇಷಮೂಲವಾದ ಈ ಜಗತ್ತಿನಲ್ಲಿ ಹೊಳೆಯುವುದು ಪ್ರತಿಭಾಶಾಲಿಗೆ ಮಾತ್ರ ತಾರ್ಕಿಕನಾದ ಪ್ರತಿಭಾಶಾಲಿಗೆ ಹೊಳೆಯುವ ಸಾದೃಶ್ಯವು ಬೆಳೆಸಿದರೆ, ಭಾವುಕನಾದ ಪ್ರತಿಭಾಶಾಲಿಗೆ ಸ್ಫುರಿಸುವ ಸಾದೃಶ್ಯವು ಕಾವ್ಯವನ್ನು ಬೆಳಗುತ್ತದೆ. ಹೆಚ್ಚಿನ ಸಹಜಾಲಂಕಾರಗಳೆಲ್ಲ ಸಾದೃಶ್ಯಮೂಲವಾದವು. ಇನ್ನು ವಿರೋಧಮೂಲಾಲಂಕಾರಗಳಲ್ಲಿಯೂ ಸಾದೃಶ್ಯತತ್ತ್ವವೇ ಪ್ರತೀಪರೂಪದಿಂದ ಬರುತ್ತದೆ. ಇನ್ನುಳಿದ ನ್ಯಾಯಮೂಲ ಮತ್ತು ಶೃಂಖಲಾಮೂಲದ ಅಲಂಕಾರಗಳು ಮಿಗಿಲಾಗಿ ಬೌದ್ಧಿಕ ಪ್ರಾಬಲ್ಯದ ಫಲಗಳು ವಾಸ್ತವಮೂಲವಾದ ಸ್ವಭಾವೋಕ್ತಿಯಂತೂ ಯಾವುದೇ ಬಗೆಯ ಸಾದೃಶ್ಯ-ವೈಸದೃಶ್ಯ-ತರ್ಕಸರಣಿ-ಶೃಂಖಲಾಸರಣಿಗಳನ್ನು ಅನುಸರಿಸದ ಕಾರಣ, ದಂಡಿಯು ಹೇಳುವಂತೆ ಅದೊಂದು ಆದ್ಯಾಲಂಕೃತಿಯೆನಿಸಿ ಪ್ರತ್ಯೇಕವಾಗಿಯೇ ನಿಲ್ಲುತ್ತದೆ. ವಸ್ತುತಃ ಇದೊಂದು ಬಗೆಯಲ್ಲಿ "ಗುಣಕಲ್ಪ"ವಾದ ಅಲಂಕಾರ. ಈ ಬಗೆಗೆ ಅನ್ಯತ್ರ ವಿಸ್ತರಿಸಿ

**ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ।**
**ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋ ಯಥಾ॥ (೧.೨.೫)**

ಇಲ್ಲಿ ಆದಿಕವಿಗಳು ತಮ್ಮ ಶಿಷ್ಯ ಭರದ್ವಾಜನಿಗೆ ತಮಸಾನದಿಯ ತಿಳಿನೀರನ್ನು ಪರಿಚಯಿಸುತ್ತಾರೆ. ನಿರ್ಮಲವಾದ ನದೀಜಲವು ಸಜ್ಜನರ ಮನಸ್ಸಿನಂತೆ ಕಾಣುತ್ತದೆಂದು ಹೇಳುವ ಕವಿಯ ಪ್ರತಿಭೆ ನಿಜಕ್ಕೂ ಅಸಾಧಾರಣ. ಮೂರ್ತವನ್ನು ಅಮೂರ್ತಕ್ಕೆ ಹೋಲಿಸುವ ಪರಿ ನಿತರಾಂ ಪ್ರಶಂಸನೀಯ. ಏಕೆಂದರೆ, ಸಾಮಾನ್ಯವಾಗಿ ಭಾವುಕೋಪಮೆಯು ಸದೃಶ ವಸ್ತುಗಳಲ್ಲಿಯೇ ಸಾದೃಶ್ಯವನ್ನು ಕಾಣುವಂಥ ಸರಳಸುಂದರಪ್ರಕಾರ. ಇಂಥ ಕುಸುಮಕೋಮಲ ಪ್ರಕಾರದಲ್ಲಿಯೂ ಮೂರ್ತಾಮೂರ್ತಗಳನ್ನು ಒಟ್ಟಿಗೆ ನಿರುಕಿಸಬಲ್ಲ, ಹಾಗೆ ನೋಡಿಯೂ ಅವುಗಳ ಪ್ರಸನ್ನತೆ ಮತ್ತು ಸಹಜತೆಗಳನ್ನು ಉಳಿಸಿಕೊಡಬಲ್ಲ ಕಾಣ್ಕೆ ಅಸಮಾನ. ರಾಮಾಯಾಣದ ಶಕ್ತಿಯು ಇಂಥ ದರ್ಶನದಲ್ಲಿಯೇ ನೆಲೆಯಾಗಿದೆಯೆಂದರೆ ಅತಿಶಯವಲ್ಲ. ಏಕೆಂದರೆ ಮೇಲ್ನೋಟಕ್ಕೆ ಮುಗ್ಧಮನೋಹರವಾಗಿ ತೋರುವ ಈ ಕಾವ್ಯದ ಆಳದಲ್ಲಿರುವುದು ಎಂಥ ವಿಕಟವಾಸ್ತವಗಳನ್ನೂ ಶೀತಲೋಜಸ್ವಿತೆಯಿಂದ ಗ್ರಹಿಸಬಲ್ಲ ಧೀರತೆ. ಅಲ್ಲದೆ ಈ ಶ್ಲೋಕದ ನಾಲ್ಕನೆಯ ಪಾದದಲ್ಲಿ ತೋರಿಕೊಳ್ಳುವ ಉಪಮೇಯ ವಕ್ರೋಕ್ತಿಯ ಪ್ರತಿನಿಧಿಯಾದರೆ ಮೂರನೆಯ ಪಾದವಾದ "ರಮಣೀಯಂ ಪ್ರಸನ್ನಾಂಬು" ಎಂಬುದು ಸ್ವಯಂಪೂರ್ಣವಾದ ಸ್ವಭಾವೋಕ್ತಿಯ ಸಂಕೇತವೂ ಹೌದು. ಹೀಗೆ ಬಲುಚಿಕ್ಕದಾದ ಶ್ಲೋಕಾರ್ಧದ ಕುಕ್ಷಿಯಲ್ಲಿಯೂ ಅಲಂಕಾರ ಪ್ರಪಂಚದ ಎರಡು ಮುಖಗಳಾದ ವಕ್ರೋಕ್ತಿ-ಸ್ವಭಾವೋಕ್ತಿಗಳನ್ನು ಆದಿಕವಿಗಳು ಅಡಕಮಾಡಿರುವುದು ಅವರ ಕವಿತ್ವಶಕ್ತಿಗೇ ಎತ್ತಿದ ನೀರಾಜನ.

**ಅಯೋಧ್ಯಾಕಾಂಡ**ವು ರಾಮಾಯಾಣದ ಹೃದ್ಭಾಗವೆಂದೇ ಡಿ.ವಿ.ಜಿ.ಯವರ ನಿಶ್ಚಯ ರಸಧ್ವನಿಯಲ್ಲಿ ಪರ್ಯವಸಿಸುವ ಮಾತುಗಳೇ ಇಲ್ಲಿ ಮೆರೆಯುವ ಕಾರಣ. ಗುಣೀಭೂತವ್ಯಂಗ್ಯದ ವಲಯಕ್ಕೆ ಬರುವ ಸ್ಫುಟಾಲಂಕಾರಗಳಿಗೆ ಹೆಚ್ಚಿನ ಅವಕಾಶವಿಲ್ಲದಿರುವುದು ಸಹಜವೇ ಆಗಿದೆ. ಆದರೂ ಅಲ್ಲಲ್ಲಿ ತೋರಿಕೊಳ್ಳುವ ಸಹಜಾಲಂಕಾರಗಳಿಗೆ ದಾರಿದ್ರ್ಯವಿಲ್ಲ. ಅಂಥ ಕೆಲವೊಂದು ಉಪಮೆಗಳನ್ನೀಗ ನೋಡೋಣ:

ಮಂಥರೆಯ ಮಾತನ್ನು ಕೇಳಿ ಬುದ್ಧಿಗೆಟ್ಟ ಕೈಕೇಯಿಯು ಹಾದಿತಪ್ಪಿದ ಹೆಣ್ಣು ಕುದುರೆಯಂತಾದಳೆಂದು ಮಹರ್ಷಿಗಳ ಒಕ್ಕಣೆ:

---

ಚರ್ಚಿಸಿರುವ ಕಾರಣ ಪುನಃಪರಾಮರ್ಶೆ ಅನವಶ್ಯ, ಒಟ್ಟಿನಲ್ಲಿ ಸಾದೃಶ್ಯಮೂಲಾಲಂಕಾರಗಳೇ ಕಾವ್ಯಾಲಂಕಾರಗಳಲ್ಲಿ ಪ್ರಧಾನ. ಭೇದವೇ ಮೂಲಧರ್ಮವಾಗಿರುವ ಜಗತ್ತಿನಲ್ಲಿ ಅಭೇದವು ಸಾಧ್ಯತತ್ತ್ವವಲ್ಲದೆ ಸಿದ್ಧತತ್ತ್ವವಲ್ಲ. ಇಲ್ಲಿ ಪರಮಾರ್ಥರೂಪದ ಅಭೇದಜ್ಞಾನವನ್ನು ವೇದಾಂತವಿದ್ಯೆಯು ಶಾಶ್ವತವಾಗಿ ತಂದೀಯಲಾರದು. ಅದರದೇನಿದ್ದರೂ "ಸದ್ಯಃಪರನಿರ್ವೃತಿ" ಇಹದಲ್ಲಿ ಬೇರುಬಿಟ್ಟು ಪರದತ್ತ ಕೊಂಬೆಗಳನ್ನು ಚಾಚಬಲ್ಲ ಶಕ್ತಿ. ಆದರೆ ಇದೇನೂ ಅಲ್ಪ-ಸ್ವಲ್ಪದ್ದಲ್ಲ. ಸ್ವಾರ್ಥವು ತತ್ಕಾಲಿಕವಾಗಿಯಾದರೂ ಕರಗದೆ, ಅಹಂಕಾರವು ಆ ಹೊತ್ತಿಗಾದರೂ ಅಳಿಯದೆ ಜಗತ್ತಿನ ಅಸಂಖ್ಯಾಭಿವ್ಯಕ್ತಿಗಳ ನಡುವೆ ಸಾಧರ್ಮ್ಯದ ಪ್ರಜ್ಞೆ ಉದಿಸದು. ಮೇಲೆ ತೋರಿಕೊಳ್ಳುವ ಚೆಲ್ಲಾಪಿಲ್ಲಿಯಾದ ಮಣಿಗಳಂಥ ಲೋಕಸತ್ತೆಗಳಲ್ಲಿ ಸಮನ್ವಯಸೂತ್ರದ ಅದ್ವೈತ ಬೋಧೆ ರಸಸಿದ್ಧನಿಗೆ ಮಾತ್ರ ಸಾಧ್ಯ. ಈ ಕಾರಣದಿಂದಲೇ ಭಟ್ಟತೌತನು **"ವಿಚಿತ್ರಭಾವಧರ್ಮಾಂಶತತ್ತ್ವಪ್ರಖ್ಯಾ"** ಎಂಬುದಾಗಿ ಈ ತೆರನಾದ ಸಮನ್ವಯದರ್ಶನವನ್ನು ಒಕ್ಕಣಿಸಿದ್ದಾನೆ. ಹೀಗೆ ಸಾದೃಶ್ಯವು ಕಲಾಪ್ರಪಂಚದ ಬುನಾದಿ. ಇದರ ಪ್ರಧಾನಮುಖವಾದ ಉಪಮೆಯ ಕವಲುಗಳಾಗಿಯೇ ರೂಪಕ, ಉತ್ಪ್ರೇಕ್ಷೆ, ಅನನ್ವಯ, ಸಸಂದೇಹ, ಪ್ರತೀಪ, ಸ್ಮರಣ, ಭ್ರಾಂತಿಮತ್, ಉಲ್ಲೇಖ, ದೃಷ್ಟಾಂತ, ನಿದರ್ಶನಾ, ವ್ಯತಿರೇಕ, ವಿರೋಧ, ವಿಷಮಾ, ಸಹೋಕ್ತಿ, ಸಮಾಸೋಕ್ತಿ, ತುಲ್ಯಯೋಗಿತೆ, ಪ್ರತಿವಸ್ತೂಪಮೆ, ಉಪಮೇಯೋಪಮೆ, ಅಪ್ರಸ್ತುತಪ್ರಶಂಸಾ ಮೊದಲಾದ ಅಲಂಕಾರಗಳು ಹೊಮ್ಮುತ್ತವೆ. ಇಲ್ಲೆಲ್ಲ ಶ್ಲೇಷವು ಸೊಗಸನ್ನು ಹೆಚ್ಚಿಸಲು ಬರಬಹುದು. ವಸ್ತುತಃ ಶ್ಲೇಷವೂ ಕೂಡ ಅದೊಂದು ಬಗೆಯ ಶಾಬ್ದಿಕ-ಆರ್ಥಿಕಸಾದೃಶ್ಯದಿಂದಲೇ ಹೊಮ್ಮುವ ಉಕ್ತಿವೈಚಿತ್ರ್ಯ

ಆಲಂಕಾರಿಕರು ಉಪಮೇಯವನ್ನು ಅನೇಕಪ್ರಕಾರಗಳಾಗಿ ವಿಭಾಗಿಸಿದ್ದಾರೆ. ಆದರೆ ಈ ವಿಭಾಗಗಳಲ್ಲಿ ಅಂಥ ಪರಮಾರ್ಥವಿಲ್ಲ. ನಾವು ಬೇರೊಂದು ಬಗೆಯಲ್ಲಿ ವಿಭಾಗಿಸಿಕೊಂಡಲ್ಲಿ ಒಳಿತಾದೀತು. ಆ ಪ್ರಕಾರ "ಲೋಕೋಪಮೆ" ಮತ್ತು "ಕಾವ್ಯೋಪಮೆ"ಗಳೆಂಬ ಪ್ರಧಾನವಾದ ವಿಭಾಗಗಳೆರಡು. ಮೊದಲನೆಯದು ತಾರ್ಕಿಕರ ಉಪಮಾನಪ್ರಮಾಣಕ್ಕೆ ಸಮೀಪವರ್ತಿ. ಇದರಲ್ಲಿ ವಿಚಾರವೊಂದನ್ನು ಸ್ಪಷ್ಟಪಡಿಸುವ ಹವಣಲ್ಲದೆ ಸೌಂದರ್ಯದೃಷ್ಟಿಯಿಲ್ಲ; ಅಥವಾ ಇದ್ದರೂ ಅದು ತೀರ ಗೌಣ. ಎರಡನೆಯದಾದ ಕಾವ್ಯೋಪಮೆಯೇ ನಮಗೆ ಪ್ರಸ್ತುತ. ಇಲ್ಲಿ ವಿಚಾರವಲ್ಲದೆ ಅನುಭೂತಿಗೇ ಅಗ್ರತಾಂಬೂಲ. ಇದನ್ನು ಮತ್ತೆ "ಬೌದ್ಧಿಕೋಪಮೆ" ಹಾಗೂ "ಭಾವುಕೋಪಮೆ" ಎಂದು ಎರಡಾಗಿ ವಿಂಗಡಿಸಬಹುದು. ಹೆಸರುಗಳೇ ತಿಳಿಸುವಂತೆ ಇವು ಕ್ರಮವಾಗಿ ಬುದ್ಧಿಚಮತ್ಕಾರಪ್ರಧಾನ ಮತ್ತು ಭಾವಸಂವೇದನಪ್ರಧಾನ. ಬೌದ್ಧಿಕೋಪಮೆಯು ಶುಷ್ಕತಾರ್ಕಿಕಸ್ತರದ್ದಲ್ಲವೆಂಬುದಂತೂ ಸ್ಪಷ್ಟ, ಆದರೆ ಇಲ್ಲಿ ಉಪಮಾನ-ಉಪಮೇಯಗಳ ನಡುವಿರುವ ವಿಚಿತ್ರರೂಪದ ಸಾಧರ್ಮ್ಯವೇ ಚಮತ್ಕಾರಸಾಧಕ. ಇದು ನಿರಪವಾದವೆಂಬಂತೆ ಹೃದಯಕ್ಕಿಂತ ಬುದ್ಧಿಗೇ ಹೆಚ್ಚಾಗಿ ಹೊಳೆಯುವ ಕಾರಣ ಬೌದ್ಧಿಕೋಪಮೆಯೆಂಬ ಹೆಸರನ್ನು

**ಕಿಶೋರೀವೋತ್ಪಥಂ ಗತಾ** । (೨.೯.೩೭)

ಈ ಮಾತಿನ ಸ್ವಾರಸ್ಯ ಸಹೃದಯರಿಗೆ ಸುಲಭವೇದ್ಯ. ವಿಶೇಷತಃ, ಅಂಕೆತಪ್ಪಿದ ಕುದುರೆಯ ಆಟಾಟೋಪವನ್ನು ಬಲ್ಲವರೇ ಬಲ್ಲರು. ಇನ್ನು ತನಗೆ ದುರ್ಬೋಧೆ ಮಾಡಿದ ವಿಕೃತಾಕಾರದ ಮಂಥರೆಯನ್ನು ಸ್ವಾರ್ಥದಿಂದ ಕುರುಡಾದ ಕೈಕೇಯಿ ಕಂಡ ಬಗೆಯಂತೂ ಅನ್ಯಾದೃಶ:

**ತ್ವಂ ಪದ್ಮಮಿವ ವಾತೇನ ಸಂನತಾ ಪ್ರಿಯದರ್ಶನಾ** । (೨.೯.೪೧)

ಮಂಥರೆಯ ಗೂನುಬೆನ್ನು ಕೈಕೇಯಿಯ ಕಣ್ಣಿಗೆ ಗಾಳಿಗೆ ಬಾಗಿದ ಕಮಲದಂತೆ ಕಂಡಿತಂತೆ! ಅರ್ಥ-ಕಾಮಕೃಪಣವಾದ ಮನಸ್ಸಿಗೆ ಯಾವುದೂ ಹೇಗೂ ಕಾಣುವುದೆಂಬುದಕ್ಕೆ ಇದಕ್ಕಿಂತಲೂ ಒಳ್ಳೆಯ ನಿದರ್ಶನ ಬೇಕಿಲ್ಲ. ಆದಿಕವಿಗಳ ಅಲಂಕಾರಗಳು ಹೀಗೆ ಬಹ್ವರ್ಥಗ್ರಾಸಿ. ದಿಟವೇ, ಇಲ್ಲಿ ಉಪಮಾನೋಪಮೇಯಗಳ ನಡುವೆ ಲಿಂಗೈಕ್ಯವಿಲ್ಲದಿದ್ದರೂ ಉದ್ವೇಜಕವಾಗಿಲ್ಲ.

ಕೈಕೇಯಿಯ ಮಾತನ್ನು ಕೇಳಿ ರಾಮನನ್ನು ಕಾಡಿಗಟ್ಟಿದರೆ ತನ್ನನ್ನು ಲೋಕವೆಲ್ಲ ಹಳಿಯುತ್ತದೆಂದು ದಶರಥನು ಹಲುಬುವಾಗ ಆತ ತನ್ನ ಪರಿಸ್ಥಿತಿಯು ಮದ್ಯಪಾನವನ್ನು ಮಾಡಿ ಬೀದಿಬೀದಿಗಳಲ್ಲಿಯೂ ಶಿಷ್ಟರ ದೂಷಣೆಗೆ ತುತ್ತಾದ ಬ್ರಾಹ್ಮಣನ ಪಾಡಾಗುತ್ತದೆಂದು ಹೇಳುವುದು ನಿಜಕ್ಕೂ ಮಾರ್ಮಿಕೋಪಮೆ:

**ಧಿಕ್ಕರಿಷ್ಯಂತಿ ರಥ್ಯಾಸು ಸುರಾಪಂ ಬ್ರಾಹ್ಮಣಂ ಯಥಾ** । (೨.೧೨.೭೮)

ಸೀತೆಯನ್ನೊಡಗೂಡಿದ ರಾಮನು ಚಿತ್ರಾನಕ್ಷತ್ರದೊಡನೆ ಸೇರಿಕೊಂಡ ಸುಧಾಂಶುವಂತಿದ್ದನೆಂದು ವಾಲ್ಮೀಕಿಮುನಿಗಳು ಕೊಡುವ ಚಿತ್ರಣವು ಮೇಲ್ನೋಟಕ್ಕೆ ಸಾಂಪ್ರದಾಯಿಕವೆಂಬಂತೆ ಕಂಡರೂ ವಸಂತರ್ತುವಿನಲ್ಲಿ ಮಾತ್ರ ಮಿಗಿಲಾಗಿ ಶೋಭಿಸುವ ಸಂಪೂರ್ಣಮಂಡಲನಾದ ಚಂದ್ರನ ಸ್ವರೂಪವನ್ನೂ ಆ ಋತುವಿನ ಲೋಕಮೋಹಕತೆಯನ್ನೂ ಚಿತ್ರಾಪೂರ್ಣಿಮೆಯಂದು ಶಶಿಬಿಂಬದ ಹತ್ತಿರ ನಮ್ರಸೌಮ್ಯತೆಯಿಂದ ನಿಲ್ಲುವ ಚಿತ್ರಾನಕ್ಷತ್ರದ ಸ್ನಿಗ್ಧಕಾಂತಿಯನ್ನು ಧ್ವನಿಸುವ ಬಗೆಯನ್ನು ಭಾವಿಸಿದಾಗ ಇಲ್ಲಿಯ ಕಾವ್ಯಕೌಶಲ ಮನಮುಟ್ಟದಿರದು:

**ಉಪೇತಂ ಸೀತಯಾ ಭೂಯಶ್ಚಿತ್ರಯಾ ಶಶಿನಂ ಯಥಾ** । (೨.೧೬.೧೦)

ಕಾಳಿದಾಸನು ರಘುವಂಶದ ಮೊದಲ ಸರ್ಗದಲ್ಲಿ ದಿಲೀಪ-ಸುದಕ್ಷಿಣೆಯರನ್ನು ವರ್ಣಿಸುವಾಗ ಇದೇ ಹೋಲಿಕೆಯನ್ನು ಮತ್ತಷ್ಟು

---

ಹೊಂದಿದೆ. ಈ ಪ್ರಕಾರವು ಸಹಜವಾಗಿಯೇ ಕವಿಗಳ ಅಹಂಕಾರವನ್ನು ಕೆಣಕುವ ಕಾರಣ ಇಲ್ಲಿ ಗತಾನುಗತಿಕತೆಯ ಅಪಾಯ ಹೆಚ್ಚಿಲ್ಲದಿದ್ದರೂ ಸ್ವಂತಿಕೆಯ ಹೆಮ್ಮೆಯಲ್ಲಿ ರಸಪಾರಮ್ಯವನ್ನೇ ಮರೆಯುವ ಮತ್ತೂ ಮಿಗಿಲಾದ ಅಪಾಯ ಸಾಧ್ಯವಿದೆ. ಅಲ್ಲದೆ ಎಲ್ಲ "ಗುಣೀಭೂತವ್ಯಂಗ್ಯ" ರೂಪದ ಅರ್ಥಾಲಂಕಾರಗಳೂ "ಅರ್ಥಚಿತ್ರ"ಗಳ ಮಟ್ಟಕ್ಕೆ ಇಳಿಯುವ ಅನರ್ಥವೂ ಎದುರಾಗಬಹುದು. ಭಾವುಕೋಪಮೆಯಾದರೋ ಉಪಮಾನ-ಉಪಮೇಯಗಳ ನಡುವಿರುವ ಸ್ಫುಟ-ಸಮೃದ್ಧಸಾಧರ್ಮ್ಯದ ಮೇಲೆ ರೂಪುಗೊಂಡಿದೆ. ಹೀಗಾಗಿ ಇಲ್ಲಿಯ ಸಾಧರ್ಮ್ಯದ ಸೊಗಸು ಎಷ್ಟೇ ಮಿಗಿಲಾಗಿರಲಿ, ಅದರ ಸ್ಫುರಣೆಗೆ ಬುದ್ಧಿಕಾರ್ಯ ಬಲುಮಟ್ಟಿಗೆ ಅನವಶ್ಯ ಆದುದರಿಂದಲೇ ಇಲ್ಲಿ ಭಾವಕ್ಕೆ ಮಿಗಿಲಾದ ಅವಕಾಶವಿದೆ. ಇಂಥ ಉಪಮೆಯನ್ನು ಬಳಸಿ ಗೆಲ್ಲುವುದು ಬಹುಕಷ್ಟ. ಕೇವಲ ರಸಸಿದ್ಧರಾದ ಮಹಾಕವಿಗಳಿಗೆ ಮಾತ್ರ ಇದು ಸಾಧ್ಯ. ಹಾಗಲ್ಲವಾದರೆ "ಸುಲಭಸೌಂದರ್ಯ"ದ ಜೌಗಿನಲ್ಲಿ ಜಾರಿಹೋಗುವ ಸಂಭವ ಅಪಾರ (ಪೂರ್ವಸೂರಿಗಳು ರಸಸಿದ್ಧರೇ ಆಗಿದ್ದರೂ ಅವರು ಸ್ವಯಂ ಕಂಡುಕೊಂಡ ಕಾವ್ಯಪದ್ಧತಿಯನ್ನು ಕುರುಡಾಗಿ ಅನುಕರಿಸುವ ಮೈಗಳ್ಳತನಕ್ಕೋ ಪ್ರತಿಭಾದಾರಿದ್ರಕ್ಕೋ ಸಂಪ್ರದಾಯಶರಣತೆಗೋ ತುತ್ತಾದ ಮುಂದಿನ ಕವಿಗಳ ಕಾವ್ಯನಿರ್ಮಾಣಶೀಲತೆಯನ್ನು ಈ ಪದವು ಧ್ವನಿಸುತ್ತಿದೆ. ಇದರ ಮೂಲ ಡಿ.ಎಚ್.ಎಚ್. ಇಂಗಾಲ್ಸ್ ಅವರು ವಿದ್ಯಾಕರನ ಸುಭಾಷಿತ ರತ್ನಕೋಶಕ್ಕೆ ಬರೆದ ಪ್ರಸ್ತಾವನೆಯಲ್ಲಿದೆ. ಇದನ್ನವರು "Easy Beauty" ಎಂದು ಮಾರ್ಮಿಕವಾಗಿ ಹರಳುಗಟ್ಟಿಸಿದ್ದಾರೆ). ಆದುದರಿಂದ ಸುಕವಿಯಾದವನು ಬುದ್ಧಿ-ಭಾವಗಳ ಸಂತುಲನವನ್ನು ಮಾಡಿಕೊಂಡು ಸ್ವಂತಿಕೆಯನ್ನು ಸಂಪ್ರದಾಯವನ್ನೂ ಎಚ್ಚರದಿಂದ ಕಾಪಾಡಿಕೊಳ್ಳಬೇಕು. ಬೌದ್ಧಿಕೋಪಮೆಯಿಂದ ಅನನ್ಯತೆಯೂ ಭಾವುಕೋಪಮೆಯಿಂದ "ಸಾಧಾರಣೀಕರಣ"ವೂ ಹದವಾಗಿ ಸಿದ್ಧಿಸುತ್ತವೆ. ಇದೊಂದು ಬಗೆಯಲ್ಲಿ **ಅಹಂ ಬ್ರಹ್ಮಾಸ್ಮಿ** ಮತ್ತು **ಸರ್ವಂ ಖಲ್ವಿದಂ ಬ್ರಹ್ಮ**ಗಳ ಸಮನ್ವಯದಂತೆ. ಇವೆರಡೂ ವಿಭಾಗಗಳು ಪುನಃ "ಪೂರ್ಣೋಪಮೆ" ಮತ್ತು "ಲುಪ್ತೋಪಮೆ"ಗಳೆಂದು ಉಪಪ್ರಭೇದಗಳಾಗಿ ಒಡೆದುಕೊಳ್ಳುತ್ತವೆ. ಪೂರ್ಣೋಪಮೆಯಲ್ಲಿ ಎದ್ದುತೋರುವ ವಾಚ್ಯತಾಂಶವು ಲುಪ್ತೋಪಮೆಯಲ್ಲಿ ಸ್ವಲ್ಪ ತಗ್ಗುವ ಕಾರಣ ಇಲ್ಲಿ ವ್ಯಂಜನಾವ್ಯಾಪಾರಕ್ಕೆ ಅವಕಾಶ ಹೆಚ್ಚು ವಿಶೇಷತಃ "ಧರ್ಮಲುಪ್ತೋಪಮೆ"ಯಾದಲ್ಲಿ ಸ್ವಾರಸ್ಯಕ್ಕೆ ಮಿಗಿಲಾದ ಸ್ಥಾನ. ಅದೇ "ಉಪಮಾನಲುಪ್ತ" ವೋ "ಉಪಮೇಯಲುಪ್ತ"ವೋ ಆದರೆ ಕೆಲಮಟ್ಟಿಗೆ ಸಂದಿಗ್ಧತೆಯೂ ಉದಿಸೀತು. ಇನ್ನು "ಉಪಮಾವಾಚಕಲುಪ್ತಿ"ಯು ಒಂದಿಷ್ಟು ನಷ್ಟವನ್ನೇ ಮಾಡುತ್ತದೆ. ಏಕೆಂದರೆ ದಂಡಿಯಂಥ ಆಲಂಕಾರಿಕರು ಉಪಮಾವಾಚಕಗಳನ್ನೇ ಅದ್ಭುತವಾಗಿ ಬೆಳೆಸಿದ್ದಾರೆ. ಇದಕ್ಕೆ ಮುಂದಿನ ಕವಿಗಳ ಯೋಗದಾನವೂ ಚೆನ್ನಾಗಿ ದಕ್ಕಿದೆ. ಹೀಗಾಗಿ ಬಗೆಬಗೆಯ ಉಪಮಾವಾಚಕಗಳ ಮೂಲಕ ಬಂದೊದಗುವ "ಲಕ್ಷಣಾಮೂಲಧ್ವನಿ"ಗಳೂ "ಉಪಚಾರವಕ್ರತೆ"ಗಳೂ ಉಪಮಾವಾಚಕಲುಪ್ತ ಪ್ರಕಾರಕ್ಕೆ ದಕ್ಕದೆ ಹೋಗುತ್ತವೆ. ಆದುದರಿಂದ ಧರ್ಮಲುಪ್ತೋಪಮೆಯೇ ಪ್ರಶಸ್ತತಮ.

ಸಿಂಗರಿಸಿ ಬಳಸಿರುವುದನ್ನು ನೆನೆದಾಗ ಆದಿಕವಿಯ ಚಾತುರಿಯನ್ನು ವರಕವಿಯಷ್ಟೇ ಅರಿಯಬಲ್ಲನೆಂಬ ಸ್ಫುರಣೆ ನಮಗಾಗದಿರದು.

ಕೈಕೇಯಿಯ ತಂತ್ರಕ್ಕೆ ಸಿಲುಕಿದ ತನ್ನ ತಂದೆಯನ್ನು ರಾಮನು ಕಂಡಾಗ ಆತನು ಸುಳ್ಳಾಡಿದ ಋಷಿಯಂತಿದ್ದನೆಂದು ವಾಲ್ಮೀಕಿಮುನಿಗಳು ಹೇಳುವ ಮಾತಂತೂ ಹೃದಯವೇಧಕ. ದಶರಥನು ಎಂಥ ದೌರ್ಬಲ್ಯಗಳ ನೆಲೆಯಾಗಿದ್ದರೂ ಅನೃತದೋಷ ಮಾತ್ರ ಆತನದಾಗಿರಲಿಲ್ಲ. ಈ ಹಿನ್ನಲೆಯಲ್ಲಿ ಪ್ರಕೃತೋಪಮೆ ಅನನ್ಯ: **ಉಕ್ತಾನೃತಮೃಷಿಂ ಯಥಾ** (೨.೧೮.೬).

ತನ್ನನ್ನು ಕಾಡಿಗೆ ರಾಮನು ಕರೆದೊಯ್ಯುತ್ತಿಲ್ಲವೆಂಬ ಪ್ರೀತಿಯ ಕನಲಿಕೆಯಿಂದ ಸೀತೆಯು ಪತಿಯನ್ನು ಆಕ್ಷೇಪಿಸುವಾಗ ಆತನನ್ನು ನಟನೆಂದು ದೂಷಿಸುತ್ತಾಳೆ. ಹಿಂದಿನ ಕಾಲದಲ್ಲಿ ವೃತ್ತಿಪರನಟವರ್ಗವು ತನ್ನ ಕುಟುಂಬವನ್ನು ತವರಿನಲ್ಲಿಯೋ ಮತ್ತಾವ ಬಂಧುಗಳಲ್ಲಿಯೋ ಬಿಟ್ಟು ಊರೂರು ಸುತ್ತಿ ಹೊಟ್ಟೆಹೊರೆಯುತ್ತಿತ್ತಂತೆ. ಇದೀಗ ರಾಮನು ಒಂಟಿಯಾಗಿ ವನವಾಸಕ್ಕೆ ತೆರಳಿದರೆ ಅವನಿಗೆ ಈ ಪರಿಯ ಕಲಂಕವಂಟೀತೆಂದು ಸೀತೆಯ ಇಂಗಿತ:

**ಶೈಲೂಷ ಇವ ಮಾಂ ರಾಮ ಪರೇಭ್ಯೋ ದಾತುಮರ್ಹಸಿ ।** (೨.೩೦.೮)

ಸಂಸ್ಕೃತದಲ್ಲಿ ನಟರಿಗೆ "ಕುಶೀಲವ"ರೆಂದೂ ಹೆಸರುಂಟು. ಅವರ ಶೀಲವೂ ಶಿಥಿಲವೆಂದು ಲೋಕಪ್ರಥೆ. ಹೀಗಾಗಿ ರಾಮನಂಥ ಮರ್ಯಾದಾಪುರುಷೋತ್ತಮನಿಗೆ ಶೈಲೂಷರ ಸಾದೃಶ್ಯ ಸಂದಲ್ಲಿ ಅದು ಅವನಿಗೆ ಸಲ್ಲದ ಆರೋಪ. ಆದುದರಿಂದ ಇಂತಾದರೂ ಮಾನಕ್ಕಂಜಿದ ಪತಿಯು ತನ್ನನ್ನು ಜೊತೆಗೆ ಕರೆದೊಯ್ದಾನೆಂದು ಸೀತೆಯ ಹವಣು. ಹೀಗೆ ಆಕೆಯ ಆಕ್ಷೇಪದ ಹಿಂದಿರುವುದು ಅನುರಾಗವು ಹೂಡಿದ ತಂತ್ರವಲ್ಲದೆ ಕುತ್ಸಿತವಾದ ನಿಂದೆಯಲ್ಲ.

ಕೈಕೇಯಿಯ ಅರ್ಥಲುಬ್ಧಸ್ವಭಾವವನ್ನೂ ಆಕೆಯ ಒರಟುತನವನ್ನೂ ಏಕಕಾಲದಲ್ಲಿ ಮಹರ್ಷಿಗಳು ನಿರೂಪಿಸುವ ಪರಿ ಮಾರ್ಮಿಕ. ರಾಮನೊಡನೆಯೇ ಅಯೋಧ್ಯೆಯ ಸಿರಿಯೆಲ್ಲ ಕಾಡಿಗೆ ಸಾಗಲೆಂದು ಹೇಳುವ ದಶರಥನಿಗೆ ಆಕೆ ಪ್ರತಿರೋಧ ತೋರುವ ಬಗೆ ಹೀಗಿದೆ:

**ರಾಜ್ಯಂ ಗತಧನಂ ಸಾಧೋ ಪೀತಮಂಡಾಂ ಸುರಾಮಿವ ।**
**ನಿರಾಸ್ವಾದ್ಯತಮಂ ಶೂನ್ಯಂ ಭರತೋ ನಾಭಿಪತ್ಸ್ಯತೇ ॥** (೨.೩೬.೧೨)

ಸಿರಿಯಿಲ್ಲದ ಸಾಮ್ರಾಜ್ಯದಿಂದ ಭರತನಿಗೆ ಯಾವ ಸುಖ ತಾನೆ ಸಿಕ್ಕೀತು? ಅದೇನಿದ್ದರೂ ಸ್ವಾರಸ್ಯವಿಲ್ಲದ, ಮದವೇರದ ಹೆಂಡದ ಬುರುಡೆಯಂತೆಂದು ಆಕ್ಷೇಪಿಸುವ ಕೈಕೇಯಿಯ ಸಂಸ್ಕಾರ ಈ ಒಂದು ಉಪಮೆಯಿಂದಲೇ ಬಟ್ಟಬಯಲಾಗಿದೆ.

ಇಂಥ ಹಠಮಾರಿ ಹೆಣ್ಣನ್ನು ಕುರಿತು ಕೌಸಲ್ಯೆಯು ಹೇಳುವ ಮಾತೂ ಗಮನಾರ್ಹ. ಆ ಪ್ರಕಾರ ರಾಮನನ್ನು ಕಾಡಿಗಟ್ಟಿದ ಕೈಕೇಯಿ ಪೊರೆಕಳಚಿದ ಹಾವಿನಂತೆ ಮತ್ತಷ್ಟು ಮಿಂಚುತ್ತಾಳೆ, ಇನ್ನಷ್ಟು ಕ್ರೂರಿಯಾಗುತ್ತಾಳೆ:

**ವಿಚರಿಷ್ಯತಿ ಕೈಕೇಯೀ ನಿರ್ಮುಕ್ತೇವ ಹಿ ಪನ್ನಗೀ ।** (೨.೪೩.೨)

ಆದಿಕವಿಗಳು ಶಾಸ್ತ್ರಪ್ರಸಿದ್ಧಸಂಗತಿಗಳನ್ನೂ ಉಪಮಾನಕ್ಕೆ ಬಳಸಿಕೊಳ್ಳುವುದರಲ್ಲಿ ಹಿಂದೆಗೆಯುವುದಿಲ್ಲ. ಅಂಥದ್ದೊಂದು ನಿದರ್ಶನವಿಲ್ಲಿದೆ.

**ಪಾತಯಿತ್ವಾ ತು ಕೈಕೇಯ್ಯಾ ರಾಮಂ ಸ್ಥಾನಾದ್ಯಥೇಷ್ಟತಃ ।**
**ಪ್ರವಿದ್ಧೋ ರಕ್ಷಸಾಂ ಭಾಗಃ ಪರ್ವಣೀವಾಹಿತಾಗ್ನಿನಾ ॥** (೨.೪೩.೫)

ಕೌಸಲ್ಯೆಯ ಕೈಕೇಯಿಯ ತಂತ್ರದ ಕಾರಣ ತನ್ನ ಮಗನಿಗೆ ದಕ್ಕದೆಹೋದ ಸಾಮ್ರಾಜ್ಯವು ದೇವತೆಗಳ ಕೈಗೆ ದಕ್ಕದೆಹೋದ ಹವಿಸ್ಸು ರಾಕ್ಷಸರಿಗೆ ಸಂದಂತಾಯಿತೆಂದು ಸಂಕಟಪಡುವ ಭಾವ ಮೇಲಣ ಉದಾಹರಣೆಯಲ್ಲಿದೆ. ಇಲ್ಲಿಯ ಆರ್ಷೇಯಸಾದೃಶ್ಯ ಮನನೀಯ. ಈ ಮಾತನ್ನಾಡುವ ಹೊತ್ತಿಗೆ ಕೌಸಲ್ಯೆಯು ಅದೇ ತಾನೇ ಸ್ವಯಂ ಹೋಮವನ್ನು ಮಾಡಿ ಮುಗಿಸಿದ್ದಳೆಂಬುದನ್ನು ನೆನೆಗಾದ ಈ ಹೋಲಿಕೆಯ ಸ್ವಾರಸ್ಯ ಮತ್ತಷ್ಟು ಮನದಟ್ಟಾಗದಿರದು.

ಆದಿಕವಿಗಳು ಅಯೋಧ್ಯಾಕಾಂಡದಂಥ ಕರುಣನಿರ್ಭರ ಸಂದರ್ಭದಲ್ಲಿಯೂ ಸಮುಚಿತವಾಗಿ ಹಾಸ್ಯವನ್ನು ಹೊಮ್ಮಿಸಬಲ್ಲರೆಂಬುದಕ್ಕೆ ಕೈಕೇಯಿಯ ಸಮ್ಮಾನದಿಂದ ಸಿಂಗಾರಗೊಂಡ ಮಂಥರೆಯನ್ನು ವರ್ಣಿಸುವ ಪರಿಯೇ ಸಾಕ್ಷಿ. ಮೈಯೆಲ್ಲ ಒಡವೆಗಳನ್ನು ಹೇರಿಕೊಂಡ ಆಕೆಯು ಹಗ್ಗಗಳಿಂದ ಕಟ್ಟಲ್ಪಟ್ಟ ಹೆಣ್ಣುಕೋತಿಯಂತೆ ಕಂಡಳೆಂದು ಚಿತ್ರಿಸಿದ ಬಗೆ ಎಂದೂ ಮರೆಯುವಂತಿಲ್ಲ:

**ಮೇಖಲಾದಾಮಭಿಶ್ಚಿತ್ರೈರನ್ಯೈಶ್ಚ ಶುಭಭೂಷಣೈ: ।**
**ಬಭಾಸೇ ಬಹುಭಿರ್ಬದ್ಧಾ ರಜ್ಜುಬದ್ಧೇವ ವಾನರೀ ॥** (೨.೭೮.೭)

ವಾಲ್ಮೀಕಿಮುನಿಗಳು ಸಂದರ್ಭವೊದಗಿದಾಗ ಮಾಲೆಮಾಲೆಗಳಾಗಿ ಉಪಮೆಗಳನ್ನು ಹೆಣೆದು ಕಥಾಕಾಂತೆಯನ್ನು ಸಿಂಗರಿಸುವುದುಂಟು. ಇದು ಅವರ ಅನರ್ಗಲವಾಗ್ವಿಲಾಸಕ್ಕೊಂದು ಅರ್ಹಸಾಮರ್ಥ್ಯವೂ ಹೌದು. ಇಂಥ ಒಂದು ಸನ್ನಿವೇಶವನ್ನು ರಾಮ- ದಶರಥರಿಲ್ಲದ ಅಯೋಧ್ಯೆಯು ಭರತನಿಗೆ ಕಂಡ ಬಗೆಯಲ್ಲಿ ಭಾವಿಸಬಹುದು. ಆ ಪ್ರಕಾರ ಅಯೋಧ್ಯೆಯು ಪಾಪಗ್ರಹದಿಂದ ಪೀಡಿಸಲ್ಪಟ್ಟ ರೋಹಿಣಿಯಂತೆ, ಬೇಸಗೆಯಲ್ಲಿ ಬೆಂದ ಹಕ್ಕಿಯಂತೆ, ಗ್ರೀಷ್ಮದಲ್ಲಿ ಸೊರಿಗದ ನಿರ್ಝರಿಣಿಯಂತೆ, ಹವಿಸ್ಸಿಲ್ಲದೆ ಬಾಡುತ್ತಿರುವ ಹೋಮಾಗ್ನಿಶಿಖೆಯಂತೆ, ನಾಯಕನಿಲ್ಲದ ಸೇನೆಯಂತೆ, ಪ್ರಕ್ಷುಬ್ಧವಾದ ಅಲೆಯಂತೆ, ವೃಷಭದಿಂದ ದೂರವಾದ ಧೇನುವಿನಂತೆ, ಸೂತ್ರದಿಂದ ಜಾರಿಹೋದ ಮಣಿಯಂತೆ, ಪುಣ್ಯವು ನೀಗಿ ಭೂಮಿಗೆ ತಾರಾರೂಪದಲ್ಲಿ ಬಿದ್ದ ಜೀವಿಯಂತೆ, ದಾವಾಗ್ನಿಯಲ್ಲಿ ಬೆಂದ ವನಲತೆಯಂತೆ, ವಾಣಿಜ್ಯವು ಸೊರಗಿದ ಪೇಟೆಯ ಬೀದಿಯಂತೆ, ಮೋಡಕವಿದ ಬಾನಿನಂತೆ, ಮದ್ಯಪಾಯಿಗಳಿಲ್ಲದ ಪಾನಭೂಮಿಯಂತೆ, ನೀರಿಲ್ಲದ ಅರವಟ್ಟಿಗೆಯಂತೆ, ಬಿಲ್ಲಿಲ್ಲದ ಹೆದೆಯಂತೆ, ಯುದ್ಧದಲ್ಲಿ ಗಾಸಿಗೊಂಡ ಹೆಣ್ಣುಕುದುರೆಯಂತೆ, ಕಮಲಗಳನ್ನು ಕಳೆದುಕೊಂಡ ಕೊಳದಂತೆ, ಅಲಂಕಾರವಿಲ್ಲದ ಶರೀರದಂತೆ, ಸಿಂಹವಿಲ್ಲದ ಗುಹೆಯಂತೆ, ಸೂರ್ಯನಿಲ್ಲದ ಹಗಲಿನಂತೆ, ಜಡಿಮಳೆಯಿಂದ ಅಂದಗೆಟ್ಟ ಶುಕ್ಲಪಕ್ಷದ ರಾತ್ರಿಯಂತೆ ಕಳಾಹೀನವಾಗಿತ್ತು. ಇಲ್ಲಿಯ ಉಪಮೆಗಳ ವೈವಿಧ್ಯ-ಸಾರ್ಥಕ್ಯಗಳು ಸ್ವಯಂವೇದ್ಯ (೨.೧೧೪.೩–೨೧.೨೮–೨೯). ಮಹಾಕವಿಯಾದವನು ಸಮಾಸ-ವ್ಯಾಸಗಳೆರಡನ್ನೂ ಬಲ್ಲವನಾಗಿರಬೇಕೆಂಬ ಹಿನ್ನಲೆಯಲ್ಲಿ ಈ ಭಾಗವು ಮತ್ತೂ ಪರಿಭಾವನೀಯ.

**ಅರಣ್ಯಕಾಂಡ**ದ ಉಪಮಾಪ್ರಪಂಚ ಸಾಕಷ್ಟು ವಿಸ್ತಾರವಾದುದು. ವಿಶೇಷತಃ ಅಲ್ಲಿಯ ಹೇಮಂತವರ್ಣನೆಯಲ್ಲಿ ಉಪಮೆಯ ವಿಶ್ವರೂಪವನ್ನು ಕಾಣಬಹುದು.

ಸೂರ್ಯನು ದಕ್ಷಿಣದಿಕ್ಕಿಗೆ ತಿರುಗಿದ ಕಾರಣ ಉತ್ತರದಿಕ್ಕಿನಲ್ಲಿ ಕಾಂತಿ ಕುಂದಿ ಅದು ತಿಲಕವಿಲ್ಲದ ಹೆಣ್ಣಿನಂತೆ ಹತಪ್ರಭೆಯಾಗಿದೆ. ಇದನ್ನು ಆದಿಕವಿಗಳ ಮಾತು ಅಡಕವಾಗಿ ತಿಳಿಸಿದೆ:

**ವಿಹೀನತಿಲಕೇವ ಸ್ತ್ರೀ ನೋತ್ತರಾ ದಿಕ್ಪ್ರಕಾಶತೇ ।** (೩.೧೬.೮)

ಚಳಿಗಾಲದಲ್ಲಿ ಹಿಮದ ಆವರಣದೊಳಗೆ ಹುದುಗಿದ ವಿಧುಮಂಡಲವು ಕುರುಡುಗನ್ನಡಿಯಂತೆ ಮಂಕಾಗಿದೆಯೆಂದೂ ಚಂದ್ರನ ಕಾಂತಿಯೆಲ್ಲವೂ ಸೂರ್ಯನಿಗೇ ಸೇರಿಹೋಗಿದೆಯೆಂದೂ ವರ್ಣಿಸುವಲ್ಲಿ ಅತ್ಯಂತ ವಿನೂತನ ಕಲ್ಪನೆಯಿದೆ. ವಿಶೇಷತಃ 'ಕುರುಡುಗನ್ನಡಿ'ಯೆಂಬ ನುಡಿಯಲ್ಲಿ ತೋರುವ ಅತ್ಯಂತ ತಿರಸ್ಕೃತ ವಾಚ್ಯಧ್ವನಿಯನ್ನು ಆನಂದವರ್ಧನನು ಮಿಗಿಲಾಗಿ ಕೊಂಡಾಡಿದ್ದಾನೆ. ಇದು ಕುಂತಕನ ಪ್ರಕಾರ ಉಪಚಾರವಕ್ರತೆಯ ಒಂದು ವಿಲಾಸ. ಹೀಗೆ ಅಲಂಕಾರವೊಂದರಲ್ಲಿ ಧ್ವನಿವಕ್ರತೆಗಳ ಹಲವಂಶಗಳು ಸೇರುವುದು ಸಂಕೀರ್ಣಕಾವ್ಯಶಿಲ್ಪದ ಸೊಗಸು. ಇದು ಮಹಾಕವಿತ್ವದ ಹೆಗ್ಗುರುತು:

**ರವಿಸಂಕ್ರಾಂತಸೌಭಾಗ್ಯಸ್ತುಷಾರಾವೃತಮಂಡಲಃ ।**
**ನಿಶ್ವಾಸಾಂಧ ಇವಾದರ್ಶಶ್ಚಂದ್ರಮಾ ನ ಪ್ರಕಾಶತೇ ॥** (೩.೧೬.೧೪)

ಇದೇ ಸಂದರ್ಭದಲ್ಲಿ ಬೆಳದಿಂಗಳು ಕೂಡ ಹಿಮದ ಕಾರಣ ಮಂಕಾಗಿರುವುದನ್ನು ಆದಿಕವಿಗಳು ವರ್ಣಿಸುತ್ತ ಮಾಗಿಯ ಬಿಸಿಲಿಗೆ ಬಣ್ಣ ಕಳೆದುಕೊಂಡ ಸೀತೆಯಂತೆ ಬೆಳದಿಂಗಳು ಬಿಳಿಚಿಕೊಂಡಿದೆಯೆಂದು ಹೇಳುವ ಪರಿಯಂತೂ ಅಸಾಧಾರಣ:

**ಜ್ಯೋತ್ಸ್ನಾತುಷಾರಮಲಿನಾ ಪೌರ್ಣಮಾಸ್ಯಾಂ ನ ರಾಜತೇ ।**
**ಸೀತೇವ ಚಾತಪಶ್ಯಾಮಾ ಲಕ್ಷ್ಯತೇ ನ ತು ಶೋಭತೆ** ॥ (೩.೧೬.೧೪)

ಇಲ್ಲಿ ರಾಮನುವರ್ಣಿಸುವ ಹೇಮಂತದ ಹಿನ್ನೆಲೆಯಲ್ಲಿ ಸೀತೆಯ ಪ್ರಸ್ತಾಪ ಅವನಿಂದಲೇ ಬಂದಿರುವುದು ರಸೋಚಿತವಾಗಿದೆ. ಮಾತ್ರವಲ್ಲ, ಆತನ ಲಘುಹಾಸ್ಯದ ಸ್ವಾರಸ್ಯವನ್ನೂ ಧ್ವನಿಸಿದೆ. ಜೊತೆಗೆ "ತುಷಾರಮಲಿನಾ" ಎಂಬ ವಿಶೇಷಣವು ತನ್ನ ಉಪಚಾರವಕ್ರತೆಯ ಕಾರಣ ಇಡಿಯ ಪದ್ಯವನ್ನು ಇನ್ನಷ್ಟು ಅಂದಗೊಳಿಸಿದೆ.

ಹೇಮಂತದ ಚಳಿಗೆ ಅಂಜಿದ ಜಲಪಕ್ಷಿಗಳು ಕೂಡ ನೀರಿಗಿಳಿಯಲು ಸಾಹಸಿಸುತ್ತಿಲ್ಲ. ಇದು ಕೈಲಾಗದವರು ಯುದ್ಧಕ್ಕೆ ಮುಂದಾಗದಂತಿದೆಯೆಂದು ರಾಮನ ಕಲ್ಪನೆ. ಇದರ ಸೌಂದರ್ಯವಂತೂ ನಿರುಪಮಾನ. ಸುಕ್ಷತ್ರಿಯನಾದ ರಾಮನಿಗಲ್ಲದೆ ಮತ್ತಾರಿಗೆ ತಾನೇ ವೀರರ ಹಾಗೂ ಹೇಡಿಗಳ ಪರಿಚಯ ಚೆನ್ನಾಗಿ ಇರಲು ಸಾಧ್ಯ?

**ಏತೇ ಹಿ ಸಮುಪಾಸೀನಾ ವಿಹಗಾ ಜಲಚಾರಿಣಃ ।**
**ನಾವಗಾಹಂತಿ ಸಲಿಲಮಪ್ರಗಲ್ಭಾ ಇವಾಹವಮ್** ॥ (೩.೧೬.೨೨)

ಕಿವಿ-ಮೂಗುಗಳನ್ನು ಕಳೆದುಕೊಂಡ ಶೂರ್ಪಣಖೆಯು ಖರನ ಬಳಿ ಬಂದು ಅಲವತ್ತುಕೊಳ್ಳುವಾಗ ಅವಳ ರಕ್ತಸಿಕ್ತಮುಖವು ನಿರ್ಯಾಸದಿಂದ ಜುಗುಪ್ಸಾವಹವಾದ ಸಲ್ಲಕೀತರುವಿನಂತೆ ತೋರಿತೆಂಬ ಹೋಲಿಕೆಯಂತೂ ಆದಿಕವಿಗಳ ಪ್ರಕೃತಿಪರಿಶೀಲನಕ್ಕೆ ಸುಂದರನಿದರ್ಶನ. ಏಕೆಂದರೆ ಖರನ ಬಳಿ ಬರುವ ಹೊತ್ತಿಗಾಗಲೇ ಅವಳ ಮುಖದಲ್ಲಿ ಸುರಿಯುತ್ತಿದ್ದ ನೆತ್ತರು ಸ್ವಲ್ಪ ಹೆಪ್ಪುಗಟ್ಟಿ ಒಣಗಿತ್ತು. ಇದು ಸಲ್ಲಕಿಯ ನಿರ್ಯಾಸವನ್ನು ಹೋಲುತ್ತಿತ್ತು ಎಂಬಲ್ಲಿ ಹೊಂದಿಕೊಳ್ಳುವ ಸಮಾನಧರ್ಮವು ಕೇವಲ ಸೂಕ್ಷ್ಮನಿರೀಕ್ಷಣೆಗಷ್ಟೇ ದಕ್ಕಬಲ್ಲದು:

**ಉಪಗಮ್ಯ ಖರಂ ಸಾ ತು ಕಿಂಚಿತ್ಸಂಶುಷ್ಕಶೋಣಿತಾ ।**
**ಪಪಾತ ಪುನರೇವಾರ್ತಾ ಸನಿರ್ಯಾಸೇವ ಸಲ್ಲಕೀ** । (೩.೨೦.೨೪.೨೫)

ಇದೇ ಶೂರ್ಪಣಖೆಯು ರಾವಣನ ಬಳಿ ಸಾರಿ ಆತನನ್ನು ರಾಮನ ವಿರುದ್ಧ ಎತ್ತಿಕಟ್ಟುವಾಗ ತೋರುವ ತಂತ್ರಗಾರಿಕೆಯು ಆಕೆಯ ರಾಜಧರ್ಮವ್ಯಾಖ್ಯಾನದ ಮಿಥ್ಯಾಗಾಂಭೀರ್ಯದ ನಡುವೆ ಮಿಂಚುವ ಹೋಲಿಕೆಗಳಲ್ಲಿ ಅತಿಶಯಿಸುತ್ತದೆ. ಅವಳ ಪ್ರಕಾರ ಅರ್ಥೈಕಪಾರಾಯಣನಾಗಿ ಮೈಮರೆತ ಪ್ರಭುವನ್ನು ಪ್ರಜೆಗಳು ಸುಡುಗಾಡಿನ ಬೆಂಕಿಯಂತೆ ತಿರಸ್ಕರಿಸುತ್ತಾರೆ; ಕೆಸರು ತುಂಬಿದ ಕೊಳವನ್ನು ಆನೆಗಳು ಉಪೇಕ್ಷಿಸುವಂತೆ ದೂರವಿಡುತ್ತಾರೆ. ಇಂಥ ದೊರೆಯು ಹಿರಿಮೆಯನ್ನು ಗಳಿಸಿದರೂ ಸಾಗರದಲ್ಲಿ ಮುಳುಗಿದ ಪರ್ವತದಂತೆ ಹೊರಗೆ ತೋರುವುದೇ ಇಲ್ಲ:

**ಲುಬ್ಧಂ ನ ಬಹುಮನ್ಯಂತೇ ಶ್ಮಶಾನಾಗ್ನಿಮಿವ ಪ್ರಜಾಃ ।**
**ವರ್ಜಯಂತಿ ನರಾ ದೂರಾನ್ನದೀಪಂಕಮಿವ ದ್ವಿಪಾಃ ।**
**ತೇ ನ ವೃದ್ಧ್ಯಾ ಪ್ರಕಾಶಂತೇ ಗಿರಿಯಃ ಸಾಗರೇ ಯಥಾ** । (೩.೩೩.೩,೫,೬)

ಇಂಥ ಬೆಲೆಬಾಳುವ ಮಾತುಗಳನ್ನು ಕೇವಲ ಸ್ವಾರ್ಥಪ್ರೇರಿತೆಯಾಗಿ ಶೂರ್ಪಣಖೆಯು ಸೊಲ್ಲಿಸುತ್ತಿದ್ದಾಳೆಂಬ ಹಿನ್ನೆಲೆಯಲ್ಲಂತೂ ಇವುಗಳ ವಿಪರೀತಾರ್ಥವು ಮತ್ತೂ ಸ್ವಾರಸ್ಯಕರ.

ರಾಮ-ಲಕ್ಷ್ಮಣರ ಅನುಪಸ್ಥಿತಿಯಲ್ಲಿ ರಾವಣನು ಸೀತೆಯನ್ನು ಸೆಳೆದೊಯ್ಯಲು ಕಪಟಸಂನ್ಯಾಸಿಯಾಗಿ ಬಂದ ಪರಿಯನ್ನು ಆದಿಕವಿಗಳು ವರ್ಣಿಸುತ್ತ ಸೂರ್ಯ-ಚಂದ್ರರಿಲ್ಲದಿರುವಾಗ ಸಂಧ್ಯೆಯನ್ನು ನುಂಗಿ ನೊಣೆಯಲು ಬಂದ ಕತ್ತಲಿನಂತಿದ್ದನೆಂದು ಹೇಳುತ್ತಾರೆ:

**ರಹಿತಾಂ ಚಂದ್ರಸೂರ್ಯಾಭ್ಯಾಂ ಸಂಧ್ಯಾಮಿವ ಮಹತ್ತಮಃ ।**
**ತಾಮಪಶ್ಯತ್ತತೋ ಬಾಲಾಂ ರಾಮಪತ್ನೀಂ ಯಶಸ್ವಿನೀಮ್** ॥ (೩.೪೬.೫)

ಇಲ್ಲಿಯ ಔಚಿತ್ಯ, ಸಾಮರ್ಥ್ಯ, ಸೌಂದರ್ಯಗಳೆಲ್ಲ ಪರಿಪೂರ್ಣತೆಯ ಪದವನ್ನು ಮುಟ್ಟಿವೆಯೆಂಬುದು ನಿಸ್ಸಂದೇಹ. ಈ ಅಡಕದಲ್ಲಿ ಇಂಥ ಸಮಗ್ರತೆಯನ್ನು ಚಿತ್ರಿಸುವುದು ಎಲ್ಲ ಕಾಲದ ಕವಿಗಳ ಹಂಬಲ, ಆದರ್ಶ. ಆದರೆ ಕೃತಪುಣ್ಯರಿಗಷ್ಟೇ ಇದು ಕರಗತ. ಈ ಹೋಲಿಕೆಯ ಸ್ವಾರಸ್ಯವೇ ಬಹುಶಃ ಕಾಳಿದಾಸನನ್ನು ತನ್ನ ರಘುವಂಶಕಾವ್ಯದ ಎರಡನೆಯ ಸರ್ಗದಲ್ಲಿ ದಿಲೀಪ-ಸುದಕ್ಷಿಣೆಯರ ನಡುವೆ ನಂದಿನೀಧೇನುವು ರಾಜಿಸಿದ

ಪರಿಯು ಹಗಲಿರುಳುಗಳ ಮಧ್ಯೆ ಸಂಜೆಯಂತೆ ತೋರಿತೆಂದು ಬಣ್ಣಿಸುವಲ್ಲಿ ಪ್ರೇರಿಸಿದೆಯೆನ್ನಬೇಕು.

ರಾವಣನು ಸೀತೆಯನ್ನು ತುಡುಕಲು ಹೋದಾಗ ಅವನು ತೋರಿದ ಬಗೆಯನ್ನು ಆದಿಕವಿಗಳು ಹೀಗೆ ಹೇಳುತ್ತಾರೆ;

**ಅಭ್ಯವರ್ತತ ವೈದೇಹೀಂ ಚಿತ್ರಾಮಿವ ಶನೈಶ್ಚರಃ ।**
**ಸ ಪಾಪೋ ಭವ್ಯರೂಪೇಣ ತೃಣೈಃ ಕೂಪ ಇವಾವೃತಃ ॥** (೩.೪೬.೧೦)

ಈ ಪ್ರಕಾರ ಆ ಪಾಪಿಯು ಶನಿಗ್ರಹವು ಚಿತ್ರಾನಕ್ಷತ್ರದತ್ತ ದಾಪಿಡುವಂತೆ ಸಾಗಿದ. ಹುಲ್ಲುಮುಚ್ಚಿದ ಹಾಳುಬಾವಿಯಂತೆ ತೋರುವ ಆ ಧೂರ್ತನು ಸಂನ್ಯಾಸಿಯ ವೇಷವನ್ನು ತಳೆದದ್ದೊಂದು ವಿಡಂಬನೆಯಾಗಿತ್ತು. ಇಲ್ಲಿಯ ಹೋಲಿಕೆ ಹೃದಯಂಗಮ. ಚೈತ್ರಮಾಸದಲ್ಲಿ ಚಂದ್ರನೊಡನೆ ಸೇರಿ ಪೂರ್ಣಮೆಯ ತುಂಬುತನವನ್ನು ಕಾಣಲಿರುವ ಚಿತ್ರಾನಕ್ಷತ್ರಕ್ಕೆ ಪಾಪಗ್ರಹವಾದ ಶನೈಶ್ಚರನ ಛಾಯೆ ಬರುವುದು ನಿಜಕ್ಕೂ ಖಗೋಲಶಾಸ್ತ್ರದ ವಿಪರ್ಯಾಸ. ಇಂಥ ವೈಜ್ಞಾನಿಕಸ್ವಾರಸ್ಯದ ಉಪಮೆ ಆದಿಕವಿಗಳ ಬತ್ತಳಿಕೆಯಲ್ಲಿ ಹಲವೊಮ್ಮೆ ತೋರುತ್ತದೆ. ಇದೇ ಶ್ಲೋಕದ ಮತ್ತೊಂದು ಹೋಲಿಕೆ **"ತೃಣೈಃ ಕೂಪ ಇವಾವೃತಃ"** ತನ್ನ ಸ್ವಾರಸ್ಯದ ಕಾರಣ ಕಾಳಿದಾಸನನ್ನೂ ಮರುಳುಮಾಡಿದೆ. ಇಲ್ಲವಾದಲ್ಲಿ ಅವನ ಅನರ್ಘರೂಪಕ ಶಾಕುಂತಲದ ಪಂಚಮಾಂಕದಲ್ಲಿ ದುಷ್ಯಂತನನ್ನು ದೂಷಿಸಲು ಶಕುಂತಲೆಯ ಬಾಯಲ್ಲಿ ಇದೇ ಮಾತುಗಳನ್ನೇಕೆ ತರುತ್ತಿದ್ದ? ರಾಮಾಯಣದ ಭುವನೋಪಜೀವ್ಯಮಹತ್ತ್ವವನ್ನು ಕುರಿತಾದ **"ಪರಂ ಕವೀನಾಮಾಧಾರಮ್"** ಎಂಬ ಬ್ರಹ್ಮನ ಶಾಸನವನ್ನು ಎಲ್ಲರೂ ಶಿರೋಧಾರ್ಯವಾಗಿ ಪಾಲಿಸುವವರೇ ಸರಿ!

ಇದೇ ಸಂದರ್ಭದಲ್ಲಿ ರಾವಣನು ತನ್ನ ಮನಸ್ಸನ್ನು ಸೀತೆಯು ಸೆಳೆದ ಪರಿ ನದಿಯು ದಡವನ್ನು ಕೊಚ್ಚಿಹಾಕುವಂತಿದೆಯೆಂದು ಹೇಳುವುದಂತೂ ಬಹುಮಾರ್ಮಿಕ. ಇಲ್ಲಿ ಪ್ರವಾಹಪುಷ್ಟನದಿಯ ವೇಗಕ್ಕೆ ಕುಸಿದುಬೀಳುವ ದಡವು ತಾನೇ ಹಾಳಾಗುವುದಲ್ಲದೆ ನದಿಗೆ ಯಾವುದೇ ಕುಂದಿಲ್ಲವೆಂಬ ಧ್ವನಿ ಅನ್ಯಾದೃಶವಾಗಿದೆ. ಜೊತೆಗೆ ದಡವನ್ನು ಆಶ್ರಯಿಸಿದ ವಿಸ್ತಾರವಾದ ವನಪ್ರಪಂಚವೂ ಪ್ರವಾಹದಲ್ಲಿ ಕೊಚ್ಚಿಹೋಗುವ ಚಿತ್ರವನ್ನು ನೆನೆಗಾದ ರಾವಣನೊಬ್ಬನ ಅವಿವೇಕದಿಂದ ಇಡಿಯ ಲಂಕೆಯೇ ಬೆಂಕಿಗೆ ಬಿದ್ದು ಮಸಣವಾದ ವಿಪರ್ಯಾಸವು ಕೂಡ ಅನುರಣಿಸದಿರದು. ಮಹಾಕವಿಯ ಮಾತು ಹೀಗೆ ಬಹ್ವರ್ಥಗ್ರಾಸಿ:

**ಮನೋ ಹರಸಿ ಮೇ ಕಾಂತೇ ನದೀಕೂಲಮಿವಾಂಭಸಾ ।** (೩.೪೬.೨೧)

ಹೀಗಿದ್ದೂ ರಾವಣನು ಸೀತೆಯನ್ನು ಕದ್ದೊಯ್ದು ಲಂಕೆಯಲ್ಲಿರಿಸಿ, ಅಲ್ಲಿಯ ರಾಕ್ಷಸಿಯರಿಗೆ ನಯ-ಭಯಗಳಿಂದಾದರೂ ಹೆಣ್ಣಾನೆಯನ್ನು ಪಳಗಿಸುವಂತೆ ಇವಳನ್ನು ತನಗೊಲಿಯುವಂತೆ ಮಾಡಿರೆಂದು ಆದೇಶವನ್ನೀಯುವ ಬಗೆ ವಿಭಾವನೀಯ:

**ಆನಯಧ್ವಂ ವಶಂ ಸರ್ವಾ ವನ್ಯಾಂ ಗಜವಧೂಮಿವ ।** (೩.೫೬.೩೧)

ಈ ಹೋಲಿಕೆಯ ಸಾರ್ಥಕ್ಯ ಸ್ಪೃಹಣೀಯ. ಮದಿಸಿದ ಕಾಡಾನೆಯನ್ನು ಪಳಗಿಸುವ ಕಷ್ಟ ಮತ್ತು ಅಂಥ ಮತಂಗಜವು ಸೈನ್ಯಕ್ಕೆ ಅದೆಷ್ಟು ಅನಿವಾರ್ಯವೆಂಬ ತಥ್ಯ ರಾವಣನಂಥ ಸಂಗ್ರಾಮಕೋವಿದನಲ್ಲದೆ ಮತ್ತಾರು ತಾನೇ ತಿಳಿದಾರು? ಅಲ್ಲದೆ, ಅದೊಂದು ಹಂತದ ಬಳಿಕ ವನ್ಯಗಜಗಳನ್ನು ಪಳಗಿಸುವಂಥ ಅಪಾಯಕಾರಿಕ್ರೀಡೆಯೇ ಅಧಿಕಾರಸ್ಥರಿಗೆ ಬಲುಮಟ್ಟಿಗೆ ಮಾದಕವಾದ ಚಟವೂ ಆದೀತೆಂಬ ಧ್ವನಿಯೂ ಇಲ್ಲಿದೆ.

ಆದಿಕವಿಗಳ ಅನ್ನರಸಪ್ರೀತಿ ಅನ್ಯಾದೃಶ. ಮಿತಾಹಾರಿಗಳಾದ ತಪಸ್ವಿಗಳೇ ಅವರಾದರೂ ತಮ್ಮ ಪಾತ್ರಗಳ ಜಿಹ್ವಾಚಾಪಲ್ಯವನ್ನು ಚೆನ್ನಾಗಿ ಗಮನಸಿಕೊಂಡವರವರು. ಹಾಗಲ್ಲದೆ ಕವಿಗಳಾಗಲು ಸಾಧ್ಯವೇ? ಶಾಪವಿಮುಕ್ತನಾದ ಕಬಂಧನು ರಾಮ-ಲಕ್ಷ್ಮಣರಿಗೆ ಪಂಪಾಸರಸ್ಸಿನ ಹಾದಿಯನ್ನು ಹೇಳುವಾಗ ಅಲ್ಲಿಯ ಕೊಕ್ಕರೆಗಳ ರುಚಿಯನ್ನು ಮರೆಯುವುದಿಲ್ಲ! ಅವು ಹೆಪ್ಪುಗಟ್ಟಿದ ತುಪ್ಪದ ಗಡ್ಡೆಗಳಂತೆ ತೋರುತ್ತವೆಂದು ಬಾಯಲ್ಲಿ ನೀರೂರುವಂತೆ ಬಣ್ಣಿಸುತ್ತಾನೆ:

**ಘೃತಪಿಂಡೋಪಮಾನ್ ಸ್ಥೂಲಾಂಸ್ತಾನ್ದ್ವಿಜಾನ್ ಭಕ್ಷಯಿಷ್ಯಥಃ ।**
(೩.೭೩.೧೪)

**ಕಿಷ್ಕಿಂಧಾಕಾಂಡ**ವಂತೂ ಉಕ್ತಿಕಲ್ಪನೆಯ ತವನಿಧಿ. ಇಲ್ಲಿ ಬರುವ ಮೂರು ಋತುಗಳ ಬಣ್ಣನೆಯಲ್ಲಿ ಅಲಂಕಾರನಿಧಿಯೆಲ್ಲ ಸೂರೆಯಾಗಿದೆ. ಇವುಗಳಿಂದ ಆಯ್ದ ಕೆಲವು ಸೌಂದರ್ಯಶಕಲಗಳನ್ನು ಪರಿಭಾವಿಸೋಣ.

ಪಂಪಾಸರಸ್ಸಿನ ಕಮಲಗಳು ನೀರಿನಲ್ಲಿ ಬಾಲಸೂರ್ಯರಂತೆ ಬೆಳಗುತ್ತಿವೆಯೆಂದು ರಾಮನು ಹೇಳುತ್ತಾನೆ:

**ನಲಿನಾನಿ ಪ್ರಕಾಶಂತಿ ಜಲೇ ತರುಣಸೂರ್ಯವತ್** । (೪.೧.೫೯)

ಅಲ್ಲಿ ಬೀಸಿಬರುವ ಗಾಳಿಯೂ ಸೀತೆಯ ನಿಟ್ಟುಸಿರಿನಂತೆ ಹೃದಯಂಗಮವಾಗಿತ್ತು:

**ನಿಶ್ವಾಸ ಇವ ಸೀತಾಯಾ ವಾತಿ ವಾಯುರ್ಮನೋಹರಃ** । (೪.೧.೮೨)

ವಾಲಿಯೊಡನೆ ಸೆಣಸುವಾಗ ಪ್ರತ್ಯಭಿಜ್ಞೆಗಾಗಿ ಸುಗ್ರೀವನ ಕೊರಳಿಗೆ ರಾಮನು ಗಜಪುಷ್ಪೀಮಾಲೆಯನ್ನು ಹಾಕಿಸುವನಷ್ಟೆ ಆಗ ಅವನು ಸಂಧ್ಯಾಕಾಂತಿಯಲ್ಲಿ ಕಂಗೊಳಿಸುವ ಕಾರ್ಮೋಡದ ಮೇಲೆ ಬೆಳ್ಳಕ್ಕಿಗಳು ಹಾರಿದ ಹಾಗೆ ತೋರುತ್ತಿದ್ದವೆಂದು ಆದಿಕವಿಗಳು ಬಣ್ಣಿಸಿರುವುದಂತೂ ಅಸಮಾನವಾದ ಪ್ರಕೃತಿ ನಿರೀಕ್ಷಣೆ:

**ಸ ತಯಾ ಶುಶುಭೇ ಶ್ರೀಮಾನ್ ಲತಯಾ ಕಂಠಸಕ್ತಯಾ ।**
**ಮಾಲಯೇವ ಬಲಾಕಾನಾಂ ಸಸಂಧ್ಯ ಇವ ತೋಯದಃ** ॥ (೪.೧೨.೪೧)

ಇಲ್ಲಿ ಬಿಳುಪಾದ ಗಜಪುಷ್ಪೀಮಾಲೆಯ ಹೂಗಳು ಬೆಳ್ಳಕ್ಕಿಗಳ ಸಾಲಿಗೂ ಸುಗ್ರೀವನ ಎಣ್ಣೆಗೆಂಪುಬಣ್ಣವು ಸಂಜೆಗೆಂಪಿನಲ್ಲಿ ಸೊಗಯಿಸುವ ಮೋಡದ ಕಾಂತಿಗೂ ಸಮೀಕೃತವಾಗಿರುವುದು ಮನೋಹರವಾದ ಧರ್ಮೈಕ್ಯಪ್ರಕಾರದ ಉಪಮೆಯೆನ್ನಬೇಕು.

ಹೀಗೆ ಮಾಲಾಧಾರಿಯಾದ ಸೂರ್ಯಪುತ್ರನು ಕಂಡ ಬಗೆಯನ್ನು ಮಹರ್ಷಿಗಳು ಮತ್ತೂ ವಿನೂತನವಾಗಿ ಬಣ್ಣಿಸುತ್ತಾರೆ:

**ವಿಪರೀತ ಇವಾಕಾಶೇ ಸೂರ್ಯೋ ನಕ್ಷತ್ರಮಾಲಯಾ** । (೪.೧೪.೧೦)

ಬೆಳ್ಳಗಿನ ಹೂಗಳ ಮಾಲೆಯನ್ನು ತೊಟ್ಟ ಸುಗ್ರೀವನು ತಾರೆಗಳ ಹಾರದಿಂದ ಕಂಗೊಳಿಸಿದ ಸೂರ್ಯನಂತೆ ಕಂಡನೆಂಬ ಈ ಅಲಂಕಾರವು ಉಪಮೇಯೇ ಉತ್ಪ್ರೇಕ್ಷೆಯೇ ಎಂದು ಅಲಂಕಾರಿಕರೂ ವ್ಯಾಖ್ಯಾನಕಾರರೂ ಮಿಗಿಲಾಗಿ ತಲೆಕೆಡಿಸಿಕೊಂಡಿದ್ದಾರೆ. ಕಾರಣವಿಷ್ಟೇ: ಉಪಮೆಯು ಇರುವುದನ್ನು ಇದ್ದ ಮತ್ತೊಂದರೊಡನೆ ಹೋಲಿಸುವುದರಲ್ಲಿದೆ. ಅಂದರೆ, ಅದು ವರ್ತಮಾನಸಂಗತಿಗಳ ಸಾದೃಶ್ಯವನ್ನಷ್ಟೇ ತೋರುವ ಉಕ್ತಿವೈಚಿತ್ರ್ಯ. ಉತ್ಪ್ರೇಕ್ಷೆಯಾದರೋ ಇರದಿರಬಹುದಾದುದನ್ನು ಅಥವಾ ಇರಲೂ ಸಾಧ್ಯವೆಂದು ಒಪ್ಪಬಹುದಾದುದನ್ನು ಸಾದೃಶ್ಯದಿಂದ ಬೆಸೆಯುವ ನುಡಿಬೆಡಗು. ಈ ಪದ್ಯವಾದರೋ ಇವೆರಡು ಪ್ರಕಾರಗಳಿಗಿಂತಲೂ ಸ್ವಲ್ಪ ವಿಭಿನ್ನವೆಂದು ವಿಜ್ಞರ ಮತ. ದಿಟವೇ, ವಿಜ್ಞಾನವನ್ನು ಬಲ್ಲವರಿಗೆ ಸೂರ್ಯನ ಉದಯಾಸ್ತನಿರಪೇಕ್ಷವಾಗಿ ತಾರೆಗಳು ಸುತ್ತವರಿದಿರುತ್ತವೆಂದೂ ಸ್ವಯಂ ಸೂರ್ಯನೇ ಒಂದು ತಾರೆಯೆಂದೂ ತಿಳಿದಿರುತ್ತದೆ. ಆದರೆ ಏನು ಮಾಡುವುದು, ಈ ವಾಸ್ತವಜ್ಞಾನವೂ ಸದ್ಯದ ಸೌಂದರ್ಯಮೀಮಾಂಸೆಗೆ ಯಾವುದೇ ರೀತಿಯಲ್ಲಿ ನೆರವಾಗದು! ಆದುದರಿಂದ ವಿದ್ವಾಂಸರು ಕಡೆಗೆ ಇದಕ್ಕಾಗಿಯೇ ಒಂದು ಹೊಸತಾದ ಉಪಮಾಪ್ರಕಾರವನ್ನೇ ಸೃಷ್ಟಿಸಿದ್ದಾರೆ. ಆ ಪ್ರಕಾರ ಇದು "ಅಭೂತೋಪಮೆ" ಅಥವಾ "ಕಲ್ಪಿತೋಪಮೆ". ಒಂದು ವೇಳೆ ಸೂರ್ಯನ ಪ್ರಭೆಯಿಂದ ಇದೀಗ ಮರೆಯಾದ ತಾರೆಗಳು ತೋರಿಕೊಳ್ಳುವಂತಾಗಿದ್ದಲ್ಲಿ ಆ ದೃಶ್ಯವು ಹೇಗಿರುತ್ತಿತ್ತೋ ಹಾಗೆ ಹಾರವನ್ನು ಧರಿಸಿದ ಸುಗ್ರೀವನು ತೋರಿದನೆಂದು ತಾತ್ಪರ್ಯವನ್ನಿಟ್ಟುಕೊಳ್ಳಬೇಕು. ಈ ಹೆಸರಾದರೂ ನಿರ್ದುಷ್ಟವೆಂದು ಹೇಳುವಂತಿಲ್ಲ ಸಕಲಾಲಂಕಾರಗಳೂ ಕಲ್ಪಿತವಷ್ಟೆ ಏನೇ ಆದರೂ ಇಂಥ ಚೆಲುವನ್ನು ಸಾಕ್ಷಾತ್ಕರಿಸಿದ ಆದಿಕವಿಯ ಪ್ರತಿಭೆ ಮಾತ್ರ ಅಭಿನಂದನೀಯ, ಅಭಿವಂದನೀಯ ಮಹಾಕವಿಯ ರಸಸೃಷ್ಟಿಯು "ನಿಯತಿಕೃತನಿಯಮರಹಿತ"ವಷ್ಟೇ ಅಲ್ಲ. ಶುಷ್ಕಶಾಸ್ತ್ರಕಾರರ ಮನೋಬುದ್ಧಿಗಳಿಗೂ ಅತೀತವೆಂದು ಇದೊಂದು ಸಂದರ್ಭದ ಮೂಲಕವೇ ಸಿದ್ಧವಾಗದಿರದು.

ರಾಮನ ಶರಾಘಾತಕ್ಕೆ ತುತ್ತಾಗಿ ಭೂಮಿಗೆ ಬಿದ್ದ ವಾಲಿಯನ್ನು ಆದಿಕವಿಗಳು ಅಭಿಜಾತಯುಗದ ಪರ್ವಗಳಿಗೆ ಸಂಬಂಧಿಸಿದ ಒಂದೇ ಹೋಲಿಕೆಯಿಂದ ಚಿತ್ರಿಸಿ ಮನಮುಟ್ಟಿಸುತ್ತಾರೆ:

**ಇಂದ್ರಧ್ವಜ ಇವೋದ್ಧೂತಃ ಪೌರ್ಣಮಾಸ್ಯಾಂ ಮಹೀತಲೇ ।**
**ಆಶ್ವಯುಕ್ ಸಮಯೇ ಮಾಸಿ ಗತಶ್ರೀಕೋ ವಿಚೇತನಃ ॥** (೪.೧೬.೩೭)

ಪ್ರಾಚೀನ ಭಾರತದಲ್ಲಿ ಮಳೆಗಾಲವು ಮುಗಿದ ಬಳಿಕ. ಒಳ್ಳೆಯ ಮಳೆಯನ್ನು ಅನುಗ್ರಹಿಸಿದ ಕಾರಣ ಇಂದ್ರನಿಗೆ ಕೃತಜ್ಞತೆಯನ್ನು ಸಲ್ಲಿಸುವ ರೂಪದಲ್ಲಿ "ಇಂದ್ರಧ್ವಜೋತ್ಸವ"ವೆಂಬ ಹಬ್ಬವು ಶರತ್ಕಾಲವಿಡೀ ಸಂಭ್ರಮೋತ್ಸಾಹಗಳಿಂದ ಸಾಗುತ್ತಿತ್ತು. ಇದೇ ಈ ಹೊತ್ತಿನ ನವರಾತ್ರ-ದೀಪಾವಳಿಗಳ ಪೂರ್ವರೂಪ. ಆಗ ಇಂದ್ರನ ಗೌರವಾರ್ಥ ಧ್ವಜಸ್ತಂಭವೊಂದನ್ನು ನೆಟ್ಟು, ಅದನ್ನು ಅಲಂಕರಿಸಿ, ಪೂಜಿಸಿ ಸಮಗ್ರ ಸಮಾಜವು ನಲಿದಾಡುತ್ತಿತ್ತು. ಅನಂತರ ಹುಣ್ಣಿಮೆಯ ಹೊತ್ತಿಗೆ ಈ ಧ್ವಜವನ್ನು ಇಳಿಸಿ, ಧ್ವಜಸ್ತಂಭವನ್ನು ವಿಧ್ಯುಕ್ತವಾಗಿ ನೆಲಕ್ಕೊರಗಿಸುತ್ತಿದ್ದರು. ಹೀಗೆ ಸಮುನ್ನತವಾದ ಪತಾಕಾಸ್ತಂಭವು ಹಲವು ಕಾಲ ಮಲೆತು ನಿಂತು ಮಾನ್ಯತೆಯನ್ನು ಗಳಿಸಿ ಅನಂತರ ನೆಲಕ್ಕೊರಗುವ ಚಿತ್ರಣವನ್ನು ಕಂಡವರಿಗೆ ಮಹಾವೀರನಾದ ವಾಲಿಯ ಪತನವು ಅದೆಂಥ ಅನುರೂಪ ಸಾದೃಶ್ಯವೆಂದು ತೋರುವಲ್ಲಿ ಸಂದೇಹವಿಲ್ಲ. ಆದಿಕವಿಗಳು ಇಂಥ ಇಂದ್ರಧ್ವಜಪತನಚಿತ್ರವನ್ನು ತಮ್ಮ ಕಾವ್ಯದಲ್ಲಿ ಹಲವೆಡೆ ಬಳಸಿಕೊಂಡಿದ್ದಾರೆ. ಇದು ಅವರದೇ ಸ್ವೋಪಜ್ಞಸಾಕ್ಷಾತ್ಕಾರವಾದ ಕಾರಣ ಪುನರಾವೃತ್ತಿ ಸಹಜ. ಅಲ್ಲದೆ ಇದು ತಾಳುವಂಥದ್ದೂ ಹೌದು. ಇಂಥ ಪ್ರವೃತ್ತಿಯನ್ನು ಕವಿಲೋಕಸಾಮಾನ್ಯದಲ್ಲಿ ಸಮೃದ್ಧವಾಗಿ ಕಾಣಬಹುದು. ಪರವರ್ತಿಗಳಾದ ಕವಿಗಳೆಲ್ಲ ಈ ಹೋಲಿಕೆಯನ್ನು ಯಥೋಚಿತವಾಗಿ ಅಳವಡಿಸಿಕೊಂಡಿದ್ದಾರೆ.

ವಾಲಿಯು ರಾಮನನ್ನು ನಿಂದಿಸುವಾಗ ಆತನು ಹುಲ್ಲುಮುಚ್ಚಿದ ಹಾಳುಬಾವಿಯಂತೆ, ಗುಟ್ಟಾಗಿ ಉರಿಯುವ ಬೆಂಕಿಯಂತೆ, ಸಾಧುಗಳ ವೇಷವನ್ನು ಧರಿಸಿದ ಪಾಪಿಷ್ಠನಂತೆ ಅನಾಚಾರಿಯೆಂದು ಹೇಳುವುದಂತೂ ತುಂಬ ತೀಕ್ಷ್ಣವಾದ ಹೋಲಿಕೆಗಳ ಸಾಲು:

**ಜಾನೇ ಪಾಪಸಮಾಚಾರಂ ತೃಣೈ: ಕೂಪಮಿವಾವೃತಮ್ ।**
**ಸತಾಂ ವೇಷಧರಂ ಪಾಪಂ ಪ್ರಚ್ಛನ್ನಮಿವ ಪಾವಕಮ್ ॥** (೪.೧೭.೨೧)

ಈ ಶ್ಲೋಕದ "ಪ್ರಚ್ಛನ್ನಮಿವ ಪಾವಕಂ" ಎಂಬ ಸೊಲ್ಲು ತುಂಬ ಮಾರ್ಮಿಕ. ಅಗ್ನಿಪ್ರಮಾದಗಳ ಬಗೆಯನ್ನು ಬಲ್ಲವರಿಗೆ ಇದರ ಪರಿಣಾಮರಮಣೀಯತೆ ಸುವೇದ್ಯ. ಗುಟ್ಟಾಗಿ ಹೊತ್ತಿಕೊಂಡ ಬೆಂಕಿಯು ದಳ್ಳುರಿಯಾದ ಬಳಿಕವೇ ಅರಿವಿಗೆ ಬರುತ್ತದೆ. ಆದರೆ ಆ ಹೊತ್ತಿಗೆ ಪರಿಸ್ಥಿತಿ ಕೈಮೀರಿರುತ್ತದೆ. ಇದೇ ವಿಧಿವೈಕಟ್ಯ.

ಮರಣಾಸನ್ನನಾದ ವಾಲಿಯು ಪರಿಸ್ಥಿತಿಯನ್ನು ಮಹರ್ಷಿಗಳು ಮನಮುಟ್ಟುವಂತೆ ವರ್ಣಿಸುತ್ತ ಆತನು ಹೊಗರನ್ನು ಕಳೆದುಕೊಂಡ ಕಮಲಬಾಂಧವನಂತೆ, ನೀರೆಲ್ಲ ಸೋರಿಹೋದ ಬೆಳ್ಮೋಡದಂತೆ, ಆರಿಹೋಗುತ್ತಿರುವ ಅಗ್ನಿಯಂತೆ ತೋರುತ್ತಿದ್ದನೆಂದು ಚಿತ್ರಿಸುತ್ತಾರೆ. ಇಲ್ಲಿಯ ಒಂದೊಂದು ಉಪಮೆಗಳೂ ಸಹಜ, ಸಾರ್ಥಕ:

**ತಂ ನಿಷ್ಪ್ರಭಮಿವಾದಿತ್ಯಂ ಮುಕ್ತತೋಯಮಿವಾಂಬುದಮ್ ।**
**ಉಕ್ತವಾಕ್ಯಂ ಹರಿಶ್ರೇಷ್ಠಮುಪಶಾಂತಮಿವಾನಲಮ್ ॥** (೪.೧೮.೨)

ಮುಮೂರ್ಷುವಾದ ವಾಲಿಯು ಮೊದಲಿಗೆ ಕಳೆಗುಂದಿದ್ದು ಕಾಂತಿಹೀನ ಸೂರ್ಯನ ಸದೃಶವಾದರೆ, ಆತನು ರಕ್ತವನ್ನೂ ಶಕ್ತಿಯನ್ನೂ ಬಸಿದುಕೊಂಡದ್ದು ನೀರಿಲ್ಲದ ಮುಗಿಲಿಗೆ ಸಲ್ಲುವ ಹೋಲಿಕೆ. ಇನ್ನು ಪ್ರಾಣಜ್ಯೋತಿಯ ನಿರ್ವಾಣವು ಆರಿಹೋಗುವ ಅಗ್ನಿಯಲ್ಲಿ ತನ್ನ ಸಾಮ್ಯವನ್ನು ಮಾರ್ಮಿಕವಾಗಿ ತೋರಿಸಿಕೊಂಡಿದೆ.

ಮಳೆಗಾಲವನ್ನು ಬಣ್ಣಿಸುತ್ತಾ, ಬೆಂದ ಬುವಿಯೊಡಲು ಮೊದಲ ಮಳೆಹನಿಗೆ ತನ್ನೊಳಗಿನ ಹಬೆಯನ್ನು ಹೊಮ್ಮುವ ಮೂಲಕ ತೋರುವ ಪ್ರತಿಕ್ರಿಯೆಗೆ ಸೀತೆಯ ಬೆಂದೊಡಲನ್ನು ಸಮೀಕರಿಸುವ ರಾಮನ ಸಂವೇದನಶೀಲತೆ ನಿರುಪಮಾನ. ಇದನ್ನು ಆದಿಕವಿಗಳು ಕವಿನಿಬದ್ಧಪ್ರೌಢೋಕ್ತಿಯಾಗಿಸಿರುವುದು ಅವರ ಕಾವ್ಯಕೌಶಲಕ್ಕೆ ಸಾಕ್ಷಿ:

**ಸೀತೇವ ಶೋಕಸಂತಪ್ತಾ ಮಹೀ ಬಾಷ್ಪಂ ವಿಮುಂಚತಿ ।** (೪.೨೮.೭)

ಶರತ್ಕಾಲದ ವರ್ಣನೆಯಲ್ಲಿ ಮಹರ್ಷಿಗಳ ನುಡಿಬೆಡಗು ಮುಗಿಲು ಮುಟ್ಟುತ್ತದೆ.

ಇಲ್ಲಿಯ ಕೆಲವೊಂದು ಉಪಮೆಗಳು ರೂಪಕದ ಬೆಂಬಲವನ್ನೂ ಮತ್ತಷ್ಟು ಪರಿಣಾಮಕಾರಿಯಾಗಿವೆ:

**ದರ್ಶಯಂತಿ ಶರನ್ನದ್ಯಃ ಪುಲಿನಾನಿ ಶನೈಃ ಶನೈಃ ।**
**ನವಸಂಗಮಸಂವ್ರೀಡಾ ಜಘನಾನೀವ ಯೋಷಿತಃ ॥** (೪.೩೦.೨೫)

ವರ್ಷಾಕಾಲದಲ್ಲಿ ದಡವನ್ನು ಮೀರಿ ಉಕ್ಕಿಹರಿದ ನದಿಗಳು ಇದೀಗ ಶರತ್ಕಾಲದಲ್ಲಿ ವಿಪುಲವಾದ ಮಳಲದಿಣ್ಣೆಗಳ ದಡಗಳನ್ನು ಬಿಟ್ಟು ಮೆಲ್ಲಮೆಲ್ಲನೆ ಹರಿಯುತ್ತಿವೆ. ಇದು ಮೊದಲ ರಾತ್ರಿಯಲ್ಲಿ ಮಾನಿನಿಯರು ತಮ್ಮ ನಲ್ಲರಿಗೆ ಮೆಲ್ಲಮೆಲ್ಲನೆ ತಮ್ಮೊಡಲನ್ನು ತೆರೆದು ತೋರುವಂತೆ ಭಾಸವಾಗಿದೆ. ಇಂಥ ಉತ್ತಾನಶೃಂಗಾರದ ಸಭ್ಯಸೀಮೆಯನ್ನು ಚಿತ್ರಿಸಲು ಮಿಗಿಲಾದ ಔಚಿತ್ಯದ ಎದೆಗಾರಿಕೆ ಬೇಕು. ಅದು ಆದಿಕವಿಗಳದೇ ಸೊತ್ತು.

**ರಾತ್ರಿಃ ಶಶಾಂಕೋದಿತಸೌಮ್ಯವಕ್ತ್ರಾ**
**ತಾರಾಗಣೋನ್ಮೀಲಿತಚಾರುನೇತ್ರಾ ।**
**ಜ್ಯೋತ್ಸ್ನಾಂಶುಕಪ್ರಾವರಣಾ ವಿಭಾತಿ**
**ನಾರೀವ ಶುಕ್ಲಾಂಶುಕಸಂವೃತಾಂಗೀ ॥** (೪.೩೦.೪೭)

ಇರುಳೆಂಬ ಚೆಲುವೆಯು ಚಂದ್ರಮುಖಿಯಾಗಿ, ನಕ್ಷತ್ರನೇತ್ರೆಯಾಗಿ, ಚಂದ್ರಾತಪವಸ್ತ್ರೆಯಾಗಿ ಮನವನ್ನು ಗೆಲ್ಲುತ್ತಿದ್ದಾಳೆಂಬ ಇಲ್ಲಿಯ ಚಿತ್ರಣವು ಸಾವಯವರೂಪಕವಾಗುವ ಹಂತದಲ್ಲಿ ಉಪಮೆಯಾದ ಒಂದು ವಾಗ್ವಿಲಾಸ. ಇಂಥ ಸಂಕೀರ್ಣಾಲಂಕಾರಗಳು ರಾಮಾಯಾಣದಲ್ಲಿ ಅಸಂಖ್ಯ.

**ವಿಪಕ್ವಶಾಲಿಪ್ರಸವಾನಿ ಭುಕ್ತ್ವಾ**
**ಪ್ರಹರ್ಷಿತಾ ಸಾರಸಚಾರುಪಂಕ್ತಿಃ ।**
**ನಭಃ ಸಮಾಕ್ರಾಮತಿ ಶೀಘ್ರವೇಗಾ**
**ವಾತಾವಧೂತಾ ಗ್ರಥಿತೇವ ಮಾಲಾ ॥** (೪.೩೦.೪೭)

ಹಾಲುಕಾಳಿನ ಬತ್ತದ ತೆನೆಗಳನ್ನು ತಿಂದ ಕೊಕ್ಕರೆಗಳ ಸಾಲು ಉಲ್ಲಾಸದಿಂದ ವೇಗವಗಿ ಅಂಬರಕ್ಕೆ ನೆಗೆದಾಗ ಮಾಲೆಯೊಂದು ಗಾಳಿಯಲ್ಲಿ ತೇಲಿಬಂದಂತೆ ತೋರುವುದಂತೆ! ಇಲ್ಲಿಯ ಸರಸೋದಾರವಾದ ಉಪಮೆಯು ಸ್ವಭಾವೋಕ್ತಿಯ ಬೆಂಬಲವನ್ನು ಗಳಿಸಿ ಪರಿಪೂರ್ಣವಾದ ಶರಚ್ಚಿತ್ರವೊಂದನ್ನು ಕಲ್ಪಿಸಿರುವುದು ಪರಿಭಾವನೀಯ.

**ಸುಪ್ತೈಕಹಂಸಂ ಕುಮುದೈರುಪೇತಂ**
**ಮಹಾಹ್ರದಸ್ಥಂ ಸಲಿಲಂ ವಿಭಾತಿ ।**
**ಘನೈರ್ವಿಮುಕ್ತಂ ನಿಶಿ ಪೂರ್ಣಚಂದ್ರಂ**
**ತಾರಾಗಣಾಕೀರ್ಣಮಿವಾಂತರಿಕ್ಷಮ್ ॥** (೪.೩೦.೪೯)

ಇದು ಶರತ್ಕಾಲದ ಒಂದು ಹೃದ್ಯಚಿತ್ರ ನಿರ್ಮಲವಾದ ಸರೋವರದಲ್ಲಿ ಅರಳಿ ನಗುವ ಬೆಳ್ದಾವರೆಗಳ ನಡುವೆ ಹಂಸವೊಂದು ನೆಮ್ಮದಿಯಾಗಿ ನಿದ್ರಿಸಿದೆ. ಇದು ಮಳೆಮುಗಿಲುಗಳಿಲ್ಲದ ಬಾನಿನಲ್ಲಿ ತಾರೆಗಳ ನಡುವೆ ತಿಂಗಳಿನಂತೆ ತೋರುತ್ತಿದೆ. ಇಲ್ಲಿಯ ನಿಸರ್ಗಚಿತ್ರಣದ ಅವ್ಯಾಜಮನೋಹರತೆ ಸರ್ವಹೃದಯಹಾರಿ.

**ಮೀನೋಪಸಂದರ್ಶಿತಮೇಖಲಾನಾಂ**
**ನದೀವಧೂನಾಂ ಗತಯೋಽದ್ಯ ಮಂದಾಃ।**
**ಕಾಂತೋಪಭುಕ್ತಾಲಸಗಾಮಿನೀನಾಂ**
**ಪ್ರಭಾತಕಾಲೇಷ್ವಿವ ಕಾಮಿನೀನಾಮ್ ॥** (೪.೩೦.೫೫)

ಶರತ್ಕಾಲದ್ದೇ ಮತ್ತೊಂದು ಚಿತ್ರವಿಲ್ಲಿದೆ. ಇದು ಉತ್ತಾನಶೃಂಗಾರಕಥಾನಕದ ಮಧುರೋಪಸಂಹಾರದಂತೆ ಕಾಣುತ್ತದೆ. ಶರದೃತುವಿನಲ್ಲಿ ತಿಳಿಯಾಗಿ, ದಡಗಳ ನಡುವೆ ಮೆಲ್ಲಮೆಲ್ಲನೆ ಹರಿಯುವ ನದಿಗಳು ತಮ್ಮಪಾತ್ರದೊಳಗೆ ಸುಳಿಯುವ ಮೀನುಗಳೂ ಕಾಣುವಷ್ಟು ಪಾರದರ್ಶಕವಾಗಿವೆ. ಅವುಗಳ ಲಲಿತಾಲಸಗತಿಯು ಇರುಳೆಲ್ಲ ರತಿಯಲ್ಲಿ ಮಿಂದೆದ್ದ ಸುಂದರಿಯರು ಮುಂಜಾನೆ ಮೆಲ್ಲಮೆಲ್ಲನೆ ಮೇಖಲೆಯ ಸೊಲ್ಲಿನೊಡನೆ ಸಾಗುತ್ತಿರುವಂತೆ ತೋರುತ್ತದೆ. ಮಹರ್ಷಿವರೇಣ್ಯರ ನಿತ್ಯಶಾಂತಸ್ವರೂಪವು ಮಾತ್ರ ಈ ಬಗೆಯ ಹೃದಯಂಗಮಶೃಂಗಾರವನ್ನು ಸಂನ್ಯಾಸಿಗಳೂ ಸಂತೋಷಪಡುವಂತೆ ರೂಪಿಸಬಲ್ಲದು.

**ಸಚಕ್ರವಾಕಾನಿ ಸಶೈವಲಾನಿ**
**ಕಾಶೈರ್ದುಕೂಲೈರಿವ ಸಂವೃತಾನಿ ।**

**ಇಂದ್ರಧ್ವಜ ಇವೋದ್ಧೂತಃ ಪೌರ್ಣಮಾಸ್ಯಾಂ ಮಹೀತಲೇ ।**
**ಆಶ್ವಯುಕ್ ಸಮಯೇ ಮಾಸಿ ಗತಶ್ರೀಕೋ ವಿಚೇತನಃ ॥** (೪.೧೬.೩೭)

ಪ್ರಾಚೀನ ಭಾರತದಲ್ಲಿ ಮಳೆಗಾಲವು ಮುಗಿದ ಬಳಿಕ. ಒಳ್ಳೆಯ ಮಳೆಯನ್ನು ಅನುಗ್ರಹಿಸಿದ ಕಾರಣ ಇಂದ್ರನಿಗೆ ಕೃತಜ್ಞತೆಯನ್ನು ಸಲ್ಲಿಸುವ ರೂಪದಲ್ಲಿ "ಇಂದ್ರಧ್ವಜೋತ್ಸವ"ವೆಂಬ ಹಬ್ಬವು ಶರತ್ಕಾಲವಿಡೀ ಸಂಭ್ರಮೋತ್ಸಾಹಗಳಿಂದ ಸಾಗುತ್ತಿತ್ತು. ಇದೇ ಈ ಹೊತ್ತಿನ ನವರಾತ್ರ-ದೀಪಾವಳಿಗಳ ಪೂರ್ವರೂಪ. ಆಗ ಇಂದ್ರನ ಗೌರವಾರ್ಥ ಧ್ವಜಸ್ತಂಭವೊಂದನ್ನು ನೆಟ್ಟು, ಅದನ್ನು ಅಲಂಕರಿಸಿ, ಪೂಜಿಸಿ ಸಮಗ್ರ ಸಮಾಜವು ನಲಿದಾಡುತ್ತಿತ್ತು. ಅನಂತರ ಹುಣ್ಣಿಮೆಯ ಹೊತ್ತಿಗೆ ಈ ಧ್ವಜವನ್ನು ಇಳಿಸಿ, ಧ್ವಜಸ್ತಂಭವನ್ನು ವಿಧ್ಯುಕ್ತವಾಗಿ ನೆಲಕ್ಕೊರಗಿಸುತ್ತಿದ್ದರು. ಹೀಗೆ ಸಮುನ್ನತವಾದ ಪತಾಕಾಸ್ತಂಭವು ಹಲವು ಕಾಲ ಮಲೆತು ನಿಂತು ಮಾನ್ಯತೆಯನ್ನು ಗಳಿಸಿ ಅನಂತರ ನೆಲಕ್ಕೊರಗುವ ಚಿತ್ರಣವನ್ನು ಕಂಡವರಿಗೆ ಮಹಾವೀರನಾದ ವಾಲಿಯ ಪತನವು ಅದೆಂಥ ಅನುರೂಪ ಸಾದೃಶ್ಯವೆಂದು ತೋರುವಲ್ಲಿ ಸಂದೇಹವಿಲ್ಲ. ಆದಿಕವಿಗಳು ಇಂಥ ಇಂದ್ರಧ್ವಜಪತನಚಿತ್ರವನ್ನು ತಮ್ಮ ಕಾವ್ಯದಲ್ಲಿ ಹಲವೆಡೆ ಬಳಸಿಕೊಂಡಿದ್ದಾರೆ. ಇದು ಅವರದೇ ಸ್ವೋಪಜ್ಞಸಾಕ್ಷಾತ್ಕಾರವಾದ ಕಾರಣ ಪುನರಾವೃತ್ತಿ ಸಹಜ. ಅಲ್ಲದೆ ಇದು ತಾಳುವಂಥದ್ದೂ ಹೌದು. ಇಂಥ ಪ್ರವೃತ್ತಿಯನ್ನು ಕವಿಲೋಕಸಾಮಾನ್ಯದಲ್ಲಿ ಸಮೃದ್ಧವಾಗಿ ಕಾಣಬಹುದು. ಪರವರ್ತಿಗಳಾದ ಕವಿಗಳೆಲ್ಲ ಈ ಹೋಲಿಕೆಯನ್ನು ಯಥೋಚಿತವಾಗಿ ಅಳವಡಿಸಿಕೊಂಡಿದ್ದಾರೆ.

ವಾಲಿಯು ರಾಮನನ್ನು ನಿಂದಿಸುವಾಗ ಆತನು ಹುಲ್ಲುಮುಚ್ಚಿದ ಹಾಳುಬಾವಿಯಂತೆ, ಗುಟ್ಟಾಗಿ ಉರಿಯುವ ಬೆಂಕಿಯಂತೆ, ಸಾಧುಗಳ ವೇಷವನ್ನು ಧರಿಸಿದ ಪಾಪಿಷ್ಠನಂತೆ ಅನಾಚಾರಿಯೆಂದು ಹೇಳುವುದಂತೂ ತುಂಬ ತೀಕ್ಷ್ಣವಾದ ಹೋಲಿಕೆಗಳ ಸಾಲು:

**ಜಾನೇ ಪಾಪಸಮಾಚಾರಂ ತೃಣೈಃ ಕೂಪಮಿವಾವೃತಮ್ ।**
**ಸತಾಂ ವೇಷಧರಂ ಪಾಪಂ ಪ್ರಚ್ಛನ್ನಮಿವ ಪಾವಕಮ್ ॥** (೪.೧೭.೨೧)

ಈ ಶ್ಲೋಕದ "ಪ್ರಚ್ಛನ್ನಮಿವ ಪಾವಕಂ" ಎಂಬ ಸೊಲ್ಲು ತುಂಬ ಮಾರ್ಮಿಕ. ಅಗ್ನಿಪ್ರಮಾದಗಳ ಬಗೆಯನ್ನು ಬಲ್ಲವರಿಗೆ ಇದರ ಪರಿಣಾಮರಮಣೀಯತೆ ಸುವೇದ್ಯ. ಗುಟ್ಟಾಗಿ ಹೊತ್ತಿಕೊಂಡ ಬೆಂಕಿಯು ದಳ್ಳುರಿಯಾದ ಬಳಿಕವೇ ಅರಿವಿಗೆ ಬರುತ್ತದೆ. ಆದರೆ ಆ ಹೊತ್ತಿಗೆ ಪರಿಸ್ಥಿತಿ ಕೈಮೀರಿರುತ್ತದೆ. ಇದೇ ವಿಧಿವೈಕಟ್ಯ.

ಮರಣಾಸನ್ನನಾದ ವಾಲಿಯು ಪರಿಸ್ಥಿತಿಯನ್ನು ಮಹರ್ಷಿಗಳು ಮನಮುಟ್ಟುವಂತೆ ವರ್ಣಿಸುತ್ತ ಆತನು ಹೊಗರನ್ನು ಕಳೆದುಕೊಂಡ ಕಮಲಬಾಂಧವನಂತೆ, ನೀರೆಲ್ಲ ಸೋರಿಹೋದ ಬೆಳ್ಮೋಡದಂತೆ, ಆರಿಹೋಗುತ್ತಿರುವ ಅಗ್ನಿಯಂತೆ ತೋರುತ್ತಿದ್ದನೆಂದು ಚಿತ್ರಿಸುತ್ತಾರೆ. ಇಲ್ಲಿಯ ಒಂದೊಂದು ಉಪಮೆಗಳೂ ಸಹಜ, ಸಾರ್ಥಕ:

**ತಂ ನಿಷ್ಪ್ರಭಮಿವಾದಿತ್ಯಂ ಮುಕ್ತತೋಯಮಿವಾಂಬುದಮ್ ।**
**ಉಕ್ತವಾಕ್ಯಂ ಹರಿಶ್ರೇಷ್ಠಮುಪಶಾಂತಮಿವಾನಲಮ್ ॥** (೪.೧೮.೨)

ಮುಮೂರ್ಷುವಾದ ವಾಲಿಯು ಮೊದಲಿಗೆ ಕಳೆಗುಂದಿದ್ದು ಕಾಂತಿಹೀನ ಸೂರ್ಯನ ಸದೃಶವಾದರೆ, ಆತನು ರಕ್ತವನ್ನೂ ಶಕ್ತಿಯನ್ನೂ ಬಸಿದುಕೊಂಡದ್ದು ನೀರಿಲ್ಲದ ಮುಗಿಲಿಗೆ ಸಲ್ಲುವ ಹೋಲಿಕೆ. ಇನ್ನು ಪ್ರಾಣಜ್ಯೋತಿಯ ನಿರ್ವಾಣವು ಆರಿಹೋಗುವ ಅಗ್ನಿಯಲ್ಲಿ ತನ್ನ ಸಾಮ್ಯವನ್ನು ಮಾರ್ಮಿಕವಾಗಿ ತೋರಿಸಿಕೊಂಡಿದೆ.

ಮಳೆಗಾಲವನ್ನು ಬಣ್ಣಿಸುತ್ತಾ, ಬೆಂದ ಬುವಿಯೊಡಲು ಮೊದಲ ಮಳೆಹನಿಗೆ ತನ್ನೊಳಗಿನ ಹಬೆಯನ್ನು ಹೊಮ್ಮುವ ಮೂಲಕ ತೋರುವ ಪ್ರತಿಕ್ರಿಯೆಗೆ ಸೀತೆಯ ಬೆಂದೊಡಲನ್ನು ಸಮೀಕರಿಸುವ ರಾಮನ ಸಂವೇದನಶೀಲತೆ ನಿರುಪಮಾನ. ಇದನ್ನು ಆದಿಕವಿಗಳು ಕವಿನಿಬದ್ಧಪ್ರೌಢೋಕ್ತಿಯಾಗಿಸಿರುವುದು ಅವರ ಕಾವ್ಯಕೌಶಲಕ್ಕೆ ಸಾಕ್ಷಿ:

**ಸೀತೇವ ಶೋಕಸಂತಪ್ತಾ ಮಹೀ ಬಾಷ್ಪಂ ವಿಮುಂಚತಿ ।** (೪.೨೮.೭)

ಶರತ್ಕಾಲದ ವರ್ಣನೆಯಲ್ಲಿ ಮಹರ್ಷಿಗಳ ನುಡಿಬೆಡಗು ಮುಗಿಲು ಮುಟ್ಟುತ್ತದೆ.

ಇಲ್ಲಿಯ ಕೆಲವೊಂದು ಉಪಮೆಗಳು ರೂಪಕದ ಬೆಂಬಲವನ್ನೂ ಮತ್ತಷ್ಟು ಪರಿಣಾಮಕಾರಿಯಾಗಿವೆ:

**ದರ್ಶಯಂತಿ ಶರನ್ನದ್ಯಃ ಪುಲಿನಾನಿ ಶನೈಃ ಶನೈಃ ।**
**ನವಸಂಗಮಸಂವ್ರೀಡಾ ಜಘನಾನೀವ ಯೋಷಿತಃ ॥** (೪.೩೦.೨೫)

ವರ್ಷಾಕಾಲದಲ್ಲಿ ದಡವನ್ನು ಮೀರಿ ಉಕ್ಕಿಹರಿದ ನದಿಗಳು ಇದೀಗ ಶರತ್ಕಾಲದಲ್ಲಿ ವಿಪುಲವಾದ ಮಳಲದಿಣ್ಣೆಗಳ ದಡಗಳನ್ನು ಬಿಟ್ಟು ಮೆಲ್ಲಮೆಲ್ಲನೆ ಹರಿಯುತ್ತಿವೆ. ಇದು ಮೊದಲ ರಾತ್ರಿಯಲ್ಲಿ ಮಾನಿನಿಯರು ತಮ್ಮ ನಲ್ಲರಿಗೆ ಮೆಲ್ಲಮೆಲ್ಲನೆ ತಮ್ಮೊಡಲನ್ನು ತೆರೆದು ತೋರುವಂತೆ ಭಾಸವಾಗಿದೆ. ಇಂಥ ಉತ್ತಾನಶೃಂಗಾರದ ಸಭ್ಯಸೀಮೆಯನ್ನು ಚಿತ್ರಿಸಲು ಮಿಗಿಲಾದ ಔಚಿತ್ಯದ ಎದೆಗಾರಿಕೆ ಬೇಕು. ಅದು ಆದಿಕವಿಗಳದೇ ಸೊತ್ತು.

**ರಾತ್ರಿಃ ಶಶಾಂಕೋದಿತಸೌಮ್ಯವಕ್ತ್ರಾ**
**ತಾರಾಗಣೋನ್ಮೀಲಿತಚಾರುನೇತ್ರಾ ।**
**ಜ್ಯೋತ್ಸ್ನಾಂಶುಕಪ್ರಾವರಣಾ ವಿಭಾತಿ**
**ನಾರೀವ ಶುಕ್ಲಾಂಶುಕಸಂವೃತಾಂಗೀ ॥** (೪.೩೦.೪೭)

ಇರುಳೆಂಬ ಚೆಲುವೆಯು ಚಂದ್ರಮುಖಿಯಾಗಿ, ನಕ್ಷತ್ರನೇತ್ರೆಯಾಗಿ, ಚಂದ್ರಾತಪವಸ್ತ್ರೆಯಾಗಿ ಮನವನ್ನು ಗೆಲ್ಲುತ್ತಿದ್ದಾಳೆಂಬ ಇಲ್ಲಿಯ ಚಿತ್ರಣವು ಸಾವಯವರೂಪಕವಾಗುವ ಹಂತದಲ್ಲಿ ಉಪಮೆಯಾದ ಒಂದು ವಾಗ್ವಿಲಾಸ. ಇಂಥ ಸಂಕೀರ್ಣಾಲಂಕಾರಗಳು ರಾಮಾಯಾಣದಲ್ಲಿ ಅಸಂಖ್ಯ.

**ವಿಪಕ್ವಶಾಲಿಪ್ರಸವಾನಿ ಭುಕ್ತ್ವಾ**
**ಪ್ರಹರ್ಷಿತಾ ಸಾರಸಚಾರುಪಂಕ್ತಿಃ ।**
**ನಭಃ ಸಮಾಕ್ರಾಮತಿ ಶೀಘ್ರವೇಗಾ**
**ವಾತಾವಧೂತಾ ಗ್ರಥಿತೇವ ಮಾಲಾ ॥** (೪.೩೦.೪೭)

ಹಾಲುಕಾಳಿನ ಬತ್ತದ ತೆನೆಗಳನ್ನು ತಿಂದ ಕೊಕ್ಕರೆಗಳ ಸಾಲು ಉಲ್ಲಾಸದಿಂದ ವೇಗವಗಿ ಅಂಬರಕ್ಕೆ ನೆಗೆದಾಗ ಮಾಲೆಯೊಂದು ಗಾಳಿಯಲ್ಲಿ ತೇಲಿಬಂದಂತೆ ತೋರುವುದಂತೆ! ಇಲ್ಲಿಯ ಸರಸೋದಾರವಾದ ಉಪಮೆಯು ಸ್ವಭಾವೋಕ್ತಿಯ ಬೆಂಬಲವನ್ನು ಗಳಿಸಿ ಪರಿಪೂರ್ಣವಾದ ಶರಚ್ಚಿತ್ರವೊಂದನ್ನು ಕಲ್ಪಿಸಿರುವುದು ಪರಿಭಾವನೀಯ.

**ಸುಪ್ತೈಕಹಂಸಂ ಕುಮುದೈರುಪೇತಂ**
**ಮಹಾಹ್ರದಸ್ಥಂ ಸಲಿಲಂ ವಿಭಾತಿ ।**
**ಘನೈರ್ವಿಮುಕ್ತಂ ನಿಶಿ ಪೂರ್ಣಚಂದ್ರಂ**
**ತಾರಾಗಣಾಕೀರ್ಣಮಿವಾಂತರಿಕ್ಷಮ್ ॥** (೪.೩೦.೪೯)

ಇದು ಶರತ್ಕಾಲದ ಒಂದು ಹೃದ್ಯಚಿತ್ರ ನಿರ್ಮಲವಾದ ಸರೋವರದಲ್ಲಿ ಅರಳಿ ನಗುವ ಬೆಳ್ದಾವರೆಗಳ ನಡುವೆ ಹಂಸವೊಂದು ನೆಮ್ಮದಿಯಾಗಿ ನಿದ್ರಿಸಿದೆ. ಇದು ಮಳೆಮುಗಿಲುಗಳಿಲ್ಲದ ಬಾನಿನಲ್ಲಿ ತಾರೆಗಳ ನಡುವೆ ತಿಂಗಳಿನಂತೆ ತೋರುತ್ತಿದೆ. ಇಲ್ಲಿಯ ನಿಸರ್ಗಚಿತ್ರಣದ ಅವ್ಯಾಜಮನೋಹರತೆ ಸರ್ವಹೃದಯಹಾರಿ.

**ಮೀನೋಪಸಂದರ್ಶಿತಮೇಖಲಾನಾಂ**
**ನದೀವಧೂನಾಂ ಗತಯೋಽದ್ಯ ಮಂದಾಃ।**
**ಕಾಂತೋಪಭುಕ್ತಾಲಸಗಾಮಿನೀನಾಂ**
**ಪ್ರಭಾತಕಾಲೇಷ್ವಿವ ಕಾಮಿನೀನಾಮ್ ॥** (೪.೩೦.೫೫)

ಶರತ್ಕಾಲದ್ದೇ ಮತ್ತೊಂದು ಚಿತ್ರವಿಲ್ಲಿದೆ. ಇದು ಉತ್ತಾನಶೃಂಗಾರಕಥಾನಕದ ಮಧುರೋಪಸಂಹಾರದಂತೆ ಕಾಣುತ್ತದೆ. ಶರದೃತುವಿನಲ್ಲಿ ತಿಳಿಯಾಗಿ, ದಡಗಳ ನಡುವೆ ಮೆಲ್ಲಮೆಲ್ಲನೆ ಹರಿಯುವ ನದಿಗಳು ತಮ್ಮಪಾತ್ರದೊಳಗೆ ಸುಳಿಯುವ ಮೀನುಗಳೂ ಕಾಣುವಷ್ಟು ಪಾರದರ್ಶಕವಾಗಿವೆ. ಅವುಗಳ ಲಲಿತಾಲಸಗತಿಯು ಇರುಳೆಲ್ಲ ರತಿಯಲ್ಲಿ ಮಿಂದೆದ್ದ ಸುಂದರಿಯರು ಮುಂಜಾನೆ ಮೆಲ್ಲಮೆಲ್ಲನೆ ಮೇಖಲೆಯ ಸೊಲ್ಲಿನೊಡನೆ ಸಾಗುತ್ತಿರುವಂತೆ ತೋರುತ್ತದೆ. ಮಹರ್ಷಿವರೇಣ್ಯರ ನಿತ್ಯಶಾಂತಸ್ವರೂಪವು ಮಾತ್ರ ಈ ಬಗೆಯ ಹೃದಯಂಗಮಶೃಂಗಾರವನ್ನು ಸಂನ್ಯಾಸಿಗಳೂ ಸಂತೋಷಪಡುವಂತೆ ರೂಪಿಸಬಲ್ಲದು.

**ಸಚಕ್ರವಾಕಾನಿ ಸಶೈವಲಾನಿ**
**ಕಾಶೈರ್ದುಕೂಲೈರಿವ ಸಂವೃತಾನಿ ।**

**ಸಪತ್ರಲೇಖಾನಿ ಸರೋಚನಾನಿ**
**ವಧೂಮುಖಾನೀವ ನದೀಮುಖಾನಿ** ॥ (೪.೩೦.೫೬)

ಇದೂ ಶರದೃತುವಿನ ಮತ್ತೊಂದು ಮುಖ ಇಲ್ಲಿರುವುದು ಸಮುದ್ರದತ್ತ ಸಾಗುವ ನದಿಗಳ ವರ್ಣನೆ. ಇವು ಮಳೆಗಾಲದ ನದಿಗಳಂತೆ ಕೊಬ್ಬಿ ಹರಿಯುವುದಿಲ್ಲ. ಆದುದರಿಂದ ಇವುಗಳ ಗತಿಯಲ್ಲಿ ಅಂಕೆ ಮೀರಿದ ಜಂಬಗಾರ್ತಿಯರ ಗಾಡಿಯಿಲ್ಲ. ಚಕ್ರವಾಕಪಕ್ಷಿಗಳನ್ನೊಳಗೊಂಡು, ಅಲ್ಲಲ್ಲಿ ದಟ್ಟಹಸುರಿನ ಜಲನೀಲಿಗಳನ್ನು ಸೆಳೆದುಕೊಂಡು, ಇರ್ಕೆಲದ ತೀರದಲ್ಲಿ ತೊನೆದಾಡುವ ನಸುಬಿಳಿಯ ನೊದೆಹುಲ್ಲಿನ ವಲಯವನ್ನು ಲಾಲಿಸುತ್ತ ಸಮುದ್ರವನ್ನು ಸೇರುವ ಈ ತರಂಗಿಣೀರಮಣಿಯರು ಚಕ್ರವಾಕಸದೃಶಸ್ತನೆಯರಾಗಿ, ಕಾಶಸಂಕಾಶದುಕೂಲೆಯರಾಗಿ, ಮಕರಿಕಾಪತ್ರ ಚಿತ್ರ ರಚನೆಯಿಂದೊಡಗೂಡಿ ನಾಚಿ ನಲಿಯುವ ನವವಧುಗಳು ತಮ್ಮ ವದನಕಮಲವನ್ನು ಪ್ರಿಯತಮರಿಗೆ ಒಪ್ಪಿಸುವಂತಿದೆ. ಇಲ್ಲಿಯ ಕಲ್ಪನೆ ಅದೆಷ್ಟು ಸುಕುಮಾರಮನೋಹರವೆಂಬುದು ವಿವರಣಾತೀತ. ಅಲ್ಲದೆ ಇಲ್ಲಿಯ ವಿಶೇಷಣಗಳು ಅದೆಂತು ಧ್ವನಿಸ್ಪೃಕ್ಕಾಗಿವೆಯೆಂಬುದೂ ಗಮನಾರ್ಹ.

ಸೀತಾನ್ವೇಷಣೆಗಾಗಿ ನಿಯುಕ್ತರಾದ ವಾನರವೀರರೆಲ್ಲ ರಾಮನ ಬಳಿ ಬಂದು ಕೈಮುಗಿದಾಗ ಅದು ಕಮಲಕೋರಕಗಳಿಂದ ಕಂಗೊಳಿಸುವ ಸರೋವರದ ನೋಟವನ್ನು ಕಟ್ಟಿಕೊಡುವಂತಿತ್ತೆಂದು ಆದಿಕವಿಗಳು ಕಲ್ಪಿಸುತ್ತಾರೆ:

**ಕೃತಾಂಜಲೌ ಸ್ಥಿತೇ ತಸ್ಮಿನ್ ವಾನರಾಶ್ಚಾಭವಂಸ್ತದಾ ।**
**ತಟಾಕಮಿವ ತದ್ದೃಷ್ಟ್ವಾ ರಾಮಃ ಕುಡ್ಮಲಪಂಕಜಮ್** ॥ (೪.೩೮.೧೭)

ಈ ನಿಸರ್ಗರಮಣೀಯಚಿತ್ರವನ್ನು ಕಂಡು ಮನಸೋತ ಕಾಳಿದಾಸನು ಪ್ರಾಯಶಃ ಇದರ ಸ್ಫೂರ್ತಿಯಿಂದಲೇ ಕುಮಾರಸಂಭವಕಾವ್ಯದಲ್ಲಿ ಒಂದೆಡೆ ಸಾವಿರ ಕಂಗಳ ಇಂದ್ರನು ಬೃಹಸ್ಪತಿಯತ್ತ ನಿಟ್ಟಿಸಿದಾಗ ತಾವರೆಗಳಿಂದ ತುಂಬಿದ ಪುಷ್ಕರಿಣಿಯ ಮೇಲೆ ಮಂದಾನಿಲವೊಂದು ಬೀಸಿ ಹೂಗಳೆಲ್ಲ ಒತ್ತಟ್ಟಿಗೆ ಸಂದಂತ್ತಿತ್ತೆಂದು ವರ್ಣಿಸಿರಬಹುದು. ಎಲ್ಲರೂ ಆದಿಕವಿಗಳ ಕಾವ್ಯಾರ್ಥದ ಉಪಜೀವಿಗಳೇ. ಇದಕ್ಕೆ ಕವಿಕುಲಗುರುವೂ ಹೊರತಲ್ಲ. ದಿಟವೇ, ಇಲ್ಲಿ ಉಪಮಾನೋಪಮೇಯಗಳ ನಡುವೆ ವಚನೈಕ್ಯವಿಲ್ಲದಿದ್ದರೂ ಅದು ಕವಿಪ್ರತಿಭೆಯಲ್ಲಿ ಮುಚ್ಚಿಹೋಗಿದೆ.

ಹೀಗೆ ಅಣಿಗೊಂಡ ವಾನರವೃಂದವು ಎಲ್ಲೆಡೆಗೂ ಸೀತಾನ್ವೇಷಣತತ್ಪರತೆಯಿಂದ ಸುಳಿದಾಗ ಭುವಿಯೆಲ್ಲ ಮಿಡತೆಗಳಿಂದ ಮುಚ್ಚಿಹೋದಂತ್ತಿತ್ತೆಂದು ಆದಿಕವಿಗಳು ವರ್ಣಿಸುತ್ತಾರೆ. ಮಿಡತೆಗಳ ವ್ಯಾಪನಶೀಲತೆಯನ್ನು ಬಲ್ಲವರಿಗೆ ಈ ಉಪಮೆಯ ಔಚಿತ್ಯ ಮಿಗಿಲಾಗಿ ಮನ ಮುಟ್ಟಿದಿರದು:

**ಶಲಭಾ ಇವ ಸಂಛಾದ್ಯ ಮೇದಿನೀಂ ಸಂಪ್ರತಸ್ಥಿರೇ** । (೪.೪೫.೩)

ಸೀತೆಯನ್ನು ಸರ್ವತ್ರ ಅರಸಿ ನಿರಾಶರಾದ ಕಪಿಗಳು ಸಂಪಾತಿಯಲ್ಲಿ ತಮ್ಮ ವೈಫಲ್ಯವನ್ನು ಹೇಳಿಕೊಳ್ಳುವಾಗ ಈ ಪರಿಶ್ರಮವು ಇರುಳಿನಲ್ಲಿ ರವಿಕಾಂತಿಯನ್ನು ಹುಡುಕಿದಂತಾಯಿತೆಂದು ಹಳಹಳಿಸಿಕೊಳ್ಳತ್ತಾರೆ. ಈ ಕಲ್ಪನೆಯು ತನ್ನ ಸಹಜತೆಯ ಕಾರಣ ಮತ್ತೂ ಮನೋಗ್ರಾಹಿಯಾಗಿದೆ:

**ವೈದೇಹೀಂ ನಾಧಿಗಚ್ಛಾಮೋ ರಾತ್ರೌ ಸೂರ್ಯಪ್ರಭಾಮಿವ** । (೪.೫೭.೨೩)

ಹನೂಮಂತನ ಸಮುದ್ರೋಲ್ಲಂಘನಕಾಲದಲ್ಲಿ ಕಂಪಿಸಿದ ಮಹೇಂದ್ರಪರ್ವತದ ನೆಲೆಯಿಂದ ಭಯಭೀತರಾದ ಮುನಿಗಳೆಲ್ಲ ದೂರಕ್ಕೆ ತೆರಳಿದಾಗ ಆ ಗಿರಿಯು ಸಾರ್ಥವನ್ನು ಕಳೆದುಕೊಂಡು ಒಂಟಿಯಾದ ಹಾದಿಗನಂತೆ ಕಂಗೆಟ್ಟಿತೆಂದು ಆದಿಕವಿಗಳು ವರ್ಣಿಸುವ ಪರಿಯಂತೂ ಅಭಿನವಕಲ್ಪನೆ:

**ಋಷಿಭಿಸ್ತ್ರಾಸಸಂಭ್ರಾಂತೈಸ್ತ್ಯಜ್ಯಮಾನಶಿಲೋಚ್ಚಯಃ ।**
**ಸೀದನ್ಮಹತಿ ಕಾಂತಾರೇ ಸಾರ್ಥಹೀನ ಇವಾಧ್ವಗಃ** ॥ (೪.೬೭.೪೯)

ಇಲ್ಲಿ ವರ್ತಕರ ಗುಂಪಾದ ಸಾರ್ಥವು ತನ್ನ ನಾಯಕನಾದ ಸಾರ್ಥವಾಹನ ನೇತೃತ್ವದಲ್ಲಿ ತನ್ನೊಡನೆ ಅನೇಕ ಪಾಂಥರನ್ನೂ ಕೊಂಡೊಯ್ಯುತ್ತಿದ್ದ ಪ್ರಾಚೀನ ಭಾರತದ ಚಿತ್ರ ಕಣ್ಣಿಗೆ ಕಟ್ಟಿದಿರದು. ಇಂಥ ಹೋಲಿಕೆಗಳು ಅಭಿಜಾತ ಸಾಹಿತ್ಯದಲ್ಲಿಯೂ ವಿರಳ.

**ಸುಂದರಕಾಂಡವು** ಹೆಸರೇ ಸೂಚಿಸುವಂತೆ ಸುಂದರಸಂನಿವೇಶಗಳ ತವನಿಧಿ. ಇಲ್ಲಿಯ ಉಪಮೆಗಳು ಎಂದಿನಂತೆ ರಸಿಕರ ಹೃದಯವನ್ನು ಸೆಳೆಯದಿರವು. ಇವುಗಳ ಸೊಗಸನ್ನಿಷ್ಟು ನೋಡೋಣ.

ಬಾನಿಗೆ ನೆಗೆದ ವಾಯುಪುತ್ರನ ಬಾಲವು ಗರುಡನಿಂದ ಕೊಂಡೊಯ್ಯಲ್ಪಡುತ್ತಿರುವ ಮಹಾಸರ್ಪದಂತೆ ತೋರಿತೆಂಬ ಒಂದೇ ಹೋಲಿಕೆಯಿಂದ ಮಹರ್ಷಿಗಳು ಹನೂಮಂತನ ಲಂಘನಲೀಲೆಯನ್ನೂ ಆಕಾರವಿಶೇಷವನ್ನೂ ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ:

**ತಸ್ಯ ಲಾಂಗೂಲಮಾವಿದ್ಧಮಾತ್ತವೇಗಸ್ಯ ಪೃಷ್ಠತಃ ।**
**ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ ॥** (೫.೧.೩೪)

ಕಡಲನ್ನು ದಾಟಲು ಆಗಸಕ್ಕೆ ನೆಗೆದ ಹನುಮನನ್ನು-ಅವನ ಪ್ರಬಲವೇಗದ ಸೆಳೆತಕ್ಕೆ ಸಿಲ್ಕಿ ಕಿತ್ತಬಂದ-ಮಹೇಂದ್ರಪರ್ವತದ ಗಿಡ-ಮರಗಳು ಸ್ವಲ್ಪದೂರ ಅವನನ್ನು ಹಿಂಬಾಲಿಸಿ ಹಾರಿದುವಷ್ಟೆ. ಅವುಗಳು ಪ್ರಿಯಬಂಧುವನ್ನು ಬೀಳ್ಕೊಡುವ ಬಾಂಧವರಂತೆ, ದೊರೆಯನ್ನು ಬೀಳ್ಕೊಡುವ ಸೇನೆಯಂತೆ ಕಂಡವೆಂದು ಆದಿಕವಿಗಳ ಕಲ್ಪನೆ:

**ಪ್ರಸ್ಥಿತಂ ದೀರ್ಘಮಧ್ವಾನಂ ಸ್ವಬಂಧುಮಿವ ಬಾಂಧವಾಃ ।**
**ಅನುಜಗ್ಮುರ್ಹನೂಮಂತಂ ಸೈನ್ಯಾ ಇವ ಮಹೀಪತಿಮ್ ।**
(೫.೧.೪೭.೪೮)

ಹೀಗೆಯೇ ತನ್ನ ವೇಗದ ಕಾರಣ ಅಲ್ಲಿಯ ಬನದ ಸುಮರಾಜಿಯನ್ನೆಲ್ಲ ಮೈಗಂಟಿಸಿಕೊಂಡ ಪವನಸುತನು  ಮಿಂಚುಹುಳಗಳಿಂದ ಕಂಗೊಳಿಸುವ ಮಲೆಯಂತೆ ತೋರಿದನೆಂದು ವರ್ಣಿಸುವಲ್ಲಿ ವಾಲ್ಮೀಕಿಮುನಿಗಳ ಪ್ರಕೃತಿಪರಿಶೀಲನೆ ಅತ್ಯದ್ಭುತವಾಗಿ ಕಂಡಿದೆ:

**ಸ ನಾನಾಕುಸಮೈಃ ಕೀರ್ಣಃ ಕಪಿಃ ಸಾಂಕುರಕೋರಕೈಃ ।**
**ಶುಶುಭೇ ಮೇಘಸಂಕಾಶಃ ಖದ್ಯೋತೈರಿವ ಪರ್ವತಃ ॥** (೫.೧.೫೧)

ಬೆಟ್ಟಕ್ಕೆಲ್ಲ ಮಿಂಚುಹುಳುಗಳು ಮುತ್ತಿಕೊಳ್ಳುವುದು ಮಳೆಗಾಲದ ಮಲೆಸೀಮೆಯ ಪರಿಚಯವಿದ್ದವರಿಗೂ ಪುಣ್ಯವಿದ್ದಲ್ಲಿ ಮಾತ್ರ ಕಾಣಬಲ್ಲ ನೇತ್ರನಿರ್ವಾಣದೃಶ್ಯ. ಇದನ್ನು ಕಂಡವರು, ನಮಗೂ ಕಾಣಿಸಬಲ್ಲವರು, ಆದಿಕವಿಗಳು.

ಹನೂಮಂತನಿಗೆ ಮುಸ್ಸಂಜೆಯ ಮಾದಕಸಮಯದಲ್ಲಿ ಕನಕಲಂಕೆಯು ಸೊಗಸಾಗಿ ಸಿಂಗರಗೊಂಡ ಸುಂದರಿಯಂತೆ ಕಂಡಿದಂತೆ: **ಪ್ರಮದಾಂ ಭೂಷಿತಾಮಿವ** (೫.೩.೧೮). ಅದೆಷ್ಟು ಅಡಕದಲ್ಲಿ ಮಹರ್ಷಿಗಳು ಈ ಚಿತ್ರವನ್ನಿತ್ತಿದ್ದಾರೆ! ಲಂಕೆಯು ಅದೆಷ್ಟೇ ಶ್ರೀಮಂತಿಕೆಯ ಚೆಲುವಿನಿಂದ ಕಂಗೊಳಿಸಿದರೂ ನೈಷ್ಠಿಕಬ್ರಹ್ಮಚಾರಿಯ ಕಣ್ಣಿಗೆ ಹೆಣ್ಣು ಮಣ್ಣೇ ತಾನೆ!

ರಾವಣಾಂತಃಪುರದಲ್ಲಿ ಮಲಗಿದ್ದ ಮದವತಿಯರು ತಮ್ಮ ಜಘನಪುಲಿನಗಳಿಂದ, ಕಿಂಕಿಣೀಕಮಲಮುಕುಲಗಳಿಂದ, ವದನಪದ್ಮಗಳಿಂದ, ಹಾವ-ಭಾವಗಳೆಂಬ ನಕ್ರ-ಮಕರಗಳಿಂದ, ಚೆಲುವಿನ ಬಲ್ಮೆಯ ತೀರಗಳಿಂದ ಮನಸೆಳೆಯುವ ನದಿಗಳಂತಿದ್ದರಂತೆ:

**ಅಪಗಾ ಇವ ತೇ ರೇಜುರ್ಜಘನ್ಯೈಃ ಪುಲಿನ್ಯೈರಿವ ।**
**ಕಿಂಕಿಣೀಜಾಲಸಂಕೋಶಾಸ್ತಾ ಹೇಮವಿಪುಲಾಂಬುಜಾಃ ॥** (೫.೯.೫೧)
**ಭಾವಗ್ರಾಹಾ ಯಶಸ್ತೀರಾಃ ಸುಪ್ತಾ ನದ್ಯ ಇವಾಬಭುಃ ।** (೫.೯.೫೨)

ಇಲ್ಲಿಯ ಉಪಮೆಯು ಸಾವಯವ ರೂಪಕದಿಂದ ಗಳಿಸಿದ ಪರಿಣಾಮರಮಣೀಯತೆ ಪರಿಭಾವನೀಯ.

ಅಂಜನಾತನಯನಿಗೆ ನಿದ್ರೆಯಲ್ಲಿದ್ದ ದಶಗ್ರೀವನು ಕಂಡ ಪರಿಯನ್ನು ಆದಿಕವಿಗಳು ಅನ್ಯಾದೃಶವಾಗಿ ಚಿತ್ರಿಸಿದ್ದಾರೆ:

**ಮಾಷರಾಶಿಪ್ರತೀಕಾಶಂ ನಿಶ್ಶ್ವಸಂತಂ ಭುಜಂಗವತ್ ।**
**ಗಾಂಗೇ ಮಹತಿ ತೋಯಾಂತೇ ಪ್ರಸುಪ್ತಮಿವ ಕುಂಜರಮ್ ॥**
(೫.೧೦.೨೮)

ರಾವಣನು ಉದ್ದಿನಕಾಳಿನ ರಾಶಿಯಂತೆ ಕಪ್ಪಗಿದ್ದನು, ಕಾಳಸರ್ಪದಂತೆ ಬುಸುಗುಟ್ಟುತ್ತಿದ್ದನು, ಗಂಗಾನದಿಯ ತೀರದಲ್ಲಿ ಮಲಗಿದ್ದ ಮದ್ದಾನೆಯಂತೆ ತೋರುತ್ತಿದ್ದನು. ಇಲ್ಲಿಯ ಮೂರು ಉಪಮೆಗಳು ಕ್ರಮವಾಗಿ ರಾವಣನ ಶ್ಯಾಮವರ್ಣದ ಬೃಹದ್ಗಾತ್ರವನ್ನೂ ನಿದ್ರೆಯಲ್ಲಿ

ಕೂಡ ಭಯಂಕರವಾಗಿ ತೋರುತ್ತಿದ್ದ ಪರಿಯನ್ನೂ ಹಾಸಿಗೆಯಲ್ಲಿ ಮೈಚೆಲ್ಲಿ ಮಲಗಿದ ವಿಲಾಸವಿಸ್ತಾರವನ್ನೂ ಬಿಂಬಿಸಿರುವ ಪರಿ ಅದೆಷ್ಟು ಸಾರ್ಥಕವೆಂಬುದು ಸಹೃದಯಸಮಾಜಕ್ಕೆ ಸುವೇದ್ಯ. ಹೀಗೆ ಕಣ್ಣಿಗೆ ಕಟ್ಟುವ ರೀತಿಯಲ್ಲಿ ವರ್ಣ್ಯವಿಷಯವನ್ನು ಮನಮುಟ್ಟಿಸುವುದೇ ಅಲಂಕಾರಗಳ ಮೂಲೋದ್ದೇಶ. ಇದು ವಾಲ್ಮೀಕಿಗಳಿಗೆ ಜನ್ಮಜಾತಿವಿದ್ಯೆ.

ಸೀತಾನ್ವೇಷಣೆಯಲ್ಲಿ ವ್ಯಗ್ರನಾಗಿದ್ದ ಹನೂಮಂತನಿಗೆ ಶಿಶಿರಾಂತ್ಯದಲ್ಲಿ ಹೂ-ಚಿಗುರುಗಳಿಲ್ಲದ ಅಶೋಕವನವೃಕ್ಷಗಳು ಜೂಜಿನಲ್ಲಿ ಸರ್ವಸ್ವವನ್ನೂ ಕಳೆದುಕೊಂಡ ಜೂಜಾಳಿಗಳಂತೆ ಕಂಡುವಂತೆ:

**ನಿರ್ಧೂತಪತ್ರಶಿಖರಾಃ ಶೀರ್ಣಪುಷ್ಪಫಲಾ ದ್ರುಮಾಃ ।**
**ನಿಕ್ಷಿಪ್ತವಸ್ತ್ರಾಭರಣಾ ಧೂರ್ತಾ ಇವ ಪರಾಜಿತಾಃ ॥** (೫.೧೪.೧೫)

ತಪೋವನದಲ್ಲಿ ನಿತ್ಯಾನುಷ್ಠಾನಮಗ್ನರಾಗಿ ಬಹಿಃಪ್ರಪಂಚವನ್ನೇ ಮರೆತ ಮುನಿಗಳಿಗೆ ಕಿತವಸಭೆಯ ವಿವರಗಳೆಲ್ಲ ಅದು ಹೇಗೆ ಕರಗತವಾದುವೋ ತಿಳಿಯದು! ಇಂತಲ್ಲದೆ ಕವಿತ್ವ ದಕ್ಕುವುದುಂಟೇ?

ಸುಂದರಕಾಂಡದ ಸಾರವತ್ತಾದ ಭಾಗಗಳಲ್ಲೊಂದು ಸೀತೆಯನ್ನು ಹನೂಮಂತನು ಕಂಡದ್ದು. ವಿಶೇಷತಃ ಆಕೆಯನ್ನು ಹತ್ತಾರು ಹೋಲಿಕೆಗಳ ಮೂಲಕ ಆದಿಕವಿಗಳು ವರ್ಣಿಸುವಲ್ಲಿ ಹೆಚ್ಚು-ಕಡಮೆ ಒಂದು ಸರ್ಗವನ್ನೇ ಮೀಸಲಿಟ್ಟಿದಾರೆ. ಅಲ್ಲಿಯ ಕೆಲವು ಸೂಕ್ತಿಗಳು ಸ್ಮರಣೀಯ:

**ತಾಂ ಸ್ಮೃತೀಮಿವ ಸಂದಿಗ್ಧಾಮೃದ್ಧಿಂ ನಿಪತಿತಾಮಿವ ।**

**ಸೋಪಸರ್ಗಾಂ ಯಥಾ ಸಿದ್ಧಿಂ ಬುದ್ಧಿಂ ಸಕಲುಷಾಮಿವ ।**
**ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ ॥** (೫.೧೫.೩೩.೩೪)

**ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ।**

**ಸನ್ನಾಮಿವ ಮಹಾಕೀರ್ತಿಂ ಶ್ರದ್ಧಾಮಿವ ವಿಮಾನಿತಾಮ್ ।**
**ಪ್ರಜ್ಞಾಮಿವ ಪರಕ್ಷೀಣಾಮಾಶಾಂ ಪ್ರತಿಹತಾಮಿವ ॥**

**ಆಯತೀಮಿವ ವಿಧ್ವಸ್ತಾಮಾಜ್ಞಾಂ ಪ್ರತಿಹತಾಮಿವ ।**
**ದೀಪ್ತಾಮಿವ ದಿಶಂ ಕಾಲೇ ಪೂಜಾಮಪಹೃತಾಮಿವ ॥**

**ವೇದೀಮಿವ ಪರಾಮೃಷ್ಟಾಂ ಶಾಂತಾಮಗ್ನಿಶಿಖಾಮಿವ ।**
(೫.೧೯.೧೧.೧೨.೧೩.೧೫)

**ಪ್ರತಿಪತ್ಪಾಠಶೀಲಸ್ಯ ವಿದ್ಯೇವ ತನುತಾಂ ಗತಾ ।** (೫.೫೯.೩೫)

ರಾವಣನ ಸೆರೆಯಲ್ಲಿ ಸೀತೆಯು ಸಂದಿಗ್ಧಾರ್ಥವುಳ್ಳ ಸ್ಮೃತಿಯಂತೆ, ಕ್ಷೀಣವಾದ ಸಂಪತ್ತಿಯಂತೆ, ವಿಘ್ನಗಳಿಂದ ತತ್ತರಿಸಿದ ತಪಸ್ಸಿದ್ಧಿಯಂತೆ, ಮಲಿನವಾದ ಬುದ್ಧಿಯಂತೆ, ಮಿಥ್ಯಾಪವಾದಕ್ಕೆ ತುತ್ತಾದ ಕೀರ್ತಿಯಂತೆ, ಅಭ್ಯಾಸವಿಲ್ಲದೆ ಮರೆತುಹೋದ ವಿದ್ಯೆಯಂತೆ, ಉಪೇಕ್ಷೆಗೊಂಡ ಶ್ರದ್ಧೆಯಂತೆ, ಸೊರಗಿದ ಪ್ರಜ್ಞೆಯಂತೆ, ತಿರಸ್ಕೃತವಾದ ಆಶೆಯಂತೆ ಹಾಳಾದ ಅಭಿವೃದ್ಧಿಯಂತೆ, ಮನ್ನಣೆ ದಕ್ಕದ ಆಜ್ಞೆಯಂತೆ, ಪ್ರಳಯಕಾಲದಲ್ಲಿ ಬೆಂಕಿಬಿದ್ದ ದಿಕ್ಕಿನಂತೆ, ಕಸಿದೊಯ್ಯಲ್ಪಟ್ಟ ಪೂಜಾಪ್ರಕಲ್ಪದಂತೆ, ಮೈಲಿಗೆಯಾದ ಯಜ್ಞವೇದಿಯಂತೆ, ಆರಿಹೋಗುತ್ತಿರುವ ಶ್ರೌತಾಗ್ನಿಯಂತೆ, ಅನಧ್ಯಯನಕಾಲದಲ್ಲಿ ವೇದಾಭ್ಯಾಸಕ್ಕೆ ತೊಡಗಿದವನ ಶ್ರುತಿಶೀಲದಂತೆ ನವೆಯುತ್ತಿದ್ದಳೆಂಬುದು ಇಲ್ಲಿಯ ತಾತ್ಪರ್ಯ. ಈ ಉಪಮೆಗಳೊಂದೊಂದರ ಸೊಗಸೂ ಮನನೀಯ. ವಿಶೇಷತಃ ಉಪಮಾನೋಪಮೇಯಗಳ ಲಿಂಗಸಾಮ್ಯಕ್ಕಾಗಿ ಆದಿಕವಿಗಳು ವಹಿಸಿದ ಜಾಗರೂಕತೆ, ಉಪಮೆಗಳ ಹೊಸತನವನ್ನು ಸಾಧಿಸುವಲ್ಲಿ ಕಾಯ್ದುಕೊಂಡ ಪ್ರಜ್ಞಾಪಾಟವ ಮತ್ತು ವ್ಯುತ್ಪತ್ತಿಮೂಲದ ಹೋಲಿಕೆಗಳನ್ನು ಹೆಣೆಯುವಲ್ಲಿ ತೋರಿದ ಕೌಶಲಗಳು ಯಾರನ್ನೂ ಮಣಿಸದಿರವು.

ಅಶೋಕವನಧ್ವಂಸವನ್ನು ಕಾವಲಿನ ಪಡೆಯ ಮೂಲಕ ಅರಿತ ರಾವಣನ ಕಣ್ಣುಗಳಿಂದ ರಕ್ತಬಿಂದುಗಳೇ ಉದುರಿದವಂತೆ. ಅವು ದೀಪದ ಕುಡಿಯಿಂದ ಜ್ವಾಲಾಲಿಪ್ತವಾದ ತೈಲಬಿಂದುಗಳನ್ನು ಹೋಲುತ್ತಿದ್ದವೆಂದು ಆದಿಕವಿಗಳು ವರ್ಣಿಸುತ್ತಾರೆ:

**ತಸ್ಯ ಕ್ರುದ್ಧಸ್ಯ ನೇತ್ರಾಭ್ಯಾಂ ಪ್ರಾಪತನ್ನಸ್ರಬಿಂದವಃ ।**
**ದೀಪ್ತಾಭ್ಯಾಮಿವ ದೀಪಾಭ್ಯಾಂ ಸಾರ್ಚಿಷಃ ಸ್ನೇಹಬಿಂದವಃ ॥** (೫.೪೨.೨೩)

ದೀಪದ ಕುಡಿಯಿಂದ ಹೊತ್ತಿಕೊಂಡ ಎಣ್ಣೆಯ ಹನಿಗಳು ಉರಿಯುವುದನ್ನು ಕೇವಲ ಸೂಕ್ಷ್ಮನಿರೀಕ್ಷಣೆ ಮಾತ್ರ ಅರಿಯಬಲ್ಲುದು.

ಕಾಳಿದಾಸನೂ ತನ್ನ ರಘುವಂಶದ ಎಂಟನೆಯ ಸರ್ಗದಲ್ಲಿ ಇಂದುಮತಿಯ ಸಾವನ್ನು ವರ್ಣಿಸುವಾಗ ಇದೇ ಉಪಮೆಯನ್ನು ಪ್ರಕಾರಾಂತರವಾಗಿ ಬಳಸಿಕೊಳ್ಳುತ್ತಾನೆ. ಹೀಗೆ ಆದಿಕವಿಗಳಿಗೆ ಅವನ ಆಧಮರ್ಣ್ಯವು ಸಲ್ಲುವ ಪರಿ ಮತ್ತೆ ಮತ್ತೆ ಕಾಣಸಿಗುತ್ತದೆ.

**ಯುದ್ಧಕಾಂಡವು** ಹೊಡೆದಾಟ-ಬಡಿದಾಟಗಳ ನೆಲೆಯಾದ ಕಾರಣ ಅಲ್ಲಿ ಅಲಂಕಾರಗಳಿಗೆ ಆಸ್ಪದವಿಲ್ಲವೆಂದು ಭಾವಿಸುವುದು ಪಾಮರಪ್ರಜ್ಞೆ. ಆದಿಕವಿಗಳಿಗೆ ಇಲ್ಲಿಯೂ ಅಸಂಖ್ಯಾವಕಾಶಗಳುಂಟು. ಇಂಥ ಕೆಲವು ಹೋಲಿಕೆಗಳನ್ನು ಗಮನಿಸೋಣ.

ಲಂಕಾಸಮರದಲ್ಲಿ ಉಭಯಪಕ್ಷಗಳೂ ಮೊದಲ ಬಾರಿಗೇ ರಾತ್ರಿಯುದ್ಧಕ್ಕೆ ಸನ್ನದ್ಧವಾಗುತ್ತವೆ. ನಿಶಾಚರರೆನಿಸಿದ ರಾಕ್ಷಸರಿಗೆ ಅನುಕೂಲಕಾರಿಯೇ ಸರಿ. ಆದರೆ ಕಾಂಚನಕವಚಗಳನ್ನು ಧರಿಸಿದ ಅವರನ್ನು ಕಪಿವೀರರು ಸುಲಭವಾಗಿ ಗುರುತಿಸಿ ಘಾತಿಸುವಂತಾಯಿತು. ಆ ಹೊತ್ತಿನಲ್ಲಿ ಅಸುರಸೇನೆಯು ಜ್ಯೋತಿರ್ಲತೆಗಳಿಂದ ಮಿನುಗುವ ಪರ್ವತಪಂಕ್ತಿಯಂತ್ತಿತ್ತೆಂದು ಆದಿಕವಿಗಳು ಹೋಲಿಸುತ್ತಾರೆ:

**ಸಂಪ್ರಾದೃಶ್ಯಂತ ಶೈಲೇಂದ್ರಾ ದೀಪ್ತೌಷಧಿವನಾ ಇವ ।** (೬.೪೪.೫)

**ಚಪಲಸ್ನೇಹ ಕೃತ್ಯಾನಿ ಸಹಸಾನುಪ್ರಧಾವತಃ ।**
**ಛಿದ್ರಮನ್ಯೇ ಪ್ರಪದ್ಯಂತೇ ಕ್ರೌಂಚಸ್ಯ ಖಮಿವ ದ್ವಿಜಾಃ ॥** (೬.೬೩.೧೯)

ನಿದ್ದೆಯಿಂದೆಬ್ಬಿಸಲ್ಪಟ್ಟ ಕುಂಭಕರ್ಣನು ರಾವಣನಿಗೆ ವ್ಯರ್ಥವಾದ ಹಿತೋಪದೇಶವನ್ನು ಮಾಡುವಾಗ ಹೇಳುವ ಮಾತಿದು. ದುಡುಕಿ ನಡೆಯುವ ಚಂಚಲಚಿತ್ತನೂ ಆದ ವ್ಯಕ್ತಿಯಲ್ಲಿ ಹುಳುಕನ್ನು ಹುಡುಕಲು ಸದಾ ವೈರಿಗಳು ಸಿದ್ಧರಿರುತ್ತಾರೆ. ಕ್ರೌಂಚಪರ್ವತದ ರಂಧ್ರವನ್ನು ವಲಸೆಯ ಹಕ್ಕಿಗಳು ಸದಾ ಅರಸುತ್ತಿರುವುದಷ್ಟೆ. ಇದು ಅಪ್ಪಟ ಲೋಕಜ್ಞತೆಯ ಹಾಗೂ ಪ್ರಕೃತಿಪರಿಶೀಲನೆಯ ಫಲ. ಇದರ ಸೊಗಸು ವ್ಯುತ್ಪನ್ನರಿಗಷ್ಟೆ ಸಾಧ್ಯ.

ಕುಂಭಕರ್ಣನು ರಾವಣನೊಡನೆ ಮಾತನಾಡಿ ಯುದ್ಧಕ್ಕೆ ತೆರಳುವಾಗ ನೀರಿಲ್ಲದ ಮೋಡಗಳಂತೆ ವೀರಯೋಧರು ವ್ಯರ್ಥವಾಗಿ ಗರ್ಜಿಸುವುದಿಲ್ಲವೆಂದು ಹೇಳುತ್ತಾನೆ:

**ಗರ್ಜಂತಿ ನ ವೃಥಾ ಶೂರಾ ನಿರ್ಜಲಾ ಇವ ತೋಯದಾಃ ।** (೬.೬೫.೩)

ಈ ಹೋಲಿಕೆಯಲ್ಲಿ ಶೂರರಲ್ಲದವರ ಅಸ್ತಿತ್ವವು ಶರನ್ನೀರದಗಳ ಹಾಗೆ ಹಗುರ ಮತ್ತು ಅವರ ಮುಖಗಳು ನೆತ್ತರ ಪಸೆಯಿಲ್ಲದೆ ಬಿಳಿಚಿಕೊಂಡಿರುತ್ತವೆಂಬ ಧ್ವನಿಯು ಹೃದಯಂಗಮ.

**ಶ್ರೋಣೀಸೂತ್ರೇಣ ಮಹತಾ ಮೇಚಕೇನ ವ್ಯರಾಜತ ।**
**ಅಮೃತೋತ್ಪಾದನೇ ನದ್ಧೋ ಭುಜಂಗೇನೇವ ಮಂದರಃ ॥** (೬.೬೫.೨೯)

ರಾವಣನ ಮಾತಿನಂತೆ ರಣಕೇಳಿಗೆ ಸಾಗುವ ಕುಂಭಕರ್ಣನನ್ನು ವರ್ಣಿಸುವ ಸಂದರ್ಭದಲ್ಲಿ ಆದಿಕವಿಗಳು ಆತನ ಗಾತ್ರವಿಸ್ತಾರವನ್ನು ಮನಗಾಣಿಸಲು ಕೇವಲ ಅವನ ನಡುಪಟ್ಟಿಯೊಂದನ್ನು ವರ್ಣಿಸಿ ಮಿಕ್ಕಂತೆ ನಮ್ಮ ಕಲ್ಪನಗೇ ಬಿಡುತ್ತಾರೆ. ಆ ಪ್ರಕಾರ ಕುಂಭಕರ್ಣನ ಕಟಿಪಟ್ಟಿಯು ಕಪ್ಪಗೆ ಹೊಳೆಹೊಳೆಯುತ್ತಿತ್ತು. ಇದು ಅಮೃತಮಥನಕಾಲದಲ್ಲಿ ಮಂದರವನ್ನು ಬಳಸಿ ಬಂದ ವಾಸುಕಿಸರ್ಪವನ್ನು ಹೋಲುತ್ತಿತ್ತು! ಈ ಮೂಲಕ ಅವನ ಪರ್ವತೋಪಮಗಾತ್ರವೂ ಮುಂದೆ ಅವನು ವಾನರಸೇನಾಸಮುದ್ರವನ್ನು ಪ್ರಮಥಿಸುವ ಕೋಲಾಹಲವೂ ಅದೆಷ್ಟು ಸಮರ್ಥವಾಗಿ ಧ್ವನಿತವಾಗಿದೆ!

ರಾಮಶರದಿಂದ ಕತ್ತರಿಸಲ್ಪಟ್ಟ ಕರ್ಣಕುಂಡಲಮಂಡಿತವಾದ ಕುಂಭಕರ್ಣನ ಶಿರಸ್ಸು ಪುನರ್ವಸುನಕ್ಷತ್ರೋದಯಕಾಲದಲ್ಲಿ ಆ ನಕ್ಷತ್ರಪುಂಜದ ನಡುವೆ ಉದಿಸಿದ ಚಂದ್ರಬಿಂಬದಂತಿತ್ತೆಂದು ವಾಲ್ಮೀಕಿಮುನಿಗಳು ವರ್ಣಿಸುತ್ತಾರೆ:

**ಕುಂಭಕರ್ಣಶಿರೋ ಭಾತಿ ಕುಂಡಲಾಲಂಕೃತಂ ಮಹತ್ ।**
**ಆದಿತ್ಯೇಽಪ್ಯುದಿತೇ ರಾತ್ರೌ ಮಧ್ಯಸ್ಥ ಇವ ಚಂದ್ರಮಾಃ ॥** (೬.೬೭.೧೮೨)

ಇದೊಂದು ಖಗೋಲಶಾಸ್ತ್ರೀಯವಾದ ಉಪಮೆ. ಇಲ್ಲಿ ಪೌರಾಣಿಕಾಂಶವೂ ಸೇರಿದೆ. ಪುನರ್ವಸುನಕ್ಷತ್ರವು ದೇವಮಾತೆಯಾದ

ಅದಿತಿಗೆ ಮಿಗಿಲಾಗಿ ಪ್ರಿಯ. ಹೀಗಾಗಿ ಅದು ಆದಿತ್ಯ ಈ ನಕ್ಷತ್ರಪುಂಜವಾದರೋ ಎರಡು ಪ್ರಜ್ವಲತಾರೆಗಳನ್ನು ಒಳಗೊಂಡ ಜ್ಯೋತಿಸ್ಸಮೂಹ. ಈ ಎರಡು ತಾರಾಸ್ತೋಮದ ನಡುವೆ ಚಂದ್ರಬಿಂಬವು ತೋರಿಕೊಳ್ಳುವುದು ಕೆಲಮಟ್ಟಿಗೆ ವಿರಳವಾದ ನೋಟವೇ ಹೌದು. ಇಂಥ ಖಗೋಲಶಾಸ್ತ್ರವೈಚಿತ್ರ್ಯವನ್ನು ಮಹರ್ಷಿಗಳು ಕಟಾಕ್ಷಿಸಿರುವುದಿಲ್ಲಿ ಪರಿಭಾವನೀಯ.

ಅಂಗದನು ಶೋಣಿತಾಕ್ಷನೆಂಬ ರಾಕ್ಷಸನನ್ನು ಕರವಾಲದಿಂದ ಕತ್ತರಿಸಿದ ಪರಿ ಹೇಗಿತ್ತೆಂದರೆ, ಅವನ ಕತ್ತಿಯ ಬೀಸಿನಿಂದ ವೈರಿಯ ಎದೆಯಲ್ಲಿ ಯಜ್ಞೋಪವೀತಾಕೃತಿಯ  ಸೀಳು ಮೂಡಿತಂತೆ!

**ಯಜ್ಞೋಪವೀತವಚ್ಚಿನಂ ಚಿಚ್ಛೇದ ಕಪಿಕುಂಜರಃ ।** (೬.೭೬.೧೦)

ಈ ಉಪಮೆಯ ಅಬಿನತೆ ಮತ್ತು ಅಭಿರಾಮತೆಗಳು ನಿಜವಾಗಿ ಅವಿಸ್ಮರಣೀಯ. ಇಲ್ಲಿಯ ಶಬ್ದಾಲಂಕಾರವೂ ಶ್ರಾವ್ಯ.

ಲಕ್ಷ್ಮಣನೊಡನೆ ಸೆಣಸುವಾಗ ಕವಚವನ್ನು ಕಳೆದುಕೊಂಡು ಮೈಯೆಲ್ಲ ನಟ್ಟ ಬಾಣಗಳ ಮೂಲಕ ಇಂದ್ರಜಿತ್ತು ಮರಗಳಿಂದ ಕಿಕ್ಕಿರಿದ ಮಲೆಯಂತೆ ತೋರಿದನೆಂದು ಆದಿಕವಿಗಳು ಅದೊಂದೆಡೆ ಕಲ್ಪಿಸುತ್ತಾರೆ:

**ವಿಧೂತವರ್ಮಾ ನಾರಾಚೈರ್ಬಭೂವ ಸ ಕೃತವ್ರಣಃ ।**
**ಇಂದ್ರಜಿತ್ಸಮರೇ ವೀರಃ ಪ್ರರೂಢ ಇವ ಸಾನುಮಾನ್ ॥** (೬.೮೯.೨೦)

ಇಲ್ಲಿ ತಾನಾಗಿ ಧ್ವನಿಸುವ ಇಂದ್ರಜಿತ್ತಿನ ಪರ್ವತೋಪಮಗಾತ್ರವೂ ಪರಿಭಾವನೀಯ.

ಇದೇ ಸಂದರ್ಭದಲ್ಲಿ ವೀರರಿಬ್ಬರೂ ಪರಸ್ಪರಶರಾಘಾತದಿಂದ ಗಾಯಗೊಂಡಿದ್ದ ಪರಿಯನ್ನು ಮಹರ್ಷಿಗಳು ಬಣ್ಣಿಸುತ್ತ ಅವರು ಎಲೆಯನ್ನುದುರಿಸಿಕೊಂಡು ಮೈಯೆಲ್ಲ ಹೂವೇ ಆಗಿ ಮಲೆತಬೂರುಗ ಮತ್ತು ಮುತ್ತುಗದ ಮರಗಳನ್ನು ಹೋಲುತ್ತಿದ್ದರೆನ್ನುತ್ತಾರೆ:

**ತಯೋಃ ಕೃತವ್ರಣೌ ದೇಹೌ ಶುಶುಭಾತೇ ಮಹಾತ್ಮನೋಃ ।** (೬.೮೯.೩೬)
**ಸಪುಷ್ಪಾವಿನ ನಿಷ್ಪತ್ರೌ ವನೇ ಶಾಲ್ಮಲಿಕಿಂಶುಕೌ ।** (೬.೮೯.೩೭)

ಈ ಉಪಮೆಯ ಸ್ವಾರಸ್ಯವಿರುವುದು ಆದಿಕವಿಗಳ ಪ್ರಕೃತಿಪರಿಶೀಲನ ಸೂಕ್ಷ್ಮತೆಯಲ್ಲಿ. ಬೂರುಗ ಮತ್ತು ಮುತ್ತುಗದ ಮರಗಳು ಶಿಶಿರಾಂತ್ಯದಲ್ಲಿಯೇ ಎಲೆಗಳನ್ನೆಲ್ಲ ಉದುರಿಸಿಕೊಂಡು ವಸಂತಾರಂಭದ ಹೊತ್ತಿಗೆ ಮೈಯೆಲ್ಲ ಕೆಂಪಗಿನ ಹೂಗಳಿಂದ ಕಂಗೊಳಿಸುತ್ತವೆ. ಬೂರುಗವು ಕೆನ್ನೀಲಿಯ ದೊಡ್ಡ ದೊಡ್ಡ ಹೂಗಳನ್ನು ತಳೆದರೆ ಮುತ್ತುಗವು ಕೆಂಗೇಸರಿಯ ಸುಮಗಳನ್ನು ತಳೆಯುತ್ತದೆ. ಇವೆರಡೂ ಒತ್ತಾದ ಹೂಗಳ ನಿಬಿಡತೆಯಿಂದ ಎಲ್ಲಿಯೂ ಎದ್ದುತೋರುವಂತಿರುತ್ತವೆ. ಇದನ್ನು ಕಂಡವರಿಗೆ ಪ್ರಕೃತೋಪಮೆಯ ಸ್ವಾರಸ್ಯ ಮತ್ತಷ್ಟು ಸ್ಫುರಿಸದಿರದು.

ಇಂದ್ರಜಿದ್ವಧೆಯ ಬಳಿಕ ಅವನ ಹಿಂಬಾಲಕರಾದ ಅಸಂಖ್ಯರಾಕ್ಷಸರು ನೋಡನೋಡುತ್ತಿದ್ದಂತೆಯೇ ಕಾಣೆಯಾದರು. ಇದನ್ನು ಅನುದಿನದ ಅನುಭವದ ಹಿನ್ನಲೆಯಲ್ಲಿ ಮಹರ್ಷಿಗಳು ಸೂರ್ಯನು ಮುಳುಗಿದ ಬಳಿಕ ಅವನ ಕಿರಣಗಳು ಕಣ್ಮರೆಯಾಗುವಂತಿತ್ತೆಂದು ಬಣ್ಣಿಸುತ್ತಾರೆ:

**ರಾಕ್ಷಸಾನಾಂ ಸಹಸ್ರೇಷು ನ ಕಶ್ಚಿತ್ಪ್ರತ್ಯದೃಶ್ಯತ ।**
**ಯಥಾಸ್ತಂ ಗತ ಆದಿತ್ಯೇ ನಾವತಿಷ್ಠಂತಿ ರಶ್ಮಯಃ ॥** (೬.೯೧.೮೫)

ಎಲ್ಲರ ಅನುಭವದಲ್ಲಿಯೂ ಇರುವ ಈ ಹೋಲಿಕೆಯ ಸ್ವಾರಸ್ಯವೆಲ್ಲ ಅಸುರಸೇನೆಯನ್ನು ಸೂರ್ಯರಶ್ಮಿಗೆ ಹೋಲಿಸಿರುವಲ್ಲಿ. ಸಾಮಾನ್ಯವಾಗಿ ಸೂರ್ಯಾಸ್ತದ ಬಳಿಕ ಬೆಳಕು ಇಲ್ಲವಾಯಿತೆಂದು ಹೇಳುವುದುಂಟು. ಇದು ತೀರ ಯಾತಯಾಮೋಪಮೆ. ಆದರೆ ಕಿರಣಗಳು ಕಾಣೆಯಾಗುವುದನ್ನು ಗಮನಿಸುವುದು ಸೂಕ್ಷ್ಮತೆಗೆ ಸಾಕ್ಷಿ. ಅಲ್ಲದೆ "ರಶ್ಮಿ"ಯೆಂಬ ಪದವೂ ಇಲ್ಲಿ ಗಮನಾರ್ಹ. ಇದಕ್ಕೆ ಕಿರಣ ಮತ್ತು ಕಡಿವಾಣಗಳೆಂಬ ಅರ್ಥವುಂಟು. ಸೂರ್ಯನು ಮುಳುಗಿದ ಬಳಿಕ ಅವನ ಕಿರಣಗಳೂ ಇಲ್ಲ, ಅವನ ಕುದುರೆಗಳಿಗೆ ಕಡಿವಾಣವೂ ಇಲ್ಲವೆಂಬ ಧ್ವನಿ ಮೂಡದಿರದು. ಆದುದರಿಂದ ಕತ್ತಲೆಯ ದಾಳಿಗೆ ಕಡಿವಾಣವಿಲ್ಲವೆಂಬ ಅನುರಣನಶೀಲಸ್ವಾರಸ್ಯವು ಸ್ಫುರಿಸಿ, ಇಲ್ಲಿ ಕತ್ತಲೆಂದರೆ ಅಸುರರ ಪಾಲಿಗೆ ಶೋಕವೇ ಆಯಿತೆಂಬ ಸೂಚನೆಯೂ ಸಿಗದಿರದು. ಹೀಗೆ ತುಂಬ ಸರಳವಾದ ಒಂದು ಹೋಲಿಕೆಯು ಅದೆಷ್ಟು ದೂರಗಾಮಿಯಾದ ಪರಿಣಾಮವನ್ನು ಬೀರುವುದೆಂಬುದಕ್ಕೆ ಇದೊಂದು

ಸಮರ್ಥೋದಾಹರಣೆ. ಅದುದರಿಂದಲೇ ಇಲ್ಲಿ "ರಶ್ಮಿ" ಶಬ್ದದ ಸ್ತ್ರೀಲಿಂಗವು ಉಪಮಾಶಾಸ್ತ್ರೀಯತೆಗೆ ಉದ್ವೇಜಕವಾಗಿಲ್ಲ.

ತುಮುಲಯುದ್ಧದಲ್ಲಿ ವಾನವೀರರೆಲ್ಲ ಗುಂಪುಗುಂಪುಗಳಾಗಿ ಧಾವಿಸಿ ಬಂದು ಒಬ್ಬೊಬ್ಬ ರಕ್ಕಸನಿಗೂ ನೂರು ನೂರು ಕಪಿಗಳಂತೆ ಅಟಕಾಯಿಸಿದಾಗ ಹಣ್ಣುತುಂಬಿದ ಮರಕ್ಕೆ ಹಕ್ಕಿಗಳೆರಗಿದಂತಾಯಿತೆಂದು ಮಹರ್ಷಿಗಳು ಕಲ್ಪಿಸುತ್ತಾರೆ:

**ಏಕೈಕಂ ರಾಕ್ಷಸಂ ಸಂಖ್ಯೇ ಶತಂ ವಾನರಪುಂಗವಾಃ ।**
**ಅಭ್ಯಧಾವಂತ ಫಲಿನಂ ವೃಕ್ಷಂ ಶಕುನಯೋ ಯಥಾ ॥** (೬.೮೪.೧೫)

ರಾಮನ ಅಮೋಘಶರಗಳು ರಾಕ್ಷಸರ ಮೈಗಳಲ್ಲಿ ಹೆದ್ದಾರಿಗಳನ್ನು ಮಾಡಿಕೊಳ್ಳುತ್ತಿದ್ದಾಗ ಅವರು ಬಾಣಗಳ ಏಟನ್ನಷ್ಟೇ ಅನುಭವಿಸಿ ಅರಿತರಲ್ಲದೆ ಆ ನಿಶಿತನಾರಾಚಗಳನ್ನು ಬಿಡುತ್ತಿರುವ ಧಾನುಷ್ಕನನ್ನು ಅರಿಯಲಿಲ್ಲ. ಇದು ಪಂಚೇಂದ್ರಿಯಗಳ ಮೂಲಕ ಪಂಚಭೂತಗಳನ್ನು ಅರಿಯುತ್ತಾ ಸ್ವಶರೀರದಲ್ಲಿಯೇ ಇರುವ ಜೀವರು ಶಾರೀರನಾದ ಪರಮಾತ್ಮನನ್ನರಿಯದಂತಾಗಿತ್ತೆಂದು ವಾಲ್ಮೀಕಿಮುನಿಗಳು ನೀಡುವ ವೇದಾಂತಮಯವಾದ ಹೋಲಿಕೆಯು ನಿಜಕ್ಕೂ ಅದ್ಭುತ. ಹೀಗೆ ಶಾಸ್ತ್ರೀಯಸಾದೃಶ್ಯಗಳನ್ನು ರಚಿಸುವಲ್ಲಿ ಪರವರ್ತಿಗಳಿಗೆಲ್ಲ ಆದಿಕವಿಗಳೇ ಪರಮಾಚಾರ್ಯರು:

**ಪ್ರಹರಂತಂ ಶರೀರೇಷು ನ ತೇ ಪಶ್ಯಂತಿ ರಾಘವಮ್ ।**
**ಇಂದ್ರಿಯಾರ್ಥೇಷು ತಿಷ್ಠಂತಂ ಭೂತಾತ್ಮಾನಮಿವ ಪ್ರಜಾಃ ॥** (೬.೯೪.೨೩)

ಅಗ್ನಿಯನ್ನು ಪ್ರವೇಶಿಸುತ್ತಿರುವ ಸೀತೆಯು ಮಂತ್ರಪೂತವಾದ ಪೂರ್ಣಾಹುತಿಯು ಆಧ್ವರಾನಲದಲ್ಲಿ ಹೋಗುವಂತಿತ್ತೆಂದು ವರ್ಣಿಸುವಲ್ಲಿ ಮಹರ್ಷಿಗಳು ಮೈಥಿಲಿಯ ಪವಿತ್ರಪಾತಿವ್ರತ್ಯವನ್ನು ಧ್ವನಿಸಿರುವುದು ಅಸಮಾನ. ಇಲ್ಲಿಯ ಅರ್ಥೋಪಮೆಯೂ ಅನನ್ಯ:

**ಪತಂತೀಂ ಸಂಸ್ಕೃತಾಂ ಮಂತ್ರೈರ್ವಸೋರ್ಧಾರಾಮಿವಾಧ್ವರೇ ।**
(೬.೧೧೯.೩೩)

ಉತ್ಪ್ರೇಕ್ಷೆಯು ಪ್ರಾಥಮಿಕಾಲಂಕಾರಗಳ ಪೈಕಿ ತುಂಬ ಪರಿಣಾಮಕಾರಿ. ಇದು ಉಪಮೆಯಷ್ಟು ಸರಳವೂ ಅಲ್ಲ, ಅತಿಶಯೋಕ್ತಿಯಷ್ಟೂ ಅಬ್ಬರದ್ದೂ ಅಲ್ಲ. ಸಂಭವನೀಯತೆಯೇ ಈ ಅಲಂಕಾರದ ಜೀವಾಳ. ಅತಿಶಯೋಕ್ತಿಯಾದರೋ ಅಧ್ಯವಸಾಯಮೂಲದ್ದಾದ ಕಾರಣ ಸಂಭವನೀಯತೆಯನ್ನೂ ಮೀರಿ ಕಲ್ಪಿತವನ್ನು ಕೂಡ ವಾಸ್ತವವೆಂಬಂತೆ ಪ್ರತಿಪಾದಿಸುತ್ತದೆ. ಆದರೆ ಉತ್ಪ್ರೇಕ್ಷೆಯು ಕೆಲಮಟ್ಟಿಗೆ ಸಾದೃಶ್ಯವನ್ನೇ ನಚ್ಚುವ ಕಾರಣ ಇದೊಂದು ಬಗೆಯಲ್ಲಿ ಉಪಮೆ ಮತ್ತು ಅತಿಶಯಗಳ ನಡುವಣ ಸುವರ್ಣಸೇತುವೆಯಾಗಿ ವ್ಯವಹರಿಸುತ್ತದೆ.
ವಾಲ್ಮೀಕಿಮುನಿಗಳಲ್ಲಿ ಉತ್ಪ್ರೇಕ್ಷೆಗಳಿಗೆ ಕೊರತೆಯಿಲ್ಲ. ಹೇಳಿ ಕೇಳಿ ಎತ್ತರದ ನೋಟವೇ "ಉತ್ಪ್ರೇಕ್ಷೆ" (ಉತ್+ಪ್ರೇಕ್ಷೆ)ಯಾದ ಕಾರಣ ಈ ದರ್ಶನವು ಅವರಲ್ಲಿ ಸಹಜವಾಗಿ ಮೈಗೂಡಿದೆ.

ಅಯೋಧ್ಯಾಕಾಂಡದಲ್ಲಿ ವಾಸ್ತವಜಗತ್ತಿನ ಏರಿಳಿತಗಳೇ ಪ್ರಧಾನವಾದ ಕಾರಣ ಇಲ್ಲಿ ಉತ್ಪ್ರೇಕ್ಷೆಗೆ ಹೆಚ್ಚಿನ ಎಡೆಯಿಲ್ಲ. ಆದರೂ ಎದ್ದುತೋರುವ ಒಂದೆರಡು ಮಾದರಿಗಳನ್ನು ಗಮನಿಸಲೇಬೇಕು.

ಪಟ್ಟಾಭಿಷೇಕಕ್ಕೆ ಸಜ್ಜಾಗುತ್ತಿರುವ ರಾಮನನ್ನು ತಂದೆ ದಶರಥನು ಕಾಣುವ ಪರಿ ಹೃದಯಂಗಮ :

**ತಂ ಪಶ್ಯಮಾನೋ ನೃಪತಿಸ್ತುತೋಷ ಪ್ರಿಯಮಾತ್ಮಜಮ್ ।**
**ಅಲಂಕಾರಮಿವಾತ್ಮಾನಮಾದರ್ಶತಲಸಂಸ್ಥಿತಮ್ ॥** (೨.೩.೩೮)

ಇಲ್ಲಿರುವುದು ತನ್ನ ಮುದ್ದಿನ ಮಗ ಶ್ರೀರಾಮನನ್ನು ಕಂಡ ದಶರಥನ ಆನಂದಚಿತ್ರಣ. ಅವನಿಗೆ ಮಗನನ್ನು ಕಂಡಾಗ ಸಾಲಂಕೃತನಾದ ತಾನೇ ಕನ್ನಡಿಯಲ್ಲಿ ಪ್ರತಿಬಿಂಬಿಸಿದಂತೆ ತೋರುತ್ತಿತ್ತು. "ಆತ್ಮಾ ವೈ ಪುತ್ರನಾಮಾಸಿ" ಎಂಬ ಸೂಕ್ತಿಗೆ ಇದಕ್ಕಿಂತ ಸಮುಚಿತನಿದರ್ಶನ ಬೇಕೆ?

ರಾಮನು ಕಾಡಿಗೆ ಹೊರಟಾಗ ತಮಸಾನದಿಯು ಆತನನ್ನು ಅಕ್ಕರೆಯಿಂದ ತಡೆಯುವಂತೆ ಅಡ್ಡವಾಯಿತೆಂದು ಆದಿಕವಿಯು ವರ್ಣಿಸಿದ ಪರಿ ಅನಾದೃಶ:

**ದದೃಶೇ ತಮಸಾ ತತ್ರ ವಾರಯಂತೀವ ರಾಘವರ್ಮ ।** (೨.೪೫.೩೨)

ಇದೇ ಭಾವವನ್ನು ಮುಂದೆ ಕಾಳಿದಾಸನು ತನ್ನ ರಘುವಂಶದಲ್ಲಿ ಬಳಸಿಕೊಳ್ಳುತ್ತಾನೆ. ಸೀತೆಯನ್ನು ಪರಿತ್ಯಜಿಸಲು ಲಕ್ಷ್ಮಣನು ರಥದಲ್ಲಿ ಅವಳನ್ನು ಕೊಂಡೊಯ್ಯುತ್ತಿದ್ದಾಗ ಹಾದಿಯಲ್ಲೆದುರಾದ ಗಂಗೆಯು ಈ ದುಷ್ಕಾರ್ಯವು ಸಲ್ಲದೆಂದು ಅಲೆಗೈಗಳಿಂದ ತಡೆಯುವಂತಿತ್ತೆಂದು ಕವಿಯು ಮಾಡಿದ ಉತ್ಪ್ರೇಕ್ಷೆಯು ವಾಲ್ಮೀಕಿಮುನಿಗಳ ಪ್ರಸಾದವೇ ಆಗಿದೆ.

ಅಣ್ಣನನ್ನು ಅರಸಿ ಬರುತ್ತಿದ್ದ ಭರತನನ್ನು ಶಂಕಿಸಿದ ಲಕ್ಷ್ಮಣನಿಗೆ ರಾಮನು ತಿಳಿಯಹೇಳಿದಾಗ ಸೌಮಿತ್ರಿಯು ತನ್ನ ವರ್ತನೆಗೆ ತಾನೇ ಲಜ್ಜಿಸಿ ತನ್ನೊಳಗೆ ಹುದುಗಿಹೋದಂತಾದಳಂತೆ!

**ಲಕ್ಷ್ಮಣಃ ಪ್ರವಿವೇಶೇವ ಸ್ವಾನಿ ಗಾತ್ರಾಣಿ ಲಜ್ಜಯಾ ।** (೨.೯೭.೧೯)

ಇದಕ್ಕಿಂತಲೂ ಚೆನ್ನಾಗಿ ಪಶ್ಚಾತ್ತಾಪವನ್ನು ಚಿತ್ರಿಸಲು ಸಾಧ್ಯವಿಲ್ಲ. ಹೀಗೆ ಮಹರ್ಷಿಗಳ ವಾಕ್ಕು ಸರ್ವಭಾವಭಣಿತಿಸಮರ್ಥ.

ಅರಣ್ಯಕಾಂಡದಲ್ಲಿ ಕೂಡ ಉತ್ಪ್ರೇಕ್ಷೆಗಳಿಗೆ ಬರವಿಲ್ಲ. ಅಲ್ಲಿಯ ಎರಡು ಪರಿಣಾಮರಮಣೀಯೋತ್ಪ್ರೇಕ್ಷೆಗಳು ಹೀಗಿವೆ:

**ಅವಶ್ಯಾಯತಮೋನದ್ಧಾ ನೀಹಾರತಮಸಾವೃತಾಃ ।**
**ಪ್ರಸುಪ್ತಾ ಇವ ಲಕ್ಷ್ಯಂತೇ ವಿಪುಷ್ಪಾ ವನರಾಜಯಃ ॥** (೩.೧೬.೨೩)

ಹೇಮಂತಸಮಯದಲ್ಲಿ ಸಮಸ್ತಲೋಕವೂ ಹಿಮವೆಂಬ ತಮಸ್ಸಿನಲ್ಲಿ ಮುಳುಗಿದ್ದಾಗ ಗಿಡ–ಮರಗಳಿಗೆ ಹೂಗಳಾದರೂ ಹೇಗೆ? ಹೀಗೆ ಚಳಿಗಾಲವೆಂಬ ಇರುಳಿನಲ್ಲಿ ವನವೆಲ್ಲ ಹೂಗಣ್ಣುಗಳನ್ನು ಮುಚ್ಚಿ ಮಲಗಿರುವಂತೆ ತೋರುತ್ತದೆ. ಆದಿಕವಿಗಳು ಅದ್ವಿತೀಯಕವಿಗಳೂ ಹೌದೆಂದು ಸಾಬೀತುಮಾಡಲು ಈ ಒಂದೆ ಉತ್ಪ್ರೇಕ್ಷೆ ಸಾಕು.

**ಶರೈರಾವಾರಿತಸ್ತಸ್ಯ ಸಂಯುಗೇ ಪತಗೇಶ್ವರಃ ।**
**ಕುಲಾಯಮುಪಸಂಪ್ರಾಪ್ತಃ ಪಕ್ಷೀವ ಪ್ರಬಭೌ ತದಾ ॥** (೩.೫೧.೧೩)

ಸೀತೆಯ ರಕ್ಷಣೆಗಾಗಿ ಸೆಣೆಸಿದ ಜಟಾಯುವು ರಾವಣನ ಬಾಣಪಂಜರದಲ್ಲಿ ಸಿಲುಕಿದಾಗ ಗೂಡಿನಲ್ಲಿ ಸೀಮಿತವಾದ ಬಡಹಕ್ಕಿಯಂತೆ ಕಂಡನೆಂದು ಮಹರ್ಷಿಗಳು ಉತ್ಪ್ರೇಕ್ಷಿಸುತ್ತಾರೆ. ವಿಶೇಷತಃ ನಿಶಿತಶರಗಳೆಂಬ ಹುಲ್ಲುಕಡ್ಡಿಗಳ ಮೂಲಕ ಅಸ್ತವ್ಯಸ್ತವಾಗಿ ನಿರ್ಮಿತವಾದ ಗೂಡನ್ನು ಕಲ್ಪಿಸಿಕೊಂಡಾಗ ಈ ಚಿತ್ರಣದ ಸಾರ್ಥಕ್ಯ ಒಡಮೂಡದಿರದು. ಜೊತೆಗೆ ರಾವಣನ ಬಾಣಗಳು ಜಟಾಯುವಿನಂಥ ವಿಹಗೇಂದ್ರನಿಗೆ ಗೂಡಿನ ಹುಲ್ಲುಕಡ್ಡಿಗಳಷ್ಟೇ ನಿರುಪದ್ರವಿಗಳೆಂಬ ಧ್ವನಿಯೂ ಇಲ್ಲಿದೆ.

ಕಿಷ್ಕಿಂಧಾಕಾಂಡವನ್ನಂತೂ ಉತ್ಪ್ರೇಕ್ಷಾಲಂಕಾರಗಳ ತವನಿಧಿಯೆನ್ನಬೇಕು. ಇಲ್ಲಿ ಹೆಜ್ಜೆ ಹೆಜ್ಜೆಗೆ ಸುಂದರವಾದ ಉತ್ಪ್ರೇಕ್ಷೆಗಳು ತಾಂಡವಿಸುತ್ತವೆ. ಉತ್ಪ್ರೇಕ್ಷಾಲಂಕಾರವು ವರ್ಣನಾವ್ಯಾಪಾರದಲ್ಲಂತೂ ತನ್ನ ವಿಶ್ವರೂಪವನ್ನು ತೋರುವುದೆನ್ನಬೇಕು. ಅಂಥ ಕೆಲವು ಸಂದರ್ಭಗಳನ್ನು ಗಮನಿಸೋಣ. ಈ ಕಾಂಡದ ಮೊದಲಿಗೇ ಬರುವ ವಸಂತವರ್ಣನೆಯು ಶ್ರೀರಾಮನ ವಿಪ್ರಲಂಭಶೃಂಗಾರಕ್ಕೆ ಸಮರ್ಥವಾದ ಉದ್ದೀಪನವಿಭಾವವಾಗಿದೆ. ಅಲ್ಲಿಯ ಕೆಲವು ಸೊಲ್ಲುಗಳು ಹೀಗಿವೆ:

**ಮತ್ತಕೋಕಿಲಸಂನಾದೈರ್ನರ್ತಯನ್ನಿವ ಪಾದಪಾನ್ ।**
**ಶೈಲಕಂದರನಿಷ್ಕ್ರಾಂತಃ ಪ್ರಗೀತ ಇವ ಚಾನಿಲಃ ॥** (೪.೧.೧೫)

**ಅಮೀ ಸಂಸಕ್ತಶಾಖಾಗ್ರಾ ಗ್ರಥಿತಾ ಇವ ಪಾದಪಾಃ ।** (೪.೧.೧೬)
**ಸ್ತಬಕೈಃ ಪವನೋತ್ಕ್ಷಿಪ್ತೈಸ್ತರ್ಜಯನ್ನಿವ ಮಾಂ ಸ್ಥಿತಃ ।** (೪.೧.೫೯)

**ಪಾದಪಾತ್ಪಾದಪಂ ಗಚ್ಛನ್ ಶೈಲಾಚ್ಛೈಲಂ ವನಾದ್ವನಮ್ ।**
**ವಾತಿ ನೈಕರಸಾಸ್ವಾದಸಂಮೋದಿತ ಇವಾನಿಲಃ ॥** (೪.೧.೮೬)
**ಪುಷ್ಪಮಾಸೇ ಹಿ ತರವಃ ಸಂಘರ್ಷಾದಿವ ಪುಷ್ಪಿತಾಃ ।** (೪.೧.೯೨)

ಆ ಮಧುಮಾಸದ ಮಾರುತವು ಕೋಗಿಲೆಗಳ ಹಾಡಿಗೆ ಮರ–ಗಿಡಗಳನ್ನು ಕುಣಿಸುವಂತಿತ್ತು. ಗಿರಿ–ಕಂದರಗಳಲ್ಲಿ ಸುತ್ತಿ ಸುಳಿದು ಬರುವಾಗ ತಾನೇ ಹಾಡುವಂತಿತ್ತು. ಈ ಕುಸುಮಸಮಯದಲ್ಲಿ ಕೊನರಿದ ತರು–ಲತೆಗಳು ತಮ್ಮ ಕೊಂಬೆ–ರಂಬೆಗಳನ್ನು ಅದೆಷ್ಟು ಚೆನ್ನಾಗಿ ಹೆಣೆದುಕೊಂಡಿದ್ದವೆಂದರೆ ಇಡಿಯ ವನರಾಜಿಯೇ ಒತ್ತಾಗಿ ಪೋಣಿಸಿದಂತಿತ್ತು. ಇಂಥ ವಸಂತವೈಭವದ ವಿಪಿನಸ್ಥಲಿಯು ತನ್ನ ಕೊಂಬೆ–ರಂಬೆಗಳ ಬೆರಳುಗಳನ್ನೆತ್ತಿ ಗಾಳಿಯ ಬೀಸಿನ ಮೂಲಕ ರಾಮನನ್ನೇ

ಗದರಿಸುವಂತಿತ್ತು. ಮರದಿಂದ ಮರಕ್ಕೆ, ಬೆಟ್ಟದಿಂದ ಬೆಟ್ಟಕ್ಕೆ, ಕಾಡಿನಿಂದ ಕಾಡಿಗೆ ಸುಳಿದಾಡುತ್ತಿದ್ದ ತಂಗಾಳಿಯು ಅನೇಕ ರಸಗಳನ್ನು ಆಸ್ವಾದಿಸಿ ನಲಿಯುವ ರಸಿಕನಂತಿತ್ತು. ಈ ಸುಗ್ಗಿಯ ಸಂದರ್ಭದಲ್ಲಿ ಬನದ ತರು-ಲತೆಗಳೆಲ್ಲ ಪರಸ್ಪರಸ್ಪರ್ಧೆಯಿಂದ ಮಲರಾಂತು ಮೆರೆವಂತೆ ತೋರುತ್ತಿತ್ತು.

ಇದಕ್ಕಿಂತಲೂ ಉಜ್ವಲವಾಗಿ, ನೈಜವಾಗಿ ವಸಂತದ ಪ್ರತೀತಿಯನ್ನು ಯಾವ ಕವಿ ತಾನೆ ಕಟ್ಟಿಕೊಟ್ಟಾನು?

ಮಳೆಗಾಲದ ಬಣ್ಣನೆಯಲ್ಲಂತೂ ಉತ್ಪ್ರೇಕ್ಷೆಗಳು ಸಾಲುಗಟ್ಟಿವೆ. ವರ್ಷಾವಿಜೃಂಭಣೆಗೆ ಉತ್ಪ್ರೇಕ್ಷೆಯಂಥ ಪ್ರಖರಾಲಂಕಾರವು ಸಾರ್ಥಕವಿಭೂಷಣ. ಇಲ್ಲಿಯ ಕೆಲವು ಸೊಲ್ಲುಗಳು ಹೀಗಿವೆ:

**ಸ್ನಿಗ್ಧೈರಭ್ರಪಟಚ್ಛೇದೈರ್ಬದ್ಧವ್ರಣಮಿವಾಂಬರಮ್** । (೪.೨೮.೫)

ಸಂಧ್ಯಾಕಾಲದಲ್ಲಿ ಆಗಸವನ್ನು ಕವಿದ ಮಳೆಮುಗಿಲುಗಳು ಬಾನಿಗಾದ ಗಾಯಗಳಿಗೆ ಕಟ್ಟಿದ ಪಟ್ಟಿಗಳಂತೆ ತೋರುತ್ತಿದ್ದವಂತೆ! ಈ ಉತ್ಪ್ರೇಕ್ಷೆಯ ಹೊಸತನ ಇಂದಿಗೂ ಹಸುರಾಗಿದೆ. ರತ್ನಾಕರ, ಶಿವಸ್ವಾಮಿ ಮುಂತಾದ ಮುಂದಿನ ವಿದ್ವತ್ಕವಿಗಳೆಲ್ಲ ಈ ಕಲ್ಪನೆಯನ್ನು ತಮ್ಮ ಕೃತಿಗಳಲ್ಲಿ ಧಾರಾಳವಾಗಿ ಬಳಸಿಕೊಂಡಿದ್ದಾರೆ.

**ಮಂದಮಾರುತನಿಶ್ವಾಸಂ ಸಂಧ್ಯಾಚಂದನರಂಜಿತಮ್** ।
**ಆಪಾಂಡುಜಲದಂ ಭಾತಿ ಕಾಮಾತುರಮಿವಾಂಬರಮ್** ॥ (೪.೨೮.೬)

ಆಗಸವು ಮಂದಮಾರುತವೆಂಬ ನೆಮ್ಮದಿಯ ನಿಟ್ಟುಸಿರಿನಿಂದ, ಸಂಜೆಗೆಂಪಿನ ರಕ್ತಚಂದನಲೇಪನದಿಂದ, ಬೆಳ್ಮುಗಿಲಿನ ಶುಭ್ರವಸ್ತ್ರದಿಂದ ಕಂಗೊಳಿಸುತ್ತಾ ಕಾಮಾತುರನಂತೆ ಭಾಸವಾಗಿದೆಯೆಂಬ ಈ ಉತ್ಪ್ರೇಕ್ಷೆಯು ಮೂರು ಪಾದಗಳಲ್ಲಿ ರೂಪಕದ ಬೆಂಬಲವನ್ನು ಪಡೆದು, ಮೃದುಮಧುರವಾದ ದಂತ್ಯಾಕ್ಷರಗಳ ಹಾಗೂ ಅನುನಾಸಿಕಗಳ ಅಂದವನ್ನೂ ಗಳಿಸಿ ಮತ್ತಷ್ಟು ಸೊಗಸಾಗಿದೆ. ಇಂಥ ಚಿತ್ರಗಳನ್ನು ಕೊಡುವಲ್ಲಿ ಮಹರ್ಷಿಗಳ ಲೇಖನಿ ಗಳಿಸಿದ ಸಿದ್ಧಿ ಅನನ್ಯಾದೃಶ.

**ಮೇಘಕೃಷ್ಣಾಜಿನಧರಾ ಧಾರಾಯಜ್ಞೋಪವೀತಿನಃ** ।
**ಮಾರುತಾಪೂರಿತಗುಹಾಃ ಪ್ರಾಧೀತಾ ಇವ ಪರ್ವತಾಃ** ॥ (೪.೨೮.೧೦)

ಕಾರ್ಮುಗಿಲೆಂಬ ಕೃಷ್ಣಾಜಿನವನ್ನು ಹೊದ್ದು, ಬೆಳ್ಳಗೆ ಭೋರ್ಗರೆದು ಸುರಿಯುವ ಅಬ್ಬಿಗಳೆಂಬ ಯಜ್ಞೋಪವೀತಗಳನ್ನು ಧರಿಸಿ, ಪರ್ವತವಟುಗಳು ತಮ್ಮ ಗುಹಾವದನಗಳಲ್ಲಿ ಸುಳಿದಾಡುವ ಕಾರ್ಗಾಳಿಯ ಮೂಲಕ ವೇದಾಧ್ಯಯನವನ್ನು ಮಾಡುವಂತಿದೆ! ಈ ಉತ್ಪ್ರೇಕ್ಷೆಯಂತೂ ಸಂಸ್ಕೃತಸಾಹಿತ್ಯದ ಮಾತ್ರವಲ್ಲ, ಭಾರತೀಯಸಾಹಿತ್ಯದ ಸೀಮೆಯಲ್ಲಿಯೇ ನಿರುಪಮವಾದ ಆರ್ಷೇಯಚಿತ್ರಣ. ಈ ಶ್ಲೋಕದ ಪೂರ್ವಾರ್ಧವು ರೂಪಕಾಲಂಕಾರದಿಂದ ಕೂಡಿದ್ದರೂ ತಾತ್ಪರ್ಯದಿಂದ ಉತ್ಪ್ರೇಕ್ಷೆಯನ್ನೇ ಪ್ರಧಾನವಾಗಿ ಪ್ರತಿನಿಧಿಸುವುದು ಶಾಸ್ತ್ರಜ್ಞರಿಗೆ ಸುವೇದ್ಯ.

**ಕಶಾಭಿರಿವ ಹೈಮೀಭಿರ್ವಿದ್ಯುದ್ಭಿರಭಿತಾಡಿತಮ್** ।
**ಅಂತಸ್ತನಿತಘೋಷಂ ಸವೇದನಮಿವಾಂಬರಮ್** ॥ (೪.೨೮.೧೧)

ತನಿಮಿಂಚುಗಳೆಂಬ ಹೊನ್ನಚಾವಟಿಗಳಿಂದ ಬಡಿಯಲ್ಪಟ್ಟ ಕಾರ್ಮುಗಿಲು ಗುಡುಗಿದಾಗಲೆಲ್ಲ ಅದು ನೋವಿಗೆ ಚೀರಿಡುವಂತಿತ್ತು! ಈ ಉಕ್ತಿವೈಚಿತ್ರ್ಯವು ಪ್ರಕೃತಿಯನ್ನೇ ಜೀವಂತವಾಗಿ ಪರಿಭಾವಿಸದೆ ಸಿದ್ಧಿಸದ ಸೌಂದರ್ಯ. ಇಂಥ ಚೆಲುವಿಗೆ ಕಾಳಿದಾಸನಂಥವನೂ ಮರುಳಾಗಿರುವುದು ಆತನ ಮೊದಲ ಕಾವ್ಯದಲ್ಲಿಯೇ ದೃಷ್ಟಚರ.

**ಮೇಘಾಭಿರಾಮಾ ಪರಿಸಂಪತಂತೀ**
**ಸಂಮೋದಿತಾ ಭಾತಿ ಬಲಾಕಪಂಕ್ತಿಃ** ।
**ವಾತಾವಧೂತಾ ವರಪೌಂಡರೀಕೀ**
**ಲಂಬೇವ ಮಾಲಾ ರಚಿತಾಂಬರಸ್ಯ** ॥ (೪.೨೮.೨೩)

ಮಳೆಮುಗಿಲಿನೆಡೆ ಮುದದಿಂದ ಹಾರುತ್ತಿರುವ ಕೊಕ್ಕರೆಸಾಲು ಬಾನ್ದೇವಿಯು ತಳೆದ, ಮಳೆಗಾಳಿಗೆ ತೊನೆವ ಬೆಳ್ದಾವರೆಗಳ ಮಾಲೆಯೋ ಎಂಬಂತಿತ್ತಂತೆ! ಉಪಮೆಯೋ ಎಂಬಷ್ಟು ನೈಜವಾಗಿರುವ ಈ ಉತ್ಪ್ರೇಕ್ಷೆಯ ಮಂದಶ್ರುತಿಗಾನವು ನಿಜಕ್ಕೂ ಅಭಿರಾಮ.

**ಬಾಲೇಂದ್ರಗೋಪಾಂತರಚಿತ್ರಿತೇನ**
**ವಿಭಾತಿ ಭೂಮಿರ್ನವಶಾದ್ವಲೇನ ।**
**ಗಾತ್ರಾನುವೃತ್ತೇನ ಶುಕಪ್ರಭೇಣ**
**ನಾರೀವ ಲಾಕ್ಷೋಕ್ಷಿತಕಂಬಲೇನ ॥** (೪.೨೮.೨೪)

ಕೆಂಬಣ್ಣದ ಇಂದ್ರಗೋಪಕ್ರಿಮಿಗಳ ಚಿತ್ತಾರದಿಂದ ಚೆಲುವಾದ ಹುಲ್ಲಿನ ಹಾಸು ಅರಗಿನ ಕಸೂತಿಯಿಂದ ಸೊಗಯಿಸಿದ ಹಸುರುಪತ್ತಲವನ್ನು ತಿರೆತಾಯಿಗೆ ತೊಡಿಸಿದಂತಿತ್ತು! ಈ ಉತ್ಪ್ರೇಕ್ಷೆಯ ಅಂದ ಅಸಮಾನ. ಭೂದೇವಿಗೆ ತಾಯ್ತನವು ತುಂಬಿ ಬರುವುದು ಮಳೆಗಾಲದಲ್ಲಿಯೇ. ನಮ್ಮಲ್ಲಿ ಗರ್ಭವತಿಗೆ ತುಂಬುಹಸುರಿನ ಸೀರೆಯುಡಿಸುವುದು ಚಿರಸಿದ್ಧಸಂಪ್ರದಾಯ. ಇಂಥ ಜಾನಪದಜೀವನಸೌಂದರ್ಯವನ್ನು ನಮ್ಮ ನಮ್ಮ ಸಂಸ್ಕೃತಿಯ ಸಂಸ್ಕಾರಾನುಸಾರ ಆದಿಕವಿಯಲ್ಲಿ ಅನುಭವಿಸಬಹುದು.

**ಅಂಗಾರಚೂರ್ಣೋತ್ಕರಸಂನಿಕಾಶೈಃ**
**ಫಲೈಃ ಸುಪರ್ಯಾಪ್ತರಸೈಃ ಸಮೃದ್ಧೈಃ ।**
**ಜಂಬೂದ್ರುಮಾಣಾಂ ಪ್ರವಿಭಾಂತಿ ಶಾಖಾ**
**ನಿಲೀಯಮಾನಾ ಇವ ಷಟ್ಪದೌಘೈಃ ॥** (೪.೨೮.೩೧)

ಇದ್ದಿಲ ತುಂಡುಗಳನ್ನು ಅಂಟಿಸಿದಂತೆ ನೇರಿಳೆಮರಗಳಲ್ಲಿ ತನಿವಣ್ಣುಗಳು ತೋರುತ್ತಿವೆ. ಅವು ಆ ಮರಗಳಿಗೆ ಮುತ್ತಿಕೊಂಡ ದುಂಬಿಗಳೋ ಎಂಬಂತೆ ಭಾಸವಾಗುತ್ತಿವೆ! ಇದಂತೂ ಅತ್ಯದ್ಭುತಕಲ್ಪನೆ. ಈ ಪದ್ಯದ ಪೂರ್ವಾರ್ಧದಲ್ಲಿ ಉಪಮೆಯಿದ್ದರೂ ಪ್ರಧಾನವ್ಯಪದೇಶವು ಉತ್ಪ್ರೇಕ್ಷೆಯಲ್ಲಿಯೇ. ಇಂಥ ಕಲ್ಪನೆಗಳು ಮುಂದೆ ಕಾವ್ಯ-ನಾಟಕಗಳಲ್ಲಿ ಕೋಡಿವರಿದದ್ದನ್ನು ಅಸಂಖ್ಯಸುಭಾಷಿತಕೋಶಗಳ ಮೂಲಕ ಮನಗಾಣಬಹುದು.

**ಕ್ವಚಿತ್ಪ್ರಗೀತಾ ಇವಾ ಷಟ್ಪದೌಘೈಃ**
**ಕ್ವಚಿತ್ಪ್ರನೃತ್ತಾ ಇವ ನೀಲಕಂಠೈಃ ।**
**ಕ್ವಚಿತ್ಪ್ರಮತ್ತಾ ಇವ ವಾರಣೇಂದ್ರೈ-**
**ರ್ವಿಭಾಂತ್ಯನೇಕಾಶ್ರಯಿಣೋ ವನಾಂತಾಃ ॥** (೪.೨೮.೩೩)

ಮಳೆಗಾಲದ ವಿಪಿನಪರಿಸರವು ಅಲ್ಲಲ್ಲಿಯ ಭ್ರಮರಝುಂಕಾರದಿಂದ ಹಾಡುತ್ತಿದ್ದಂತೆ, ಅಲ್ಲಲ್ಲಿಯ ಮತ್ತಮಯೂರಗಳ ಚಲನೆಯಿಂದ ನೃತ್ತಕ್ಕೆ ಸಜ್ಜಾದಂತೆ, ಅಲ್ಲಲ್ಲಿಯ ಗಂಧಸಿಂಧುರಗಳ ಉನ್ಮತ್ತವರ್ತನೆಯಿಂದ ಮದಿಸಿದಂತೆ ಪರಿಪರಿಯಾಗಿ ತೋರುತ್ತಿತ್ತು! ಇಲ್ಲಿ ಇಡಿಯ ಕಾಡೇ ಮಳೆಯೆಂಬ ಮದ್ಯವನ್ನು ಕುಡಿದು ಅಮಲೇರಿದಂತೆ ಕಲ್ಪಿಸಿದ ಚಿತ್ರಣವು ಹೃದಯಂಗಮ.

**ಕದಂಬಸರ್ಜಾರ್ಜುನಕಂದಲಾಢ್ಯಾ**
**ವನಾಂತಭೂಮಿರ್ನವವಾರಿಪೂರ್ಣಾ ।**
**ಮಯೂರಮತ್ತಾಭಿರುತಪ್ರನೃತ್ತೈ-**
**ರಾಪಾನಭೂಮಿಪ್ರತಿಮಾ ವಿಭಾತಿ ॥** (೪.೨೮.೩೪)

ಕದಂಬ, ಸರ್ಜಾ, ಬಿಳಿಮತ್ತಿ, ನೀರುಬಾಳೆ ಮುಂತಾದ (ಮದ್ಯವನ್ನು ತಯಾರಿಸಲು ಬಳಕೆಯಾಗುವ) ಮರ-ಗಿಡಗಳಿಂದ ಕೂಡಿ, ಮಾದಕವಾಗಿ ಕೇಕೆ ಹಾಕಿ ಕುಣಿಯುವ ನವಿಲುಗಳಿಂದ ಒಡಗೂಡಿ, ಇಡಿಯ ವನಭೂಮಿಯೇ ಹೆಂಡದಂಗಡಿಯಾಗಿ ತೋರುತ್ತಿತ್ತು! ಇಂಥ ಅವೆಷ್ಟೋ ಚಿತ್ರಗಳ ಮೂಲಕ ಆದಿಕವಿಗಳು ತಮ್ಮ ಮಡಿವಂತಿಕೆಯ ಸೊಲ್ಲೂ ಇಲ್ಲದ ಕಲ್ಪಕತೆಯನ್ನು ಮೆರೆದಿದ್ದಾರೆ: ನಿಜವಾದ ಕವಿಗೆ ಬೇಕಾದ ಹೃದ್ವೈಶಾಲ್ಯವನ್ನು ನಿರೂಪಿಸಿದ್ದಾರೆ.

**ಷಡ್ಪಾದತಂತ್ರೀಮಧುರಾಭಿಧಾನಂ**
**ಪ್ಲವಂಗಮೋದೀರಿತಕಂಠತಾಲಮ್ ।**
**ಆವಿಷ್ಕೃತಂ ಮೇಘಮೃದಂಗನಾದೈ-**
**ರ್ವನೇಷು ಸಂಗೀತಮಿವ ಪ್ರವೃತ್ತಮ್ ॥** (೪.೨೮.೩೬)

ದುಂಬಿಗಳ ಝುಂಕಾರವೆಂಬ ತಂತ್ರೀವಾದ್ಯಗಳಿಂದ, ಕಪ್ಪೆಗಳ ವಟಗುಟ್ಟುವಿಕೆಯೆಂಬ ಶುಷ್ಕಾಕ್ಷರಪಾಠದಿಂದ (ಇದನ್ನೇ ಸಮಸಾಮಯಿಕಸಂಗೀತದಲ್ಲಿ "ಜತಿ" ಅಥವಾ "ಸೊಲ್ಲುಕಟ್ಟು" ಎನ್ನುತ್ತಾರೆ), ಮೊಳಗುವ ಮುಗಿಲುಗಳ ಮೃದಂಗನಾದದಿಂದ ಕಾಡುಗಳಲ್ಲಿ ವಾದ್ಯಗೋಷ್ಠಿಯ ಸಂಗೀತಕಾರ್ಯಕ್ರಮವೇ ಪ್ರವರ್ತಿಸಿದಂತಿತ್ತು! ಇದು ಆದಿಕವಿಗಳ ಕಲಾಭಿಜ್ಞತೆಗೂ ಸಾಕ್ಷಿ.

ಶರತ್ಕಾಲದ ವರ್ಣನೆಯಲ್ಲಿಯೂ ವಾಲ್ಮೀಕಿಮುನಿಗಳ ಉತ್ಪ್ರೇಕ್ಷಾದೀಕ್ಷೆಯು ಮುಂದುವರೆದಿದೆ. ಅಲ್ಲಿಯ ಒಂದು ಶ್ಲೋಕ ಉಲ್ಲೇಖನೀಯ:

**ಅಭಿವೃಷ್ಟಾ ಮಹಾಮೇಘೈರ್ನಿರ್ಮಲಾಶ್ಚಿತ್ರಸಾನವಃ ।**
**ಅನುಲಿಪ್ತಾ ಇವಾಭಾಂತಿ ಗಿರಯಶ್ಚಂದ್ರರಶ್ಮಿಭಿಃ ॥** (೪.೩೦.೨೭)

ಮಳೆಗಾಲದಲ್ಲಿ ಮಹಾಮಜ್ಜನವನ್ನು ಮಾಡಿದ ಪರ್ವತಪ್ರವರಗಳು ಇದೀಗ ಶರತ್ಕಾಲದ ನಿರ್ಮಲೇಂದುಕಾಂತಿಯಲ್ಲಿ ಚಂದನಲೇಪನವನ್ನು ಮಾಡಿಕೊಂಡಂತಿದೆಯಂತೆ! ಬೆಳ್ದಿಂಗಳಿನಲ್ಲಿ ಬೆಟ್ಟ-ಬೆಟ್ಟಗಳೂ ಮಿಂದೆದ್ದ ಭವ್ಯದೃಶ್ಯವನ್ನು ಕಾಣದ ಮನಸ್ಸು ಇಂಥ ವರ್ಣನೆಯನ್ನು ಮಾಡಲಾರದು.

ವಾಲ್ಮೀಕಿಮುನಿಗಳ ಉತ್ಪ್ರೇಕ್ಷೆಯನ್ನು ಕಥಾನಿರೂಪಣೆಯ ಕಾಲದಲ್ಲಿಯೂ ಬಳಸಿಕೊಳ್ಳುತ್ತಾರೆ. ಅಷ್ಟೇಕೆ, ಸಾಮಾನ್ಯವಾದ ಸಂವಾದಗಳಲ್ಲಿಯೂ ಇದು ತಲೆದೋರುತ್ತದೆ. ತನ್ನ ಭುವನಕೋಶಪ್ರಜ್ಞೆಗೆ ಬೆರಗಾದ ರಾಮನನ್ನು ಕುರಿತು ಸುಗ್ರೀವನು ಹೇಳುತ್ತಾನೆ–ವಾಲಿಯು ಬೆನ್ನಟ್ಟಿ ಬರುವಾಗ ತಾನು ಜಗವನ್ನೆಲ್ಲ ಸುತ್ತಿದ ಕಾರಣ ಇಡಿಯ ಭೂಮಿಯೇ ಕೈಗನ್ನಡಿಯಂತೆ ಕಾಣುತ್ತಿತ್ತು. ಇಡಿಯ ಭೂಗೋಳವೇ ಅಲಾತಚಕ್ರದಂತೆ (ಕೊಳ್ಳಿಯೊಂದನ್ನು ಗಿರಗಿರನೆ ತಿರುಗಿಸಿದಾಗ ಮೂಡುವ ಬೆಳಕಿನ ವರ್ತುಲದಂತೆ) ತೋರುತ್ತಿತ್ತು, ಸಮುದ್ರವು ಹಸುವಿನ ಗೊರಸಿನ ಗುರುತಿನಲ್ಲಿ ಹಿಡಿಸುವ ನೀರಿನಷ್ಟಾಗಿತ್ತು:

**ಆದರ್ಶತಲಸಂಕಾಶಾ ತತೋ ವೈ ಪೃಥಿವೀ ಮಯಾ ।**
**ಅಲಾತಚಕ್ರಪ್ರತಿಮಾ ದೃಷ್ಟಾ ಗೋಷ್ಪದವತ್ತದಾ ॥** (೪.೪೬.೧೩)

ವಾನರಯೂಥವು ಕಂಡ ಕಡಲು ಸಮಸ್ತ ಜಗತ್ತಿನ ಪ್ರತಿಬಿಂಬದಂತೆ ತೋರಿತಂತೆ!

**ಕೃತ್ಸ್ನಂ ಲೋಕಸ್ಯ ಮಹತಃ ಪ್ರತಿಬಿಂಬಮಿವ ಸ್ಥಿತಮ್ ।** (೪.೬೪.೪೩)

ಹನೂಮಂತನು ಹಾರುವಾಗ ಆತನ ಅಬ್ಬರಕ್ಕಂಜಿದ ಹಾವುಗಳು ಮಹೇಂದ್ರಪರ್ವತದ ಬಿಲಗಳಿಂದ ಬುಸುಗುಟ್ಟುತ್ತ ಅರ್ಧಾರ್ಧವಾಗಿ ಹೊರಬಿದ್ದಾಗ ಇಡಿಯ ಬೆಟ್ಟವೇ ಪಟಪಟಿಸುವ ಪತಾಕೆಗಳಿಂದ ಸಿಂಗಾರಗೊಂಡಂತೆ ತೋರಿತಂತೆ!

**ನಿಶ್ವಸದ್ಭಿಸ್ತದಾತ್ಯೈಸ್ತು ಭುಜಂಗೈರರ್ಧನಿಸ್ಸೃತೈಃ ।** (೪.೪೬.೪೮)
**ಸಪತಾಕ ಇವಾಭಾತಿ ಸ ತದಾ ಧರಣೀಧರಃ ॥** (೪.೪೬.೪೯)

ಇಲ್ಲಿಯ ಒಂದೊಂದು ಮಾತುಗಳೂ ವ್ಯಂಜಕ. ಆನಂದವರ್ಧನನು ಹೇಳುವ ಸಾರ್ಥಕಾಲಂಕಾರಗಳ ಸಮಸ್ತಲಕ್ಷಣಗಳೂ ಇಲ್ಲಿವೆ. ಹೆಚ್ಚೇನು, ವಾಲ್ಮೀಕಿಮುನಿಗಳ ಬಲುಮಟ್ಟಿನ ವಾಕ್ಯವಕ್ರತೆಯ ಪರಿಣಾಮವೇ ಇದು. ಇಲ್ಲಿ ಹೊಯ್ದಾಡುವ ಪತಾಕೆಗಳನ್ನು ಸೂಚಿಸುವ ಹಾವುಗಳ ಹೋಲಿಕೆಯಲ್ಲಿ ಪ್ರತ್ಯಂಗಸೌಂದರ್ಯವಿದೆ. ಆ ಹಾವುಗಳು ತಮ್ಮ ಬಿಲಗಳಿಂದ ಪೂರ್ಣವಾಗಿ ಹೊರಬಂದಿದಲ್ಲಿ ಈ ಹೋಲಿಕೆಗೆ ಔಚಿತ್ಯವಿರುತ್ತಿರಲಿಲ್ಲ. ಅವುಗಳ ಅರೆಬರೆಯಾದ ಹೊರಹೊಮ್ಮಿಕೆಯೇ ಇಲ್ಲಿಯ ಸೂಕ್ಷ್ಮಸ್ವಾರಸ್ಯ. ಇದಕ್ಕೆ ಬಣ್ಣಕಟ್ಟುವಂತೆ ಬಾವುಟಗಳ ಹೊಯ್ದಾಟವೂ ತನ್ಮೂಲಕ ಹೊಮ್ಮುವ ಸದ್ದೂ ಹಾವುಗಳ ಸಹಜವಾದ ಹೆಡೆಯಾಟ ಮತ್ತು ನುಲಿದಾಟಗಳಲ್ಲಿ ಬುಸುಗ್ಗುಟ್ಟುವಿಕೆಯಲ್ಲಿ ಅನ್ಯಾದೃಶವಾಗಿ ಹೊಂದಿಬಂದಿವೆ. ಹೀಗೆ ಚಿಕ್ಕ ಶ್ಲೋಕವೊಂದರೊಳಗೆ ಪ್ರತಿಪದವನ್ನೂ ಧ್ವನನಶೀಲವಾಗಿ ಶಿಲ್ಪಿಸುವಲ್ಲಿ ಆದಿಕವಿ ತೋರಿದ ಕೌಶಲ ಮುಂದಿನ ಎಲ್ಲ ಕವಿಗಳಿಗೂ ನಿಲುಕಲಾಗದ ಎತ್ತರವೆನ್ನಬೇಕು.

ಸುಂದರಕಾಂಡವು ಕೂಡ ಉತ್ಪ್ರೇಕ್ಷಾವೀಚಿಗಳ ಆಕರವಾದ ಅಮೃತೋದಧಿ. ಆರಂಭದಲ್ಲಿಯೇ ಹನೂಮಂತನ ವ್ಯೋಮವ್ಯಾಪಕಲಂಘನವನ್ನು ವರ್ಣಿಸುವಾಗ ಆ ಭವ್ಯತೆಗೆ ಉತ್ಪ್ರೇಕ್ಷೆಗಳೇ ಶರಣ್ಯವೆಂದು ಆದಿಕವಿಗಳು ಭಾವಿಸಿದಂತಿದೆ. ಅಲ್ಲಿಯ ಒಂದೆರಡು ಸೂಕ್ತಿಗಳು ಸರ್ವಥಾ ಸ್ಮರಣೀಯ:

**ಪಿಬನ್ನಿವ ಬಭೌ ಶ್ರೀಮಾನ್ ಸೋರ್ಮಿಮಾಲಂ ಮಹಾರ್ಣವಮ್ ।**
**ಪಿಪಾಸಿಸುವ ಚಾಕಾಶಂ ದದೃಶೇ ಸ ಮಹಕಪಿಃ ॥** (೫.೧.೫೭)

ಹನೂಮಂತನು ಹಾರುತ್ತಿರುವಾಗ ತರಂಗಪರಿಪ್ಲುತವಾದ ಶರಧಿಯನ್ನೇ ಕುಡಿಯುವಂತೆ ಕಂಡನಂತೆ। ಆಗಸವನ್ನವನು ಎವೆಯಿಕ್ಕದೆ ನಿಟ್ಟಿಸುವಾಗ ಅದನ್ನೇ ಹೀರುತ್ತಿರುವನಂತೆ ತೋರಿದನಂತೆ। ಹೀಗಲ್ಲದೆ ವಾಯುಪುತ್ರನ ಅಮೇಯಗಾತ್ರ-ಪಾತ್ರಗಳ, ಕಾರ್ಯ-ಧೈರ್ಯಗಳ ಕಲ್ಪನೆ ನಮಗಾಗದು.

ಅವನ ವಾಯುವೇಗದ ಲಂಘನಕ್ಕೆ ಸಮುದ್ರದ ಮೇಲ್ಮೆಯು ತತ್ತರಿಸಿದ ಪರಿಯನ್ನೂ ಮುನಿಗಳು ಬಣ್ಣಿಸುತ್ತಾರೆ:

**ಸ ತು ತಸ್ಯೋರುವೇಗೇನ ಸೋನ್ಮಾದ ಇವ ಲಕ್ಷ್ಯತೇ ।** (೫.೧.೬೮)

ಅಲೆಗೈಗಳಿಂದ ಹೊಯ್ದಾಡುತ್ತ, ನೊರೆಯನ್ನು ಕಕ್ಕುತ್ತ, ಮತ್ತೆ ಮತ್ತೆ ಮೊರೆಯುತ್ತ ತತ್ತರಿಸುವ ಬಡಗಡಲಿನ ಚಿತ್ರವು ನಮ್ಮೆದುರು ಸುಳಿದಾಗ ನಿಜಕ್ಕೂ ಅದು ಅಪಸ್ಮಾರಸಂತ್ರಸ್ತನಂತೆ ತೋರದಿರದು. ಇದನ್ನೇ ಮಾಘನು ತನ್ನ "ಶಿಶುಪಾಲವಧ" ಕಾವ್ಯದಲ್ಲಿ ಅನುವಾದಿಸಿಕೊಂಡಿದ್ದರೂ ಆದಿಕವಿಯ ಔಚಿತ್ಯವು ಅವನಿಗೆಟುಕದೆ ಅಲ್ಲಿ ಈ ಚಿತ್ರವು ಜುಗುಪ್ಸಾವಹವಾಗಿದೆ. ಮಹಾಕವಿಯಿಂದ ಅನಾಮತ್ತಾಗಿ ಉಕ್ತಿವೈಚಿತ್ರ್ಯಗಳನ್ನು ಲಪಟಾಯಿಸಬಹುದು; ಆದರೆ ಶಕ್ತಿಸಂಪೃಕ್ತಿಯು ಬೇಕಲ್ಲ! ಅದಿಲ್ಲದೆ ಔಚಿತ್ಯವೂ ತನ್ಮೂಲಕ ರಸಸಿದ್ಧಿಯೂ ಮೃಗಮರೀಚಿಕೆಯಷ್ಟೇ.

ಮುಂದೆ ರಾವಣಾಂತಃಪುರದ ರಮಣಿಯರನ್ನು ವರ್ಣಿಸುವಾಗ ಆದಿಕವಿಗಳ ಕಲ್ಪನಾಪ್ರಾವಣ್ಯವು ಮುಗಿಲುಮುಟ್ಟುತ್ತದೆ. ಅಲ್ಲಿಯ ಒಂದು ಅನರ್ಘಭಾಸ್ವರವಾದ ಉತ್ಪ್ರೇಕ್ಷೆ ಹೀಗಿದೆ:

**ರಾವಣೇ ಸುಖಸಂವಿಷ್ಟೇ ತಾಸ್ತ್ರಿಯೋ ವಿವಿಧಪ್ರಭಾಃ ।** (೫.೯.೬೭)
**ಜ್ವಲಂತಃ ಕಾಂಚನಾದೀಪಾಃ ಪ್ರೈಕ್ಷಂತಾನಿಮಿಷಾ ಇವ ।** (೫.೯.೬೮)

ರಾವಣನು ಮಲಗಿದ್ದ ಕಾರಣ ಶಂಕೆಯಿಲ್ಲದೆ ನಿದ್ರಾಮುದ್ರಿತಸುಂದರಿಯರನ್ನು ಕಾಣಬಹುದೆಂಬ ಕಾಂಕ್ಷೆಯಿಂದ ಅಂತಃಪುರದ ಹೊನ್ನ ಹಣತೆಗಳು ತಮ್ಮ ಸ್ತಬ್ಧಸ್ತಿಮಿತಜ್ವಾಲೆಗಳ ಮೂಲಕ ಅವರನ್ನು ಎವೆಯಿಕ್ಕದೆ ನಿಟ್ಟಿಸುವಂತೆ ತೋರುತ್ತಿತ್ತೆಂಬ ವರ್ಣನೆಯಲ್ಲಿ ಜಗತ್ತಿನ ಕವಿಕಲ್ಪಕತೆಯೆಲ್ಲ ಸಂತೋಷದಿಂದ ಸೆರೆಯಾಗಲು ಸಮ್ಮತಿಸಿದೆ. ಇಲ್ಲಿಯ "ಅನಿಮಿಷ" ಪದವು ತನ್ನ ಶ್ಲಿಷ್ಟಾರ್ಥದಿಂದ ಮತ್ತೂ ಮಾದಕವಾಗಿದೆ. ಏಕೆಂದರೆ ದೀಪಗಳು ಎವೆಯಿಕ್ಕದೆ ನೋಡುತ್ತಿದ್ದುವೆಂಬ ಉತ್ಪ್ರೇಕ್ಷೆಯೊಡನೆ ಅನಿಮಿಷರ–ಅರ್ಥಾತ್ ದೇವತೆಗಳ–ಹಾಗೆ ದೀಪಗಳು ನಿರುಕಿಸುತ್ತಿದ್ದುವೆಂಬ ಅರ್ಥವೂ ಹೊಮ್ಮುತ್ತದೆ. ಇದು ಉಪಮೆಯೇ ಆಗಿದೆ. ಜೊತೆಗೆ ರಾವಣನ ಅಂಜಿಕೆಯ ಕಾರಣ ಅವನ ಅಂತಃಪುರದಲ್ಲಿದ್ದ ಸುರಸುಂದರಿಯರನ್ನು ಕಾಣಲು ದೇವತೆಗಳೂ ರೂಪಾಂತರದಿಂದ ಬಂದು ಕದ್ದುಮುಚ್ಚಿ ನೋಡಬೇಕೆಂಬ ಧ್ವನಿಯೂ ತಲೆದೋರಿ ಪ್ರಕಾರಾಂತರವಾಗಿ ರಾವಣನ ವಿಕ್ರಮವೇ ಅನುರಣಿಸುತ್ತದೆ. ಹೀಗೆ ಇದು ವಸ್ತುಧ್ವನಿ, ಅಲಂಕಾರಧ್ವನಿ ಮತ್ತು ರಸಧ್ವನಿಗಳಿಗೆ ಏಕಕಾಲದಲ್ಲಿ ಅನನ್ಯಾಯತನವೆನಿಸಿದೆ. ಇಂಥ ಕಾವ್ಯಸಿದ್ಧಿಯು ನಮ್ಮ ದೇಶದ ಆದಿಕವಿಗೆ ಸಂದಿರುವುದು ನಮ್ಮ ಪುಣ್ಯ !

ಅಶೋಕವನದಲ್ಲಿ ಸೀತಾನ್ವೇಷಣತತ್ಪರನಾದ ಹನೂಮಂತನಿಗೊಂದು ಕ್ರೀಡಾಶೈಲವು ಕಾಣುತ್ತದೆ. ಅಲ್ಲಿ ಹರಿಯುತ್ತಿದ್ದ ನಿರ್ಝರಿಣಿಯೂ ತತ್ಪರಿಸರದ ವನಸೌಂದರ್ಯವೂ ಅತಿಲೋಕಮನೋಹರತೆಯಿಂದ ಹೀಗೆ ಉತ್ಪ್ರೇಕ್ಷಿತವಾಗಿವೆ:

**ದದರ್ಶ ಚ ನಗಾತ್ತಸ್ಮಾನ್ನದೀಂ ನಿಪತಿತಾಂ ಕಪಿಃ ।**
**ಅಂಕಾದಿವ ಸಮುತ್ಪತ್ಯ ಪ್ರಿಯಸ್ಯ ಪತಿತಾಂ ಪ್ರಿಯಾಮ್॥**

**ಜಲೇ ನಿಪತಿತಾಗ್ರೈಶ್ಚ ಪಾದಪೈರುಪಶೋಭಿತಾಮ್।**
**ವಾರ್ಯಮಾಣಾಮಿವ ಕ್ರುದ್ಧಾಂ ಪ್ರಮದಾಂ ಪ್ರಿಯಬಂಧುಭಿಃ ॥**
(೫.೧೪.೨೯.೩೦)

ಶೈಲದಿಂದ ಸುರಿದುಹೋಗುತ್ತಿದ್ದ ನಿರ್ಝರಿಣೀಯು ಪತಿಯ ತೊಡೆಯಿಂದ ಜಾರಿಹೋಗುತ್ತಿದ್ದ ಭಾಮಿನಿಯಂತೆ ತೋರುತ್ತಿತ್ತು! ಆ ಝರಿಯ ಪಾತ್ರದೊಳಗೆ ಕೊಂಬೆ–ರೆಂಬೆಗಳನ್ನು ಚಾಚಿದ ಇರ್ಕೆಲದ ಮರಗಳು ಹೀಗೆ ಕನಲಿ ದೂರ ಸರಿಯುತ್ತಿದ್ದ ಪ್ರಮದೆಯನ್ನು ಅನುನಯಿಸುವ ಬಂಧುವರ್ಗದಂತಿದ್ದುವು! ಇಂಥ ಶೃಂಗಾರಪಾರಮ್ಯದ ಚಿತ್ರಣವನ್ನು ರಾವಣನ ಪ್ರಮದವನದ ವರ್ಣನಾವಸರದಲ್ಲಿ ಕಲ್ಪಿಸಿದ ಆದಿಕವಿಯು ಕೌಶಲ ಅಸಮಾನ. ಪ್ರಿಯನ ತೊಡೆಯಿಂದ ಜಾರಿಹೋಗುತ್ತಿದ್ದ ಪ್ರಮದೆಗೆ ಬೆಟ್ಟದಬ್ಬಿಯನ್ನು ಒಪ್ಪವಿಟ್ಟ ಈ ಪ್ರತಿಭೆಗೆ ಶರಣಾಗಿಯೇ ಕಾಳಿದಾಸನು ತನ್ನ ಮೇಘದೂತಕಾವ್ಯದ ಪೂರ್ವಮೇಘಾಂತ್ಯದಲ್ಲಿ ಕೈಲಾಸದಿಂದ ಜಾರಿಹೋಗುತ್ತಿದ್ದ ದೇವಗಂಗೆಯ ಕೆಲದಲ್ಲಿದ್ದ ಅಲಕೆಯ ವರ್ಣನೆಯನ್ನು ಇದೇ ಜಾಡಿನಲ್ಲಿ ಮಾಡಿದ್ದಾನೆ.

ಹನೂಮಂತನು ಲಂಕೆಯಿಂದ ಮರಳಿಬರುವಾಗ ಪುನರ್ಲಂಘನಕ್ಕಾಗಿ ಅರಿಷ್ಟವೆಂಬ ಗಿರಿಯನ್ನು ಏರುತ್ತಾನೆ. ಆ ಶೈಲವನ್ನು ಆದಿಕವಿಗಳು ಅತಿಶಯವಾಗಿ ವರ್ಣಿಸುತ್ತಾರೆ. ಇಲ್ಲಿಯ ಪ್ರತಿಯೊಂದು ಪದ್ಯದ ಚತುರ್ಥಪಾದವೂ ಒಂದೊಂದು ಉತ್ಪ್ರೇಕ್ಷೆಯಾಗಿದೆ. ಮಾತ್ರವಲ್ಲ, ಇಡಿಯ ಪದ್ಯವೇ ಉಪಚಾರವಕ್ರತೆಗೆ ತವರಾಗಿದೆ. ಇಂಥ ಸಂಕೀರ್ಣಸುಂದರವಾದ ರಚನಾಶಿಲ್ಪವು ಯಾರಿಗೂ ಎಟುಕದ ಕೌಶಲ:

**ಸೋತ್ತರೀಯಮಿವಾಂಭೋದೈಃ ಶೃಂಗಂತರವಿಲಂಬಿಭಿಃ** । (೫.೫೬.೧೦)
**ಬೋಧ್ಯಮಾನಮಿವ ಪ್ರೀತ್ಯಾ ದಿವಾಕರಕರೈಃ ಶುಭೈಃ** । (೫.೫೬.೧೧)

**ತೋಯೌಘನಿಸ್ಸವನ್ಯೈರ್ಮಂದ್ರೈಃ ಪ್ರಾಧಿತಮಿವ ಪರ್ವತಃ** ।
**ಪ್ರಗೀತಮಿವ ವಿಸ್ಪಷ್ಟೈರ್ನಾನಾಪ್ರಸ್ರವಣಸ್ವನೈಃ** ॥ (೫.೫೬.೧೨)
**ದೇವದಾರುಭಿರತ್ಯುಚ್ಚೈರೂರ್ಧ್ವಬಾಹುಮಿವ ಸ್ಥಿತಮ್** । (೫.೫೬.೧೩)

**ವೇಪಮಾನಮಿವ ಶ್ಯಾಮೈಃ ಕಂಪಮಾನೈಃ ಶರದ್ವನೈಃ** ।
**ವೇಣುಭಿರ್ಮಾರುತೋದ್ಧೂತೈಃ ಕೂಜಂತಮಿವ ಕೀಚಕೈಃ** ॥ (೫.೫೬.೧೪)

**ನೀಹಾರಕೃತಗಂಭೀರೈರ್ಧ್ಯಾಯಂತಮಿವ ಗಹ್ವರೈಃ** । (೫.೫೬.೧೫)
**ಜೃಂಭಮಾಣಮಿವಾಕಾಶೇ ಶಿಖರೈರಭ್ರಶಾಲಿಭಿಃ** ॥ (೫.೫೬.೧೬)

ಆ ಗಿರಿಯು ತನ್ನ ಶಿಖರಗಳ ನಡುವೆ ಸುಳಿಯುವ ಮುಗಿಲುಗಳಿಂದ ಉತ್ತರೀಯವನ್ನು ಹೊದ್ದಂತೆ, ಮೇಲೆ ಸುಳಿಯುವ ಸೂರ್ಯಕಿರಣಗಳಿಂದ ತಟ್ಟಿ ಎಬ್ಬಿಸಲ್ಪಡುತ್ತಿರುವಂತೆ, ಮೊರೆಯುವ ಝರಿಗಳ ಮಂದ್ರಧ್ವನಿಯ ಮೂಲಕ ವೇದಾಧ್ಯಯನಕ್ಕೆ ತೊಡಗಿದಂತೆ, ಜುಳಜುಳನೆ ಹರಿಯುವ ಹೊನಲುಗಳ ಮೂಲಕ ಹಾಡುತ್ತಿರುವಂತೆ, ನೇರವಾಗಿ ಬೆಳೆದ ದೇವದಾರುತರುಗಳ ಮೂಲಕ ಕೈಗಳನ್ನು ಮೇಲೆ ಚಾಚಿದಂತೆ, ಗಾಳಿಗೆ ಹೊಯ್ದಾಡುತ್ತಿರುವ ಹುಲ್ಲುಗಾವಲುಗಳ ಮೂಲಕ ಮೆಲ್ಲನೆ ಕಂಪಿಸುತ್ತಿರುವಂತೆ, ಬಿದಿರಿನ ಮೆಳೆಗಳಲ್ಲಿ ಸುಳಿದ ಗಾಳಿಗಳ ಮೂಲಕ ಶಿಳ್ಳು ಹಾಕುತ್ತಿರುವಂತೆ, ಇಬ್ಬನಿ ತುಂಬಿದ ಗುಹೆಗಳ ಮೂಲಕ ಪರಮಗಂಭೀರಧ್ಯಾನಕ್ಕೆ ತೊಡಗಿರುವಂತೆ, ಮೋಡಗಳಲ್ಲಿ ಮೈಚಾಚಿದ ಕೋಡುಗಲ್ಲುಗಳ ಮೂಲಕ ಮೈಮುರಿದು ಆಕಳಿಸುವಂತೆ ತೋರುತ್ತಿತ್ತು! ಇಲ್ಲಿಯ ಒಂದೊಂದು ಕಲ್ಪನೆಯೂ ಆ ಪರ್ವತದ ಮಾನುಷೀಕರಣಕ್ಕೆ ಸೂರ್ಯಸಾಕ್ಷಿ. ಹೀಗೆ ಜಡದಲ್ಲಿಯೂ ಚೈತನ್ಯವನ್ನು ಕಂಡು ಕಾಣಿಸಬಲ್ಲ ಶಕ್ತಿ ಕವಿಯದು; ಕಾಣುವ ಶಕ್ತಿ ಮಾತ್ರ ಋಷಿಯದು. ವಾಲ್ಮೀಕಿಮುನಿಗಳು ಎರಡೂ ಆದವರು. ನಮಗೂ ಕ್ಷಣಕಾಲ ಈ ಅನುಭೂತಿಯನ್ನು ತುಂಬಿಸಬಲ್ಲವರು. ನಾವು ಒಲಿದರೆ ಇದನ್ನು ಜೀವನವಿಡೀ ತುಂಬಿಕೊಡಬಲ್ಲ ಕಾವ್ಯೌದಾರ್ಯ ಅವರದು.

ಹನೂಮಂತನು ತನ್ನ ಪುನಃಪ್ರಯಾಣದಲ್ಲಿ ತೋರಿಕೊಂಡ ಬಗೆಯನ್ನು ಕವಿಗಳು ಹಲವು ಮಾಲೋತ್ಪ್ರೇಕ್ಷೆಗಳಲ್ಲಿ ವರ್ಣಿಸುತ್ತಾರೆ. ಅಲ್ಲಿಯ ಒಂದೆರಡು ಸೊಲ್ಲುಗಳು ತುಂಬ ಸ್ಮರಣೀಯ:

**ಗ್ರಸಮಾನ ಇವಾಕಾಶಂ ತಾರಾಧಿಪಮಿವೋಲ್ಲಿಖನ್** ।
**ಹರನ್ನಿವ ಸನಕ್ಷತ್ರಂ ಗಗನಂ ಸಾರ್ಕಮಂಡಲಮ್** ॥ (೫.೫೭.೫)

**ಮಾರುತಸ್ಯಾತ್ಮಜಃ ಶ್ರೀಮಾನ್ ಕಪಿರ್ವ್ಯೋಮಚರೋ ಮಹಾನ್** ।
**ಹನೂಮಾನ್ಮೇಘಜಾಲಾನಿ ವಿಕರ್ಷನ್ನಿವ ಗಚ್ಛತಿ** ॥ (೫.೫೭.೬)

ಪ್ರಾಣಪುತ್ರನು ಆಗಸವನ್ನೇ ನುಂಗುವಂತೆ, ಸುಧಾಂಶುವನ್ನೇ ಪರಚುವಂತೆ, ಸೂರ್ಯನನ್ನೇ ಕಸಿಯುವಂತೆ, ನಕ್ಷತ್ರಗಳನ್ನೇ ಕಿತ್ತೊಯ್ಯುವಂತೆ, ಮೋಡಗಳನ್ನೇ ಸೆಳೆದೊಯ್ಯುವಂತೆ ಹಾರಿಹೋಗುತ್ತಿದ್ದನಂತೆ ! ಈ ಹೊತ್ತಿಗೆ ಅವನು ಕಣ್ಣಾಮುಚ್ಚಾಲೆಯಾಡುವ ಚಂದ್ರನಂತೆ ಮೋಡಗಳ ನಡುವೆ ತೋರುತ್ತಿದ್ದನೆಂದೂ ಮುನಿಗಳು ಬಣ್ಣಿಸುತ್ತಾರೆ.

ಯುದ್ಧಕಾಂಡವು ಸಾಮಾನ್ಯಕವಿಗಳಿಗೆ ಸಖೇದಾಶ್ಚರ್ಯವನ್ನು ತರುವಂತೆ ಬಲುಮಟ್ಟಿಗೆ ಉತ್ಪ್ರೇಕ್ಷೆಗಳಿಲ್ಲದೆಯೇ ಸಾಗಿದೆ. ಇದು ರಸಿಕರ ಪಾಲಿಗೆ ಮತ್ತೂ ರೋಚಕ. ಅಲ್ಲಿಯ ವಿರಳೋತ್ಪ್ರೇಕ್ಷೆಗಳ ಪೈಕಿ ಒಂದೆರಡನ್ನು ಗಮನಿಸೋಣ. ಅವುಗಳಲ್ಲಿ ಕೆಲವು ತಮ್ಮ ಅಪೂರ್ವಾಭಿರಾಮತೆಯಿಂದ ನಮ್ಮ ಬಗೆಯನ್ನು ಸೆಳೆದರೆ ಮತ್ತೆ ಕೆಲವು ಪೂರ್ವಕಲ್ಪಿತಚಮತ್ಕಾರದಿಂದ ಹಳೆಯ ಗೆಳೆಯರಂತೆ ನಮಗೆ ತೋರುತ್ತವೆ:

**ಹಸಂತಮಿವ ಫೇನೋಘೈರ್ನೃತ್ಯಂತಮಿವ ಚೋರ್ಮಿಭಿಃ** ।
**ಚಂದ್ರೋದಯಸಮುದ್ಭೂತಂ ಪ್ರತಿಚಂದ್ರಸಮಾಕುಲಮ್**॥

**ಪಿನಷ್ಟೀವ ತರಂಗಾಗ್ರೈರರ್ಣವಃ ಫೇನಚಂದನಮ್।**
**ತದಾದಾಯ ಕರೈರಿಂದುರ್ಲಿಂಪತೀವ ದಿಗಂಗನಾಃ॥** (೬.೪.೧೧೪,೧೧೫)

ಇಲ್ಲಿ ಚಂದ್ರೋದಯದಿಂದ ಉಕ್ಕೇರಿದ ಕಡಲಿನ ಮತ್ತು ಬೆಳುದಿಂಗಳಿನ ರೋಮಹರ್ಷಕವಾದ ವರ್ಣನೆಯುಂಟು. ಭೋರ್ಗರೆಯುವ ಸಮುದ್ರತರಂಗಗಳು ನೊರೆನಗೆಯಿಂದ ಸೊಗಯಿಸುತ್ತ ನರ್ತಿಸುವಂತಿದ್ದುವು. ಒಂದೊಂದು ಅಲೆಯಲ್ಲಿಯೂ ಚಂದ್ರಬಿಂಬವು ಪ್ರತಿಫಲಿಸಿ ಅನಂತಸಂಖ್ಯೆಯ ವಿಲಾಸವನ್ನು ಮಾಡುತ್ತಿತ್ತು !

ಹೀಗೆ ಉಕ್ಕಿ ಹರಿಯುವ ಅಲೆಗೈಗಳಿಂದ ಸಮುದ್ರವು ನೊರೆಯೆಂಬ ಚಂದನವನ್ನು ತೇಯ್ದು ಅದನ್ನು ಹಿಮಕಿರಣನ ರಶ್ಮಿಹಸ್ತಗಳಿಂದ ದಿಕ್ಸುಂದರಿಯರಿಗೆ ಲೇಪಿಸಿದಂತೆ ಬೆಳ್ದಿಂಗಳಿನ ಕಾಂತಿ ಕೋಡಿವರಿದಿತ್ತು! ಇಲ್ಲಿಯ ಕವಿತಾಸೌಂದರ್ಯವನ್ನು ಮೆಚ್ಚದ ರಸಿಕರಿಲ್ಲ. ಅಪ್ಪಯ್ಯದೀಕ್ಷಿತರಂಥ ಪರಿಪಕ್ವರಸಿಕರೂ ತಮ್ಮ ಕುವಲಯಾನಂದದಲ್ಲಿ ಈ ಶ್ಲೋಕವನ್ನು ಉದಾಹರಿಸಿದ್ದಾರೆ.

**ಜಗಾಮ ಮೇರುಂ ನಗರಾಜಮಗ್ರ್ಯಂ**
**ದಿಶಃ ಪ್ರಕರ್ಷನ್ನಿವ ವಾಯುಸೂನುಃ ॥** (೬.೭೪.೫೧)

ಸಂಜೀವಿನಿಯನ್ನು ತರಲೆಂದು ಹಿಮಾಲಯಕ್ಕೆ ಸಾಗಿದ ಹನೂಮಂತನು ಅಲ್ಲಿಯ ಮೇರುಪರ್ವತದಲ್ಲಿ ದಿಕ್ಕುಗಳನ್ನೇ ಸೆಳೆಯುವಂತೆ ಸುಳಿದಾಡಿದನಂತೆ!

ವಾಲ್ಮೀಕಿಮುನಿಗಳು ರಾವಣವಧೆಯ ಬಳಿಕ ವಿಲಪಿಸುವ ಮಂದೋದರಿಯ ಬಾಯಲ್ಲಿ ರಾವಣನ ಅಗ್ಗಳಿಕೆಯನ್ನು ಹಲವು ಬಗೆಯಾಗಿ ಹಾಡಿಸುತ್ತಾರೆ. ಅಲ್ಲೊಂದೆಡೆ ಆಕೆಯು ಯಾವ ಇಂದ್ರಿಯಗಳನ್ನು ಗೆದ್ದು ರಾವಣನು ಸಂಯಮಿಯಾಗಿ ತಪೋಬಲದಿಂದ ತ್ರಿಲೋಕವಿಜಯಿಯಾದನೋ ಆ ಇಂದ್ರಿಯಗಳೇ ಇದೀಗ ಸೇಡಿನಿಂದ ಅವನ ಮೇಲೆ ತಿರುಗಿಬಿದ್ದು ವಿಜಯಿಗಳಾಗಿ ಅವನಿಗೆ ಸಾವನ್ನು ತಂದಿವೆಯೆಂದು ದುಃಖಿಸುತ್ತಾಳೆ.

**ಇಂದ್ರಿಯಾಣಿ ಪುರಾ ಜಿತ್ವಾ ಜಿತಂ ತ್ರಿಭುವನಂ ತ್ವಯಾ ।**
**ಸ್ಮರದ್ಭಿರಿವ ತದ್ವೈರಮಿಂದ್ರಿಯೈರೇವ ನಿರ್ಜಿತಃ ॥** (೬.೧೧೪.೧೮)

**ಪ್ರವಿಶಂತೀವ ಗಾತ್ರಾಣಿ ಸ್ವಾನ್ಯೇವ ಜನಕಾತ್ಮಜಾ ।** (೬.೧೧೯.೩)

ರಾಮನ ಅಪಲಾಪವನ್ನು ಕೇಳಿ ಕಂಗೆಟ್ಟ ಸೀತೆಯು ತನ್ನ ಮೈಯೊಳಗೇ ತಾನು ಹುದುಗಿಹೋದಂತಾಗಿ ಮುಜಗರಗೊಂಡಳಂತೆ! ಈ ಕಲ್ಪನೆಯನ್ನು ಚಿತ್ರಕೂಟಕ್ಕೆ ಭರತನು ಬರುತ್ತಿದ್ದಾಗ ಅವನನ್ನು ಶಂಕಿಸಿದ ಲಕ್ಷ್ಮಣನಿಗೆ ರಾಮನು ತಿಳಿಯಹೇಳುವ ಹೊತ್ತಿನಲ್ಲಿ ಕೂಡ ಆದಿಕವಿಗಳು ಬಳಸಿಕೊಂಡಿರುವುದನ್ನು ನಾವಿಲ್ಲಿ ನೆನೆಯಬಹುದು.

**ಅತಿಶಯೋಕ್ತಿ**ಯನ್ನು ಕಾವ್ಯಲೋಕದ ಜೀವಾಳವೆಂದೇ ಆನಂದವರ್ಧನನು ಆದರಿಸಿದ್ದಾನೆ. ಅಧ್ಯವಸಾಯ ಅಥವಾ ಮಿಗಿಲಾದ ಕಲ್ಪನೆಯೇ ಇದರ ಹೃದಯ. ಕವಿಪ್ರತಿಭೆಯು ಸಾದೃಶ್ಯ–ಸಂಭಾವ್ಯಗಳ ಗಡಿಗಳನ್ನು ಮೀರಿ ನಿರಂಕುಶವಾಗಿ ಅಪರಪ್ರಜಾಪತಿಯಂತೆ ಸೌಂದರ್ಯಮಹಾಕಾಶದಲ್ಲಿ ಅಗ್ನಿಹಂಸಗತಿಯಿಂದ ಹಾರುವುದು ಇಲ್ಲಿ ಸ್ವಾರಸ್ಯ. ಯಾವುದೇ ಅಲಂಕಾರದಲ್ಲಿ ಇಂಥ ಸೀಮೋಲ್ಲಂಘನಸ್ವವಿಲ್ಲದಿದ್ದಲ್ಲಿ ಅದು ಹೊಳಪಿಲ್ಲದ ಒಡವೆಯಾಗಿ ಅದನ್ನು ತೊಡಿಸಿಕೊಂಡ ಕಾವ್ಯವನಿತೆಗೆ ಬರಿಯ ಭಾರವಾಗಿ ತೋರದಿರದು. ಈ ಶಕ್ತಿಯನ್ನು 'ಚಮತ್ಕಾರ'ವೆಂದೂ ಹೇಳಬಹುದು.

ವಾಲ್ಮೀಕಿರಾಮಾಯಣದಲ್ಲಿ ಮೇಲೆ ಕಾಣಿಸಿದ ಅತಿಶಯತೆಯು ಬಲುಮಟ್ಟಿನ ಅಲಂಕಾರಗಳ ಜೀವಾಳವಾಗಿದ್ದರೂ ತಾಂತ್ರಿಕವಾಗಿ ಅತಿಶಯೋಕ್ತಿಯೆನಿಸುವ ನಿದರ್ಶನಗಳು ವಿರಳ. ಸಹಜಸೌಂದರ್ಯದ ಹರಿಕಾರರಾದ ಆದಿಕವಿಗಳಿಗೆ ಉಪಮೋತ್ಪ್ರೇಕ್ಷೆಗಳ ಮೇಲಿರುವ ಅಕ್ಕರೆ ಸ್ವಲ್ಪ ಅಬ್ಬರದ್ದೆನ್ನಬಹುದಾದ ಅಳತೆಯ ಅತಿಶಯೋಕ್ತಿಯ ಕಡೆ ಇಲ್ಲ. ಹಾಗೆಂದು ಅವರು ಕಲ್ಪಿಸಿದ ಈ ಮಾದರಿಗಳಲ್ಲಿ ಅಂದವೇನೂ ಕುಂದಿಲ್ಲ.

ರಾಮನನ್ನು ಇಡಿಯ ಕಾವ್ಯದಲ್ಲಿ ಮತ್ತೆ ಮತ್ತೆ ಧರ್ಮದ ಸಾಕಾರವೆಂದು ಕೊಂಡಾಡಿದ್ದಾರೆ: **ರಾಮೋ ವಿಗ್ರಹವಾನ್ ಧರ್ಮಃ** (೩.೩೭.೧೩) ತಾಂತ್ರಿಕವಾಗಿ ಇದು ಅತಿಶಯೋಕ್ತಿಯಾದರೂ ತತ್ತ್ವತಃ ಇಲ್ಲಿರುವುದು ಸ್ವಭಾವೋಕ್ತಿಯೇ! ಇದು ಮಹರ್ಷಿಗಳ ಇಂಗಿತವೂ ಹೌದು. ಆದರೆ ಶಾಸ್ತ್ರನಿರ್ಬಂಧದ ಕಾರಣ ನಾವಿದನ್ನು ಅತಿಶಯೋಕ್ತಿಯೆನ್ನಬೇಕಿದೆ.

ಕಿಷ್ಕಿಂಧಾಕಾಂಡದಲ್ಲಿ ಸೀತಾವಿರಹಸಂತಪ್ತನಾದ ರಾಮನ ಪಾಲಿಗೆ ಪುಷ್ಪಪಲ್ಲವಪರಿಪ್ಲುತವಾದ ಅಶೋಕವು ಸುಡುಬೆಂಕಿಯಾಗಿ ತೋರಿತು:

**ಅಶೋಕಸ್ತಬಕಾಂಗಾರಃ ಷಟ್ಪದಸ್ವನನಿಸ್ವನಃ** । (೪.೧.೨೯)
**ಮಾಂ ಹಿ ಪಲ್ಲವತಾಮ್ರಾರ್ಚಿರ್ವಸಂತಾಗ್ನಿಃ ಪ್ರಧಕ್ಷ್ಯತಿ** । (೪.೧.೩೦)

ಈ ಉದಾಹರಣೆಯಲ್ಲಿ ಸಾವಯವರೂಪಕದ ಒತ್ತಾಸೆಯಿರುವುದಾದರೂ 'ವಸಂತಾಗ್ನಿಃ ಪ್ರಧಕ್ಷ್ಯತಿ' (ವಸಂತವಹ್ನಿಯು ಸುಡುತ್ತದೆ). ಎಂಬ ಮಾತಿನಲ್ಲಿ ಸುಡುವಿಕೆಯೇ ಅತಿಶಯದ ಜೀವಾಳವಾಗಿದೆ. ಮತ್ತಿದು ಇಡಿಯ ಪದ್ಯವನ್ನು ಪರ್ಯಂತಭೂಮಿಯಲ್ಲಿ ನಡೆಸಿದೆ ಕೂಡ. ಆದುದರಿಂದ ಇದನ್ನು ತಾತ್ಪರ್ಯತಃ ಅತಿಶಯೋಕ್ತಿಯೆನ್ನಬೇಕು. ಇದೇ ಕಾಂಡದಲ್ಲಿ ಮಳೆಗಾಲವನ್ನು ಬಣ್ಣಿಸುತ್ತ ರಾಮನು ಕೇದಗೆಯ ಹೂಗಳ ಪರಿಮಳವನ್ನೊಳಗೊಂಡ ಗಾಳಿಯನ್ನು ಬೊಗಸೆಯಲ್ಲಿ ತುಂಬಿಕೊಂಡು ಹೀರಬಹುದೆನ್ನುತ್ತಾನೆ:

**ಶಕ್ಯಮಂಜಲಿಭಿಃ ಪಾತುಂ ವಾತಾಃ ಕೇತಕಗಂಧಿನಃ** । (೪.೨೮.೮)

ಸರಲೋದಾರವಾದ ಈ ಅತಿಶಯೋಕ್ತಿಯ ಪ್ರತಿನವತೆ ಅಸಮಾನ. ಮುಂದೆ ಎಷ್ಟೋ ಕವಿಗಳು ಇದೇ ಜಾಡಿನಲ್ಲಿ ಬೆಳದಿಂಗಳು, ಮುಂಜಾನೆಯ ಹೊಂಬೆಳಕು, ಸವಿಯುಲಿಯ ಇಂಪು-ಸೊಂಪುಗಳನ್ನೆಲ್ಲ ಬೊಗಸೆಯಲ್ಲಿ ತುಂಬಿ ತುಂಬಿ ಕುಡಿಯಬಹುದೆಂದು ಅತಿಶಯಗಳನ್ನು ರಚಿಸಿದ್ದಾರೆ.

ಸುಂದರಕಾಂಡದಲ್ಲಿ ಸೀತಾನ್ವೇಷಣತತ್ಪರನಾದ ಮಾರುತಿಯು ರಾವಣಾಂತಃಪುರದ ರಮಣಿಯರನ್ನು ನೋಡುವಾಗ ಪರಸ್ಪರ ತೋಳುಗಳನ್ನು ಬೆಸೆದುಕೊಂಡು ಮಲಗಿದ್ದ ಅವರು ಚೆಲುವಾದ ಸ್ತ್ರೀಮಾಲೆಯೇ ಆಗಿದ್ದರೆಂದು ಭಾವಿಸುವಲ್ಲಿ ರುಚಿರವಾದ ಅತಿಶಯವಿದೆ. ಇಲ್ಲಿಯ "ಗ್ರಥನ" ಶಬ್ಧವೇ ಪ್ರಸ್ತುತಾಲಂಕಾರದ ಕೀಲಕ:

**ಅನ್ಯೋನ್ಯಭುಜಸೂತ್ರೇಣ ಸ್ತ್ರೀಮಾಲಾ ಗ್ರಥಿತಾ ಹಿ ಸಾ** । (೫.೯.೬೩)

ರಾವಣಸಂಹಾರದ ಬಳಿಕ ತನ್ನೆದುರು ನಿಂತ ಸೀತೆಯನ್ನು ರಾಮನು ಪರಿಪರಿಯಾಗಿ ಹಳಿದಾಗ ನಾಚಿದ ಅವಳು ಮೈಯೆಲ್ಲ ಹಿಂಜಿಕೊಂಡು ತನ್ನ ಮೈಯೊಳಗೇ ಹುದುಗಿಹೋದಳಂತೆ:

**ಲಜ್ಜಯಾ ತ್ವವಲೀಯಂತೀ ಸ್ವೇಷು ಗಾತ್ರೇಷು ಮೈಥಿಲಿ** । (೬.೧೧೭.೩೩)

ಹಿಂದೆ ಅಯೋಧ್ಯಾಕಾಂಡದಲ್ಲಿಯೂ ಭರತಾಗಮನಪ್ರಸಂಗದಲ್ಲಿ ಇಂಥ ಚಿತ್ರಣ ಬಂದಿತ್ತು. ಆದರೆ ಅದು ತಾಂತ್ರಿಕವಾಗಿ ಉತ್ಪ್ರೇಕ್ಷೆಯ ಕಕ್ಷೆಗೆ ಸಂದಿತ್ತು. ಇದೀಗ ಅದೇ ಕಲ್ಪನೆ ಅತಿಶಯೋಕ್ತಿಯಾಗಿದೆ. ಕಾವ್ಯಕರ್ಮದಲ್ಲಿ ಇವೆಲ್ಲ ದೃಷ್ಟಚರ.

ಉಪಮೇಯ ಅಲಂಕಾರಜಗತ್ತಿನ ಮಹಾಮಾತೆಯಾದರೆ **ರೂಪಕವು** ಈ ಲೋಕದ ಮಹಾರಾಜ. ಉತ್ಪ್ರೇಕ್ಷೆಯನ್ನು ಈ ಸಾಮ್ರಾಜ್ಯದ ಪಟ್ಟಮಹಿಷಿಯೆನ್ನಬಹುದು. ಅತಿಶಯೋಕ್ತಿಯಂತೂ ಸಮ್ರಾಜ್ಞಿಯೇ ಸರಿ. ಆದರೆ ಮತ್ತಾವ ಅಲಂಕಾರಗಳಿಗೂ ಇಲ್ಲದ ಅಂದ, ಆಡಕ, ಜೌನತ್ಯ, ಭವ್ಯತೆ ಮತ್ತು ಪರಿಣಾಮಪ್ರಜ್ವಲತೆಗಳು ರೂಪಕಕ್ಕುಂಟು. ಮಾತ್ರವಲ್ಲ, ಇದರ ನಿರ್ಮಾಣವೂ ತಾಂತ್ರಿಕವಾಗಿ ಸರಳ, ಸುಲಭ. ಈ ಎಲ್ಲ ಕಾರಣಗಳಿಂದಲೇ ಆಧುನಿಕ ಕವಿಗಳೂ ಸೇರಿದಂತೆ ಎಲ್ಲ ಕಾಲದ ಲೇಖಕರೂ ರೂಪಕಕ್ಕೆ ಅಗ್ರತಾಂಬೂಲವನ್ನಿತ್ತಿದ್ದಾರೆ. ಆದರೆ ಎಚ್ಚರವಿಲ್ಲದಿದ್ದಲ್ಲಿ ಏಕತಾನತೆಯ ಅಪಾಯ ತಪ್ಪದು.

ತಾಂತ್ರಿಕವಾಗಿ ಹೇಳುವುದಾದರೆ, ಪ್ರಕೃತಾಪ್ರಕೃತಗಳೆರಡಕ್ಕೂ (ಹೋಲಿಕೆ ಮತ್ತು ಹೋಲಿಸಲ್ಪಡುವ ವಸ್ತುಗಳು) ರೋಮಹರ್ಷಕವಾದ ಅಭೇದವನ್ನು ಅನಿರೀಕ್ಷಿತ ವೇಗದಲ್ಲಿ ತಂದಿರಿಸುವ ರೂಪಕದ ಸಾಮರ್ಥ್ಯ ಅವರ್ಣನೀಯ. ಸಾಮಾನ್ಯವಾಗಿ ವ್ಯಾವಾರಿಕಲೋಕದಲ್ಲಿ ಹೋಲಿಕೆಯೇ ಅಷ್ಟಾಗಿ ಕೈಗೆಟುಕದ ಮೌಲ್ಯ. ಏಕೆಂದರೆ ಅನುದಿನದ ಜಗತ್ತು ನಿಂತಿರುವುದೇ ದ್ವೈತಬುದ್ಧಿಯ ಮೇಲೆ. ಇದಕ್ಕಿಂತ ಸ್ವಲ್ಪ ಮೇಲ್ಮಟ್ಟಕ್ಕೇರುವ ಸಾದೃಶ್ಯಸಂವೇದನೆಯು ಅದೊಂದು ರೀತಿಯಲ್ಲಿ ವಿಶಿಷ್ಟಾದ್ವೈತವೆನ್ನಬಹುದು. ರೂಪಕವಾದರೋ ಒಮ್ಮೆಲೇ ಪರಮಾದ್ವೈತಸತ್ತರಕ್ಕೇರುತ್ತದೆ. ಹೀಗಾಗಿ ಇದರ ಪರಿಣಾಮ ದೊಡ್ಡದು.

ಅನುದಿನದ ಸುಷುಪ್ತ್ಯವಸ್ಥೆಯಲ್ಲಿ ಯಾವ ಅಭೇದಾನುಭವದ ಫಲವಾದ ಆನಂದವು ಉದಿಸಿಯೂ ಜಾಗ್ರತ್ತಿನಲ್ಲಿ ನಮ್ಮರಿವಿಗೆ ಬಾರದಂತೆ ಮರೆಯಾಗುವುದೋ, ಅದು ಕ್ಷಣಮಾತ್ರವಾದರೂ ರೂಪಕಾಲಂಕಾರದ ಸಂವೇದನೆಯಲ್ಲಿ ನಮ್ಮೊಳಗೆ ಮಿಂಚಿ ಮಾಯವಾಗುವುದು. ಇಂಥ ಸಂವಿತ್ಸ್ಪಂದವು ವಕ್ರೋಕ್ತಿಪ್ರಪಂಚದ ಭಾಗ್ಯ. ಜೊತೆಗೆ ಸಮಾನಧರ್ಮವೆಂಬುದಿಲ್ಲಿ ಸಂಪೂರ್ಣವಾಗಿ ಧ್ವನಿತವಾಗುವ ಕಾರಣ ಧ್ವನನಶೀಲತೆಯ ಸಾಮರ್ಥ್ಯ ಮಿಗಿಲಾದುದು. ಇದೇ ಆನಂದದ ಮೀಟುಗೋಲೂ ಹೌದು. ಈ ಕಾರಣದಿಂದಲೇ ಪ್ರಾಯಿಕವಾಗಿ ಎಲ್ಲ ರೂಪಕಾಲಂಕಾರಗಳೂ ಗುಣೀಭೂತವ್ಯಂಗ್ಯಗಳೇ. ಇದು ಮಿಕ್ಕ ಅಲಂಕಾರಗಳಿಗೆ ಸುಲಭವಾಗಿ ದಕ್ಕದ ಸಾಮರ್ಥ್ಯ. ರೂಪಕದ ಈ ಶಕ್ತಿಯನ್ನು ಅರಿತೋ ಏನೋ ಪ್ರಾಯಶಃ ಕವಿಗಳೆಲ್ಲ ಮಿಗಿಲಾಗಿ ಇದನ್ನೇ ಆಶ್ರಯಿಸುತ್ತಾರೆ. ಪಾಶ್ಚಾತ್ಯಸಾಹಿತ್ಯಪ್ರಪಂಚದಲ್ಲಿ ರೂಪಕವನ್ನು ಒಂದು ಸ್ವತಂತ್ರಸಾಹಿತ್ಯಮೌಲ್ಯದ ಮಟ್ಟಕ್ಕೇ ಏರಿಸಿದ್ದಾರೆ. ಆದರೆ ಹೀಗೆ ರೂಪಕವನ್ನು ಎಣೆಮೀರಿ ಬಳಸಿದಾಗ ಅದೊಂದು ಬಗೆಯಲ್ಲಿ ದುಂದಿನ ವ್ಯವಹಾರವೂ ಆದೀತು; ಕಾವ್ಯಭಾಷೆಯಲ್ಲಿ ವೈವಿಧ್ಯವೂ ಸೊರಗೀತು. ಏನೇ ಆಗಲಿ, ರೂಪಕದ ಶಕ್ತಿ ಅಪಾರ. ನಮ್ಮ ಆಲಂಕಾರಿಕರು ಇದಕ್ಕೆ ಹೆಚ್ಚಿನ ಮನ್ನಣೆ ಸಲ್ಲಿಸದಿದ್ದರೂ ಹೆಚ್ಚಿನ ಅಂತರ್ದೃಷ್ಟಿಯ ಅಧ್ಯಯನವನ್ನು ಈ ನಿಟ್ಟಿನಲ್ಲಿ ಮಾಡದಿದ್ದರೂ ಕವಿಗಳು ಮಾತ್ರ ತಮಗೆ ಸಹಜವಾಗಿ ಸಿದ್ಧವಿರುವ ಪ್ರತಿಭಾದೃಷ್ಟಿಯ ಕಾರಣ ರೂಪಕದ ಮಹತ್ತ್ವವನ್ನು ಮನಗಂಡು ಅದನ್ನು ಚೆನ್ನಾಗಿಯೇ ದುಡಿಸಿಕೊಂಡು ಬಂದಿದ್ದಾರೆ. ಇಂಥ ಬೆಳವಣಿಗೆಗೆ ಬೇಕಾದ ಬುನಾದಿಯನ್ನು ಹಾಕಿಕೊಟ್ಟವರಲ್ಲಿ ಆದಿಕವಿಗಳ ಸ್ಥಾನ ಅನುಪಮ.

ಇದೀಗ ವಾಲ್ಮೀಕಿಮುನಿಗಳ ಕೆಲವೊಂದು ರೂಪಕಗಳನ್ನು ಪರಿಶೀಲಿಸೋಣ.

ಅಯೋಧ್ಯಾಕಾಂಡದ ರಾಮವನಗಮನದ ಸಂದರ್ಭದಲ್ಲಿ ಅಣ್ಣನನ್ನು ಹಿಂಬಾಲಿಸುವ ಸೌಮಿತ್ರಿಗೆ ತಾಯಿ ಸುಮಿತ್ರೆಯು ಮಾಡಿ ಕಳುಹುವ ಮಂಗಲಾಶಾಸನದಲ್ಲಿ ಹೃದ್ಯವಾದ ರೂಪಕವು ಹುದುಗಿದೆ:

**ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ।**
**ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್॥** (೨.೪೦.೯)

ರಾಮನನ್ನೇ ದಶರಥನೆಂದು ಭಾವಿಸು, ಸೀತೆಯನ್ನೇ ನಾನೆಂದು ಭಾವಿಸು, ಕಾಡನ್ನೇ ನಾಡೆಂದು ಭಾವಿಸು; ಕಂದ, ಹಾಯಾಗಿ ಹೋಗಿ ಬಾ. ಎಂದು ಸರಳವಾಗಿ ಹೇಳುವ ಸುಮಿತ್ರೆಯ ಮಾತಿನಲ್ಲಿ ಅದೆಷ್ಟು ಸಹಜವಾಗಿ ಈ ಅಲಂಕಾರವು ಸಂದಿದೆ! ಆದಿಕವಿಗಳ ಅನೂಹ್ಯ ಸರಳ ಸೌಂದರ್ಯಕ್ಕೂ ಪಾರಿಣಾಮಿಕಭವ್ಯತೆಗೂ ಈ ಶ್ಲೋಕವು ಸಮರ್ಥ ದೃಷ್ಟಾಂತ.

ಪ್ರಾಯಶಃ ಸಾವಯವ ರೂಪಕಾಲಂಕಾರಕ್ಕೆ ಆದಿಕವಿಗಳೇ ಆದ್ಯಾಯತನ. ರಾಮಾಯಣದಲ್ಲಿ ಇಂಥ ಹಲವು ರಚನೆಗಳಿವೆ. ಅವುಗಳ ಪೈಕಿ ದಶರಥವಿಲಾಪ ಕಾಲದಲ್ಲಿ ಹೊಮ್ಮಿರುವ ಶೋಕ ಸಾಗರದ ಸಮಗ್ರರೂಪಕವು ಹೃದಯಸ್ಪರ್ಶಿ. ಇಲ್ಲಿ ಪುತ್ರವಿಯೋಗವಿಹ್ವಲನಾದ ಅಸಹಾಯಕರಾಜನು ತಾನು ಈಜಲಾಗದೆ ಮುಳುಗುತ್ತಿರುವ ಶೋಕಕಸಮುದ್ರದ ಸೆಳವೇ ರಾಮವಿಯೋಗ, ಕುಸಿಯುವ ದಡವೇ ಸೀತಾವಿಯೋಗ, ಸಂಕಟದ ನಿಟ್ಟುಸಿರೇ ತೆರೆಸುಳಿಗಳು, ಕಣ್ಣೀರೇ ನೊರೆ, ಅಸಹಾಯಕತೆಯಿಂದ ಕೈಚೆಲ್ಲುವುದೇ ಜಲಚರಸಂಚಾರ, ವ್ಯಾಕುಲತೆಯ ಹಾಹಾಕಾರವೇ ಸಾಗರಘೋಷ, ದಿಕ್ಕೆಟ್ಟು ಕೆದರಿದ ತಲೆಗೂದಲೇ ಶೈವಲ, ಕುಟಿಲೆ ಕೈಕೇಯಿಯ ತಂತ್ರವೇ ಬಡವಾಗ್ನಿ, ಕುಬ್ಜೆ ಮಂಥರೆಯ ಮಸಲತ್ತೇ ಮೊಸಳೆ, ಸಂತಾಪಾಶ್ರುವೇ ಲವಣೋದಕವೆಂದು ಪರಿಪರಿಯಾಗಿ ಹಲುಬುತ್ತಾನೆ:

**ರಾಮಶೋಕಮಹಾವೇಗಃ ಸೀತಾವಿರಹಪಾರಗಃ ।** (೨.೫೯.೩೩)

**ಶ್ವಸಿತೋರ್ಮಿಮಹಾವರ್ತೋ ಬಾಷ್ಪಫೇನಜಲಾವಿಲಃ ।**
**ಬಾಹುವಿಕ್ಷೇಪಮೀನೌಘೋ ವಿಕ್ರಂದಿತಮಹಾಸ್ವನಃ ॥** (೨.೫೯.೩೪)

**ಪ್ರಕೀರ್ಣಕೇಶಶೈವಾಲಃ ಕೈಕೇಯೀವಡವಾಮುಖಃ ।**
**ಮಮಾಶ್ರುವೇಗಪ್ರಭವಃ ಕುಬ್ಜಾವಾಕ್ಯಮಹಾಗ್ರಹಃ ॥** (೨.೫೯.೩೫)

ಕವಿನಿಬದ್ಧಪ್ರೌಢೋಕ್ತಿಯಾಗಿರುವ ಈ ಭಾಗವು ಕವಿಪ್ರೌಢೋಕ್ತಿಯಾಗಿದ್ದಲ್ಲಿ ಮತ್ತೂ ಔಚಿತ್ಯವಿರುತ್ತಿತ್ತು. ಏಕೆಂದರೆ ದುಃಖದಲಿತನಾಗಿದ್ದ ದಶರಥನು

ಇಷ್ಟು ವ್ಯವಸ್ಥಿತವಾದ ಸಾವಯವರೂಪಕಪ್ರಪಂಚವನ್ನು ತೆರೆದಿಡುವುದು ಅಷ್ಟಾಗಿ ಸಂಭಾವ್ಯವೆನಿಸದು.

ವಾಲ್ಮೀಕಿಮುನಿಗಳು ಕೆಲವೊಮ್ಮೆ ಶಬ್ದವನ್ನನುಸರಿಸಿ ಅರ್ಥಾಲಂಕಾರವನ್ನು ರೂಪಿಸುವುದುಂಟು. ಇದು ಬಲುಮಟ್ಟಿಗೆ ವಿರಳವೇ. ಆದರೆ ಸಾಮಾನ್ಯವಾಗಿ ಸತ್ಕವಿಲೋಕವು ರೂಪಕನಿರ್ಮಾಣಕಾಲದಲ್ಲಿ ಇಂಥ ಜಾಡನ್ನು ಅನುಸರಿಸುತ್ತದೆ. ಪ್ರಕೃತಾಪ್ರಕೃತವಸ್ತುಗಳ ವಾಚಕಗಳಲ್ಲಿ ವರ್ಣಮೈತ್ರಿಯೊದಗಿದಾಗ ಅರ್ಥಾಲಂಕಾರವೆನಿಸಿದ ರೂಪಕದಲ್ಲಿ ಅದೊಂದು ಬಗೆಯ ಶಬ್ದಾಲಂಕಾರಸ್ವಾರಸ್ಯವೂ ಮೈದುಂಬಿಕೊಂಡು ಇಡಿಯ ಬಂಧವು ಅತಿಶಯಿಸುತ್ತದೆ. ಅಂಥ ಒಂದು ಅಡಕವಾದ ರೂಪಕಃ **ವ್ಯಸನವಾಗುರಾ** (೩.೬೭.೨೭). ರಾವಣನ ಸೆರೆಗೆ ಸಿಲುಕಿದ ಸೀತೆಯು ತನ್ನನ್ನು ರಕ್ಷಿಸಲು ಬಂದು ಗತಾಯುವಾದ ಜಟಾಯುವನ್ನು ಕಂಡು ದುಃಖಿಸುತ್ತಾ ತಾನೀಗ ಭೀಕರಸಂಕಟದ ಬಲೆಯಲ್ಲಿ ಸಿಲುಕಿದೆನೆಂದು ಹಳಹಳಿಸುತ್ತಾಳೆ. ಸಾಮಾನ್ಯವಾಗಿ ಬಲೆಗೆ ಸಿಲುಕುವ ಹಕ್ಕಿಗಳಿಗೆ ಬದಲಾಗಿ, ತನಗಾಗಿ ಬಲಿಯಾದ ಹಕ್ಕಿಗಿಂತ ಮಿಗಿಲಾಗಿ ತಾನೇ ಬಲೆಗೆ ಬಿದ್ದೆನೆಂದು ಸೀತೆಯು ಭಾವಿಸುವಲ್ಲಿ ಈ ರೂಪಕದ ಔಚಿತ್ಯ ನಿರತಿಶಯವಾಗಿದೆ. ಅಲ್ಲದೆ ಕವಿನಿಬದ್ಧಪ್ರೌಢೋಕ್ತಿಯಾಗಿ ಹೊಮ್ಮಿದ ಈ ಸೊಲ್ಲಿನ ಅಂದ-ಅಡಕಗಳೂ ಮೆಚ್ಚುವಂತಿವೆ.

ಕಿಷ್ಕಿಂಧಾಕಾಂಡದಲ್ಲಿ ಬರುವ ಒಂದು ರೂಪಕವು ತನ್ನ ವಿನೂತನತೆಯ ಕಾರಣ ಸ್ಮರಣೀಯವಾಗಿದೆ. ತಾರೆಯು ವಾಲಿಗೆ ಸುಗ್ರೀವನಲ್ಲಿ ವೈರವು ಸಲ್ಲದೆಂದು ಹಿತವನ್ನು ಹೇಳುವಾಗ ಶ್ರೀರಾಮನನ್ನು ವರ್ಣಿಸುತ್ತಾಳೆ. ಆತನ ಗುಣಗಳನ್ನು ಗಣಿಸುವಾಗ ಅವನು ಸಜ್ಜನರಿಗೆ ಆಶ್ರಯತರುವೆಂದು ಹೃದಯಂಗಮವಾಗಿ ಹೆಸರಿಸುತ್ತಾಳೆ: **ನಿವಾಸವೃಕ್ಷಃ ಸಾಧೂನಾಮ್** (೪.೧೫.೧೯) ಇಲ್ಲಿ ಸಜ್ಜನರೇ ಹಕ್ಕಿಗಳೆಂಬ ಧ್ವನಿಯು ಸಹಜವಾಗಿ ಉನ್ಮೀಲಿಸುತ್ತದೆ. ಸಾಹಿತ್ಯಪ್ರಪಂಚದಲ್ಲಿ ಮುಂದೆ "ನಿವಾಸವೃಕ್ಷ"ವೆಂಬ ರೂಪಕವು ವ್ಯಾಪಕವಾಗಿ ಬೆಳೆದುಬಂದದ್ದನ್ನಿಲ್ಲಿ ನೆನೆಯಬಹುದು.

ರಾಮನ ಬಾಣಕ್ಕೆ ತುತ್ತಾದ ವಾಲಿಯು ಆತನನ್ನು ಪರಿಪರಿಯಾಗಿ ನಿಂದಿಸುವಾಗ ತಾನು ಧರ್ಮವೆಂಬ ಅಂಕುಶವಿಲ್ಲದ ರಾಮನೆಂಬ ಮತ್ತಮಾತಂಗದಿಂದ ತುಳಿಯಲ್ಪಟ್ಟೆನೆಂಬ ಆಕ್ಷೇಪವನ್ನು ಮಾಡುತ್ತಾನೆ:

**ತ್ಯಕ್ತಧರ್ಮಾಂಕುಶೇನಾಹಂ ನಿಹತೋ ರಾಮಹಸ್ತಿನಾ ।** (೪.೧೭.೪೩)

ಇದರ ಸೌಂದರ್ಯ-ಸ್ವಾರಸ್ಯಗಳು ಸ್ವಯಂವೇದ್ಯ. ವಿಶೇಷತಃ ದೋಷಿಯು ದಂಡನೆಗೆ ತುತ್ತಾದಾಗ ಅಸಹಾಯಕತೆಯಿಂದ ಕನಲಿ ಆಕ್ರೋಶಿಸುವ ಹಿನ್ನೆಲೆಯಲ್ಲಿ ಈ ಮಾತು ಮತ್ತೂ ಮನೋಗ್ರಾಹಿ.

ಸೋದರನ ವಧೆಯ ಬಳಿಕ ಸುಗ್ರೀವನು ಪಶ್ಚಾತ್ತಾಪದಿಂದ ವ್ಯಥಿಸುವಾಗ ಅವನ ಬಾಯಲ್ಲಿ ವಾಲ್ಮೀಕಿಮುನಿಗಳು ಸಾವಯವರೂಪಕಪ್ರಧಾನವಾದ ಶ್ಲೋಕವೊಂದನ್ನು ಹೇಳಿಸುತ್ತಾರೆ. ಇದು ಕವಿಪ್ರೌಢೋಕ್ತಿಯಾಗಿದ್ದಲ್ಲಿ ಮತ್ತೂ ನೈಜತೆಯಿಂದ ಸೊಗಯಿಸುತ್ತಿತ್ತು. ಆದರೂ ಇಲ್ಲಿಯ ಚಿತ್ರಣ ಪರಿಣಾಮರಮಣೀಯ:

**ಸೋದರ್ಯಘಾತಾಪರಗಾತ್ರವಾಲಃ**
**ಸಂತಾಪಹಸ್ತಾಕ್ಷಿಶಿರೋವಿಷಾಣಃ ।**
**ಏನೋಮಯೋ ಮಾಮಭಿಹಂತಿ ಹಸ್ತೀ**
**ದೃಪ್ತೋ ನದೀಕೂಲಮಿವ ಪ್ರವೃದ್ಧಃ ॥** (೪.೨೪.೧೭)

ಅಣ್ಣನ ಸಾವಾಗಿ ಮೈದಳೆದು, ಸಂಕಟವೆಂಬ ಸೊಂಡಿಲು-ದಂತಗಳನ್ನು ಹೊಂದಿ, ನನ್ನ ಪಾತಕವೆಂಬ ಮದ್ದಾನೆಯು ನನ್ನನ್ನು ನದೀತೀರವನ್ನು ಕೆಡಹುವಂತೆ ತಿವಿಯುತ್ತಿದೆಯೆಂದು ಸುಗ್ರೀವನು ಶೋಕಿಸುತ್ತಾನೆ.

ಇಲ್ಲಿ ಕಡೆಯ ಪಾದವು ಉಪಮೆಯೆಂಬಂತೆ ತೋರಿದರೂ ಪಾತಕಹಸ್ತಿಯ ಸಾವಯವರೂಪಕವೇ ಪ್ರಧಾನವಾಗಿ ಸ್ಫುರಿಸುವ ಕಾರಣ ಇದನ್ನು ಉಪಮೆಯ ವಲಯಕ್ಕೆ ಸೇರಿಸಿಲ್ಲ.

ಯುದ್ಧಕಾಂಡದಲ್ಲಿ ರೂಪಕಾಲಂಕಾರವು ಸಾವಯವರೂಪಕರೂಪದಿಂದ ಹಲವು ಕಡೆ ವ್ಯಾಪಿಸಿಕೊಂಡಿದೆ. ಇದು ವಾಲ್ಮೀಕಿಗಳ ಪ್ರಿಯಪಥವೆಂದೂ ಹೇಳಬಹುದು. ಅಲ್ಲಿಯ ಕೆಲವು ಶ್ಲೋಕಗಳನ್ನು ಮನನಿಸೋಣ:

**ಧನುರ್ಜ್ಯಾತಂತ್ರಿಮಧುರಂ ಹಿಕ್ಕಾತಾಲಸಮನ್ವಿತಮ್ ।**
**ಮಂದಸ್ತನಿತಸಂಗೀತಂ ಯುದ್ಧಗಾಂಧರ್ವಮಾಬಭೌ ॥** (೬.೫೨.೨೫)

ಲಂಕಾಸಂಗ್ರಾಮವು ಮೊದಲಾದಾಗ ವಾನರವೀರರ ಅಬ್ಬರಕ್ಕೆ ತಬ್ಬಿಬ್ಬಾದ ಅಸುರಸೇನೆಯು ತನ್ನ ಪ್ರತಿರೋಧವನ್ನು ತುಮ್ಬ ತಗ್ಗಿಸಿಕೊಂಡಿತು. ಆಗ ಅವರ ಬಿಲ್ಲಿನ ಹೆದೆಗಳ ಮೀಟು ತಂತ್ರೀವಾದ್ಯಕೋಮಲವಾದುವು, ಭಯದ ಬಿಕ್ಕಳಿಕೆಗವೇ ತಾಲಾಸ್ಫಾಲಕ್ಕೆ ಸಂವಾದಿಯೆನಿಸದುವು, ಅಂಜಿಕೆಯ ಪಿಸುಗುಟ್ಟುವಿಕೆಯೇ ಮಂದ್ರಸ್ಥಾಯಿಯ ಮೆಲ್ಲುಲಿಯಾಯಿತು. ಹೀಗೆ ವಾನರವೀರರ ಮುಂದೆ ರಾಕ್ಷಸವೀರರ ಯುದ್ಧ ಸಂಗೀತದಂತಾಯಿತು. ರಣರಂಗದಲ್ಲಿಯೂ ರಸರಂಗದ ಪ್ರಸ್ತಾವವನ್ನು ಸಂದರ್ಭಶುದ್ಧಿಗೆ ಚ್ಯುತಿಯಿಲ್ಲದೆ ತಂದ ಆದಿಕವಿಗಳ ಚಾತುರ್ಯ ಪ್ರೇಕ್ಷಣೀಯ.

ಪ್ರಹಸ್ತವಧೆಯ ಸಂದರ್ಭದಲ್ಲಿ ಸಾಗಿದ ಭೀಕರಸಂಗ್ರಾಮವನ್ನು ಆದಿಕವಿಗಳು ಮೈ-ಮನಗಳು ಜುಮುಗುಟ್ಟುವಂತೆ ವರ್ಣಿಸಿದ್ದಾರೆ. ಇಲ್ಲಿಯ ರಣತರಂಗಿಣಿಯ ಸಾವಯವರೂಪಕವಂತೂ ಅವಿಸ್ಮರಣೀಯ:

**ಹತವೀರೌಘವಪ್ರಾಂ ತು ಭಗ್ನಾಯುಧಮಹಾದ್ರುಮಾಮ್ ।**
**ಶೋಣಿತೌಘಮಹಾತೋಯಾಂ ಯಮಸಾಗರಗಾಮಿನೀಮ್ ॥**

**ಯಕೃತ್ಪ್ಲೀಹಮಹಾಪಂಕಾಂ ವಿನಿಕೀರ್ಣಾಂತ್ರಶೈವಲಾಮ್ ।**
**ಭಿನ್ನಕಾಯಶಿರೋಮೀನಾಮಂಗಾವಯವಶಾದ್ವಲಾಮ್ ॥**

**ಗೃಧ್ರಹಂಸಗಣಾಕೀರ್ಣಾಂ ಕಂಕಸಾರಸಸೇವಿತಾಮ್ ।**
**ಮೇದಃಫೇನಸಮಾಕೀರ್ಣಾಮಾರ್ತಸ್ತನಿತನಿಸ್ಸ್ವನಾಮ್ ॥**

**ತಾಂ ಕಾಪುರುಷದುಸ್ತಾರಾಂ ಯುದ್ಧಭೂಮಿಮಯೀಂ ನದೀಮ್।**
**ರಾಕ್ಷಸಾಃ ಕಪಿಮುಖ್ಯಾಶ್ಚ ತೇರುಸ್ತಾಂ ದುಸ್ತರಾಂ ನದೀಮ್ ॥**
(೬.೫೮.೨೯-೩೩)

ಮೃತವೀರರೆಂಬ ದಡಗಳಿಂದ, ಮುರಿದ ಕೈದುಗಳೆಂಬ ತೇಲಿಬರುವ ಮರಗಳಿಂದ, ರಕ್ತಪ್ರವಾಹದಿಂದ, ಪಿತ್ತಕೋಶ-ಮೇದೋಜೀರಕಗಳೆಂಬ ಕೆಸರಿನಿಂದ, ಚೆಲ್ಲಾಪಿಲ್ಲಿಯಾದ ಕರುಳೆಂಬ ಪಾಚಿಯಿಂದ, ಕತ್ತರಿಸಲ್ಪಟ್ಟ ಕೈ-ಕಾಲುಗಳೆಂಬ ಮೀನುಗಳಿಂದ, ಹಾರಿಬರುವ ಹದ್ದುಗಳೆಂಬ ಹಂಸಗಳಿಂದ, ರಣಹದ್ದುಗಳೆಂಬ ಕೊಕ್ಕರೆಗಳಿಂದ, ಕೊಬ್ಬೆಂಬ ನೊರೆಯಿಂದ, ಚೀತ್ಕಾರವೆಂಬ ಮೊರೆತದಿಂದ ಭೀಕರವಾದ ಸಂಗ್ರಾಮಸ್ರವಂತಿಯನ್ನು ಹೇಡಿಗಳು ದಾಟಲಾರರು. ಅದು ಹೇಗೋ ಕಪಿ-ರಾಕ್ಷಸವೀರರು ಅದನ್ನು ದಾಟಿದರು ।

ಶ್ರೀರಾಮನೇ ಅಪ್ರತಿಮಪರಾಕ್ರಮದಿಂದ ಹೋರಾಡುತ್ತಿರುವಾಗ ಆತನ ವೀರವಿಹಾರವು ಕಾಲಚಕ್ರಸದೃಶವಾಗಿ ವೈರಿಗಳ ಪಾಲಿಗೆ ತೋರಿತಂತೆ. ಇದನ್ನು ಆದಿಕವಿಗಳು ಸಾವಯವರೂಪಕವಾಗಿ ಹೀಗೆ ವರ್ಣಿಸಿದ್ದಾರೆ:

**ಶರೀರನಾಭಿ ಸತ್ತ್ವಾರ್ಚಿಃ ಶರಾರಂ ನೇಮಿಕಾರ್ಮುಕಮ್।**
**ಜ್ಯಾಘೋಷತಲನಿರ್ಘೋಷಂ ತೇಜೋಬುದ್ಧಿಗುಣಪ್ರಭಮ್ ॥**
(೫.೧೪.೧೫)

**ದಿವ್ಯಾಸ್ತ್ರಗುಣಪರ್ಯಂತಂ ನಿಘ್ನಂತಂ ಯುಧಿ ರಾಕ್ಷಸಾನ್ ।**
**ದದೃಶೂ ರಾಮಚಕ್ರಂ ತತ್ಕಾಲಚಕ್ರಮಿವ ಪ್ರಜಾಃ ॥** (೬.೯೭.೨೯-೩೦)

ರಾಮಚಕ್ರಕ್ಕೆ ಅವನ ಒಡಲೇ ಕೇಂದ್ರವಾಗಿತ್ತು, ಬಾಣಗಳೇ ಅರಗಳಾಗಿದ್ದವು, ಬಿಲ್ಲೇ ನೇಮಿಯಾಗಿತ್ತು, ಬಲವೇ ಬೆಂಕಿಯಾಗಿತ್ತು, ಬಿಲ್ಲಿನ ಹೆದೆಯ ಸದ್ದೇ ಚಕ್ರಚೀತ್ಕೃತಿಯಾಗಿತ್ತು, ಆತನ ಬುದ್ಧಿಪರಾಕ್ರಮಗಳೇ ಪ್ರಭೆಗಳಾಗಿದ್ದುವು.

ರಾವಣಸಂಹಾರದ ಬಳಿಕ ವಿಭೀಷಣನು ವಿಲಪಿಸುತ್ತಾ ಅಣ್ಣನ ಗುಣಗಳನ್ನು ಕೊಂಡಾಡುವಾಗ ಮಹರ್ಷಿಗಳು ಸಾವಯವರೂಪಕಗಳ ಪ್ರಪಂಚವನ್ನೇ ಸೃಷ್ಟಿಸಿದ್ದಾರೆ: ಧೈರ್ಯವೆಂಬ ಚಿಗುರನ್ನು, ಛಲವೆಂಬ ಹೂಗಳನ್ನು, ತಪಸ್ಸೆಂಬ ದಾರ್ಢ್ಯವನ್ನು, ಶೌರ್ಯವೆಂಬ ಬೇರನ್ನು ತಳೆದು ಬೆಳೆದ ರಾಕ್ಷಸರಾಜವೃಕ್ಷವನ್ನು ರಾಘವಮಾರುತವು ಮುರಿದುಹಾಕಿತು; ಪರಾಕ್ರಮದಂತವನ್ನು, ಅನುಗ್ರಹಶುಂಡವನ್ನು, ಸತ್ಕುಲೀನತೆಯೆಂಬ ಪೂರ್ವಕಾಯವನ್ನು, ಕೋಪವೆಂಬ ಅಪರಗಾತ್ರವನ್ನು ತಳೆದ ರಾವಣಮಾತಂಗವು ರಾಮಸಿಂಹದಿಂದ ಸಿಗಿದುಹೋಯಿತು; ಪರಾಕ್ರಮಜ್ವಾಲೆಯಿಂದ ನಿಶ್ವಾಸಧೂಮದಿಂದ, ಪ್ರಾಬಲ್ಯಪ್ರತಾಪದಿಂದ ಬೆಳಗುತ್ತಿದ್ದ ರಾವಣಾಗ್ನಿಯು ರಾಮಜಲಧರದ ಮಳೆಯಿಂದ

ಆರಿಹೋಯಿತು; ಸೇನಾಶೃಂಗವನ್ನು ತಳೆದು ಚಾಪಲ್ಯವೆಂಬ ಕಿವಿ-ಕಣ್ಣುಗಳಿಂದ ಕೂಡಿದ ವೈರಿಭೀಕರವಾದ ರಾವಣವೃಷಭವನ್ನು ರಾಮಶಾರ್ದೂಲವು ಕೊಂದುಹಾಕಿತು(೬.೧೧೨.೧೦-೧೩) ಹೀಗೆ ಸಾಗುವ ಅಸಂಖ್ಯರೂಪಕಪರಂಪರೆಯು ಪ್ರತಿಯೊಂದು ಹಂತದಲ್ಲಿಯೂ ಸಮಗ್ರಚಿತ್ರಣವನ್ನು ಕೊಡುತ್ತದೆ. ಇದರ ವಿಸ್ತಾರವನ್ನೇ ಗ್ರೀಕರ ಆದಿಕವಿ ಹೋಮರನ "ಮಹೋಪಮೆ"ಯೆಂದು ಹೆಸರಾದ ಹೋಲಿಕೆಗಳಲ್ಲಿ ಕಾಣಬಹುದು.

ಹೀಗೆ ರಾಮಾಯಣದ ರೂಪಕಗಳು ಮನಮುಟ್ಟುವಂತೆ ರಚಿತವಾಗಿವೆ.

**ದೃಷ್ಟಾಂತವು** ಔಪಮ್ಯಪ್ರಕಾರದ ಅಲಂಕಾಗಳಲ್ಲೊಂದು. ಹೋಲಿಸುವ ಮತ್ತು ಹೋಲಿಸಲ್ಪಡುವ ವಸ್ತುಗಳ ನಡುವೆ ಬಿಂಬ-ಪ್ರತಿಬಿಂಬಭಾವವು ರೂಪುಗೊಂಡಲ್ಲಿ ಈ ಅಲಂಕಾರವು ಸಿದ್ಧ. ಇದು ಬಲುಮಟ್ಟಿಗೆ ಉಪಮೆಯಂತೆಯೇ ಹೌದು. ಆದರೆ ಪ್ರಸ್ಫುಟವಾದ ಎರಡು ಸದೃಶಚಿತ್ರಗಳನ್ನು ನಮ್ಮೆದುರು ನೀಡುವ ಕಾರಣ ಇದಕ್ಕೊಂದು ಬಗೆಯ ವ್ಯಕ್ತಿತ್ವವುಂಟು. ಆದರೆ ಇಂಥ ಪ್ರಸ್ಫುಟೀಕರಣಪ್ರಯತ್ನವು ಕೆಲಮಟ್ಟಿಗೆ ವಾಚ್ಯತೆಯನ್ನುಂಟುಮಾಡುವ ಕಾರಣ ಉಪಮೆಯಲ್ಲಿರುವ ಗಮ್ಯಾರ್ಥಗಳಿಗಿಲ್ಲಿ ಅವಕಾಶವಿಲ್ಲ. ಆದುದರಿಂದಲೇ ಈ ಅಲಂಕಾರವನ್ನು ನೀತಿ-ತತ್ತ್ವ-ಉಪದೇಶಾದಿಗಳಿಗೆ ಹೆಚ್ಚಾಗಿ ವಿನಿಯೋಗಿಸುವುದುಂಟು. ಅಪ್ಪಟ ಕಾವ್ಯವಾದ ರಾಮಾಯಣದಲ್ಲಿ ದೃಷ್ಟಾಂತಾಲಂಕಾರದ ಪ್ರಾಚುರ್ಯ ನಿರೀಕ್ಷಿತರೀತಿಯಲ್ಲಿಯೇ ಅತ್ಯಲ್ಪ. ಇಂಥ ಕೆಲವೊಂದು ಸುಂದರಸೂಕ್ತಿಗಳನ್ನು ಪರಾಂಬರಿಸೋಣ:

**ತ್ಯಕ್ತಭೋಗಸ್ಯ ಮೇ ರಾಜನ್ ವನೇ ವನ್ಯೇನ ಜೀವತಃ ।**
**ಕಿಂ ಕಾರ್ಯಮನುಯಾತ್ರೇಣ ತ್ಯಕ್ತಸಂಗಸ್ಯ ಸರ್ವತಃ ॥**

**ಯೋ ಹಿ ದತ್ತ್ವಾ ಗಜಶ್ರೇಷ್ಠಂ ಕಕ್ಷ್ಯಾಯಾಂ ಕುರುತೇ ಮನಃ ।**
**ರಜ್ಜುಸ್ನೇಹೇನ ಕಿಂ ತಸ್ಯ ತ್ಯಜತಃ ಕುಂಜರೋತ್ತಮಮ್ ॥** (೨.೩೭.೨-೩)

ಕಾಡಿಗೆ ಹೊರಟ ರಾಮನ ಹಿಂದೆ ಸೈನ್ಯವೂ ಸೇವಕವರ್ಗವೂ ಸಾಗಲೆಂಬ ದಶರಥನ ಮಾತಿಗೆ ರಾಮನು ಒಪ್ಪದೆ ಹೀಗೆನ್ನುತ್ತಾನೆ: ರಾಜ್ಯಭೋಗವನ್ನೇ ವರ್ಜಿಸಿ ವಾನಪ್ರಸ್ಥವ್ರತವನ್ನು ಕೈಗೊಂಡು ಕಾಡಿಗೆ ಸಾಗಲಿರುವ ನನಗೆ ಈ ಹಿಂಬಾಲಕರ ಕೋಲಾಹಲವೇಕೆ? ಆನೆಯನ್ನೇ ಬಿಟ್ಟುಕೊಟ್ಟಮೇಲೆ ಅದನ್ನು ಕಟ್ಟುವ ಹಗ್ಗವನ್ನು ಹಿಡಿತಿಟ್ಟುಕೊಳ್ಳುವ ಹೊಲಬೇ?

**ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ ।**
**ಸಮೇತ್ಯ ಚ ವ್ಯಪೇಯಾತಾಂ ತದ್ವದ್ಭೂತಸಮಾಗಮಃ ॥** (೨.೧೦೫-೨೬)

ಹೇಗೆ ಮಹಾಸಾಗರದಲ್ಲಿ ಬಿದ್ದ ಮರದ ತುಂಡುಗಳು ಅಲೆಗಳ ಹೊಡೆತಕ್ಕೆ ಸಿಲುಕಿ ಆಕಸ್ಮಿಕವಾಗಿ ಹತ್ತಿರ ಬಂದು ಅಷ್ಟೇ ಆಕಸ್ಮಿಕವಾಗಿ ದೂರವೂ ಸಾಗುತ್ತವೆಯೋ ಹಾಗೆಯೇ ಜೀವ-ಜೀವಗಳ ಸಂಗಮ-ವಿಗಮಗಳೂ ಜಗತ್ತಿನಲ್ಲಿ ಯಾದೃಚ್ಛಿಕ. ಈ ಒಂದು ದೃಷ್ಟಾಂತದ ಭಯಾನಕವಾಸ್ತವ ನಿಜಕ್ಕೂ ನಮ್ಮನ್ನು ತಲ್ಲಣಗೊಳಿಸುತ್ತದೆ. ಇಲ್ಲಿ ಅಲಂಕಾರವೊಂದು ಜೀವನದ ವಿಕಟರಹಸ್ಯವನ್ನೇ ಬಯಲುಮಾಡುವ ದಾರ್ಶನಿಕಸೂಕ್ತಿಯ ಮಟ್ಟಕ್ಕೇರಿರುವುದು ಗಮನಾರ್ಹ.

* * *

**ನಿದರ್ಶನಾಲಂಕಾರವು** ದೃಷ್ಟಾಂತಕ್ಕೆ ನಿಕಟಬಂಧು. ಇದು ಪ್ರಕೃತಾಪ್ರಕೃತಗಳನ್ನು ನಿರೂಪಿಸುವ ವಾಕ್ಯವಿನ್ಯಾಸದಲ್ಲಿ ಸಾಮ್ಯವನ್ನು ಹೊಂದಿರುವಂಥದ್ದು. ಇಲ್ಲಿಯೂ ವಾಚ್ಯತಾಂಶದ ಹೆಚ್ಚಳವುಂಟು. ಆದುದರಿಂದಲೇ ಉಪದೇಶಪರವಾದ ಸಂದರ್ಭಗಳಲ್ಲಿ ಇದಕ್ಕೆ ಮಿಗಿಲಾದ ಅವಕಾಶ. ಅಂಥ ಒಂದು ಹಿತಕಥನದ ಸನ್ನಿವೇಶವನ್ನು ಅರಣ್ಯಕಾಂಡದಲ್ಲಿ ಗಮನಿಸಬಹುದು. ರಾವಣನು ಸೀತೆಯನ್ನು ಕದ್ದೊಯ್ಯಲು ಮುಂದಾದಾಗ ಆಕೆಯು ಅವನಿಗೆ ಈ ದುಷ್ಕಾರ್ಯದ ಪರಿಣಮರೌದ್ರತೆಯನ್ನು ನಿದರ್ಶನಮಾಲೆಯ ಮೂಲಕ ಮನಮುಟ್ಟಿಸಿ ಎಚ್ಚರಿಸುವ ಪರಿ ಪರಿಶೀಲನೀಯ:

**ಆಶೀವಿಷಸ್ಯ ವದನಾದ್ದಂಷ್ಟ್ರಾಮಾದಾತುಮಿಚ್ಛಸಿ ।** (೩.೪೭.೩೯)
**ಮಂದರಂ ಪರ್ವತಶ್ರೇಷ್ಠಂ ಪಾಣಿನಾ ಹರ್ತುಮಿಚ್ಛಸಿ ।**
**ಕಾಲಕೂಟಂ ವಿಷಂ ಪೀತ್ವಾ ಸ್ವಸ್ತಿಮಾನ್ ಗಂತುಮಿಚ್ಛಸಿ ॥** (೩.೪೭.೪೦)
**ಅಕ್ಷಿ ಸೂಚ್ಯಾ ಪರಿಮೃಜಸಿ ಜಿಹ್ವಯಾ ಲೇಢಿ ಚ ಕ್ಷುರಮ್ ।** (೩.೪೭.೪೧)

**ಅವಸಜ್ಯ ಶಿಲಾಂ ಕಂಠೇ ಸಮುದ್ರಂ ತರ್ತುಮಿಚ್ಛಸಿ ।**
**ಸೂರ್ಯಾಚಂದ್ರಮಸೌ ಚೋಭೌ ಪಾಣಿಭ್ಯಾಂ ಹರ್ತುಮಿಚ್ಛಸಿ ॥**
(೩.೪೭.೪೨)
**ಅಗ್ನಿಂ ಪ್ರಜ್ವಲಿತಂ ದೃಷ್ಟ್ವಾ ವಸ್ತ್ರೇಣಾಹರ್ತುಮಿಚ್ಛಸಿ ।** (೩.೪೭.೪೩)

ರಾಮನ ಪ್ರಿಯಪತ್ನಿಯಾದ ಸೀತೆಯನ್ನು ಅಪಹರಿಸಲೆಳಸುವುದೆಂದರೆ ಘೋರಸರ್ಪದ ಕೋರೆಗಳನ್ನು ಕೀಳಲೆಳಸಿದಂತೆ, ಮಂದರಪರ್ವತವನ್ನು ಕೈಯಿಂದ ಕಸಿಯಲು ಬಯಸಿದಂತೆ, ಕಾಲಕೂಟವವಿಷವನ್ನೂ ಕುಡಿದು ಸ್ವಸ್ಥವಾಗಿ ಬದುಕಲು ಬಯಸಿದಂತೆ, ಸೂಜಿಯಿಂದ ಕಣ್ಣನ್ನು ಸವರಿಕೊಂಡಂತೆ, ಕತ್ತಿಯಲಗನ್ನು ನೆಕ್ಕಿ ನಲಿದಂತೆ, ಕೊರಳಿಗೆ ಬಂಡೆಯನ್ನು ಕಟ್ಟಿಕೊಂಡು ಕಡಲಿಗೆ ಬಿದ್ದು ಈಜಲೆಳಸಿದಂತೆ, ರವಿ–ಶಶಿಗಳನ್ನು ಇರ್ಕೈಗಳಿಂದಲೂ ಕವರಿಕೊಳ್ಳಲು ಬಯಸಿದಂತೆ, ಧಗಧಗಿಸುವ ಬೆಂಕಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡೊಯ್ಯಲು ಯತ್ನಿಸಿದಂತೆ....

ಈ ಮಾಲಾನಿದರ್ಶನದಲ್ಲಿ ಸೀತೆಯ ಕೋಪ, ಕಳವಳ, ಧಾವಂತ, ಆತ್ಮವಿಶ್ವಾಸಗಳೆಲ್ಲ ಅಹಮಹಮಿಕೆಯಾಗಿ ಹೊಮ್ಮುತ್ತಿರುವುದನ್ನು ಕಾಣಬಹುದು. ಹೀಗೆ ಪುಂಖಾನುಪುಂಖವಾಗಿ ನಿದರ್ಶನಗಳ ಮೂಲಕ ಎಚ್ಚರ ನೀಡುವುದು ಸಂದರ್ಭಸಹಜವೂ ಹೌದು. ಇದು ಯಾವುದೇ ರೀತಿಯಲ್ಲಿ ಅಲಂಕಾರಾಧಿಕ್ಯವೆಂದು ತೋರುವುದಿಲ್ಲ. ಅಲ್ಲದೆ ನಿದರ್ಶನಗಳ ನೈಜತೆಯೂ ಪದ್ಯಫಣಿತಿಯ ಧಾರಾಶುದ್ಧಿಯೂ ಇಲ್ಲಿ ಮತ್ತಷ್ಟು ಸಹಕಾರಿಗಳಾಗಿವೆ.

ಇಂದ್ರಜಿತ್ ಮತ್ತು ಲಕ್ಷ್ಮಣರ ನಡುವಣ ಘೋರಸಂಗ್ರಾಮಕಾಲದಲ್ಲಿ ವಿಭೀಷಣನು ಕಪಿಸೈನ್ಯವನ್ನು ಪ್ರೋತ್ಸಾಹಗೊಳಿಸುತ್ತಾ ಈವರೆಗೆ ಎಂಥೆಂಥ ರಾಕ್ಷಸರನ್ನೆಲ್ಲ ಕೊಂದು ವಿಜೃಂಭಿಸಿದ ನಿಮಗೆ ಈ ಒಂದು ಯುದ್ಧವು ಲೆಕ್ಕವೇ? ಸಾಗರವನ್ನೇ ಈಜಿ ದಾಟಿದವರಿಗೆ ಇದೊಂದು ಗೋಷ್ಪಾದಮಾತ್ರದ ತಾಣವು ಹಿರಿದೇ? ಎಂದು ಹೇಳುವಲ್ಲಿ ಗಾದೆಮಾತಿನಂಥ ನಿದರ್ಶನಾಲಂಕಾರವು ಸೊಗಯಿಸಿದೆ:

**ಬಾಹುಭ್ಯಾಂ ಸಾಗರಂ ತೀರ್ತ್ವಾ ಲಂಘ್ಯತಾಂ ಗೋಷ್ಪದಂ ಲಘು ।**
(೬.೯೦.೧೫)

**ವಿಷಮಾ**ಲಂಕಾರವು ವಿರೋಧಮೂಲದ ವಾಗ್ವಿಚ್ಛಿತ್ತಿಗಳಲ್ಲೊಂದು. ಇದು ತನ್ನೊಳಗಿನ ವೈಷಮ್ಯಚಿತ್ರಣದ ಕಾರಣದಿಂದಲೇ ಸುಲಭವಾಗಿ ಎದ್ದುತೋರುತ್ತದೆ. ಇದೊಂದು ಬಗೆಯಲ್ಲಿ ಪ್ರತೀರೂಪದ ಉಪಮಾಲಂಕಾರವೆನ್ನಬೇಕು. ಏಕೆಂದರೆ ಉಪಮೆಯ ಮೂಲ ಸಾಮ್ಯದಲ್ಲಿದ್ದರೆ, ವಿಷಮದ ಮೂಲ ವೈಷಮ್ಯದಲ್ಲಿದೆ. ಆದಿಕವಿಗಳು ಇಂಥ ಅಲಂಕಾರವನ್ನೂ ಚೆನ್ನಾಗಿ ನಿರ್ವಹಿಸಿದ್ದಾರೆ. ಜಗತ್ತಿನಲ್ಲಿ ಸಾಮ್ಯವನ್ನರಸುವ ಆದರ್ಶೋನ್ಮುಖವಾದ ಮನಸ್ಸು ಇಹದಲ್ಲಿರುವ ವೈಷಮ್ಯವನ್ನು ಉಪೇಕ್ಷಿಸದ ವಾಸ್ತವಪ್ರಜ್ಞೆಯನ್ನೂ ಹೊಂದಿರಬೇಕಷ್ಟೆ. ಇದು ಕವಿಯಾಗಬಯಸುವವರಿಗೆ ಬೇಕಾದ ಪ್ರಥಮಾರ್ಹತೆಗಳಲ್ಲೊಂದು.

ವಿಷಮ ಮತ್ತು **ವಿರೋಧಾ**ಲಂಕಾರಗಳನ್ನು ನಿರ್ವಹಿಸುವಾಗ ಶಬ್ದಮೈತ್ರಿಗೆ ಎಲ್ಲಿಲ್ಲದ ಮಹತ್ತ್ವವುಂಟು. ಏಕೆಂದರೆ ಶಾಬ್ದಿಕವಾಗಿ ಸಾಮ್ಯವಿರುವಲ್ಲಿಯೂ ಆರ್ಥಿಕವಾಗಿ ಎಂಥ ವೈಷಮ್ಯವುಂಟೆಂದು ಧ್ವನಿಸುವಾಗಲೇ ಈ ಅಲಂಕಾರಗಳ ಚೆಲುವು ಇಮ್ಮಡಿಸುತ್ತದೆ. ಇದು ಆದಿಕವಿಗಳಿಂದಲೇ ಪ್ರವರ್ತಿತವಾದ ಕವಿಮಾರ್ಗದರ್ಶಿ.

ರಾಮನು ಕಾಡಿಗೆ ಹೊರಟಾಗ ಅಯೋಧ್ಯಾಪ್ರಜೆಗಳು ಆತನ ನಿಷ್ಪರಿಚ್ಛದನಿರ್ಗಮನವನ್ನು ಹೀಗೆ ಬಣ್ಣಿಸುತ್ತಾರೆ.

**ಯಂ ಯಾಂತಮನುಯಾತಿ ಸ್ಮ ಚತುರಂಗಬಲಂ ಮಹತ್ ।**
**ತಮೇಕಂ ಸೀತಯಾ ಸಾರ್ಧಮನುಯಾಸ್ಯತಿ ಲಕ್ಷ್ಮಣಃ ॥** (೨.೩೩.೬)

ಯಾವನು ಹೊರಟುನಿಂತಾಗ ಸಮಗ್ರಚತುರಂಗಬಲವೇ ಹಿಂಬಾಲಿಸುತ್ತಿತ್ತೋ ಅಂಥವನಿಂದು ಕಾಡಿಗೆ ತೆರಳುವಾಗ ಬರಿಯ ಸೀತಾ–ಲಕ್ಷ್ಮಣರು ಮಾತ್ರ ಅನುಸರಿಸುತ್ತಿದ್ದಾರೆ. ಎಂಥ ವಿಪರ್ಯಾಸ! ಇಲ್ಲಿಯ ಅಯತ್ನಸಾಮಾನ್ಯ ಕಥನವೇ ಅದ್ಭುತಕಾವ್ಯವಾಗಿರುವುದು ಗಮನಾರ್ಹ. ಲೋಕರೂಢಿಯ ಸವಕಲುಮಾತೂ ಮಹಾಕವಿಯ ಮೂಸೆಯಿಂದ ಹೊರಬಿದ್ದಾಗ ಸ್ವರ್ಗದಲ್ಲಿಯೂ ಸಲ್ಲಬಲ್ಲ ಸುವರ್ಣನಾಣ್ಯವಾಗಿರುತ್ತದೆ.

ಶೂರ್ಪಣಖೆಯನ್ನು ಆದಿಕವಿಗಳು ನಮಗೆ ಪರಿಚಯಿಸುವಾಗ ಆಕೆಯನ್ನು ರಾಮನೊಡನೆ ಜೊತೆಜೊತೆಯಾಗಿ ಹೋಲಿಸಿ ಅಲ್ಲಿಯ ವೈಷಮ್ಯವನ್ನು ಮನಮುಟ್ಟಿಸುವ ಪರಿ ಅನ್ಯಾದೃಶ:

**ಸುಮುಖಂ ದುರ್ಮುಖೀ ರಾಮಂ ವೃತ್ತಮಧ್ಯಂ ಮಹೋದರೀ ।**
**ವಿಶಾಲಾಕ್ಷಂ ವಿರೂಪಾಕ್ಷೀ ಸುಕೇಶಂ ತಾಮ್ರಮೂರ್ಧಜಾ ॥**

**ಪ್ರೀತಿರೂಪಂ ವಿರೂಪಾ ಸಾ ಸುಸ್ವರಂ ಭೈರವಸ್ವರಾ ।**
**ತರುಣಂ ದಾರುಣಾ ವೃದ್ಧಾ ದಕ್ಷಿಣಂ ವಾಮಭಾಷಿಣೀ ॥**

**ನ್ಯಾಯವೃತ್ತಂ ಸುದುರ್ವೃತ್ತಾ ಪ್ರಿಯಮಪ್ರಿಯದರ್ಶನಾ ।**
**ಶರೀರಜಸಮಾವಿಷ್ಟಾ ರಾಕ್ಷಸೀ ವಾಕ್ಯಮಬ್ರವೀತ್ ॥** (೩.೧೭.೧೦–೧೨)

ಅವನು ಸುಮುಖ ಇವಳು ದುರ್ಮುಖಿ, ಅವನು ಬಡನಡುವಿನವನು ಇವು ಹೆಬ್ಬೊಟ್ಟೆಯವಳು, ಅವನು ಚೆಲುಗಣ್ಣಿನವನು ಇವಳು ಕೆಡುಗಣ್ಣಿನವಳು, ಅವನು ಸೊಗಸುಗುರುಳವನು ಇವಳು ಕೆಂಗೂದಲ ಕಾಳಿ, ಅವನು ಸುರೂಪ ಇವಳು ಕುರೂಪಿ, ಅವನು ಇನಿದನಿಯವನು ಇವಳು ಬಿರುದನಿಯವಳು, ಅವನು ಸಹಜತರುಣ ಇವಳು ವಿಕೃತವೃದ್ಧೆ, ಅವನು ನೇರನುಡಿಯವನು ಇವಳು ಕೊಂಕುನುಡಿಯವಳು, ಅವನು ಸರಿದಾರಿಯವನು ಇವಳು ಹಾದಿಬಿಟ್ಟವಳು. ಇಂಥ ಶೂರ್ಪಣಖೆಯು ಕಾಡುವ ಕಾಮದ ಕಾಟದಿಂದ ಅವನನ್ನು ಕಾಡಿ-ಬೇಡಿದಳು.

ಇಲ್ಲಿಯ ಸೊಗಸು ಸ್ವಯಂವೇದ್ಯ. ವಿಶೇಷತಃ ಕಾಮವನ್ನು "ಶರೀರಜ"ವೆಂಬ ಶಬ್ದದಿಂದ ನಿರ್ದೇಶಿಸಿರುವುದು ಅತ್ಯಂತಧ್ವನಿಪೂರ್ಣ. ಅಳಿಯುವಿಕೆಯೇ ಲಕ್ಷಣವಾಗಿ ಉಳ್ಳದ್ದು ಶರೀರ. ಅಂಥ ಶರೀರದಿಂದ ಹುಟ್ಟುವ ಕಾಮವು ಶರೀರ ಸುಟ್ಟರೂ ಬಿಡದಲ್ಲ! ಕಾಮನ ಬಿರುಬೇಗೆಯನ್ನು ಇದಕ್ಕಿಂತ ಸೊಗಸಾಗಿ ವ್ಯಂಜಿಸಲು ಯಾರಿಗೆ ಸಾಧ್ಯ? ಇದು ವಿಷಮಾಲಂಕಾರಗಳ ಮಾಲಿಕೆಯ ನಡುವೆ ಅನಿರೀಕ್ಷಿತವಾಗಿ ತಲೆದೋರುವ ಅಗೋಚರ ಪರಿಮಳ.

ಸೀತೆಯನ್ನು ತುಡುಕಲು ಮುಂದಾದ ರಾವಣನನ್ನು ಎಚ್ಚರಿಸುತ್ತ ಆಕೆ ರಾಮನಿಗೂ ರಾವಣನಿಗೂ ಇರುವ ಅಂತರವನ್ನು ಹಲವು ಮಾತುಗಳಲ್ಲಿ ಹವಣಿಸುತ್ತಾಳೆ. ಆ ಪದ್ಯಗಳು ಪರಿಭಾವನೀಯ:

**ಯದಂತರಂ ಸಿಂಹಶೃಗಾಲಯೋರ್ವನೇ**
**ಯದಂತರಂ ಸ್ಯಂದನಿಕಾಸಮುದ್ರಯೋಃ ।**

**ಸುರಾಗ್ರ್ಯಸೌವೀರಕಯೋರ್ಯದಂತರಂ**
**ತದಂತರಂ ವೈ ತವ ರಾಘವಸ್ಯ ಚ ।**

**ಯದಂತರಂ ಕಾಂಚನಸೀಸಲೋಹಯೋ-**
**ರ್ಯದಂತರಂ ಚಂದನವಾರಿಪಂಕಯೋಃ ।**

**ಯದಂತರಂ ಹಸ್ತಿಬಿಡಾಲಯೋರ್ವನೇ**
**ತದಂತರಂ ದಾಶರಥೇಸ್ತವೈವ ಚ ॥**

**ಯದಂತರಂ ವಾಯಸವೈನತೇಯಯೋ-**
**ರ್ಯದಂತರಂ ಮದ್ಗುಮಯೂರಯೋರಪಿ ।**

**ಯದಂತರಂ ಸಾರಸಗೃಧ್ರಯೋರ್ವನೇ**
**ತದಂತರಂ ದಾಶರಥೇಸ್ತವೈವ ಚ ॥** (೩.೪೭.೪೫–೪೭)

ನರಿ-ಸಿಂಹಗಳ ನಡುವೆ, ಹಳ್ಳ-ಕಡಲುಗಳ ನಡುವೆ, ಗಂಜಿ-ಸುಧೆಗಳ ನಡುವೆ, ಸೀಸ-ಸ್ವರ್ಣಗಳ ನಡುವೆ, ಕೆಸರು-ಚಂದನಗಳ ನಡವೆ ಬೆಕ್ಕು-ಆನೆಗಳ ನಡುವೆ, ಕಾಗೆ-ಗರುಡಗಳ ನಡುವೆ, ನೀರುಕಾಗೆ-ವನಮಯೂರಗಳ ನಡುವೆ, ಹದ್ದು-ಹಂಸಗಳ ನಡುವೆ ಎಷ್ಟು ಅಂತರವುಂಟೋ ಅಷ್ಟು ಅಂತರ ನಿನಗೂ ರಾಮನಿಗೂ ಉಂಟು!

ಈ ತೆರನಾಗಿ ಸೀತೆಯು ಗದರುವಾಗ ಆದಿಕವಿಗಳು ಬಳಸಿದ ವೃತ್ತವಾಗಲಿ, ಪದಗಳಾಗಲಿ, ಕಲ್ಪನೆಗಳಾಗಲಿ ಅಪ್ರತಿದ್ವಂದ್ವ, ಧಿಕ್ಕಾರಕ್ಕೆ ಇದಕ್ಕಿಂತ ಸುಂದರವೂ ಸಮರ್ಥವೂ ಆದ ಅಭಿವ್ಯಕ್ತಿ ಮತ್ತೆಲ್ಲಿ?

ಯುದ್ಧಕಾಂಡದಲ್ಲೊಂದು ಮಹೋನ್ನತವಾದ **ವಿಷಮಾಲಂಕಾರ** ಪ್ರಯೋಗವಿದೆ. ಗತಿಸಿದ ಗಂಡನನ್ನು ಕುರಿತು ಶೋಕಿಸುವ

ಮಂದೋದರಿಯು "ವಸ್ತ್ರಾಭರಣಗಳ ಅಲಂಕಾರದಿಂದ ಸರಸದಲ್ಲಿಯೂ ಸಮರದಲ್ಲಿಯೂ ಲೀಲಾಜಾಲವಾಗಿ ವಿಹರಿಸುತ್ತಿದ್ದ ನಿನ್ನ ಶ್ಯಾಮಲಕಾಯವು ಮಿಂಚಿನ ಬಳ್ಳಿಗಳಿಂದೊಡಗೂಡಿದ ಮಳೆಮುಗಿಲಿನಂತಿತ್ತು. ಅದೀಗ ಸಾವಿರಾರು ಶರಗಳಿಂದ ಕ್ಷತವಿಕ್ಷತವಾಗಿ, ರಕ್ತಸಿಕ್ತವಾಗಿ ತೋರಿದೆ. ಮತ್ತೆಂದೂ ಸಿಗದ ನಿನ್ನ ಶರೀರಸ್ಪರ್ಶಕ್ಕೆ ಹಾತೊರೆಯುವ ನನಗೆ ನಿನ್ನ ಈ ಬಾಣಭರಿತಗಾತ್ರವು ಅಪ್ಪಿಕೊಳ್ಳಲೂ ಅಸಾಧ್ಯವೆಂಬಂತಾಯಿತಲ್ಲಾ!" ಎಂದು ಹೃದಯವಿದ್ರಾವಕವಾಗಿ ಶೋಕಿಸುತ್ತಾಳೆ:

**ಕಾಂತಂ ವಿಹಾರೇಷ್ವಧಿಕಂ ದೀಪ್ತಂ ಸಂಗ್ರಾಮಭೂಮಿಷು ।**
**ಭಾತ್ಯಾಭರಣಭಾಭಿರ್ಯದ್ವಿದ್ಯುದ್ಭಿರಿವ ತೋಯದಃ ॥**

**ತದೇವಾದ್ಯ ಶರೀರಂ ತೇ ತೀಕ್ಷ್ಣೈರ್ನೈಕೈಃ ಶರೈಶ್ಚಿತಮ್ ।**
**ಪುನರ್ದುರ್ಲಭಸಂಸ್ಪರ್ಶಂ ಪರಿಷ್ವಕ್ತುಂ ನ ಶಕ್ಯತೇ ॥** (೬.೧೧೪.೪೪-೪೫)

ಈ **ಯುಗ್ಮಕದಲ್ಲಿ** ಶೃಂಗಾರವು ಕರುಣಕ್ಕೆ ಅದೆಂತು ಸಹಕಾರಿಯಾಗಿ ಬಂದೊದಗಿದೆಯೆಂಬುದನ್ನು ಗಮನಿಸಿದಾಗ ಆದಿಕವಿಗಳ ಕಾವ್ಯಚಾತುರಿ ವಿಸ್ಮಯ ತರುತ್ತದೆ. ತಾಂತ್ರಿಕವಾಗಿ ಇದನ್ನು 'ರಸವದಲಂಕಾರ'ವೆಂದು ಗುರುತಿಸುವುದುಂಟು. ವ್ಯಾಸರಂಥ ಕವಿಬ್ರಹ್ಮರಿಗೂ ಈ ಬಗೆಯ ರಚನೆ ಸ್ಫೂರ್ತಿಪ್ರದವಾಗಿದೆಯೆಂಬುದನ್ನು ನಾವಿಲ್ಲಿ ನೆನೆಯಬಹುದು. ಮಹಾಭಾರತದ ಸ್ತ್ರೀಪರ್ವದಲ್ಲಿ ಬರುವ ಭೂರಿಶ್ರವನ ಪತ್ನಿಯರ ಪ್ರಲಾಪವು ಕೆಲಮಟ್ಟಿಗೆ ಇಂಥ ಅಂಶಗಳನ್ನು ಮೈದುಂಬಿಸಿಕೊಂಡಿದೆ.

* * *

**ವಿರೋಧ** ಅಥವಾ **ವಿರೋಧಾಭಾಸಾ**ಲಂಕಾರವು ಕೂಡ ತುಂಬ ಪರಿಣಾಮಕಾರಿ. ಇದನ್ನು ಕೆಲವರು ವಿಷಮಾಲಂಕೃತಿಗೇ ಸೇರಿಸುತ್ತಾರೆ. ವಿಶೇಷತಃ ಕಾಳಿದಾಸನು ಇದನ್ನು ಹಲವೆಡೆ ಬಳಸಿ ಅಜರಾಮರಗೊಳಿಸಿದ್ದಾನೆ. ಇವನಿಗೂ ಆದಿಕವಿಗಳೇ ಸ್ಫೂರ್ತಿಯೆಂಬುದು ಪುನರುಕ್ತಿಯಾದೀತು.

ಯುದ್ಧಕಾಂಡದ ಎರಡು ಮಾದರಿಗಳನ್ನು ನೋಡೋಣ:

**ತೀರ್ತ್ವಾ ಸಾಗರಮಕ್ಷೋಭ್ಯಂ ಭ್ರಾತರೌ ಗೋಷ್ಪದೇ ಹತೌ ।** (೬.೪೮.೧೫)

ನಾಗಾಸ್ತ್ರಬದ್ಧರಾದ ರಾಮ-ಲಕ್ಷ್ಮಣರನ್ನು ವಿಮಾನದಿಂದ ಕಂಡ ಸೀತೆಯು "ಅಯ್ಯೋ! ಶತಯೋಜನವಿಸ್ತಾರವಾದ ಸಾಗರವನ್ನು ಸಮರ್ಥವಾಗಿ ದಾಟಿ ಬಂದ ಇವರು ಇದೀಗ ಗೋಷ್ಪದಮಾತ್ರಜಲದಲ್ಲಿ ಸಿಲುಕಿ ನೊಂದರಲ್ಲಾ!" ಎಂದು ಹಲುಬುತ್ತಾಳೆ. ನಾಗಾಸ್ತ್ರಪ್ರಯೋಗಕ್ಕೆ ಇಂದ್ರಜಿತ್ತನು ಬಳಸಿದ ಮಂತ್ರೋದಕವು ಗೋಷ್ಪದಮಾತ್ರದ್ದೆಂಬ ಅರಿವು ನಮಗಿದ್ದಲ್ಲಿ ಈ ಅಲಂಕಾರದ ಪರಿಣಾಮ ಅದ್ಭುತವಾದೀತು.

**ತಸ್ಮಿನ್ ಜೀವತಿ ವೀರೇ ತು ಹತಮಪ್ಯಹತಂ ಬಲಮ್ ।**
**ಹನುಮತ್ಯುಜ್ಝಿತಪ್ರಾಣೇ ಜೀವಂತೋಽಪಿ ವಯಂ ಹತಾಃ ॥** (೬.೭೪.೨೨)

ಸರ್ಪಾಸ್ತ್ರಕ್ಕೆ ಸಿಲುಕಿ ಕಪಿಸೇನೆಯೆಲ್ಲ ಮೂರ್ಛಿತವಾಗಿದ್ದಾಗ ಜಾಂಬವಂತನು ವಿಭೀಷಣನಿಗೆ ಹೇಳುವ ಮಾತಿದು. ಅವನ ಪ್ರಕಾರ ಹನುಮಂತನೊಬ್ಬನು ಬದುಕಿದ್ದರೆ, ಇಡಿಯ ಸೇನೆಯು ಸತ್ತಿದ್ದರೂ ಬದುಕಿದ್ದಂತೆ; ಅವನೇ ಒಂದು ವೇಳೆ ಸತ್ತಿದ್ದಲ್ಲಿ, ಅದು ಬದುಕಿದ್ದರೂ ಸತ್ತಿದ್ದಂತೆ!

ಈ ಮಾತಿಗೆ ಹೆಚ್ಚಿನ ವಿವರಣೆ ಬೇಕಿಲ್ಲ. ರಾಮಾಯಣಮಹಾಮಾಲೆಯ ಮಹಾರತ್ನವೆನಿಸಿದ ಮಾರುತಿಯ ಶಕ್ತಿ-ಸಾಮರ್ಥ್ಯಗಳನ್ನೂ ಸೇವೆ-ನಿಸ್ವಾರ್ಥತೆಗಳನ್ನೂ ಬಲ್ಲವರಿಗೆ ಈ ಒಂದು ಶ್ಲೋಕವು ಆತನ ವ್ಯಕ್ತಿತ್ವವನ್ನು ಕಟ್ಟಿಕೊಡಲು ಸಾಕು.

**ಸಾಮಾಸೋಕ್ತಿಯು** ಅಲಂಕಾರಪ್ರಪಂಚದ ಒಂದು ಸಾರ್ಥಕಸದಸ್ಯ. ಪ್ರಕೃತಾಪ್ರಕೃತವಸ್ತುಗಳಲ್ಲಿ ವಿಶೇಷಣೈಕ್ಯವನ್ನು ತರುವುದೇ ಇಲ್ಲಿಯ ಪ್ರಮುಖಸ್ವಾರಸ್ಯ. ಹೆಚ್ಚಿನ ಬಾರಿ ಇಂಥ ವಿಶೇಷಣೈಕ್ಯವು ಶ್ಲೇಷದಿಂದ ಸಿದ್ಧವಾಗುತ್ತದೆ. ಈ ಅಲಂಕಾರವು ಜಡವೂ ಅಚೇತನವೂ ಆದ ವಸ್ತು-ವಿಷಯಗಳ ವರ್ಣನಾವಸರದಲ್ಲಿ ಅವುಗಳ ಮೇಲೆ ಚೇತನತ್ವವನ್ನು ಆರೋಪಿಸುವ ಮೂಲಕ ಮತ್ತೂ ಆಕರ್ಷಕವಾಗುತ್ತದೆ. ಆದುದರಿಂದಲೇ

ನಿಸರ್ಗವರ್ಣನೆಯಲ್ಲಿ ಈ ಅಲಂಕಾರದ ವಿನಿಯೋಗ ಮಿಗಿಲಾಗಿ ಸೊಗಯಿಸುತ್ತದೆ. ಈ ಬಗೆಯ ಸ್ವಾರಸ್ಯಕ್ಕೂ ಆದಿಕವಿಗಳೇ ಮಾರ್ಗದರ್ಶಿ.

**ನವಮಾಸಧೃತಂ ಗರ್ಭಂ ಭಾಸ್ಕರಸ್ಯ ಗಭಸ್ತಿಭಿಃ ।**
**ಪೀತ್ವಾ ರಸಂ ಸಮುದ್ರಾಣಾಂ ದ್ಯೌಃ ಪ್ರಸೂತೇ ರಸಾಯನಮ್** ॥ (೪.೨೮–೩)

ಕಡಲ ನೀರನ್ನು ಕುಡಿದು, ಸೂರ್ಯನ ಕಿರಣಗಳಿಂದ ಗರ್ಭವನ್ನು ತಳೆದ ಗಗನವನಿತೆಯ ಪ್ರಸೂತಿಚಿತ್ರಣವಿಲ್ಲಿ ಹೃದಯಂಗಮ. ವಿಶೇಷತಃ "ರಸ" ಮತ್ತು "ರಸಾಯನ"ಗಳೆಂಬ ಪದಗಳ ಶ್ಲೇಷ ಇಲ್ಲಿಯ ಸಮಾಸೋಕ್ತಿಗೆ ಜೀವ ತುಂಬಿದೆ.

ಜೊತೆಗೆ ಮಳೆಮುಗಿಲುಗಳು ಒಂಬತ್ತು ತಿಂಗಳ ಕಾಲ ಅಗಸದಲ್ಲಿ ಕ್ರಮವಾಗಿ ರೂಪುಗೊಳ್ಳುವುದೂ ಅನಂತರ ಮೂರು ತಿಂಗಳು ಕರಗಿ ಇಳೆಗೆರಗುವುದೂ ಇಲ್ಲಿ ಅಭಿಪ್ರೇತವಾಗಿ ರಮಣೀಯನಿಸರ್ಗಚಿತ್ರಣವು ಮಾನುಷಸ್ಪಂದದಿಂದ ಮೈದುಂಬಿದೆ.

ಶರದ್ವರ್ಣನೆಯ ಸಂದರ್ಭದಲ್ಲಿ ಸಂಜೆಯು ಅನುರಾಗವತಿಯಾದ ಸುಂದರಿಯೆಂದು ರೂಪಿಸಿ, ಅವಳು ತನ್ನ ಇನಿಯನಾದ ಚಂದ್ರನ ಕಿರಣಕರಗಳಿಂದ ರೋಮಾಂಚಿತೆಯಾಗಿ ನಲಿದು ಕಣ್ಮಿಟಿಕಿಸುತ್ತಾ ಸ್ವಯಂ ಅಂಬರದಿಂದ ಜಾರಿಹೋಗುವ ಚಿತ್ರಣವನ್ನು ಕೊಟ್ಟಿರುವುದು ವಿದ್ವದ್ರಸಿಲೋಕಕ್ಕೆ ಶತಶತಮಾನಗಳಿಂದ ಸಂತಸವನ್ನಿತ್ತ ಸಂಗತಿ. ಇಲ್ಲಿಯ ಶಬ್ದಾರ್ಥಮೈತ್ರಿ ಮತ್ತು ಪ್ರತಿಪದಸಾರ್ಥಕ್ಯಗಳು ಪರಿಪೂರ್ಣತೆಯ ನಿಕಷವೇ ಆಗಿವೆ:

**ಚಂಚಚ್ಚಂದ್ರಕರಸ್ಪರ್ಶಹರ್ಷೋನ್ಮೀಲಿತತಾರಕಾ ।**
**ಅಹೋ ರಾಗವತೀ ಸಂಧ್ಯಾ ಜಹಾತಿ ಸ್ವಯಮಂಬರಮ್** ॥ (೪.೩೦.೪೫)

ಈ ಶ್ಲೋಕದಲ್ಲಿ ಕರಸ್ಪರ್ಶ (ಕಿರಣಗಳ ಸ್ಪರ್ಶ, ಕೈಗಳ ಸ್ಪರ್ಶ), ಉನ್ಮೀಲಿತತಾರಕೆ (ತಾರೆಗಳ ತೋರಿಕೊಳ್ಳುವಿಕೆ, ಕಣ್ಪಾಪೆಯ ಅರಳುವಿಕೆ), ರಾಗವತೀ (ಸಂಜೆಗೆಂಪು, ಪ್ರಣಯವತೀ), ಅಂಬರ (ಅಗಸ, ವಸ್ತ್ರ) ಎಂಬ ಪದಗಳಲ್ಲಿ ಅನರ್ಘಭಾಸ್ವರಶ್ಲೇಷೆಯು ತನ್ನ ಕೃತಕೃತ್ಯತೆಯನ್ನು ಕಂಡಿದೆ.

* * *

**ಪರ್ಯಾಯೋಕ್ತಾ**ಲಂಕಾರವು ಸಂಗತಿಯೊಂದನ್ನು ಪ್ರಕಾರಂತರವಾಗಿ ಹೇಳುವ ಬಗೆ. ಈ ಪ್ರಕಾರಾಂತರವು ಮಿಗಿಲಾಗಿ ಪರಿಣಾಮಕಾರಿಯೆನಿಸಬೇಕೆಂಬುದು ಸ್ವಯಂಸಿದ್ಧನಿಯಮ. ಇದು ತುಂಬ ಪ್ರಖರವಾದ ಅಲಂಕಾರಗಳಲ್ಲೊಂದು. ವಕ್ರೋಕ್ತಿಯ ಜೀವಾಳವೇ ಇಲ್ಲಿದೆ. ಅಲ್ಲದೆ ಪ್ರಕಾರಾಂತರಕಥನದ ಮೂಲಕ ಸ್ಫುರಿಸುವ ಅಂಶವು ಧ್ವನಿಸ್ಪರ್ಶದಿಂದ ದೀಪ್ತವಾಗುವ ಕಾರಣ ಅಲಂಕಾರಗಳ ಅಲಂಕಾರತ್ವಕ್ಕೆ ಮೂಲವೆನಿಸಿದ ಗುಣೀಭೂತವ್ಯಂಗ್ಯವೇ ಇಲ್ಲಿ ನೆಲೆಸುತ್ತದೆ. ಅನುದಿನದ ಮಾತುಗಳಲ್ಲಿಯೂ ಸುಳಿದುಹೋಗುವ ಮೊನೆ–ಮಿನುಗುಗಳಲ್ಲಿ ಪರ್ಯಾಯೋಕ್ತದ ಪಾರಮ್ಯವಿರತ್ತದೆ.

ಮಳೆಗಾಲಮುಗಿದರೂ ನೆರವನ್ನೀಯುವುದಿರಲಿ, ತನ್ನತ್ತ ತಿರುಗಿಯೂ ನೋಡದ ಸುಗ್ರೀವನ ವರ್ತನೆಗೆ ರೋಸಿದ ರಾಮನು ತಮ್ಮನ ಮೂಲಕ ಆತನಿಗೆ ಕಳುಹಿದ ಎಚ್ಚರಿಕೆ ರಾಮಾಯಣದ ಪ್ರಸಿದ್ಧಪದ್ಯಗಳಲ್ಲೊಂದು:

**ನ ಚ ಸಂಕುಚಿತಃ ಪಂಥಾ ಯೇನ ವಾಲೀ ಹತೋ ಗತಃ ।**
**ಸಮಯೇ ತಿಷ್ಠ ಸುಗ್ರೀವ ಮಾ ವಾಲಿಪಥಮನ್ವಗಾಃ** ॥ (೪.೩೦.೮೧)

ಯಾವ ಹಾದಿಯಲ್ಲಿ ಅಳಿದ ವಾಲಿಯು ಹೋದನೋ ಅದಿನ್ನೂ ಮುಚ್ಚಿಹೋಗಿಲ್ಲ. ಎಲೈ ಸುಗ್ರೀವ! ಈ ವಾಸ್ತವವನ್ನರಿತು ಸಮಯಕ್ಕೆ (ಕಾಲ ಮತ್ತು ಕರಾರು) ಬದ್ಧನಾಗಿದ್ದು ಬದುಕು; ವಾಲಿಯ ಹಾದಿಯನ್ನು ಹಿಡಿಯಬೇಡವೆಂದು ರಾಮನು ಹೇಳುವ ಮಾತು ಇಂದಿಗೂ ಮಾಸದ ಮೊನೆಯಾದ ಕಟಕಿ, ಹಸನಾದ ಕವಿತೆ. ಇಲ್ಲಿಯ ಸಮಯ ಶಬ್ದದ ಶ್ಲೇಷೆಯಾಗಲಿ, ಮಧ್ಯಮಪುರುಷೈಕವಚನದ ಕ್ರಿಯಾಪದಗಳಾಗಲಿ ಎಣೆಯಿಲ್ಲದ ವ್ಯಂಜಕಸಾಮಗ್ರಿಗಳೆನಿಸಿವೆ. ಜೊತೆಗೆ ದ್ವಿತಿಯಚರಣದ ಎರಡೆರಡೇ ವರ್ಣಗಳ ಪದಗಳು ತಮ್ಮ ಅಸಂಯುಕ್ತಾಕ್ಷರತೆಯಿಂದ ವ್ಯಂಜಿಸಿರುವ ಕಾವು–ಕೆಚ್ಚು–ಅಬ್ಬರ–ನಿಬ್ಬರಗಳು ತುಂಬ ಗಮನಾರ್ಹ.

ರಾವಣೊನೊಡನೆ ಸೆಣಸುತ್ತ ಹನೂಮಂತನು ಆತನನ್ನು ಬರಿಗೈಗಳಿಂದಲೇ ಕೊಲ್ಲುವೆನೆಂಬುದನ್ನು ಪ್ರಕಾರಂತರವಾಗಿ ಹೇಳುವ ಬಗೆ ಸೊಗಸಾಗಿದೆ. ವೀರರಸದ ಅಮಿಶ್ರಿರಪಾರಮ್ಯವನ್ನೇ ನಾವಿಲ್ಲಿ ಅಸ್ವಾದಿಸಬಹುದು:

**ಏಷ ಮೇ ದಕ್ಷಿಣೋ ಬಾಹುಃ ಪಂಚಶಾಖಃ ಸಮುದ್ಯತಃ ।**
**ವಧಮಿಷ್ಯತಿ ತೇ ದೇಹಾದ್ಭೂತಾತ್ಮಾನಂ ಚಿರೋಷಿತಮ್** ॥ (೬.೫೯.೫೬)

ಇದೋ ನನ್ನ ಬಿಚ್ಚಿದ ಬಲದೋಳನ್ನೆತ್ತಿದ್ದೇನೆ. ಇದು ನಿನ್ನೊಡಲಿನಲ್ಲಿ ನಿಡುಗಾಲದಿಂದಿರುವ ಆತ್ಮವನ್ನು ಹೊರದಬ್ಬುವುದು! ಎಂದು ಹನೂಮಂತನು ಹೇಳುವಲ್ಲಿ ತೋರುವ ವೈದಾಂತಿಕಗಾಂಭೀರ್ಯಾಭಾಸವು ನಿಜಕ್ಕೂ ಮಾರ್ಮಿಕ. ಜೊತೆಗೆ "ವಿಧಮಿಷ್ಯತಿ" ಎಂಬ ಕ್ರಿಯಾಪದದ ಸ್ಥೈರ್ಯ-ಸಾಮರ್ಥ್ಯಗಳೂ ಗಮನಾರ್ಹ.

* * *

**ವಿನೋಕ್ತ್ಯಲಂಕಾರವು** ಅದೊಂದು ಬಗೆಯ ಸರಳಸಾಮಾನ್ಯವಾದ ವಾಗ್ವಿಚ್ಛಿತ್ತಿ. ನೈಷೇಧಿಕರೂಪದಿಂದಲೇ ಸ್ವಾರಸ್ಯವೊಂದನ್ನು ಇದು ಹೇಳಲು ಹವಣಿಸುತ್ತದೆ. ಇದನ್ನೂ ಅದರ ಕೈಸಾಗುವ ಮಟ್ಟಿಗೆ ಆದಿಕವಿಗಳು ದುಡಿಸಿಕೊಂಡಿದ್ದಾರೆ.

ಅಯೋಧ್ಯಾಜನತೆಯ ಸಿರಿ-ಸಂಪದಗಳನ್ನು ಬಣ್ಣಿಸುವಾಗ ಸಾಕೇತವಾಸಿಗಳ ಪೈಕಿ ಯಾರೊಬ್ಬನೂ ಮುಕುಟವಿಡದೆ, ಕುಂಡಲ ತೊಡದೆ, ಹಾರ ಧರಿಸಿದೆ, ಚಂದನವನ್ನು ತೊಡೆಯದೆ, ಮಿಗಿಲಾದ ಭೋಗರಾಸಿಕ್ಯವಿಲ್ಲದೆ ಇರಲಿಲ್ಲವಂತೆ:

**ನಾಕುಂಡಲೀ ನಾಮಕುಟೀ ನಾಸ್ರಗ್ವೀ ನಾಲ್ಪಭೋಗವಾನ್ ।**
**ನಾಮೃಷ್ಟೋ ನಾನುಲಿಪ್ತಾಂಗೋ ನಾಸುಗಂಧಶ್ಚ ವಿದ್ಯತೇ** ॥ (೧.೬.೧೦)

ಇದೇ ಅಲಂಕಾರವನ್ನು ಬಳಸಿ ಅಯೋಧ್ಯಾಪೌರರನ್ನು ಮತ್ತೂ ವರ್ಣಿಸಿರುವುದನ್ನು ಮುಂದಿನ ಶ್ಲೋಕಗಳಲ್ಲಿ ಕೂಡ ಆಸಕ್ತರು ಗಮನಿಸಿಕೊಳ್ಳಬಹುದು (೧.೬.೧೧-೧೨)

ರಾಮನು ರಥಾರೋಹಿಯಾಗಿ ದಶರಥನ ಮನೆಗೆ ತೆರಳುತ್ತಿದ್ದಾಗ ಪಟ್ಟಾಭಿಷಿಕ್ತನಾಗಲಿದ್ದ ಆತನ ಕಣ್ಣಿಗೆ ಬೀಳದವರೂ ಅವನನ್ನು ಕಣ್ತುಂಬಿಸಿಕೊಳ್ಳದವರೂ ಅಯೋಧ್ಯೆಯಲ್ಲಿ ಯಾರೊಬ್ಬರೂ ಇರಲಿಲ್ಲ; ಅಂಥವರಿದ್ದಲ್ಲಿ ಅವರು ನಿಂದ್ಯರೂ ಆಗುತ್ತಿದ್ದರು. ತಮ್ಮನ್ನು ತಾವು ನಿಂದಿಸಿಕೊಳ್ಳುತ್ತಲೂ ಇದ್ದರೆಂದು ಮಹರ್ಷಿಗಳು ಹೇಳುವುದು ತುಂಬ ಪರಿಣಾಮಕಾರಿ. ಪ್ರಾಯಶಃ ವಿನೋಕ್ತ್ಯಲಂಕಾರಕ್ಕೇ ಇದು ಭೂಷಣ:

**ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ** । (೨.೧೭.೧೪)
**ನಿಂದಿತಃ ಸ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ** । (೨.೧೭.೧೫)

ತುಂಬ ಸೀಮಿತವಾದ ಚೌಕಟ್ಟಿರುವಂತೆ ತೋರುವ ಈ ಅಲಂಕಾರದಲ್ಲಿಯೂ ಮಹರ್ಷಿಗಳು ಸಾಧಿಸಿದ ವಿಕ್ರಮವನ್ನು ಕಂಡಾಗ "ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ" ಎಂಬ ಮಾತು ನೆನಪಾಗದಿರದು.

* * *

**ಐತಿಹ್ಯಾಲಂಕಾರವು** ಲೋಕಪ್ರಸಿದ್ಧವಾದ ಗಾದೆ, ಹೇಳಿಕೆ, ಸಾಮತಿ ಮುಂತಾದುವುಗಳನ್ನು ಬಳಸಿಕೊಂಡು ಬೆಳಗುವ ನುಡಿಬೆಡಗು. ಇದಕ್ಕೂ **ಲೋಕೋಕ್ತ್ಯಲಂಕಾರಕ್ಕೂ** ವ್ಯತ್ಯಾಸ ತುಂಬ ಕಡಿಮೆ. ಐತಿಹ್ಯವು ಜನಶೃತಿಯೆಂದಾದರೆ, ಲೋಕೋಕ್ತಿಯು ಗಾದೆಮಾತೆನ್ನಬೇಕು.

ಅಶೋಕವನದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲಿದ್ದ ಸೀತೆಯನ್ನು ಕಂಡು ಆಕೆಯನ್ನು ರಾಮವಾರ್ತೆಯಿಂದ ಮತ್ತೆ ಜೀವನ್ಮುಖಿಯಾಗಿಸಿದ ಹನೂಮಂತನು ಅವಳಿಗೆ ಧೈರ್ಯ ಹೇಳುವ ಮಾತಿದು:

**ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮೇ ।**
**ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ** ॥ (೫.೩೪.೬)

ಅಮ್ಮಾ, ಇದೊಂದು ಮಂಗಳಕರವಾದ ಗಾದೆಮಾತು ನನಗೆ ಸ್ಫುರಿಸುತ್ತಿದೆ; ಭರವಸೆ ನೀಗದೆ ಬಾಳಿದಲ್ಲಿ ನೂರಾರು ವರ್ಷಗಳು ಉರುಳಿದ ಬಳಿಕವಾದರೂ ಆನಂದವು ನಮ್ಮ ಹುಡುಕಿಕೊಂಡು ಬರುತ್ತದೆಂಬ ಮಾರುತಿಯ ಮಾತು ಎಲ್ಲರ ಪಾಲಿಗೂ ಆಶಾಕಿರಣ.

ಈ ಮಾತನ್ನು ಮುಂದೆ ಭರತನೂ ಆಡುತ್ತಾನೆ (೬.೧೨೬.೨). ಇದು ಹನುಮನೊಡನೆಯೇ ಅವನು ಹಂಚಿಕೊಂಡ ನುಡಿಯೆಂಬುದೂ ಗಮನಾರ್ಹ. ಈ ಶ್ಲೋಕವನ್ನು "ಕುವಲಯಾನಂದ"ವು ಐತಿಹ್ಯಾಲಂಕಾರಕ್ಕೆ ಉದಾಹರಣೆಯಾಗಿ ನೀಡಿದೆ.

ಅಶೋಕವನಧ್ವಂಸನವನ್ನು ಮಾಡುವ ಹನೂಮಂತನನ್ನು ಕಂಡು ಅಂಜಿ ಸೀತೆಯನ್ನೇ ಪ್ರಶ್ನಿಸುವ ರಾಕ್ಷಸಿಯರಿಗೆ ಆಕೆಯು ಜಾಣ್ಮೆಯಿಂದ ಹಾವಿನ ಹೆಜ್ಜೆಯನ್ನು ಹಾವೇ ಅರಿಯುವಂತೆ ಈ ಎಲ್ಲ ಮಾಯೆಯನ್ನು ನೀವೇ ಅರಿಯಬೇಕೆಂದು ಹೇಳಿ ಜಾರಿಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ಆದಿಕವಿಗಳು ಬಳಸಿಕೊಳ್ಳುವ ಲೋಕೋಕ್ತಿಯು ಗಮನಾರ್ಹ:

**ಅಹಿರೇವ ಹ್ಯಹೇಃ ಪಾದಾನ್ ವಿಜಾನಾತಿ ನ ಸಂಶಯಃ ।** (೫.೪೨.೯)

ರಾವಣನ ಮರಣದ ಬಳಿಕ ವಿಲಪಿಸುತ್ತಿದ್ದ ಮಂದೋದರಿಯು ಪತಿವ್ರತೆಯರ ಕಣ್ಣೀರು ಬಿದ್ದ ನಾಡಿನಲ್ಲಿ ನೆಮ್ಮದಿಯಿರುವುದಿಲ್ಲವೆಂಬ ನಾಣ್ನುಡಿ ಸತ್ಯ; ಇದು ಪ್ರಾಯಶಃ ತನ್ನ ಪತಿಯ ಸಾವಿಗೆ ಹೇತುವಾಯಿತೆಂದು ಹಲುಬುವಳು:

**ಪ್ರವಾದಃ ಸತ್ಯ ಏವಾಯಂ ತ್ವಾಂ ಪ್ರತಿ ಪ್ರಾಯಶೋ ನೃಪ ।**
**ಪತಿವ್ರತಾನಾಂ ನಾಕಸ್ಮತ್ಪತಂತ್ಯಶ್ರೂಣಿ ಭೂತಲೇ ॥** (೬.೧೧೪.೬೭)

**ಯಥಾಸಂಖ್ಯಾಲಂಕಾರವನ್ನು** ಹಲವು ಕರ್ತೃ-ಕ್ರಿಯಾವಾಚಕಗಳ ಸಮಾನಾನುಪೂರ್ವಿಯೆನ್ನಬಹುದು. ಇದೊಂದು ಬಗೆಯಲ್ಲಿ ಶಾಲಾಪರೀಕ್ಷೆಗಳ ಪ್ರಶ್ನಪತ್ರಿಕೆಗಳಲ್ಲಿ ಎದುರಾಗುವ "ಹೊಂದಿಸಿ ಬರೆಯಿರಿ" (Match the Following) ಎಂಬ ಜಾಡಿನದು. ಇದರ ಅಲ್ಪಚಾರುತೆಯ ಕಾರಣದಿಂದಲೇ ಕುಂತಕನು ಇದನ್ನೊಂದು ಅಲಂಕಾರವಾಗಿಯೇ ಲೆಕ್ಕಿಸುವುದಿಲ್ಲ. ಆಧುನಿಕರಾದ ವಿ.ರಾಘವನ್ನಂಥವರೂ ಈ ಅಭಿಪ್ರಾಯವನ್ನು ಅನುಮೋದಿಸುತ್ತಾರೆ. ಆದರೆ ಸಮಾನಶ್ರುತಿಯ ಪದಗಳು ಸೇರಿಕೊಂಡಾಗ ಯಥಾಸಂಖ್ಯಕ್ಕೆ ಅಂದ ಬಾರದಿರದು. ಆದಿಕವಿಗಳು ಇಂಥ ಸನ್ನಿವೇಶಗಳಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆಯುತ್ತಾರೆ.

ರಾಮ-ಸುಗ್ರೀವರ ಸಖ್ಯವಾದೊಡನೆ ವಾಲಿ-ರಾವಣ-ಮೈಥಿಲಿಯರ ಹೊನ್ನಿನಂತೆಯೂ ಬೆಂಕಿಯಂತೆಯೂ ಕಮಲದಂತೆಯೂ ಇರುವ ಎಡಗಣ್ಣುಗಳು ಮಿಡುಕಿದವೆಂದು ಕ್ರಮವಾಗಿ ಸಮೀಕರಿಸುವಾಗಲೇ ಇದು ಪುರುಷರಿಗೆ ಅಪಶಕುನ, ಸ್ತ್ರೀಯರಿಗೆ ಶುಭಶಕುನವೆಂದು ಬೆಳೆದುಬಂದ ನಂಬಿಕೆಯನ್ನು ಆಶ್ರಯಿಸಿದ ಕಾರಣ ಮತ್ತಷ್ಟು ಚಮತ್ಕಾರಕಾರಿಯಾಗಿದೆ. ಹೀಗೆ ಸಾಮಾನ್ಯದ ಅಲಂಕಾರಕ್ಕೂ ಅಂದವನ್ನು ಕಲ್ಪಿಸಬಲ್ಲ ಬಲ್ಮೆ ವಾಲ್ಮೀಕಿಮುನಿಗಳದು:

**ಸೀತಾಕಪೀಂದ್ರಕ್ಷಣದಾಚರಾಣಾಂ**
**ರಾಜೀವಹೇಮಜ್ವಲಪೋಪಮಾನಿ ।**
**ಸುಗ್ರೀವರಾಮಪ್ರಣಯಪ್ರಸಂಗೇ**
**ವಾಮಾನಿ ನೇತ್ರಾಣಿ ಸಮಂ ಸ್ಫುರಂತಿ ॥** (೪.೫.೩೨)

ಇಲ್ಲಿ **'ಸ್ಫುರಂತಿ'** ಎಂಬ ಒಂದೇ ಕ್ರಿಯಾಪದದಲ್ಲಿ ಎಲ್ಲವನ್ನೂ ನಿರ್ವಹಿಸಿದ ಕಾರಣ ಇದು ಸಹೋಕ್ತ್ಯಲಂಕಾರವೂ ಆಗಿದೆ ಅನೇಕಕ್ರಿಯೆಗಳಿಗೆ ಒಂದೇ ವಾಚಕವನ್ನು ಬಳಸಿ ನಿರ್ವಹಿಸಿದಾಗ ಸಹೋಕ್ತ್ಯಲಂಕಾರವು ಸಿದ್ಧಿಸುತ್ತದೆ. ಹೀಗೆ ಹಲವು ಚಮತ್ಕೃತಿಗಳ ಕಾರಣ ಪ್ರಕೃತಪದ್ಯದಲ್ಲಿ ಸೊಗಸು ಮಿಗಿಲೆನಿಸಿದೆ.

ಇದೇ ಅಲಂಕಾರದ ಮತ್ತೊಂದು ಮಾದರಿಯನ್ನು ಮಳೆಗಾಲದ ಬಣ್ಣನೆಯಲ್ಲಿ ಕಾಣಬಹುದು. ಇಲ್ಲಿರುವುದು ಸಾಮಾನ್ಯವಾದ ಜೋಡಣೆ. ಇದು ಅಪ್ಪಟ ಯಥಾಸಂಖ್ಯೆ:

**ವಹಂತಿ ವರ್ಷಂತಿ ನದಂತಿ ಭಾಂತಿ**
**ಧ್ಯಾಯಂತಿ ನೃತ್ಯಂತಿ ಸಮಾಶ್ವಸಂತಿ ।**

**ನದ್ಯೋ ಘನಾ ಮತ್ತಗಜಾ ವನಾಂತಾಃ**
**ಪ್ರಿಯಾವಿಹೀನಾಃ ಶಿಖಿನಃ ಪ್ಲವಂಗಾ** ॥ (೪.೨೮.೨೭)

ಮಳೆಗಾಲದಲ್ಲಿ ನದಿಗಳು, ಮುಗಿಲುಗಳು, ಮತ್ತೇಭಗಳು, ಗಹನಾರಣ್ಯಗಳು, ವಿರಹಿಗಳು, ನವಿಲುಗಳು ಮತ್ತು ಕಪ್ಪೆಗಳು ಕ್ರಮವಾಗಿ ಹರಿಯುತ್ತ, ಸುರಿಯುತ್ತ, ಮೊರೆಯುತ್ತ, ಹೊಳೆಯುತ್ತ, ಹಲುಬುತ್ತ, ನಲಿಯುತ್ತ, ನೆಮ್ಮದಿವಡೆಯುತ್ತಿವೆ.

When the children themselves challenge their mother to establish her conjugal loyalty and threaten to kill her if she fails in this test, it really unhinges the reader. This reminds us of Parashurama who killed his own mother. Similarly, in "Lavakushara Kalaga" we have the sage Valmiki rejuvenating Rama and Lakshmana with the help of the 'Rejuvenating Herb', but in "Lavakushara Kathe" Seetha Devi brings Rama back to life by scattering three palmful of tears.

*Sreerama and Seethamma*
*Look birth as human beings*
*and eventually left for Vaikunta*
*as Lakshminarayana*
*Blessing all*
*Rama Rama.*

Sita underwent so much tribulation in the forest during the exile, the folk poet has captured all the sorrow in three lines:

“ಜನಕರಾಯನ ಮಗಳು ಬನಕೆ ತೊಟ್ಟಿಲಕಟ್ಟಿ
ಲವಕುಶರಿಗೆ ಜನ್ಮವಿತ್ತು ತೂಗ್ಯಾಳು ನಗುನಗುತ
ವನವಾಸ ಕಳೆದಾಳು”

Here the poet very significantly says “the daughter of Janaka” instead of Sita. That means, Sita being the daughter of a great king Janakaraja had to bring up her children by tying a cloth as a cradle to a tree. She has undergone untold suffering to protect her children is captured in a couple of lines. She has spent the period of exile in a cheerful way-that’s what the poet is emphasizing.

The episode called “Seethadevi” contains a slice of *Uttara Ramayana*. This pertains to Kusha-Lava.

Seetha Devi puts her baby in a cradle tied to the big banyan trees and asking ‘Ajja Muniya’ to suring the cradle goes to the stream to wash the clothes. When she starts beating cloth keeping the bundle on a stone, she happens to see a horde of monkeys leaping from branch to branch while their young ones have held the mothers tightly. She says “In case the young ones fall while the mothers are jumping they will surely die”. The monkeys reply in this fashion:

*Listen Listen foolish woman*
*If our young one’s die in our hands*
*Listen Listen Seethadevi, you listen*
*you have left the baby with a blind man.*

They mock at Seetha devi. She suddenly realizes her mistake and rushes home and picking up the child without informing ‘Ajja Muniya’ she returns to the stream to continue her work. “Ajja Muniya” stretches his hand to the cradle and not finding the child there he chants mantra holding ‘darbhe’ in his hand. Thus he obtains another child which he lays in the cradle. This is how Seetha Devi had two children Lava and Kusha. The folk poet has called Valmiki ‘Ajja Muniya’ and has made him blind. This is a bit odd.

***Janapada Ramayana*** is not available in its entirety. But, we are fortunate to have different episodes which form the mosaic striking a kinship with the original story. The urgent task of the scholars is to make continued efforts to obtain the full text of the oral epic before the singers complete their earthly journey.

**Reference:**

1. “Hosamadiya Mele Chanduranga” (Kannada)
   Dr. C.N. Ramachandran, Sapna Book House, 2010.
2. “Kannada Janapadadalli Ramayana Mahabarata”
   Dr. Puttaswamy, S.P. Mohit Prakashana, 2003.
3. “Tamboori Sampradayada Janapada Sampoorna Ramayana”, Dr. B.S. Taiwadi, Annapurna publishers and Distributors, 2013
4. “Devaraguddara Kavyagalu” (Kamsale Padagalu)
   Ed. Dr. P.K. Rajashekhara, Kannada & Culture, 2014 ❐

# ‘ಉತ್ತರಕಾಂಡ’ದಲ್ಲಿ ಕಾಣುವ ಅನುಬಂಧದ ಲಕ್ಷಣಗಳು

ಹಲವು ನೂರುವರ್ಷಗಳಿಂದಲೂ ‘ಉತ್ತರಕಾಂಡ’ ವಾಲ್ಮೀಕಿ ರಾಮಾಯಣದೊಂದಿಗೆ ಸೇರಿಹೋಗಿದೆ. ಆದರೆ ಅದರೊಂದಿಗೇ, ಈ ಉತ್ತರಕಾಂಡ ವಾಲ್ಮೀಕಿಗಳ ರಚನೆಯಲ್ಲ ಎನ್ನಲು ಹಲವು ಕಾರಣಗಳನ್ನು ನೋಡಬಹುದು. ಮೊದಲನೆಯದಾಗಿ, ಇಲ್ಲಿ ಕಾಣುವ ಶೈಲಿ ಹಿಂದಿನ ಕಾಂಡಗಳಿಗಿಂತಲೂ ಭಿನ್ನ. ಇದರಲ್ಲಿ ರಾಮ – ಸೀತೆಯರ ಕಥಾನಕವಿರುವುದು ಕೇವಲ ಎಂಟನೇ ಒಂದರಷ್ಟು ಭಾಗ. ಮಿಕ್ಕೆಲ್ಲಾ ಅಧ್ಯಾಯಗಳಲ್ಲಿ, ರಾಮ ಹಾಗೂ ರಾವಣರ ವಂಶಾವಳಿಗಳು ಮತ್ತು ಇನ್ನಿತರ ವಿವರಗಳು ಕಾಣುತ್ತದೆ.

ಡಾ॥ ಜಯಂತಿ ಮನೋಹರ್

ರಾಮಾಯಣ ಎಂದಾಕ್ಷಣ ಹಲವು ಜನರಿಗೆ ಹಲವು ರೀತಿಯ ಭಾವಗಳು ತುಂಬಿಬರುತ್ತವೆ. ಇದು ನಮ್ಮ ದೇಶಕ್ಕೆ ಮಾತ್ರ ಸೀಮಿತವಾದುದಲ್ಲ. ಶತಮಾನಗಳ ಹಿಂದೆ ಭಾರತದಲ್ಲಿ ರೂಪುಗೊಂಡ ಈ ಮಹಾಕಾವ್ಯ, ಸಾಗರದಾಚೆಯ ನಾಡುಗಳಲ್ಲಿ ಹರಡಿ, ಅಲ್ಲಿನ ಜನಮಾನಸದಲ್ಲಿ ನೆಲೆ ನಿಂತಿರುವುದು ಇಂದೂ ಕೂಡ ನಿಚ್ಚಳವಾಗಿ ಕಂಡುಬರುತ್ತದೆ. ಪ್ರಸಕ್ತ ಶಕೆಯ 500ರ ಸುಮಾರಿಗೆ ಲಿಖಿತರೂಪಕ್ಕೆ ಬಂದ ವಾಲ್ಮೀಕಿ ರಾಮಾಯಣ, ಹಲವು ನೂರು ವರುಷಗಳು ಮೌಖಿಕ ಪರಂಪರೆಯಲ್ಲಿಯೇ ಉಳಿದು ಬಂದ ಸಮಯದಲ್ಲಿ ಅನೇಕ ಮೂಲ ಶ್ಲೋಕಗಳು ಲುಪ್ತವಾಗಿ, ಮತ್ತೆ ಹಲವು ಸೇರ್ಪಡೆಯಾಗಿರುವುದು ಸಹಜ. ಆದರೆ, ಯಾವುದು ಮೂಲ ಯಾವುದು ನಂತರದ ಸೇರ್ಪಡೆಗಳು ಎಂದು ನಿರ್ಧರಿಸುವುದು ಸುಲಭಸಾಧ್ಯವಲ್ಲ. ತಂದೆಯ ಮಾತನ್ನು ಪಾಲಿಸಲು ಕಾಡಿಗೆ ಹೋದ ರಾಮ, ರಾವಣನನ್ನು ಯುದ್ಧದಲ್ಲಿ ಸಂಹರಿಸಿ, ಸೀತಾ ಲಕ್ಷ್ಮಣರೊಡನೆ ಅಯೋಧ್ಯೆಗೆ ಬಂದು ಸುಖವಾಗಿ ರಾಜ್ಯವಾಳುತ್ತಿದ್ದಾನೆ ಎನ್ನುವಲ್ಲಿಗೆ 88 ಶ್ಲೋಕಗಳಲ್ಲಿ ನಾರದರು ರಾಮಕಥೆಯನ್ನು ಮಹರ್ಷಿ ವಾಲ್ಮೀಕಿಗಳಿಗೆ ಹೇಳುತ್ತಾರೆ. ಅದನ್ನು ಮುಂದೆ, ವಾಲ್ಮೀಕಿಗಳು 24 ಸಾವಿರ ಶ್ಲೋಕಗಳಲ್ಲಿ ವಿಸ್ತಾರವಾಗಿ ಹೇಳಿ, ಮಹಾಕಾವ್ಯವಾಗಿಸಿದರು ಎನ್ನುವ ವಿವರಗಳು ಬಾಲಕಾಂಡದಲ್ಲಿ ಕಂಡುಬರುತ್ತದೆ.

ಅನೇಕ ಭಾರತೀಯ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಗೊಂಡು, ಚಿಂತನ ಮಂಥನಗಳಿಗೆ ದಾರಿ ಮಾಡಿಕೊಟ್ಟಿರುವ ನಮ್ಮ ಆದಿಕಾವ್ಯ, ವಾಲ್ಮೀಕಿ ರಾಮಾಯಣದ ಮರುಸೃಷ್ಟಿ ಇಂದು, ಒಂದು ಲಕ್ಷವನ್ನೂ ಮೀರಿ ಬೆಳೆಯುತ್ತಿದೆ. ಹೀಗೆ, ಪ್ರಪಂಚದಾದ್ಯಂತ ನಿರಂತರವಾಗಿ ನಡೆಯುತ್ತಿರುವ ಅಧ್ಯಯನ, ಸಂಶೋಧನೆ ಹಾಗೂ ವಿಚಾರ ವಿಮರ್ಶೆಗಳಿಂದಾಗಿಯೇ ರಾಮಕಥೆ ಇಂದಿಗೂ ಪ್ರಸ್ತುತವಾಗುತ್ತದೆ. ಮೂಲ ಕಥೆಯಲ್ಲಿ ಕಾಣುವ ರಾಮನ ಹಲವು ನಡೆಗಳನ್ನು ಭಾರತದ ಹಾಗೂ ವಿಶ್ವದ ಅನೇಕ ವಿದ್ವಾಂಸರು ವಿಮರ್ಶೆಗೆ ಒಳಪಡಿಸುತ್ತಲೇ ಇದ್ದರೂ, ವಾಲ್ಮೀಕಿಗಳು ಕಡೆದು ನಿಲ್ಲಿಸಿರುವ ರಾಮ – ಸೀತೆಯರ ಉದಾತ್ತ ಚರಿತೆ ಇಂದಿಗೂ ವಿಶ್ವಮಾನ್ಯವಾಗಿದೆ. ಆದಾಗ್ಯೂ, ಈ ಮರುಕಥನಗಳಲ್ಲಿ ಮಹರ್ಷಿ ವಾಲ್ಮೀಕಿಗಳನ್ನು ಗೌರವಾದರಗಳಿಂದ ನೆನೆಯುತ್ತಲೇ, ಮೂಲ ಕಥಾ ಹಂದರದಲ್ಲಿ ಹಲವು ಬದಲಾವಣೆಗಳನ್ನು ತಂದಿರುವುದು ಬಹಳ ಹಿಂದಿನ ಕಾಲದಿಂದಲೂ ಕಾಣುತ್ತದೆ.

ನಮ್ಮ ದೇಶದಲ್ಲಿ ಆರ್ಷ ಕಾವ್ಯಗಳು (ನಾಟಕಗಳೂ ಸೇರಿದಂತೆ) ದುಃಖಾಂತವಾಗಿರುವುದಿಲ್ಲ. ರಾಮಾಯಣವೇ ಹೇಳುವಂತೆ, ಮಹರ್ಷಿ ವಾಲ್ಮೀಕಿಗಳು ರಚಿಸಿರುವ ರಾಮಾಯಣ ಮಹಾಕಾವ್ಯ ಮಹತ್ತರವಾದ ಸೀತಾಚರಿತೆಯೂ ಹೌದು – “ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್.. ಚಕಾರ ಚರಿತವ್ರತಃ” (ಬಾಲಕಾಂಡ: 4–7). ರಾಮಾಯಣದ ಮೊದಲ ಕಾಂಡಗಳಲ್ಲಿ, (ಅರಣ್ಯ, ಕಿಷ್ಕಿಂಧ, ಸುಂದರ) ರಾಮ–ಸೀತೆಯರನ್ನು ಆದರ್ಶದಂಪತಿಗಳನ್ನಾಗಿ ಕಡೆದು ನಿಲ್ಲಿಸಿರುವ ವಾಲ್ಮೀಕಿಗಳು, ರಾಮ ಪಟ್ಟಾಭಿಷೇಕದೊಂದಿಗೆ ಸುಖಾಂತವಾದ ತಮ್ಮ ರಾಮಾಯಣವನ್ನು ಮತ್ತೆ ಮುಂದುವರೆಸಿ, ಉತ್ತರಕಾಂಡದಲ್ಲಿ ದುಃಖಾಂತವಾಗಿಸುವುದು ವಾಲ್ಮೀಕಿಗಳ ಆಶಯವಾಗಿತ್ತೇ ಎನ್ನುವ ಪ್ರಶ್ನೆ ಕಾಡುತ್ತದೆ. ಹಾಗಾಗಿಯೇ, ಲಂಕೆಯಲ್ಲಿ ರಾವಣ ವಧೆಯಾಗಿ ರಾಮ ಸೀತೆಯರು ಲಕ್ಷ್ಮಣನೊಂದಿಗೆ ಮರಳಿ ಬಂದು ರಾಮ ಪಟ್ಟಾಭಿಷೇಕವಾಗುವುದರೊಂದಿಗೆ ವಾಲ್ಮೀಕಿ ರಾಮಾಯಣ ಶುಭಕರವಾಗಿ ಸಂಪೂರ್ಣಗೊಂಡಿದೆ ಎಂಬ ನಂಬಿಕೆ ನಮ್ಮಲ್ಲಿರುವುದು ಅನೇಕ ವಿಚಾರಗಳಿಂದ ಸ್ಪಷ್ಟವಾಗಿಯೇ ಕಂಡುಬರುತ್ತದೆ. ಈ ಪಾರಂಪರಿಕ ನಂಬಿಕೆಯಿಂದಾಗಿಯೇ ನೂರಾರು ವರ್ಷಗಳಿಂದಲೂ **ನಮ್ಮ ಎಲ್ಲಾ ದೇವಾಲಯಗಳಲ್ಲಿಯೂ ಸೀತಾದೇವಿಯೊಂದಿಗೇ ರಾಮ ಪೂಜೆಗೊಳ್ಳುತ್ತಾನೆ. ಸೀತೆಯಿಲ್ಲದೆ ರಾಮನಿಲ್ಲ.**

### ‘ಉತ್ತರಕಾಂಡ’ ವಾಲ್ಮೀಕಿಗಳ ರಚನೆಯೇ?

**ಹಲವು ನೂರುವರ್ಷಗಳಿಂದಲೂ ‘ಉತ್ತರಕಾಂಡ’ ವಾಲ್ಮೀಕಿ ರಾಮಾಯಣದೊಂದಿಗೆ ಸೇರಿಹೋಗಿದೆ. ಆದರೆ ಅದರೊಂದಿಗೇ,** ಈ ಉತ್ತರಕಾಂಡ ವಾಲ್ಮೀಕಿಗಳ ರಚನೆಯಲ್ಲ ಎನ್ನಲು ಹಲವು ಕಾರಣಗಳನ್ನು

ನೋಡಬಹುದು. ಮೊದಲನೆಯದಾಗಿ, ಇಲ್ಲಿ ಕಾಣುವ ಶೈಲಿ ಹಿಂದಿನ ಕಾಂಡಗಳಿಗಿಂತಲೂ ಭಿನ್ನ. ಇದರಲ್ಲಿ ರಾಮ – ಸೀತೆಯರ ಕಥಾನಕವಿರುವುದು ಕೇವಲ ಎಂಟನೇ ಒಂದರಷ್ಟು ಭಾಗ. ಮಿಕ್ಕೆಲ್ಲಾ ಅಧ್ಯಾಯಗಳಲ್ಲಿ, ರಾಮ ಹಾಗೂ ರಾವಣರ ವಂಶಾವಳಿಗಳು ಮತ್ತು ಇನ್ನಿತರ ವಿವರಗಳು ಕಾಣುತ್ತದೆ. ಎಲ್ಲಕ್ಕಿಂತಲೂ ಎದ್ದು ತೋರುವ ಅಂಶವೆಂದರೆ, ರಾಮ ಸೀತೆಯರಿಗೆ ಮಗನಂತಿದ್ದ ಹನುಮಂತನ ಅನುಪಸ್ಥಿತಿ. ಒಂದೊಮ್ಮೆ, ವಾಲ್ಮೀಕಿಗಳೇ ಇದನ್ನೂ ರಚಿಸಿದ್ದರೆ, ಹನುಮಂತನನ್ನು ದೂರವಿಡುವುದು ಸಾಧ್ಯವಿರಲಿಲ್ಲ. ಲಂಕೆಯಲ್ಲಿ ನಡೆದ ಅಗ್ನಿಪರೀಕ್ಷೆಯನ್ನು ಕಣ್ಣಾರೆ ಕಂಡಿದ್ದ ವಾಯುಪುತ್ರನು ಅಯೋಧ್ಯಾ ಜನರು ಸೀತಾದೇವಿಯನ್ನು ಸಂದೇಹಿಸಿದಾಗ ಸುಮ್ಮನಿರುತ್ತಿದ್ದನೇ ? ಅಷ್ಟೇ ಅಲ್ಲದೆ, ಲಂಕೆಯಿಂದ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಬಂದ ಸಾವಿರಾರು ದಾನವರು, ವಾನರರು ಲಂಕೆಯಲ್ಲಿ ಸೀತಾದೇವಿಗೆ ನಡೆದ ಅಗ್ನಿಪರೀಕ್ಷೆಯನ್ನು ಅಯೋಧ್ಯೆಯ ಜನರಿಗೆ ಹೇಳಿರುತ್ತಾರಲ್ಲವೇ ? ಹಾಗಿದ್ದೂ ಅವರು ಸೀತೆಯ ಪಾವಿತ್ರ್ಯವನ್ನು ಸಂದೇಹಿಸುವ ಸಂಭವ ಇಲ್ಲ ಎಂದೇ ಹೇಳಬೇಕಾಗುತ್ತದೆ.

ಹೀಗೆ ಹಲವಾರು ಕಾರಣಗಳು ಎದ್ದು ತೋರುವಂತಹದಾಗಿದ್ದಾಗ್ಯೂ, ಉತ್ತರಕಾಂಡವನ್ನು ವಾಲ್ಮೀಕಿ ರಾಮಾಯಣದ ಕೊನೆಯ ಭಾಗವಾಗಿ ನೋಡುವುದು ಭಾರತದ ಉದ್ದಗಲದಲ್ಲಿಯೂ ಕಾಣುತ್ತದೆ. ಅದರೊಂದಿಗೆ ರಾಮಾಯಣ ಹರಿದು ಹೋಗಿರುವ ಸಾಗರೋತ್ತರ ನಾಡುಗಳಲ್ಲಿಯೂ ಇದು ಸೇರಿಕೊಂಡು ಬಂದಿದೆ. **ಹಾಗಾಗಿ ಈ ಭಾಗವನ್ನು 'ಮೂಲ ಉತ್ತರಕಾಂಡ' ಎಂದು ಅಥವಾ ರಾಮಾಯಣದ ಒಂದು ಅನುಬಂಧ ಎನ್ನಬಹುದು.**

### ಮೂಲ 'ಉತ್ತರ ಕಾಂಡ'ದಲ್ಲಿ ಕಾಣುವ ಸೀತಾಪರಿತ್ಯಾಗ

ಮೂಲ 'ಉತ್ತರ ಕಾಂಡ'ದಲ್ಲಿ ಕಾಣುವ ಸೀತಾಪರಿತ್ಯಾಗ ಇಂದಿಗೂ ತೀವ್ರ ವಿಶ್ಲೇಷಣೆಗೆ ಒಳಪಟ್ಟಿರುವ ವಿಚಾರ. ಇದು ರಾಮನ ಹೆಗಲಿಗೇರಿರುವ ದೊಡ್ಡ ದೋಷವೂ ಹೌದು. ರಾವಣನಿಂದ ಅಪಹೃತಳಾದ ಸೀತೆಯನ್ನು ನೆನೆಯುವಾಗಲಾಗಲೀ, ಕಾಡಿನಲ್ಲಿ ಅವರಿಬ್ಬರು ಕಳೆದ ದಿನಗಳ ಚಿತ್ರಣದಲ್ಲಾಗಲೀ, ವಾಲ್ಮೀಕಿಯ ರಾಮ ಸೀತೆಯ ಮೇಲಿನ ತನ್ನ ಒಲವನ್ನು ಆಪ್ಯಾಯಮಾನವಾಗಿ ತೋರುತ್ತಾನೆ. ಹಲವು ನೂರು ವರುಷಗಳ ತರುವಾಯ ಬೇರೆ ಯಾವುದೋ ಕವಿಯಿಂದ 'ವಾಲ್ಮೀಕಿ'ಗಳ ಅಂಕಿತದಲ್ಲಿ ಸೀತಾ ಪರಿತ್ಯಾಗದ ಕಥನವಿರುವ 'ಉತ್ತರ ಕಾಂಡ' ರಚನೆಯಾಗಿರಬಹುದು ಎನ್ನುವ ವಿಚಾರವನ್ನು ಹಲವು ವಿದ್ವಾಂಸರು ಮುಂದಿಡುತ್ತಾರೆ. ಹಾಗಾಗಿ, ಹಿಂದಿನ ಕಾಲಘಟ್ಟದ ಅನೇಕ ಕವಿಗಳು ಉತ್ತರಕಾಂಡವನ್ನೇ ಕೈಬಿಟ್ಟು, ರಾಮನ ಪಟ್ಟಾಭಿಷೇಕದೊಂದಿಗೆ ಸೀತಾ ರಾಮರು ಸೌಖ್ಯವಾಗಿದ್ದರು ಎಂದು ಸುಖಾಂತವಾಗಿಸಿದ್ದಾರೆ.

### ವನವಾಸದಲ್ಲಿ ರಾಮ ಸೀತೆಯರ ಅನ್ಯೋನ್ಯ ದಾಂಪತ್ಯ – ಪಂಚವಟಿಯಲ್ಲಿ ಸುಖ ಸಂಸಾರ

ಪಂಚವಟಿಯಲ್ಲಿ ಲಕ್ಷ್ಮಣ ರಾಮ–ಸೀತೆಯರ ಏಕಾಂತವಾಸಕ್ಕಾಗಿ ವಿಶೇಷವಾಗಿ ಸುಂದರವಾದ ಒಂದು ಕೊಠಡಿಯನ್ನು ನಿರ್ಮಿಸಿ ನೆಲವನ್ನು ಸಮತಟ್ಟಾಗಿಸಿ ಸುಂದರಗೊಳಿಸುತ್ತಾನೆ. ದೂರದಲ್ಲಿ ಕಾಣಿಸುವ ರಮಣೀಯ ಪರ್ವತಶ್ರೇಣಿ, ಹತ್ತಿರದಲ್ಲಿಯೇ ಇದ್ದ ತಾವರೆ ಕೊಳ, ಗೋದಾವರೀ ನದಿ, ಸುತ್ತಲೂ ಕಾಣುವ ಹೂ ಬಿಡುವ ಮರಗಳು, ಸ್ವೇಚ್ಛೆಯಾಗಿ ಸಂಚರಿಸುತ್ತಾ ಕಲರವ ಮಾಡುತ್ತಿರುವ ಪಶು–ಪಕ್ಷಿ ಸಂಕುಲಗಳು ಜಾನಕಿಯ ಮನವನ್ನು ಮುದಗೊಳಿಸುತ್ತವೆ. ಹೀಗೆ ಲಕ್ಷ್ಮಣ ನಿರ್ಮಿಸಿದ ಸುಂದರ ಪರ್ಣಶಾಲೆಯಲ್ಲಿ ಅವರ ಜೀವನ ಬಹುಕಾಲ ಸುಖಮಯವಾಗಿ ಸಾಗಿತು ಎಂದು ತಿಳಿಯುತ್ತದೆ. ಆದರೆ, ರಾಮ ಸೀತೆಯರ ಗಾಢ ಅನುಬಂಧದ ವಿವರಗಳು ಆ ಸಮಯದಲ್ಲಿ ಕಾಣದಿದ್ದರೂ, ವಾಲ್ಮೀಕಿಗಳು ಅದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹೇಳುವುದನ್ನು ಗಮನಿಸಬಹುದು.

ಮುಂದಿನ ಸುಂದರಕಾಂಡದಲ್ಲಿ, ಹನುಮಂತ ಹಾಗೂ ಸೀತೆಯರ ನಡುವೆ ನಡೆದ ಸಂಭಾಷಣೆಯಲ್ಲಿ, ರಾಮ ಸೀತೆಯರ ನಡುವಿನ ಮಧುರ

ಅನುಬಂಧದ ಒಂದೆರಡು ವಿವರಗಳು ಕಾಣುತ್ತವೆ. ಚಿತ್ರಕೂಟದಲ್ಲಿ ಒಮ್ಮೆ, ಸೀತೆಯನ್ನು ಕುಕ್ಕಿ ಹಿಂಸೆ ಮಾಡಿದ ಕಾಗೆರೂಪದ ಇಂದ್ರನ ಮಗನ ಮೇಲೆ ರಾಮ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದ್ದ ಸಂಗತಿಯನ್ನು ಸೀತೆ ಹನುಮಂತನಿಗೆ ಹೇಳುತ್ತಾಳೆ. ಹಾಗೆಯೇ ಅಲ್ಲಿ, ಹನುಮಂತನು, ಪ್ರಸ್ರವಣ ಗಿರಿಯಲ್ಲಿ ತಂಗಿರುವ ರಾಮನ ಮನಸ್ಸು ಸೀತೆಯಲ್ಲಿಯೇ ಲಯಿಸಿಹೋಗಿರುವುದರಿಂದ, ತನ್ನ ಮೈಮೇಲೆ ಕಾಡುನೊಣಗಳಾಗಲೀ ಸೊಳ್ಳೆಯಾಗಲೀ ಎರಗಿದರೆ ಅವುಗಳನ್ನು ಓಡಿಸುವುದಿಲ್ಲ. ಸದಾ ಶೋಕದಲ್ಲಿ ಮುಳುಗಿರುವ ಅವನಿಗೆ ನಿದ್ರೆ ಎಂಬುದೇ ಇಲ್ಲ. ಅಕಸ್ಮಾತ್ತಾಗಿ ಕ್ಷಣಕಾಲ ನಿದ್ರೆ ಬಂದರೂ, 'ಹಾ ಸೀತೆ' ಎಂದು ಕನವರಿಸುತ್ತಲೇ ಎಚ್ಚರಗೊಳ್ಳುವನು ಎಂದು ರಾಮನು ಸೀತಾವಿಯೋಗದಲ್ಲಿ ಪಡುತ್ತಿರುವ ಶೋಕವನ್ನು ಹೇಳುತ್ತಾನೆ.

ದಂಡಕಾರಣ್ಯ ಪ್ರವೇಶಿಸುತ್ತಲೇ ಎದುರಾದ ದೈತ್ಯ ವಿರಾಧ ಸೀತೆಯನ್ನು ಹಿಡಿದಾಗಲೂ ಅತೀವವಾಗಿ ಮರುಗುವ ರಾಮ ಅದು ತನಗೆ, ತಂದೆಯ ಸಾವಿಗಿಂತಲೂ ರಾಜ್ಯ ತಪ್ಪಿಹೋದದ್ದಕ್ಕಿಂತಲೂ ಮೀರಿದ ಯಾತನೆ ತಂದಿದೆ ಎಂದು ಹೇಳುತ್ತಾ ವ್ಯಾಕುಲನಾಗುತ್ತಾನೆ. ಸೀತೆಯನ್ನು ಹುಡುಕುತ್ತಾ ಹೋಗುವ ರಾಮನಿಗೆ ಮೊದಲು ಕಾಣುವುದು ಸೀತೆಯ ಮುಡಿಯಿಂದ ಕೆಳಗೆ ಬಿದ್ದಿರುವ ಹೂವುಗಳು. ಅದನ್ನು ನೋಡುತ್ತಾ, ಆ ಹೂವುಗಳು ತಾನೇ ಸ್ವತಃ ಗಿಡದಿಂದ ಕಿತ್ತು ತಂದು, ಪೋಣಿಸಿ ಸೀತೆಯ ಮುಡಿಯಲ್ಲಿ ಮುಡಿಸಿದ್ದ ಹೂವುಗಳೆಂದು ರಾಮ ಗುರುತಿಸುತ್ತಾನೆ.

### ರಾಮನಿಗೆ ಸೀತೆಯ ಪಾವಿತ್ರ್ಯದಲ್ಲಿ ಅನುಮಾನವಿತ್ತೇ ?

**ಪ್ರಿಯ ಪತ್ನಿಯನ್ನು ಕಾಣದೆ ರಾಮನ ಶೋಕ** – ತಮ್ಮ ಕುಟೀರದಲ್ಲಿ ಸೀತೆಯನ್ನು ಕಾಣದೆ ಸುತ್ತ ಮುತ್ತಲ ಪ್ರದೇಶಗಳಲ್ಲಿ ಅವಳನ್ನು ಹುಡುಕುತ್ತಾ ಬಹುವಾಗಿ ಪರಿತಪಿಸುವ ರಾಮ ಸಹೃದಯರನ್ನು ಆರ್ದ್ರಗೊಳಿಸುತ್ತಾನೆ. ಸೀತಾಪಹರಣದ ಶೋಕದಿಂದ ಸತ್ತುಹೋಗುತ್ತೇನೆ (ಸೀತಯಾ ರಹಿತೋ–ಹಂ ವೈ ನ ಹಿ ಜೀವಾಮಿ ಲಕ್ಷ್ಮಣ) ಎಂದು ಹತಾಶನಾಗುವ ರಾಮ, ಮೇಲಣ ಲೋಕದಲ್ಲಿ ಎದುರಾಗುವ ತಂದೆ ತನ್ನ ಬಗ್ಗೆ ಏನು ಹೇಳಿಯಾನೆಂದು ಕಳವಳಗೊಳ್ಳುತ್ತಾನೆ. ಹೂವು, ಗಿಡ, ಮರ, ಬಳ್ಳಿ, ಜಿಂಕೆ, ಗಜರಾಜ, ವ್ಯಾಘ್ರ, ಗೋದಾವರೀ ನದಿ, ತಾವರೆ ಕೊಳ, ಪರ್ವತ ಹೀಗೆ ಕಣ್ಣಿಗೆ ಕಂಡದ್ದನ್ನೆಲ್ಲವನ್ನೂ ಸೀತೆಯ ಸುದ್ದಿಯನ್ನು ತಿಳಿಸಲು ಬೇಡಿಕೊಳ್ಳುತ್ತಾನೆ.

ಮುಂದೆ, ರಾವಣನಿಂದ ಅಪಹೃತಳಾದ ಸೀತೆಯನ್ನು ಹುಡುಕುತ್ತಾ ಹೋದ ರಾಮ–ಲಕ್ಷ್ಮಣರು ಸುಗ್ರೀವನ ಸಖ್ಯ ಮಾಡಿ, ವಾಲಿವಧೆಯ ತರುವಾಯ ಸುಗ್ರೀವ ರಾಜನಾದಾಗ ಮಳೆಗಾಲ. ಹಾಗಾಗಿ ಸೀತೆಯ ಅನ್ವೇಷಣೆಗೆ ಹೊರಡಲು ಯುಕ್ತ ಕಾಲಕ್ಕಾಗಿ ಕಾಯಬೇಕಾಯಿತು. ಸೀತೆಯ ನೆನಪಿನಲ್ಲಿ ನಿದ್ರೆಯೇ ಬಾರದ ಆ ದಿನಗಳಲ್ಲಿ ರಾಮ ಪಟ್ಟ ವೇದನೆಯನ್ನು ಬಣ್ಣಿಸುವ ವಾಲ್ಮೀಕಿಗಳು, ಸೀತಾಪಹರಣದ ನೋಟವನ್ನು ರಾಮನ ಬಾಯಲ್ಲಿಯೇ ಹೇಳಿಸುತ್ತಾರೆ. ನೀಲಮೇಘದ ನಡುವೆ ಮಿಂಚುವ ಮಿಂಚನ್ನು ಕಂಡ ರಾಮ, ರಾವಣನ ಅಂಕದಲ್ಲಿ (ತೊಡೆಯಮೇಲೆ) ಅನಾಥೆಯಾಗಿ ಸಂಕಟಪಟ್ಟ ತಪಸ್ವಿನೀ ಸೀತೆಯಂತೆ ಇದು ಮಿಂಚುತ್ತಿದೆ" ಎಂದು ಲಕ್ಷ್ಮಣನೊಡನೆ ಹೇಳಿಕೊಂಡು ಸಂಕಟಪಡುತ್ತಾನೆ. ಆಗ ಯಾವುದೇ ಋಣಾತ್ಮಕ ಭಾವ ವಾಲ್ಮೀಕಿಯ ರಾಮನನ್ನು ಕಾಡುವುದಿಲ್ಲ.

**ನೀಲಮೇಘಾಶ್ರಿತಾ ವಿದ್ಯುತ್ ಸ್ಫುರಂತೀ ಪ್ರತಿಭಾತಿ ಮೇ ।**
**ಸ್ಫುರಂತೀ ರಾವಣಸ್ಯಾಂಕೇ ವೈದೇಹೀವ ತಪಸ್ವಿನೀ ॥**

(ಕಿಷ್ಕಿಂಧಾಕಾಂಡ: ಸರ್ಗ: 28:12)

### ಯುದ್ಧಕಾಂಡದಲ್ಲಿ ಕಾಣುವ ಅಗ್ನಿಪ್ರವೇಶ

ವಾಲ್ಮೀಕಿಗಳ ರಚನಾ ಶೈಲಿಯಿಂದ ಭಿನ್ನವಾಗುವ ಪ್ರಮುಖ ಸಂದರ್ಭಗಳಲ್ಲಿ ಅಗ್ನಿ ಪ್ರವೇಶದ ಸಂದರ್ಭವೂ ಒಂದು. ಪೂರ್ವ ಕಾಂಡಗಳಲ್ಲಿ ಎಲ್ಲಿಯೂ, ಸೀತೆಯ ಮೇಲೆ ಲವಲೇಶ ಸಂಶಯವನ್ನೂ

ಹೊಂದಿರದ ರಾಮ, ಯುದ್ಧಕಾಂಡದಲ್ಲಿ, ಅಗ್ನಿಪ್ರವೇಶದ ಸಮಯದಲ್ಲಿ ತೋರುವ ಕಾಠಿಣ್ಯದ ನಿಲುವು ಕವಿಗಳನ್ನಷ್ಟೇ ಅಲ್ಲದೆ ದೇಶ ವಿದೇಶದ ಚಿಂತಕರನ್ನು ಹಲವು ಬಗೆಯ ಜಿಜ್ಞಾಸೆಗಳಿಗೆ ಒಳಪಡಿಸಿದೆ. ವಾಲ್ಮೀಕಿಗಳು ಚಿತ್ರಿಸಿರುವ ಧೀರೋದಾತ್ತ ನಾಯಕನಾದ ರಾಮನ ನಡೆ, ಯುದ್ಧಕಾಂಡದ ಕೊನೆಯಲ್ಲಿ, ಹಳಿ ತಪ್ಪಿಬಿಡುವುದನ್ನು ಸಮರ್ಥನೆ ಮಾಡುವ ಕವಿಗಳ ಪ್ರಯತ್ನಗಳೆಲ್ಲವೂ ಸೋತಿವೆ ಎಂದೇ ಹೇಳಬೇಕಾಗುತ್ತದೆ. ಹಾಗಾಗಿಯೇ ಹಲವಾರು ಮರುಕಥನಗಳಲ್ಲಿ ಈ ಪ್ರಸಂಗ ಕಾಣುವುದಿಲ್ಲ. ಸಂಸ್ಕೃತ ನಾಟಕಗಳ ಪಿತಾಮಹ, ಭಾಸನ ನಾಟಕಗಳಲ್ಲಿ ಇದರ ಸುಳುಹೂ ಕಾಣುವುದಿಲ್ಲ.

ಸೀತೆ ಅಗ್ನಿಯನ್ನು ಹೊಕ್ಕು ಪವಿತ್ರಳಾಗಿ ಹೊರಬಂದ ಮೇಲೆ, ತನಗೆ ಜಾನಕಿಯ ಚಾರಿತ್ರ್ಯದಲ್ಲಿ ಯಾವುದೇ ಸಂಶಯವಿಲ್ಲವೆಂದೂ, 'ತಾನು ಮಾಡಿದ್ದು ಕೇವಲ ಲೋಕದ ಜನರನ್ನು ನಂಬಿಸುವುದಕ್ಕಾಗಿ' ಎಂದು ಬಿಡುವ ರಾಮ ಅಚ್ಚರಿಮೂಡಿಸುತ್ತಾನೆ (ಪ್ರತ್ಯಯಾರ್ಥಂ ಹಿ ಲೋಕಾನಾಂ...). **ರಾಮನ ಈ ಮಾತಿನ ಬಗ್ಗೆ, ನಮ್ಮ ನಾಡಿನ ಶ್ರೇಷ್ಠ ಚಿಂತಕರಾದ ಡಿ.ವಿ.ಗುಂಡಪ್ಪನವರು, "ಈ ಸಬೂಬು ನನ್ನ ಮನಸ್ಸಿಗೆ ಕುಂಟು ಸಬೂಬಾಗಿ ಕಾಣಿಸುತ್ತದೆ. ಶ್ರೀರಾಮನ ಬಾಯಲ್ಲಿ ಹೀಗೆ ಆಡಿಸಿದವರು, ವಾಲ್ಮೀಕಿ ಮಹರ್ಷಿಗಳೋ ಅಥವಾ ಬೇರೊಬ್ಬ ರಾಮಭಕ್ತ ಕವಿಯೋ ಎಂದು ನನ್ನ ಮನಸ್ಸಿನಲ್ಲಿ ಶಂಕೆ ಹುಟ್ಟುತ್ತದೆ" ಎನ್ನುತ್ತಾರೆ (ಶ್ರೀಮದ್ವಾಲ್ಮೀಕಿ ರಾಮಾಯಣ, ಯುದ್ಧಕಾಂಡದ ಮುನ್ನುಡಿ – ಅನುವಾದ, ವಿದ್ವಾನ್ ಎನ್.ರಂಗನಾಥಶರ್ಮಾ).** ಕುವೆಂಪುರವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ, ರಾಮನೂ ಸೀತೆಯೊಡನೆ ಅಗ್ನಿಯನ್ನು ಹೊಕ್ಕು ಹೊರಬರುವಂತೆ ಅವರು ತಂದಿರುವ ಮಾರ್ಪಾಡು ಮನೋಜ್ಞವಾದುದು.

### ಮೂಲ 'ಉತ್ತರಕಾಂಡ'ದಲ್ಲಿ ಕಾಣುವ ಅಲೌಕಿಕ ಚಮತ್ಕಾರೀ ಘಟನೆಗಳು

ಸೀತೆಯ ಸುವರ್ಣ ಪ್ರತಿಮೆಯನ್ನು ಇಟ್ಟುಕೊಂಡು ಮಾಡಿದ ಅಶ್ವಮೇಧ ಯಾಗದ ಸಮಯದಲ್ಲಿ, ರಾಮಚಂದ್ರ ಲವ-ಕುಶರಿಂದ ರಾಮಾಯಣ ಗಾನ ಕೇಳಿ ಅವರು ತನ್ನ ಮಕ್ಕಳೇ ಎಂದು ಗುರುತಿಸುತ್ತಾನೆ. ಆದರೂ, ಸೀತೆ ಎಲ್ಲರೆದುರಿಗೆ ಬಂದು, ತನ್ನ ಪಾವಿತ್ರ್ಯವನ್ನು ಪ್ರತಿಜ್ಞೆಯಿಂದ ಸಿದ್ಧಮಾಡಬೇಕೆಂದು ಹೇಳುತ್ತಾನೆ. ಯಾವುದೇ ಮಹಿಳೆಗೆ ಸಾವಿರಾರು ಜನರ ಮುಂದೆ ನಿಂತು ತನ್ನ ಪಾವಿತ್ರ್ಯ ಸಿದ್ಧಮಾಡಬೇಕಾಗುವ ಸನ್ನಿವೇಶ ಅತ್ಯಂತ ಖೇದಕರ. ಅವಳಿಗೆ ಇಂತಹ ಬದುಕೇ ಬೇಡ ಎನಿಸುವುದು ಅತ್ಯಂತ ಸಹಜವಾದ ಪ್ರಕ್ರಿಯೆ. ಹಾಗಾಗಿಯೇ ಅಲ್ಲಿ ಸೀತೆ, "ರಾಘವನನ್ನಲ್ಲದೆ ನಾನು ಬೇರಾರನ್ನೂ ಮನಸ್ಸಿನಲ್ಲೂ ಚಿಂತಿಸದಿರುವುದು ಸತ್ಯವಾದಲ್ಲಿ, ಭೂದೇವಿ ನನಗೆ (ತನ್ನಲ್ಲಿ) ಅವಕಾಶ ಕೊಡಲಿ" ಎಂದು ಕರೆದ ಕೂಡಲೇ ಭೂತಲದಿಂದ ಎದ್ದು ಬರುವ ಭೂಮಿತಾಯಿ ಮಗಳನ್ನು ತನ್ನೊಡನೆ ಕರೆದುಕೊಂಡು ಹೋಗುತ್ತಾಳೆ. ಹೀಗೆ, ಅಭೂತಪೂರ್ವ ಅಲೌಕಿಕ ಚಮತ್ಕಾರೀ ಘಟನೆ ಜರುಗಿ, ಅಯೋಧ್ಯಾ ಜನರ ಮುಂದೆ, ಸೀತೆಯ ಪಾವಿತ್ರ್ಯ ಸಿದ್ಧವಾದಾಗಲೂ ಸೀತಾರಾಮರ ಸಮಾಗಮವಾಗದೆ, ಅವಳ ಬದುಕು ದುರಂತವಾಗಿಬಿಡುವುದನ್ನು ಬಹುತೇಕ ಪ್ರಾಚೀನ ಕವಿಗಳು ಒಪ್ಪದಿರುವುದು ಸ್ಪಷ್ಟವಾಗಿ ಕಾಣುತ್ತದೆ.

### ಪೂರ್ವಸೂರಿಗಳ 'ಉತ್ತರ ಕಾಂಡ'ದ ಕಥಾನಕದಲ್ಲಿ ಕಾಣುವ ಮಾರ್ಪಾಡುಗಳು

'ಉತ್ತರಕಾಂಡ'ಕ್ಕಿಂತ ಭಿನ್ನವಾದ ನಿಲುವನ್ನು ಹೊಂದಿರುವ ಪದ್ಮಪುರಾಣದ ಪಾತಾಲಖಂಡದ ಪ್ರೇರಣೆಯೊಂದಿಗೆ ಸಾಗಿದ ಪ್ರಾಚೀನ ಸಂಸ್ಕೃತ ಕವಿಗಳಲ್ಲಿ ದಿಙ್ನಾಗ ಹಾಗೂ ಭವಭೂತಿ ಮೊದಲ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಪ್ರಸಕ್ತ ಶಕೆಯ ಐದನೇ ಶತಮಾನಕ್ಕೆ ಸೇರುವ ದಿಙ್ನಾಗನ ನಾಟಕ 'ಕುಂದಮಾಲಾ' ಹಾಗೂ ಎಂಟನೇ ಶತಮಾನದ ಭವಭೂತಿಯ 'ಉತ್ತರರಾಮಚರಿತೆ'ಗಳು ಈ ದಿಸೆಯಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟಿವೆ. 'ಕುಂದಮಾಲಾ'ದಲ್ಲಿ, 'ದಿವ್ಯರೂಪಧಾರಿಣಿಯಾದ ಪೃಥ್ವೀದೇವಿಯೇ ನನ್ನ ಪಾತಿವ್ರತ್ಯಕ್ಕೆ ಸಾಕ್ಷಿ ಹೇಳಲಿ' ಎಂದು ಸೀತೆ ಶಪಥ ಮಾಡುತ್ತಿದ್ದಂತೆಯೇ, ಪಾತಾಳದಿಂದ ಆಕಾಶವನ್ನು ವ್ಯಾಪಿಸುವ ತುಮುಲ ನಾದ ಉತ್ಪನ್ನವಾಗುತ್ತದೆ. ಪರ್ವತಗಳು ನಡಗುತ್ತವೆ. ಸಮುದ್ರಗಳು

ಉಕ್ಕಿಹರಿದು ಅಲೆಗಳಿಂದ ಸುತ್ತಲಿನ ವನಗಳನ್ನು ಆಕ್ರಮಿಸುತ್ತದೆ. ಇಂತಹ ಅಲೌಕಿಕ ಘಟನೆಗಳೊಂದಿಗೆ ಪಾತಾಳದಿಂದ ಪೃಥ್ವಿದೇವಿಯು ಮೇಲೆ ಬಂದು ಸಾಕ್ಷಿ ಹೇಳುತ್ತಾಳೆ. ಅದನ್ನು ಕಣ್ಣಾರೆಕಂಡ ಜನರೆಲ್ಲರೂ ಸೀತೆಯ ಶುದ್ಧ ಚಾರಿತ್ರ್ಯವನ್ನು ಹೊಗಳುತ್ತಾರೆ. ವಾಲ್ಮೀಕಿಗಳ ಅಣತಿಯಂತೆ ರಾಮ ಸೀತೆಯನ್ನು ಪರಿಗ್ರಹಿಸಿ ಸೀತಾಚರಿತ್ರೆ ಸುಖಾಂತ್ಯವಾಗುತ್ತದೆ.

ಭವಭೂತಿಯೂ ಅದೇ ಆಶಯದಂತೆ, ಪ್ರಸಿದ್ಧ ನಾಟಕ 'ಉತ್ತರ ರಾಮ ಚರಿತ'ದಲ್ಲಿ, ಸೀತೆ ರಾಮನೊಂದಿಗೆ ಅಯೋಧ್ಯೆಗೆ ಮರಳಿ ಹೋಗಿ ಮಕ್ಕಳೊಂದಿಗೆ ಸುಖವಾಗಿ ಬಾಳುವಂತೆ ಚಿತ್ರಿಸಿದ್ದಾನೆ. ಇವರನ್ನು ಅನುಸರಿಸುವ ಕನ್ನಡದ ಲಕ್ಷ್ಮೀಶನೊಂದಿಗೆ ಹಲವಾರು ಆಧುನಿಕ ಕವಿಗಳು ಕಂಡುಬರುತ್ತಾರೆ.

### ಭವಭೂತಿಯ 'ಉತ್ತರ ರಾಮಚರಿತಂ'

'ಮೂಲ ಉತ್ತರಕಾಂಡ'ದಲ್ಲಿ ಕಾಣುವ ಹಲವಾರು ಅನೌಚಿತ್ಯಗಳನ್ನು ಭವಭೂತಿ ಇಲ್ಲಿ ನಿವಾರಣೆ ಮಾಡಿದ್ದಾನೆ. ಋಷ್ಯಾಶ್ರಮವನ್ನು ನೋಡುವ ಬಯಕೆಗಾಗಿಯಾದರೂ, ಗರ್ಭಿಣಿ ಸೊಸೆಯನ್ನು ರಾಮನ ತಾಯಿ ಒಂಟಿಯಾಗಿ ಹೇಗೆ ಕಳುಹಿಸಿದಳು ಎಂದು ಕಾಡುವ ಪ್ರಶ್ನೆಗೆ ಉತ್ತರವಾಗಿ, ಗುರು ವಸಿಷ್ಠರೊಂದಿಗೆ ಸೀತೆಯ ಅತ್ತೆಯರನ್ನು ಅಳಿಯ ಋಷ್ಯಶೃಂಗನ ಯಜ್ಞಕ್ಕೆಂದು ಕಳುಹಿಸಿಬಿಡುತ್ತಾನೆ ಭವಭೂತಿ. ಪಟ್ಟಾಭಿಷೇಕಕ್ಕೆಂದು ಬಂದ ಜನಕಮಹಾರಾಜನೂ ತನ್ನ ರಾಜಧಾನಿಗೆ ಮರಳಿದ ಎಂದು ಹೇಳುತ್ತಾ ವಾಲ್ಮೀಕಿ ಸಂಪೂರ್ಣವಾಗಿ ಮರೆತ ತಂದೆಯ ಅನುಬಂಧವನ್ನು ತೋರುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿ ಕಾಣುವುದಕ್ಕಿಂತಲೂ ಇಲ್ಲಿ ರಾಮ – ಸೀತೆಯರ ಸುಖೀ ದಾಂಪತ್ಯದ ಮನೋಜ್ಞ ಚಿತ್ರಣವಿದೆ. ಗರ್ಭಿಣಿ ಸೀತೆಯೊಂದಿಗೆ ರಾಮ ತಮ್ಮ ಹಿಂದಿನ ಜೀವನದ ಪ್ರಮುಖ ನೋಟಗಳನ್ನು ಕೊಡುವ ಚಿತ್ರಪಟಗಳನ್ನು ನೋಡುವ ದೃಶ್ಯ, ಭವಭೂತಿಯ ಮನೋಜ್ಞ ಕಲ್ಪನೆ. ಹಿಂದಿನ ಸಾಂಸಾರಿಕ ವಾರ್ತಾಲಾಪ ಇಲ್ಲಿಯೂ ಮುಂದುವರೆಯುತ್ತದೆ. ಇಲ್ಲಿಯೇ, ಕವಿ ತನ್ನ ಮುಂದಿನ ದೃಶ್ಯಗಳಿಗೆ ಬೇಕಾದ ಸಂಗತಿಗಳೆಲ್ಲವನ್ನೂ ಬೀಜರೂಪದಲ್ಲಿ ತೋರಿಸುತ್ತಾನೆ. ಮುಂದೆ ಅವೆಲ್ಲವೂ ಬೆಳೆದು ಫಲ ಕೊಡುವುದನ್ನು ಕಾಣುತ್ತೇವೆ. ಜನಸ್ಥಾನದಲ್ಲಿ ಅನ್ಯೋನ್ಯಾನುರಾಗದಿಂದ ಕಳೆದ ಸುಂದರ ದಿನಗಳ ನೆನಪನ್ನು ಬಿಚ್ಚಿಡುವ ಚಿತ್ರಗಳನ್ನು ನೋಡಿ, "ಕೆನ್ನೆಗೆ ಕೆನ್ನೆ ತಗುಲಿಸಿ ತೋಳ್ಬಳಸಿ ಮೆಲ್ಲ ಮೆಲ್ಲನೆ ನಡೆದ ಸಲ್ಲಾಪದಲ್ಲಿ ರಾತ್ರಿ ಕಳೆದದ್ದೇ ತೋರಲಿಲ್ಲ" ಎಂದು, ರಾಮ ಇಲ್ಲಿ ತನ್ನ ಒಲವನ್ನು ಮುಕ್ತವಾಗಿ ತೋರುತ್ತಾನೆ.

ಮುಂದೆ ನಡೆದ, ಕಾಂಚನ ಮೃಗದ ಪ್ರಕರಣ, ಸೀತಾಪಹರಣದಂತಹ ಘೋರ ಘಟನೆಗಳ ನೆನಪು ಬೇಡವಾಗಿ ಚಿತ್ರದರ್ಶನ ಸಾಕೆನಿಸಿದೆ ರಾಮನಿಗೆ. ಸೀತೆಯೂ ಅಂದಿನ ವಿಯೋಗವನ್ನು ನೆನೆದು ಭಯಗೊಳ್ಳುತ್ತಾಳೆ. ಸೀತೆಯ ಅಗ್ನಿದಿವ್ಯ–ಚಿತ್ರದ ಪ್ರಸ್ತಾಪ ರಾಮನಿಗೆ ನೋವು ತರಿಸುತ್ತದೆ. ಆ ಸಮಯದಲ್ಲಿ ತಾನು ಆಡಿದ ಕಠೋರ ಮಾತುಗಳಿಗಾಗಿ ಕ್ಷಮೆ ಬೇಡುತ್ತಾನೆ. ಈ ಅಪವಾದ ಜೀವನದುದ್ದಕ್ಕೂ ನಿಲ್ಲಬಹುದೆಂದು ಖೇದಪಡುತ್ತಾ, ಜಾನಕಿಯ ನೋವೆಲ್ಲವನ್ನೂ ಮರೆಸುವಂತಹ ಮಾತುಗಳಿಂದ ಸಾಂತ್ವನಗೊಳಿಸುತ್ತಾನೆ.

**ಉತ್ಪತ್ತಿಪರಿಪೂತಾಯಾಃ ಕಿಮಸ್ಯಾಃ ಪಾವನಾಂತರೈಃ ।**
**ತೀರ್ಥೋದಕಂ ಚ ವಹ್ನಿಶ್ಚ ನಾನ್ಯತಃ ಶುದ್ಧಿಮರ್ಹತಃ ॥ (1–13)**

"ಹುಟ್ಟಿನಿಂದಲೇ ಪರಿಶುದ್ಧಳಾದವಳಿಗೆ ಬೇರೆ ಶುದ್ಧೀಕರಣವೇಕೆ ? ಪವಿತ್ರ ತೀರ್ಥ ಹಾಗೂ ಸ್ವತಃ ಅಗ್ನಿಯ ಶುದ್ಧಿಗೆ ಬೇರೊಂದು ವಸ್ತು ಬೇಕೇ ?" ಎನ್ನುವ ರಾಮನ ಈ ಮಾತು ಭವಭೂತಿಯ ಘೋಷವಾಕ್ಯ. ಮುಂದೆ, ಸೀತೆಗೆ ತನ್ನ ಪರಿತ್ಯಕ್ತ ಬದುಕನ್ನು ಭರಿಸಲು ಶಕ್ತಿ ತುಂಬಿದ ಇಂತಹ ಮಾತುಗಳೊಂದಿಗೆ ಭವಭೂತಿ ತನ್ನ ರನ್ನ ಸೌಧ ಕಟ್ಟಿದ್ದಾನೆ.

ಸೀತೆಯನ್ನು ಕಾಡಿಗೆ ಕಳುಹಿಸಿದ ನಂತರ, ಅಂದಿನ ಕಾಲದಲ್ಲಿ, ಸಾಮಾನ್ಯ ಸಂಗತಿಯಾಗಿದ್ದ ಬಹು ಪತ್ನಿತ್ವವನ್ನು ನಿರಾಕರಿಸಿದ ರಾಜ ರಾಮ,

ಸೀತೆಯನ್ನೇ ನೆನೆಯುತ್ತಾ ತಾನೂ ತಪಸ್ವಿಯಂತೆಯೇ ಇರುವುದು ರಾಮರಾಜ್ಯದ ಪ್ರಜೆಗಳಿಗೆ ನೋವುಂಟು ಮಾಡಿರಬೇಕಲ್ಲವೇ? ಕಾಲಕ್ರಮೇಣ ಅವರಿಗೆ, ತಾವು ಸೀತೆಯ ಬಗ್ಗೆ ಆಡಿದ ಮಾತು ಕಾಡಿರಬೇಕಲ್ಲವೇ ಎನ್ನುವಂತಹ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು, ಭವಭೂತಿಯ ನಾಟಕ 'ಉತ್ತರ ರಾಮಚರಿತಂ' ಸಾಗುತ್ತದೆ ಸೀತೆಯ ಗೆಳತಿಯಾಗಿ ಬರುವ ವಾಸಂತಿ ರಾಮನೊಂದಿಗೆ ಸೀತಾ ಪರಿತ್ಯಾಗವನ್ನು ಕುರಿತು ಮಾತನಾಡುವುದು, ರಾಮನ ತೊಳಲಾಟ, ಅದೃಶ್ಯಳಾಗಿರುವ ಸೀತೆ ರಾಮನ ಅಳಲನ್ನು ನೋಡಿ ಮರುಗುವುದು (ಛಾಯಾ ಸೀತೆ), ಚಿತ್ರದರ್ಶನ ವೃತ್ತಾಂತ, ರಾಮ ರಾಜ್ಯದ ಪ್ರಜೆಗಳ ಅಂತಃಪ್ರಜ್ಞೆಯನ್ನು ಎಚ್ಚರಿಸುವ ಗರ್ಭಾಂಕಗಳಂತಹ ಮನೋಜ್ಞ ಕಲ್ಪನೆಗಳು ಕವಿಯ ನವನವೋನ್ಮೇಷ ಶಾಲಿನೀ ಪ್ರತಿಭೆಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ಇಲ್ಲಿ, ಗರ್ಭಿಣಿ ಸೀತೆಯನ್ನು ಭೂದೇವಿ ಹಾಗೂ ಭಾಗೀರತಿಯರು ರಕ್ಷಿಸುತ್ತಾರೆ. ಲವ ಕುಶರು ವಾಲ್ಮೀಕಿ ಆಶ್ರಮದಲ್ಲಿ ಬೆಳೆಯುವಾಗ ಸೀತೆ ಭೂದೇವಿಯೊಂದಿಗೇ ಇರುತ್ತಾಳೆ. ಭವಭೂತಿಯ ಮೂಲ ಆಶಯವಿರುವುದು ಸೀತಾರಾಮರ ಸಮಾಗಮ. ಅದನ್ನು ಸಾಧಿಸಲು ಪ್ರಮುಖವಾಗಿ ಬೇಕಾದದ್ದು ಸೀತೆಯ ಚಾರಿತ್ರ್ಯವನ್ನು ಶಂಕಿಸಿದ ಅಯೋಧ್ಯಾಜನರ ಮನಃಪರಿವರ್ತನೆ. ನಾಟಕದ ಅಂತಿಮ ಘಟ್ಟದಲ್ಲಿ ಕಾಣುವ **'ಗರ್ಭಾಂಕ'** ಭವಭೂತಿ ಸೃಷ್ಟಿಸಿರುವ ರಸ ಪಾಕ. ಇದು ನಾಟಕದಲ್ಲಿ ನಡೆಯುವ ಮತ್ತೊಂದು ನಾಟಕ. ವಾಲ್ಮೀಕಿಗಳು ಉತ್ತರ ರಾಮ ಚರಿತೆಯನ್ನು ರಚಿಸಿದ್ದಾರೆ ಎಂದೂ ಹಾಗೂ ಅದನ್ನು ರಂಗದಲ್ಲಿ ತರುತ್ತಾರೆ ಎಂದೂ ತಿಳಿದ ಅಯೋಧ್ಯೆಯ ಜನರು ಆಶ್ರಮದಲ್ಲಿ ಸೇರುತ್ತಾರೆ. ಅಲ್ಲಿಯೇ ಇದ್ದ ರಾಮ ಹಾಗೂ ಅವನ ಪರಿವಾರದೊಂದಿಗೆ ಗರ್ಭಾಂಕ ಅನಾವರಣಗೊಳ್ಳುತ್ತದೆ. ಸೀತೆಯ ಪಾವಿತ್ರ್ಯ ಸಿದ್ಧವಾಗಲು ಭವಭೂತಿಯೂ ಒಂದು ಅದ್ಭುತವನ್ನು ಸೃಷ್ಟಿಮಾಡುವುದು ಅತ್ಯಗತ್ಯ. ಹಾಗಾಗಿ, ಸೀತಾದೇವಿ, ಭಾಗೀರತಿ ಮತ್ತು ಭೂದೇವಿಯರೊಂದಿಗೆ ನದಿಯಿಂದ ಮೇಲೆದ್ದು ಬರುವಂತಹ ಅಲೌಕಿಕ ಅಮೋಘ ಘಟನೆಯೊಂದು ನಡೆಯುವಂತಹ ದೃಶ್ಯವನ್ನು ಇಲ್ಲಿ ಸೃಷ್ಟಿಸಿಕೊಂಡಿದ್ದಾನೆ. ಇದನ್ನು ಕಂಡು ಎಲ್ಲರೂ ಪಶ್ಚಾತ್ತಾಪ ಪಡುವುದರೊಂದಿಗೆ ಸೀತಾರಾಮರ ಸಮಾಗಮ ನಡೆದು ಭವಭೂತಿಯ ಉತ್ತರ ರಾಮಚರಿತ ಸುಖಾಂತವಾಗುತ್ತದೆ.

ಕನ್ನಡದಲ್ಲಿ ಕವಿ ಲಕ್ಷ್ಮೀಶನೂ ತನ್ನ ಕೃತಿಯಲ್ಲಿ ಸೀತಾ ರಾಮ ಸಮಾಗಮವನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ. ಕುವೆಂಪುರವ ಶ್ರೀ ರಾಮಾಯಣ ದರ್ಶನದಲ್ಲಿಯೂ ಈ ಸೂಚನೆ ಸಿಗುತ್ತದೆ. ದೂರದ ಥಾಯ್ ಲ್ಯಾಂಡಿನಲ್ಲಿ ರಚಿತವಾಗಿರುವ ರಾಮಕಥೆ, 'ರಾಮ ಕೀನ್' ನಲ್ಲಿಯೂ ಕೊನೆಗೆ ಸೀತಾ ರಾಮರ ಸಮಾಗಮವಾಗಿ ಸುಖಾಂತವಾಗುತ್ತದೆ.

ಹೀಗೆ ರಾಮಕಥೆಯ ಅಧ್ಯಯನ ಹಾಗೂ ಸಮೀಕ್ಷೆಗಳು ಪ್ರಪಂಚದೆಲ್ಲೆಡೆ ವಿದ್ವಾಂಸರಿಂದ ನಿರಂತರವಾಗಿ ನಡೆಯುತ್ತಿವೆ. ಭಾರತೀಯ ಭಾಷೆಗಳಲ್ಲಷ್ಟೇ ಅಲ್ಲದೆ, ದೂರ ದೂರದ ದೇಶಗಳಲ್ಲಿ ರಾಮಕಥೆ ಹೊಸ ಹೊಸ ಆಯಾಮಗಳನ್ನು ಪಡೆದಿವೆ. ಆಯಾ ಪ್ರದೇಶದ ಜನರ ಆಶಯದಂತೆ, ವಿವಿಧ ಕಾಲಘಟ್ಟಗಳಲ್ಲಿ ನಡೆದಿರುವ ಹಲವಾರು ಮಾರ್ಪಾಡುಗಳನ್ನೂ ಹಾಗೂ ಸೇರ್ಪಡೆಗಳನ್ನೂ ಎಲ್ಲೆಡೆ ತೆರೆದ ಮನಸ್ಸಿನಿಂದ ಸ್ವಾಗತಿಸುತ್ತಲೇ ಇರುವುದರಿಂದಲೇ, ಇಂದಿಗೂ ರಾಮಾಯಣ ಪ್ರಸ್ತುತವಾಗುತ್ತದೆ.

❑

# ಕನ್ನಡ ರಾಮಾಯಣಗಳ ಸಮೀಕ್ಷೆ

ಡಾ. ಎನ್.ಆರ್. ಲಲಿತಾಂಬ

ಕನ್ನಡಿಗರು ನಾನಾ ಪ್ರಕಾರಗಳಲ್ಲಿ ರಾಮಾಯಣವನ್ನು ಹಾಡಿದ್ದಾರೆ, ಅನುಸಂಧಾನ ಮಾಡಿದ್ದಾರೆ. ನಡುಗನ್ನಡದ ಶ್ರೇಷ್ಠಕವಿ ಕೃಷ್ಣ ಭಕ್ತ ಕುಮಾರವ್ಯಾಸನು ತಾನು ಕೃಷ್ಣಕಥೆಯನ್ನು ಬರೆಯಲು ಆಯ್ಕೆಮಾಡಿಕೊಂಡುದರ ಕಾರಣವನ್ನು ಹೇಳುತ್ತಾ "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ" ಎಂದು ಹೇಳಿರುವುದನ್ನು ಗಮನಿಸಬಹುದು.

ರಾಮಾಯಣವು ನುಡಿದಂತೆ ನಡೆಯುವ ವಚನ ಪಾಲನೆಯ ಜೀವನ ಸೂತ್ರವೂ, ಮಾನವಜೀವನದ ಆತ್ಮ ಪರೀಕ್ಷಣೆಯ ಒಳನೋಟವೂ ಮಾನವ ಹೃದಯದ ಸಂಸ್ಕಾರಕ್ಕೆ ತಳಹದಿಯೂ, ಸತ್ವಪರೀಕೆಯ ನಿಕಷವೂ ಆಗಿದೆ. ಶ್ರೇಷ್ಠವಾದ ಕಾವ್ಯ ಸೌಂದರ್ಯ, ಚರಿತ್ರೆ, ಶಾಸ್ತ್ರಜ್ಞಾನ, ಲೋಕಾನುಭವ, ದರ್ಶನಗಳ ಸಾರವೇ ಆಗಿರುವುದು ರಾಮಾಯಣದ ವೈಶಿಷ್ಟ್ಯ. "ಶ್ರೀ ವಾಲ್ಮೀಕಿ ವಿರಚಿತ ಮಹಾಕಾವ್ಯ ರಾಮಾಯಣವು ಭಾರತೀಯ ಸಂಸ್ಕೃತಿಯ ಆಗರ; ಆದರ್ಶಮಾನವ ಸ್ವಭಾವ ವೈಚಿತ್ರ್ಯಗಳನ್ನು ನೈಜವಾಗಿ ಚಿತ್ರಿಸಿದ ಕಲಾಮಂದಿರ" ಎಂದು ಎಸ್.ಎಸ್.ಬ್ಯಾತನಾಳರು, "ರಾಮಾಯಣ ಎಂಬುದು ಒಂದು ಸಂಕೇತ, ಅದೊಂದು ಮನುಷ್ಯನ ವಿಕಾಸ ಯಾತ್ರೆ ಈ ವಿಕಾಸ ಆಂತರಿಕಕ್ಕೆ ಸೇರಿದ್ದು. ಆಂತರಿಕ ಶಕ್ತಿ ಬೆಳೆದಂತೆ ಬಾಹ್ಯ ಶಕ್ತಿಗೆ ಹೊಸ ಚಾಲನೆ ಸಿಗುತ್ತದೆ" ಎಂದು ಮಲ್ಲೇಪುರಂ. ಜಿ. ವೆಂಕಟೇಶರವರು ಅಭಿಪ್ರಾಯ ಪಡುತ್ತಾರೆ. ರಾಮಕಥಾ ವಸ್ತುವು ಮೊದಲಿಗೆ ಜನಪದರ ಬಾಯಲ್ಲಿದ್ದು, ನಂತರದ ಕಾಲದಲ್ಲಿ ಅದು ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಹಲವು ಕವಲಾಗಿ ಹರಡಿಕೊಂಡಿದೆ. ಬೌದ್ಧ, ಜೈನ, ವೈದಿಕರಲ್ಲಿ ಯಾರಿಂದ ಮೊದಲಿಗೆ ಲಿಖಿತ ಸ್ವರೂಪ ಪಡೆಯಿತೆಂಬುದರ ಮತ್ತು ಯಾವ ಕಾಲದಲ್ಲಿ ಎಂಬುದರ ಬಗೆಗೆ ಒಮ್ಮತವಿಲ್ಲ.

ಕರ್ನಾಟಕದಲ್ಲಿ ರಾಮಕಥೆಯು ವಿವಿಧ ಬಗೆಯಲ್ಲಿ ಶಿಲ್ಪ, ಜಾನಪದ, ಕಾವ್ಯ, ನಾಟಕ, ಕಥೆ, ಯಕ್ಷಗಾನ, ಗದ್ಯ, ವಿಮರ್ಶೆ, ಕವಿತೆ ಮೊದಲಾದ ವಿವಿಧ ರೂಪಗಳಲ್ಲಿ ಸತ್ವಶಾಲಿಯಾಗಿ ಅಭಿವ್ಯಕ್ತಗೊಂಡಿದೆ. ಕಲ್ಯಾಣ ಚಾಲುಕ್ಯರ ಕಾಲದ ಪಟ್ಟದಕಲ್ಲಿನ ದೇವಾಲಯದ ಭಿತ್ತಿಗಳಲ್ಲಿ ರಾಮಾಯಣದ ಘಟನೆಗಳ ಸುಂದರ ಪಟ್ಟಿಕಾ ಶಿಲ್ಪಗಳು ಮನಸೆಳೆಯುತ್ತವೆ. ಆ ನಂತರದ ಹೊಯ್ಸಳರು, ವಿಜಯನಗರ ಅರಸರ ಕಾಲದಲ್ಲಿ ಮತ್ತಷ್ಟು ವೈವಿಧ್ಯಮಯವಾಗಿ ಅವು ಬಿತ್ತರಗೊಂಡಿವೆ. ಭಕ್ತಿ ಸಾಹಿತ್ಯಕ್ಕೆ ವಿಶೇಷತೆ ಪಡೆದಿರುವ ಕನ್ನಡ ನಾಡಿನಲ್ಲಿ ಭಕ್ತಿಯೇ ಮೈವೆತ್ತಂಥ ರಾಮನ ಬಂಟ ಹನುಮಂತನ ಗುಡಿಗಳು ಹಳ್ಳಿ ಹಳ್ಳಿಹಳ್ಳಿಯಲ್ಲೂ ಕಂಡುಬರುತ್ತವೆ. ಕರ್ನಾಟಕದ ವೀರ ಪರಂಪರೆಯ ಸ್ವಾಮಿನಿಷ್ಠ ಬಂಟವೃತ್ತಿ, ಜೋಳದ ಪಾಳಿಗಾಗಿ ಒಡೆಯನಿಗಾಗಿ ಪ್ರಾಣ ನೀಗಿದ, ಮಹಾಮರಣಕ್ಕೆ ಸಂದ ಲೆಂಕರು ಜೋಳವಾಳಿಗಳ ಆದರ್ಶಕ್ಕೆ ಆಂಜನೇಯ ಮತ್ತು ಗರುಡರೇ ಸ್ಫೂರ್ತಿ. ಆ ಕಾರಣದಿಂದ ರಾಮನಷ್ಟೇ ಹನುಮನೂ ಕನ್ನಡಿಗರ ಜನಮಮಾನಸದಲ್ಲಿ ನೆಲೆಸಿದ್ದಾನೆ. ಕನ್ನಡ ನಾಡು ಹನುಮನು ಉದಿಸಿದ ನಾಡೆಂದೇ ಪ್ರಸಿದ್ಧವಾಗಿದ್ದು, ರಾಮಾಯಣದ ಕಿಷ್ಕಿಂದೆ, ಪಂಪಾಸರೋವರಗಳು ರಾಮನ ಪಾದಧೂಳಿನಿಂದ ಪವಿತ್ರವಾದ ತಾಣಗಳೆಂಬ ಪವಿತ್ರ ಭಾವನೆಯಿದೆ.

ಇಂತಹ ಗಾಢವಾದ ಪ್ರಭಾವದಿಂದಾಗಿ ಕನ್ನಡಿಗರು ನಾನಾ ಪ್ರಕಾರಗಳಲ್ಲಿ ರಾಮಾಯಣವನ್ನು ಹಾಡಿದ್ದಾರೆ, ಅನುಸಂಧಾನ ಮಾಡಿದ್ದಾರೆ. ನಡುಗನ್ನಡದ ಶ್ರೇಷ್ಠಕವಿ ಕೃಷ್ಣ ಭಕ್ತ ಕುಮಾರವ್ಯಾಸನು ತಾನು ಕೃಷ್ಣಕಥೆಯನ್ನು ಬರೆಯಲು ಆಯ್ಕೆಮಾಡಿಕೊಂಡುದರ ಕಾರಣವನ್ನು ಹೇಳುತ್ತಾ "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ" ಎಂದು ಹೇಳಿರುವುದನ್ನು ಗಮನಿಸಬಹುದು. ಈ ಮಾತು ಅತಿಶಯೋಕ್ತಿ ಎನಿಸಿದರೂ ಆ ಮಾತಿನ ಭಾವವನ್ನು ನಾವು ಗ್ರಹಿಸಬೇಕಿದೆ. ತನ್ನ ಕಾಲಕ್ಕಿಂತ ಮೊದಲು ರಚಿತವಾಗಿರುವ ಕನ್ನಡ ರಾಮಾಯಣಗಳನ್ನು ಮಾತ್ರ ಕುರಿತು ಈ ಗಮನಿಕೆಯನ್ನು ಕವಿ ಮಾಡದೆ ಆತ ಸಂಸ್ಕೃತದ ವಾಲ್ಮೀಕಿ, ಆನಂದ, ಆಧ್ಯಾತ್ಮ, ಅದ್ಭುತಾದಿ ರಾಮಾಯಣಗಳನ್ನೂ ಪದ್ಮ, ಸ್ಕಂದ, ಬ್ರಹ್ಮ, ವಿಷ್ಣು, ಶಿವ, ಹರಿವಂಶ ಮೊದಲಾದ ಪುರಾಣಗಳಲ್ಲಿಯ ರಾಮಕಥೆಯನ್ನು, ಸಂಸ್ಕೃತ ಕಾವ್ಯ, ನಾಟಕಾದಿ ಲಲಿತ ಸಾಹಿತ್ಯಗಳಲ್ಲಿಯ ರಾಮಕಥೆಗಳನ್ನೂ ಗಮನದಲ್ಲಿಟ್ಟುಕೊಂಡಿದ್ದಾನೆ ಎಂದು ಭಾವಿಸಬಹುದು. ಅಲ್ಲದೆ ಆತ ಸಂಸ್ಕೃತ ಪ್ರಾಕೃತ ಜೈನ ಪರಂಪರೆಯ ರಾಮಾಯಣಗಳನ್ನೂ ಗಮನಿಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಏಕೆಂದರೆ ಕುಮಾರವ್ಯಾಸನ ಪೂರ್ವದಲ್ಲಿ ಕನ್ನಡದಲ್ಲಿ ವಾಲ್ಮೀಕಿ ರಾಮಾಯಣ ಪರಂಪರೆಯ ರಾಮಾಯಣಗಳ್ಯಾವೂವೂ ನಮಗೆ ದೊರಕದಿರುವ ಹಿನ್ನೆಲೆಯಲ್ಲಿ, ಅವು ರಚಿತವಾಗಿರುವ ಸಾಧ್ಯತೆ ಕಡಿಮೆಯೆಂದು ಭಾವಿಸಬೇಕಾಗುತ್ತದೆ. ಹಾಗಾಗಿ ತನ್ನ ಕಾಲ್ಲದಲ್ಲಿ ಪ್ರಚಲಿತವಾಗಿದ್ದ ಜೈನರಾಮಾಯಣಗಳ ವಿಪುಲತೆಯನ್ನು ಖಂಡಿತವಾಗಿ ಅವನು ಗಮನಿಸಿ ಈ ಮಾತನ್ನು ಹೇಳಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ[1] ರಾಮ ಕಥೆಯನ್ನು ವೈದೀಕ ಪರಂಪರೆಯು ಬರಹಕ್ಕೆ ಅಳವಡಿಸಿಕೊಂಡ ಕಥಾ ಸ್ವರೂಪಕ್ಕಿಂತಲೂ ಭಿನ್ನವಾಗಿ ಬೌದ್ಧ, ಜೈನ

ಪರಂಪರೆಗಳು ಅಳವಡಿಸಿಕೊಂಡಿವೆ. ಬುದ್ಧ ಮಹಾವೀರರ ಕಾಲಕ್ಕಿಂತ ಮುಂಚೆಯೇ ಜೈನ ಮತ್ತು ಬೌದ್ಧ ರಾಮಾಯಣ ಕಥೆಗಳು ಮೌಖಿಕ ಪರಂಪರೆಯಲ್ಲಿ ಇದ್ದುವೆಂಬುದನ್ನು ವಿದ್ವಾಂಸರು ಒಪ್ಪಿದ್ದಾರೆ. ಬೌದ್ಧ ಪರಂಪರೆಯ ರಾಮ ಕಥೆಗಳು ಜಾತಕ ಕಥೆಗಳ ರೂಪದಲ್ಲಿದ್ದು ಕ್ರಿ.ಪೂ. 5ನೇ ಶತಮಾನದಿಂದಲೇ ಕಾಣಿಸಿಕೊಂಡಿವೆ. ಪಾಳೀ ಭಾಷೆಯಲ್ಲಿರುವ ಇವುಗಳು ಕ್ರಿ.ಶ. 8ನೇ ಶತಮಾನದ ಹೊತ್ತಿಗೆ ಚೀನೀ ಭಾಷೆಗೆ ಅನುವಾದಗೊಂದಿವೆ ಆದರೆ ಬೌದ್ಧಪರಂಪರೆಯ ರಾಮಾಯಣಗಳಾವುವೂ ಕನ್ನಡದಲ್ಲಿ ದೊರಕಿಲ್ಲ.

ರಾಮ ಲಕ್ಷ್ಮಣ ರಾವಣರ ಕಥೆಯು ಜೈನ ಪರಂಪರೆಯಲ್ಲಿ 20ನೆಯ ತೀರ್ಥಂಕರನಾದ ಮುನಿ ಸುವ್ರತನ ಕಾಲದ 8ನೇ ಬಲದೇವ, ವಾಸುದೇವರೆಂಬುದಾಗಿ ನಿರೂಪಿತವಾಗಿರುವುದರಿಂದ ಈ ರಾಮಾಯಣ ಪರಂಪರೆಯು ಮತ್ತಷ್ಟು ಪ್ರಾಚೀನವಾಗಿರುವುದನ್ನು ಹೇಳುತ್ತಿದೆ. ಲಿಖಿತ ಸ್ವರೂಪದಲ್ಲಿ ಕ್ರಿ.ಪೂ. 3ನೇ ಶತಮಾನದ ಶ್ವೇತಾಂಬರ ಸಂಪ್ರದಾಯದ ಸ್ಥಾನಾಂದ ಸೂತ್ರದಲ್ಲಿ ಕಾಣಿಸಿಕೊಂಡಿದ್ದು ಆನಂತರದಲ್ಲಿ ಕೂಚಿಭಟ್ಟಾರಕ, ನಂದಿಮುನಿ, ಕವಿಪರಮೇಷ್ಟಿಗಳು, ರವಿಷೇಣ, ವೀರಸೇನ, ಸಿದ್ಧಸೇನ, ಪದ್ಮನಂದಿ, ಗುಣಭದ್ರಾಚಾರ್ಯ, ಸಕಲಕೀರ್ತಿಗಳ ಕೃತಿಗಳಲ್ಲಿ ಬೆಳೆದು ಬಂದಿತು. ಕನ್ನಡದ ಕವಿಗಳ ಮೇಲೆ ಸಂಸ್ಕೃತ ಹಾಗೂ ಪ್ರಾಕೃತ ಜೈನ ಕವಿಗಳ ಪ್ರಭಾವವಾಗಿರುವುದರಿಂದ ಈ ಎಲ್ಲ ಪರಂಪರೆಯ ರಾಮಾಯಣಗಳು ಕನ್ನಡದಲ್ಲಿ ಕಾಣಿಸಿಕೊಳ್ಳತೊಡಗಿದವು. ಕನ್ನಡದಲ್ಲಿ ಚಾವುಂಡರಾಯ, ನಾಗಚಂದ್ರ, ಮಾಘಣಂದಿಸಿದ್ಧಾಂತಿ, ಕುಮುದೇಂದು, ನಾಗರಾಜ ಮುಂತಾದವರು ಮುಂದುವರೆಸಿಕೊಂಡು ಬಂದಿದ್ದಾರೆ. ಈ ಪರಂಪರೆಯಲ್ಲಿ ಶ್ರೀರಾಮನನ್ನು ಪುರುಷೋತ್ತಮನೆಂದು ಗೌರವಿಸಿದರೂ ಅವನಿಗಿಂತಲೂ ಲಕ್ಷ್ಮಣನ ಹಾಗೂ ರಾವಣರ ಪಾತ್ರಗಳಿಗೆ ಪ್ರಾಮುಖ್ಯತೆಯಿದೆ. ವಿಮಲಸೂರಿಯ ಪ್ರಾಕೃತ 'ಪವುಮಚರಿಅ' ಕಾವ್ಯವನ್ನು ಅನುಸರಿಸಿ ಕನ್ನಡದಲ್ಲಿ ನಾಗಚಂದ್ರನು 'ರಾಮಚಂದ್ರಚರಿತಪುರಾಣವನ್ನು (ಕ್ರಿ.ಶ. 12ನೇ ಶತಮಾನ) ಕುಮುದೇಂದು ರಾಮಾಯಣ (12ನೇಶತಮಾನ) ಬಂಧುವರ್ಮನ 'ಜೀವಸಂಬೋಧನೆ (12ನೇ ಶತಮಾನ), ಶಿಶುಮಾಯಣನ ಅಂಜನಾಚರಿತ್ರೆ (15ನೇ ಶತಮಾನ) ದೇವಪ್ಪ ಕವಿಯ 'ರಾಮವಿಜಯಕಾವ್ಯ' (17ನೇ ಶತಮಾನ), ದೇವಚಂದ್ರನ 'ರಾಮಾವತಾರ (19ನೇಶತಮಾನ) ಚಂದ್ರಸಾಗರವರ್ಣಿಯ ಜೈನಭಾರತ (19ನೇಶತಮಾನ) ಮುಂತಾದ ಕಾವ್ಯಗಳು ರಚಿಸಿತವಾಗಿವೆ. ಸಂಘದಾಸ (ಕ್ರಿ.ಶ. 7) ಹರಿಷೇಣ (ಕ್ರಿ.ಶ. 10)ರು ಪ್ರಾಕೃತ ಮತ್ತು ಸಂಸ್ಕೃತದಲ್ಲಿ ಬರೆದ ಕಾವ್ಯಗಳು ವಿಮಲಸೂರಿ ಹಾಗೂ ಗುಣಭದ್ರ ಪರಂಪರೆಗೆಗಿಂತ ರಾಮೋಪಾಖ್ಯಾನ ಅಥವಾ ವಾಲ್ಮೀಕಿ ರಾಮಾಯಣದೊಂದಿಗೆ ನಿಕಟ ಸಂಬಂಧವನ್ನು ಹೊಂದಿರುವದರಿಂದ ಇವರದು ಬೇರೊಂದು ಪರಂಪರೆಯೆಂದು ಗುರುತಿಸಲಾಗಿದೆ. ಈ ಸಂಘದಾಸ ಪರಂಪರೆಯ ಕನ್ನಡ ಕಾವ್ಯಗಳು ಲಭ್ಯವಿಲ್ಲವೆಂದು ಅಭಿಪ್ರಾಯವಿದೆ.[2] ಕನ್ನಡಕ್ಕೆ ಅನುವಾದಗೊಂಡಿರುವ ಹಾಗೂ ಕನ್ನಡ ರಾಮಾಯಣ ರಚನೆಯ ಮೇಲೆ ಪುರಾಣಾಂತರ್ಗತ ರಾಮಾಯಣ ಕಥೆಗಳೂ ಪ್ರಭಾವಿಸಿವೆ. ಎಲ್ಲ ಹದಿನೆಂಟು ಪುರಾಣಗಳಲ್ಲೂ ರಾಮಕಥೆಯಿದೆ. ಕೆಲವದರಲ್ಲಿ ಬಾಲಕಾಂಡದಿಂದ ಹಿಡಿದು ಪಟ್ಟಾಭಿಷೇಕದವರೆಗಿದ್ದರೆ ಕೆಲವದರಲ್ಲಿ ಉತ್ತರ ಕಾಂಡದ ಕಥೆಯಿದೆ. ಪುರಾಣಗಳ ಅಂತರ್ಗತ ಶೇಷರಾಮಾಯಣ, ಆನಂದರಾಮಾಯಣ ಮತ್ತು ಅದ್ಭುತ ರಾಮಾಯಣ ಕಥೆಗಳು ಜೈನ ಪರಂಪರೆಗೆ ಹತ್ತಿರವಾಗುವಂತೆ ಕಥೆಗಳನ್ನು ರೂಪಿಸಿರುವುದರಿಂದ ವೈದೀಕ ಪರಂಪರೆಯ ಕಥೆಯು ಪ್ರತ್ಯೇಕ ಕವಲಿನಂತೆ ತೋರುತ್ತದೆ. ಇವುಗಳಿಂದಲೂ ಕನ್ನಡ ಕವಿಗಳು ಸ್ಫೂರ್ತಿ ಪಡೆದಿದ್ದಾರೆ. ಆನಂದ ರಾಮಾಯಣ, ಅದ್ಭುತ ರಾಮಾಯಣ, ಆಧ್ಯಾತ್ಮ ರಾಮಾಯಣ, ನಾರದ ರಾಮಾಯಣ, ವಾಸಿಷ್ಠರಾಮಾಯಣ, ಮನೋಹರ ರಾಮಾಯಣ ಇತ್ಯಾದಿಗಳನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಈ ಕಾರಣದಿಂದ ಕನ್ನಡ ರಾಮಾಯಣಗಳಲ್ಲಿ ಜಾನಪದ, ಬೌದ್ಧ, ಜೈನ, ಉಪನಿಷತ್, ಪುರಾಣಾಂತರ್ಗತ ಆಧ್ಯಾತ್ಮ, ಅದ್ಭುತ, ಇತ್ಯಾದಿ ರಾಮಾಯಣದ ಹಲವು ವೈವಿಧ್ಯಮಯವಾದ ಕಥಾ ಕವಲುಗಳು ಕಾಣಿಸಿಕೊಂಡಿವೆ. ಅಷ್ಟೇ ಅಲ್ಲದೇ ಭಾರತೀಯ ಇತರ ಭಾಷೆಗಳು ಹಾಗೂ ಥಾಯ್ ಭಾಷೆಯಂತಹ ವಿದೇಶೀ ಭಾಷೆ, ಸಂಸ್ಕೃತಿಯ ರಾಮಾಯಣಗಳೂ[3] ಕನ್ನಡಕ್ಕೆ ಅನುವಾದಗೊಂಡಿರುವುದರಿಂದ ಕನ್ನಡಿಗರಿಗೆ ಬಹುಮುಖಿಯಾಗಿ ರಾಮಾಯಣ ಅನುಸಂಧಾನಕ್ಕೆ ಅವಕಾಶ ಒದಗಿದೆ ಎಂದು

ಹೇಳಬಹುದು. ಇಂತಹ ಕಥೆಗಳು ಕಾಲಾಂತರದಲ್ಲಿ ಎಲ್ಲ ಬಗೆಯ ವ್ಯಕ್ತಿಗತ ಮತ್ತು ಸಾರ್ವಜನಿಕ ಗಡಿಗಳನ್ನು, ಆವರಣಗಳನ್ನು ದಾಟುತ್ತವೆ ಅಲ್ಲದೆ, ಅವುಗಳು ಕಥೆಯನ್ನು ಹೇಳುವವರ 'ಚಹರೆ'ಗಳನ್ನು ಮತ್ತು ಕೇಳುಗನ 'ಬಣ್ಣ'ಗಳನ್ನು ಪಡೆದುಕೊಂಡು ಬಿಡುತ್ತವೆಂಬುದು ನಿಜ. ಜೊತೆಗೆ ಆಯಾಯ ರಾಮಾಯಣ ಕೃತಿಗಳು ರಚಿತವಾದ ಕಾಲದ ಆಶಯ ಮತ್ತು ಆಕೃತಿಗಳು ಸಹ ಪ್ರಭಾವ ಬೀರಿರುವುದರಿಂದ, ವಿಭಿನ್ನ ಚಹರೆಗಳು, ಬಣ್ಣಗಳೂ ಆಯಾಮಗಳು, ದೃಷ್ಟಿಕೋನ, ದರ್ಶನಗಳೂ ರಾಮಾಯಣ ಕಥೆಗೆ ಒದಗಿವೆ. ಹಾಗಾಗಿ ಕನ್ನಡ ಭಾಷೆಯಲ್ಲಿ ರಾಮಾಯಣದ ಭವ್ಯತೆಯು ತನ್ನ ಮೂಲ ಸತ್ವವನ್ನು ಕಳೆದುಕೊಂಡಿಲ್ಲ. ಅದು ಮತ್ತಷ್ಟು ವಿಸರಿಸಿಕೊಂಡಿದೆ. ಕ್ರಿ.ಶ. 1999ರ ಅಕ್ಟೋಬರಿನಲ್ಲಿ ಕೌಲಾಲಂಪುರದಲ್ಲಿ ನಡೆದ ಜಾಗತಿಕ ಸಮ್ಮೇಳನದಲ್ಲಿ ಉಪನ್ಯಾಸ ನೀಡುತ್ತಾ ಕನ್ನಡದಲ್ಲಿ 600ಕ್ಕೂ ಹೆಚ್ಚು ರಾಮಾಯಣವನ್ನು ಕುರಿತ ಕೃತಿಗಳಿರುವ ಬಗೆಗೆ ತಿಳಿಸಿದ್ದಾರೆ. ಶ್ರೀಯುತ ವೆಂಕಟಾಚಲ ಶಾಸ್ತ್ರಿಯವರು ಕನ್ನಡ ರಾಮಾಯಣ ಗ್ರಂಥಸೂಚಿ ತಯಾರಿಸಿದ್ದು, ಇತ್ತೀಚೆಗೆ ರಾಮಾಯಣ ಕೃತಿಗಳ ಸಂಖ್ಯೆ ಈಗ ಸಾವಿರವನ್ನು ದಾಟಿದ್ದರೆ ಆಶ್ಚರ್ಯವಿಲ್ಲವೆನ್ನುತ್ತಾರೆ. ರಾಮಾಯಣದ ಕಥೆ ಈಗಲೂ ಕನ್ನಡ ಬರಹಗಾರರಿಗೆ ಕೃತಿ ರಚನೆಗೆ ಸ್ಫೂರ್ತಿ ನೀಡುತ್ತಲೇಯಿದೆ.

ರಾಮಾಯಣಕ್ಕೆ ಸಂಬಂಧಿಸಿದಂತಹ ಅನೇಕ ಪ್ರಸಂಗಗಳನ್ನು ಕುರಿತ ಕಥೆಗಳು ಕನ್ನಡ ಜನಪದದಲ್ಲಿ ಹೇರಳವಾಗಿ ದೊರಕಿವೆ. ಕನ್ನಡದಲ್ಲಿ ಮೂಲ ಜನಪದ ತ್ರಿಪದಿಯಲ್ಲಿ ರಾಮಾಯಣವಿದ್ದಿತು ಎಂಬುದಕ್ಕೆ "ಜನಕರಾಯನಮಗಳು ಗಿಡಕೆ ತೊಟ್ಟಿಲ ಕಟ್ಟಿ ಲವಕುಶರನಿಟ್ಟು ತೂಗ್ಯಾಳ. ....."ಇತ್ಯಾದಿ ದೊರಕಿರುವ ಕೆಲವು ಬಿಡಿ ತ್ರಿಪದಿಗಳು ಸಾಕ್ಷಿಯಾಗಿವೆ.[4] ಕನ್ನಡ ಜನಪದ ರಾಮಾಯಣದ ಸಂಗ್ರಹ ಕಾರ್ಯವು ನಡೆದಿದೆ. ಕಂಸಾಳೆಯವರು, ತಂಬೂರಿಯವರು ಹಾಡುವ ರಾಮನ ಕಥೆಗಳು ಮೂಲ ಸ್ವರೂಪದಲ್ಲಿ ಹೆಚ್ಚು ಬದಲಾವಣೆಯನ್ನು ಹೊಂದಿಲ್ಲದಿದ್ದರೂ, ಅವುಗಳ ಬಾಹ್ಯ ಸ್ವರೂಪ ಕೆಲವು ಬದಲಾವಣೆಗಳನ್ನು ಹೊಂದಿದೆ. ಕಂಸಾಳೆ ಸಂಪ್ರದಾಯದವರ 'ಲವಕುಶ ಕಾಳಗ' ತಂಬೂರಿಯ ದೊಂಬಿದಾಸರ ಸಂಪೂರ್ಣ ರಾಮಾಯಣ' ಇತ್ಯಾದಿಗಳನ್ನು ಗಮನಿಸಬಹುದು.

ಕನ್ನಡದಲ್ಲಿ ಲಿಖಿತರೂಪದಲ್ಲಿ ದೊರೆತಿರುವ ರಾಮಾಯಣಗಳನ್ನು ಪದ್ಯ, ಗದ್ಯ ಹಾಗೂ ನಾಟಕಗಳೆಂದು ಮೂರು ಭಾಗಗಳಾಗಿ ನೋಡಬಹುದು. ಹಲವು ಭಾಷೆಯಿಂದ ರಾಮಾಯಣಗಳು ಅನುವಾದಗೊಂಡಿವೆ. ಜೊತೆಗೆ ವಿಪುಲವಾಗಿ ನಡೆದಿರುವ ಅಧ್ಯಯನಗಳು, ವಿಮರ್ಶಾ ಸಾಹಿತ್ಯವು ಕನ್ನಡದಲ್ಲಿ ಸಾಕಷ್ಟಿದೆ.

ರಾಮಾಯಣ ಕಥೆಯು ಕನ್ನಡ ಭಾಷೆಯಲ್ಲಿ ಚಂಪು, ಷಟ್ಪದಿ, ತ್ರಿಪದಿ, ಚೌಪದಿ, ದ್ವಿಪದಿ, ಸಾಂಗತ್ಯ, ಗೀತರೂಪಕಗಳು, ಹೊಸಗನ್ನಡ ಕವಿತೆ ಮುಂತಾದ ಪ್ರಕಾರಗಳಲ್ಲಿ ಕಾಣಿಸಿಕೊಂಡಿದೆ. ಷಟ್ಪದಿಕಾವ್ಯಗಳು ಹೆಚ್ಚಿವೆ. **ಚಂಪೂ ಪ್ರಕಾರದಲ್ಲಿ** 'ರಾಮಚಂದ್ರ ಚರಿತ ಪುರಾಣ' (ನಾಗಚಂದ್ರ ಕ್ರಿ.ಶ. 12), 'ಜೀವಸಂಬೋಧನೆ' (ಬಂಧುವರ್ಮ ಕ್ರಿ.ಶ. 17). 'ರಾಮಕಥಾವತಾರ' (ದೇವಚಂದ್ರ ಕ್ರಿ.ಶ. 18–19) ರಚಿತವಾಗಿದ್ದರೆ **ಷಟ್ಪದಿಯಲ್ಲಿ** 'ತೊರವೆರಾಮಾಯಣ' (ನರಹರಿ ಕ್ರಿ.ಶ. 15), ರಾಮಧಾನ್ಯಚರಿತೆ' (ಕನಕದಾಸ ಕ್ರಿ.ಶ. 15), ಜೈಮಿನಿಭಾರತ (ಲಕ್ಷ್ಮೀಶ ಕ್ರಿ.ಶ. 1550) 'ಕೌಶಿಕರಾಮಾಯಣ (ಬತ್ತಲೇಶ್ವರ ಕ್ರಿ.ಶ. 15), ಕುಮುದೇಂದು ರಾಮಾಯಣ (ಕುಮುದೇಂದು ಕ್ರಿ.ಶ. 15) 'ಉತ್ತರ ರಾಮಕಥೆ', **(ನಾರಾಯಣ ಕವಿ ಕ್ರಿಶ 1530),** ಜಿನರಾಮಾಯಣ (ಚಂದ್ರಸಾಗರವರ್ಣಿ ಕ್ರಿ. ಶ. 17), ಷಟ್ಪದಿ ರಾಮಾಯಣ (ವೆಂಕಾಮಾತ್ಯ ಕ್ರಿ.ಶ. 18) 'ಶೇಷರಾಮಾಯಣ (ಸೋಸಲೆ ಅಯ್ಯಾಶಾಸ್ತ್ರಿ ಕ್ರಿ.ಶ. 20), ನಂಜನಗೂಡು ಸುಬ್ಬಾಶಾಸ್ತ್ರಿಗಳು (ಕ್ರಿ.ಶ. 1834–1906) 'ಉತ್ತರ **ರಾಮಾಯಣ' (ಯೋಗೀಂದ್ರ),** ಉತ್ತರರಾಮಾಯಣಂ' (ತಿರುಮಲೆ ವೈದ್ಯ), 'ಉತ್ತರ ರಾಮ ಕಥಾ' (ನರಸ ಕವಿ ಕ್ರಿ.ಶ. 1612) ಕೃತಿಗಳು ಬಂದಿವೆ. **ಸಾಂಗತ್ಯದಲ್ಲಿ**: 'ಅಂಜನಾ ಚರಿತ್ರೆ' (ಶಿಶುಮಾಯಣ ಕಿ.ಶ. 15), ರಾಮವಿಜಯ ಚರಿತ್ರೆ (ದೇವಪ್ಪಕವಿ ಕ್ರಿ.ಶ. 17), ಶ್ರೀರಾಮ ಪಟ್ಟಾಭಿಷೇಕಂ ಕವಯಿತ್ರಿ ಯಶೋಧೆಯು (ಕ್ರಿ.ಶ. 17–18ನೇ ಶತಮಾನ) 'ಲವಕುಶರ ಕಾಳಗ', ಸೀತಾ ಕಲ್ಯಾಣ' (ಹೆಳವನಕಟ್ಟೆ ಗಿರಿಯಮ್ಮ ಕ್ರಿ.ಶ. 17) ಮುಂತಾದವು ರಚಿತವಾಗಿವೆ.

ಆಧುನಿಕ ಮಹಾಕಾವ್ಯಗಳಲ್ಲಿ 'ಶ್ರೀರಾಮಾಯಣ ದರ್ಶನಂ' (ಕುವೆಂಪು ಕ್ರಿ.ಶ. 20), 'ಶ್ರೀರಾಮ ಪಟ್ಟಾಭಿಷೇಕಂ' (ಮಾಸ್ತಿವೆಂಕಟೇಶ ಅಯ್ಯಂಗಾರ್

ಕ್ರಿ.ಶ. 20), 'ನವನೀತರಾಮಾಯಣ' (ಮುಳಿಯ ತಿಮ್ಮಪ್ಪಯ್ಯ ಕ್ರಿ.ಶ. 20), 'ರಾಮಾಯಣ ಮಹಾನ್ವೇಷಣಂ' (ವೀರಪ್ಪ ಮೊಯಿಲಿ ಕ್ರಿ.ಶ. 20) ಇವು ಪ್ರಮುಖವಾದವುಗಳು. ವಿಶಿಷ್ಟರಚನೆಗಳಾಗಿ 'ಶ್ರೀ ರಾಮ ಪರೀಕ್ಷಣಂ' (ಡಿ.ವಿ.ಜಿ ಕ್ರಿ.ಶ. 20) ಹಾಗೂ ಗೀತ ರೂಪಕಗಳನ್ನು (ಪು.ತಿ. ನರಸಿಂಹಾಚಾರ್ ಕ್ರಿ.ಶ.20) ಮುಖ್ಯವಾಗಿ ಪರಿಗಣಿಸಬಹುದು. ಇವಲ್ಲದೆ ಇತ್ತೀಚೆಗೆ ಹೊಸ ಕೃತಿಗಳೂ ಕಾಣಿಸಿಕೊಂಡಿವೆ.

ರಾಮಕಥೆಯನ್ನು ಒಳಗೊಂಡ ಗದ್ಯಪ್ರಕಾರದ ಬರಹಗಳು ಕನ್ನಡದಲ್ಲಿ ಹೆಚ್ಚಾಗಿದ್ದು, ಇದರಲ್ಲಿ ಹಳಗನ್ನಡದ ತ್ರಿಷಷ್ಠಿ ಲಕ್ಷಣ ಮಹಾಪುರಾಣ (ಚಾವುಂಡರಾಯ ಕ್ರಿ.ಶ. 10) ಪುಣ್ಯಾಸ್ರವ (ನಾಗರಾಜ, ಕ್ರಿ.ಶ. 12ನೇ ಶತಮಾನ) ಶ್ರೀರಾಮಾಶ್ವಮೇಧಂ' (ಮುದ್ದಣ ಕ್ರಿ.ಶ.19) ಹೊಸಗನ್ನಡದ 'ರಾಮ ಸೀತೆ ರಾವಣ' ಕಾದಂಬರಿ, (ಹೆಚ್.ವಿ. ಸಾವಿತ್ರಮ್ಮ, ಕ್ರಿ.ಶ. 20) ಮೈಥಿಲಿ ಕಾದಂಬರಿ ಗಂಗಯ್ಯ ಕಂಬಾಳ್, ಕ್ರಿ.ಶ. 21), ಪೋಲಂಕಿ ರಾಮಮೂರ್ತಿಯವರ ರಾಮಾಯಣದಲ್ಲಿ ಸೀತಾಯಣ, ಜಯಂತಿ ಮನೋಹರಿರವರ 'ಸೀತಾಯಣ' ಕೃತಿಗಳು ವಿಭಿನ್ನವಾಗಿವೆ.

ಇನ್ನು ನಾಟಕ ಪ್ರಕಾರವನ್ನು ಗಮನಿಸುವಾಗ ಕನ್ನಡ, ಸಂಸ್ಕೃತ ರಾಮಾಯಣ ಕಥೆಗಳನ್ನು ಆಧರಿಸಿದ ನಾಟಕಗಳು, ಯಕ್ಷಗಾನ ಪ್ರಸಂಗಗಳು, ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಯ ನಾಟಕಗಳು, ಹೊಸ ಪ್ರಯೋಗಗಳು, ನೃತ್ಯರೂಪಕಗಳು ಇತ್ಯಾದಿಗಳ ರಚನೆಯಾಗಿರುವುದನ್ನು ಗಮನಿಸಬಹುದು.

ಉಪಲಬ್ಧವಿರುವ ಕನ್ನಡದ ಮೊದಲಕೃತಿ 'ಕವಿರಾಜಮಾರ್ಗ'ದಲ್ಲಿ (ಕ್ರಿ.ಶ 850) ರಾಮಕಥೆಯ ಹನ್ನೊಂದು ಪದ್ಯಗಳಿವೆ ಇವುಗಳಲ್ಲಿ 2 ಪದ್ಯಗಳನ್ನು ಶ್ರೀವಿಜಯ ಕೃತವೆಂದು, ಉಳಿದವು ಅವನಿಗಿಂತ ಪೂರ್ವದಲ್ಲಿದ್ದ ರಾಮಾಯಣಕ್ಕೆ ಸಂಬಂಧಿಸಿದ ಪದ್ಯಗಳಾಗಿವೆ ಎಂದು ವಿದ್ವಾಂಸರು ಹೇಳಿದ್ದಾರೆ. ಅಲ್ಲದೆ ಶ್ರೀವಿಜಯನು 'ರಘುವಂಶ ಪುರಾಣವು' ಎಂಬ ಕೃತಿಯನ್ನು ಬರೆದಿರಬಹುದೆಂಬ ಊಹೆಯಿದೆ. ಇದು ಜೈನ ಪರಂಪರೆಯದಾಗಿದ್ದು, ತನ್ನ ಆಶ್ರಯದಾತನಿಗೆ ಸಮೀಕರಿಸಿ ಬರೆದಿರಬಹುದೆಂಬ ಊಹೆಯಿದೆ. 'ಪಂಪ ಭಾರತ'ದಲ್ಲಿ ಏಳು ಬಾರಿ ರಾಮಾಯಣದ ಉಲ್ಲೇಖವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಇದು ಕನ್ನಡ ಕಾವ್ಯದ್ದೇ ಆಗಬೇಕಾಗಿಲ್ಲ. ಅವನ ಕಾಲದಲ್ಲಿ ಜನರಲ್ಲಿ ನೆಲೆಯಾಗಿದ್ದ ಕಥೆಯನ್ನಾಧರಿಸಿ ರಚಿತವಾದ ಮಾತುಗಳಿರುವ ಸಾಧ್ಯತೆಯಿದೆ.[5] ಪೊನ್ನನ 'ಭುವನೈಕ ರಾಮಾಭ್ಯುದಯ' ಮತ್ತು ಶ್ರೀವಿಜಯನ 'ರಘುವಂಶ ಪುರಾಣ'ಗಳು ನಮಗೆ ಉಪಲಬ್ಧವಿಲ್ಲ. ಹಾಗಾಗಿ ಇವುಗಳ ರಾಮಕಥೆಯ ಪರಂಪರೆ ಯಾವುದು ಎಂಬುದನ್ನು ಹೇಳುವುದು ಸಾಧ್ಯವಿಲ್ಲ. ಕನ್ನಡ ಲಕ್ಷಣ ಗ್ರಂಥಗಳಾದ 'ಕಾವ್ಯವಲೋಕನ'ದಲ್ಲಿ ಹದಿಮೂರು ಪದ್ಯಗಳು, 'ಶಬ್ದಮಣಿ ದರ್ಪಣದಲ್ಲಿ ವೈದಿಕ ರಾಮಾಯಣಕ್ಕೆ ಸಂಬಂಧಿತವಾಗಿರುವ ಎಂಟು 'ಲಕ್ಷ್ಯಪದ್ಯ'ಗಳು ದೊರಕಿವೆ. ಹಾಗೇ ಇವು ಜೈನ ರಾಮಾಯಣಕ್ಕೆ ಸಂಬಂಧಿಸಿದವುಗಳು ಆಗಿರುವ ಸಾಧ್ಯತೆಯಿದೆ. ಪ್ರಸ್ತುತ ಪ್ರಬಂಧದಲ್ಲಿ ಇದುವರೆಗೆ ದೊರಕಿರುವ ಅನುವಾದಿತ ಕನ್ನಡದ ರಾಮಾಯಣ ಕೃತಿಗಳು, ಮತ್ತು ವಿಮರ್ಶಾ ಕೃತಿಗಳನ್ನು ಹೊರತು ಪಡಿಸಿದ ಗದ್ಯ, ಪದ್ಯ, ಕೃತಿಗಳ ಕಿರು ಪರಿಚಯವನ್ನು ಮಾಡಿಕೊಡಲಾಗುತ್ತದೆ.

### ಜೈನ ಪರಂಪರೆಯ ರಾಮಾಯಣಗಳು

ಕನ್ನಡದಲ್ಲಿ ಜೈನ ಪರಂಪರೆಯ ರಾಮಾಯಣಗಳ ಚರಿತ್ರೆಯನ್ನು ಕಟ್ಟಿಕೊಡಲು ನಾಗಚಂದ್ರನಿಗಿಂತ ಹಿಂದಿನ ಯಾವ ಕೃತಿಗಳು ನಮಗೆ ದೊರಕಿಲ್ಲ, ದೊರಕಿರುವ ರಾಮಾಯಣದ ಕೆಲವು ಪದ್ಯಗಳು ಕೃತಿಗಳ ಹೆಸರುಗಳ ಆಧಾರದಿಂದ ಅವು ಯಾವ ಪರಂಪರೆಗೆ ಸೇರಿದವುಗಳೆಂದು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ನಾಗಚಂದ್ರನ 'ರಾಮಚಂದ್ರಚರಿತ ಪುರಾಣಂ' (ಕ್ರಿ.ಶ. 1040) ಕನ್ನಡದಲ್ಲಿ ದೊರಕಿರುವ ಕೃತಿಗಳಲ್ಲಿ ಮೊಟ್ಟಮೊದಲ ರಾಮಾಯಣವಾಗಿದೆ. ಇದು ಜೈನ ಪರಂಪರೆಗೆ ಸೇರಿದ್ದು, ಅದ್ಭುತ ರಾಮಾಯಣ, ಕಥಾಪ್ರಕಾರದಿಂದಲೂ ಕವಿ ಪ್ರಭಾವಿತನಾಗಿ ಕೆಲವು ಪ್ರಸಂಗಗಳನ್ನು ಚಿತ್ರಿಸಿದ್ದಾನೆ. ಇದು ಚಂಪೂಪ್ರಕಾರದಲ್ಲಿ ರಚಿತವಾಗಿದ್ದು, ಪೂರ್ವರಾಮಾಯಣದೊಂದಿಗೆ ಉತ್ತರ ರಾಮಾಯಣದ ಕಥೆಯನ್ನು ಅಂತರ್ಗತವಾಗಿ ಹೊಂದಿದೆ. ಇಕ್ಷ್ವಾಕು ವಂಶದಲ್ಲಿ ಅನೇಕ ಅರಸರು ಆಗಿಹೋದ ನಂತರದಲ್ಲಿ ಅನರಣ್ಯನೆಂಬ ದೊರೆ ಪ್ರಖ್ಯಾತನಾಗಿದ್ದನು. ಅವನಿಗೆ ಅನಂತರಥ ಮತ್ತು

ದಶರಥರೆಂಬ ಇಬ್ಬರು ಮಕ್ಕಳಿರುತ್ತಾರೆ. ರಾವಣನು ಜಾನಕಿಯ ಕಾರಣದಿಂದ ದಾಶರಥಿಯ ಕೈಯಲ್ಲಿ ಮಡಿಯುತ್ತಾನೆಂಬ ಬವಿಷ್ಯವನ್ನು ತಿಳಿದು ಅದನ್ನು ತಪ್ಪಿಸಲು ದಶರಥ ಮತ್ತು ಜನಕರನ್ನು ಕೊಲ್ಲಿಸುವ ಪ್ರಯತ್ನಗಳು ನಡೆಯುತ್ತವೆ. ಆದರೆ ಅವರ ಬದಲಿ ಲೆಪ್ಪದ ಗೊಂಬೆಗಳ ತಲೆಯನ್ನು ಕತ್ತರಿಸುವಂತೆ ಮಾಡಿ ಅವರನ್ನು ಕಾಪಾಡುತ್ತಾರೆ. ಮುಂದೆ ದಶರಥನಿಗೆ ಅಪರಾಜಿತೆ, ಸುಮಿತ್ರೆ, ಸುಪ್ರಭೆ, ಕೈಕೆಯರಿಂದ ಅವನಿಗೆ ರಾಮ, ಲಕ್ಷ್ಮಣ, ಶತೃಜ್ಞ ಹಾಗೂ ಭರತರು ಜನಿಸುತ್ತಾರೆ. ಇಲ್ಲಿ ಪುತ್ರಕಾಮೇಷ್ಟಿಯ ವಿಚಾರವಿಲ್ಲ. ಜನಕನಿಗೆ ಪ್ರಭಾಮಂಡಲನೆಂಬ ಮಗನೂ ಸೀತೆ ಎಂಬ ಮಗಳೂ ಜನಿಸುತ್ತಾರೆ. ರಾಮಲಕ್ಷ್ಮಣರು ಜನಕನ ರಾಜ್ಯವನ್ನು ಶತ್ರುಗಳಿಂದ ಮುಕ್ತವಾಗಿಸಿದಾಗ ಸೀತೆಯನ್ನು ರಾಮನಿಗೆ ಕೊಟ್ಟು ವಿವಾಹ ಮಾಡಲಾಗುತ್ತದೆ. ದಶರಥನು ರಾಮನಿಗೆ ರಾಜ್ಯವನ್ನು ಒಪ್ಪಿಸಿ ಭರತನೊಡನೆ ತಪಸ್ಸಿಗೆ ಹೋಗುವುದನ್ನು ತಿಳಿದು ಕೈಕೆ ತನ್ನ ಸ್ವಯಂವರದ ಕಾಲದಲ್ಲಿ ನಡೆದ ಯುದ್ಧದಲ್ಲಿ ದಶರಥನಿಗೆ ಮಾಡಿದ್ದ ಸಹಾಯಕ್ಕಾಗಿ ಪಡೆದಿದ್ದವರವನ್ನು ನೆನೆದು ಹದಿನಾಲ್ಕು ವರ್ಷ ರಾಮನಿಗೆ ವನವಾಸವನ್ನು ಭರತನಿಗೆ ರಾಜ್ಯವನ್ನೂ ಬೇಡುತ್ತಾಳೆ. ಸೀತೆ ಮತ್ತು ಲಕ್ಷ್ಮಣರೊಂದಿಗೆ ರಾಮ ವನವಾಸಕ್ಕೆ ಹೊರಡುತ್ತಾನೆ. ಮುಂದೆ ಲಕ್ಷ್ಮಣನು ಆಕಸ್ಮಿಕವಾಗಿ ಶಂಬೂಕನ ತಲೆಯನ್ನು ಕತ್ತರಿಸಿಬಿಡುತ್ತಾನೆ. ಅವನ ತಾಯಿ ಚಂದ್ರನಖಿ ಮಗನ ಸಾವಿಗೆ ಸೇಡು ತೀರಿಸಲುಹೋಗಿ ರಾಮಲಕ್ಷ್ಮಣರಿಗೆ ಮರುಳಾಗಿ ವಿವಾಹಮಾಡಿಕೊಳ್ಳುವಂತೆ ಕೇಳುತ್ತಾಳೆ. ಸೀತೆಯ ಮುಗುಳ್ನಗೆ ಅವಮಾನಿತಳಾಗಿ ಗಂಡ ಖರನನ್ನು ಯುದ್ಧಕ್ಕೆ ಪ್ರೇರೇಪಿಸುತ್ತಾಳೆ. ಖರನಿಗೆ ಸಹಾಯ ಮಾಡಲು ಬಂದ ಅವಳ ಸೋದರ ರಾವಣನು ಸೀತೆಯ ಸೌಂದರ್ಯವನ್ನು ಕಂಡುಮೋಹಿತನಾಗಿ ಅವಲೋಕಿನೀವಿದ್ಯೆಯ ಸಹಾಯದಿಂದ ರಾಮನನ್ನು ಸೀತೆಯಿಂದ ಅಗಲಿಸಿ ಅವಳನ್ನು ಅಪಹರಿಸಿ ಲಂಕೆಯ ಮಣಿಮಾಡದಲ್ಲಿ ಇರಿಸುತ್ತಾನೆ. ಯಾರ ಬುದ್ಧಿವಾದವೂ ರಾವಣನಿಗೆ ರುಚಿಸುವುದಿಲ್ಲ. ಸೀತೆಯನ್ನು ಹುಡುಕುತ್ತಾ ಬಂದ ರಾಮ ಸುಗ್ರೀವರ ಸಖ್ಯವಾಗಿ ಸೀತಾನ್ವೇಷಣೆ ನಡೆದು, ಹನುಮಂತನಿಂದ ಚೂಡಾಮಣಿ ಪ್ರದಾನವಾಗುತ್ತದೆ. ಸುಗ್ರೀವ, ವಿಯಚ್ಚರರ ದೊಡ್ಡ ಸೈನ್ಯದೊಂದಿಗೆ ರಾವಣನನ್ನು ರಾಮಲಕ್ಷ್ಮಣರು ಎದುರಿಸುತ್ತಾರೆ. ಲಕ್ಷ್ಮಣನಿಂದ ರಾವಣ ವಧೆಯಾಗುತ್ತದೆ. ಈ ಪೂರ್ವರಾಮಾಯಣದ ಕಥೆಯ ಜೊತೆಗೆ 'ದಶವದನ ವಂಶವರ್ಣನಂ' ಎಂಬ 9ನೇ ಆಶ್ವಾಸದಲ್ಲಿ, ಕೊನೆಯ 25 ಪದ್ಯಗಳು ಹಾಗೂ ಹತ್ತನೆಯ ಆಶ್ವಾಸದಕೊನೆಯಲ್ಲಿ 'ಸೀತಾಪರಿತ್ಯಾಗ ವರ್ಣನಂ' ಮತ್ತು 'ಪರಿನಿರ್ವಾಣ ಕಲ್ಯಾಣೋತ್ಸವ ವರ್ಣನಂ' ಎಂಬ ಭಾಗಗಳಲ್ಲಿ ಉತ್ತರ ರಾಮ ಕಥೆಯನ್ನು ಪೂರ್ಣವಾಗಿ ಹೇಳಲಾಗಿದೆ. "ಸರಳವೆನ್ನುವಂತಹ ಭಾಷೆಯಲ್ಲಿ ಹೆಚ್ಚು ಅಲಂಕಾರಗಳ ಭಾರವಿಲ್ಲದೇ ಸುಂದರ ಕಾವ್ಯವೊಂದನ್ನು ಇವನಂತೆ ನೀಡಿದ ಕವಿಗಳು ಬಹಳಿಲ್ಲ. ಅರ್ಥವ್ಯಾಪ್ತಿಯ ರಮಣೀಯತೆ ನಾಗಚಂದ್ರನ ಕಾವ್ಯದ ತುಂಬಾ ಎಲ್ಲಿ ನೋಡಿದರಲ್ಲಿ ಕಂಗೊಳಿಸುತ್ತಿದೆ" ಎಂದು ರಂ. ಶ್ರೀ ಮುಗಳಿಯವರು ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಮೆಚ್ಚುನುಡಿಯಾಡಿದ್ದಾರೆ. 'ಶ್ರೀರಾಮಚಂದ್ರ ಚರಿತ ಪುರಾಣ'ವೆಂಬ ಹೆಸರಿನ ಕವಿ ಚಂದ್ರಶೇಖರ (ಬಂಗವಾಡಿಯಸಾಮಂತ ಅರಸರ ಆಸ್ಥಾನ ಕವಿ ಮತ್ತು ಮೂರನೆಯ ಮೂಲಿಕೆಯ ಪದ್ಮನಾಭ ವಿರಚಿತ 37 ಸಂಧಿಗಳ 5250 ಪದ್ಯಗಳನ್ನೊಳಗೊಂಡ ಸಾಂಗತ್ಯ ಕೃತಿಯು 2015ರಲ್ಲಿ ಪ್ರಕಟವಾಗಿದೆ.[6] ನಾಗಚಂದ್ರನ ಅನುಸರಣೆಯಿದ್ದರೂ ಕೆಲ ಸ್ಥಳೀಯವಾದ ಪ್ರದೇಶದ ಪರಿಸರ ವರ್ಣನೆ ವಿಶೇಷವಾಗಿದೆ.

ನಾಗಚಂದ್ರ ಚಿತ್ರಿಸಿದ ಶಂಬೂಕ ಪ್ರಸಂಗ ಹಾಗೂ ರಾವಣ ಪಾತ್ರಗಳು ಮುಂದಿನ ಅನೇಕ ಕನ್ನಡ ಕವಿಗಳು, ವಿಮರ್ಶಕರು ನಾಟಕಕಾರರನ್ನು ಸೆಳೆದಿವೆ. ಜೈನ ರಾಮಾಯಣಗಳಲ್ಲಿ ಶಂಬುಕ ವಧೆಯೇ ನಿಮಿತ್ತವಾಗಿ ಸೀತೆಯ ಅಪಹರಣವಾಗುವುದು. ಶಂಬುಕ ರಾವಣನ ತಂಗಿ ಚಂದ್ರನಖಿಯ ಹಾಗೂ ಖರನೆಂಬ ರಾಕ್ಷಸನ ಮಗ. ಪಾತಾಳಲಂಕೆಯು ಅವನ ಸ್ಥಳ. ಶಂಬುಕ ಸೂರ್ಯಹಾಸವೆಂಬ ಖಡ್ಗದ ಸಿದ್ಧಿಗಾಗಿ ಸಾಧನೆ ಮಾಡುತ್ತಿದ್ದ ಸ್ಥಳಕ್ಕೆ ಲಕ್ಷ್ಮಣ ಬರುವುದಕ್ಕೂ ಖಡ್ಗವು ಪ್ರತ್ಯಕ್ಷವಾಗುವುದಕ್ಕೂ ಸಮಯ ಸರಿಹೊಂದಿ ಹೊಸ ಖಡ್ಗವನ್ನು ಕಂಡ ಲಕ್ಷ್ಮಣ ಸಹಜವಾಗಿ ಅದರ ತೀಕ್ಷ್ಣತೆಯನ್ನು ಪರೀಕ್ಷಿಸಲು ಬಿದುರು ಮೆಳೆಯನ್ನು ಸವರಿದಾಗ ಶಂಬುಕನ ತಲೆ ಅಕಸ್ಮಾತ್ತಾಗಿ ಕತ್ತರಿಸಿಹೋಗುವುದು. ಮಗನ ಸಾವಿಗೆ ಚಂದ್ರನಖಿಯ ಶೋಕ, ಪ್ರತೀಕಾರ ಮನೋಭಾವ, ರಾಮಲಕ್ಷ್ಮಣರ ಬಗೆಗೆ ಮೂಡಿದ ಅವಳ ಮೋಹಪರವಶತೆ, ವಿಷಯಾತುರ ತಿರಸ್ಕೃತಭಾವವೇ ದ್ವೇಶವಾಗಿ ಪರಿಣಮಿಸಿ ಸೀತಾಪಹರಣಕ್ಕೆ

ಕಾರಣವಾಗುತ್ತದೆಂಬ ಜೈನಪರಂಪರೆಯ ವಿವರಗಳು ಮುಂದೆ ನರಹರಿಯಿಂದ ಆರಂಭಿಸಿ ಕುವೆಂಪುರವರವರೆಗೆ ಕನ್ನಡದ ಅನೇಕ ಕವಿಗಳ ಕೃತಿರಚನೆಯ ಮೇಲೆ ಪ್ರಭಾವವನ್ನು ಬೀರಿದೆ. ಅವರು ವೈದಿಕ ಪರಂಪರೆಯಲ್ಲಿದ್ದ ಶಂಬೂಕನ ಕಥೆಯನ್ನು ಸರ್ವರಿಗೂ ಸಮಬಾಳೆಂಬ ತತ್ವದ ಹಿನ್ನೆಲೆಯಲ್ಲಿ. ಕುವೆಂಪುರವರು 'ಶೂದ್ರ ತಪಸ್ವಿ' ನಾಟಕದಲ್ಲಿ ಮರು ಸೃಷ್ಟಿಸಿದ್ದಾರೆ.

ನಾಗಚಂದ್ರನು ಗಣಧರರು ಹೇಳಿದ ಕ್ರಮದಲ್ಲೇ ಸೀತಾಪಹರಣ ಹಾಗೂ ನಂತರದಲ್ಲಿ ರಾಮ ಸುಗ್ರೀವರ ಸಖ್ಯ, ಮಾಯಾವಿಯ ಸಾವು, ಜಾಂಬೂದನಿ ರಾವಣನ ವಿಚಾರಗಳ ಪರಿಚಯ ರಾವಣನು ಗಳಿಸಿದ ವಿದ್ಯೆಗಳು, ಅವನ ದಿಗ್ವಿಜಯಗಳು, ಪರಾಕ್ರಮಗಳು ಅವನ ಸೋದರರ ಮದುವೆ-ಮಕ್ಕಳ ವಿಚಾರಗಳು ಎಲ್ಲವನ್ನೂ ವಿಸ್ತಾರವಾಗಿ ಹೇಳಿದ್ದಾನೆ. ಅಲ್ಲದೆ ರಾವಣನ ಅಸಮಾನತೆಯನ್ನು ತಿಳಿಸುವ ಉದ್ದೇಶದಿಂದಲೇ ಅವನು ಚಂದ್ರಹಾಸವೆಂಬ ಖಡ್ಗವನ್ನು ಹಿಡಿದು ಭೂಮಂಡಲವನ್ನು ಜಯಿಸಿ ಇಂದ್ರಾದಿ ದೇವತೆಗಳನ್ನು ಅಷ್ಟ ದಿಕ್ಪಾಲಕರನ್ನು ಸೆರೆಹಿಡಿದು, ಅಸಹಾಯಶೂರನೆನಿಸಿ ಮೆರೆಯುವುದು ನಳಕೂಬರನ ಪತ್ನಿ ಉಪರಂಭೆಯ ಪ್ರಸಂಗದಲ್ಲಿ ಅವಳನ್ನು ಧಿಕ್ಕರಿಸಿ 'ಪರಾಂಗನವಿರತಿವ್ರತಿ' ಯಾಗಿ ಮೆರೆಯುವ ವಿಚಾರಗಳನ್ನು ಹೇಳುತ್ತಾ ಅಂತಹ ರಾವಣನು ಸೀತೆಯ ಸೌಂದರ್ಯಕ್ಕೆ ಮನಸೋತು ತಂದುಕೊಂಡ ದುರ್ದೆಸೆಯನ್ನೂ ಮನಮುಟ್ಟುವಂತೆ ಹೇಳಿದ್ದಾನೆ. ಕಾಲವಶವಾಗಿ, ದುರ್ವಿಧಿಗೆ ಒಳಗಾಗಿ ವ್ಯಕ್ತಿಯ ಅಧಃಪತನ ಆಗುವುದರತ್ತಲೇ ನಾಗಚಂದ್ರನಿಗೆ ಗಮನವಿದೆ. ಕನ್ನಡ ಸಾಹಿತ್ಯದಲ್ಲಿ ಪಂಪ ರನ್ನರು ಕಡೆದು ನಿಲ್ಲಿಸಿದ ಉದಾತ್ತನಾದ ಪ್ರತಿನಾಯಕ ಪಾತ್ರ ಚಿತ್ರಣದ ಮುಂದುವರಿಕೆಯಂತೆ ರಾವಣ ಕಂಡು ಬರುತ್ತಾನೆ. ರಾವಣನ ಮನಃ ಪರಿವರ್ತನೆ ಪಂಪರಾಮಾಯಣದ ಇನ್ನೊಂದು ವಿಶಿಷ್ಟ ಪ್ರಸಂಗ. ಇದು ಜೈನ ಪರಂಪರೆಯಲ್ಲಿ ಕಂಡುಬರುತ್ತದೆ. ಇಲ್ಲಿ ರಾವಣ ವಾಲ್ಮೀಕಿ ರಾಮಾಯಣದ ರಾವಣನಂತಲ್ಲದೆ ಉದಾತ್ತ ಮತ್ತು ಸದ್ಗುಣಿ, ಒಂದು ವಿಷನಿಮಿಷದಲ್ಲಿ ಸೀತೆಯಲ್ಲಿ ಮೋಹಿತನಾಗಿ ಅವಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದರೂ ಅವಳ ಪತಿವ್ರತಾ ನಿಷ್ಠೆಯನ್ನರಿತು ಪಶ್ಚಾತ್ತಾಪದಿಂದ ಮರುಗುವುದನ್ನು ಕಾಣುತ್ತೇವೆ. ಇದು ಮುಂದಿನ ಕನ್ನಡ ರಾಮಾಯಣ ಬರಹಗಾರರಮೇಲೆ ಅದರಲ್ಲೂ ಕುವೆಂಪುರವರ ಮೇಲೆ ವಿಶೇಷ ಪ್ರಭಾವವನ್ನು ಬೀರಿರುವುದನ್ನು ಗಮನಿಸಬಹುದು. ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ದಶಾನನ ಸ್ವಪ್ನ ಸಿದ್ಧಿಯ ಭಾಗವು ಅಪೂರ್ವವಾಗಿ ಮೂಡಿಬಂದಿದೆ.

**ಕುಮುದೇಂದುವಿನ ರಾಮಾಯಣ** ಕೃತಿಯಲ್ಲಿ ನಾಗಚಂದ್ರನ ಅನುಕರಣೆ ಇದ್ದರೂ ಉತ್ತರಕಾಂಡದ ಕಥೆಯ ಪ್ರಸ್ತಾಪವಿಲ್ಲ. ಶಂಬೂಕವಧೆ ಮಾತ್ರ ಬಂದಿದೆ. ರಾವಣನನ್ನು ವಧಿಸಿದ ರಾಮ ಅಯೋಧ್ಯೆಗೆ ಬಂದನೆಂಬಲ್ಲಿಗೆ ಕಾವ್ಯಮುಕ್ತಾಯವಾಗಿದೆ. ಇದರಲ್ಲಿ ರಾಮನು ಕೇವಲಿಯಾಗುವ ಉತ್ತರ ಕಾಂಡ ಕಥೆಯಿಲ್ಲ. ಇದರಲ್ಲಿ ಲಕ್ಷ್ಮಣ, ರಾಮರಿಗೆ ಅನೇಕ ಮದುವೆಗಳಾಗುತ್ತವೆ. ಹನುಮಂತನು ಇಲ್ಲಿ ಬ್ರಹ್ಮಚಾರಿಯಲ್ಲ. ರಾವಣನು ಬಿಟ್ಟ ಚಕ್ರದಿಂದಲೇ ಅವನನ್ನು ಲಕ್ಷ್ಮಣನು ಕೊಲ್ಲುತ್ತಾನೆ. ಇದು ವರ್ಣಕ ಕಾವ್ಯ. ಕಾವ್ಯ ವಿಶೇಷತೆಯಿಲ್ಲವಾದರೂ ಚಮತ್ಕಾರವಿದೆ. ಸರಾಗವಾಗಿ ಕಥೆ ಹೇಳಿದ್ದಾನೆ. ಅನುಪ್ರಾಸ, ಅಲಂಕಾರಗಳು ಇವನಿಗೆ ಪ್ರಿಯವಾಗಿದೆ. ಇದರಲ್ಲಿ ಕುಸುಮ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂಬ ನಾಲ್ಕು ಬಗೆಯ ಷಟ್ಪದಿಗಳ ಪ್ರಯೋಗವನ್ನು ಮಾಡಿದ್ದಾನೆ. ಒಂದೇ ಕಾವ್ಯದಲ್ಲಿ ಈ ರೀತಿಯ ಪ್ರಯೋಗ ಮಾಡಿದವರಲ್ಲಿ ಈತನೇ ಮೊದಲಿಗ.[7] **ದೇವಪ್ಪ ಕವಿಯ 'ರಾಮವಿಜಯ ಕಾವ್ಯಂ'**ದಲ್ಲಿ 20ಸಂಧಿಗಳಿದ್ದು 2913 ಪದ್ಯಗಳಿವೆ.[8] ಇದೊಂದು ಸಾಂಗತ್ಯ ಕಾವ್ಯ. ಇವನ ಕಥೆಯು ವಿಮಲಸೂರಿಯ ಕಥೆಗಿಂತಲೂ ಭಿನ್ನವಾಗಿದ್ದು, ಗುಣಭದ್ರರ ಕಥೆಯನ್ನೂ ಪೂರ್ಣವಾಗಿ ಹೋಲದಿರುವುದರಿಂದ ಇದು ಯಾವ ಪರಂಪರೆಗೆ ಸೇರಿದ್ದೆಂಬುದರ ಬಗೆಗೆ ವಿದ್ವಾಂಸರಲ್ಲಿ ಚರ್ಚೆಯಿದೆ. ಜಿನಭಕ್ತರು ಕೇಳಿದ್ದರಿಂದ ತಾನು ಕಥೆ ಹೇಳಿರುವುದಾಗಿ ಹೇಳಿದ್ದಾನೆ. ಇದರಲ್ಲಿ ಮಾರೀಚ ಮತ್ತು ಚಿನ್ನದ ಜಿಂಕೆಯ ಸಂಗತಿಯಿದೆ. ಇವನ ಮೇಲೆ ನಾಗಚಂದ್ರನಿಗಿಂತಲೂ ತೊರವೆನರಹರಿಯ ರಾಮಾಯಣದ ಪ್ರಭಾವವಿದೆ. ಇವನ ರಾವಣನು ಕಪಟಿ, ವಂಚಕ, ಕಾಮುಕ, ಒಮ್ಮೆ ವಿಜಯಾರ್ಧ ಪರ್ವತದಲ್ಲಿದ್ದಾಗ ಅಲಕಾವತಿಯ ರಾಜನಾದ ಅಮಿತವೇಗನೆಂಬುವವನ ಮಗಳು ಮಣಿಮತಿಗೆ ಆಕರ್ಷಿತನಾಗಿ ಅವಳ ವಿದ್ಯಾಸಾಧನೆಗೆ ಅಡ್ಡಿಯುಂಟುಮಾಡುತ್ತಾನೆ. ಕುಪಿತಗೊಂಡ ಅವಳು **"ನಿನಗೆ ಮಗಳಾಗಿ ಹುಟ್ಟಿ ನಿನ್ನ ಮರಣಕ್ಕೆ ಕಾರಣವಾಗುವೆ" ಎಂದು ಪ್ರತಿಜ್ಞೆಮಾಡಿ**

**ಮಂಡೋದರಿಯ ಮಗಳಾಗಿ ಹುಟ್ಟಿದಳು ಅವಳೇ ಸೀತೆ ಎಂಬ ಕಥೆ ಹೇಳಿದ್ದಾನೆ. ಇದು ಅದ್ಭುತ ರಾಮಾಯಣದ ವೇದವತಿಯ ಕಥೆಯನ್ನು ಹೋಲುತ್ತದೆ. ರಾಣನಿಗೆ ತಿಳಿಯದಂತೆ ಸ್ವಯಂವರದಲ್ಲಿ ರಾಮನಿಗೆ ಸೀತೆಯನ್ನು ವಿವಾಹ ಮಾಡುತ್ತಾರೆ. ರಾಮನು ವಾರಣಾಸಿಯನ್ನು ಗೆದ್ದು ಸೀತೆಲಕ್ಷ್ಮಣರೊಂದಿಗೆ ಉದ್ಯಾನವನದಲ್ಲಿ ವಿಹರಿಸುತ್ತಿದ್ದಾಗ ರಾವಣ ಅವಳ ಸೌಂದರ್ಯವನ್ನು ಕಂಡು ಅವಳನ್ನು ಒಲಿಸಲು ಮೊದಲು ತಂಗಿ ಶೂರ್ಪನಖಿಯನ್ನು ಕಳುಹಿಸುತ್ತಾನೆ. ಅವಳು ವಿಫಲಳಾದ್ದರಿಂದ ಮಾರೀಚನು ಚಿನ್ನದ ಜಿಂಕೆಯಂತೆ ಸುಳಿದಾಡಲು ಹೇಳಿ ರಾಮನು ಮಾಯಾಜಿಂಕೆಯನ್ನಟ್ಟಿ ಹೋದಾಗ ರಾವಣನು ರಾಮನಂತೆ ವೇಷತಾಳಿ ಬಂದು ಸೀತೆಯನ್ನು ಅಪಹರಿಸುವ ಕಥೆಯನ್ನು ಹೆಣೆದಿದ್ದಾನೆ.** ಅನ್ಯಕೃತವೆಂದು ವಿದ್ವಾಂಸರು ಹೇಳುವ ಕೊನೆಯ ಸಂಧಿಯಲ್ಲಿ ಕೇವಲ ರಾಮರಾಜ್ಯ ವೈಭವವನ್ನು ರಾಮನು ಕೇವಲಿಯಾದ ಸಂದರ್ಭವನ್ನು ತಿಳಿಸುತ್ತದೆ. ಇತರ ಉತ್ತರ ರಾಮಾಯಣದ ಪ್ರಸಂಗಗಳಿಲ್ಲ. ಒಟ್ಟಿನಲ್ಲಿ **ದೇವಪ್ಪ ಕವಿಯ ರಾಮಕಥೆಯು ಜೈನ, ಜಾನಪದ, ವೈದೀಕ ಕಥೆಗಳ ಮಿಶ್ರಣವೂ ಅವುಗಳಲ್ಲಿಲ್ಲದ ಹೊಸ ಕಲ್ಪನೆಯನ್ನೂ ಹೊಂದಿ ವಿಶಿಷ್ಟವಾಗಿದೆ. ಇವನು ಜೈನ ಪರಂಪರೆಯ ಕಟ್ಟಿಗೆ ಸಿಕ್ಕಿಕೊಳ್ಳದೇ ಒಂದಿಷ್ಟು ಸ್ವಾತಂತ್ರ್ಯವನ್ನು ವಹಿಸಿದ್ದಾನೆ. ನರಹರಿಯ ಪ್ರಭಾವ ಹೆಚ್ಚಿದ್ದರೂ ತ್ರಿಮೂರ್ತಿಗಳನ್ನು ವಿಡಂಬಿಸಿ ಜಿನನೇ ಶ್ರೇಷ್ಠನೆಂಬುದನ್ನು ಹೇಳಲು ಅವನು ಮರೆತಿಲ್ಲ. ಯಾವ ರಾಮಾಯಣದಲ್ಲೂ ಇಲ್ಲದ ದಶರಥ ಮತ್ತು ಅವನ ಮಡದಿ ಸುಬಳಾದೇವಿಯ ಪುತ್ರದೊಹಳ, ರತಿಕ್ರೀಡೆಗಳ ವರ್ಣನೆಯನ್ನು ದೀರ್ಘವಾಗಿ ತಂದಿದ್ದಾನೆ. ಸೀತಾ ಸ್ವಯಂವರ ವಿವಾಹ, ಪ್ರಕೃತಿ ವರ್ಣನೆಗಳು, ಲಂಕಾದಹನ, ಯುದ್ಧ ಸಿದ್ಧತೆಗಳ ವರ್ಣನೆಗಳಲ್ಲಿ ಆ ಕಾಲದ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ಚೆನ್ನಾಗಿ ಹಿಡಿದಿಡಲಾಗಿದೆ.**

**“ದೇವಚಂದ್ರನು** ಕನ್ನಡ ಸಾಹಿತ್ಯೋದ್ಯಾನದ ಹಲವಾರು ವೃಕ್ಷಗಳಿಂದ ವನಸುಮಗಳನ್ನು ತಿರಿತಂದು 'ರಾಮಕಥಾವತಾರ' ಎಂಬ ಒಂದು ಸುಂದರವಾದ ಮುದ್ದಾದ ಮಾಲೆಯನ್ನು ಕಟ್ಟಿದ್ದಾನೆ” ಎಂದು ಬಸವಾರಾಧ್ಯರು ಹೇಳಿದ್ದಾರೆ[9] ಹದಿನಾರು ಆಶ್ವಾಸಗಳಿಂದ ಕೂಡಿದ ಚಂಪೂ ಕೃತಿ. ಇದು ಸ್ವತಂತ್ರ ಕೃತಿಯಲ್ಲ ಅವನೇ ಹೇಳಿಕೊಂಡಿರುವಂತೆ ಶ್ರೀಮದಭಿನವ ಪಂಪ ವಿರಚಿತ 'ರಾಮಚರಿತ್ರ ಪುರಾಣಂ' ಸಂಬಂಧಿಸಿದ ರಾಮ ಕಥಾವತಾರ. ಇದು ರಾಮಚಂದ್ರ ಚರಿತಪುರಾಣವೇ ಎನ್ನಬಹುದು. ನಾಗಚಂದ್ರನ ಜೊತೆಗೆ ಕುಮುದೇಂದು ಮತ್ತಿತರ ಜೈನ ರಾಮಾಯಣಕಾರರ ಬಗ್ಗೆ ಸ್ವಲ್ಪ ಮಾಹಿತಿಯನ್ನು ನೀಡಿದ್ದಾನೆ. ಇದರಲ್ಲಿ ಪ್ರಾಚೀನ ಕೃತಿಗಳಿಂದ ಗದ್ಯ ಪದ್ಯಗಳನ್ನು ಸಂಗ್ರಹಿಸಿರುವದಾಗಿ ಕವಿಹೇಳಿಕೊಂಡಿದ್ದಾನೆ. ಅದರಂತೆ ಇದರಲ್ಲಿ ನಾಗಚಂದ್ರನ ರಾಮಚಂದ್ರಚರಿತಪುರಾಣದ ಪದ್ಯ ಹಾಗೂ ಗದ್ಯಭಾಗಗಳೂ, ಪಂಪನ ಆದಿಪುರಾಣದ ಪದ್ಯವೂ ಇವೆ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳಿವೆ.

**ನಾಗವ ಕವಿಯು** ಭಾಮಿನೀ ಷಟ್ಪದಿಯಲ್ಲಿ 'ಮಾಣಿಕಸ್ವಾಮಿಯ ಚರಿತ್ರೆ'ಯನ್ನು ಬರೆದಿದ್ದಾನೆ. ನಾಗಚಂದ್ರನ ಸಂಪ್ರದಾಯದಲ್ಲೇ ಬರೆದಿದ್ದರೂ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಗಮನಿಸಬಹುದು. **ಶಂಬೂಕನ ವೃತ್ತಾಂತದಲ್ಲಿ ಸಣ್ಣ ಬದಲಾವಣೆಯಿದೆ. ಚಂದ್ರಹಾಸ ಖಡ್ಗವನ್ನು ತನ್ನ ಸೋದರ ಮಾವ ರಾವಣನು ಮಾತ್ರ ಪಡೆದುಕೊಂಡಿದ್ದಾನೆಂಬ ಈರ್ಷೆಯಿಂದ ತಾನೂ ಕೂಡ ಅದನ್ನು ಪಡೆಯಬೇಕೆಂದು ತಪಸ್ಸು ಮಾಡುತ್ತಾನೆಂದು ಹೇಳಿದೆ.** ಇದರಲ್ಲಿ ಉತ್ತರ ರಾಮ ಕಥೆಯ ಬಹುಭಾಗಗಳಿವೆ. ರಾವಣ ಸಂಹಾರಮಾಡಿ ಸೀತೆಯೊಡನೆ ಅಯೋಧ್ಯೆಗೆ ಬಂದ ರಾಮ ಸುಖ ಸಂತೋಷದಿಂದಿರುವಾಗ ಸೀತೆ ಗರ್ಭಧರಿಸಿದಳು ಎಂಬಲ್ಲಿಂದ ಕಾವ್ಯವನ್ನು ಆರಂಭಿಸಿದ್ದಾನೆ. ತೌರಿನಿಂದ ತಡವಾಗಿ ಬಂದ ಮಡದಿಯನ್ನು ಸ್ವೀಕರಿಸಲು ಒಕ್ಕಲಿಗನೊಬ್ಬನು ಸಿದ್ಧನಿಲ್ಲದ ಸನ್ನಿವೇಶದಲ್ಲಿ, ರಾವಣನು ಕದ್ದೊಯ್ದ ಸೀತೆಯನ್ನು ಒಪ್ಪಿಕೊಂಡು ರಾಮನೇ ಸಂಸಾರ ನಡೆಸುತ್ತಿರುವಾಗ ನಿನ್ನದೇನು ದೊಡ್ಡಸ್ಥಿಕೆ? ಎಂಬ ಪ್ರಶ್ನೆ ಎದ್ದಿದೆ. ಇದನ್ನು ಖುದ್ದು **ರಾಮನೇ ರಾತ್ರಿಯವೇಳೆ ವೇಷ ಮರೆಸಿಕೊಂಡು ತನ್ನ ಆಡಳಿತವನ್ನು, ರಾಜ್ಯದ ಸ್ಥಿತಿಗತಿಗಳನ್ನು ಕುರಿತು ಪ್ರಜಾಭಿಪ್ರಾಯಗಳನ್ನು ತಿಳಿಯಲು ಸಂಚರಿಸುತ್ತಿದ್ದ ವೇಳೆ ಈ ಸಂಭಾಷಣೆಗಳನ್ನು ಕಿವಿಯಾರ ಕೇಳಿದನೆಂದು, ಮರ್ಮಾಘಾತವಾಗಿ ರಾಮನು ಆಪ್ತರೊಡನೆ ಸಮಾಲೋಚಿಸಿ, ಸೀತೆಯನ್ನು ತ್ಯಜಿಸಲು ನಿರ್ಧರಿಸಿದನೆಂದು ಕವಿ ಹೇಳಿದ್ದಾನೆ.** ಸೀತೆಯನ್ನು ಕಾಡಿಗೆ ಬಿಟ್ಟವರು ಯಾರೆಂಬುದನ್ನಾಗಲೀ ಲವಕುಶರೊಂದಿಗೆ ಸೀತೆಯನ್ನು ಮುನಿಯೋರ್ವನ ಆಶ್ರಮದಿಂದ ಕರೆತಂದು ರಕ್ಷಣೆ ನೀಡಿದ ಅರಸನಾರೆಂಬುದನ್ನೂ ಇವನು ಹೇಳಿಲ್ಲ. ಲವಕುಶರ ಕಾಳಗದ ಸಂದರ್ಭದಲ್ಲಿಯೂ ಈತ ಕೆಲವು ಸಣ್ಣ

ಬದಲಾವಣೆ ಮಾಡಿಕೊಂಡಿದ್ದಾನೆ. ರಾಮ ತಮ್ಮ ತಂದೆ ಎಂಬುದನ್ನು **ತಾಯಿಯಿಂದಲೇ ತಿಳಿದ ಲವಕುಶರು ರಾಮನ ಮೇಲೆ ಕ್ರೋಧಗೊಂಡು ಯುದ್ಧ ಮಾಡುತ್ತಾರೆ. ಸೀತೆಯ ಸೋದರನಿಂದ ಅವರು ತನ್ನ ಮಕ್ಕಳೆಂದು ರಾಮನು ತಿಳಿಯುತ್ತಾನೆ ಮತ್ತು ತನ್ನ ಮಕ್ಕಳ ಪರಾಕ್ರಮವನ್ನು ಮೆಚ್ಚಿಕೊಳ್ಳುತ್ತಾನಾದರೂ ಇಲ್ಲಿ ಸೀತೆ ರಾಮನನ್ನು ಮೂದಲಿಸುವುದು ವಿಶೇಷ ಇದುವರೆಗೂ ರಾಮನನ್ನು ಬಿಟ್ಟು ಉಳಿದವರೆಲ್ಲರೂ ಸೋದರಸಮಾನರೆಂದು ಭಾವಿಸಿದ್ದ ಅವಳು,** ಈಗ ರಾಮನೂ ಸೋದರ ಸಮಾನನೇ ಎಂದು ಹೇಳಿ ಬಿಡುತ್ತಾಳೆ. ಮಕ್ಕಳನ್ನು ಅವನಿಗೆ ಒಪ್ಪಿಸಿ ಜುಗುಪ್ಸೆಗೊಂಡು ಜಿನದೀಕ್ಷೆ ಪಡೆಯುತ್ತಾಳೆ ಇಲ್ಲಿ ಸೀತೆಯ ಪ್ರತಿಜ್ಞೆ, ಅಗ್ನಿದಿವ್ಯವಿಲ್ಲ.

**ಚಂದ್ರ ಸಾಗರವರ್ಣಿ**ಯ ಜಿನ ರಾಮಾಯಣ'ವು[10] ಭಾಮಿನೀ ಷಟ್ಪದಿಯಲ್ಲಿ ರಚಿಸಿರುವ 74 ಆಶ್ವಾಸಗಳೂ 4309 ಪದ್ಯಗಳಿಂದ ಕೂಡಿದ ಕೃತಿಯಾಗಿದೆ. ವನಚರರು ಮಗದ ದೇಶದ ರಾಜ ಶ್ರೇಣಿಕನಿಗೆ ಹೇಳಿದ ಈ ಕಥೆಯನ್ನು ಆತ ತನ್ನ ಮಡದಿ ಚೇಳಿನಿಗೆ ಹೇಳಿದಂತೆ ಕಥೆಯನ್ನು ಆರಂಭಿಸುತ್ತಾನೆ. ಈತ ರಾಮಾಯಣ ಮತ್ತು ಮಹಾಭಾರತವೆರಡನ್ನೂ ಬರೆದಿರುವುದು ವಿಶೇಷ. ಇವನು ಒಟ್ಟು 46 ಕೃತಿಗಳನ್ನು ರಚಿಸಿದ್ದಾನೆಂದು ತಿಳಿದುಬರುತ್ತದಾದರೂ 18 ಕೃತಿಗಳು ಮಾತ್ರ ಪ್ರಕಟವಾಗಿವೆ. ಈತನ ಭಾಷಾ ವೈಶಿಷ್ಟ್ಯತೆಯು ವಿದ್ವಾಂಸರ ಗಮನವನ್ನು ಸೆಳೆದಿದೆ. ಆತ ತನ್ನ ಕಾಲದ ಕನ್ನಡದ ಆಡುಮಾತು, ವ್ಯಾವಹಾರಿಕ ಕನ್ನಡದ ಜೀವಂತ ಭಾಷೆಯನ್ನು ಬಳಸಿರುವುದರಿಂದ ಭಾಷಾ ಅಧ್ಯಯನಕ್ಕೆ ಹೆಚ್ಚು ಅವಕಾಶವಿದೆ ಈ ನಿಟ್ಟಿನಲ್ಲಿ ಈತನನ್ನು 'ಹೊಸಗನ್ನಡದ ಮುಂಗೋಳಿ' ಎನ್ನುತ್ತಾರೆ.[11] ಇದರಲ್ಲಿ **ರಾವಣನ ವಂಶವರ್ಣನೆ, ಲಂಕಾವರ್ಣನೆ, ರಾವಣನ ವೈಭವ, ಸಾಹಸಗಳು, ಹೆಣ್ಣು ಮಗುವಿಲ್ಲವೆಂಬ ಅವನ ಕೊರಗು, ಗರ್ಭಿಣಿಯಾದ ಮಂಡೋದರಿಗೆ ರಾವಣನ ರಕ್ತ ಕುಡಿಯಬೇಕೆಂಬ ದುರ್ಬಯಕೆ, ಹುಟ್ಟಿದ ಮಗುವಿನಿಂದ ತಂದೆಗೆ ಕೆಡುಕೆಂದು ತ್ಯಜಿಸುವುದು, ಜನಕನಿಗೆ ಆ ಮಗು ಸಿಗುವುದು ಮುಂತಾಗಿ ಕಥೆ ಸಾಗುತ್ತದೆ. ಇವನು ಜೈನ ಪರಂಪರೆಯ ಜೊತೆಗೆ ಜಾನಪದದಿಂದಲೂ, ಅದ್ಭುತ ರಾಮಾಯಣದ ಕಲ್ಪನೆಗಳಿಂದಲೂ ಪ್ರಭಾವಿತನಾಗಿ ಕಥೆಯನ್ನು ಹೆಣೆದಿದ್ದಾನೆ. ಇಲ್ಲಿ ಮಂಥರೆಯ ಬದಲು 'ಮಾಯಾವಿ' ಎಂಬ ರಾಕ್ಷಸಿಯಿಂದ ಕೈಕೆಗೆ ದುರ್ಭೋದೆಯಾಗುತ್ತದೆ. ಇಲ್ಲಿ ಶಂಬುಕುಮಾರನ ತಾಯಿ ಶೂರ್ಪನಖಿ ಎಂದು ಹೇಳಿದ್ದಾನೆ. ಮುಖ್ಯವಾಗಿ ಸೀತೆಯು ಅಂತ್ಯದಲ್ಲಿ ದೀಕ್ಷಾಗ್ರಹಣ ಮಾಡುವ ಸಂದರ್ಭದಲ್ಲಿ ಆಡುವ ವೈರಾಗ್ಯದ ಮಾತುಗಳು ಮುಖ್ಯವೆನಿಸುತ್ತದೆ. "ಶ್ರೀರಾಮನಿಗಾದರೋ ಎಂಟು ಸಾವಿರ ಸ್ತ್ರೀಯರಿದ್ದಾರೆ. ಆತನಿಗೇನು ಕೊರತೆ, ಆಗ (ರಾಮನು ತನ್ನನ್ನು ತ್ಯಜಿಸಿದಾಗ) ನಾನು ಗರ್ಭವತಿಯಾಗಿದ್ದುದರಿಂದ ದೀಕ್ಷಾಗ್ರಹಣಕ್ಕೆ ಮಾರ್ಗವಿಲ್ಲದೇ ನಿಂತೆನು ಸ್ತ್ರೀ ಜನ್ಮದಲ್ಲಿ ಎಲ್ಲವನ್ನೂ ಅನುಭವಿಸಿದೆನು"** ಎನ್ನುತ್ತಾಳೆ. ಆಗ ಸೀತೆಯ ಕಷ್ಟಗಳಿಗೆ ಕಾರಣವಾದ ಅವಳ ಹಿಂದಿನ ಭವಾವಳಿಗಳ ಕಥೆಯು ಬಿಚ್ಚಿಕೊಳ್ಳುತ್ತದೆ. ಇವನ ಮೇಲೆ ನಾಗಚಂದ್ರನ ದಟ್ಟ ಪ್ರಭಾವವಿದೆ. ಇವನು ಕುಮಾರವ್ಯಾಸನಿಂದಲೂ ಸ್ಫೂರ್ತಿ ಪಡೆದು ಅವನನ್ನು ಅನುಸರಿಸಿ ಕೆಲವು ಪದ್ಯಗಳನ್ನು ರಚಿಸಿದ್ದಾನೆ.

**ಶಿಶುಮಾಯಣನು** 'ಅಂಜನಾಚರಿತ್ರೆ'ಯನ್ನು ಕನ್ನಡ ದೇಸೀ ಛಂದಸ್ಸಾದ ಸಾಂಗತ್ಯದಲ್ಲಿ ರಚಿಸಿದ್ದು, ಇದರಲ್ಲಿ 15 ಆಶ್ವಾಸಗಳು, 3100 ಪದ್ಯಗಳಿವೆ. ಜೈನನಾದ ಈತ ಅಂಜನಾ ದೇವಿಯ ಹಾಗೂ ಹನುಮಂತನಿಗೆ ಸಂಬಂಧಿಸಿದ ಕಥೆಯನ್ನು ಜೈನ ರಾಮಾಯಣ ಪರಂಪರೆಯಲ್ಲಿ ನಿರೂಪಿಸಿದ್ದಾನೆ. ಸಂಸ್ಕೃತದ ರವಿಶೇಣನ' 'ಪದ್ಮಚರಿತೆ'ಯನ್ನು ತನ್ನ ಕಥೆ ಆಧರಿಸಿರುವುದಾಗಿ ಆತನೇ ಹೇಳಿದ್ದಾನೆ. ಇದರಲ್ಲಿನ **ಅಂಜನಾದೇವಿಯ ಕಥೆಯು ವಿಶಿಷ್ಟವಾಗಿದ್ದು, ಬಲವಂತದಿಂದ ವಿವಾಹವಾಗಿದ್ದರಿಂದ ಪವನನಂದನನು ಅವಳಿಂದ ದೂರ ಉಳಿದು ಯುದ್ಧಕ್ಕೆ ಹೊರಟುಹೋಗುತ್ತಾನೆ. ಅಲ್ಲಿ ಒಮ್ಮೆ ಚಕೋರಪಕ್ಷಿಯ ಅಳಲನ್ನು ಕಂಡು ಹೆಂಡತಿಯ ನೆನಪಾಗಿ ಗಗನಗಾಮಿಯಾಗಿ ಬಂದು ಯಾರಿಗೂ ತಿಳಿಯದಂತೆ ಅವಳೊಡನೆ ಸಮಾಗಮನವನ್ನು ಮಾಡುತ್ತಾನೆ. ಗರ್ಭಧರಿಸಿದ ಅಂಜನೆಯನ್ನು ಅವಳ ಅತ್ತೆ ಮಾವಂದಿರು ನಂಬದೆ ಅವಳನ್ನು ಹೊರಹಾಕುತ್ತಾರೆ. ತಂದೆಯ ಮನೆಯಲ್ಲೂ ತಿರಸ್ಕೃತಳಾದ ಅಂಜಾನಾದೇವಿ ಅಡವಿ ಸೇರಬೇಕಾಗುತ್ತದೆ. ಅಲ್ಲಿ ಗಂಡುಮಗುವನ್ನು ಆಕೆ ಪಡೆಯುತ್ತಾಳೆ.** ಮುಂದೆ ಅವನು ಹನುಮನಾಗಿ ಬೆಳೆಯುವುದು, ರಾವಣನಿಗೆ ಯುದ್ಧದಲ್ಲಿ ಸಹಾಯಮಾಡಿ ಅವನ ತಂಗಿಯ ಮಗಳನ್ನೂ, ಸುಗ್ರೀವನ ಮಗಳನ್ನೂ ಅನೇಕ ಹೆಂಡಿರನ್ನು ವಿವಾಹವಾಗಿ ಸುಖದಿಂದಿದ್ದು ರಾಮನ ಭೇಟಿಯಾಗಿ ಸೀತಾನ್ವೇಷಣೆಯಲ್ಲಿ ಅವನಿಗೆ ಸಹಾಯಮಾಡುತ್ತಾನೆ. ರಾವಣನ

ಸಂಹಾರದ ನಂತರ ತನ್ನ ರಾಜಧಾನಿಯಲ್ಲಿದ್ದ ಹನುಮಂತನು ಒಮ್ಮೆ ಉಲ್ಕಾಪಾತವನ್ನು ಕಂಡು ವೈರಾಗ್ಯಹೊಂದಿ ತಪಸ್ಸುಮಾಡಿ ಮೋಕ್ಷವನ್ನು ಪಡೆಯುತ್ತಾನೆ. **ಈ ಕೃತಿಯು ಅಸಾಧಾರಣವಲ್ಲವಾದರೂ ಇಲ್ಲಿ ಅಂಜನಾದೇವಿಯ ಕಥೆ ಕರುಣರಸವನ್ನು ಉಕ್ಕಿಸುತ್ತದೆ. ಸ್ತ್ರೀಯೊಬ್ಬಳು ಅನುಭವಿಸುವ ನಾನಾಪರಿಯ ಚಾರಿತ್ರ್ಯವಧೆ, ಅಪಮಾನ ಸಂಕಟಗಳನ್ನು ಇಲ್ಲಿ ಅಂಜನಾದೇವಿ ಅನುಭವಿಸುವುದನ್ನು ಕಾಣುತ್ತೇವೆ. ಈ ಕೃತಿಯನ್ನು ಮಹಿಳಾ ನೆಲೆಯಿಂದ ಅಧ್ಯಯನಮಾಡಲು ಅವಕಾಶವಿದೆ.**

**ಬಂಧುವರ್ಮನ 'ಜೀವ ಸಂಬೋಧನೆ'** ಕೃತಿಯು ಒಂದು ಚಂಪೂ ಕಾವ್ಯವಾಗಿದ್ದು, ಇದರಲ್ಲಿ 12 ಅಧಿಕಾರಗಳಿವೆ. 558 ಪದ್ಯಗಳೊಂದಿಗೆ ಗದ್ಯವು ಹೆಚ್ಚಾಗಿ ಬಂದಿದೆ. ಪದ್ಯಗಳ ವಾಖ್ಯಾನಕ್ಕೆ ಇಲ್ಲಿ ಗದ್ಯ ಬಳಸಲಾಗಿದೆ. **ಅನ್ಯತ್ವಾನುಪ್ರೇಕ್ಷೆಯಲ್ಲಿ 'ರಾವಣಚರಿತ್ರಂ' ಎಂಬ ಭಾಗದಲ್ಲಿ ರಾವಣನ ಪರಾಕ್ರಮವನ್ನು, ಅವನ ವಿದ್ಯಾರ್ಜನೆಯನ್ನು, ಅವನ ಸಿದ್ಧಿಸಾಧನೆಗಳನ್ನೂ ದೃಷ್ಟಾಂತವಾಗಿ ನೀಡಲಾಗಿದೆ. ಲಂಕಾಪುರವನ್ನಾಳುಮ ರಾಕ್ಷಸವಂಶದ ಮೊದಲಿಗ ವಿದ್ಯಾಧರ ಚಕ್ರವರ್ತಿಯಾದ ರಾವಣ ಅವನು ನಾನಾ ವಿದ್ಯೆಗಳಲ್ಲಿ ಪಾರಂಗತನಾಗಿದ್ದನು. ಇವನು ವಾಲಿಯಂತಹ ಮಹಾವೀರನನ್ನು ಸೋಲಿಸಿದವನು ಧರಣಿ ಚಕ್ರವನ್ನು ತಿರುಗಿಸಿ ಬಿಟ್ಟಿದ್ದವನು ಅಂತಹವನು ಸೀತಾದೇವಿಯನ್ನು ಅಪಹರಿಸಿದ ಕಾರಣದಿಂದ ರಾಮಸ್ವಾಮಿಯು ಅವನಮೇಲೆ ಯುದ್ಧಕ್ಕೆ ಬಂದನು. ರಾವಣನ ಸೋದರ ಅವನನ್ನು ತೊರೆಯುವಂತಾಯಿತು. ಕೈಲಾಸವನ್ನು ಎತ್ತಿದ್ದ ಬಲಶಾಲಿ ರಾವಣ ತಾನೇಬಿಟ್ಟ ಚಕ್ರರತ್ನಕ್ಕೆ ತಾನೇ ಬಲಿಯಾಗಬೇಕಾಯಿತು. ಹೀಗೆ ಮಹಾ ಶಕ್ತಿವಂತನಾದ ರಾವಣನು ಸತ್ತುದನ್ನು ಭಾವಿಸು ಜೀವ** ಎಂಬ ಬೋಧನೆಯಿದೆ.

**ಚಾವುಂಡರಾಯನು** ಕನ್ನಡ ನಾಡಿನ ಶ್ರೇಷ್ಠ ಕವಿಯೂ ಹಾಗೂ ಕಲಿಯೂ ಆಗಿ 10ನೆಯ ಶತಮಾನದಲ್ಲಿ ಬದುಕಿದ್ದವನು. ಕನ್ನಡ ಗಂಗ ಅರಸರಲ್ಲಿ ಮಂತ್ರಿ ಮತ್ತು ಸೇನಾಪತಿಯೂ ಆಗಿದ್ದನು. ಜೈನ ಧರ್ಮದ ನಿಷ್ಠಾವಂತ ಸೇವಕನಾಗಿ ಬಾಹುಬಲಿಗೊಮ್ಮಟನನ್ನು ಶ್ರವಣಬೆಳಗೊಳದಲ್ಲಿ ಕಡೆಸಿದ್ದಾನೆ. ಕನ್ನಡ ನಾಡಿನ ಸಾಹಿತ್ಯ ಮತ್ತು ಕಲೆಗೆ ಇವನ ಕೊಡುಗೆ ಗಣನೀಯವಾದುದು. ಇವನು ಚಾವುಂಡರಾಯಪುರಾಣ ಎಂದು ಪ್ರಸಿದ್ಧವಾಗಿರುವ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ'ವೆಂಬ ಕೃತಿಯನ್ನು ಬರೆದಿದ್ದಾನೆ. ಈ ಕೃತಿಗೆ ಮೂಲ ಆಕರ ಸಂಸ್ಕೃತದ 'ಮಹಾಪುರಾಣ'. 64 ಶಲಾಕಾಪುರುಷರಲ್ಲಿ ಇಪ್ಪತ್ತನೆಯ ತೀರ್ಥಂಕರನಾದ ಮುನಿಸುವ್ರತನ ಕಾಲದ 8ನೇ ಬಲದೇವ, ವಾಸುದೇವ, ಪ್ರತಿವಾಸುದೇವರಾದ ರಾಮ, ಲಕ್ಷ್ಮಣ ಹಾಗೂ ರಾವಣರ ಕಥೆ ಬರುತ್ತದೆ. ಚಾವುಂಡರಾಯನು ಇದನ್ನು ಕನ್ನಡಕ್ಕೆ ತಂದಿದ್ದಾನೆ. ಇದು ಉತ್ತರ ಪುರಾಣದ ರಾಮಕಥೆಯ ಸಂಕ್ಷಿಪ್ತ ರೂಪವಾಗಿದ್ದು, ಬಲದೇವ ವಾಸುದೇವರ ಹಿಂದಿನ ಮೂರು ಜನ್ಮಗಳ ಕಥೆಯಿಂದ ಆರಂಭವಾಗುತ್ತದೆ. ಅನೇಕ ಒಳ ಕಥೆಗಳಾಗಿ ಜನ್ಮಾಂತರದ ಕಥೆಗಳು ಬಂದು ರಾಮಾಯಣದ ಕಥೆಯ ಜಾಡು ತಪ್ಪುತ್ತದೆ. ಇಲ್ಲಿ ವೇದವತಿಯ ಶಾಪದ ಬದಲಿಗೆ ಮಣಿಮತಿಯ ಶಾಪವಿದೆ. ಸೀತೆಯಾಗಿ ಅವಳು ಹುಟ್ಟುವುದು. ರಾಮನೊಂದಿಗೆ ವಿವಾಹ, ವಾರಣಾಸಿಯಲ್ಲಿ ಅವರು ಬೀಡುಬಿಡುವುದು, ಸೀತಾಪಹರಣ, ಹನುಮ ಸುಗ್ರೀವರ ಭೇಟಿ, ರಾಮರಾವಣರ ಯುದ್ಧ ಎಲ್ಲವೂ ವೇಗವಾಗಿ ಮುಗಿದುಹೋಗುತ್ತದೆ. ಕೊನೆಯಲ್ಲಿ ಜೈನಧಾರ್ಮಿಕತೆಗೆ ಮಹತ್ವನೀಡಿ ಕಥೆ ಬೆಳೆದಿದೆ. ರಾಮ ಸೀತೆ ಎಲ್ಲರೂ ಕೇವಲಿಗಳಾಗುವುದು, ರಾವಣನನ್ನು ಕೊಂದ ಲಕ್ಷ್ಮಣ ನರಕಕ್ಕೆ ಹೋಗುವುದನ್ನು ಹೇಳುತ್ತಾನೆ. ಇಲ್ಲಿ ಪುರಾಣದೃಷ್ಟಿ ಕಥಾ ಸಂಗ್ರಹಣೆಗೆ ಪ್ರಾಧಾನ್ಯತೆಯಿದ್ದು ಕಾವ್ಯ ಗುಣ ಗೌಣವಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ದೊರಕಿರುವ ಕೃತಿಗಳನ್ನು ಗಮನಿಸಿದಾಗ ಗದ್ಯಕೃತಿಯಲ್ಲಿ ಕನ್ನಡಕ್ಕೆ ಜೈನ ರಾಮಾಯಣ ಪರಂಪರೆಯನ್ನು ತಂದ ಶ್ರೇಯಸ್ಸು ಇವನಿಗೆ ಸಲ್ಲುತ್ತದೆ.

ಪುಣ್ಯಾಸ್ರವ ಕೃತಿಯನ್ನು ಗದ್ಯದಲ್ಲಿ ಬರೆದಿರುವ ನಾಗರಾಜ ಕವಿಯು 14ನೇ ಶತಮಾನಕ್ಕೆ ಸೇರುತ್ತಾನೆ. ಈ ಕೃತಿಯಲ್ಲಿ ಪೂಜೆ, ಪಂಚ ನಮಸ್ಕಾರ, ಶ್ರುತೋಪಯೋಗ, ಶೀಲ, ಉಪವಾಸ ಮತ್ತು ದಾನ ಎಂಬ ಆರು ಕರ್ತವ್ಯ ಕರ್ಮಗಳ ಅನುಷ್ಠಾನಗಳಿಂದ ದೊರಕುವ ಫಲಗಳನ್ನು ಹೇಳಿದ್ದಾನೆ. ಅವುಗಳನ್ನು ಅನುಷ್ಠಾನಗೊಳಿಸಿದ ವ್ಯಕ್ತಿಗಳನ್ನು ಕುರಿತು ಹೇಳುತ್ತಾ ಅವನು ರಾಮಾಯಣ ವಸ್ತುವನ್ನು ಒಳಗೊಂಡ ಆರು ಕಥೆಗಳನ್ನು ಮಾತ್ರ ಕೆಲವು ಅಧ್ಯಾಯಗಳಲ್ಲಿ ಹೇಳಿದ್ದಾನೆ. ಸುಗ್ರೀವನ ಕಥೆ, ವಾಲಿಯ ಕಥೆ, ಸೀತೆಯಕಥೆ, ವಜ್ರಕರ್ಣ ಮತ್ತು ಲವಕುಶರ ಕಥೆ ಮತ್ತು ಸೀತೆಯ ಸೋದರನಾದ ಪ್ರಭಾಮಂಡಲನ ಕಥೆಗಳನ್ನು ಹೇಳಿದ್ದಾನೆ.

ಇವನು ಗುಣಭದ್ರರ ಪರಂಪರೆಯನ್ನು ಅನುಸರಿಸಿ ಕೃತಿರಚಿಸಿದ್ದಾನೆ. ಇದಲ್ಲದೆ ಇವನು ತನ್ನ ಕಥೆಗಳಿಗೆ ರವಿಶೇಣನ ಪದ್ಮಚರಿತೆ, ಜಿನಸೇನನ ಹರಿವಂಶ, ಮಹಾಪುರಾಣ, ಹರಿಶೇಣನ ಬೃಹತ್ ಕಥಾಕೋಶಗಳನ್ನು ಆಕರವಾಗಿ ಮಾಡಿಕೊಂಡಿರ ಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಒಂದು ಜೀವಿಯ ಹಲವಾರು ಜನ್ಮಗಳ ಭವಾವಳಿಯನ್ನು ಹೇಳುತ್ತಾನೆ. ನಾಗರಾಜನು ಸಹಜ ಕವಿಯಾಗಿದ್ದು, ಅವನಲ್ಲಿ ಕಾವ್ಯ ಕಟ್ಟುವ ಶಕ್ತಿ ಇದ್ದರೂ ಸಹ ಅವನು ಆರಿಸಿಕೊಂಡ ವಸ್ತುವಿನ ಹರಹಿನಲ್ಲಿ ಅದರ ಅಭಿವ್ಯಕ್ತಿಗೆ ಅಂತಹ ಅವಕಾಶವಾಗಿಲ್ಲ. ಮೂಲವನ್ನು ತಪ್ಪದೇ ಅನುಸರಿಸಿದ್ದು, ಅವನ ಗದ್ಯದ ಆಕರ್ಷಣೆಯಿಂದಾಗಿ ಈಕೃತಿಗೆ ಬೆಲೆಬಂದಿದೆ ಎನ್ನಲಾಗುತ್ತದೆ.

* * *

ವೈದೀಕ ಪರಂಪರೆಯ ರಾಮಾಯಣದಲ್ಲಿ ಶ್ರೀ ಮಹಾಕವಿ ವಾಲ್ಮೀಕಿ ರಾಮಾಯಣ ಪರಂಪರೆ ಮತ್ತು ಪುರಾಣಾಂತರ್ಗತ ರಾಮಾಯಣದ ಕವಲನ್ನು ಗಮನಿಸಬಹುದು. ಪುರಾಣಾಂತರ್ಗತ ಅಧ್ಯಾತ್ಮ, ಆನಂದ, ನಾರದ, ಮನೋಹರ,ವಾಸಿಷ್ಟ ರಾಮಾಯಣಗಳನ್ನು ಕಾಣಬಹುದು ಇವು ಕನ್ನಡ ರಾಮಾಯಣಗಳ ಮೇಲೂ ಪ್ರಭಾವಬೀರಿವೆ. ಇನ್ನು ವಾಲ್ಮೀಕಿಯ ಮಹಾಕಾವ್ಯವು ಇಡೀ ಭಾರತದ ಅನೇಕ ಸ್ಥಳೀಯ ಭಾಷೆಗಳಲ್ಲಿ ರಚಿತವಾಗಿದ್ದು, ಕನ್ನಡದಲ್ಲಿ ಕೇವಲ ಶಿಷ್ಟ ಕಾವ್ಯಗಳಷ್ಟೇ ಅಲ್ಲದೆ, ಯಕ್ಷಗಾನ, ಬೊಂಬೆಯಾಟ, ಬಯಲಾಟ ವೃತ್ತಿರಂಗಭೂಮಿ ಹವ್ಯಾಸೀನಾಟಕಗಳು, ಬೀದಿನಾಟಕಗಳು, ಹರಿಕಥೆ, ಹರಿದಾಸಸಾಹಿತ್ಯ ಎಲ್ಲದರಲ್ಲೂ ಅಭಿವ್ಯಕ್ತಿಗೊಂಡಿದೆ. ತೊರವೆ ನರಹರಿಯ ರಾಮಾಯಣದಿಂದ ಆರಂಭಿಸಿ ಐದು ಶತಮಾನಗಳು ಹಲವು ಪ್ರಕಾರಗಳಲ್ಲಿ ಅಭಿವ್ಯಕ್ತವಾಗಿದ್ದು ಇಪ್ಪತ್ತೊಂದನೆಯ ಶತಮಾನದ ಇತ್ತೀಚಿನ ಆಧುನಿಕ ರಂಗಪ್ರಯೋಗ 'ವಾಲಿವಧೆ' ನಾಟಕದವರೆಗೂ ವಸ್ತುವನ್ನು, ಸ್ಫೂರ್ತಿಯನ್ನೂ ನೀಡಿದೆ. ವೈದೀಕ ಪರಂಪರೆಯಲ್ಲಿ ಮೂಲರಾಮಾಯಣದಲ್ಲಿ ಮುನ್ನೆಲೆಗೆ ಬಾರದ ಉತ್ತರರಾಮಕಥೆಯನ್ನು ಕನ್ನಡ ಕವಿಗಳು ತಮ್ಮ ಕಾವ್ಯ ರಚನೆಗೆ ಹೆಚ್ಚಾಗಿ ವಸ್ತುವಾಗಿ ತೆಗೆದುಕೊಂಡಿದ್ದಾರೆ. ಕನ್ನಡದಲ್ಲಿ ಉತ್ತರ ರಾಮಾಯಣ ಕೃತಿಗಳು ದೊರಕುವಷ್ಟು ಪೂರ್ವರಾಮಾಯಣ ಕೃತಿಗಳು ಲಭ್ಯವಾಗಿಲ್ಲದಿರುವುದನ್ನು ಗಮನಿಸಿದರೆ ಅವುಗಳ ರಚನೆಯೇ ಕಡಿಮೆಯಿದೆ ಎಂದು ಹೇಳಬೇಕಾಗುತ್ತದೆ.

**ತೊರವೆಯ ನರಹರಿ** (15ನೇ ಶತಮಾನ) ಭಾಮಿನಿ ಷಟ್ಪದಿಯಲ್ಲಿ ರಾಮಾಯಣವನ್ನು ಬರೆದಿದ್ದಾನೆ. ಇದರಲ್ಲಿ 6 ಕಾಂಡ 112 ಸಂಧಿಗಳು 5103 ಪದ್ಯಗಳಿವೆ. ದೊರೆತಿರುವ ವೈದೀಕ ಪರಂಪರೆಯ ಕನ್ನಡ ರಾಮಾಯಣಗಳಲ್ಲಿ ಇದು ಮೊದಲ ಕೃತಿಯಾಗಿದೆ. ಇವನು ವಾಲ್ಮೀಕಿ ರಾಮಾಯಣವನ್ನು ಅನುಸರಿಸಿದ್ದರೂ ಜಾನಪದ, ಅದ್ಭುತ, ಆಧ್ಯಾತ್ಮ ರಾಮಾಯಣಗಳ ಕಥೆಗಳ ಪ್ರಭಾವಕ್ಕೆ ಒಳಗಾಗಿದ್ದಾನೆ. ಅಲ್ಲದೆ ಮದ್ವಾಚಾರ್ಯರ ಟೀಕೆ ಮತ್ತು ಜೈನ ಕತೆಗಳೂ ಇವನನ್ನು ಪ್ರಭಾವಿಸಿವೆ. ಕರ್ನಾಟಕದ ಭಕ್ತಿ ಪರಂಪರೆಗೆ ತಕ್ಕಂತೆ ಜೈನ ಕಥೆಗಳಲ್ಲಿ ಕಾಣದ ರಾಮ ಭಕ್ತಿಯ ಸುಧೆಯು ಈ ಕೃತಿಯಲ್ಲಿ ಎದ್ದು ಕಾಣುತ್ತದೆ. "ಮನುಜನಲ್ಲಕಣಾ ರಘು ಕ್ಷಿತಿಜನಪ", "ದೇವರ ದೇವನಲಾ ನೀನು" ಎಂಬುದನ್ನು ಕಾವ್ಯದಲ್ಲಿ ಅವಕಾಶ ಸಿಕ್ಕಲೆಲ್ಲಾ ಹೇಳಿದ್ದಾನೆ. ರಾಮನನ್ನು ವಿಷ್ಣುವಿನ ಅವತಾರವೆಂದು, ಭಗವಂತನೆಂದು ನೋಡುವ ಭಾಗವತ ದೃಷ್ಟಿಯ ಪ್ರಭಾವವನ್ನು ಇಲ್ಲಿ ಗುರುತಿಸಬಹುದು. ನರಹರಿಯನ್ನು ಶ್ರೇಷ್ಠ ಕವಿ ಎಂಬುದಕ್ಕಿಂತಲೂ ಶ್ರೇಷ್ಠ ಭಕ್ತನೆಂದು ಹೇಳುವುದೇ ಸರಿ. ಈ ಭಕ್ತಿರಸದಲ್ಲಿ ಕಾವ್ಯ ಕಲೆ, ಔಚಿತ್ಯ ಪ್ರಜ್ಞೆ ಕೆಲವುಕಡೆ ತಪ್ಪಿರುವುದನ್ನು ಕಾಣಬಹುದಾದರೂ ಅವನ ಕೆಲವು ಹೊಸ ಕಲ್ಪನೆಗಳು ಕಾವ್ಯಕ್ಕೆ ಆಕರ್ಷಣೆ ಹೆಚ್ಚಿಸಿವೆ. ಉದಾಹರಣೆಗೆ ಅತ್ಯಂತ ನಾಟಕೀಯವಾಗಿ ಚಿತ್ರಣಗೊಂಡಿರುವ ತೃಣಬಿಂದು ಮುನಿಯ ಪ್ರಸಂಗವನ್ನು ನೋಡಬಹುದು. ಹನುಮಂತನ ವಿನಯವನ್ನೂ, ಭಕ್ತಿಯಬಲವನ್ನು ಪರೀಕ್ಷಿಸಿ, ಸತ್‌ದಾರಿ, ಸದುದ್ದೇಶಕ್ಕೆ ಸದಾ ಜಯವೆಂಬ ಸಂದೇಶವನ್ನು ನೀಡಿರುವುದನ್ನು ಕಾಣಬಹುದು. ಎಷ್ಟು ಬಟ್ಟೆ ಸುತ್ತಿದರೂ ಹನುಮಂತನ ಬಾಲ ಬೆಳೆಯುತ್ತಿರಲು ಊರವರ ಬಟ್ಟೆಗಳು ಸಾಲದೆ ರಾವಣನ ಕುಮಾರರ ರಾಣಿಯರ ವಸ್ತ್ರವನ್ನೂ ತಂದು ಸುತ್ತಿದ್ದಾಯಿತು, ಎಂದು ತಿಳಿದಮೇಲೆ ರಾವಣ ತನಗೆ ಇಂದ್ರ ಕೊಟ್ಟ ಪಂಚೆ ಮತ್ತು ಪಟ್ಟಾವಳಿ, ಕುಬೇರಕೊಟ್ಟ ಚೀನಿ ರೇಷ್ಮೆ, ಬ್ರಹ್ಮ ಕೊಟ್ಟ ದಿವ್ಯ ವಸ್ತ್ರ, ಯಮ ಕೊಟ್ಟ ನಿಲುವಂಗಿ! ವರುಣ

**ಕೊಟ್ಟ ಕೆಂಪುವಸ್ತ್ರ ಎಲ್ಲವನ್ನು ತೆಗೆದುಕೊಟ್ಟನಂತೆ! ಇದನ್ನು ಗಮನಿಸಿ "ಇವನು ಕಂಡವರನ್ನು ಸುಲಿಯುತ್ತಾನೆ ಈ ಭಂಡತನದವರಾವಲ್ಲ" ಎಂದು ಹನುಮಂತ ಬಾಲಕ್ಕೆ ಬೆಳೆಯದಿರುವಂತೆ ಹೇಳಿದನಂತೆ. ಬಾಲಕ್ಕೆ ಬೆಂಕಿ ಹಚ್ಚಲು ರಾಕ್ಷಸರು ಸುರಿದ ತರಹೇವಾರಿ ಎಣ್ಣೆಗಳ ಒಂದು ದೊಡ್ಡಪಟ್ಟಿ ಕನ್ನಡ ನಾಡಿನಲ್ಲಿ ಉಪಯೋಗಿಸುತ್ತಿದ್ದ ಎಣ್ಣೆಗಳ ಪರಿಚಯಮಾಡಿಕೊಡುತ್ತದೆ. ನರಹರಿಯ ಇಂತಹ ಅನೇಕ ಕಲ್ಪಕತೆಗಳು ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ಸೆಳೆಯುತ್ತವೆ.**

ಈ ಕೃತಿಯಲ್ಲಿ ಬಾಲಕಾಂಡದಿಂದ ಯುದ್ಧಕಾಂಡದವರೆಗಿನ ಕಥೆ ಉಲ್ಲೇಖವಾಗಿದೆ, ಕೊನೆಯಲ್ಲಿ ಉತ್ತರಕಾಂಡದ ಕಥೆಯಿಲ್ಲ. ಆದರೆ ಪ್ರಾರಂಭದಲ್ಲಿ ಎಂಟುವರ್ಷದ ಲವಕುಶರು ತಮ್ಮ ತಂದೆ ಯಾರೆಂದು ಕೇಳಿದ ಸಂದರ್ಭದಲ್ಲಿ ಅವರಿಗೆ ಉತ್ತರವಾಗಿ ವಾಲ್ಮೀಕಿ ಮುನಿಗಳು ಈ ಕಥೆಯನ್ನು ಹೇಳಿದಂತೆ ನಿರೂಪಿಸಿದ್ದಾನೆ. ಮೂರನೆಯ ಸಂಧಿಯಲ್ಲಿ ಸುಮಾರು 141 ಪದ್ಯಗಳು ಉತ್ತರಕಾಂಡದ ವಿಚಾರವನ್ನೇ ಹೇಳುತ್ತವೆ. ಅರಣ್ಯಕಾಂಡದಲ್ಲಿ ಬರುವ ಶಂಬುಕ ವೃತ್ತಾಂತದಲ್ಲಿ ಜೈನ ರಾಮಾಯಣಗಳ ಪ್ರಭಾವವಿದೆ[12] ಇವನ ಮೇಲೆ ತೆಲುಗಿನ ಬಾಸ್ಕರ ಕವಿಯ ಪ್ರಭಾವವನ್ನೂ ಗುರುತಿಸಲಾಗಿದೆ.[13] ಇಲ್ಲಿನ ಶಂಬುಕನು ವೈದಿಕ ರಾಮಾಯಣಗಳಲ್ಲಿ ಹೇಳುವಂತೆ ಶೂದ್ರಮುನಿ ಅಲ್ಲ. ಅಪ್ರಾಪ್ತ ವಯಸ್ಸಿನ ಬಾಲಕನ ಮರಣಕ್ಕೆ ಇವನ ತಪಸ್ಸು ಕಾರಣವಾಗಿ ರಾಮನಿಂದ ಸಂಹರಿಸಲ್ಪಡುವುದಿಲ್ಲ. ಇವನು ಶೂರ್ಪನಖಿಯ ಮಗ, ಆಕಸ್ಮಿಕವಾಗಿ ಲಕ್ಷ್ಮಣ ಕೊಂದದ್ದರಿಂದ ಶೂರ್ಪನಖಿಯ ಸೇಡಿಗೆ ಸಿಕ್ಕಿದ ರಾಮಲಕ್ಷ್ಮಣರು ಕಷ್ಟಕ್ಕೆ ಸಿಕ್ಕಿಕೊಳ್ಳಬೇಕಾಯಿತೆಂದು ಹೇಳಿದ್ದಾನೆ. **ಇವನು ವೈದೀಕ ಕವಿಯಾದರೂ ಅವೈದಿಕ ಧಾರೆಯಲ್ಲಿನ ವಿಚಾರಗಳನ್ನು ಸ್ವೀಕರಿಸಿರುವುದು ವಿಶೇಷವಾಗಿದೆ.**

ರಾಮಾವತಾರದ ಉದ್ದೇಶ ಸಾಧನೆಯ ಹಿನ್ನೆಲೆಯಲ್ಲಿ ಇವನು ಮಂಥರೆಯನ್ನು 'ಪೂರ್ವಮಾಯಾ ತರುಣಿ' ಎಂದು ಕರೆದಿದ್ದಾನೆ.ಇದರ ಪ್ರಭಾವದಿಂದ ಮುಂದೆ ಬಂದ ಬತ್ತಲೇಶ್ವರ ಹಾಗೂ ಕುವೆಂಪುರವರು ಮಂಥರೆಯನ್ನು ವಿಭಿನ್ನವಾಗಿ ಗೌರವಿಸಿ ಅವಳನ್ನು 'ಕಾರಣಪುರುಷಳು', 'ಮಮತೆಯಸುಳಿ' ಯೆಂದು ಚಿತ್ರಿಸಿರುವುದನ್ನು ಕಾಣುತ್ತೇವೆ. ಸೀತೆಯ ಅಪಹರಣ, ರಾವಣವಧೆಗಳನ್ನು ಸಮಂಜಸವಾಗಿ ಚಿತ್ರಿಸಿದ್ದಾನೆ. ನರಹರಿಯು ಕುಮಾರ ವ್ಯಾಸನಿಂದ ಸ್ಫೂರ್ತಿ ಪಡೆದಿದ್ದರೂ ಅವನ ಎತ್ತರಕ್ಕೆ ಏರಲಾಗಿಲ್ಲ. ಇವನನ್ನು ಸಾಧಾರಣಕವಿ ಎಂದು ವಿದ್ವಾಂಸರು ಗುರುತಿಸಿದ್ದರೂ ಅವನ ಕನ್ನಡ ಭಾಷೆಯ ಸೊಗಸನ್ನು ಮೆಚ್ಚಿಕೊಂಡಿದ್ದಾರೆ.[14] ಇವನ ವರ್ಣನೆಗಳಲ್ಲಿ ಅವನ ಕಾಲದ ಆಡುಭಾಷೆಯ ಸೊಗಡನ್ನು, ಅನ್ಯ ಭಾಷೆಯ ಎರವಲು ಪದಗಳನ್ನೂ, ಅವನ ಕಾಲದ ಯುದ್ಧಗಳ, ಕೋಟೆಕಾಳಗಗಳ ವಿವರಣೆಗಳನ್ನು ಕಾಣಬಹುದು.

**ಕನಕದಾಸರ 'ರಾಮಧಾನ್ಯ ಚರಿತೆ'ಯು** ಭಾಮಿನಿ ಷಟ್ಪದಿಯಲ್ಲಿದ್ದು 158 ಪದ್ಯಗಳಿವೆ. ಸಂಕ್ಷಿಪ್ತವಾಗಿ ಮೂಲರಾಮಾಯಣದ ಕಥೆಯು ಮೊದಲಿಗೆ ಬರುತ್ತದೆ. ಇದರಲ್ಲಿ ಬಂದಿರುವ ರಾಮಕಥೆಯಲ್ಲಿ ವಿಶೇಷವೇನೂ ಇಲ್ಲ. ರಾಮಕಥೆಗೆ ಪ್ರಾಮುಖ್ಯತೆಯೂ ಇಲ್ಲ. ರಾವಣವಧೆಯನಂತರ ರಾಮನು ವಿಭೀಷಣ, ಹನುಮಂತ, ಸುಗ್ರೀವ ಇವರ ಪರಿವಾರದೊಂದಿಗೆ ಗೌತಮ ಮುನಿಯ ಆಶ್ರಮದಲ್ಲಿ ತಂಗುತ್ತಾರೆ. ಅಲ್ಲಿ ವಿವಿಧ ಬಗೆಯ ಧಾನ್ಯಗಳಿಂದ ಸವಿರುಚಿಯಾದ ಔತಣವೇರ್ಪಡಿಸಿದ್ದು ವಿವಿಧ ಖಾದ್ಯಗಳ ವಿಶೇಷತೆಯನ್ನು ತಿಳಿಯಲು, ಆ ಧಾನ್ಯಗಳನ್ನು ನೋಡಬೇಕೆಂದು ಹನುಮಂತನು ಬಯಸುತ್ತಾನೆ. ಆ ಎಲ್ಲಾ ನವಧಾನ್ಯಗಳ ಪರಿಚಯದ ಸಂದರ್ಭದಲ್ಲಿ ನರೆದಲಗ ಮತ್ತು ವ್ರೀಹಿಗಳ ನಡುವೆ ವಾಗ್ಯುದ್ಧವೇ ನಡೆದು ಹೋಗುತ್ತದೆ. ರಾಮನು ಅವೆರಡಕ್ಕೂ ಆರು ತಿಂಗಳ ಕಾರಾಗೃಹವನ್ನು ವಿಧಿಸಿ, ಆನಂತರದಲ್ಲಿ ಅಯೋಧ್ಯೆಗೆ ಕರೆಸಿಕೊಂಡು ತೀರ್ಮಾನ ಕೈಗೊಳ್ಳುವುದಾಗಿ ಮಾತುಕೊಟ್ಟು ಹೊರಟು ಹೋಗುತ್ತಾನೆ. ಪಟ್ಟಾಭಿಷೇಕದನಂತರ ಅವೆರಡನ್ನೂ ಕರೆಸಿಕೊಂಡು ಇಂದ್ರಾದಿ ಪ್ರಮುಖರ, ಮುನಿಗಳ ಸಮಕ್ಷಮದಲ್ಲಿ ಸಭೆಯಲ್ಲಿ ಅವುಗಳ ಶ್ರೇಷ್ಠತೆಯ ಪರೀಕ್ಷೆ ನಡೆಯುತ್ತದೆ. ಆರೇಳುತಿಂಗಳ ಸೆರೆವಾಸದಲ್ಲೂ ರೂಪುಗೆಡದೆ ಸದೃಢವಾಗಿದ್ದ ನರೆದಲಗನಿಗೆ ರಾಮನು 'ರಾಘವ'ನೆಂಬ ತನ್ನ ಹೆಸರನ್ನಿತ್ತು ಸನ್ಮಾನಿಸುತ್ತಾನೆ. ಎಲ್ಲರೂ ನರೆದಲಗನನ್ನು ಕೊಂಡಾಡುತ್ತಾರೆ. ಇಲ್ಲಿ ರಾಮನ ನಿಷ್ಪಕ್ಷಪಾತವಾದ ತೀರ್ಮಾನವನ್ನು ಮುನ್ನೆಲೆಗೆ ತಂದಿದ್ದಾರೆ. 15ನೇ ಶತಮಾನದ ಕರ್ನಾಟಕದ ಸಾಮಾಜಿಕ ಜೀವನ, ಅಲ್ಲಿನ ತರತಮದ ಮೇಲೆ ಬೆಳಕು ಚೆಲ್ಲುವ ಈಕೃತಿ ರೂಪಕಾತ್ಮಕವಾಗಿ

ಉಳ್ಳವರ ಮತ್ತು ಇಲ್ಲದವರ ಸಂಘರ್ಷವನ್ನು ಧ್ವನಿಸುತ್ತದೆ. ಅಲ್ಲದೆ ಸ್ವಸ್ಥ ಸಮಾಜಕ್ಕೆ ತರತಮವಿಲ್ಲದೆ ಹೊಂದಿ ಸಹಬಾಳ್ವೆಯಲ್ಲಿ ನಡೆಯಬೇಕೆಂಬ ಸಂದೇಶವನ್ನು ರಾಮನಿಂದ ಕೊಡಿಸಿದ್ದಾರೆ. ಬೇಧಭಾವವಿಲ್ಲದೇ ಸತ್ವವನ್ನು ಪ್ರಭುತ್ವವು ಗುರುತಿಸಿ ಅವಕಾಶವನ್ನು, ಮಾನಸಮ್ಮಾನವನ್ನು ರಾಮನಂತೆ ನೀಡಬೇಕೆಂಬುದು ಕನಕರ ಆಶಯವಾಗಿದೆ.

ಕನಕದಾಸರಂತೆ ಪ್ರತ್ಯೇಕವಾಗಿ ಕೃತಿರಚನೆ ಮಾಡದಿದ್ದರೂ ಇತರ ಹರಿದಾಸರು ರಾಮ ಕೃಷ್ಣರ ಕಥೆಗಳ ಅನೇಕ ಪ್ರಸಂಗಗಳನ್ನು ತಮ್ಮ ಕೀರ್ತನೆಗಳಲ್ಲಿ ಉಲ್ಲೇಖಿಸಿದ್ದಾರೆ. ಪುರಂದರದಾಸರು ಸಂಕ್ಷಿಪ್ತ ರಾಮಾಯಣವೆಂಬ ಪದ್ಯಕಾವ್ಯವನ್ನೇ ರಚಿಸಿದ್ದಾರೆ.[15] ಇದು ಕೀರ್ತನೆಯ ಸ್ವರೂಪಕ್ಕಿಂತ ಭಿನ್ನವಾಗಿದ್ದು, ಚೌಪದಿಯಲ್ಲಿ ರಚಿತವಾಗಿದೆ. ಗಣೇಶ, ಲಕ್ಷ್ಮಿ, ಪಾರ್ವತಿಯರ ಪ್ರಾರ್ಥನೆಯೊಂದಿಗೆ ಆರಂಭವಾಗಿ ಉತ್ತರಕಾಂಡವನ್ನು ಹೊರತುಪಡಿಸಿ ಪೂರ್ವರಾಮಾಯಣವನ್ನು ಹೇಳಿದ್ದಾರೆ. ಪ್ರತಿ ಪಾದಾಂತ್ಯದಲ್ಲಿ 'ರಾಮಾ'ಎಂಬುದು ಬಂದಿದೆ. ಸುವಾಸಿನಿಯರ ಬಾಯಲ್ಲಿ ಇಂದಿಗೂ ನಿತ್ಯ ಪಾರಾಯಣಗೊಳ್ಳತ್ತದೆ. ವಿಜಯದಾಸರು, ಶ್ರೀಪಾದರಾಯರು, ವಾದಿರಾಜರು, ಪ್ರಸನ್ನವೆಂಕಟದಾಸರೆಲ್ಲರೂ ರಾಮಾಯಣದ ಪಾತ್ರಗಳ, ಅನೇಕ ಪ್ರಸಂಗಗಳನ್ನು ಕೀರ್ತನೆಗಳಲ್ಲಿ ಉಲ್ಲೇಖಿಸಿದ್ದಾರೆ.

**ಬತ್ತಲೇಶ್ವರ ಕವಿಯ** 'ಕೌಶಿಕರಾಮಾಯಣ' ತೊರವೆ ನರಹರಿಯ ರಾಮಾಯಣದಂತೆಯೇ ಕನ್ನಡಿಗರಿಂದ ನಿತ್ಯಪಾರಾಯಣವಾಗುತ್ತಿದ್ದ ಕಾವ್ಯ. ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗಗಳಲ್ಲಿ ಹೆಚ್ಚು ಜನಪ್ರಿಯವಾಗಿದ್ದು ಇದನ್ನು ಶಿವರಾಮಕಾರಂತರು ಸಂಗ್ರಹಿಸಿ ಪ್ರಕಟಿಸಿದರು. ಇದು 44 ಸಂಧಿಗಳ ಭಾಮಿನೀ ಷಟ್ಪದಿಯ ಬೃಹತ್ ಕಾವ್ಯ. 'ಯಾಣದವರಕವಿ' ಎಂದು, ತನ್ನ ಕಥಾದೃಷ್ಟಿ ಆಧ್ಯಾತ್ಮಪರವೆಂದು ಹೇಳಿಕೊಂಡಿದ್ದಾನೆ.ಪುರಾಣದಲ್ಲಿ ವಾಸಿಷ್ಟ್ಯರಾಮಾಯಣವಿರುವುದರ ಸ್ಫೂರ್ತಿಯಿಂದ ಹಾಗೂ ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ತಮ್ಮೊಂದಿಗೆ ಕರೆದೊಯ್ದು ಲೋಕಕಲ್ಯಾಣಕ್ಕೆ ಪ್ರೇರೇಪಿಸಿದುದರ ಹಿನ್ನೆಲೆಯಲ್ಲಿ ಈ ಕಾವ್ಯಕ್ಕೆ 'ಕೌಶಿಕ ರಾಮಾಯಣ'ವೆಂಬ ಹೆಸರಾಗಿರಬೇಕೆಂದು ಕಾರಂತರು ಊಹಿಸಿದ್ದಾರೆ. ಇದರಲ್ಲಿ ಮೂಲರಾಮಾಯಣದ ಬಾಲಕಾಂಡದಿಂದ ಯುದ್ಧಕಾಂಡದವರೆಗಿನ ಭಾಗಗಳು ಮಾತ್ರವಿದೆ. ಇವನ ಕೃತಿಯಲ್ಲಿ ಜನಜನಿತವಾದ ಹಲವು ಪ್ರಸಂಗಗಳು ಕಂಡುಬರುತ್ತವೆ. ಉತ್ತರ ರಾಮಾಯಣದಲ್ಲಿ ಈತನಿಗೆ ಆಸಕ್ತಿಯಿಲ್ಲ ಆಧ್ಯಾತ್ಮ ರಾಮಾಯಣ, ಅದ್ಭುತ ರಾಮಾಯಣಗಳ ಮತ್ತು ಜೈನ ಕಥೆಯ ಪ್ರಭಾವಕ್ಕೆ ಒಳಗಾಗಿದ್ದಾನೆ. ತಾನು ತನ್ನ ರಾಮಾಯಣವನ್ನು ಕುರಿತು **“ಇದು ಮನೋಭಿಪ್ರಾಯ ಸಾಧಕವಿದು ಪರೇಹ ಸುಖ ಪ್ರದಾಯಕವಿದು ಸುಖಾಬ್ದಿಗೆ ಮೂಲ ಸಾಧನವಿದು ಸುಖಪ್ರದವು ಇದು ಸಕಲ ಪೌರಾಣವೇದದ ಹೃದಯ ಮುನಿವಾಲ್ಮೀಕಿ ವರ್ಣಿತಯಿದರ ಮಹಿಮೆಯ ಬಲ್ಲನೀಶ್ವರನುಳಿದ ಮಾತೇನು”** ಎಂಬುದು ಅವನ ನಿಲುವು. ಅವಕಾಶದೊರೆತಾಗಲೆಲ್ಲಾ ಇವನೂ ರಾಮ ಮಹಿಮೆಯನ್ನು ಕೊಂಡಾಡಲು ತೊಡಗುತ್ತಾನೆ. **“ರಾಮನು ಹರಿಕಣಾ ಭೂಭಾರದ ಸಂಹರಿಕಣಾ” ಎಂಬಂತಹ ಹೇಳಿಕೆಗಳಲ್ಲಿ ರಾಮನ ದೈವತ್ವವನ್ನು ಮತ್ತೆ ಮತ್ತೆ ನೆನಪಿಸುತ್ತಾನೆ. ಕುಮಾರವ್ಯಾಸನ ಕಾವ್ಯ ಶೈಲಿಯ ದಟ್ಟ ಪ್ರಭಾವವನ್ನು ಇವನ ಕಾವ್ಯದಲ್ಲಿ ಗುರುತಿಸಬಹುದು. ಸೀತಾ ಸ್ವಯಂವರದ ಸಂದರ್ಭದಲ್ಲಿ ಉಪಸ್ಥಿತನಿದ್ದ ರಾವಣನು ತಲೆಬಾಗದೆ ಕುಳಿತಿದ್ದಾಗ ಬಿಲ್ಲೆತ್ತಲು ಹೋಗುವಾಗ ರಾಮನು ಸನಿಹದ ಮಣಿಪೀಠದ ನೆಲವನ್ನು ತನ್ನ ಕಾಲಿನಿಂದ ಒತ್ತಿ ಅವನು ಎರಗುವಂತೆ ಮಾಡಿಕೊಂಡನೆಂದು ಹೇಳಿದ್ದಾನೆ.** ಇದು ಕುಮಾರವ್ಯಾಸನ ಉದ್ಯೋಗ ಪರ್ವದ ಕೃಷ್ಣ ಸಂಧಾನದ ಧುರ್ಯೋಧನ ಗರ್ವಭಂಗ ಪ್ರಸಂಗದ ಪ್ರೇರಣೆ ಎಂಬುದು ಸ್ಪಷ್ಟವಾಗುತ್ತದೆ. ಇವನ ಕಾವ್ಯ ವರ್ಣನೆಯಲ್ಲಿ ನರಹರಿಯಂತೆಯೇ ಸಮಕಾಲೀನ ಸಮಾಜದ ಜನ ಅವರ ಸ್ವಭಾವ ನಡವಳಿಕೆ ಹಾಗೂ ಅವರ ಊಟೋಪಚಾರ ತಿಂಡಿತೀರ್ಥ, ವ್ಯಾಪಾರ-ವ್ಯವಹಾರ ಇತ್ಯಾದಿಗಳನ್ನು ಸೊಗಸಾಗಿ ವರ್ಣಿಸಿದ್ದಾನೆ. ಇದರಲ್ಲಿನ ಶಂಬುಕನ ಕಥೆಯು ಜೈನ ಪುರಾಣವನ್ನು ಅನುಸರಿಸಿದೆ.

ಕೊನೆಕೊನೆಗೆ ಹಿರಣ್ಯಕಶಿಪುವನ್ನು ನರಹರಿಯು ಸೀಳಿದಂತೆ ರಾಮನು ತನ್ನನ್ನು ಈ ಜನ್ಮದಲ್ಲಿ ಕೊಲ್ಲುತ್ತಾನೆಂದು ಇವನ ರಾವಣನಿಗೆ ತಿಳಿದುಬಿಡುತ್ತದೆ. ರಾಮನನ್ನು ಕೆಣಕಬೇಕಾದರೆ ಅವನ ಹೆಂಡತಿಯನ್ನು ಅಪಹರಿಸಬೇಕೆಂದು ತರ್ಕಿಸುತ್ತಾನೆ. ಅದಕ್ಕಾಗಿ ಮಂಡೆಬೋಳಿನ, ಕರಕಮಂಡಲ, ದಂಡ, ಧೋತ್ರದ ಕಾಸೆವೇಷದ ಲಂಡ ಸನ್ಯಾಸಿಯ ವೇಷದಲ್ಲಿ ಬಂದು ರಾವಣ ಗೆರೆ ದಾಟಿ ಬಂದ ಸೀತೆಯನ್ನು

ಅಪಹರಿಸುತ್ತಾನೆ. ಅಹಲ್ಯೆಯ ಶಾಪದ ಕಥೆಯನ್ನು ವಾಲ್ಮೀಕಿ ರಾಮಾಯಣದಂತೆಯೇ ಮೊದಲಿಗೆ ಹೇಳಿದ್ದರೂ ಮತ್ತೆ ಗೌತುಮರ ಮಗಳಾದ ಹನುಮಂತನ ತಾಯಿ ಅಂಜನಾದೇವಿ ಬಾಯಲ್ಲಿ ಮತ್ತೊಂದು ಕಥೆಯನ್ನು ಹೇಳಿಸಿದ್ದಾನೆ. ಅಹಲ್ಯೆಯು ಇಂದ್ರನ ಸಹವಾಸಮಾಡಿ ವಾಲಿ ಎಂಬ ಮಗನನ್ನೂ ಸೂರ್ಯನ ಸಹವಾಸಮಾಡಿ ಸುಗ್ರೀವನೆಂಬ ಮಗನನ್ನೂ ಪಡೆದಳು ಎಂಬ ವಿಚಾರವನ್ನು ಪ್ರಸ್ತಾಪಿಸಿದ್ದಾನೆ. ಇವೆಲ್ಲವೂ ಆಧ್ಯಾತ್ಮ ರಾಮಾಯಣದ ಪ್ರಭಾವದಿಂದ ಬತ್ತಲೇಶ್ವರನು ಮಾಡಿಕೊಂಡಿರುವ ಮಾರ್ಪಾಟುಗಳಾಗಿವೆ. ಆದರೆ ಇದು ತೆಲುಗಿನ 'ದಶಾನನ ವಿಲಾಪ'ದ ಪ್ರಭಾವವೆಂದೂ, ತೆಲುಗಿನ ಬಾಸ್ಕರ ಕವಿಯನ್ನು ನರಹರಿಯು ಅನುವಾದಿಸಿದ್ದಾನೆಂದು ಹೇಳುವುದು ತಾಲನಿಕ ಅಧ್ಯಯನದ ಕೊರತೆಯ ದ್ಯೋತಕವೆಂದು ಪ್ರಭಾವತಿಯವರು ಅಭಿಪ್ರಾಯಿಸುತ್ತಾರೆ.[16] ಈ ಕಾವ್ಯದಲ್ಲಿ ರಾಮನು ವಾಲಿಯ ವಧೆಮಾಡಲು ಕಾರಣವಾದ ವಿಚಾರವನ್ನು ಹೊಸದಾಗಿ ಹೇಳಿದೆ. ವಾಲಿ ರಾವಣನನ್ನು ಕಂಕುಳಲ್ಲಿಟ್ಟು ಸಮುದ್ರದಲ್ಲಿ ಮುಳುಗಿಸಿ ತಂದು ಮಗನ ತೊಟ್ಟಿಲ ಕಾಲಿಗೆ ಕಟ್ಟಿದ್ದನೆಂದೂ ರಾವಣ ಜೀವ ಭಿಕ್ಷೆ ಬೇಡಿದಾಗ ಕನಿಕರಿಸಿ ಬಿಟ್ಟನೆಂದೂ, ಅಪೇಕ್ಷಿಸಿದಾಗ ಸಹಾಯ ನೀಡುವೆನೆಂದು ಹೇಳಿರುವುದರಿಂದ ರಾವಣನನ್ನು ಗೆಲ್ಲಲು ಪರಾಕ್ರಮಿಯಾದ ವಾಲಿಯ ಹತ್ಯೆಯು ಅವಶ್ಯಕವೆಂಬುದನ್ನು ತಿಳಿದು, ಹನುಮಂತನ ಮಾತಿನಂತೆ ರಾಮ ವಾಲಿಯ ವಧೆ ಮಾಡಲು ಪ್ರತಿಜ್ಞೆ ಮಾಡುತ್ತಾನೆ ಎಂಬ ಕಥೆಯಿದೆ. ರಾಮ ಏಳು ತಾಳೆ ಮರ ಕತ್ತರಿಸಿ ಶಕ್ತಿ ಪ್ರದರ್ಶಿಸುವ ಪ್ರಸಂಗವನ್ನು ಇವನು ಜಾನಪದ ರಾಮಾಯಣದಂತೆ ರೂಪಿಸಿದ್ದಾನೆ. ವಾನರರನ್ನು ಕನ್ನಡಿಗರು ಎಂದು ಭಾವಿಸುವ ಇವನು ಹೆಮ್ಮೆಯಿಂದ ಕಥೆಯನ್ನು ಕಟ್ಟಿದ್ದಾನೆ. ಹನುಮಂತನ ಜನ್ಮವೃತ್ತಾಂತವು ಈ ಕವಿಯನ್ನು ಸೆಳೆದಿದೆ. **ಇದರಲ್ಲಿ ಹನುಮನ ಜನನ, ಸೂರ್ಯನನ್ನು ಹಣ್ಣೆಂದು ಭ್ರಮಿಸಿ ಪೆಟ್ಟುತಿನ್ನುವುದು, ಹನುಮನೆಂಬ ಹೆಸರು ಪ್ರಾಪ್ತವಾದ ಪ್ರಸಂಗಗಳನ್ನು ಆಸ್ತೆಯಿಂದ ವರ್ಣಿಸಿದ್ದಾನೆ. ಒಟ್ಟಿನಲ್ಲಿ ಇವನಿಗೆ ತನ್ನ ಕಾವ್ಯವನ್ನು ಆಕರ್ಷಕ ಮಾಡಬೇಕೆಂಬ ಉತ್ಸಾಹವಿದೆಯೇ ಹೊರತು ಅದರ ಕಾವ್ಯಾತ್ಮಕತೆಯ ಕಡೆಗೆ ಹೆಚ್ಚಿನ ಗಮನವಿಲ್ಲ.**

**ಲಕ್ಷ್ಮೀಶ** 'ಕವಿಚೂತವನಚೈತ್ರ'ನೆಂಬ ಬಿರುದನ್ನು ಪಡೆದಿದ್ದ ನಡುಗನ್ನಡದ ಉದ್ದಾಮ ಕವಿಯು ತನ್ನ ಭಾಮಿನಿ ಷಟ್ಪದಿಯ ಜೈಮಿನಿಭಾರತ ಕೃತಿಯಲ್ಲಿ ಉತ್ತರ ರಾಮಾಯಣದ ಸೀತಾಪರಿತ್ಯಾಗ, ಲವಕುಶ ಜನನ, ರಾಮನ ಅಶ್ವಮೇಧಯಾಗ ಮತ್ತು ಲವಕುಶರ ಕಾಳಗ, ರಾಮ–ಸೀತೆಯರ ಪುನರ್ಮಿಲನದ ಪ್ರಸಂಗಗಳನ್ನು ಅರ್ಜುನ ಬಭ್ರುವಾಹನ ಕಾಳಗಕ್ಕೆ ದೃಷ್ಟಾಂತವಾಗಿ ತಂದಿದ್ದಾನೆ. ಆ ಭಾಗಗಳು ವಿಮರ್ಶಕರಿಂದ ಬಹಳವಾಗಿ ಪ್ರಶಂಸೆಯನ್ನು ಪಡೆದಿವೆ. ಕರುಣರಸ ಪೂರಿತವಾಗಿರುವ ಸೀತಾ ಪರಿತ್ಯಾಗವು ಕನ್ನಡ ಜನಮಾನಸವನ್ನು ಸೂರೆಗೊಂಡಿದೆ.ಇಲ್ಲಿ ಸೀತೆ ರಾಮ, ಲಕ್ಷ್ಮಣರ ಪಾತ್ರ ಚಿತ್ರಣಗಳು ಜೀವಂತವಾಗಿ ಮೂಡಿಬಂದಿವೆ. ಇಡೀ ಜೈಮಿನಿ ಭಾರತದಲ್ಲೇ ಈ ಆಖ್ಯಾನವು ರಸದ ಘಟ್ಟಿಯಾಗಿದೆ. ಲಕ್ಷ್ಮೀಶನ ಭಾಷಾ ಶೈಲಿಯಲ್ಲಿ ಸ್ವಂತಿಕೆಯಿದೆ. ಅವನ ಉಪಮೆಗಳು ಕಾವ್ಯದ ಜೀವಾಳವಾಗಿರುವುದರಿಂದಲೇ ಅವನು 'ಉಪಮಾಲೋಲ'ನೆಂದು ಪ್ರಸಿದ್ಧನಾಗಿದ್ದಾನೆ. ಕಥೆ ಪಾಂಡವರ ಅಶ್ವಮೇಧವಾದರೂ ಅದರಲ್ಲಿ ಉತ್ತರ ರಾಮಾಯಣದ ಈ ಕಿರು ಆಖ್ಯಾನವನ್ನು ತಂದಿದ್ದರೂ, ಇಲ್ಲಿನ ಉತ್ತಮ ಕವಿತ್ವಗುಣ, ಸಾಮರ್ಥ್ಯದಿಂದಾಗಿ ಸ್ವತಂತ್ರವಾದ ರಾಮ ಕಥೆಗಳನ್ನು ಬರೆದ ಇತರ ಕವಿಗಳಿಗಿಂತ ಲಕ್ಷ್ಮೀಶನು ಪ್ರಸಿದ್ಧನಾಗಿದ್ದಾನೆ.

ಉತ್ತರ ರಾಮ ಕಥೆಗೆ ಪ್ರಾಧಾನ್ಯವಿತ್ತಿರುವ ಕನ್ನಡ ಕೃತಿಗಳು ಹದಿನೇಳನೇ ಶತಮಾನದಿಂದ ಹೆಚ್ಚಾಗಿ ಆರಂಭವಾಗುತ್ತವೆ. **ನಾರಾಯಣ ಕವಿಯು (ಕ್ರಿ.ಶ. 1530)**ಬರೆದಿರುವ ಭಾಮಿನಿ ಷಟ್ಪದಿಯ 44 ಸಂಧಿಗಳ 2034 ಪದ್ಯಗಳ ಸುದೀರ್ಘ ಕಾವ್ಯ 'ಉತ್ತರ ರಾಮಕಥೆ'ಯು ವೈದೀಕ ಪರಂಪರೆಯ ಕನ್ನಡ ಉತ್ತರ ರಾಮ ಕಥೆಗಳಲ್ಲಿ ಮೊದಲನೆಯದು. ವಾಲ್ಮೀಕಿ ರಾಮಾಯಣದ ಉತ್ತರಕಾಂಡದ ಅನುಕರಣೆಯಿದ್ದರೂ ಕೊನೆಯ ಘಟ್ಟದಲ್ಲಿ ಪದ್ಮಪುರಾಣವನ್ನು ಆಕರವಾಗಿ ಇಟ್ಟುಕೊಂಡಿರುವುದನ್ನು ಗಮನಿಸಬಹುದು. ಇದರಲ್ಲಿ ಪರಿನಿರ್ವಾಣದ ಕಥೆಯಿಲ್ಲ. ಇವನ ವರ್ಣನೆಗಳಲ್ಲಿ ಪ್ರೌಢಿಮೆ ಸಾಹಿತ್ಯಿಕ ಗುಣ, ಸನ್ನಿವೇಶ ನಿರ್ಮಾಣಗಳಲ್ಲಿ ಸ್ವಾರಸ್ಯವಿದೆ. ಇವನ ಮೇಲೆ ಕುಮಾರವ್ಯಾಸನ ಶೈಲಿಯ ಪ್ರಭಾವವಿದೆ. **ನಾರಾಯಣನ ನಂತರ ಬಂದ ತಿರುಮಲೆ ವೈದ್ಯ, ನರಸ ಕವಿ,**

**ಯೋಗೀಂದ್ರ ಮುಂತಾದ ಕವಿಗಳು ಉತ್ತರ ರಾಮಾಯಣದ ಕಥೆಯನ್ನು ಹೊಂದಿರುವ ಕೃತಿಗಳನ್ನು ರಚಿಸಿದ್ದಾರೆ.**

**ತಿರುಮಲೆ ವೈದ್ಯ**ನೆಂಬ ಕವಿ 'ಉತ್ತರರಾಮಾಯಣಂ' ಎಂಬ ಭಾಮಿನಿ ಷಟ್ಪದಿಯನ್ನು ಬರೆದಿದ್ದಾನೆ. 20 ಸಂಧಿಗಳ 1021 ಪದ್ಯಗಳಲ್ಲಿ ವಾಲ್ಮೀಕಿ ಸಂಪ್ರದಾಯದಲ್ಲಿ ಕಥೆ ಹೇಳಿದ್ದಾನೆ. ಸಂಗ್ರಹರೂಪದಲ್ಲಿ ಉತ್ತರ ರಾಮಾಯಣವನ್ನು ಪೂರ್ತಿಯಾಗಿ ಹೇಳಿದ್ದಾನೆ. ಮುಖ್ಯಕಥೆಗೆ ಪೂರಕವಾದ ಉಪಾಖ್ಯಾನಗಳನ್ನು ಮಾತ್ರ ಸಂಗ್ರಹಿಸಿ ಉಳಿದ ಅನೇಕ ಉಪಾಖ್ಯಾನಗಳನ್ನು ಬಿಡುವ ಮೂಲಕ ಔಚಿತ್ಯಪ್ರಜ್ಞೆಯನ್ನು ಮೆರೆದಿದ್ದಾನೆ. ಹಿತವಾಗಿ ಎಷ್ಟುಬೇಕೋ ಅಷ್ಟನ್ನು ಅಚ್ಚುಕಟ್ಟಾಗಿ ಹೇಳಿರುವುದು ಈ ಕೃತಿಯ ವಿಶೇಷ.

**ನರಸ ಕವಿಯು** (ಕ್ರಿ.ಶ. 1612) 'ಉತ್ತರ ರಾಮ ಕಥಾ' ಎಂಬ ಹೆಸರಿನ ಭಾಮಿನೀ ಷಟ್ಪದಿಯ 56 ಸಂಧಿಗಳ 2675 ಪದ್ಯಗಳನ್ನು ಹೊಂದಿರುವ **ಈ ಕಾವ್ಯವು ಕನ್ನಡದಲ್ಲಿ ದೊರಕಿರುವ ಉತ್ತರ ರಾಮಾಯಣ ಕಾವ್ಯಗಳಲ್ಲೆಲ್ಲಾ ದೊಡ್ಡದು. ಸಾಹಿತ್ಯಕ ಮೌಲ್ಯದಲ್ಲಿ ಇದು ಸಾಧಾರಣವಾದ ಕೃತಿ,** ಇದರಲ್ಲಿ ಮೈರಾವಣಕಾಳಗವನ್ನೂ ಸೇರಿಸಿ ಹೆಚ್ಚಾದ ಅತಿಮಾನುಷ ವರ್ಣನೆಗಳನ್ನು ತಂದಿದ್ದಾನೆ. ಅಧಿಕವಾದ ವಿವರಣೆ, ಆಕರ್ಷಣೆಯಿಲ್ಲದ ವಾಚ್ಯವಾದ ದೀರ್ಘವರ್ಣನೆಗಳು ತುಂಬಿವೆ. ಇದಲ್ಲಿ ಕಂಡುಬರುವ ವಿಶೇಷವೆಂದರೆ ಇದರ ನಾಟಕೀಯ ಶೈಲಿ.

**ಯೋಗೀಂದ್ರ**ನೆಂಬ ಕವಿ 'ಉತ್ತರ ರಾಮಾಯಣ' ಎಂಬ ಹೆಸರಿನಲ್ಲಿ ಕುಸುಮ ಷಟ್ಪದಿಯ ಕಾವ್ಯವನ್ನು ರಚಿಸಿದ್ದಾನೆ. ಇವನು ಕಾವ್ಯದಲ್ಲಿ ಸಿಂಹಾವಲೋಕನ ಕ್ರಮದಿಂದ ಪೂರ್ವರಾಮಾಯಣದ ಅನೇಕ ಘಟನೆಗಳನ್ನು ಮೆಲುಕು ಹಾಕಿದ್ದಾನೆ. ಕಾವ್ಯವನ್ನು ಎರಡು ಭಾಗವಾಗಿ ಮಾಡಿಕೊಂಡಿದ್ದಾನೆ. ಮೊದಲನೆಯ ಭಾಗವು ಆಕರ್ಷಕವಾಗಿದ್ದಷ್ಟು ಔಚಿತ್ಯ ಪೂರ್ಣವಾಗಿದ್ದಷ್ಟು ಎರಡನೆಯ ಭಾಗದಲ್ಲಿಲ್ಲ. ಇದರಲ್ಲಿನ ಕಥಾ ಸೂತ್ರದಲ್ಲಿ ಬಿಗಿಯಾದ ಹೆಣಿಗೆಯಿಲ್ಲ.

**ಸೋಸಲೆ ಅಯ್ಯಾಶಾಸ್ತ್ರಿಗಳು** 34 ಸಂಧಿಗಳ 1340 ಪದ್ಯಗಳುಳ್ಳ 'ಶೇಷ ರಾಮಾಯಣಂ' ಎಂಬ ಹೆಸರಿನಲ್ಲಿ ಪದ್ಮಪುರಾಣವನ್ನು ಆಧರಿಸಿ ವಾರ್ಧಕ ಷಟ್ಪದಿಯಲ್ಲಿ ಉತ್ತರ ರಾಮಕಥೆಯನ್ನು ವಿಸ್ತಾರವಾಗಿ ರಚಿಸಿದ್ದಾರೆ. 1927ರಲ್ಲಿ ಪ್ರಕಟವಾಗಿದೆ. ಇವರು ನಾಲ್ವಡಿ ಕೃಷ್ಣರಾಜವಡೆಯರಿಗೆ ಉಪಾಧ್ಯಾಯರಾಗಿದ್ದರು. 'ಮಹಾವಿದ್ವಾನ್' ಹಾಗೂ 'ಕವಿತಿಲಕ' ಎಂಬ ಬಿರುದನ್ನು ಪಡೆದಿದ್ದರು. **ಆಸ್ಥಾನ ವಿದ್ವಾನ್ ಆಗಿದ್ದ ಶಾಸ್ತ್ರಿಗಳು ಪೀಠಿಕಾಸಂಧಿಯಲ್ಲಿ ಮುಮ್ಮಡಿ ಕೃಷ್ಣರಾಜವಡೆಯರಿಂದ ಪ್ರಾರಂಭಿಸಿ ರಾಜಮನೆತನದ ಚರಿತ್ರೆಯನ್ನು ಹೇಳಿದ್ದಾರೆ. ಉತ್ತರರಾಮಾಯಣ ಕಥೆಯನ್ನು ಸುಲಭವಾಗಿ ತಿಳಿಯುವಂತೆ ಸ್ತ್ರೀಯರಿಗೂ ಪಠಣ ಯೋಗ್ಯ ವಾಗಿರಬೇಕೆಂಬ ಉದ್ದೇಶದಿಂದ ರಚಿಸಿರುವುದಾಗಿ ಹೇಳಿದ್ದಾರೆ. ಇದರಲ್ಲಿ ಅಷ್ಟಾದಶ ವರ್ಣನೆ, ನವರಸಗಳ ವರ್ಣನೆ, ಋತುವರ್ಣನೆ, ಸೂರ್ಯೋಪಾಸನೆ, ಇತ್ಯಾದಿ ವರ್ಣನೆಗಳನ್ನು ಮಾಡಿದ್ದಾರೆ. ಇದರಲ್ಲಿ ರುಕ್ಮಾಂಗದ, ಸುರಥ, ಉಪಮನ್ಯು, ದವಳಶ್ವನ ಮುಂತಾದ ಭಕ್ತ ಕಥೆಗಳು ತುಂಬಿಹೋಗಿವೆ.** ರಾಮ ಸೀತೆಯರ ಸಮಾಗಮದೊಂದಿಗೆ ಈ ಕಥೆಯನ್ನು ಸುಖಾಂತವಾಗಿ ಮಾಡಿದ್ದಾರೆ.

ಸೀತಾಪರಿತ್ಯಾಗದ ಪ್ರಸಂಗದಲ್ಲಿ, ಸೀತೆಯು ಲಕ್ಷ್ಮಣನಿಂದ ರಾಮನ ನಿರ್ಧಾರವನ್ನು ಹೇಳಿದಾಗ **"ಬರಸಿಡಿಲ್ತಾಗೆ ಭೂಮಿಗೆ ಬಿದ್ದ ಪುರದ ಗೋಪುರದ ಚೆಲ್ವಾಂತ ಪೊಂಬುತ್ತಳಿಯೋ ಕಾಡಾನೆ ಕರದಿಂದೆ ಕಿತ್ತಿಟ್ಟ ಪದ್ಮಲತೆಯೋ, ಸುರಪ ಶಾಪದಿಂ ಸ್ವರ್ಗದಿಂದೆ ಧರೆಗೆ ಕೆಡೆದಿರ್ದ ಅಮರ ಸುಂದರಿಯೋ ......ಎಂಬಂತೆ ಕೆಳಗೆ ಬಿದ್ದಳ್"** ಎಂಬ ವರ್ಣನೆ ಚೆನ್ನಾಗಿದೆ. ಇವರು ನಾಟಕ ಕ್ಷೇತ್ರದಲ್ಲೂ ಕೆಲಸಮಾಡಿದ್ದು, ಸಂಪೂರ್ಣರಾಮಾಯಣ ಕಥೆಯನ್ನು 'ಶ್ರೀರಾಮಾಯಣ ನಾಟಕಂ' (1904)ಎಂಬ ಹೆಸರಿನಲ್ಲಿ ರಚಿಸಿದ್ದಾರೆ. ಈ ಕೃತಿಯಲ್ಲಿ ಕವಿಯ ಪಾಂಡಿತ್ಯ, ಪರಿಶ್ರಮ ಎದ್ದು ಕಾಣುತ್ತದೆಯಾದರೂ ಕಾವ್ಯಾತ್ಮಕತೆ ಕಡಿಮೆಯೆಂದೇ ಹೇಳಬೇಕಾಗುತ್ತದೆ. ವ್ಯವಸ್ಥಿತವಾದ ಬಂಧದಲ್ಲಿ ಕಾವ್ಯವನ್ನು ಕಟ್ಟಿದ್ದಾರೆ.

**ನಂಜನಗೂಡು ಸುಬ್ಬಾಶಾಸ್ತ್ರಿಗಳು** (ಕ್ರಿ.ಶ. 1834–1906) ಮೈಸೂರು ದೊರೆಗಳ ಆಸ್ಥಾನದಲ್ಲಿದ್ದವರು. ಇವರ 'ಉತ್ತರ ಸೀತಾ ಚರಿತ್ರೆ' ಎಂಬುದು ಭಾಮಿನಿ ಷಟ್ಪದಿಯ 7 ಉಲ್ಲಾಸಗಳಲ್ಲಿ 118 ಪದ್ಯಗಳನ್ನೊಳಗೊಂಡ ಕಿರು ಕೃತಿಯಾಗಿದೆ. ಉತ್ತರ ರಾಮಕಥೆಯಲ್ಲಿ ಸೀತೆಯ ಪಾತ್ರಕ್ಕೆ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಇವರಲ್ಲಿ

ವಾಲ್ಮೀಕಿಯ ಕಥಾನಿರೂಪಣೆಯ ಅನುಸರಣೆಯ ಜೊತೆಗೆ ಭವಭೂತಿಯ ಉತ್ತರರಾಮಚರಿತೆಯ ಅನುಕರಣೆಯಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

**ಕವಯಿತ್ರಿ ಯಶೋಧೆಯು** (ಕ್ರಿ. ಶ. 17–18ನೇ ಶತಮಾನ) 'ಲವಕುಶರ ಕಥೆ' ಎಂಬ ಕಿರು ಕಾವ್ಯವನ್ನು ರಚಿಸಿದ್ದಾಳೆ. ಇದರಲ್ಲಿ ಉತ್ತರ ರಾಮಕಥೆಯ ಸೀತಾಪರಿತ್ಯಾಗ, ಲವಕುಶರ ಜನನ, ತಂದೆ ಮಕ್ಕಳ ಕಾಳಗಗಳನ್ನು 8 ಸಂಧಿಯಲ್ಲಿ 269 ಪದ್ಯಗಳನ್ನು ಸಾಂಗತ್ಯ ಛಂದಸ್ಸಿನಲ್ಲಿ ರಚಿಸಿರುವುದು ವಿಶೇಷ. ಇವಳು ಉತ್ತರ ರಾಮಕಥೆಯನ್ನು ಬರೆದಮೊದಲ ಕವಿಯತ್ರಿ ಎಂದು ಹೇಳಲಾಗುತ್ತದೆ. ಇವಳ ಕೃತಿಯ ಹಸ್ತಪ್ರತಿಯು ದೊರೆತಿಲ್ಲ, ಗೌರಿಬಿದನೂರು ಪ್ರಾಂತ್ಯದ ಜರಬಂಡಹಳ್ಳಿಯ ಕುಟುಂಬದ ಸ್ತ್ರೀಯರ ಬಾಯಲ್ಲಿ ಸಂಪ್ರದಾಯದ ಹಾಡಿನಂತೆ ಉಳಿದುಬಂದಿದ್ದು ಅದನ್ನು ಅನಂತಪದ್ಮರಾಯರು ಸಂಗ್ರಹಿಸಿ ಸಂಪಾದಿಸಿಕೊಟ್ಟಿದ್ದಾರೆ. ಈ ಕೃತಿಯಲ್ಲಿ ಸೀತಾಪರಿತ್ಯಾಗಕ್ಕೆ ಕಾರಣ ವಿಶೇಷವಾಗಿದೆ. ಇದರಲ್ಲಿ ಸೀತೆಯ ಶೀಲಕುರಿತು ಪುರಜನರಾಗಲೀ, ಅಗಸನಾಗಲೀ ಹೊರಿಸಿದ ಅಪವಾದವು ಕಾರಣವಾಗದೇ ಸೀತೆಯು ಬರೆದ ರಾವಣನ ಚಿತ್ರಪಟದ ಕಾರಣವನ್ನು ಹೇಳಿದ್ದಾಳೆ. ಸೀತೆಯು ಬರೆದ ರಾವಣನ ಚಿತ್ರಪಟವನ್ನು ನೋಡಿ ಸ್ವತಃ ರಾಮನೇ ಅವಳಬಗೆಗೆ ಸಂಶಯಗೊಂಡು ತ್ಯಜಿಸುತ್ತಾನೆ. ಇಲ್ಲಿ ಜನಪದ ರಾಮಾಯಣದ ಪ್ರಭಾವವನ್ನು ಕಾಣಬಹುದು. "ಕವಯಿತ್ರಿ ಪಾತ್ರಗಳನ್ನು ಹೆಣ್ಣು ಹೃದಯದಿಂದ ತೂಗಿನೋಡಿದ್ದಾಳೆ, ಹೆಣ್ಣಿನ ಹೃದಯದ ಸೂಕ್ಷ್ಮದೃಷ್ಟಿ, ಕೋಮಲತೆ ಈಕೆಯ ಕಾವ್ಯದ ವೈಶಿಷ್ಟ್ಯಗಳು"[17] **ವೆಂಕಾಮಾತ್ಯರ** 'ಷಟ್ಪದೀ ರಾಮಾಯಣಪದ್ಮ ಪುರಾಣ, ಸ್ಕಾಂದಪುರಾಣಗಳ ಪ್ರೇರಣೆಪಡೆದ ಕವಿ, ರಾಮಾಯಣವು ಶಿವನು ಪಾರ್ವತಿಗೆ ಹೇಳಿದ ಕತೆ ಎಂದು ನಿರೂಪಿಸಿದ್ದಾರೆ. ಇದು ಹಲವು ಕಾಂಡಗಳೂ ಸಂಧಿಗಳಿಂದ ಕೂಡಿದ ಬೃಹತ್ ಕೃತಿಯಾಗಿದೆ. ರಾಮನನ್ನು ಅವತಾರಪುರುಷನೆಂದು ನಂಬಿ ಭಕ್ತಿ ಶ್ರದ್ಧೆಯಿಂದ ಬರೆಯಲಾಗಿದೆ. ಹಲವು ಕಡೆಗಳಲ್ಲಿ ವಾಲ್ಮೀಕಿ ರಾಮಾಯಣದ ಸಂಸ್ಕೃತ ಶ್ಲೋಕಗಳನ್ನೇ ಅನುವಾದಿಸಿದ್ದಾರೆ. ಇವರ ವರ್ಣನೆಗಳಲ್ಲಿ ಸ್ವಂತಿಕೆಯಿದೆ ಹಾಗೂ ಚಮತ್ಕಾರವೂಇದೆ. ಇವರು ಹೈದರಲಿ ಖಾನನಲ್ಲಿ ಮಂತ್ರಿಯಾಗಿದ್ದಂತೆ ತಿಳಿದುಬರುತ್ತದೆ. ಇವರು ಪೂರ್ವ ಕವಿಗಳಾದ ಭಾಸ, ಬಾಣ, ಮಯೂರ, ದಂಡಿ, ಕಾಳಿದಾಸಾದಿ ಸಂಸ್ಕೃತ ಕವಿಗಳನ್ನೂ ಕನ್ನಡದ ಹರೀಶ್ವರ, ರುದ್ರಭಟ್ಟರನ್ನೂ ನೆನಸಿದ್ದಾರೆ. ಇವರ ಮೇಲೆ ಬೋಜನ 'ಚಂಪೂ ರಾಮಾಯಣ'ದ ಪ್ರಭಾವವೂ ಕೆಲವು ಪ್ರಸಂಗಗಳಲ್ಲಿ ಕಂಡುಬಂದಿರುವುದನ್ನು ಸಂಪಾದಕರಾದ ಟಿ. ಚಂದ್ರಶೇಕರನ್ ಗುರುತಿಸಿದ್ದಾರೆ. **ಇವರ ಭಾಗವತ ಪ್ರಜ್ಞೆಯಿಂದಾಗಿ ತಾಟಕಾ ಸಂಹಾರದ ನಂತರ, ಮಾರೀಚ ವಧೆಯ ಸಂದರ್ಭದಲ್ಲಿ ವಿಶ್ವಾಮಿತ್ರನಿಂದ ವಾಮನಾವತಾರದ ಕತೆ, ರಾಮೋಪಾಸನೆಯನ್ನು ಕುರಿತು ಹೇಳಿರುವುದನ್ನು ಗಮನಿಸಬೇಕು. ಗೌತಮ, ಅಹಲ್ಯೆ, ಇಂದ್ರರ ಕಥೆಯು ವಾಲ್ಮೀಕಿ ರಾಮಾಯಣಕ್ಕಿಂತಲೂ ವಿಸ್ತಾರವಾಗಿದ್ದು ಇಂದ್ರನನ್ನು ಕುರಿತು ಹೆಚ್ಚಿನ ಸಂಗತಿಗಳಿವೆ.** ಕಥಾ ಹಂದರದಲ್ಲಿ ಔಚಿತ್ಯದ ಕಡೆಗೆ ಅಷ್ಟಾಗಿ ಗಮನವಿಲ್ಲದ ಕವಿ ಎಲ್ಲೆಂದರಲ್ಲಿ ವಿಶ್ವಾಮಿತ್ರ ವಸಿಷ್ಠರ ಕಥೆ, ವಿಶ್ವಾಮಿತ್ರ ಮೇನಕೆಯರ ಉಪಕಥೆಗಳನ್ನು, ವಾಲ್ಮೀಕಿಯ ಪೂರ್ವಕಥೆಗಳನ್ನು, ಎಲ್ಲೆಂದರಲ್ಲಿ ಭಕ್ತಿ, ವೈರಾಗ್ಯಗಳ ಉಪದೇಶಗಳನ್ನೂ ತೂರಿಸಿಬಿಡುವುದರಿಂದ ಕಾವ್ಯಕಲೆ ಸೊರಗಿದೆ. ಇವರ ಕೃತಿಯಲ್ಲಿ ಚಿತ್ರಕೂಟದ ವರ್ಣನೆ, ಲಂಕೆಯ ವರ್ಣನೆ, ಇತ್ಯಾದಿ ಕೆಲವು ಬಿಡಿಚಿತ್ರಗಳು ಸುಂದರವಾಗಿ ಮೂಡಿಬಂದಿರುವೆ.

**ಮುದ್ದಣ ಶ್ರೀರಾಮ ಪಟ್ಟಾಭಿಷೇಕಂ** ಎಂಬ ಕೃತಿಯನ್ನು ತನ್ನ ತಾಯಿ ಮಹಾಲಕ್ಷ್ಮಿಯವರ ಹೆಸರಿನಲ್ಲಿ ಪ್ರಕಟಣೆ ಮಾಡಿಸಿದ್ದಾನೆ. ಈ ಕೃತಿಯನ್ನು ಪ್ರಕಟಣೆಗೆ ಕಳುಹಿಸುವಾಗ "ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ ಕನ್ನಡಿಗನೊರೆದ ನುಡಿಯೆಂದು ಸಂಭಾವಿಸುವುದು" ಎಂಬ ಬೇಡಿಕೆಯನ್ನಿಟ್ಟಿದಾನೆ. ಲಕ್ಷ್ಮೀ ಮನೋಹರನೆಂದು ಪ್ರಾಕಾರಾಂತ್ಯದಲ್ಲಿ ತನ್ನ ಹೆಸರನ್ನು ಜೋಡಿಸಿದ್ದಾನೆ. ಇದರಲ್ಲಿ 5 ಸಂಧಿಗಳೂ 242 ಪದ್ಯಗಳು ಇವೆ. ನಾಂದಿ ಪದ್ಯಗಳಲ್ಲಿ ಚಮತ್ಕಾರವನ್ನು ಶ್ಲೇಷೆಯನ್ನೂ ತಂದಿದ್ದಾನೆ. ಶ್ರೀ ರಾಮನು ರಾವಣನನ್ನು ಸಂಹರಿಸಿ ವಿಭೀಶಣನಿಗೆ ಲಂಕೆಯ ಪಟ್ಟಕಟ್ಟಿ, ಸೀತಾ ಲಕ್ಷ್ಮಣ ಸಮೇತನಾಗಿ ಹನುಮಾದಿ ವಾನರರೊಂದಿಗೆ ನಂದಿಗ್ರಾಮದಲ್ಲಿ ತನ್ನ ನಿರೀಕ್ಷೆಯಲ್ಲಿದ್ದ ಭರತನನ್ನು ಸಂಧಿಸಿ ಅಯೋಧ್ಯೆಗೆ ಮರಳಿ ತಾಯಂದಿರ ಆಶೀರ್ವಾದವನ್ನು ಪಡೆದು ಪಟ್ಟಾಭಿಶಿಕ್ತನಾಗುವುದು ಈ ಕೃತಿಯ ಕಥಾವಸ್ತು. ಶೇಷರಾಮಾಯಣ ಮತ್ತು ವಾಲ್ಮೀಕಿ ರಾಮಾಯಣಗಳನ್ನು ಆಕರವಾಗಿ ಮಾಡಿಕೊಂಡು ಈ ಕೃತಿಯನ್ನು ಸ್ವತಂತ್ರ ಪ್ರತಿಭಾ ಶಕ್ತಿಯಿಂದ ಕಟ್ಟಿದ್ದಾನೆ. ಇದನ್ನು ಒಂದು ಖಂಡ ಕಾವ್ಯವೆಂದು ವಿದ್ವಾಂಸರು ಕರೆದಿದ್ದಾರೆ. ಕಿರು ಕಥೆಯ ಆವರಣದಲ್ಲಿ ವರ್ಣನೆಗೇ ಪ್ರಾಧಾನ್ಯತೆ ಕೊಟ್ಟಿದ್ದಾನೆ. ಜೊತೆಗೆ ರಾಮನ ಸ್ತುತಿ,

ಕೊಂಡಾಟವೇ ಹೆಚ್ಚಿನ ಪಾಲು ತುಂಬಿಕೊಂಡಿದೆ. ಇಲ್ಲಿ ಬರುವ ಭರತ ಕೈಕೆ, ಕೌಸಲ್ಯೆ, ಸೀತೆ, ಲಕ್ಷ್ಮಣ, ಸುಮಿತ್ರೆ ಹನುಮನ ಪಾತ್ರಗಳು ಸ್ಫುಟವಾಗಿ ಮೂಡಿವೆ. ಹೆಚ್ಚಿನ ಕಥೆಗೆ ಇಲ್ಲಿ ಅವಕಾಶವಿಲ್ಲದಿರುವುದರಿಂದ ಬರುವ ಪಾತ್ರಗಳು ಉತ್ಕಟವಾದ ಭಾವದ ಕಡೆಗೆ ಸನ್ನಿವೇಶದ ರಚನಾಕೌಶಲ್ಯದ ಕಡೆಗೆ ಕವಿ ಗಮನಕೊಟ್ಟಿದ್ದು, ಪಾತ್ರ ನಿರೂಪಣಾ ದೃಷ್ಟಿಯಿಂದ ಈ ಕೃತಿ ಗೆದ್ದಿದೆ. ಇದು ಒಂದು ಭಾವಪ್ರಧಾನವಾದ ಕಾವ್ಯವೆಂದು ಕೆ.ಆರ್. ಗಣೇಶರವರು ಅಭಿಪ್ರಾಯಪಟ್ಟಿದ್ದಾರೆ.[18]

**ಸದಾಶಿವ ರಾಮಾಯಣ** ಎಂಬ ವಾರ್ಧಕ ಷಟ್ಪದಿಯ ಕಾವ್ಯವನ್ನು ವೆಂಕಟನೆಂಬ ಕವಿ ರಚಿಸಿದ್ದಾನೆ. ಇದರಲ್ಲಿ 58 ಸಂಧಿಗಳಿವೆ.[19] ಈ ಕವಿ ತನಗಿದ್ದ 'ಕವಿತಾವಿಶಾರದ' ಎಂಬ ಬಿರುದನ್ನು ಹೇಳಿಕೊಂಡಿದ್ದಾನೆ. ಈ ಕಾವ್ಯದಲ್ಲಿನ ಪರಶುರಾಮ ಗರ್ವಭಂಗ ಪ್ರಸಂಗವು ಕಾವ್ಯಾತ್ಮಕವಾಗಿ ಮೂಡಿಬಂದಿದೆ. ಪ್ರೌಢವಾಗಿದ್ದು, ರಸಪೂರ್ಣವಾಗಿದೆ [20]

**ಹೆಳವನಕಟ್ಟೆ ಗಿರಿಯಮ್ಮ** ಸೀತಾಕಲ್ಯಾಣ ಹಾಗೂ ಲವಕುಶರ ಕಾಳಗಗಳೆಂಬ ಎರಡು ಕೃತಿಗಳನ್ನು ರಚಿಸಿರುವುದಲ್ಲದೆ ಇನ್ನೂ ಅನೇಕ ಕಥನ ಕಾವ್ಯಗಳನ್ನೂ ಸಾಂಗತ್ಯದಲ್ಲಿ ರಚಿಸಿದ್ದಾಳೆ. **ಹೆಳವನ ಕಟ್ಟೆ ರಂಗನ ಅಂಕಿತದಲ್ಲಿ ಅನೇಕ ಕೀರ್ತನೆಗಳನ್ನೂ ರಚಿಸಿರುವ ಈ ಕವಿಯಿತ್ರಿಯದು ಭಾಗವತ ದೃಷ್ಟಿಕೋನ. ಸೀತಾಕಲ್ಯಾಣ ಕೃತಿಯಲ್ಲಿ 77 ನುಡಿಗಳಿದ್ದು ರಾಮಜಾನಕಿಯ ಮಂಗಳುತ್ಸವದ ಉರುಟಣೆಯ ಪ್ರಸಂಗವನ್ನು ವರ್ಣಿಸಿದ್ದಾಳೆ, ಮಧುವೆ ಸಂದರ್ಭದಲ್ಲಿ ವಧುವರರಿಗೆ ಅರಿಷಿಣ ಎಣ್ಣೆಯನ್ನಿಡುವ ಶಾಸ್ತ್ರವನ್ನು ಮಾಡುವುದೇ ಇದರ ವಸ್ತು. ಇಲ್ಲಿ ಕಥೆಯಿಲ್ಲ.** ಬ್ರಾಹ್ಮಣರ ಕುಟುಂಬಗಳಲ್ಲಿ ನಡೆಸುತ್ತಿದ್ದ ವಿವಾಹದ ಆಚರಣೆಗಳನ್ನು ಆ ಸಂದರ್ಭದಲ್ಲಿ ಮುತ್ತೈದೆಯರು ಹಾಡುವ ಸಂಪ್ರದಾಯ ಹಾಡುಗಳನ್ನು ಇದು ನೆನಪಿಸುತ್ತದೆ. 'ಲವಕುಶರಹಾಡು' ಐದುನೂರು ಪದ್ಯಗಳಿರುವ ಹಾಡುಗಬ್ಬ ರಾಮಾಯಣದ ಉತ್ತರಕಾಂಡದ ಕಥೆಯನ್ನು ಜಾನಪದದ ಅದರಲ್ಲೂ ಮಧುಗಿರಿಯ ಚಿತ್ರಪಟ ರಾಮಾಯಣದ ಕಥೆಯನ್ನು ಹೋಲುತ್ತದೆ. ಇದರಲ್ಲಿ ಭವಭೂತಿಯ ಪ್ರಭಾವವನ್ನೂ ವಿದ್ವಾಂಸರು ಗುರುತಿಸಿದ್ದಾರೆ. ಇಲ್ಲಿ ಶೂರ್ಪನಖಿ ಕೊರವಿಯಾಗಿ ಬಂದು ಸೀತೆಯನ್ನು ರಾವಣನ ಚಿತ್ರ ಬರೆದುಕೊಡಲು ಒತ್ತಾಯಿಸುತ್ತಾಳೆ. ಸೀತೆ ಒಪ್ಪದಿದ್ದಾಗ ಮರುಳು ಭಸ್ಮವನ್ನು ಸಿಂಪಡಿಸುತ್ತಾಳೆ. ಆಗ ಸೀತೆ ರಾವಣನ ಅಂಗುಷ್ಠ ಮಾತ್ರ ಗೊತ್ತು ಎಂದರೂ ಬಿಡದೆ ಒತ್ತಾಯದಿಂದಲೇ ರಾವಣನ ಚಿತ್ರವನ್ನು ಬರೆಸಿ ಎಂದೆಂದಿಗೂ ಅಳಿಯದಂತೆ, ಆದರೆ ಲಕ್ಷಣ ದೇವ ಹೊಡೆದರೆ ಮಾತ್ರ ಸಾಯುವಂತೆ ಅದಕ್ಕೆ ಸೀತೆಯಿಂದ ವರಕೊಡಿಸುತ್ತಾಳೆ. ಆ ಪಟ ಕುಣಿದಾಡತೊಡಗುತ್ತದೆ. ಚಿಂತಿತಳಾದ ಸೀತೆ ಅದನ್ನು ಹಾಸಿಗೆಯ ಕೆಳಗೆ ಮುಚ್ಚಿಟ್ಟು ಮಲಗುತ್ತಾಳೆ ಬೇಟೆಗೆಹೋಗಿದ್ದ ರಾಮಹಿಂದಿರುಗಿ ಬಂದು ಆ ಮಂಚದಮೇಲೆ ಕುಳಿತೊಡನೇ ಅದು ಮುರಿದು ಬೀಳುತ್ತದೆ ಕಾರಣವನ್ನು ಹುಡುಕುತ್ತಾ ಲಕ್ಷ್ಮಣ ಹಾಸಿಗೆ ಎತ್ತಿದೊಡನೆ ಹತ್ತು ತಲೆಯ ಆ ರಾವಣನ ಪಟ ಮತ್ತೆ ಕುಣಿಯ ತೊಡಗುತ್ತದೆ. “**ಏಸು ದಿವಸ ಘಾಸಿಯಾಗಿ ಬರೆದಿ ಇವನ, ಏಸು ದಿವಸ ಭೋಗಿಸಿದಿ, ಮೋಸ ಮಾಡಿದಿ ದೇವಿ ಎನಕೈಲಿ ಹೇಳದೆ ಘಾಸಿ ಮಾಡಿದಿ ಎನ್ನ", "ಭೂಮಿದೇವಿ ಮಗಳೆಂದು ನಾ ತಂದೆನು ನಾಡೊಳಗೆ ಪತಿವ್ರತೆಯೆಂದು ಪ್ರಾಣವಲ್ಲಭೆ ನೀನು ಗತಿಯೆಂದು ನಂಬಿದೆ, ರಾವಣಗೆ ಮರುಳಾಗೋದರಿಯೆ**” ಎಂದು ಸಿಟ್ಟಿನಲ್ಲಿ ಕೇಳುವ ರಾಮ ನಿಜವನ್ನು ಹೇಳಿದರೂ ನಂಬದೆ ಸೀತೆಯನ್ನು ಕಾಡಿನಲ್ಲಿ ಕೊಂದು ಬರುವಂತೆ ಆಜ್ಞಾಪಿಸುತ್ತಾನೆ. ಲಕ್ಷ್ಮಣನು ದೇವತೆಗಳು ಅಡ್ಡಬಂದುದರಿಂದ ಸೀತೆಯನ್ನು ಕೊಲ್ಲದೆ ಕಾಡಿನಲ್ಲೇ ಬಿಟ್ಟುಬರುತ್ತಾನೆ. ಮುಂದೆ ಲವಕುಶರ ಜನನ, ರಾಮನ ಅಶ್ವಮೇಧಯಾಗ, ರಾಮನ ಸೈನ್ಯದೊಂದಿಗೆ ಮತ್ತು ರಾಮನೊಂದಿಗೆ ಲವಕುಶರ ಕಾಳಗ, ವಾಲ್ಮೀಕಿಯಿಂದ ಲಕ್ಷ್ಮಣನಿಂದ ನಿಜ ಸಂಗತಿಯನ್ನು ತಿಳಿದು ಕೊನೆಗೆ ಮಡದಿ ಮಕ್ಕಳೊಂದಿಗೆ ಅಯೋಧ್ಯೆಗೆ ಹಿಂತಿರುಗುವುದರೊಂದಿಗೆ ಕಥೆಯನ್ನು ಸುಖಾಂತವಾಗಿ ಮಾಡಲಾಗಿದೆ. ಅತ್ಯಂತ ಸರಳ ಸುಂದರವಾದ ಈ ಹಾಡನ್ನು ಸಂಪ್ರದಾಯದ ಹಾಡಿನಂತೆ ಹೆಂಗಸರು ಇತ್ತೀಚಿನವರೆಗೂ ಹಾಡಿಕೊಳ್ಳುತ್ತಿದ್ದುದನ್ನು ಗಮನಿಸಬಹುದು. (ನಿಟ್ಟೂರು ಜಯಮ್ಮ ಮತ್ತು ಸುಶೀಲಮ್ಮ) “ವಸ್ತು ಯಾವುದೇ ಇರಲಿ ವರ್ಣನೆಯಾವುದೇ ಇರಲಿ ತನ್ನ ವ್ಯಕ್ತಿ ವೈಶಿಷ್ಟ್ಯದ ಸ್ವಾನುಭವ ಸಂಪತ್ತಿಯ ಬಣ್ಣವನ್ನು ತುಂಬಿಸಿ ಓದುಗರು ಅವುಗಳನ್ನು ಆತ್ಮೀಯತೆಯಿಂದ ಅನುಭವಿಸುವಂತೆ ಮಾಡುವ ಕವಿ ಪ್ರಕೃತಿ ಗಿರಿಯಮ್ಮನಿಗೆ ವಿಶೇಷ. ........ಸ್ತ್ರೀ ಸಹಜ ಕೋಮಲ ಮನೋಧರ್ಮ, ದೈವಭಕ್ತಿ ಪ್ರೇರಿತವಾದ ಆಶುಕವಿ ವಾಣಿಯನ್ನು ಇಲ್ಲಿ ಕಾಣಬಹುದು” ಎಂದು

ವಿದ್ವಾಂಸರು ಅವಳ ಕವಿತ್ವವನ್ನು ಮೆಚ್ಚಿಕೊಂಡಿದ್ದಾರೆ.[21] **ಜಾನಪದ** ರಾಮಾಯಣ ಧಾರೆಯು ಶಿಷ್ಟ ರಾಮಾಯಣಗಳು ರಚಿತವಾಗುವ ಮೊದಲಿನಿಂದಲೂ ಇದ್ದು, ಅದು ಮುಂದೆ ಶಿಷ್ಟಸಾಹಿತ್ಯಕ್ಕೆ ಸಮಾನಾಂತರವಾಗಿ ಹರಿಯುತ್ತಲೇ ಇದ್ದಿತೆಂಬುದು ತಿಳಿದುಬರುತ್ತದೆ. ಅವೈದಿಕ-ವೈದೀಕ ಧಾರೆಗಳಿಗಿಂತಲೂ ಜಾನಪದದ ವಿಶಿಷ್ಟ ಕಥೆಗಳು ಇದ್ದವು ಈಗಲೂ ಇವೆ. ಅದೇ ರೀತಿ ರಾಮನನ್ನು ಆರಾಧಿಸುವ ಸಮುದಾಯಗಳು ಇರುವಂತೆಯೇ ರಾವಣನನ್ನು 'ರಾವಳೇಶ್ವರ'ನೆಂಬ ಹೆಸರಿನಲ್ಲಿ ಆರಾಧಿಸುವ 'ರಾವಳೇಶ್ವರ ಪಂಥ'ವೊಂದು ಕರ್ನಾಟಕದಲ್ಲಿ ಆಚರಣೆಯಲ್ಲಿದೆ. ರಾಮಾಯಣವನ್ನು ಕುರಿತ ಅವರ ದೃಷ್ಟಿಕೋನವು ವಿಭಿನ್ನವಾಗಿದೆ. ಸಾವಿರಾರು ಕುಟುಂಬಗಳು ಜಾತಿವ್ಯತ್ಯಾಸವಿಲ್ಲದೆ ರಾವಳೇಶ್ವರನ ಒಕ್ಕಲಾಗಿದ್ದು ಇವರು ಇಂದಿಗೂ ತಮ್ಮ ಮಕ್ಕಳಿಗೆ ರಾಮನ ಹೆಸರನ್ನು ಇಡುವುದಿಲ್ಲ ಮತ್ತು ರಾಮನ ಮೂರ್ತಿಯಿರಲಿ ಒಂದು ಚಿತ್ರಪಟವನ್ನು ಕೂಡ ಮನೆಯಲ್ಲಿ ಇಟ್ಟುಕೊಳ್ಳಲು ವಿರೋಧಿಸುತ್ತಾರೆ. ಅದು ಅಪಶಕುನವೆಂದೂ, ಕುಟುಂಬ ನೆಮ್ಮದಿಯು ಹಾಳಾಗುವುದೆಂದೂ ನಂಬುತ್ತಾರೆಂಬುದು ಆಶ್ಚರ್ಯದ ವಿಚಾರವಾದರೂ ಸತ್ಯ. ರಾಮಭಕ್ತರಾದ ವೈಷ್ಣವ ಸಂಪ್ರದಾಯದ ಕುಟುಂಬಗಳಿಗೆ ಹೆಣ್ಣು ಕೊಡುವುದಿಲ್ಲ, ಅವರಿಗೆ ದನಕರುಗಳನ್ನು ಮಾರುವುದಕ್ಕಾಗಲೀ ಕೊಳ್ಳುವುದಕ್ಕಾಗಲೀ, ಸಾಲಪಡೆಯುವುದಕ್ಕಾಗಲೀ ನಿಷೇಧವಿದೆ.[22]

ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ ವಿಶಿಷ್ಟವಾಗಿ ಕಥೆಯನ್ನು ಹೇಳಲಾಗುತ್ತದೆ. ಮಧುಗಿರಿ ಜಿಲ್ಲೆಯ ಚಿತ್ರಪಟ ರಾಮಾಯಣ ಕಥಾ ಪ್ರಕಾರವು ಪ್ರಸಿದ್ಧವಾಗಿದೆ. ಕನ್ನಡದಲ್ಲಿ ಗೊಂಡ ಬುಡಕಟ್ಟಿನ ಗೋಂಡರ ರಾಮಾಯಣ ಕಥಾ ಪ್ರಕಾರವೂ ಇದೆ.[23] ಅದೇ ರೀತಿ ಹೊನ್ನಾಜಮ್ಮ, ಸಾವಿತ್ರಮ್ಮ ಎಂಬ ಜಾನಪದ ಹಾಡಿನ ಹೆಂಗಸರು ಹಾಗೂ ಕಂಸಾಳೆ ಮಾಹಾದೇವಸ್ವಾಮಿ, ಸಿದ್ದಯ್ಯ ಎಂಬ ಹಾಡುಗಾರರೂ ಹಾಡಿದ ರಾಮಾಯಣ ಪ್ರಸಂಗಗಳು ಪ್ರಸಿದ್ಧವಾಗಿದೆ. ಈ ರಾಮಾಯಣ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.[24] ಈ ರಾಮಾಯಣದಲ್ಲಿ ರಾವಣನಿಗೆ ದುಷ್ಟತನವನ್ನು ಆರೋಪಿಸುವುದಿಲ್ಲ. ರಾಮನ ನಡತೆಯನ್ನು ಅವನ ರಾಜ್ಯಭಾರವನ್ನು, ತೀರ್ಮಾನವನ್ನು ಜನರು ಬಹಳವಾಗಿ ಮೆಚ್ಚಿಕೊಂಡಂತೇನೂ ತೋರುವುದಿಲ್ಲ. ಸೀತೆಯು ಎದುರಿಸಿದ ಸಂಕಟಗಳಿಗೆ ಅವರು ವಿಶೇಷವಾಗಿ ಮರುಗಿದ್ದಾರೆ. ಲಕ್ಷ್ಮಣರೇಖೆಯ ವಿಚಾರ, ಜನರಿಗೆ ಖುಷಿಕೊಡುವ ಹನುಮಂತನ ಬಾಲಬೆಳೆದು ಲಂಕೆಸುಡುವುದು, ಇತ್ಯಾದಿ ವಿಚಾರಗಳು ಜನಪದರನ್ನು ವಿಶೇಷವಾಗಿ ಸೆಳೆದಿವೆ. ಈ ಜಾನಪದ ರಾಮಾಯಣದಲ್ಲಿ ನಾಲ್ಕು ಹಾಡುಗಳನ್ನು ಕ್ರಮವಾಗಿ ಜೋಡಿಸಿ ಸಂಗ್ರಹಿಸಲಾಗಿದೆ.

ಆರಂಭದ ಭಾಗದಲ್ಲಿ ಹೊನ್ನಾಜಮ್ಮ ಹಾಡಿರುವ ಸೀತೆಯ ಜನನ, ಸ್ವಯಂವರ, ಅಗ್ನಿಪರೀಕ್ಷೆಯ ಕಥೆಗಳಿವೆ ಇದನ್ನು ತ್ರಿಪದಿ, ಚೌಪದಿ ಹಾಗೂ ದ್ವಿಪದಿಗಳಲ್ಲಿ ಕಟ್ಟಲಾಗಿದೆ. ಎರಡನೆಯ ಭಾಗದಲ್ಲಿ 'ಸುಣ್ಣುಮಾರನ ಕಥೆ'ಯಿದ್ದು ಇದನ್ನು ಸಾವಿತ್ರಮ್ಮನೆಂಬುವವರು ಹಾಡಿದ್ದಾರೆ. ಇದರ ಮೇಲೆ ವಾಲ್ಮೀಕಿ ಕಥೆಯ ಪ್ರಭಾವವಿರುವುದನ್ನು ಗುರುತಿಸಲಾಗಿದೆ. ಭಾಗಮೂರರಲ್ಲಿ ಕಂಸಾಳೆ ಮಹಾದೇವಯ್ಯ ಮನಮುಟ್ಟುವಂತೆ ಹಾಡಿರುವ ಲವಕುಶರ ಕಾಳಗದ ಕಥೆಯನ್ನು ಸಂಗ್ರಹಿಸಲಾಗಿದೆ. ಇದೊಂದು ಜಾನಪದ ಚಂಪೂ ಶೈಲಿಯ ಅಂದರೆ ಮಾತು ಮತ್ತು ಹಾಡಿನ ಮಿಶ್ರರೂಪವನ್ನು ಪಡೆದಿದೆ. ಭಾಗ ನಾಲ್ಕರಲ್ಲಿ ಚನ್ನಯ್ಯನೆಂಬುವವರ ಮಗ ಹಾಡಿರುವ ತಂಬೂರಿ ಸಂಪ್ರದಾಯದ ಸಂಪೂರ್ಣ ರಾಮಾಯಣವಿದೆ. ಸೀತೆಯ ಜನನವನ್ನು ಅತಿಮಾನುಷನೆಲೆಯಲ್ಲಿ ಚಿತ್ರಿಸಲಾಗಿದೆ. ಮಾವಿನ ಹಣ್ಣನ್ನು ತಿನ್ನುವುದು ಇಲ್ಲವೆ ತಾವರೆಹೂವನ್ನು ಮೂಸುವುದರಿಂದ ಗರ್ಭದರಿಸುವ ವಿಚಾರವಿದೆ. ಒಟ್ಟಿನಲ್ಲಿ ಸೀತೆಯ ಜನನ ರಾವಣನಿಗೆ ಅನಿಷ್ಟವಾದ್ದರಿಂದ ಅವಳನ್ನು ತ್ಯಜಿಸಲಾಯಿತು, ಅವಳನ್ನು ಬ್ರಾಹ್ಮಣನಿಗೆ ದಾನಕೊಡಲಾಯಿತು, ಅವಳನ್ನು ಪೆಟ್ಟಿಗೆಯಲ್ಲಿಟ್ಟು ತೇಲಿಬಿಡಲಾಯಿತು ಎಂಬ ವಿವಿಧ ಕಥೆಗಳಿವೆ. ಅವಳು ಜನಕನಿಗೆ ಸಿಕ್ಕಿದಳೆನ್ನುತ್ತವೆ.

ತಂಬೂರಿ ಸಂಪ್ರದಾಯದ ರಾಮಾಯಣದಲ್ಲಿ ಮಂಥರೆಯಿಲ್ಲ. **ಸೀತೆಯ ಸ್ವಯಂವರ ಶಿಷ್ಟ ಸಂಪ್ರದಾಯಕ್ಕಿಂತ ಭಿನ್ನವಾಗಿದೆ. ಇಲ್ಲಿ ತನ್ನ ಅರಮನೆಯನ್ನು ಹೊಲಸು ಮಾಡಿದ ಕಬ್ಬಿಣದ ಕಾಗೆಯನ್ನು ಮೀನಿನ ಕಣ್ಣಿನಲ್ಲಿ ಧನುಸ್ಸನ್ನು ಎತ್ತಿಸಿ ಕೊಲ್ಲಿಸುವುದಾಗಿಯೂ ಹಾಗೆ ಮಾಡಬಲ್ಲ ಶೂರನಿಗೆ ಮಗಳನ್ನು ಕೊಡುವುದಾಗಿಯೂ ಜನಕ ಪ್ರತಿಜ್ಞೆ ಮಾಡಿರುತ್ತಾನೆ.** ಪಂಥದಲ್ಲಿ ಗೆದ್ದ ರಾಮನ ಬಿಲ್ಲುಬಾಣಗಳಿಗೆ ಸೀತೆಯನ್ನು

ಮದುವೆಮಾಡಿಕೊಡಲಾಗುತ್ತದೆ. ಸೀತೆ ಕಾಡಿಗೆ ರಾಮನೊಂದಿಗೆ ಹೋಗುವುದಿಲ್ಲ. ಆನಂತರದಲ್ಲಿ ಹೋಗಿ ರಾಮನನ್ನು ಸೇರಿಕೊಳ್ಳುತ್ತಾಳೆ. ರಾಮ ಲಕ್ಷ್ಮಣರು ಸೀತೆಯ ಹುಟ್ಟುಗುಣವನ್ನು ಪರೀಕ್ಷಿಸುವುದು ಇಲ್ಲಿ ವಿಶೇಷವಾಗಿ ಬಂದಿದೆ. ಇಲ್ಲಿ ಶಂಬೂಕ, ಕಾಕಾಸುರ, ಶೂರ್ಪನಖಿಯರ ಕಥೆಗಳು ಒಂದಕ್ಕೊಂದಕ್ಕೆ ಬೆಸೆದುಕೊಂಡು ವಿಲಕ್ಷಣವಾಗಿ ಮೂಡಿದೆ. ಪಾತಾಳ ಲೋಕದ ಯಾತಾಳಪುರದಲ್ಲಿ ಹುಲ್ಲೂರ ಎಂಬ ಅರಸನ ಹೆಂಡತಿಯೇ ಶೂರ್ಪನಖಿ ಅವರ ಮಗ ಸಣ್ಣುಮಾರ. ಈ ಹುಲ್ಲೂರನು ತನಗೆ ಶರಣಾಗಲಿಲ್ಲವೆಂಬಕಾರಣಕ್ಕೆ ಯುದ್ಧದಲ್ಲಿ ರಾವಣನು ಅವನನ್ನು ಸಂಹರಿಸುತ್ತಾನೆ. ಸೇಡುತೀರಿಸಿಕೊಳ್ಳಲು ಅವನ ಹೆಂಡತಿ ಶೂರ್ಪನಖಿ ಮಗನಿಗೆ ತಪಸ್ಸುಮಾಡಿ ಚಂದ್ರಹಾಸ ಖಡ್ಗವನ್ನು ಪಡೆದುಕೊಳ್ಳುವಂತೆ ಹೇಳುತ್ತಾಳೆ. ಆ ಖಡ್ಗವು ಲಕ್ಷ್ಮಣನ ಕೈಗೆ ಮೊದಲು ಸಿಕ್ಕಿ ಅದರ ಹರಿತವನ್ನು ಪರೀಕ್ಷಿಸುವಾಗ ಮೂಗುತ್ತದಲ್ಲಿದ್ದ ಸಣ್ಣುಮಾರನ ತಲೆ ಕತ್ತರಿಸಿಹೋಗುತ್ತದೆ. ಈ ಕಥಾ ಸರಣಿ ವೈದಿಕ ಕಥಾಸರಣಿಗಿಂತ ತೀರ ಭಿನ್ನವಾಗಿದೆ. ತಂಬೂರಿ ಹಾಡಿನಲ್ಲಿ ರಾವಣನೇ ಮಾಯಾವಿಯಾಗಿ ಜಿಂಕೆರೂಪವನ್ನು ತಾಳುತ್ತಾನೆ ಮತ್ತು ರಾಮನ ವೇಷದಲ್ಲಿ ಸೀತೆಯನ್ನು ಅಪಹರಿಸುತ್ತಾನೆ. ಲಂಕೆಯಲ್ಲಿ ಎರಡು ಪಟ್ಟಣಗಳಿದ್ದು, ಒಂದರಲ್ಲಿ ಮಂಡೋದರಿಯನ್ನೂ ಮತ್ತೊಂದರಲ್ಲಿ ಸೀತೆಯನ್ನು ರಾವಣ ಇಟ್ಟಿದ್ದಂತೆ ಚಿತ್ರಿತವಾಗಿದೆ. ರಾವಣ ಮಂಡೋದರಿಯರಲ್ಲಿ ವಿರಸವಿದ್ದು, ಆರು ವರ್ಷ ದೂರವಿರುತ್ತಾರೆಂಬ ವಿವರವಿದೆ ರಾಮಲಕ್ಷ್ಮಣರು ಲಂಕೆಯಲ್ಲಿ ಮೊದಲು ಮಂಡೋದರಿಯನ್ನು ಭೇಟಿಮಾಡಿ, ರಾವಣನ ಸಮಸ್ತ ವಿಚಾರವನ್ನೂ ಅವನ ಪ್ರಾಣವಿರುವ ಜಾಗವನ್ನೂ ತಿಳಿದುಕೊಳ್ಳುತ್ತಾರೆ. ಇಲ್ಲಿ ರಾಮ ರಾವಣರಲ್ಲಿ ಘೋರಯುದ್ಧನಡೆಯುವುದೇ ಇಲ್ಲ. ಹನುಮಂತನು ಲಂಕೆಯನ್ನು ಸುಟ್ಟುಹಾಕಿದ್ದಕ್ಕೇ ರಾವಣ ಹತಾಶನಾಗುತ್ತಾನೆ. ಬೆಂಕಿಗೆ ನೀರು ಹಾಕಿ ಆರಿಸುತ್ತಿರುವಾಗಲೇ ಅವನು ತಾನು ಮಾಡಿದುದು ತಪ್ಪು ಎಂದು ಕ್ಷಮೆಯನ್ನು ಕೇಳುತ್ತಿರುವಾಗಲೇ ರಾಮನ ಬಾಣಕ್ಕೆ ತುತ್ತಾಗಿ ಸಾಯುತ್ತಾನೆ. ಜನಪದದಲ್ಲಿ ಸಾಮಾನ್ಯವಾಗಿ ಬರುವ ಪಾತಿವ್ರತ್ಯದ ಪರೀಕ್ಷೆಗಳು ಇಲ್ಲಿಯೂ ಇವೆ. ಮರಳ ಮಡಿಕೆಯಲ್ಲಿ ನೀರುತರುವುದು, ಸರ್ಪವನ್ನೇ ಸಿಂಬಿಮಾಡಿಕೊಳ್ಳುವುದು, ಮತ್ತೊಂದು ಅಗ್ನಿ ದಿವ್ಯ. ಸೀತೆ ಮುಡಿದ ಮಲ್ಲಿಗೆ ಬಾಡದೆ, ಉಟ್ಟ ಬಟ್ಟೆ ಮಾಸದೆ, ಅರಿಶಿನ ಕುಂಕುಮ ಕೆಡದೆ, ಕೈಯಚಿಗುರೆಲೆ ಕಲಕದಂತೆ ಅಗ್ನಿಕುಂಡದಲ್ಲಿ ನಿಲ್ಲುವ ಪರೀಕೆಯಿದೆ. ಇಲ್ಲಿನ ಉತ್ತರ ರಾಮಾಯಣ ಕಥೆಯಲ್ಲಿಯೂ ಅನೇಕ ಭಿನ್ನತೆಯಿದೆ. ತಡವಾಗಿ ಊಟತಂದ ಹೆಂಡತಿಯನ್ನು ಮಡಿವಾಳನ್ನು ನಿಂದಿಸುವಾಗ ರಾಮನ ಪ್ರಸ್ತಾಪ ಮಾಡುವುದನ್ನು ಸ್ವತಃ ರಾಮನೇ ಗರ್ಭಿಣಿ ಮಡದಿಗೆ ಹುಣಿಸೇ ಹಣ್ಣು ತರಲು ಮರವನ್ನೇರಿದ್ದಾಗ ಕೇಳಿಸಿಕೊಂಡು ದುಃಖಿಸಿ, "ಅಡವಿ ಅರಣ್ಯಕೆ ಅವಳ ಕರಕೊಂಡು ಹೋಗಿ ಸಿರಸೇದ್ನೆಮಾಡಿ ಬಾರೋ ಗುರುತು ತಕಂಡ್ಬಾ" ಎಂದು ಲಕ್ಷ್ಮಣನಿಗೆ ಹೇಳುತ್ತಾನೆಂದು. "ಪಾಪಿ ಸೀತೆ ಮೈ ಮೇಲಿರುವಂತಾ ಒಡವೇ ಬಂಗಾರನೆಲ್ಲಾ ಕಳಚುಸುಬುಟ್ಟು, ಉಟ್ಟಂತ ಸೀರೆನೆಲ್ಲಾ ಅಳೀಸಿಕೊಂಡು ಹುಟ್ಟು ನಿರ್ವಾಣದಲ್ಲಿ ಅವಳ್ನ ನಿಲ್ಲಸ್ಬುಟ್ಟು ಕೂದು ಬಾರಯ್ಯಾ ಪಾಪಿ ಸಿರವ" ಎಂದು ಆಜ್ಞಾಪಿಸುತ್ತಾನಂತೆ! ಅದರಂತೆ ಸೀತೆ ತನ್ನ ಕೂದಲಿನಿಂದ ಮೈಮುಚ್ಚಿಕೊಂಡು ನಿಲ್ಲಬೇಕಾಗುತ್ತದೆ. ಲಕ್ಷ್ಮಣ ಅವಳನ್ನು ಕೊಲ್ಲಲಾರದೇ ಬನ್ನಿ ಮರಕ್ಕೆ ಹೊಡೆದು ಅದರಲ್ಲಿ ರಕ್ತ ಬರುವಂತೆ ಪ್ರಾರ್ಥಿಸಿ ಗುರುತು ತೆಗೆದುಕೊಂಡು ಹೋಗುತ್ತಾನೆಂದು ಹೇಳಲಾಗಿದೆ. ಆನಂತರ ರಾಮನ ದುಃಖ ಅವನ ಕಣ್ಣೀರು ಮಡುವಾಗಿ ಹರಿಯುವುದನ್ನು ಹೇಳುತ್ತದೆ. ಸಾಯಬೇಕೆಂದು ನೀರಿಗೆ ಬಿದ್ದ ಸೀತೆಯನ್ನು ಎರಡು ಮೀನುಗಳು ತಡೆಯುತ್ತವೆ. ವಾಲ್ಮೀಕಿ ಅವಳಿಗೆ ಬಟ್ಟೆಕೊಟ್ಟು ಕಾಪಾಡುತ್ತಾನೆ. ಅವಳು ಹೆತ್ತಿದ್ದು ಒಂದು ಮಗುವನ್ನು, ಒಂದು ದಿನ ವಾಲ್ಮೀಕಿ ಮಲಗಿದ್ದಾಗ ಸೀತೆ ಸದ್ದಾಗದಂತೆ ಆ ಮಗುವನ್ನು ಎತ್ತಿಕೊಂಡು ಗಂಗೆ ಪೂಜೆಗೆ ಹೋಗಿರುತ್ತಾಳೆ, ಎಚ್ಚರವಾದ ವಾಲ್ಮೀಕಿ ಇದು ತಿಳಿಯದೆ ತೊಟ್ಟಿಲಲ್ಲಿ ಮಗುವಿಲ್ಲದಿರುವುದರಿಂದ ಗಾಬರಿಗೊಂಡು ಅದೇರೀತಿಯ ಮತ್ತೊಂದು ಮಗುವನ್ನು ಸೃಷ್ಟಿಸುತ್ತಾನೆ. ಆಮೇಲೆಸೀತೆ ಮಗುವಿನೊಂದಿಗೆ ಬರುತ್ತಾಳೆ. ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಸೀತೆ ಹಡೆದಿದ್ದು ಅವಳಿಮಕ್ಕಳೆಂದು ಅವಳು ಮೂರ್ಛೆಗೊಂಡಿದ್ದರಿಂದ ಅದು ಅವಳಿಗೆ ತಿಳಿದಿಲ್ಲವೆಂದು ಹೇಳಿ ವಾಲ್ಮೀಕಿ ಅವಳನ್ನು ನಂಬಿಸಿಬಿಡುತ್ತಾನೆ. ಆ ಮಕ್ಕಳಿಗೆ ವಾಲ್ಮೀಕಿ ಹೇಳಿದಂತೆ ರಾಮ ಲಕ್ಷ್ಮಣರೆಂಬ ಹೆಸರನ್ನು ಇಡಲು ಒಪ್ಪದ ಸೀತೆ, ತನ್ನ ಪ್ರಾಣ ಕಾಪಾಡಿದ ಮೀನುಗಳ ಹೆಸರನ್ನೇ ಕುಶಲವರೆಂದು ಇಡುತ್ತಾಳೆ. ಲವಕುಶರ ಕಾಳಗದ ನಂತರ ಎಲ್ಲರೂ ಭೇಟಿಯಾದಾಗ ಸೀತೆಯು ರಾಮನ ಕಾಲು ಹಿಡಿಯಲು ಹೋದಾಗ ರಾಮ ದೂರ ಸರಿಯುತ್ತಾನೆ. ಬೇಸರಗೊಂಡ ಸೀತೆ ಭೂಮಿತಾಯಿಯ ಒಳಕ್ಕೆ ಹೋಗುತ್ತಿದ್ದಾಗ ರಾಮ ಅವಳ ಕೈಯನ್ನು

**ಹಿಡಿಯುತ್ತಾನೆ. ಅವನ ಕೈಗೆ ಕೈಬದಲು ಒಂದು ಅರಿಸಿನದ ಕೊನೆಯೂ, ಕೂದಲನ್ನು ಹಿಡಿದಾಗ ದರ್ಬೆಯೂ ಬರುತ್ತದೆ. ಕಾಲ ಕೆಟ್ಟಿತೆಂದು ತಿಳಿದ ರಾಮ ವೈಕುಂಟಕ್ಕೆ ಹೊರಟುಹೋದನೆಂದು ಈ ರಾಮಾಯಣದಲ್ಲಿ** ವರ್ಣಿಸಲಾಗಿದೆ. ಬೇಟೆಗೆ ಹೊರಟ ರಾಮನ ಹಿಂದೆ ಸೀತೆ ಹಟ ಹಿಡಿದು ಕಾಡಿಗೆ ಬರುವುದು ಕೋಪಗೊಂಡ ರಾಮ ಅವಳನ್ನು ಕೊಲ್ಲಲು ಹೋದಾಗ ಅವಳ ಹೊಟ್ಟೆಯಲ್ಲಿರುವ ಮಕ್ಕಳ ಬಿಂಬ ಕಾಣಿಸಿ ಬಿಟ್ಟುಬಿಟ್ಟನೆಂಬ ಕಥೆಗಳು ಇದರಲ್ಲಿವೆ. ತಂಬೂರಿ ಹಾಡಿನಲ್ಲಿ ಅಶ್ವಮೇಧದ ಪ್ರಸ್ತಾಪವಿಲ್ಲ ಬದಲಿಗೆ ಬೇಟೆಗೆ ಹೋಗಿದ್ದ ರಾಮಲಕ್ಷ್ಮಣರ ಕುದುರೆಯನ್ನು ಲವಕುಶರು ಕಟ್ಟಿಹಾಕಿದರೆಂದು, ಯುದ್ಧದಲ್ಲಿ ಲಕ್ಷ್ಮಣನ ತಲೆಯನ್ನು ಲವಕುಶರು ತೆಗೆದರೆಂದು ಅದನ್ನು ಶಿವನ ಕೃಪೆಯಿಂದ ಮತ್ತೆ ಅವನು ಪಡೆದನೆಂದು ವಿವರಿಸಲಾಗಿದೆ. ಮಹಾದೇವಸ್ವಾಮಿಯವರ ಹಾಡಿನಲ್ಲಿ ವಾಲ್ಮೀಕಿ ಕಥೆಯ ಪ್ರಭಾವವಿದೆ. ಒಟ್ಟಿನಲ್ಲಿ ಈ ಜಾನಪದರು ಹಾಡಿರುವ ರಾಮಾಯಣದ ಪ್ರಸಂಗಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಇವೆ.

ರಾಮಯಣ ಕಥೆಯನ್ನೊಳಗೊಂಡ ಕೆಲವು ಜಾನಪದ ಬಿಡಿ ಹಾಡುಗಳೂ ಇವೆ. **'ಸೀತಾ ದುಃಖದ ಹಾಡು'** ಎಂಬ ಸಣ್ಣ ಕಾವ್ಯದಲ್ಲಿ ಸೀತೆ ತನ್ನ ಕಥೆಯನ್ನು ದೂತನಾಗಿ ಬಂದ ಹನುಮಂತನ ಮುಂದೆ ತೋಡಿಕೊಳ್ಳುತ್ತಿರುವಂತೆಯೂ, ಹನುಮನು ಅದಕ್ಕೆ ಉತ್ತರಿಸುವಂತೆಯೂ ನಿರೂಪಿಸಲಾಗಿದೆ. ಪ್ರತಿ ಸಾಲಿನಕೊನೆಯಲ್ಲೂ ರಾಮರಾಮ ಎಂದು ಬರುತ್ತದೆ. ಈ ಹಾಡು ಸೀತೆಯ ಮನದಾಳದ ಅಳಲನ್ನು ತೀವ್ರವಾಗಿ ಬಿಡಿಸಿಟ್ಟಿದೆ. "ಗಾಳಿಗೊಡ್ಡಿದ ದೀಪದಂತೆ ಕಂಗೆಡುತಿದ್ದೆ, ಬಾಳುವ ಮನವಿಲ್ಲ ಮರಣಕುಪಾಯವಾಯ್ತು ರಾಮರಾಮ, "ಎನ್ನನೆನೆವರೋ ಎನೆಯಾರೋ ಎನಗೊಮ್ಮೆ ಹೇಳಯ್ಯ ರಾಮ ರಾಮ" ಎಂದು ಅವಳು ಕೇಳಿದಾಗ ಹನುಮನು "ನಿಮ್ಮ ಚಿಂತೆ ಚಿಂತೆ ನಿಮ್ಮ ಧ್ಯಾನವೇ ಧ್ಯಾನ ರಾಮರಾಮ, ನಿಮ್ಮ ಹಂಬಲಿಸಿ ಬಡವಾದ ರಘುಪತಿ ರಾಮರಾಮ" ಎಂದು ಉತ್ತರಿಸುತ್ತಾನಲ್ಲದೆ. ರಾಮನನ್ನು "ಒಡಗೊಂಡು ಬರುವೆನು ನಾಳೀಗೆಂಟುದಿನಕೆ ರಾಮಾ ರಾಮಾ, ಕಡು ಪಾಪಿ ರಾವಣನ ಖಳನ ಭಂಜಿಸುವೋರು" ಎಂದು ಅವಳಿಗೆ ಭರವಸೆಯನ್ನೂ ನೀಡುತ್ತಾನೆ. ಈ ಹಾಡು ವಾಲ್ಮೀಕಿ ರಾಮಾಯಣಕಥೆಯನ್ನು ಅನುಸರಿಸಿದ್ದು, ಸಂಪ್ರದಾಯದ ಹಾಡಿನ ಲಕ್ಷಣವನ್ನು ಪಡೆದಿದೆ. ಇದನ್ನು ಅನೇಕ ಬ್ರಾಹಣ ಸ್ತ್ರೀಯರು (ಸುಶೀಲಮ್ಮ ನಿಟ್ಟೂರು) ನಿತ್ಯ ಸ್ನಾನಾನಂತರದಲ್ಲಿ ಸ್ತೋತ್ರಪಠಣದ ಜೊತೆಗೆ ಹಾಡಿಕೊಳ್ಳುತ್ತಾರೆ. ಪುರಂದರ ದಾಸರ "ಏನೆಂದಳಯ್ಯಾ ಸೀತೆ ಹನುಮ ಏನು ಪೇಳಿದಳಯ್ಯ ಪ್ರೀತೆ' ಎಂದು ಆರಂಭವಾಗುವ ಪುರಂದರ ದಾಸರ ಕೀರ್ತನೆಯೊಂದು ರಾಮ ಹಾಗೂ ಹನುಮರ ನಡುವಿನ ಸಂಭಾಷಣಾರೂಪದಲ್ಲಿದೆ "ಸ್ವಾಮಿರಾಮರ ಪಾದವ ಎಲೆ ಕಪಿಯೆ ನಾನೆಂತು ಬಿಟ್ಟಿರಲಿ, ದಾನವನ ಶಿರತರಿದು ಲಂಕೆಯ ಪುರವನ್ನು ದಹನವ ಮಾಡೆಂದಳೋ ರಾಮ" ಎಂದು ಹನುಮಂತನು ರಾಮನಿಗೆ ಸೀತೆಯ ನಿಷ್ಠೆಯನ್ನೂ, ಸಂಕಟವನ್ನು, ಮನದಾಳದ ಹಂಬಲವನ್ನೂ, ರಾವಣನ ಮೇಲಿನ ಕೋಪವನ್ನೂ ಬಿಡಿಸಿಹೇಳುವ ಕೀರ್ತನೆ ಭಾವಪೂರ್ಣವಾಗಿದೆ.

### ಆಧುನಿಕ ರಾಮಾಯಣ ಕೃತಿಗಳು

**ಪ್ರಾಚೀನ ಕವಿಗಳಂತೆಯೇ ಆಧುನಿಕ ಕನ್ನಡ ಕವಿಗಳೂ ರಾಮಾಯಣಕ್ಕೆ ಆಧ್ಯತೆ ನೀಡಿದ್ದಾರೆ. ಪುರಾತನವಾದ ಹಾಗೂ ಪುರಾಣದ ವಸ್ತುಗಳನ್ನು ಆರಿಸಿಕೊಂಡು ಸಮಕಾಲೀನಗೊಳಿಸುವ, ತಮ್ಮ ಹೊಸ ದೃಷ್ಟಿಕೋನದಿಂದ ದರ್ಶಿಸುವ, ವೈಚಾರಿಕ ಮತ್ತು ವೈಜ್ಞಾನಿಕ ಪ್ರಜ್ಞೆಯಿಂದ ಶೋಧಿಸಿದ್ದಾರೆ. ಸಮಕಾಲೀನ ತವಕ ತಲ್ಲಣಗಳ ಮೂಲಕ ಅಲ್ಲಿನ ಪಾತ್ರಗಳೊಂದಿಗೆ ಸನ್ನಿವೇಶಗಳೊಂದಿಗೆ ಮುಖಾಮುಖಿಯಾಗಿದ್ದಾರೆ. ಮರುದರ್ಶನ ಮಾಡಿದ್ದಾರೆ.** ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೂಲ ಮತ್ತು ಉತ್ತರ ರಾಮಾಯಣದ ಹಲವು ಪ್ರಸಂಗಗಳು, ಪಾತ್ರಗಳು, ಸನ್ನಿವೇಶಗಳು ನವನಿರ್ಮಾಣಗಳಲ್ಲಿ ಸೌಂದರ್ಯ, ಸಾಂಕೇತಿಕತೆ, ಧ್ವನಿಗಳ ಮೂಲಕ ಕಾವ್ಯ, ಗದ್ಯ, ನಾಟಕ, ಎಲ್ಲ ಪ್ರಕಾರಗಳಿಗೂ ವಸ್ತುವಾಗಿವೆ, ವಿಮರ್ಶೆಗೆ ಒಳಪಟ್ಟಿವೆ.

**ಮುಳಿಯ ತಿಮ್ಮಪ್ಪಯ್ಯನವರು** 'ನವನೀತರಾಮಾಯಣ'[25.] ಎಂಬ ಹೆಸರಿನಲ್ಲಿ ಸರಳ ರಗಳೆಯಲ್ಲಿ ಬರೆದಿದ್ದಾರೆ. ತಾಯಿಯಿಂದ ಪ್ರಭಾವಿತವಾಗಿ ಈಕೃತಿಯನ್ನು ಬರೆದು ಆಕೆಗೇ ಅರ್ಪಿಸಿದ್ದಾರೆ. ಇದರಲ್ಲಿ ರಾಮನು ವನವಾಸಕ್ಕೆ ತೆರಳುವವರೆಗಿನ ಕಥೆ ಮಾತ್ರವಿದೆ. ಉಳಿದ ಭಾಂಡಗಳನ್ನು ಬರೆಯುವ ಉದ್ದೇಶವಿದ್ದಿತಾದರೂ ಅದು ಅವರಿಗೆ ಸಾಧ್ಯವಾಗಿಲ್ಲದಿರುವುದರಿಂದ ಇದೊಂದು ಅಪೂರ್ಣ ಕೃತಿ

ಎನ್ನಬೇಕಾಗುತ್ತದೆ. ಈ ಕಾವ್ಯದ ಶೈಲಿಯನ್ನು 'ನಿಯೋಕ್ಲಾಸಿಕಲ್ ಮಾದರಿ' ಎಂದು ವರ್ಣಿಸುವ ಡಾ.ಕೆ.ವಿ.ನಾರಾಯಣ ರವರು ಇದರಲ್ಲಿ ಕಥನ ಹಾಗೂ ಕಥಾನಕಗಳೆರಡೂ ಬೆರೆತು ಯಕ್ಷಗಾನದ ಭಾಗವತದ ಭೂಮಿಕೆಯನ್ನು ಹೋಲುತ್ತಿದ್ದು, ಒಂದು ಬಗೆಯ ದೇಶ್ಯೀಕರಣಕ್ಕೊಳಗಾಗಿದೆ ಎನ್ನುತ್ತಾರೆ.[26] ಇದರಲ್ಲಿ ಜೈನ ಸಂಪ್ರದಾಯದ ಕಥೆಯಿದೆ. ಆರಂಭದಲ್ಲಿ ಮಲಯಾಚಲದ ವರ್ಣನೆಯಿಂದ ಆರಂಭವಾಗುವ ಕಾವ್ಯದಲ್ಲಿ ಕಾಡಿನ ಸೌಂದರ್ಯದ ವರ್ಣನೆಯಿದ್ದು ಇದು ಬನವಸೆನಾಡಿನ ವರ್ಣನೆಯೇ ಆಗಿದೆ. ಎರಡನೆಯ ಕಾಂಡದಲ್ಲಿ ರಾವಣನ ಹುಟ್ಟನ್ನು ಅದ್ಭುತವಾಗಿ ವರ್ಣಿಸಿದ್ದಾರೆ. ಭೇರುಂಡವೋ ಗರುಡನೋ ಎಂದು ತಿಳಿಯದಾಗಿ ಗಂಡವೇ ನೆಲಕ್ಕಿಳಿಯುತ್ತಿರುವಂತೆ "ಕಾಣುತ ಕಣ್ಣಿಲ್ಲ, ಕೇಳುತಾ ಕಿವಿಯಿಲ್ಲ, ಭಯರಸಕೆ ಪಕ್ಕಾಗಿ ಮಿಡುಮಿಡುಕುತೆಕ್ಕಾಗಿ ಬೆದರಿಹೋಗುತ್ತಿರುವಾಗ ಒಂದು ಹದ್ದು ನೆಲಕ್ಕಿಳಿಯುವ ರಭಸಕ್ಕೆ ಒಂದು ವ್ಯಕ್ತಿ ಉದ್ಭವಿಸುತ್ತಾನೆ ಅವನೇ ರಾವಣ. ರಾವಣ ವೇದವತಿಯನ್ನು ಕೆಣಕಿ ಶಾಪಕ್ಕೆ ಗುರಿಯಾಗುವುದು, ಸೀತೆಯನ್ನು ರಾಮನು ವಿವಾಹವಾಗುವುದನ್ನು ತಪ್ಪಿಸಲು ರಾವಣಾದಿಗಳು ಮಾಯಾ ಮಿಥಿಲೆಯನ್ನು ಸೃಷ್ಟಿಸುವುದು, ವಿಶ್ವಾಮಿತ್ರನ ಉರಿಗಣ್ಣಿಗೆ ಅದು ನಾಶವಾಗಿ ರಾಮಲಕ್ಷ್ಮಣರು ಮಿಥಿಲೆಯನ್ನು ಸೇರುವುದು, ಶಿವಧನುಸ್ಸನ್ನು ಮುರಿದು ರಾಮ ಸೀತೆಯನ್ನು ವರಿಸುವುದು, ಶಿವಧನುವನ್ನು ಮುರಿದುರಿಂದ ರಾಮನು ಘಾಸಿಗೊಳ್ಳುತ್ತಾನೆ. ಪರುಶುರಾಮ ವ್ಯಗ್ರನಾಗುತ್ತಾನೆ. 'ಸಾಕೇತಕೆ ಉಳಿವಿಲ್ಲ, ರಾಮಂಗೆ ಆಳ್ಕೆಯಿಲ್ಲ'ವೆಂದು ಚಿಂತಿಸಿ, ರಾವಣನ ಮಂತ್ರಿಯು ಹಿಂದೆ ದಶರಥನು ಕೊಂದಿದ್ದ ಶಂಬರನೆಂಬ ರಾಕ್ಷಸನ ಮಗಳು ಮಂಥರೆಯನ್ನು ಈ ಕಾರ್ಯ ಸಾಧಿಸಲು ಪ್ರೇರೇಪಿಸಿ ಅಯೋಧ್ಯೆಗೆ ಸಾಗಹಾಕುತ್ತಾನೆ. ಮಂಥರೆಯು ಹೊಸೆದ ಜಾಲದಲ್ಲಿ ರಾಮನು ರಾಜ್ಯಕಳೆದುಕೊಳ್ಳುತ್ತಾನೆ. ತೆಂಕನಾಡಿನ ಕಾಡಿಗೆ ರಾಮನೊಡನೆ ಸೀತೆ ಬಂದೇ ಬರುವಳೆಂದು ರಾವಣ ಲೆಕ್ಕಹಾಕುತ್ತಾನೆ. ಅದರಂತೆ ರಾಮ ಸೀತೆಯೊಡನೆ ಚಿತ್ರಕೂಟಕ್ಕೆ ಬಂದು ಸೇರುತ್ತಾನೆಂಬಲ್ಲಿಗೆ ಆ ಅಧ್ಯಾಯ ಮುಗಿದೆ. ಆಕರ್ಷಕವಾದ ಭಾಷಾಶೈಲಿ ಹೊಸ ಹೊಳಹುಗಳಿಂದ ಓದುಗರನ್ನು ಆಕರ್ಷಿಸುವ ಈ ಕಾವ್ಯ ಅಪೂರ್ಣವಾಗಿದೆ. ಈ ಕಾವ್ಯದ ಕೆಲವು ಹೊಸ ಹೊಳಹುಗಳು ಮುಂದೆ ಕುವೆಂಪು, ಪೋಲಂಕಿರಾಮಮೂರ್ತಿ ಮುಂತಾದವರಮೇಲೆ ಪ್ರಭಾವಬೀರಿದೆ ಎಂದು ವಿದ್ವಾಂಸರು ಭಾವಿಸುತ್ತಾರೆ.

**ಕುವೆಂಪುರವರ** ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವು ಒಟ್ಟು ನಾಲ್ಕು ಸಂಪುಟಗಳಿದ್ದು, 50 ಅಧ್ಯಾಯಗಳನ್ನು ಒಳಗೊಂಡಿದೆ. ಸೋಪಜ್ಞತೆ, ನವದರ್ಶನವುಳ್ಳ ಉತ್ಕೃಷ್ಟಕೃತಿಯಾಗಿದ್ದು, ತನ್ನ ನಂತರದ ಕಾವ್ಯಗಳ ಮೇಲೆ ಅಪಾರ ಪ್ರಭಾವಬೀರಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯಗಳ ಹೆದ್ದಾರಿಯನ್ನೇ ನಿರ್ಮಿಸಿದ ಕಾವ್ಯವಿದಾಗಿದ್ದು, ಜ್ಞಾನಪೀಠಪ್ರಶಸ್ತಿಯನ್ನು, ಪಂಪಪ್ರಶಸ್ತಿಯನ್ನು ಕವಿಗೆ ಗಳಿಸಿಕೊಟ್ಟಿದೆ. **"ಕಥೆ ನಿನ್ನದಾದೊಡಂ ಕೃತಿನನ್ನ ದರ್ಶನಂ" ಎಂದು ಕವಿಯೇ ವಾಲ್ಮೀಕಿಗೆ ಅರಿಕೆ ಮಾಡಿಕೊಂಡಿರುವಂತೆ, ಕುವೆಂಪುರವರು ವಾಲ್ಮೀಕಿ ರಾಮಾಯಣ, ಜೈನ, ಪುರಾಣಾಂತರ್ಗತ ರಾಮಾಯಗಳೆಲ್ಲದರ ಪ್ರಭಾವಕ್ಕೆ ಒಳಗಾಗಿಯೂ ತಮ್ಮ ದರ್ಶನದಿಂದ ಯುಗಧರ್ಮ, ವಿಶ್ವಧರ್ಮ ಹಾಗೂ ಸಮಾನತೆಯ ತತ್ವಗಳನ್ನು ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. ಶ್ರೀರಾಮನ ಕಿರೀಟದ ಮಣಿಯ ಸೌಂದರ್ಯದಷ್ಟೇ ಹುಲ್ಲಿನ ಮೇಲಿನ ಹಿಮ ಬಿಂದುವಿನ ಸೌಂದರ್ಯವೂ ಕವಿಗೆ ಮುಖ್ಯವೆನಿಸುತ್ತದೆ. ಅವರಿಗೆ ಯಾವುದೂ ಯಕಃಚಿತವಲ್ಲ, ಈ ಸೃಷ್ಟಿಯ ಜಡ ಚೇತನಗಳೆಲ್ಲಕ್ಕೂ ತನ್ನದೇ ಆದ ಒಂದು ಲೀಲೆಯಿದೆ ಎಂದು ಕವಿ ಭಾವಿಸಿದ್ದಾರೆ. ಅವರ ದರ್ಶನದಿಂದ ಇಲ್ಲಿನ ಅನೇಕ ಸನ್ನಿವೇಶಗಳು, ಪಾತ್ರಗಳು ಮರುಹುಟ್ಟು ಪಡೆದುಕೊಂಡಿವೆ. ಹಿಂಸೆಯಿಂದ ಯಾವ ಸುಂದರ ಸೃಷ್ಟಿಯೂ ಸಾಧ್ಯವಿಲ್ಲವೆಂಬ ಕುವೆಂಪು ಅವರ ವಿಚಾರಕ್ಕೆ ತಕ್ಕಂತೆ ಇಲ್ಲಿ ಅನೇಕ ಬದಲಾವಣೆಗಳಾಗಿವೆ. ದಶರಥನ ಅಶ್ವಮೇಧಯಾಗದ ವರ್ಣನೆಯಿಲ್ಲ, ಇಲ್ಲಿನ ಮಂಥರೆಗೆ ಮರುಹುಟ್ಟು ದೊರಕಿದೆ, ಅವಳು 'ಮಮತೆಯ ಸುಳಿ'ಯಾಗಿದ್ದಾಳೆ. ಪಾಪಿಗೂ ಉದ್ಧಾರವುಂಟು ಈ ಸೃಷ್ಟಿಯ** ವ್ಯೂಹದಲ್ಲಿ ಎಂಬ ಕಾರಣಕ್ಕೆ ಪ್ರತಿಯೊಂದು ವ್ಯಕ್ತಿಯು ಕಾಲವಶದಿಂದ ಭಾವವಶದಿಂದಾಗಿ ಮಾಡುವ ತಪ್ಪುಗಳನ್ನು ತಿದ್ದಿಕೊಳ್ಳಲು ಪರಿವರ್ತನೆಗೊಳ್ಳಲು ಅವಕಾಶವಿದೆ ಎಂಬುದನ್ನು ಸಾರುತ್ತಾ ಕವಿ ಇಲ್ಲಿ ಮಂಥರೆ, ವಾಲಿ, ರಾವಣ ಇತ್ಯಾದಿ ಪಾತ್ರಗಳನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ. ಅವರ ಅಂತರಂಗವನ್ನು ಬಿಚ್ಚಿಟ್ಟಿದ್ದಾರೆ. ಮೂಲ ರಾಮಾಯಣದ ಕಥೆಯಲ್ಲಿ ನೇಪಥ್ಯಕ್ಕೆ ಸರಿದಿರುವ ಅನೇಕ ಪಾತ್ರಗಳನ್ನು

ಪ್ರಸ್ತುತ ಯುಗಧರ್ಮದ ಹಿನ್ನೆಲೆಯಲ್ಲಿ ಮುನ್ನೆಲೆಗೆ ತಂದು ಒಂದು ಹೊಸ ಹೊಳಹನ್ನು ಸಂದೇಶವನ್ನೂ ತಂದಿದ್ದಾರೆ. ಇಲ್ಲಿ ಲಕ್ಷ್ಮಣನ ಮಡದಿ ಊರ್ಮಿಳೆಗಾಗಿಯೇ ಒಂದು ಅಧ್ಯಾಯವಿದೆ. ವಿಭೀಷಣನ ಮಗಳು ಅನಲೆಯ ಪಾತ್ರ ಅತ್ಯಂತ ಚೇತೋಹಾರಿಯಾಗಿ ಮೂಡಿದೆ. ಸೀತೆಗೆ ಲಕ್ಷ್ಮಣನಿಂದ ರೇಖೆಯನ್ನು ಹಾಕಿಸದಿರುವುದು, ಅಮಲೆಯ ಮೂಲಕ ರಾಮನೂ ಅಗ್ನಿಪ್ರವೇಶವನ್ನು ಮಾಡಬೇಕೆಂದು ಹೇಳಿಸಿರುವುದು ಇವೆಲ್ಲವೂ ಈ ಕಾವ್ಯವನ್ನು ಆಧುನಿಕ ಸಂವೇದನೆಗಳಿಗೆ ಮಿಡಿಯುವಂತೆ ಮಾಡಿರುವುದರ ಗುರುತುಗಳಾಗಿವೆ. ಸ್ತ್ರೀ ಪುರುಷರ ಸಂಬಂಧದಲ್ಲಿ ಒಂದು ನೈತಿಕತೆಯನ್ನು ಪ್ರತಿಪಾದಿಸುವ ಕುವೆಂಪುರವರ ಮನಸ್ಸು ವಾನರರನ್ನು ಕಪಿಧ್ವಜರೆಂದೂ ಅವರು ವನಚರರಂತೆ ವೇಷಗಳನ್ನು ಧರಿಸುತ್ತಿದ್ದರೆಂಬಂತೆಯೂ ಚಿತ್ರಿಸಿದ್ದಾರೆ. ಹಾಗೇ ವಾಲಿ ಸುಗ್ರೀವರ ಮಡದಿಯರ ಪರಪುರುಷ ಸಂಸರ್ಗವನ್ನು ತಪ್ಪಿಸಿದ್ದಾರೆ. ವಾಲಿ ಸತ್ತಿರುವನೆಂದು ತಿಳಿದಾಗ ತಾರೆ ತಪಸ್ಸಿಗೆ ಕೂತಳೆಂದೂ, ವಾಲಿ ಸುಗ್ರೀವನನ್ನು ಸೋಲಿಸಿ ರುಮೆಯನ್ನು ಸೆರೆಯಲ್ಲಿಟ್ಟನೆಂದೂ ರಾಮನಿಂದ ವಾಲಿ ಹತವಾದಾಗ ಅವನೊಂದಿಗೆ ತಾರೆ ಸಹಗಮನಮಾಡಿದಳೆಂದೂ ಕಥೆಯನ್ನು ಬದಲಿಸಿದ್ದಾರೆ. “ಮಗಳೆನಗೆ ರುಮೆ ತಾರೆ ತಾಂ ಸಾಕ್ಷಿ” ಎಂದು ವಾಲಿ ಸಾಯುವ ಮುನ್ನ ಹೇಳುತ್ತಾನೆ. ವಾಲಿಯು 'ಪರಸತಿಗಳಿಪಿದವನಲ್ಲ' ಎಂದು ತಿಳಿದಮೇಲೆ ತನ್ನದು ತಪ್ಪಾಯಿತೆಂದು ರಾಮ ವಾಲಿಯ ಕ್ಷಮೆಯಾಚಿಸುವುದು ವಿಶೇಷವಾಗಿದೆ. ರಾವಣನು ತನ್ನ 'ಜೀವಮಾನದಲ್ಲಿ ತಾನು ಪತಿವ್ರತೆಯರನ್ನೇ ನೋಡಿಲ್ಲ, ನೋಡುವ ಬಯಕೆಯಿದೆ' ಎನ್ನುವುದು, ಧ್ಯಾನಮಾಲಿನಿಯು ರಾವಣನಿಗೆ 'ತನ್ನ ದೇಹ ಮಾತ್ರ ವಶವಾಗಿತ್ತೇ ಹೊರತು ಮನಸ್ಸಲ್ಲ'ವೆನ್ನುವುದು ಸ್ತ್ರೀ ಪುರುಷರ ಸಂಬಂಧದ ಶುಚಿತ್ವವನ್ನು ಕುರಿತಂತೆ ಕುವೆಂಪುರವರಿಗಿರುವ ವಿಚಾರವನ್ನು ಸ್ಪಷ್ಟಪಡಿಸುತ್ತವೆ.

ಇಲ್ಲಿ ರಾಮನನ್ನು ಹನುಮಂತನನ್ನು ನರಹರಿಕವಿಯಂತೆ ದೈವತ್ವಕ್ಕೆ ಏರಿಸಿಲ್ಲ. ಕಾಡಿನಲ್ಲಿ ರಾಮನು ಅನೇಕ ರಾಕ್ಷಸರನ್ನು ಕೊಲ್ಲುವುದನ್ನು ಕುರಿತು ಸೀತೆಯು ಆಕ್ಷೇಪವೆತ್ತುತ್ತಾಳೆ. ಅವರ ಸಹಜವಾದ ಪ್ರಾಕೃತಿಕ ನೆಲೆಗೆ ಹೊರಗಿನವರಾಗಿ ನಾವು ಬಂದು ಆ ಕಾಡಿನ ಮೂಲಿಗರನ್ನು ಆಕ್ರಮಣ ಮಾಡುವುದು, ಕೊಲ್ಲುವುದು ಎಷ್ಟು ಸರಿ ಎಂಬ ಮಹತ್ವದ ಪ್ರಶ್ನೆಯನ್ನು ಸೀತೆಯಮೂಲಕ ಕೇಳಿಸಿ ಕುವೆಂಪು ಸಾಮ್ರಾಜ್ಯಶಾಹಿ ಮನೋಭಾವವನ್ನೇ ಇಲ್ಲಿ ಖಂಡಿಸಿದ್ದಾರೆ. ಸಮುದ್ರೋಲ್ಲಂಘನ ಹಾಗೂ ಲಂಕೆಯ ದಹನ ವಿಚಾರಗಳನ್ನು ಕೊಂಚ ಬದಲಾಯಿಸಿದ್ದಾರೆ. ಇನ್ನು ರಾವಣನ ಪಾತ್ರ ಚಿತ್ರಣದಲ್ಲಿ ಕುವೆಂಪು ನಾಗಚಂದ್ರನ ಉದಾತ್ತ ರಾವಣನನ್ನು ಬಹಳವಾಗಿ ಮೆಚ್ಚಿಕೊಂಡಿರುವುದರ ಜೊತೆಗೆ ಕಡೆಯಲ್ಲಿ ಅವನ ಮನಃ ಪರಿವರ್ತನೆಯನ್ನು ವಿಶೇಷವಾಗಿ ಪರಿಭಾವಿಸಿದ್ದಾರೆ. ರಾಮನ ಕತ್ತರಿಸಿದ ಮಾಯಾ ಶಿರಸ್ಸನ್ನು ತೋರಿಸಿ ಸೀತೆಯನ್ನು ವಶಮಾಡಿಕೊಳ್ಳಬಹುದೆಂಬ ಸಲಹೆಯನ್ನು ಶಾರ್ದೂಲನು ನೀಡಿದಾಗ “ಹಾಗೆ ಮಾಡುವುದರಿಂದ ತನ್ನ ವಶವಾಗುವುದು ಸೀತೆಯ ಹೃದಯವಲ್ಲ ಅವಳ ಕಳೇಬರಹ” ಎಂದು ಆ ಸಲಹೆಯನ್ನು ತಿರಸ್ಕರಿಸುವ ರಾವಣನಲ್ಲಿದ್ದ ಮಾನವೀಯ ಗುಣಗಳ ಕಡೆಗೆ ಒತ್ತುನೀಡಿದ್ದಾರೆ. ರಾವಣನು ದಶಕಂಠನಲ್ಲವೆಂದೂ, “ನಾನೇ ಆ ರಾವಣನ ಮೂಲ ಬಲವೆಂದು” ರಾಮನು ಹನುಮನಿಗೆ ರಹಸ್ಯವನ್ನು ಹೇಳಿದನೆನ್ನುವುದು ಇತ್ಯಾದಿ ಹೊಸ ಹೊಳಹುಗಳನ್ನು ತಂದು ರಾವಣತ್ವವು ರಾಮತ್ವದೊಡನೆ ಒಂದಾಯಿತು ಎಂಬಂತೆ ಚಿತ್ರಿಸಿದ್ದಾರೆ. ಅಲ್ಲದೆ ಸೀತೆಯ ಪಾತಿವ್ರತ್ಯದಿಂದ ಸೋತ ರಾವಣನು ಪುನರ್ಜನ್ಮದಲ್ಲಿ ಮಗುವಾಗಿ ಅವಳ ಪ್ರೀತಿಯ ಆಲಿಂಗನವನ್ನು ಪಡೆಯುತ್ತಾನೆಂದು ಪ್ರತಿಪಾದಿಸಿದ್ದಾರೆ. ರಾವಣ ಕುಂಭಕರ್ಣರು ಲವಕುಶರಾಗಿ ಜನಿಸುವ ಅಭೂತ ಪೂರ್ವ ಚಿತ್ರಣವನ್ನು 'ದಶಾನನಸ್ವಪ್ನಸಿದ್ಧಿ'ಯ ಭಾಗದಲ್ಲಿ ತಂದಿದ್ದಾರೆ. ಹೀಗೆ ಕೆಲವು ಅತಿಮಾನುಷ ವಿವರಗಳು ಪ್ರಸಂಗಗಳನ್ನೂ ಕುವೆಂಪು ತಂದಿದ್ದಾರೆ. ಒಟ್ಟಿನಲ್ಲಿ ಶ್ರೀರಾಮಾಯಣ ದರ್ಶನಂ ಕೃತಿಯು ವಿಮರ್ಶಕರನ್ನೂ ಸಂಸ್ಕೃತಿ ಚಿಂತಕರನ್ನೂ ತೀವ್ರವಾಗಿ ಸೆಳೆದಿದೆ. ಇಲ್ಲಿ ವಿಶಿಷ್ಟ ಪಾತ್ರಚಿತ್ರಣ, ಕಾವ್ಯಧರ್ಮ, ಯುಗಧರ್ಮ, ನೀತಿನಡಾವಳಿಗಳು, ರಾಜಧರ್ಮ, ಸಮಕಾಲೀನ ಸಂವೇದನೆಗಳು, ವೈಚಾರಿಕತೆ, ಪ್ರಕೃತಿಕೇಂದ್ರಿತ ಚಿಂತನೆ, ವಿಜ್ಞಾನ ಇತ್ಯಾದಿ ಅನೇಕ ವಿಚಾರಗಳನ್ನು ಕುರಿತು ವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ.

**ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು** ಶ್ರೀರಾಮ ಪಟ್ಟಾಭಿಷೇಕಂ ಕೃತಿಯನ್ನು ಸರಳರಗಳೆಯಲ್ಲಿ ರಚಿಸಿದ್ದಾರೆ.

ಮುನ್ನುಡಿಯಲ್ಲಿ ಅವರೇ ಹೇಳಿರುವಂತೆ ರಾಮಾಯಣದಲ್ಲಿರುವ ದೈವಸ್ವದ ಕಲ್ಪನೆಯನ್ನು ದೇವತೆಗಳ ಮಧ್ಯ ಪ್ರವೇಶವನ್ನೂ ಪವಾಡಗಳನ್ನೂ ಅಸಹಜ ಘಟನೆಗಳನ್ನೂ ಕೈಬಿಟ್ಟಿದ್ದಾರೆ. ಮಾಸ್ತಿಯವರ ಸಹಜ ಕಥನ ಶೈಲಿಯಾದ ವಾಸ್ತವಮಾರ್ಗದಲ್ಲಿ ಸರಳವಾಗಿ ರಚಿತವಾಗಿರುವ ಈ ಕೃತಿಯು ದೈವತ್ವ, ಅತಿಮಾನುಷ ಕಲ್ಪನೆಗಳಿಲ್ಲದ ಕನ್ನಡದ ಏಕೈಕ ರಾಮಾಯಣ ಕಾವ್ಯವಾಗಿದೆ. ನಾನು ನಂಬುವ ಸಂಗತಿಗಳನ್ನು ಇಟ್ಟುಕೊಂಡು ನಂಬದ ಸಂಗತಿಗಳನ್ನು ಬಿಟ್ಟು ರಚಿಸುವ ಕಾವ್ಯವು ಕೆಲವರಿಗೆ ಇಷ್ಟವಾಗಬಹುದು, ಇಲ್ಲದಿರಬಹುದು ಎನ್ನುವ ಅರಿವು ಕವಿಗೆ ಇತ್ತು. ಕನ್ನಡ ಸಾಹಿತ್ಯಲೋಕದಲ್ಲಿ ಈ ಕೃತಿಯನ್ನು ವಿದ್ವಾಂಸರು ಸಹೃದಯರು ಹೆಚ್ಚಾಗಿ ಮೆಚ್ಚಿಕೊಂಡಂತೆ ಕಾಣಿಸುವುದಿಲ್ಲ. ಪ್ರಕ್ಷೇಪಗೊಳ್ಳುವ ಮುನ್ನಿನ ವಾಲ್ಮೀಕಿ ರಾಮಾಯಣದ ಸ್ವರೂಪವನ್ನು ಅವರು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. "ಚೂಪಾದ ವಿಮರ್ಶಕ ಮತಿಯೊಂದು ರಾಮಾಯಣದ ಬಗ್ಗೆ ಕೇಳಬಹುದಾದ ಪ್ರಶ್ನೆಗಳನ್ನೆಲ್ಲಾ ಕವಿ ಕೇಳಿದ್ದಾರೆ. ಅಂಥ ಪ್ರಶ್ನೆಗಳಿಗೆ ಸಮಾಧಾನ ಹೇಳುವಲ್ಲಿ ತಮ್ಮ ವ್ಯಾಪಕವಾದ ಅನುಭವ, ವಿದ್ವತ್ತು, ಲೋಕ ಜ್ಞಾನವನ್ನು ಪ್ರಕಟ ಪಡಿಸಿದ್ದಾರೆ. ಅವರಿಗೆ ರಾಮಾಯಣ ಒಂದು ಕಾವ್ಯ. ಶ್ರೀ ರಾಮ, ದೇವರಾಗಿದ್ದುದರಿಂದ ಶ್ರೇಷ್ಠಮಾನವನಾಗಲಿಲ್ಲ, ಶ್ರೇಷ್ಠ ಮಾನವನಾಗಿದ್ದುದರಿಂದ ದೇವರೆನಿಸಿಕೊಂಡ ಎಂಬ ದೃಷ್ಟಿಯಿಂದ ಈ ಕಾವ್ಯವು ವ್ಯಾಪಕವಾದ ವಿಮರ್ಶೆ ಆಳವಾದ ಆಧ್ಯಯನಗಳಿಗೆ ನಮ್ಮನ್ನು ಆಹ್ವಾನಿಸುತ್ತದೆ. ಈ ಕಾವ್ಯದ ನಿರೂಪಣಾ ತಂತ್ರ, ಸ್ವಂತಿಕೆ, ಮಾರ್ಪಾಟುಗಳು, ಹೊಸ ಸೇರಿಕೆಗಳು, ತೌಲಿಕ ದೃಷ್ಟಿ, ಜೀವನಧೋರಣೆ, ಮಾನವೀಯ ಸಂಬಂಧಗಳು – ಒಂದೊಂದೂ ವಿವರವಾದ ಅಭ್ಯಾಸಕ್ಕೆ ಅವಕಾಶ ಮಾಡಿಕೊಡುತ್ತದೆ".[27] ಈ ತಮ್ಮ ಕಾವ್ಯವು ರಾಮಾಯಣದ ಬಗೆಗಿನ ತಮ್ಮ ನಿಲುವನ್ನು ಪ್ರಕಟಿಸುತ್ತದೆಂದು ಮಾಸ್ತಿಯವರು ಹೇಳಿದ್ದಾರೆ.

ರಾಮ ಸೀತೆಯರ ವನವಾಸದ ಹದಿನಾಲ್ಕು ವರುಷದ ಅವಧಿ ಮುಗಿದ ಮರುದಿನದಿಂದ ಕಥೆಯನ್ನು ಪ್ರಾರಂಭಿಸಿದ್ದು ಕಥೆಯನ್ನು ಸಿಂಹಾವಲೋಕನದ ಕ್ರಮದಲ್ಲಿ ಭಿನ್ನ ಭಿನ್ನ ಪಾತ್ರಗಳ ಮೂಲಕ ಅವರವರ ಅನುಭವಗಳನ್ನು, ವಿಚಾರಗಳನ್ನು ಹೇಳಿಸುವ ಮೂಲಕ ಕಟ್ಟಿಕೊಟ್ಟಿದ್ದಾರೆ. ಹನುಮಂತ, ಗುಹ, ಸುಮಂತ್ರ, ಶತೃಘ್ನ, ಅಂಗದ, ತಾರಾದೇವಿ, ಅನಲಾಕುಮಾರಿ, ಕೌಸಲ್ಯಾದೇವಿ, ಕೈಕಯಿ, ಸುಮಿತ್ರಾ ಊರ್ಮಿಳಾ, ಮಂಥರೆ, ಸೀತಾದೇವಿ ಇವರೆಲ್ಲರೂ ಪರಸ್ಪರರಲ್ಲಿ ಮಾತನಾಡಿಕೊಳ್ಳುವಾಗ ಬಿಚ್ಚಿಕೊಳ್ಳುವ ಅವರ ನೆನಪುಗಳು ಅಪೂರ್ವವಾಗಿದ್ದು ಅವುಗಳಲ್ಲಿ ಅವರವರ ಅಂತರಂಗಗಳು, ಅಭಿಪ್ರಾಯಗಳು ದುಃಖ-ದುಮ್ಮಾನ, ಸುಖ-ಸುಮ್ಮಾನಗಳೆಲ್ಲವೂ ತೆರೆದುಕೊಳ್ಳುತ್ತವೆ. ಈ ತಂತ್ರದಿಂದಾಗಿ ಅನವಶ್ಯಕವಾಗಿ ಸೇರಿಕೊಂಡು ಬಿಡಬಹುದಾದ ಪ್ರಸಂಗಗಳೆಲ್ಲದರ ಭಾರ ಕಡಿಮೆಯಾಗಿ ಒಂದು ಸಂಗ್ರಹಗುಣವೂ ಒಂದು ಸೂಕ್ಷ್ಮ ಒಳನೋಟವೂ ಪ್ರಾಪ್ತವಾಗಿದೆ.

ದಶರಥನ ಪುತ್ರಕಾಮೇಷ್ಠಿಯನ್ನು ಬಿಟ್ಟಿದ್ದು, ರಾಮನು ಉಳಿದ ಸೊದರರಿಗಿಂತ ದೊಡ್ಡವನೆಂದು ಹೇಳಿದ್ದಾರೆ. ಖರದೂಷಣ, ಶೂರ್ಪನಖಿಯರನ್ನು ರಾಕ್ಷಸರೆಂದು ಕರೆದಿಲ್ಲ, ಮತ್ತು ತಪ್ಪುಮಾಡಿದವರಿಗೆ ಕಿವಿಮೂಗುಹರಿಯುವ ಶಿಕ್ಷೆಯನ್ನು ಕೇಳಿಯೇ ಶೂರ್ಪನಖಿ ಹೆದರಿ ಓಡಿಹೋಗುತ್ತಾಳೆ. (ಮೂಗುಹರಿತದ ಶಿಕ್ಷೆಯು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಚಲಾವಣೆಯಲ್ಲಿತ್ತು) ಜಿಂಕೆಯ ವೇಷತೊಟ್ಟು ತಿರುಗುವ ಚಟವಿದ್ದ ತನ್ನ ಬೇಹುಗಾರನಾದ ಮಾರೀಚನನ್ನು ರಾವಣ ಸೀತಾಪಹರಣದ ಸಂದರ್ಭದಲ್ಲಿ ಬಳಸಿಕೊಳ್ಳುತ್ತಾನಷ್ಟೇ, ಜಟಾಯು ಪಕ್ಷಿಯಾಗದೇ ಇಲ್ಲಿ ಒಬ್ಬ ಋಷಿಯೆಂದು ಹೇಳಲಾಗಿದೆ. ಪಕ್ಷಿಯೊಂದು ಸೀತೆಯ ರಕ್ಷಣೆಯ ಹೊಣೆ ಹೊತ್ತು ಹೋರಾಡಿತೆಂಬ ಅತಿಮಾನುಷ ಅಂಶವನ್ನು ಮಾಸ್ತಿ ಒಪ್ಪುವುದಿಲ್ಲ. ಹನುಮಂತನಿಗೆ ಲಂಕೆಯನ್ನು ಸುಟ್ಟುಬಿಡಬೇಕೆನಿಸಿದ್ದು ನಿಜವಾದರೂ ಆ ಕಾರ್ಯದಲ್ಲಿ ತೊಡಗಿದರೆ ತನ್ನ ದೂತ ಕಾರ್ಯದಲ್ಲಿ ವಿಳಂಭವಾಗುವುದೆಂದು ಸುಮ್ಮನಾಗುತ್ತಾನೆ. ಇಲ್ಲಿ ಸೇತುಬಂಧವು ವಿಭಿನ್ನವಾಗಿ ಚಿತ್ರಣಗೊಂಡಿದೆ. ನಳನು ತೆಪ್ಪದೋಣಿಗಳನ್ನು ನಿರ್ಮಿಸುವುದರಲ್ಲಿ ನಿಪುಣನಾದುದರಿಂದ ಅವನ ನೇತೃತ್ವದಲ್ಲಿ ನಾಲ್ಕುನೂರು 'ಸಂಘಟ್ಟ'ಗಳನ್ನು ಒಣಗಿದ ಮರಗಳಿಂದ ನಿರ್ಮಿಸಿ ಸಮುದ್ರವನ್ನು ದಾಟಲಾಯಿತೆಂದು ವಾಸ್ತವದೃಷ್ಟಿಯಲ್ಲಿ ವಿವರಿಸಿದ್ದಾರೆ. ಸಂಜೀವಿನಿ ಪರ್ವತದ ವೈಭವೀಕರಣವನ್ನು ಒಪ್ಪದೆ, ವಾನರ ವೈದ್ಯ

ಸುಷೇಣನ ಅಪ್ಪಣೆಯಂತೆ ಹನುಮಂತನು ತಂದ ಸೊಪ್ಪಿನಿಂದ ಲಕ್ಷ್ಮಣನನ್ನು ಮೂರ್ಛೆಯಿಂದ ಏಳಿಸಲು ಸಾಧ್ಯವಾಯಿತೆಂದು ನಮ್ಮ ಪ್ರಾಚೀನ ವೈದ್ಯ ಪದ್ಧತಿಗೆ ಗೌರವವನ್ನು ನೀಡಿದ್ದಾರೆ. ಇಲ್ಲಿ ರಾಮ ರಾವಣರ ಯುದ್ಧ ರುದ್ರ ಭಯಂಕರವಾಗೇನೂ ಇಲ್ಲ. ಸೀತೆಯ ಅಗ್ನಿಪರೀಕ್ಷೆಯ ಸಂದರ್ಭದಲ್ಲಿ ರಾಮ ಎಲ್ಲವನ್ನೂ ಬಲ್ಲ ದೈವವಾಗಿಯೂ, ಅಥವಾ ರಾಜಧರ್ಮವನ್ನು ಹಿಡಿದ ಕ್ರೂರಿಯಾಗಿಯೂ ಅಥವಾ ತಾನೂ ಅಗ್ನಿದಿವ್ಯವನ್ನೆದುರಿಸಿ ಸೀತೆಯಂತೆಯೇ ತನ್ನ ಶೌಚವನ್ನು ಪ್ರತಿಪಾದಿಸುವ ಆದರ್ಶವ್ಯಕ್ತಿಯಾಗಿಯೂ ಚಿತ್ರಣಗೊಳ್ಳದೆ, ಅಗ್ನಿದಿವ್ಯವು ನಡೆಯುವಾಗ ಎಲ್ಲಿ ಸೀತೆ ಸುಟ್ಟುಹೋಗುವಳೋ ಎಂದು ಚಿಂತೆಮಾಡುವ ಸಹಜ ಮನುಷ್ಯನಾಗಿ ಚಿತ್ರಿಸಲಾಗಿದೆ. ಇಲ್ಲಿ ಊರ್ಮಿಳೆಯ ಪಾತ್ರಕ್ಕೆ ಸ್ವಲ್ಪ ಪ್ರಾಮುಖ್ಯತೆಯಿದೆ. ಲಕ್ಷ್ಮಣನಿಂದ ಕಾಡಿನ ಅನುಭವಗಳನ್ನೂ, ತಾರೆಯಿಂದ ವಾಲಿ ಸುಗ್ರೀವರ ಕಥೆಯನ್ನೂ ವಿಭೀಷಣನಿಂದ ಲಂಕೆಯ ಕಥೆಯನ್ನೂ, ಇತರರಿಗೆ ಹೇಳಿಸಿದ್ದಾರೆ. ಇಲ್ಲಿ ಮಂಥರೆಯು ಅತ್ಯಂತ ಸಹಜವಾದ ಒಬ್ಬ ಸೇವಕಿಯಂತೆ ಒಡತಿಗೆ ಒಳ್ಳೆಯದಾಗಲೀ ಎಂದು ಮಾಡಿದ ತನ್ನ ಯೋಚನೆಯು ಇಷ್ಟಕ್ಕೆಲ್ಲಾ ಕಾರಣವಾಯಿತಲ್ಲ ಎಂದು ಎಲ್ಲವನ್ನೂ ನೆನಪಿಸಿಕೊಂಡು ಮರುಗುತ್ತಾಳೆ. ಪ್ರಕ್ಷೇಪವೆಂಬಕಾರಣಕ್ಕೆ ಇದರಲ್ಲಿ ಉತ್ತರ ಕಾಂಡದ ಕಥೆಯನ್ನು ಮಾಸ್ತಿ ಕೈ ಬಿಟ್ಟಿದ್ದಾರೆ.

**ಒಟ್ಟಿನಲ್ಲಿ ಯಾವುದೇ ಕುಟುಂಬದಲ್ಲಿ ಅಥವಾ ಯಾರದೇ ಬದುಕಿನಲ್ಲಿ ನಿಷ್ಠುರತೆ, ಕೇಡುಗಳಿರುತ್ತವೆಯಾದರೂ ಅದನ್ನು ಸಹನೆ, ಪ್ರೀತಿ, ವಾತ್ಸಲ್ಯ, ಹೊಂದಾಣಿಕೆಗಳಿಂದ ದಾಟಬೇಕೆಂಬ ಸಂದೇಶವನ್ನು ಸಾರಿದ್ದಾರೆ. "ನರರು ಒಬ್ಬರಿಗೊಬ್ಬರು ನಾವು ಕೆಟ್ಟುದನೆ ಬಯಸುವೆವು ದೈವ ಯಾರಿಗೆ ಇರಲಿ ಆ ರೀತಿ ಕೇಡು ಬಯಸುವುದಿಲ್ಲ", "ಬಾಳ ಅರಿಯ ಬಯಸುವವರು ಕೆಲಕಾಲ ವನವಾಸ ನಡೆಸುವುದು ಒಳ್ಳೆಯದು..... ಜಡ ನಾವು ತಿಳಿದಂತೆ ಜಡವಲ್ಲ. ....ಇನ್ನೊಂದು ಜೀವವೇ" ಎನ್ನುವ ಮೂಲಕ ಕೇವಲ ಮಾನವಕೇಂದ್ರಿತ ಬದುಕಲ್ಲದೇ ಜೀವಕೇಂದ್ರಿತವಾದ ಬದುಕಿನತ್ತ ನಮ್ಮ ಗಮನವನ್ನು ಸೆಳೆದು ಬದುಕನ್ನು ಸಹ್ಯವಾಗುವಂತೆ ಮಾಡಿಕೊಳ್ಳುವುದರತ್ತ ನಮ್ಮ ನೋಟವಿರಬೇಕೆಂಬುದನ್ನು ಸಾರಿದ್ದಾರೆ.**

**ರಾಮಾಯಣ ಮಹಾನ್ವೇಷಣ** ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ವೀರಪ್ಪ ಮೊಯಿಲಿಯವರು ರಚಿಸಿರುವ **ಸರಳ ರಗಳೆಯ ಮಹಾಛಂದಸ್ಸಿನಲ್ಲಿ ರಚಿಸಿರುವ ಒಂದು ವಿಶಿಷ್ಟ ರಾಮಾಯಣ ಕಾವ್ಯವಾಗಿದೆ. ಇದುವರೆಗೆ ಕಾಣದ ರಾಮಾಣಯದ ಒಂದು ಹೊಸದಾದ ರಾಜಕೀಯ ಆಯಾಮವನ್ನು ಇಲ್ಲಿ ಗುರುತಿಸಬಹುದು.** ವಾಲ್ಮೀಕಿ ಕುವೆಂಪುರವರ ರಾಮಾಯಣದ ಪ್ರಭಾವಕ್ಕೆ ಒಳಗಾಗಿಯೂ ತಮ್ಮ ಪರಿಸರದ ಯಕ್ಷಗಾನಗಳಲ್ಲಿನ ಪುರಾಣಕಥೆಗಳ ಪಾತ್ರಗಳು ತಮ್ಮ ಸಂಭಾಷಣೆಗಳಲ್ಲಿ ಸಮಕಾಲೀನ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದಕ್ಕೆ, ವಿಡಂಬಿಸುವುದಕ್ಕೆ ಪ್ರೇಕ್ಷಕರನ್ನು ಯೋಚನೆಗೆ ಹಚ್ಚುವುದಕ್ಕೆ ಪ್ರಯತ್ನಿಸುವಂತೆ ಇವರ ರಾಮಾನ್ವೇಷಣೆಯೂ ಓದುಗನನ್ನು ಆಲೋಚನೆಗೆ ಹಚ್ಚುತ್ತದೆ. ಸ್ವತಃ ರಾಜಕೀಯ ಮುತ್ಸದ್ದಿಯಾಗಿರುವ ಶ್ರೀ ಮೊಯಿಲಿಯವರು **ರಾಮಾಯಣದ ಸಂಗತಿಗಳನ್ನು, ಘಟನೆಗಳನ್ನು ಪ್ರಭುತ್ವ ಮತ್ತು ಅಧಿಕಾರದ ವಿಚಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ಒಳಹೊಕ್ಕು ವಿವೇಚಿಸುವ ಪ್ರಯತ್ನ ಮಾಡಿದ್ದಾರೆ.** ರಾಜಕೀಯ ಕ್ಷೇತ್ರದ ಸಮಕಾಲೀನ ತಿಳುವಳಿಕೆಯ ಹಿನ್ನೆಲೆಯಲ್ಲಿ ಇಂದಿನ ಪರಿಸ್ಥಿತಿಯನ್ನು ರಾಮಕಥೆಯೊಂದಿಗೆ ಸಮೀಕರಿಸಿದ್ದಾರೆ. ಇವರ ಕಾವ್ಯವು "ಇದು ರಾಮಾಯಣವೂ ಅಲ್ಲ, ಸೀತಾಯಣವೂ ಅಲ್ಲ, ಇದು ಲಕ್ಷ್ಮಣಾಯಣವಾಗಿದೆ. ಇವರಿಗೆ ಲಕ್ಷ್ಮಣ ಆದರ್ಶನಾಗಿದ್ದಾನೆ.

ಕಾವ್ಯದ ಪ್ರಾರಂಭಕ್ಕೇ ಬರುವ ಬಾಬರಿ ಮಸೀದಿಯ ಮೂರು ಗುಮ್ಮಟಗಳು ಉರುಳಿದ ಇಂದಿನ ರಾಜಕೀಯದಿಂದ ಹಿಡಿದು, ರಾಮನು ಬಿಲ್ಲು ಮುರಿದು ಸೀತೆಯನ್ನು ವರಿಸಿದ್ದು, ಅಹಲ್ಯೆಯ ಉದ್ಧಾರ, ವಿಶ್ವಾಮಿತ್ರರ ದೀರ್ಘ ವಾಸ್ತವ್ಯ, ಭರತನ ಮಾತುಗಳು ಇವೆಲ್ಲವೂಗಳಲ್ಲೂ ಅವರು ರಾಜಕೀಯವನ್ನೇ ಕಂಡಿದ್ದಾರೆ, ಕಾಣಿಸಿದ್ದಾರೆ. ಇಲ್ಲಿ ಗಮನ ಸೆಳೆಯುವ ಕಥನ ಅಹಲ್ಯೆಯದು "ಪೂರ್ವ ಪ್ರೇಮದ ಬಳ್ಳಿ ಕೈ ಚಾಚಿ ಕರೆಯುತಿದೆ", "ಮೌನಕಾನನದೊಳಗೆ ಕೋಗಿಲೆಹಾಡಿತ್ತು ಮುಂತಾದ ಸುಂದರ ಅರ್ಥಗರ್ಭಿತ ನುಡಿಗಳಲ್ಲಿ ಅಹಲ್ಯೆ ಇಂದ್ರರ ಪ್ರಸಂಗಕ್ಕೆ ಒಂದು ಹೊಸ ವ್ಯಾಪ್ತಿ ಅರ್ಥವಲಯ ಪ್ರಾಪ್ತವಾಗಿದೆ. ಅಹಲ್ಯೆಗೆ ಬಾಲ್ಯದಲ್ಲೇ ಇಂದ್ರನ ಬಗೆಗೆ ಕುತೂಹಲವಿತ್ತೆಂಬ ಕಲ್ಪನೆಯಿದೆ. ಇಲ್ಲಿ ಅವಳು ಗೌತಮರ ಶಾಪಕ್ಕೆ ಒಳಗಾಗಿ ಕಲ್ಲಾಗುವುದಿಲ್ಲ, ಬದಲಿಗೆ ಮೌನಿಯಾಗಿ ಏಕಾಂತಕ್ಕೆ

ಸರಿದುಬಿಡುತ್ತಾಳೆ. ತಪ್ಪುಮಾಡಿದವರಿಗೆ ಶಿಕ್ಷೆಕೊಡುವ ವಿಚಾರವನ್ನು ಗೌತಮರು ತಮ್ಮ ಶಿಷ್ಯರಿಗೆ ವಹಿಸಕೊಟ್ಟಾಗ ಅವರ ಶಿಷ್ಯರು ಕೆಟ್ಟ ರಾಜಕೀಯ ಮಾಡುವುದು ಇವೆಲ್ಲಾ ಸಮಕಾಲೀನ ಸಂವೇದನೆಗೆ ತಕ್ಕಂತೆ ಇದೆ. ಸುಂದರವಾದ ರೂಪಕಗಳು ಕಾಣಿಸಿಕೊಂಡಿವೆ. ಕವಿಯ ಹಳಗನ್ನಡ ನಡುಗನ್ನಡ ಭಾಷಾ ಸಾಮರ್ಥ್ಯಕ್ಕೂ ಛಂದಸ್ಸಿನ ಮೇಲಿರುವ ಹಿಡಿತಕ್ಕೂ, ಪ್ರಕೃತಿ–ಪರಿಸರ–ಮಾನವ ಸ್ವಭಾವಗಳನ್ನರಿಯುವ ಸೂಕ್ಷ್ಮ ಸಾಮರ್ಥ್ಯಕ್ಕೂ ಇವು ಸಾಕ್ಷಿಯಾಗಿವೆ. ಅವರೇ ಹೇಳುವಂತೆ ಅವರ ಬಾಲ್ಯದಲ್ಲಿ ಅವರ ಮೇಲೆ ಪಕೃತಿ, ಪರಿಸರ, ಯಕ್ಷಗಾನ, ಗ್ರಾಮೀಣ ಕಲೆ, ಸಂಸ್ಕೃತಿಗಳು ಗಾಢವಾಗಿ ಪ್ರಭಾವಬೀರಿರುವುದನ್ನು ಗಮನಿಸಬಹುದು. ಇಲ್ಲಿ ಸೀತೆಯು ಜನಕನಿಗೆ ಸಿಕ್ಕಿದಾಗ ಅವಳನ್ನು “ಕೆಲವರಿಗೆ ತುಳುಕುವ ಸೌಭಾಗ್ಯ ಕೆಲವರಿಗೆ ಹಸಿವಿನಲಿ ಮರಣ ಸಂಪದದ ಹಂಚಿಕೆಯ ವಿಷಮತೆಯ ನೀಗಿಸುವ ಕೂಸಾಗಿ ಬಂದಳೆ” ಎಂಬ ಮಾತು ಸಮಕಾಲೀನ ಸಮಾಜವನ್ನು ಕಾಡುವ ಅಸಮಾನತೆ ಹಸಿವನ್ನು ನೀಗಿಸುವ, ಸಮಬಾಳಿನ, ಸರ್ವೋದಯದ ಕವಿಯ ಕನಸನ್ನೇ ಹೇಳುತ್ತಿದೆ. “ಈ ಧನುವೊಂದು ಯಂತ್ರ ಶಕ್ತಿಯುಕ್ತಿಗಳು ಎಂತೋ ಅಡಗಿರಬೇಕು ಸುಪ್ತವಾಗಿರಬೇಕು ಇಂಧನ ವಿಶೇಷ” ಎಂಬ ಮಾತಿನಲ್ಲಿ ಸರ್ವಶಕ್ತವಾದ ಅಣುಬಾಂಬುಗಳ ಸಂಗ್ರಹವನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಬಿತ್ತರಿಸಿದ್ದಾರೆ. ಶಿವಧನುಸ್ಸನ್ನು ದುಷ್ಟರ ಕೈಗೆ ಸಿಗದಂತೆ ರಾಮ ನಾಶಗೊಳಿಸುವ ಮೂಲಕ ಹಾಗೂ ವಿಷ್ಣುಧನುಸ್ಸನ್ನು ಧಾರಣಮಾಡುವ ಮೂಲಕ ಭುವಿಯನ್ನು ಮಹಾ ಸಂಕಟದಿಂದ ತಪ್ಪಿಸಲು ಪ್ರಯತ್ನಿಸಿದನೆಂಬಂತೆ ಚಿತ್ರಿಸಿದ್ದಾರೆ.” ಗಣಿಯ ಕೂಲಿಕಾರ್ಮಿಕರ ಸಂಕಟ, ದುಡಿಮೆಗಾರರ ನೋವು, ಅವರ ಪರವಾಗಿ ಹೋರಾಡುವವರನ್ನು ಬುಟ್ಟಿಗೆ ಹಾಕಿಕೊಳ್ಳುವ ಬಂಡವಾಳಶಾಹಿಗಳು, ಸಿರಿವಂತರು, ದೊಡ್ಡವರನ್ನು ಕುರಿತ ವಿಡಂಬನೆಯನ್ನು ಮಾಂಡಕರ್ಣಿಯ ಪ್ರಸಂಗದಲ್ಲಿ ತಂದಿದ್ದಾರೆ. ಸರ್ವಾಧಿಕಾರೀ ಮನೋಭಾವವನ್ನು ಕುರಿತು ಹೇಳುತ್ತಾ **“ಏಕವ್ಯಕ್ತಿಯ ಕೈಲಿ ಸಿಲುಕಿಹುದು ಆಡಳಿತಸೂತ್ರ ವೃಗ ಪ್ರಭುತ್ವವು ಅಲ್ಲಿ ತಾನೇ ತಾನಾಗಿಹುದು ನೈತಿಕತೆ ಭೌತಿಕತೆ ಒಂದಕೊಂದಕೆ ಮಸೆದು ಸಂಘರ್ಷ ತತ್ವವನೆ ಸಾಕೇತ ಮರೆತಿಹುದು”**, **“ಬಿತ್ತಬೇಕಿಹುದು ಭ್ರಾತೃತ್ವ ಬೀಜವನು ಆರ್ತ ಜನ ಸಂತತಿ ಆಸೆ ದೀವಿಗೆ ನೀವು ಆತ್ಮಜನಶೋಷಕರ ಮೆಟ್ಟಿ ಬಿಡಿ ಸುಟ್ಟು ಬಿಡಿ ಆತ್ಮ ಜನದಿಚ್ಛಾಶಕ್ತಿ ಅಡ್ಡಿ ಆತಂಕಗಳ ಮೆಟ್ಟಿ ಪುಟಿದು ಬರಲೈ ನವ ಭರತ ವರ್ಷ”** ಎಂಬ ಮಾತು ತೀರಾ ವಾಚ್ಯವಾಗಿದ್ದು ಕಾವ್ಯಾತ್ಮಕತೆ ಸೋತಿದೆ ಎನಿಸಿದರೂ, ಪ್ರಜಾಪ್ರಭುತ್ವದ ತತ್ವಗಳ ಅವಶ್ಯಕತೆಯನ್ನು, ಭಾರತದ ಭವಿಷ್ಯವನ್ನು ಹಸನಾಗಿ ಕಟ್ಟುವ ಕವಿಯ ಹಂಬಲವನ್ನೂ ಒತ್ತಿ ಹೇಳುತ್ತಿವೆ.

ಒಟ್ಟಿನಲ್ಲಿ ಈ ಕೃತಿಯು ಮಹಾನ್ ಸಾಹಿತ್ಯ ಕೃತಿಯಾಗದಿದ್ದರೂ, ಇಂದಿನ ಸಮಕಾಲೀನ ಭಾರತದ ಪ್ರಗತಿ, ಪರಿಸರಸಂಪತ್ತಿನ ಸದ್ಬಳಕೆ, ವೈಜ್ಞಾನಿಕ ಚಿಂತನೆ; ಜಾತಿ, ಲಿಂಗ, ವರ್ಗ, ಕೋಮು ತರತಮಗಳಿಲ್ಲದ ಸರ್ವೋದಯವನ್ನು ಎತ್ತಿಹಿಡಿಯುವ ಸಮಾಜವಾದೀ ನಿಲುವುಗಳನ್ನು ಬಿತ್ತರಿಸುವ ಮೂಲಕ ಆಧುನಿಕ ಕನ್ನಡ ಸಾಹಿತ್ಯದಲ್ಲೇ ವಿಶಿಷ್ಟಸ್ಥಾನ ಪಡೆದಿದೆ. ದೇರಾಜೆ ಸೀತಾರಾಮಯ್ಯನವರು ರಾಮಾಯಣ ಕಥೆಯನ್ನಾಧರಿಸಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. 'ಶ್ರೀ ರಾಮಚರಿತಾಮೃತಂ ದೇರಾಜಿ ರಾಮಾಯಣ' ದೇರಾಜಿ ಸೀತಾರಾಮಯ್ಯನವರು ಅವತರಣಿಕೆಯಿಂದ ಆರಂಭಿಸಿ ಮಹಾಪ್ರಸ್ಥಾನದವರೆಗೆ 60+948 ಪುಟಗಳ ಬೃಹತ್ ಕಾವ್ಯವನ್ನು ರಚಿಸಿದ್ದಾರೆ.[28] ‘ರಾಮರಾಜ್ಯದ ರೂವಾರಿ’ ಇದು ಬಾಲಕಾಂಡದ ಕಥೆಯನ್ನೊಳಗೊಂಡಿದ್ದು ಹೊಸದೃಷ್ಟಿಯಲ್ಲಿ ನೋಡಲಾಗಿದೆ.[29] ‘ರಾಮರಾಜ್ಯ ಪೂರ್ವರಂಗ’, ರಾಮಾಯಣದ ಅಯೋಧ್ಯಾಕಾಂಡವನ್ನು ಹೊಸದೃಷ್ಟಿಯಿಂದ ನೋಡಲಾಗಿದೆ, ‘ಸುಗ್ರೀವ ಸಖ್ಯ’, ‘ಶೂರ್ಪನಖಿಯ ಸ್ವರಾಜ್ಯ’ ಮಕ್ಕಳಿಗಾಗಿ ಬರೆದಿರುವ ಅರ್ಥಪ್ರಸಂಗ (ಕ್ರಿ.ಶ. 2014) ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶರವರು ‘ಸುಂದರ ರಾಮಾಯಣ ಕನ್ನಡದ ಕನ್ನಡಿಯಲ್ಲಿ ಸಂಪೂರ್ಣರಾಮಾಯಣ’ ಎಂಬ ಹೆಸರಿನಲ್ಲಿ 226 ಪುಟಗಳ ಸಂಪೂರ್ಣರಾಮಾಯಣವನ್ನು ಬರೆದಿದ್ದಾರೆ.[30] ಮುತ್ತಣನವರು ರಚಿಸಿರುವ ‘ಬಾಲರಾಮಾಯಣ’ ಕಾವ್ಯವು 647 ಪುಟಗಳಿದ್ದು, ಒಟ್ಟು 1206 ಸಾಲುಗಳಿವೆ. ಅವುಗಳನ್ನು ಎಂಟೆಂಟು ಸಾಲುಗಳಂತೆ ವಿಭಾಗಿಸಿಕೊಳ್ಳಲಾಗಿದೆ. ಈ ರೀತಿ ಮಕ್ಕಳಿಗಾಗಿ ಕನ್ನಡದಲ್ಲಿ ಹಲವು ಬಾಲರಾಮಾಯಣಗಳು ಬಂದಿವೆ.

## ಗದ್ಯ ಕೃತಿಗಳು

**‘ಅದ್ಭುತರಾಮಾಯಣ’, ‘ಶ್ರೀರಾಮಾಶ್ವಮೇಧಂ’** ಇವು ಮುದ್ದಣನು (ನಂದಳಿಕೆ ಲಕ್ಷ್ಮೀನಾರಾಯಣ) ಗದ್ಯದಲ್ಲಿ ರಚಿಸಿದ ಕೃತಿಗಳು ಇವನಿಗೆ ರಾಮಾಯಣವು ಪರಮ ಪ್ರೀತಿಯಾದ ವಸ್ತುವಾದುದರಿಂದ ಒಟ್ಟು ಮೂರು ಕೃತಿಗಳನ್ನು ಈತ ರಚಿಸಿದ್ದಾನೆ. ಪ್ರಾಚೀನ ಮತ್ತು ಆಧುನಿಕ ಕನ್ನಡ ಪರಂಪರೆಯ ಕೊಂಡಿಯಂತಿದ್ದ ಮುದ್ದಣನು ಪ್ರಾಚೀನ ಹಳಗನ್ನಡಕೃತಿಗಳ ಪ್ರಭಾವದೊಂದಿಗೆ ಆಧುನಿಕ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೂ ಇದ್ದು ಹಳೆಯಕಥೆಯನ್ನು ಹೊಸ ತಂತ್ರವನ್ನೂ ಬೆಸೆದಿರುವುದರಿಂದ ಅವನ ಕಥನ ಶೈಲಿ ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಇವನು ಮೊದಲ ಕೃತಿ ಅದ್ಭುತ ರಾಮಾಯಣವು ಶಾಕ್ತ ಸಂಪ್ರದಾಯದ ಕಥೆಯನ್ನು ಒಳಗೊಂಡಿದ್ದು ಹಳಗನ್ನಡದಲ್ಲಿದೆ. ಪುರಾಣಾಂತರ್ಗತ ಅದ್ಭುತರಾಮಾಯಣದ ಕಥೆಯನ್ನು ಕನ್ನಡಕ್ಕೆ ಅನೇಕರು ಅನುವಾದವನ್ನು ಮಾಡಿದ್ದು ಇದು ಅತ್ಯಂತ ವಿಸ್ತಾರವಾದ ಕಥಾಹಂದರವನ್ನು ಹೊಂದಿದೆ. ವಿಸ್ತಾರವಾದ ಈ ಕೃತಿಯನ್ನು ಔಚಿತ್ಯಪೂರ್ಣವಾಗಿ ಮುದ್ದಣ ಕನ್ನಡಕ್ಕೆ ಸಂಗ್ರಹಿಸಿ ಹೇಳಿದ್ದಾನೆ. ಇದರಲ್ಲಿ ಕತೆಗಿಂತಲೂ ವೇದಾಂತ ವಿಚಾರಗಳು ಮುನ್ನೆಲೆಗೆ ಬಂದಿವೆ. ಇದರಲ್ಲಿ ಜಾನಪದ ರಾಮಾಯಣದಂತೆ ರಾಮನಿಗಿಂತಲೂ ಸೀತೆಯ ವ್ಯಕ್ತಿತ್ವಕ್ಕೆ ಪ್ರಾಮುಖ್ಯತೆಯಿದೆ.” ಆರಂಭದಲ್ಲಿ ಮುದ್ದಣ ವಾಲ್ಮೀಕಿಯ ಮಾತಿನಲ್ಲಿ **“ಶತಕೋಟಿ ರಾಮಾಯಣ ಎಂಬ ಸಮುದ್ರದಿಂದ ಇಪ್ಪತ್ತೈದು ಸಾವಿರ ಎಂಬ ನೀರಿನ ಹನಿಗಳು ಶಿವನ ತಲೆಯಿಂದಿಳಿವ ಗಂಗೆಯಂತೆ ಭೂಲೋಕ ಸೇರಿದವು. ಆದರೆ ಅವುಗಳಲ್ಲಿ ಸೀತಾಮಾಹಾತ್ಮೆ ಸಂಪೂರ್ಣವಾಗಿ ಕಾಣಿಸದು. ಆದ್ದರಿಂದ ಮೂಲ ಪ್ರಕೃತಿ ಭೂತೆಯಪ್ಪ ಸೀತಾ ಚಾರತ್ರ್ಯವನ್ನು ಒರೆಯುವೆ”** ಎಂದು ಹೇಳಿಸಿ ತನ್ನ ಕಥಾ ಆಯ್ಕೆಯ ಕಾರಣವನ್ನು ಸ್ಪಷ್ಟಪಡಿಸಿದ್ದಾನೆ. ದಶಕಂಠನ ಸಂಹಾರದ ನಂತರ ಸಹಸ್ರಕಂಠ ರಾವಣನೊಡನೆ ಯುದ್ಧಮಾಡಿ ರಾಮನಿಗೆ ಗೆಲ್ಲಲು ಸಾಧ್ಯವಾಗದಾಗ ಸೀತೆಯೇ ಆದಿಮಾಯೆ, ಶಕ್ತಿಯಂತೆ ಅದ್ಭುತರೂಪವನ್ನು ತಾಳಿ ಅವನನ್ನು ಸಂಹರಿಸುತ್ತಾಳೆಂಬುದು ಈ ಕಥೆಯ ಕೇಂದ್ರವಾಗಿದೆ. ಇಲ್ಲಿ ಸೀತೆಯು, ಆದಿಮಾಯೆಯೂ, ಕಾಳಿಯೂ, ಲಕ್ಷ್ಮಿಯೂ ಆಗಿ ಅಭೇದದಲ್ಲಿ ನಿರೂಪಿಸಲ್ಪಟ್ಟಿದ್ದಾಳೆ. ಇದರಲ್ಲಿ 16 ಆಶ್ವಾಸಗಳಿವೆ. ಮುದ್ದಣನ ಕಥೆಗೆ ಹೊರೆ ಎನಿಸಿದ ವೇದಾಂತದ ವಿಚಾರಗಳನ್ನೂ ಅನವಶ್ಯಕವಾದ ವಿವರಗಳನ್ನು ಅತ್ಯಂತ ಜಾಣ್ಮೆಯಿಂದ ಸಂಗ್ರಹಿಸಿ ಔಚಿತ್ಯಜ್ಞಾನವನ್ನು ಮೆರೆದಿದ್ದಾನೆ. ಇಲ್ಲಿ ಅದ್ಭುತ ಕಥಾಹಿರಿಮೆ ಮೂಲಕ್ಕೆ ಸೇರುವುದಾದರೂ ಮುದ್ದಣನ ಗದ್ಯದ ಸಹಜ ಓಟ, ಲಯವಿನ್ಯಾಸ, ವರ್ಣನೆಯ ಸೊಬಗನ್ನು ವಿದ್ವಾಂಸರು ಮೆಚ್ಚಿಕೊಂಡಿದ್ದಾರೆ.

‘ಶ್ರೀರಾಮಾಶ್ವಮೇಧಂ’ ಮುದ್ದಣನ ಅತ್ಯಂತ ಜನಪ್ರಿಯವಾದ ಶ್ರೇಷ್ಠಕೃತಿ. ಪದ್ಮಪುರಾಣದ ಪಾತಾಳ ಖಂಡದಿಂದ ಆರಿಸಿಕೊಂಡ ರಾಮನ ಅಶ್ವಮೇಧ ಯಾಗದ ಕಥೆಯನ್ನು ತನ್ನಕಾಲದಲ್ಲಿ ಬಳಕೆಯಲ್ಲಿಲ್ಲದ ಹಳಗನ್ನಡ ಗದ್ಯದಲ್ಲಿ 16 ಅಧ್ಯಾಯಗಳಲ್ಲಿ ಅತ್ಯದ್ಭುತವಾಗಿ ಸಂಗ್ರಹಿಸಿ ಕೊಟ್ಟಿರುವುದಲ್ಲದೆ ಆ ‘ಸಾಮಾನ್ಯವಾದ ಕಥೆಗೆ ಸುವರ್ಣದ ಚೌಕಟ್ಟನ್ನು’ ಕೊಟ್ಟಿರುವ ಮುದ್ದಣ ಮನೋರಮೆಯರ ಸಲ್ಲಾಪವು ಪ್ರಸಿದ್ಧವಾಗಿದೆ. ಮಳೆಗಾಲದ ಸಂಜೆಯ ಬೇಸರಕಳೆಯಲು ಅರಮನೆಯ ಕಬ್ಬಿಗ ಮುದ್ದಣ ತನ್ನ ಮಡದಿ ಮನೋರಮೆಯ ಬೇಡಕೆಯಂತೆ ಹೇಳಿದ ಕಥೆ ಎಂಬಂತೆ ವಿನ್ಯಾಸಗೊಳಿಸಲಾಗಿದೆ. ಶೋತೃವಾಗಿರುವ ಮನೋರಮೆಯು ಇಲ್ಲಿ ಸಹೃದಯಳು, ಕಾವ್ಯ ವಿಮರ್ಶಕಳು, ಆಗಿ ಕೃತಿಯುದ್ದಕ್ಕೂ ಒಂದು ಜೀವಂತಿಕೆಯ ಸ್ಪರ್ಷವನ್ನು ಕೊಟ್ಟಿದ್ದಾಳೆ. ಈ ದಂಪತಿಗಳ ಸಲ್ಲಾಪದಲ್ಲಿ ಉತ್ತರ ರಾಮಾಯಣದ ಕಥೆ ಹೊಸ ಹೊಳಪನ್ನು ಪಡೆದಿದೆ. ಭಾಷೆ ಪ್ರಾಚೀನವಾಗಿ ಕಂಡರೂ ಅದರೊಳಗೆ ಮಿಡಿಯುತ್ತಿರುವ ಕಾವ್ಯದೃಷ್ಟಿ, ಜೀವಂತಿಕೆ ಅತ್ಯಂತ ಆಧುನಿಕವಾಗಿದೆ. ‘ಪದ್ಯಂವದ್ಯಂ ಗದ್ಯಂಹೃದ್ಯಂ’ ಎನ್ನುವ ಮೂಲಕ ಹೊಸಕಾಲದ ಕನ್ನಡಿಗರಿಗೆ ಎಂಥ ಸಾಹಿತ್ಯವನ್ನು ಉಣಬಡಿಸಬೇಕೆಂಬ ಕಥೆ, ರಸ, ಭಾಷೆ, ಬಂಧಗಳ ಮೀಮಾಂಸೆ, ವಿಮರ್ಶೆಯನ್ನೇ ಇಲ್ಲಿ ಆತ ನಡೆಸಿದ್ದಾನೆ. ಸಾಂಪ್ರದಾಯಿಕವಾದ ಕಾವ್ಯ ರಚನಾ ಕ್ರಮವನ್ನು ಬಿಟ್ಟು ದೇವತಾ ಸ್ತುತಿಗಳ ಬದಲು ಪ್ರಕೃತಿವರ್ಣನೆಯಿಂದ ಕಾವ್ಯವನ್ನು ಆರಂಭಿಸುತ್ತಾನೆ. ಜಯವಿಜಯರ ಶಾಪದ ಕಥೆಯನ್ನು ಅಗಸ್ತ್ಯರಿಂದ ಕೇಳಿದ ರಾಮ ಹೆಣ್ಣಿನ ನೆವದಿಂದ ತಾನು ಬ್ರಹ್ಮಹತ್ಯಾ **ಪಾತಕಕ್ಕೆ ಗುರಿಯಾದೆನೆಂದು ಮರುಗಿದಾಗ ಪರಿಹಾರಕ್ಕಾಗಿ ಅಶ್ವಮೇಧಯಾಗವನ್ನು ಸೂಚಿಸಲಾಗುತ್ತದೆ. ರಾಮನು ಅಗಸನ ಮಾತಿಗೆ ಬೆಲೆಕೊಟ್ಟು ಸೀತೆಯನ್ನು ತ್ಯಜಿಸುತ್ತಾನೆ. ಇಲ್ಲಿ ರಾಮನ ವರ್ತನೆ, ಮಾತುಗಳು ಬಹಳ ಒರಟಾಗಿ ಕಾಣಿಸಿಕೊಂಡಿವೆಯಾದರೂ,**

ಸೀತೆಯನ್ನು ಅಗಲಿದ ರಾಮನಿಗಾದ ದುಃಖವನ್ನು ಕವಿ ದೀರ್ಘವಾಗಿ ವರ್ಣಿಸಿದ್ದಾನೆ. ಇದು ಮುದ್ದಣನ ಸ್ವಂತಿಕೆಯ ಅಭಿವ್ಯಕ್ತಿಯಾಗಿದೆ. ಲಕ್ಷ್ಮೀಶನ ಪ್ರಭಾವ ಇವನ ಮೇಲಾಗಿದೆ. ಮೂಲ ಕಥೆಯನ್ನು ಅನುಸರಿಸುತ್ತಿರುವಾಗಲೂ ತನ್ನ ಸ್ವಂತದ ವರ್ಣನೆಗಳ ಸೊಬಗಿನಿಂದ ಮುದ್ದಣ ಮನಸೆಳೆಯುತ್ತಾನೆ. ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಬಿಟ್ಟುಹೋದನೆಂದು ಹೇಳಿದಾಗ ಮನೋರಮೆಯು ಕಂಬನಿ ಸುರಿಸುತ್ತಾ "ನೀನಾದರು ಎಂತು ಕಲ್ಲುಮನದಿಂದ ವರ್ಣಿಸುವೆ? ಲಕ್ಷ್ಮಣ ಅದ್ಧೇಗೆ ಬಿಟ್ಟುಹೋದ, ಪೆಣ್ಗಳೊಂದು ಬಾಳ್ತೆ ಬಾಳ್ತೆಯೆ" ಎನ್ನುವ ಪ್ರತಿಕ್ರಿಯೆಗಳು ಕಥೆಯ ರಸಭಾವವನ್ನು ಸಹೃದಯರಲ್ಲಿ ಮೀಟುವಲ್ಲಿ ಯಶಸ್ವಿಯಾಗುತ್ತದೆ. "ನೀತಿ ಬಾರ್ತೆಗೆಟ್ಟುದೇ ನೀತಿ ಬೆನ್ನಿತ್ತುದೇ" ಒಬ್ಬ ಅಗಸನ ಮಾತಿಗೆ ನನ್ನನ್ನು ಬಿಡುವುದೇ ಎಂದು ಹಲುಬುತ್ತಾ ರಾಮನೊಂದಿಗಿನ ತನ್ನ ಜೀವನದ ಹಳೆಯ ನೆನಪುಗಳನ್ನು ಮಾಡಿಕೊಂಡು ಮರುಗುವುದನ್ನು ಕಾಣುತ್ತೇವೆ. ಅಲ್ಲದೇ "ನಿನ್ನಾಣತಿಗೆ ಅಬಲೆ ಮರುಗಿದಳಿಲ್ಲ, ಮಾರ್ನುಡಿದಳಿಲ್ಲ, ಮುನಿಸಾಂತಳಿಲ್ಲ, ಬೆರ್ಚಿದಳಿಲ್ಲ, ಕೂಳ್ ಕುದಿಗೊಂಡಳಿಲ್ಲ, ದೂರಿದಳಿಲ್ಲ, ನೀನೆ ಗತಿಯೆಂದು ನಿನ್ನಡಿಯಂ ನೆನೆಯುತೆ ಕಡೆ ಪೊಳ್ತನು ಪಾರುತಿರ್ಪಳ್" ಎಂದು ರಾಮನಿಗೆ ಹೇಳು ಹೋಗು "ತಡಮಾಡಿದರೆ ನಿನ್ನ ಅಣ್ಣ ಕೋಪಿಸನೇ" ಎಂಬ ಸೀತೆಯ ಮಾತುಗಳಲ್ಲಿ ಒಂದು ವ್ಯಂಗ್ಯ, ವಿಡಂಬನೆ, ತಣ್ಣನೆಯ ಪ್ರತಿರೋಧ ಕಂಡರೆ, ತನ್ನ ನೆಚ್ಚಿನ ವಸ್ತುಗಳನ್ನು ಯಾರ್ಯಾರಿಗೆ ಕೊಡಬೇಕು ತನ್ನ ಕಪಿಲೆ ಹಸುವಿನ ಆರೈಕೆಯ ಬಗೆಗೆ ಅವಳು ಹೇಳುವ ಮಾತುಗಳು ಕರುಣ ರಸವನ್ನು ಉಕ್ಕಿಸುತ್ತವೆ. ಹೀಗೆ ಕಥಾ ಮಧ್ಯದಲ್ಲಿ ತೂರಿಬರುವ ಮುದ್ದಣ ಮನೋರಮೆಯರ ಮಾತುಗಳು ಕೇವಲ ಅವರ ಸರಸಸಲ್ಲಾಪವನ್ನು ಚಿತ್ರಿಸದೇ ಈ ಕೃತಿಗೆ ಒಂದು ಸಂಭಾಷಣೆಯ ಸೌಂದರ್ಯವನ್ನೂ, ಕಥೆಗಳ ನಡುವೆ ಒಂದು ಕೊಂಡಿಯಾಗಿ ಬಂದು ಸನ್ನಿವೇಶದ ಸ್ವಾರಸ್ಯವನ್ನು ವ್ಯಂಜಿಸುತ್ತದೆ. ಮೂಲ ಕಥೆಯಲ್ಲಿ ಶೇಷ ವತ್ಸಾಯನರ ಜಾಗವನ್ನು ಇಲ್ಲಿ ಮನೋರಮೆ ಮುದ್ದಣರು ಅತ್ಯಂತ ಯಶಸ್ವಿಯಾಗಿ ಹೊಸತಾಗಿ, ರಸವಾಗಿ, ವಿನೂತನವಾಗಿ ನಿಭಾಯಿಸಿದ್ದಾರೆ. ಇದಲ್ಲದೆ ಉತ್ತರರಾಮಚರಿತೆಗೆ ಸಂಬಂಧಿಸಿದಂತೆ ಮುಮ್ಮಡಿ ಕೃಷ್ಣರಾಜವಡೆಯರ 'ಉತ್ತರರಾಮಚರಿತ ಕಥೆ', ಅಳಿಯಲಿಂಗರಾಜನ 'ಕುಶಲವರ ಕಥೆ', ಗಳಗನಾಥರ 'ಉತ್ತರರಾಮಚರಿತ ಸಾರ', ಮುಂತಾದ ಗದ್ಯಕೃತಿಗಳು ಪ್ರಮುಖವಾಗಿ ಉಲ್ಲೇಖಿಸಬೇಕಾದವುಗಳಾಗಿವೆ. 'ಜನಪ್ರಿಯ ವಾಲ್ಮೀಕಿ ರಾಮಾಯಣ', 416 ಪುಟಗಳ ಕೃತಿಯನ್ನು ಕುವೆಂಪುರವರು ರಚಿಸಿದ್ದಾರೆ. 11 ಪುಟಗಳ ಪ್ರಸ್ತಾವನೆಯಿದೆ. ಕೆ ಶ್ರೀಕಂಠಯ್ಯನವರು 'ಉತ್ತರಕಾಂಡದ ಕಥೆಗಳು ರಾಮಾಯಣ ಪ್ರಸಂಗಗಳು' ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ 88 ಪುಟಗಳಿದ್ದು 8 ಪುಟಗಳ ಮುನ್ನುಡಿಯೊಂದಿಗೆ. ಪ್ರಕಟಣೆಯಾಗಿದೆ.

### ಕನ್ನಡ ಗೀತರೂಪಕಗಳು

ಆಧುನಿಕ ಕನ್ನಡದಲ್ಲಿ ಮಹಾಕಾವ್ಯಗಳಂತೆಯೇ ಗದ್ಯ ಪದ್ಯಮಿಶ್ರಿತವಾದ ಕೃತಿಗಳೂ, ಕಥನ ಕಾವ್ಯ, ಖಂಡಕಾವ್ಯ, ಕಿರುಕವಿತೆಗಳಲ್ಲಿ ರಾಮಾಯಣದ ಸುಂದರ ಸನ್ನಿವೇಶಗಳು, ಸೂಕ್ಷ್ಮ ದೃಷ್ಟಿಯಲ್ಲಿ ಪುನಾರಚನೆಗೊಂಡಿವೆ. ಡಿವಿಜಿಯವರ 'ರಾಮಪರೀಕ್ಷಣ' ಗದ್ಯದೊಂದಿಗೆ ಚೌಪದಿ ತ್ರಿಪದಿ, ಷಟ್ಪದಿಯ ಲಯಗಳಲ್ಲಿ ರಚಿತವಾಗಿದೆ. ಗೇಯತೆಗೆ ಹೆಸರಾದ ಪುತಿನರವರ ನಾಟಕಗಳು ಗದ್ಯದೊಂದಿಗೆ ಹಾಡುಗಳನ್ನು ಹೊಂದಿವೆ. ಇವರು ರಾಮಾಯಣ ಸಂಗತಿಗಳನ್ನು ಕುರಿತು ಏಳು ನಾಟಕಗಳನ್ನು ಬರೆದಿದ್ದಾರೆ. ರಾಮೋದಯ, ಅಹಲ್ಯೆ, ಸೀತಾಪರಿಣಯ, ಹರಿಣಾಭಿಸರಣ, ಶಬರಿ, ಶ್ರೀರಾಮಪಟ್ಟಾಭಿಷೇಕ, ರಾವಣ ಬಂದು ಹೋದುದನ್ನು ಕುರಿತು' ಶೀರ್ಷಿಕೆಗಳಿಂದ ಕವಿಯು ರಾಮಾಯಣದ ಪ್ರಮುಖ ಪ್ರಸಂಗಗಳನ್ನು ತಮ್ಮ ನಾಟಕದ ವಸ್ತುವನ್ನಾಗಿ ಮಾಡಿಕೊಂಡಿರುವುದು ತಿಳಿಯುತ್ತದೆ. ಇವುಗಳಲ್ಲಿ ರಾಮಾಯಣದ ಅಹಲ್ಯೋದ್ಧಾರದ ಒಂದು ಕಿರಿ ಪ್ರಸಂಗದ ಕಥೆಯನ್ನಾಧರಿಸಿದ 'ಅಹಲ್ಯೆ'ಯು ಎಲ್ಲನಾಟಕಗಳಿಗಿಂತ ಹಿರಿದಾದನಾಟಕ. ಇದು ಕನ್ನಡ ನಾಡಿನಲ್ಲಿ ಅನೇಕ ಪ್ರಯೋಗಗಳನ್ನು ಕಂಡು ಪ್ರಸಿದ್ಧವಾಗಿದೆ. "ಹುಲುಬಯಕೆ ಬಾ ಎನಲು ಓ ಎಂದು ಬಾರದಿರು ವಾತಾಪಿಯಂದದೊಳು ಬಾಳನೊಡೆದು" ಎಂಬ ನಾಂದಿ ಪದ್ಯವೇ ಹುಲು ಬಯಕೆಗಳಿಗೆ ಒಳಗಾಗಿ ಬಾಳುಗಳು ಒಡೆದುಹೋಗುವ ದುರಂತವನ್ನು ಧ್ವನಿಸುತ್ತ ಇಡೀ ಗೀತರೂಪಕದ ಸಂದೇಶವನ್ನು ಕಟ್ಟಿಕೊಟ್ಟಿದೆ. ಇಲ್ಲಿ ಪುತಿನರವರು ಅಹಲ್ಯೆಯು ಗೌತಮರ ಶಾಪಕ್ಕೆ ಒಳಗಾಗಿ ಕಲ್ಲಾಗದೇ ವಾಲ್ಮೀಕಿ ರಾಮಾಯಣದಲ್ಲಿರುವಂತೆ ಗಾಳಿಯಂತೆ ಯಾರಕಣ್ಣಿಗೂ ಕಾಣದಂತೆ ಅದೃಶ್ಯಳಾಗಿರುತ್ತಾಳೆ. ಇಲ್ಲಿ ಅಹಲ್ಯೆಗೆ ಇಂದ್ರನ ಬಗೆಗಿದ್ದ ಆಸಕ್ತಿಯನ್ನು,

ಅವಳಲ್ಲಿ ಉದಿಸಿರುವ ಬಯಕೆಯನ್ನು ಅಪರಾಧವೆಂದು ನೋಡದೆ, ಗೌತಮನಂತಹ ತಪಸ್ವಿಯ ಮಡದಿಯಾಗಿ ಅವಳ ಬಯಕೆಯು ನಿರ್ಲಕ್ಷಿತವಾಗಿರುವ ಹಿನ್ನೆಲೆಯಲ್ಲಿ ಸಹಜವಾದದ್ದೆಂಬಂತೆ ಅನುಕಂಪದಿಂದ ನೋಡಿದ್ದಾರೆ. ಯಾರ ಕಣ್ಣಿಗೂ ಬೀಳದೆ ನೋಯುತ್ತಿರುವ ಅವಳ ಗೋಳು ರಾಮನ ಕಿವಿಗೆ ಕೇಳುತ್ತದೆ. ಅವಳ ಪಶ್ಚಾತ್ತಾಪದ ಉರಿಯಲ್ಲಿ ಅವಳ ಕಾಮ ದಗ್ಧವಾಗಿ ಶುದ್ಧಾತ್ಮಳಾಗುತ್ತಾಳೆ.

ಆಧುನಿಕ ಬಿಡಿ ಕವಿತೆಗಳಲ್ಲಿ ರಾಮಾಯಣದ ಸನ್ನಿವೇಶವೋ ಪಾತ್ರವೋ ಇವುಗಳ ವಸ್ತುವಾಗಿದ್ದು, ಸಮಕಾಲೀನ ಸಂವೇದನೆಗೆ ತಕ್ಕಂತೆ ಮರುರೂಪಿಸಲ್ಪಟ್ಟಿವೆ. ವೀಸಿಯವರ 'ಕಾದಿರುವಳು ಶಬರಿ', ಅಡಿಗರ 'ಶ್ರೀರಾಮನವಮಿಯದಿನ', ಸುರಂ ಎಕ್ಕುಂಡಿಯವರ 'ಮಿಥಿಲೆ', ರಮೇಶ ಚಿಪಳೂಣಕರ್‌ರವರ 'ಹೀಗೊಂದು ರಾಮನ ಹಾಡು' ಸುಬ್ರಾಯ ಸಂಪಾಜೆಯವರ 'ಎಲ್ಲಿ ಹೋದಳು ಸೀತೆ', ರಾಮಚಂದ್ರ ಸೈಯವರ 'ರಾಮಾಯಣದಿಂದ ಒಂದು ವೃತ್ತಾಂತ' ರಾಧಾಕೃಷ್ಣ ಬೆಳ್ಳೂರು ಅವರ 'ದಾರಿ', ಸೀತಾರಾಮ್ ಅವರ 'ಜಾನಕಿ' ಧಾರಾವಾಹಿಗಾಗಿ ಎಚ್ ಎಸ್ ವೆಂಕಟೇಶಮೂರ್ತಿಯವರು ರಚಿಸಿರುವ ಶೀರ್ಶಿಕಾಗೀತೆ. ಮುಂತಾದ ಬಿಡಿ ಕವಿತೆಗಳು ಆಧುನಿಕ ಮನಸ್ಸು ರಾಮಾಯಣ ಕಥನಕ್ಕೆ ತೋರುತ್ತಿರುವ ಪ್ರತಿಕ್ರಿಯೆಯೇ ಆಗಿದೆ. ಸಮಕಾಲೀನ ಸಂವೇದನೆಗಳು ರಾಮಾಯಣದ ಅನೇಕ ಸನ್ನಿವೇಶಗಳನ್ನು ಅಲ್ಲಿಯ ನಡಾವಳಿಗಳನ್ನು ಪ್ರಶ್ನಿಸುತ್ತಿವೆ. ಆಗಿನ ಮೌಲ್ಯಗಳು ಹೇಗೆ ಈಗ ಅರ್ಥರಹಿತವಾಗಿ ತೋರುತ್ತಿವೆ ಎಂಬುದನ್ನು ವಿವರಿಸುತ್ತಿವೆ. ಮತ್ತೆ ಕೆಲವು ಅಲ್ಲಿ ಕಾಣಿಸಿಕೊಂಡಿರುವ ಭಾವಾನುಭವವನ್ನು ಮತ್ತೆ ಪಡೆಯಲು ಹಂಬಲಿಸುತ್ತಿವೆ ಎನಿಸುತ್ತದೆ. ರಾಮ, ಸೀತೆ, ಅಹಲ್ಯೆ, ಕೋದಂಡ, ಮಾಯಾಮೃಗ, ಲಕ್ಷ್ಮಣರೇಖೆ, ಹನುಮದ್ವಿಕಾಸ, ರಾಮಾಯಣ, ಸುಗ್ರೀವಾಜ್ಞೆ ಇತ್ಯಾದಿ ಪದಗಳು ವಿಶಿಷ್ಟ ಕಥೆಗಳನ್ನು, ಛಾಯೆಗಳನ್ನು ತಮ್ಮ ಬೆನ್ನಿಗಂಟಿಸಿಕೊಂಡು ಪ್ರತಿಮೆ, ಪ್ರತೀಕ, ರೂಪಕಗಳಾಗಿ ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಗೊಂಡು ವಿಶಾಲವಾದ ಅರ್ಥವಲಯವನ್ನೇ ಸೃಷ್ಟಿಸುತ್ತವೆ.

**ನಾಟಕಗಳು**

ರಾಮ ಕಥೆಯ ವಸ್ತುವನ್ನು ಹೊಂದಿರುವ ಅನೇಕ ನಾಟಕಗಳು ಕನ್ನಡದಲ್ಲಿ ರಚನೆಯಾಗಿವೆ, ಪ್ರಯೋಗಗೊಂಡಿವೆ, ವೃತ್ತಿ ರಂಗಭೂಮಿಯ ಕಂಪನಿ ನಾಟಕಗಳು, ಹವ್ಯಾಸೀರಂಗಭೂಮಿ, ಸಿನೆಮಾ, ಧಾರಾವಾಹಿ, ಮಕ್ಕಳ ಅನಿಮೇಟೆಡ್ ರಾಮಾಯಣ, ಹೀಗೆ ದೃಶ್ಯಮಾಧ್ಯಮದಲ್ಲಿ ರಾಮಾಯಣ ವಸ್ತುವನ್ನಾಧರಿಸಿದ ರಚನೆ–ಪ್ರಯೋಗಗಳನ್ನು ಕಾಣಬಹುದು. ದೊಟ್ಟಾಟ, ಸಣ್ಣಾಟ, ಮೂಡಲಪಾಯ, ಚಕ್ಕಳಗೊಂಬೆಯಾಟ, ಸೂತ್ರದ ಗೊಂಬೆಯಾಟ, ಹಲವು ನೃತ್ಯ ರೂಪಕಗಳಲ್ಲಿಯೂ ಎಡೆಪಡೆದಿದೆ. ಆಧುನಿಕ ಕನ್ನಡ ನಾಟಕ ಸಾಹಿತ್ಯಕ್ಷೇತ್ರದಲ್ಲಿ ಕುವೆಂಪುರವರ 'ಶೂದ್ರತಪಸ್ವಿ, 'ವಾಲ್ಮೀಕಿಯ ಭಾಗ್ಯ', ಅನಕೃಷ್ಣರಾಯರ 'ಸ್ವರ್ಣಮೂರ್ತಿ, ಚದುರಂಗರ 'ಬಿಂಬ', ಗಿರೀಶ್ ಕಾರ್ನಾಡರ 'ಮಾನಿಷಾದ', ಕೀರ್ತಿನಾಥ ಕುರ್ತಕೋಟಿಯವರ' ರಾಮಾವಸಾನ', ಶಿವರಾಮಕಾರಂತರ ಹಾಗೂ ಪುತಿನರವರ ಗೀತನಾಟಕಗಳು ವಿಶೇಷವಾದ ನಾಟಕಗಳಾಗಿದ್ದು, ಅಯಾಯ ಲೇಕಕರು ರಾಮಾುಣದ ಸನ್ನಿವೇಶಗಳು ಪಾತ್ರಗಳೊಂದಿಗೆ ನಡೆಸಿರುವ ಹೊಸ ದೃಷ್ಟಿಯ ಅನುಸಂಧಾನದ ಫಲವಾಗಿದ್ದು, ಅವರವರ ವಿಶಿಷ್ಟ ವಿಚಾರಲಹರಿಗಳಿಗೆ ತಕ್ಕಂತೆ ರಚನೆಗೊಂಡಿವೆ.

ಸಂಸ್ಕೃತದಲ್ಲಿ ಲೆಕ್ಕವಿಲ್ಲದಷ್ಟು ರಾಮಾಯಣದ ವಸ್ತುವನ್ನೊಳಗೊಂಡ ನಾಟಕಗಳಿದ್ದು ಅವು ಕನ್ನಡಿಗರ ಮೇಲೆ ಪ್ರಭಾವಬೀರಿದ್ದರೂ ಹಳಗನ್ನಡ ನಡುಗನ್ನಡದಲ್ಲಿ ನಾಟಕಗಳೇ ಇಲ್ಲ, ನಾಟಕಗಳ ಚರಿತ್ರೆ ಆರಂಭವಾಗುವುದೇ 'ಮಿತ್ರವಿಂದಗೋವಿಂದ' ಅನುವಾದ ನಾಟಕದಿಂದ. ಇನ್ನು ಸ್ವತಂತ್ರಕೃತಿಗಳು ಇಪ್ಪತ್ತನೆಯ ಶತಮಾನದಲ್ಲಿಯೇ ರಚಿತವಾದದ್ದು. ಎಸ್.ವಿ. ಪರಮೇಶ್ವರ ಭಟ್ಟರು 'ಭಾಸ ನಾಟಕ ಚಕ್ರ' ಕೃತಿಯಲ್ಲಿ ಭಾಸನ ಹದಿಮೂರುನಾಟಕಗಳನ್ನು, ಶ್ರೀರಂಗರು 'ಅಶ್ವಮೇಧ' ದಲ್ಲಿ ಆರು ಏಕಾಂಕಗಳನ್ನು, ಕೃಷ್ಣಮೂರ್ತಿಯವರು 'ಯಜ್ಞಫಲ' ನಾಟಕವನ್ನೂ, ಮಾಸ್ತಿಯವರು ಋಷ್ಯಶೃಂಗನನ್ನು ಕುರಿತು 'ಶಾಂತಾ' ಎಂಬ ನಾಟಕವನ್ನು ದಶರಥನ ಶಾಪವೃತ್ತಾಂತವನ್ನು ಕುರಿತು 'ಪ್ರಾಯಶ್ಚಿತ್ತ' ಎಂಬ ನಾಟಕದಲ್ಲಿ ಬಾಲಕಾಂಡದ ಕಥೆಯನ್ನನುಸರಿಸಿ ನಾಟಕಗಳನ್ನು ರಚಿಸಿದ್ದಾರೆ. ಸಿ. ಎನ್.

ಜಯಲಕ್ಷ್ಮಿದೇವಿ 'ದಶರಥ' ದುರಂತ ನಾಟಕ ರಚಿಸಿದ್ದಾರೆ. ಭಾಸನ ಪ್ರತಿಮಾನಾಟಕದ ಎಳೆಯನ್ನು ಹಿಡಿದು ಕೈಕೆಯ ಪಾತ್ರವನ್ನು ಉದಾತ್ತೀಕರಿಸಿ ದಶರಥನನ್ನು ಕೇಂದ್ರವಾಗಿಟ್ಟುಕೊಂಡು 'ದಶರಥ' ಎಂಬ ನಾಟಕವನ್ನು, ರಚಿಸಿದ್ದಾರೆ. ಈ ನಾಟಕ ಸಹೃದಯರು ವಿಮರ್ಶಕರನ್ನು ಸೆಳೆದಿದೆ. ಕಾಶಿ ವಿಶ್ವನಾಥರು 'ಕೈಕೇಯಿ' ಎಂಬ ನಾಟಕವನ್ನು ಬರೆದಿದ್ದಾರೆ. ಭಾಸನ ಪ್ರತಿಮಾ ನಾಟಕವನ್ನು ಕನ್ನಡಕ್ಕೆ ಎನ್. ರಂಗಾಚಾರ್, ಕೃಷ್ಣಮೂರ್ತಿ, ಸಣ್ಣಗುಡ್ಡಯ್ಯ, ಮೈಸೂರು ಸೀತಾರಾಮಶಾಸ್ತ್ರಿಗಳು ಮುಂತಾದ ಅನೇಕರು ಅನುವಾದಿಸಿದ್ದಾರೆ. 'ಮಂಥರೆ' ಎಂಬ ನಾಟಕವನ್ನು ಹುಲ್ಲುಕೆರೆ ರಮೇಶರವರು, 'ಜಾನಕೀ ಪರಿಣಯ' ಎಂಬ ನಾಟಕವನ್ನು ಬಿ. ಸೂರ್ಯನಾರಾಯಣಪ್ಪ ಮತ್ತು ಹನುಮಾನ್ ವೆಂಕಟರಾಯರು, ಕಂದಗಲ್ ಹನುಮಂತರಾಯರು 'ಸೀತಾಸ್ವಯಂವರ'ವನ್ನು ಬೆಳ್ಳಾವೆ ನರಹರಿಶಾಸ್ತ್ರಿಗಳು ಮತ್ತು ದ.ಕೃ ಭಾರದ್ವಾಜರು 'ಸೀತಾಕಲ್ಯಾಣ' ನಾಟಕಗಳನ್ನು ರಚಿಸಿದ್ದಾರೆ. ಪರಶುರಾಮನನ್ನೇ ಮುಖ್ಯವಾಗಿಸಿಕೊಂಡು 'ಭಾರ್ಗವ' ಎಂಬ ನಾಟಕವನ್ನು ತಿರುಮಲಾಂಬರವರು ಹಾಗೂ ಡಿವಿಜಿ, ಸೀತಾರಾಮಶಾಸ್ತ್ರಿಗಳು, ಹೆಚ್ ಸುಬ್ಬರಾಯರುಗಳು 'ಪರಶುರಾಮ' ನಾಟಕಗಳನ್ನೂ ರಚಿಸಿದ್ದಾರೆ. ಅಹಲ್ಯೆ, ಊರ್ಮಿಳೆಯ ಪಾತ್ರಗಳನ್ನು ಮುಖ್ಯವಾಗಿ ಪರಿಗಣಿಸಿ ರಚಿಸಿರುವ ನಾಟಕಗಳು ಹಲವಿವೆ. ತಿರುಮಲೆ ರಾಜಮ್ಮನವರು 'ತಪಸ್ವಿನಿ' ಎಂಬ ನಾಟಕವನ್ನು ನಾರಾಯಣ ರಾಯರು 'ಊರ್ಮಿಳಾ' ಎಂಬ ನಾಟಕವನ್ನೂ ರಚಿಸಿದ್ದಾರೆ. ಪುತಿನ, ಬುದ್ದಣ ಹಿಂಗಮಿರೆ, ಕೇಶವ ಶೆಟ್ಟಿಗಾ, ಗೋಪಾಲಕೃಷ್ಣ ಆಚಾರ್ಯ, ಸಮೇತನಹಳ್ಳಿ ರಾಮರಾಯ ಇವರುಗಳಿಗೆ ಅಹಲ್ಯೆ ಪ್ರಸಂಗವೇ ನಾಟಕದ ವಸ್ತು. ಇವುಗಳಲ್ಲಿ ಪು.ತಿ. ನರಸಿಂಹಾಚಾರ್ಯರ ಕೃತಿಯು ಅತ್ಯುತ್ತಮವಾಗಿದೆ.

ನಾಟಕಕಾರರನ್ನು ವಿಶೇಷವಾಗಿ ಸೆಳೆದಿರುವ ಮತ್ತೊಂದು ಪ್ರಸಂಗ ಪಾದುಕಾ ಪ್ರದಾನ. ಭರತ ರಾಮರ ಭ್ರಾತೃಪ್ರೇಮ ರಾಮನ ಅಚಲ ನಿರ್ಧಾರಗಳ ಮೇಲೆ ಕೇಂದ್ರೀಕೃತವಾದ ಈ ಪ್ರಸಂಗವನ್ನಿಟ್ಟುಕೊಂಡು ಹಲವು ನಾಟಕಗಳು ಕನ್ನಡದಲ್ಲಿ ಬಂದಿವೆ. ಬೆಳ್ಳಾವೆ ನರಹರಿ ಶಾಸ್ತ್ರಿಗಳ 'ಪಾದುಕಾಪಟ್ಟಾಭಿಷೇಕ', ಪೆರ್ಲಕೃಷ್ಣಭಟ್ಟ ಅವರ 'ಪಾದುಕಾಪ್ರದಾನ', ಅಮೆಮ್ಮಂಬಳ ಅನಂತಯ್ಯನಾವಡರ 'ಪಾದುಕಾಕಿರೀಟಿ' ಕೆವಿ ಶಂಕರಗೌಡರ 'ಭರತನ ಬಂಧುಪ್ರೇಮ' ಇವುಗಳನ್ನು ನೋಡಬಹುದು. ಮಾಯಾಜಿಂಕೆಯ ಪ್ರಸಂಗ, ಶೂರ್ಪನಖಿಯ ಅಪಮಾನ, ನಂತರದಲ್ಲಿ ಶಬರಿಯ ಪ್ರೇಮ, ಹನುಮಂತನ ಭಕ್ತಿ ಸಾಹಸಗಳು, ವಾಲಿಯ ವಧೆ, ಚೂಡಾಮಣಿ ಪ್ರದಾನ, ಮಂಡೋದರಿಯ ಕಳವಳ ಇವೆಲ್ಲ ಪ್ರಸಂಗಗಳೂ ಸೀತಾಪಹರಣ, ರಾಮರಾವಣರ ಯುದ್ಧದ ಹಿನ್ನೆಲೆಯಲ್ಲಿ ನಾಟಕಕಾರರ ವಿಶೇಷ ಗಮನವನ್ನು ಸೆಳೆದಿವೆ. ಅವುಗಳನ್ನು ಕುರಿತಂತೆ ಶ್ರೀಕಂಠೇಗೌಡ ಮತ್ತು ಶಾಂತಕವಿಗಳ 'ಸೀತಾರಣ್ಯಪ್ರವೇಶ', ಎಂ.ಕೆ. ಗೋಪಾಲಕೃಷ್ಣ ಭಟ್ಟರ' ಶೂರ್ಪನಖಿಯ ಮಾನಭಂಗ' ಕಡೆಂಗೋಡ್ಲು ಶಂಕರಭಟ್ಟರ 'ಸೀತಾಹರಣ', ಕಂದಗಲ್ಲ ಹನುಮಂತರಾಯರ 'ಮಾಯಾಮೃಗ', ತಿರುಕರವರು ಬರೆದಿರುವ 'ಭಕ್ತೆ ಶಬರಿ', ಮಹಾಂತೇಶ ಶಾಸ್ತ್ರಿಗಳು ಬರೆದಿರುವ 'ಮಾರುತಿ ಮಾತೃಭಕ್ತಿ', ಶಾಂತಕವಿಗಳ 'ಆಂಜನೇಯ ವಿಜಯ, ತಿಪ್ಪಣಾಚಾರ್ಯರ 'ಹನುಮದ್ವಿಲಾಸ', ಶ್ರೀಕಂಠ ಶಾಸ್ತ್ರಿಗಳ ಹಾಗೂ ಬೆಳ್ಳಾವೆಯವರ 'ಅಭಿಜ್ಞಾನ ಶುಭೋದಯ', ಶಿರ್ಶಿ ಗಂಗಾಧರ ಹೆಗಡೆಯವ 'ಭಾಗ್ಯಹೀನೆ ಮಂಡೋದರಿ', ಮಳಲಿ ವಸಂತಕುಮಾರ್ ಅವರ 'ಲಂಕೇಶ್ವರ' ಎಸ್. ಟಿ ಕುಲಕರ್ಣಿಯವರ 'ಲಂಕೆಗೆ ಬೆಂಕಿ' ಇವುಗಳನ್ನು ನೋಡಬಹುದು.

ಉತ್ತರ ರಾಮಾಯಣ ಕಥಾ ಸನ್ನಿವೇಶಗಳಲ್ಲಿ ನಾಟಕಕಾರರನ್ನು ವಿಶೇಷವಾಗಿ ಸೆಳೆದಿರುವುದು ರಾಮನ ಪಟ್ಟಾಭಿಷೇಕ, ಶಂಭುಕ ವಧೆ, ಸೀತಾಪರಿತ್ಯಾಗ ಸನ್ನಿವೇಶಗಳು. ಬೆಳ್ಳಾವೆಯವರು, ಎಸ್ ರಂಗಾಚಾರ್, ಪಾನ್ಯಂ ಸುಂದರ ಶಾಸ್ತ್ರಿಯವರು 'ಅಭೀಷೇಕ' ನಾಟಕವನ್ನು ಬರೆದಿದ್ದಾರೆ. ಸೀತಾಪರಿತ್ಯಾಗ ಕುರಿತು ಕುವೆಂಪು ವಾಲ್ಮೀಕಿಯ ಭಾಗ್ಯ' ಎಂಬ ಹೆಸರಿನಲ್ಲಿ, ಆರ್.ಕೆ. ಹಾನಗಲ್ಲ ಅವರು 'ಪ್ರೇಮ ವಿಜಯ' ಎಂಬ ಹೆಸರಿನಲ್ಲಿ ನಾಟಕ ರಚಿಸಿದ್ದಾರೆ. ಶಂಭುಕನ ಸನ್ನಿವೇಶವನ್ನು ಕುರಿತು ಕುವೆಂಪುರವರು 'ಶೂದ್ರ ತಪಸ್ವಿ', ಸಿ.ಕೆ. ನಾಗರಾಜರಾವ್ ಅವರು 'ಶೂದ್ರ ಮುನಿ', ವಿ.ಬಿ. ಮಧುರಂ ಮತ್ತು ಎನ್.ಎಸ್. ಜೈನಿ ಅವರು 'ಶಂಭುಕ ವಧೆ' ಎಂಬ ಹೆಸರಿನಲ್ಲಿ ನಾಟಕಗಳನ್ನು ರಚಿಸಿದ್ದಾರೆ. ಇದರಲ್ಲಿ ಶೂದ್ರತಪಸ್ವಿ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹೊಸ ದೃಷ್ಟಿಕೋನದ, ಬಹು ಚರ್ಚಿತವಾದ ನಾಟಕವಾಗಿದೆ ಇತರ ನಾಟಕಗಳಲ್ಲಿ ಶಿವರಾಮ ಕಾರಂತರ 'ಗೀತನಾಟಕಗಳು', ಎಸ್.ವಿ. ರಂಗಣ್ಣನವರ

'ಕಿರುನಾಟಕಗಳು', ಕೀರ್ತಿನಾಥ ಕುರ್ತುಕೋಟಿಯವರ ಗೀತ ನಾಟಕ 'ರಾಮಾವಸಾನ' ಸೋಸಲೆ ಅಯ್ಯಾಶಾಸ್ತ್ರಿಗಳ 'ರಾಮಾಯಣ', ಎಲ್ ಬಸವರಾಜು ಅವರ "ಭಾಸ ರಾಮಾಯಣ ನಾಟಕ ತ್ರಿವೇಣಿ" ಮತ್ತು 'ನಾಟಕಾಮೃತ ಬಿಂದುಗಳು' ಬಿ. ಪುಟ್ಟಸ್ವಾಮಯ್ಯನವರ 'ಸಂಪೂರ್ಣ ರಾಮಾಯಣ' ಮತ್ತು 'ನೆಲೆಯಾಗು ಶಿಲೆಯಾಗು ಕಲೆಯಾಗು ದೇವಿ' ಅಹಲ್ಯೆಯನ್ನು ಕುರಿತ ನಾಟಕ. ಎಸ್.ವಿ.ರಂಗಣ್ಣನವರು ಬರೆದಿರುವ 'ಕಿರುನಾಟಕಗಳು' ಮುಖ್ಯವಾದವು ಇವುಗಳೊಂದಿಗೆ ಕಾಳಿದಾಸ, ಭವಭೂತಿಯ 'ಉತ್ತರ ರಾಮಚರಿತ' ನಾಟಕವನ್ನು ಅನೇಕ ಕನ್ನಡ ವಿದ್ವಾಂಸರು ಅನುವಾದಿಸಿದ್ದಾರೆ. ಬಸವಪ್ಪಶಾಸ್ತ್ರಿಗಳು, ಎಸ್.ವಿ. ಪರಮೇಶ್ವರ ಭಟ್ಟರು, ಕೆ. ಕೃಷ್ಣಮೂರ್ತಿ, ನರಸಿಂಹಾಚಾರ್, ಹುನಗುಂದ ಕೃಷ್ಣ, ಮುಳಬಾಗಲು ಧೋಂಡೋ ನರಸಿಂಹ, ಸಿ.ಪಿ. ಕೃಷ್ಣಕುಮಾರ್, ಎಲ್ ಬಸವರಾಜು ಮುಂತಾದವರು ರಾಮಾಯಣದ ಅನುವಾದಗಳನ್ನು ಮಾಡಿದ್ದಾರೆ. ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ ಸಂಪುಟಗಳು,[31] ಇದರಲ್ಲಿ ಜಯಚಾಮರಾಜ ಒಡೆಯರ ಮುನ್ನುಡಿಯಿದೆ. ಡಿವಿಜಿಯವರ ಪ್ರಸ್ತಾವನೆಯಿದೆ. ಇದು ಸುಂದರ ಚಿತ್ರಪಟ ಕಥನದಿಂದ ಕೂಡಿದೆ. ಮಿರ್ಜಿ ಅಣ್ಣಾರಾಯರು ರವಿಶೇಣನ ರಾಮಾಯಣವನ್ನು ಕನ್ನಡಕ್ಕೆ ಪರಿವರ್ತಿಸಿದ್ದಾರೆ ಅದರ ಪೂರ್ವೋದ್ಘಾತದಲ್ಲಿ ರಾಮಾಯಣ ಸಂಬಂಧವಾಗಿ ಸುದೀರ್ಘ ಮಾಹಿತಿಯನ್ನು ನೀಡಿ ವಿವೇಚಿಸಿದ್ದಾರೆ.[32] ಶ್ರೀರಾಮಾಯಣ. ಶ್ರೀಚಕ್ರವರ್ತಿ ರಾಜಗೋಪಾಲಚಾರ್ ರವರ ಕೃತಿಯನ್ನು ಡಾ. ಹುಣಸೂರು ಎಸ್. ರಾಘವೇಂದ್ರ ರಾವ್ ಅವರು ಗದ್ಯದಲ್ಲಿ ಅನುವಾದಿಸಿದ್ದಾರೆ. 516 ಪುಟಗಳಿವೆ. 'ಶ್ರೀಮದ್ ವಾಲ್ಮೀಕಿ ರಾಮಾಯಣಮ್' ಹೆಸರಿನಲ್ಲಿ ರಾಮಾಯಣದ ಎಲ್ಲ ಕಾಂಡಗಳನ್ನೂ ವಿದ್ವಾನ್ ರಂಗನಾಥ ಶರ್ಮರವರು ಕನ್ನಡಕ್ಕೆ ತಂದಿದ್ದಾರೆ. ಈ ಕೃತಿಯ ಮುನ್ನಡಿಯನ್ನು ಡಾ. ಡಿ.ವಿ. ಗುಂಡಪ್ಪನವರು ಬರೆದಿದ್ದಾರೆ.[33] 'ಅಸುರ' ಎಂಬ ಆನಂದ ನೀಲಕಂಠನ್‌ರವರ ತಮಿಳು ಕೃತಿಯನ್ನು ಬಿ.ಕೆ.ಎಸ್ ಮೂರ್ತಿ ಅನುವಾದ ಮಾಡಿದ್ದಾರೆ. ಒಟ್ಟು 372 ಪುಟಗಳಿರುವ ಈ ಕೃತಿಯಲ್ಲಿ ನಿರ್ಮೂಲವಾದ ರಾವಣ ಮತ್ತು ಆತನ ಜನಾಂಗದವರ ಕಥೆಯನ್ನು ಹೇಳಲಾಗಿದೆ. ಭಾರತ ದರ್ಶನದವರು ವಾಲ್ಮೀಕಿ ರಾಮಾಯಣವನ್ನು ಕನ್ನಡ ಲಿಪಿಯಲ್ಲಿ 11 ಸಂಪುಟಗಳನ್ನು ತಂದಿದ್ದಾರೆ. ಆನಂದ ಕರ್ನಾಟಕ ಗ್ರಂಥಮಾಲೆಯಿಂದ ಶ್ರೀಮದ್ರಾಮಾಯಣದ ಎಲ್ಲ ಕಾಂಡಗಳನ್ನು ದೇವಶಿಖಾಮಣಿ ಬಿರುದಿನ ಅಳಸಿಂಗಾಚಾರ್ಯರು ರಚಿಸಿದ್ದಾರೆ. ಟೀಕಾ ತಾತ್ಪರ್ಯ ಸಹಿತ ಶ್ರೀಮದ್ವಾಲ್ಮೀಕಿ ರಾಮಾಯಣ ಸುಂದರ ಕಾಂಡವನ್ನು ವೇ॥ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು ರಚಿಸಿದ್ದಾರೆ. ಪ್ರಕಟಣೆ. ಐರಿಷ್‌ಮುದ್ರಾಶಾಲೆ ಬೆಂ. ಕ್ರಿ.ಶ. 1913. ಈಕೃತಿಯಲ್ಲಿ ನಿತ್ಯವೂ ರಾಮಾಯಣ ಪಾರಾಯಣಮಾಡುವ ಅನುಕ್ರಮಗಳನ್ನು ತಿಳಿಸಲಾಗಿದೆ. ಶ್ಲೋಕ, ಟೀಕು ಹಾಗೂ ತಾತ್ಪರ್ಯ ಸಮೇತ ನೀಡಿದ್ದಾರೆ. ವೇ॥ ಬ್ರ॥ ಶ್ರೀ ಪಟ್ಟಾಭಿರಾಮ ಶಾಸ್ತ್ರಿಗಳ ಮಗ ಟಿ. ಸುಬ್ಬರಾಯ ಶಾಸ್ತ್ರಿಗಳಿಂದ ರಚಿಸಲ್ಪಟ್ಟ 'ಭಾವನಿರೂಪಣ'ವೆಂಬ ಕನ್ನಡ ತಾತ್ಪರ್ಯದೊಂದಿಗೆ ವ್ಯಾಖ್ಯಾನ ಸಮೇತವಾಗಿ ವಾಲ್ಮೀಕಿ ರಾಮಾಯಣವನ್ನು ಕನ್ನಡಿಗರಿಗೆ ನೀಡಿದ್ದಾರೆ.[34]

ಇತ್ತೀಚೆಗೆ ರಾಮಾಯಣದ ಹಲವು ಪ್ರಸಂಗಗಳನ್ನು ಹವ್ಯಾಸಿ ಕಲಾವಿದರು ನಾಟಕಕ್ಕೆ ಅಳವಡಿಸಿ ಪ್ರದರ್ಶಿಸುತ್ತಿರುವುದು ಹೆಚ್ಚಾಗಿದೆ. ಉದಾಹರಣೆಗೆ 'ಶೂದ್ರತಪಸ್ವಿ', 'ವಾಲಿ ವಧೆ', 'ಶಬರಿ', 'ಘೌಲಸ್ತ್ಯನ ಪ್ರಣಯ ಕಥೆ' ಇತ್ಯಾದಿ ನಾಟಕಗಳು ಸಮಕಾಲೀನ ಸಂವೇದನೆಗಳೊಂದಿಗೆ ಇಲ್ಲಿನ ಸನ್ನಿವೇಶ ಪಾತ್ರಗಳನ್ನು ಮರುರೂಪಿಸಿದ್ದು, ಹೊಸ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ವಂಶಿಯವರು ಕನ್ನಡಕ್ಕೆ ಅನುವಾದಿಸಿರುವ ಲತಾ ಅವರ ಕಾದಂಬರಿಯನ್ನಾಧರಿಸಿ ಎಸ್.ವಿ. ಕೃಷ್ಣಶರ್ಮರು ನಾಟಕವಾಗಿ ಪ್ರಯೋಗ ಮಾಡಿದ್ದಾರೆ. ಇದರಲ್ಲಿ ರಾವಣನು ಖಳನಾಯಕನಲ್ಲ ಅವನು ನಾಯಕನಾಗಿ ವಿಜೃಂಭಿಸಿರುವುದನ್ನು ನೋಡಬಹುದು. ಮಹಾ ಪ್ರತಿಭಾನ್ವಿತನಾದ ಅವನು ಸಂಗಿತಜ್ಞ, ವಾಗ್ಮಿ, ಉತ್ತಮ ರಾಜ, ಉತ್ತಮ ಪತಿ, ಪ್ರೇಮಿ, ಅಣ್ಣ, ಇತ್ಯಾದಿಯಾಗಿ ಅವನನ್ನು ಮಹಾನ್ ವ್ಯಕ್ತಿಯಾಗಿ ಬಿಂಬಿಸಿದ್ದರೂ ಕೂಡ, ಅವನೂ ದೌರ್ಬಲ್ಯಗಳನ್ನು ಹೊಂದಿರುವ ಮನುಷ್ಯ ಸಹಜ ಗುಣ ಉಳ್ಳವನು. ಇಲ್ಲಿ ಸೀತಾಪಹರಣದ ಅಪವಾದವನ್ನೂ ಲೆಕ್ಕಿಸದೆ, ಸೀತೆ ಮಂಡೋದರಿಯ ಮಗಳೆಂದು ತಿಳಿದು ಅವಳ ಯೋಗ ಕ್ಷೇಮಕ್ಕಾಗಿ ತೌರಿಗೆ ಕರೆತರುತ್ತಾನೆಂದೂ, ಅಳಿಯನಾದ ರಾಮನಲ್ಲಿ ಐಕ್ಯನಾಗಿ ಮುಕ್ತಿ ಪಡೆಯುವ ಸಲುವಾಗಿಯೇ ಅವನನ್ನು ಕೆರಳಿಸಿ ಕೈವಲ್ಯ ಪಡೆಯುತ್ತಾನೆ ಎಂದು, ಅವನ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಉನ್ನತೀಕರಣಕ್ಕೆ ಒಳಗುಮಾಡಲಾಗಿದೆ. ಇವೆಲ್ಲಕ್ಕಿಂತ

ಕುತೂಹಲಕರವಾದುದು ಅವನು ರಾಮಾಯಣವನ್ನು ಬರೆಯಲು ಪ್ರೇರಕನೂ, ಸೂತ್ರಧಾರನೂ ಆಗಿ ಮುಖ್ಯ ಪಾತ್ರ ವಹಿಸುತ್ತಾನೆ ಎನ್ನುವಂತೆ ಕಥಿಸಿರುವುದು.

ಯಕ್ಷಗಾನ ರಾಮಾಯಣ ಪ್ರಸಂಗಗಳೂ ಕನ್ನಡದಲ್ಲಿ ವಿಶೇಷವಾಗಿ ಗಮನ ಸೆಳೆಯುತ್ತವೆ. ಅದರಲ್ಲೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅತ್ಯಂತ ಪ್ರಸಿದ್ಧವಾಗಿಯೂ ಜೀವಂತವಾಗಿಯೂ ಇರುವ ಈ ಕಲಾಪ್ರಕಾರವು ಸಂಗೀತ, ನೃತ್ಯ, ವೇಷ ಭೂಷಣ, ಸಂಭಾಷಣಾ ಸೌಂದರ್ಯ ಹಾಗೂ ಸನ್ನಿವೇಶಗಳ ಸೂಕ್ಷ್ಮ ವಿಶ್ಲೇಷಣೆಯನ್ನೂ ಮಾಡುತ್ತ ಪ್ರಸಂಗಗಳನ್ನು ಪುರಾಣ ಪಾತ್ರಗಳ ನಡಾವಳಿಗಳನ್ನು ಸಮಕಾಲೀನ ಚಿಂತನೆಯ ಹಿನ್ನಲೆಯಲ್ಲಿ ಪ್ರಶ್ನಿಸುವ, ಅದಕ್ಕೆ ಸಮಜಾಯಿಶಿಯನ್ನು ಕೇಳುವ, ಶೋತೃವಿನಲ್ಲಿ ಏಳಬಹುದಾದ ಅನೇಕ ಸಂಶಯ ಅನುಮಾನಗಳಿಗೆ ಉತ್ತರ ನೀಡುವ ಒಂದು ವಿಶಿಷ್ಟವಾದ ಕಲಾ ಮಾಧ್ಯಮವಾಗಿದೆ. ಈ ಕ್ಷೇತ್ರದಲ್ಲಿ ಹಲವಾರು ಕಲಾವಿದರಿದ್ದಾರೆ. ಪಾರ್ತಿ ಸುಬ್ಬನವರದು ಬಹಳ ದೊಡ್ಡ ಹೆಸರು. ಈತ 'ಪುತ್ರಕಾಮೇಷ್ಠಿ–ಸೀತಾಕಲ್ಯಾಣ', ಪಟ್ಟಾಭಿಷೇಕ–ಪಂಚವಟಿ', 'ವಾಲಿಸಂಹಾರ', 'ಉಂಗುರಸಂಧಿ', 'ಸೇತುಬಂಧನ, 'ಅಂಗದ ಸಂಧಾನ, 'ಕುಂಭಕರ್ಣ ಕಾಳಗ', 'ಕುಶಲವರ ಕಾಳಗ' ಎಂಬ ರಾಮಾಯಣ ಪ್ರಸಂಗಗಳನ್ನು ಆಧರಿಸಿ ಎಂಟು ಯಕ್ಷಗಾನಗಳನ್ನು ರಚಿಸಿದ್ದಾನೆ. ಕವಿಚರಿತೆಕಾರರು ಈ ಕಲಾವಿಧನನ್ನು ಕುರಿತು ಉಲ್ಲೇಖಿಸಿದ್ದಾರೆ. ಈತನ ಮೇಲೆ ಲಕ್ಷ್ಮೀಶ, ನರಹರಿಕವಿಗಳ ಪ್ರಭಾವವನ್ನೂ, ಕೇರಳದ ಕಥಕ್ಕಳಿಯ ಪ್ರಭಾವವನ್ನೂ ಆಳ್ವಾರರ ದಿವ್ಯಪ್ರಬಂಧಗಳಿಂದ ಪ್ರಭಾವಿತನಾಗಿದ್ದಾನೆಂದು ಅವುಗಳಿಂದ ಕೆಲವು ಪದ್ಯಗಳನ್ನೂ ಬಳಸಿಕೊಂಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಇವುಗಳಲ್ಲಿ ಕಥೆಗೆ ಒಂದು ರೋಚಕತೆಯ ಲೇಪವಿರುತ್ತದೆ. 17–18ನೇ ಶತಮಾನದಲ್ಲಿ ಅನೇಕ ಯಕ್ಷಗಾನಕಲಾವಿದರು ರಾಮಾಯಣದ ಪ್ರಸಂಗಗಳನ್ನು ರಚಿಸಿದ್ದಾರೆ. ಗೇರುಸೊಪ್ಪೆ ಶಾಂತಪ್ಪಯ್ಯನವರು ರಚಿಸಿದ ಪುತ್ರಕಾಮೇಷ್ಠಿ, ಕೃತಿಕಾರರ ಹೆಸರು ತಿಳಿಯದ ರಾಮಪರಂಧಾಮ' ಹಾಗೂ ಶ್ರೀರಾಮಾಶ್ವಮೇಧ' ಯಕ್ಷಗಾನಗಳೂ ರಚಿತವಾಗಿವೆ. ಆಧುನಿಕ ಕಾಲಘಟ್ಟದಲ್ಲೂ ಅನೇಕ ರಾಮಾಯಣದ ಪ್ರಸಂಗಗಳನ್ನು ಕುರಿತ ಯಕ್ಷಗಾನಗಳು ರಚಿತವಾಗಿವೆ.[34]

### ಕಾದಂಬರಿ

ರಾಮಾಯಣದ ಕಥೆ ಹಾಗೂ ಪಾತ್ರಗಳಿಗೆ ಸಂಬಂಧಿಸಿ ಕಾದಂಬರಿಗಳು, ಕಿರು ಕಾದಂಬರಿಗಳು ರಚಿತವಾಗಿವೆ. ಹೆಚ್.ವಿ. ಸಾವಿತ್ರಮ್ಮನವರ 'ರಾಮ ಸೀತೆ ರಾವಣ' (1984) ಉತ್ತರಾಕಾಂಡದ ಕಥೆಯನ್ನೊಳಗೊಂಡ 'ವಿಮುಕ್ತಿ'ಯನ್ನು ಹಾಗೂ ಡಾ. ಪ್ರಭಾವತಿಯವರ 'ಅಹಲ್ಯೆ' ಕೃತಿಗಳನ್ನು ಗಮನಿಸಬಹುದು. ಇಲ್ಲಿನ ಸೀತೆ, ಅಹಲ್ಯೆಯರ ಪಾತ್ರಗಳನ್ನು ಸ್ತ್ರೀ ಸಂವೇದನೆಯ ಆಧುನಿಕ ದೃಷ್ಟಿಕೋನದಿಂದ ನೋಡಲಾಗಿದೆ. ಸೀತೆಯು ತನ್ನ ಜೀವನದುದ್ದಕ್ಕೂ ನಾನಾ ರೀತಿಯಲ್ಲಿ ಸಂಕಟವನ್ನು ಅನುಭವಿಸಿ ಸಾಕಾಗಿ ಕೊನೆಯಲ್ಲಿ ಎಲ್ಲಬಗೆಯ ದೌರ್ಜನ್ಯಕ್ಕೆ ಪ್ರತಿಭಟನೆಯೋ ಎಂಬಂತೆ ಮೌನವಾಗಿ ಆಶ್ರಮಕ್ಕೆ ನಡೆದುಬಿಡುವ ಚಿತ್ರವನ್ನು ಸಾವಿತ್ರಮ್ಮನವರು ಕೊಡುತ್ತಾರೆ. ಇದುವರೆಗೆ ಕನ್ನಡದಲ್ಲಿ ಬಂದಿರುವ ಅಸಂಖ್ಯಾತ ರಾಮಾಯಣ ಕಥೆಗಳಲ್ಲಿ ಕಾಣದ ಒಂದು ಹೊಸತನವಿದೆ. ಇವರು ರಾಮಾಯಣದ ಸ್ತ್ರೀಯರಾದ ಕೌಸಲ್ಯೆ, ಸುಮಿತ್ರೆ, ಕೈಕೆ, ಸೀತೆ ಊರ್ಮಿಳೆ, ಮಂಡೋದರಿಯರ ಮನೋಲೋಕವನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ. "ವಾಲ್ಮೀಕಿ ರಾಮಾಯಣದ ಪರಂಪರೆಯಲ್ಲಿ ಪುರುಷಪಾತ್ರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿದ್ದು, ಸ್ತ್ರೀಯರ ಮನೋಲೋಕವಂತೂ ಅಪರಿಚಿತವಾಗಿಯೇ ಉಳಿದುಬಿಡುತ್ತದೆ." "ಆಧುನಿಕ ಸೃಜನಶೀಲ ಸ್ತ್ರೀ ಮನೋ ಭಾವವೊಂದು ರಾಮಾಯಣದ ಕೂಡ ನಡೆಸಿದ ಸಂವಾದವೇ ಈ ಕಾದಂಬರಿಗಳ ಸಾರ" ಎಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ.[35]

**ಮೈಥಿಲಿ** ಎಂಬ ಹೆಸರಿನಲ್ಲಿ ಸಿದ್ಧಗಂಗಯ್ಯ ಕಂಬಾಳು ಅವರು ರಾಮಾಯಣವನ್ನುರಚಿಸಿದ್ದಾರೆ. ಇಲ್ಲಿ ಅವೈದಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. "ತಾವು ಚಿಕ್ಕಂದಿನಲ್ಲಿ ಕೇಳಿದ್ದ ರಾಮಾಯಣ ಕಥೆಯು ನಿಸರ್ಗಕ್ಕೆ ಹತ್ತಿರವಾಗಿದ್ದು, ಮೈಥಿಲಿಯಂಥ ಕಾದಂಬರಿಯನ್ನು ಬರೆಯಲು ಪ್ರೇರೇಪಿಸಿತೆಂದು ಅವರು ಹೇಳಿಕೊಂಡಿದ್ದಾರೆ. ಇವರ ಮೇಲೆ ಜನಪದ ರಾಮಾಯಣ ಕಥೆಗಳು ಪ್ರಭಾವಬೀರಿವೆ.

'ಕಾಂಡ' ಎಂಬ ಕಾದಂಬರಿಯೂ ರಾಮಾಯಣಕಥೆಯನ್ನು ಹೊಂದಿದ್ದು ಕಂನಾಡಿಗಾ ನಾರಾಯಣ ಎಂಬುವವರು ಬರೆದಿದ್ದಾರೆ. ಇಲ್ಲಿ ಸೀತಾ

ಸ್ವಯಂವರದಲ್ಲಿ ಜನಕನು ಎಸಗುವ ರಾಜಕೀಯವನ್ನು ವಿವರಿಸುತ್ತಾರೆ. ಇತರರಿಗೆ ಸಾಧ್ಯವಾಗದಂತೆ ಶಿವಧನುಸ್ಸಿನ ಕೆಳಗೆ ಆಯಂಸ್ಕಾಂತವನ್ನು ಅವನು ಬಚ್ಚಿಟ್ಟಿರುತ್ತಾನೆ. ರಾಮನು ಸೀತೆಯನ್ನು ವರಿಸಬೇಕೆಂಬ ಅಪೇಕ್ಷೆಯಿಂದ ರಾಮ ಧನುಸ್ಸನ್ನು ಎತ್ತಲು ಬಂದ ಸಮಯದಲ್ಲಿ ಅಯಸ್ಕಾಂತವನ್ನು ತೆಗೆದುಬಿಡುತ್ತಾನೆಂದು ವಿವರಿಸಿದ್ದಾರೆ. ಇದರಲ್ಲೂ ಸೀತೆಯ ಅಗ್ನಿಪರೀಕ್ಷೆಯಿದ್ದರೂ ಇಲ್ಲಿ ಅಗ್ನಿಕುಂಡವಿಲ್ಲ, ಸೀತೆಯು ಬೆಂಕಿಯನ್ನು ಹಾರಿ ಪಾತಿವ್ರತ್ಯವನ್ನು ಸಾಬೀತುಪಡಿಸುವಾಗ ಬೆಂಕಿಯು ತಗುಲಿ ಅವಳ ಪಾದಗಳನ್ನು ಸುಡುತ್ತದೆಂದು ವಿವರಿಸುವ ಪ್ರಯತ್ನಮಾಡಿದ್ದಾರೆ.

* * *

ಮಂಗಳದಾಯಕವಾದ ಮುಕ್ತಾಯವು ಭಾರತೀಯ ಕಥೆಗಳು, ಪುರಾಣ ಕಾವ್ಯರಚನೆಯ ಸಹಜ ವಿಧಾನವಾಗಿದ್ದು ಕನ್ನಡ ಸಾಂಪ್ರದಾಯಿವಾದ ಕಾವ್ಯ, ಗದ್ಯಕೃತಿಗಳು, ನಾಟಕಗಳು ಸಹ ಇದಕ್ಕೆ ಹೊರತಲ್ಲ. ರಾವಣ ಸಂಹಾರದ ನಂತರ ರಾಮಾಯಣದಲ್ಲಿ ಕಥೆ ಸುಖಾಂತವಾಗಿ ಮುಗಿಯುವುದೇ ಹೆಚ್ಚು. ಆಧುನಿಕ ಕನ್ನಡ ರಾಮಾಯಣ ರಚನೆಗಳಲ್ಲಿ ದುಃಖಾಂತವಾದ ಉತ್ತರರಾಮಕಥೆಯು ಕನ್ನಡಿಗರ ಗಮನವನ್ನು ವಿಶೇಷವಾಗಿ ಸೆಳೆದಿದೆ. ಅದನ್ನೂ ಸುಖಾಂತವನ್ನಾಗಿ ಮಾಡುವ ಪ್ರಯತ್ನವನ್ನು ಅನೇಕ ಕವಿಗಳು ಮಾಡಿರುವುದನ್ನು ಗಮನಿಸಬಹುದು. ಕನ್ನಡದಲ್ಲಿ. ನವ್ಯ, ಸೃಜನಶೀಲ ಲೇಖಕರ ವಿಭಿನ್ನ ವಿಚಾರಧಾರೆಯು ರಾಮಾಯಣ ಕಥೆಯರಚನೆಯ ಮೇಲೆ ಪ್ರಭಾವಬೀರಿದೆ. ಇದರಲ್ಲಿ ಛಂದೋವೈವಿದ್ಯವೂ ಇರುವುದನ್ನೂ ಗಮನಿಸಬಹುದು. "ಒಂದಲ್ಲಾ ಒಂದು ಬಗೆಯಲ್ಲಿ ಉತ್ತರ ಕಾಂಡವು ರಾಮಾಯಣದ ಮುಖ್ಯ ಕಥಾವಾಹಿನಿಯಲ್ಲಿ ನಡೆಯುವ ಘಟನೆಗಳಿಗೆ ವಿವರಣೆ ನೀಡಲು ಯತ್ನಿಸಿದೆ ಎಂದು ಸಂಕಾಲಿಯಾ ಅವರು ಅಭಿಪ್ರಾಯಪಟ್ಟಿದ್ದಾರೆ."[36]

**ಕನ್ನಡದ ಅನೇಕ ರಚನೆಗಳು ಹೀಗೆ ಪೂರ್ವ ರಾಮಾಯಣದ ಪ್ರಸಂಗಗಳಿಗೆ, ವ್ಯಕ್ತಿಗಳ ನಡವಳಿಕೆಗಳಿಗೆ, ಒಂದು ಪ್ರತಿಕ್ರಿಯಾ, ರೂಪದ, ಇಲ್ಲವೇ ಸಮಜಾಯಿಶಿಯ, ಇಲ್ಲವೇ ವಿಶ್ಲೇಷಣೆಯ ದಾರಿ ಹಿಡಿದಿರುವುದನ್ನೂ ಕಾಣಬಹುದು. ಪೂರ್ವರಾಮಾಯಣದ ಅನೇಕ ಪಾತ್ರಗಳ ನಡವಳಿಕೆಗಳಿಗೆ ಕಾರಣವಾಗುವ ಅವರ ಪೂರ್ವ ಜನ್ಮಗಳ ಹಾಗೂ ಪೂರ್ವಕೃತ ಪಾಪ-ಪುಣ್ಯ ಕಾರ್ಯಗಳನ್ನು ಕುರಿತು ವಿವರಣೆಯನ್ನು ನೀಡಲು ಪ್ರಯತ್ನಿಸಿರುವುದು ಕನ್ನಡದ ಪ್ರಾಚೀನ ಮತ್ತು ಆಧುನಿಕ ಎಲ್ಲಾ ರಾಮಾಯಣಗಳಲ್ಲೂ ಕಾಣಿಸಿಕೊಂಡಿದೆ. ಅಮಂಗಲ ಗಳಿಗೆಯಲ್ಲಿನ ರಾವಣಾದಿಗಳ ಹುಟ್ಟೇ ಅವರು ದುಷ್ಟರಾಗಲು ಕಾರಣ ಎಂದು ವಿವರಿಸಿರುವುದು, ರಾವಣ ಸೀತೆಯನ್ನು ಅಪಹರಿಸಿದರೂ ಅವಳನ್ನು ಮುಟ್ಟದಿರಲು ವೇದವತಿಯ ಶಾಪ ಕಾರಣ ಎಂದು ಹೇಳುವುದು, ಕೈಕೆ ರಾಮನಿಗೆ 14ವರ್ಷ ವನವಾಸದ ವರ ಕೇಳಲು ಕಾರಣ ರಾಮನ ಸಾವನ್ನು ತಪ್ಪಿಸುವುದು ಎಂದು ಸಮಜಾಯಿಶಿ ಕೊಡುವುದು, ಸೋದರನ ಮಡದಿಯೊಂದಿಗಿನ ಅನುಚಿತ ವರ್ತನೆಯೇ ರಾಮ ವಾಲಿಯನ್ನು ಕೊಲ್ಲಲು ಕಾರಣ, ಹನುಮನಿಗೆ ತನ್ನ ಸತ್ವದ ಅರಿವು ಮರೆತುಹೋಗಲು ಕಾರಣ ಮುನಿಯ ಶಾಪ, ಅಹಲ್ಯೆಯ ಪಾಪತೊಳೆಯುವ ರಾಮ ಸೀತೆಗೆ ಕಠಿಣವಾಗಿ ನಡೆದುಕೊಳ್ಳುವುದಕ್ಕೆ, ಸೀತೆಗೆ ಅಪವಾದ ಬರವುದಕ್ಕೆ 'ಶುಕಶಾಪ'ವೇ ಕಾರಣ ಎಂದು ಹೇಳಿಬಿಡುವುದು ಇತ್ಯಾದಿ ನಾನಾ ಬಗೆಯ ಪೂರ್ವ ವೃತ್ತಾಂತಗಳನ್ನು ಹೆಣೆದು ಮೂಲ ರಾಮಾಯಣದ ತೊಡಕುಗಳಿಗೆ (ಹಾಗೆ ಅನಿಸುವ ಸನ್ನಿವೇಶಗಳಿಗೆ), ಸಮಸ್ಯೆಗೆ ಒಂದು ಸಮಾಧಾನದ ಉತ್ತರವನ್ನು ಹೇಳುವ ಪ್ರಯತ್ನವನ್ನು ಬರಹಗಾರರು ಮಾಡಿರುವುದು ಕಂಡುಬರುತ್ತದೆ. ಇದರಿಂದಾಗಿ ಹಲವು ಬಗೆಯ ಉಪಕಥೆಗಳು, ಒಳಗಥೆಗಳು, ಪೂರ್ವ ವೃತ್ತಾಂತಗಳು, ಬಿಚ್ಚಿಕೊಂಡಿವೆ. ಹೊಸ ದೃಷ್ಟಿಕೋನಗಳು ಕಾಣಿಸಿಕೊಂಡಿವೆ.**

**ಡಿ.ವಿ. ಗುಂಡಪ್ಪನವರ** 'ಶ್ರೀರಾಮಪರೀಕ್ಷಣಂ' ಕೃತಿ ವಿಶಿಷ್ಟವಾಗಿದೆ ಕಂದ, ವೃತ್ತ, ದ್ವಿಪದಿಗಳು, ಗದ್ಯದ ಮಿಶ್ರಿತ ವಿಶಿಷ್ಟಪ್ರಕಾರವಾಗಿದೆ. * (ಜಿ.ಪಿ. ರಾಜರತ್ನಂ ಇದರ ಸರಳ ಗದ್ಯಾನುವಾದವನ್ನು ಮಾಡಿದ್ದಾರೆ.) ಅಲ್ಲದೆ ರಾಮಾಯಣದ ಘಟನೆಗಳನ್ನು, ಪಾತ್ರಗಳ ವರ್ತನೆಯನ್ನು ಕುರಿತಂತೆ ಈ ಕೃತಿಯಲ್ಲಿ ಹಲವಾರು ಬಗೆಯ ಪ್ರಶ್ನೆಗಳನ್ನು ಎತ್ತಿಕೊಂಡು ಅವುಗಳಿಗೆ ಉತ್ತರವನ್ನು ನೀಡುವ ಹೊಸ ಕಾವ್ಯ ತಂತ್ರವನ್ನು ಪ್ರಯೋಗಿಸಲಾಗಿದೆ. ರಾಮಾಯಣದ ಹಲವಾರು ಸಮಸ್ಯೆಗಳ ಮೇಲೆ ಇಲ್ಲಿ ಬೆಳಕನ್ನು ಚೆಲ್ಲಲಾಗಿದೆ. ಮೂಲರಾಮಾಯಣ ಪ್ರಸಂಗದ ಜೊತೆಗೆ ಉತ್ತರ ರಾಮಾಯಣದ ಸೀತೆಯ ಪರಿತ್ಯಾಗದ ಕುರಿತಾಗಿ ಜನಸಾಮಾನ್ಯರಲ್ಲಿ ಸಹಜವಾಗಿ ಎದ್ದಿರುವ ಅನುಮಾನಗಳು ಪ್ರಶ್ನೆಗಳನ್ನು ಮುಖ್ಯವಾಗಿ

ಪರಿಗಣಿಸಲಾಗಿದೆ. ಇದರಲ್ಲಿ ಸುಮಾರು 54 ಪದ್ಯ ಹಾಗೂ ಗದ್ಯಗಳಲ್ಲಿ ಸೀತೆಯ ಪ್ರಶ್ನೆಗೆ, ಲೋಕಜನದ ಪ್ರಶ್ನೆಗೆ 42 ಪದ್ಯ ಹಾಗೂ ಗದ್ಯ ಭಾಗ, ಶಂಬೂಕ ವೃತ್ತಾಂತಕ್ಕೆ ಸಂಬಂಧಿಸಿ ಲಕ್ಷ್ಮಣನ ಪ್ರಶ್ನೆಗೆ 70 ಪದ್ಯ ಹಾಗೂ ಗದ್ಯ ಭಾಗಗಳನ್ನು ವಿನಿಯೋಗಿಸಲಾಗಿದೆ. ಇಲ್ಲಿ ಕೇಳಲಾಗುವ ಎಲ್ಲಾ ಪ್ರಶ್ನೆಗಳಿಗೂ ರಾಮನಿಂದಲೇ ಸಮರ್ಪಕವಾದ ಉತ್ತರವನ್ನು ಹೇಳಿಸಿದ್ದಾರೆ. ಇಲ್ಲಿ ರಾಮನ ರಾಜಧರ್ಮ ಪಾಲನೆಯ ನಿಷ್ಠೆ, ಜನಸಾಮಾನ್ಯರ ಸ್ವಭಾವ ಚಿತ್ರಣ, ಚಾತುರ್ವರ್ಣ್ಯವನ್ನು ಕುರಿತ ಧರ್ಮ ಸೂಕ್ಷ್ಮತೆಯ ಕಡೆಗೆ ಒತ್ತುಕೊಡಲಾಗಿದೆ.

ಕನ್ನಡದಲ್ಲಿ ಲೆಕ್ಕವಿಲ್ಲದಷ್ಟು **ವಿಮರ್ಶಾ ಕೃತಿಗಳು ರಾಮಾಯಣವನ್ನು ಕುರಿತು ರಚಿತವಾಗಿವೆ.** ಮಾಸ್ತಿವೆಂಕಟೇಶ ಅಯ್ಯಂಗಾರರು 'ಉತ್ತರಕಾಂಡ ವಿಚಾರ', ಎ.ಎನ್. ಮೂರ್ತಿರಾಯರು 'ಪೂರ್ವಸೂರಿಗಳೊಡನೆ', ವರದರಾಜರಾಯರು 'ಸೀತಾಪರಿತ್ಯಾಗ ಪ್ರಸಂಗ' ಹೆಸರಿನಲ್ಲಿ ರಾಮಾಯಣ ಉತ್ತರ ಕಾಂಡಕ್ಕೆ ಸಂಬಂಧಿಸಿ ವಿಮರ್ಶೆಗಳನ್ನು ಮಾಡಿದ್ದಾರೆ. ಇತ್ತೀಚೆಗೆ ಕೆಲವು ವಿಶಿಷ್ಟ ವಿಮರ್ಶಾಕೃತಿಗಳು ಬಂದಿವೆ. 'ಶ್ರೀಮದ್ರಾಮಾಯಣ ಪಂಚಮಹಾಕಾವ್ಯ ಅವಲೋಕನಾಮೃತಂ' ಹೆಸರಿನ ಕೃತಿಯಲ್ಲಿ ವಾಲ್ಮೀಕಿ, ಕಂಬನ್, ತುಳಸೀ, ಬತ್ತಲೇಶ್ವರ, ಕುವೆಂಪುರವರ ರಾಮಾಯಣಗಳ ತೌಲನಿಕ ಅಧ್ಯಯನವನ್ನು ಪ್ರೊ. ಆರ್ ಶ್ರೀನಿವಾಸ ಅಯ್ಯಂಗಾರ್ ಮಾಡಿದ್ದಾರೆ.[37] 'ಶ್ರೀರಾಮಾಯಣದ ಮಹಾಪ್ರಸಂಗಗಳು' ಎಂಬ ಕೃತಿಯನ್ನು– ಪ್ರೊ. ಕೆ.ಎಸ್. ನಾರಾಯಣಾಚಾರ್ಯರು ಪ್ರಕಟಿಸಿದ್ದಾರೆ.[38] 'ರಾಮಾಯಣ ಮರುದರ್ಶನ' ಹೆಸರಿನ ಕೃತಿಯನ್ನು ಪ್ರೊ. ಮಂಜುನಾಥ ಬೇವಿನ ಕಟ್ಟಿಯವರು ಸಂಗ್ರಹಿಸಿದ್ದಾರೆ.[39] 'ರಾಮಾಯಣ ಪಾತ್ರಾವಲೋಕನ' ಕೃತಿಯನ್ನು ರಾಮಚಂದ್ರ ಭಾವೆಯವರು ಬರೆದಿದ್ದಾರೆ. ಇದರಲ್ಲಿ ಮುಖ್ಯ ಪಾತ್ರಗಳ ಜೊತೆಗೆ ಕೌಸಲ್ಯೆಯ ಮಗಳು, ಮಂಥರೆ, ಗುಹ, ವಿಶ್ವಾಮಿತ್ರ, ತಾಟಕಿ, ವಸಿಷ್ಠರನ್ನು ಕುರಿತು ಚರ್ಚಿಸಿದ್ದಾರೆ.[40] 'ಶ್ರೀರಾಮಾಯಣ ಮಹಾನ್ವೇಷಣ', ಕಾವ್ಯಾವಲೋಕನ, ಎಂಬ ವೀರಪ್ಪಮೊಯಿಲಿಯವರ ರಾಮಾಯಣ ಕುರಿತು ವಿಮರ್ಶಾ ಕೃತಿಯನ್ನು ಡಾ. ಕೆ. ಅನಂತರಾಮು ಹೊರತಂದಿದ್ದಾರೆ.[41]

ಸೀತಾಪರಿತ್ಯಾಗಕ್ಕೆ ಸಂಬಂಧಿಸಿದಂತೆ ಜೈನ ವೈದೀಕ ರಾಮಾಯಣ ಪರಂಪರೆಗಳಲ್ಲಿ ಅನೇಕ ವ್ಯತ್ಯಾಸಗಳಿದ್ದರೂ ರಾಮ ಸೀತೆಯನ್ನು ಪರಿತ್ಯಜಿಸಿದನೆಂಬುದು ಪರಿತ್ಯಕ್ತಳಾದ ಸೀತೆಯ ನೋವು, ಲವಕುಶರ ಜನನ, ಇತ್ಯಾದಿಗಳಲ್ಲಿ ವ್ಯತ್ಯಾಸವಿಲ್ಲ. ಸೀತೆಯ ತಾಯ್ತನದ ಹಂಬಲ, ಶುಭ ಅಶುಭಗಳ ಸೂಚಕವಾದ ಕನಸುಗಳು, ಜಿನ ಪೂಜೆಯ ಬಯಕೆ, ರಾಮ ಸೀತೆಯನ್ನು ಪರಿಗ್ರಹಿಸಿದುದು ಸರಿಯಾದ ಕ್ರಮವಲ್ಲವೆಂಬ ಅಭಿಪ್ರಾಯ ಅಯೋಧ್ಯೆಯ ಜನರಲ್ಲಿದ್ದುದು ರಾಮನಿಗೆ ತಿಳಿಯುವುದು, ರಾಮ ಆ ಕುರಿತು ಲಕ್ಷ್ಮಣನೊಂದಿಗೆ ಸಮಾಲೋಚಿಸುವುದು. ಲಕ್ಷ್ಮಣ ರಾಮನ ನಿರ್ಧಾರವನ್ನು ವಿರೋಧಿಸುವುದು. ಸೇನಾಪತಿಯ ಮೂಲಕ ರಾಮ ಅವಳನ್ನು ಜಿನಾಲಯಗಳ ದರ್ಶನದ ನೆಪವೊಡ್ಡಿ ಕಾಡಿನ ಪಾಲುಮಾಡುವುದು, ಸೀತೆಯ ಸಂಕಟದ ವರ್ಣನೆ, ಪುಂಡರೀಕಿಣಿ ಪುರದರಸು ಅವಳನ್ನು ಪೊರೆದನೆಂಬ ವಿಚಾರವಿದೆ. ಋಷಿ ಮುನಿಗಳ ಆಶ್ರಮದಂತೆ ಜೈನ ಮುನಿಗಳ ಬಸದಿಗಳಲ್ಲಿ ಇಂತಹ ಆಶ್ರಯಗಳಿಗೆ ಅವಕಾಶವಿರಲಿಲ್ಲವಾಗಿ ಕಥೆ ಬದಲಾಗಿದೆ. ಹೀಗೆ ಅನಾಥ ಲವಕುಶರ ಜನನ ವಿದ್ಯಾಭ್ಯಾಸ, ಪರಾಕ್ರಮ, ವಿವಾಹಾದಿಗಳ ಚಿತ್ರಣಗಳು ಜೈನಪರಂಪರೆಯಲ್ಲಿ ಬಂದರೆ, ವೈದೀಕ ಪರಂಪರೆಯಲ್ಲಿ ರಜಕನ ದೂಷಣೆಯೇ ಕಾರಣವಾಗಿ, ಸೀತೆಯ ಬಯಕೆಯಂತೆ ಋಷಿಪತ್ನಿಯರ ಭೇಟಿಯ ನೆಪವೊಡ್ಡಿ ಲಕ್ಷ್ಮಣನ ಮೂಲಕವೇ ಸೀತೆಯನ್ನು ಕಾಡಿಗೆ ಸಾಗಹಾಕುವುದು, ಅವಳ ಕರುಣಾಜನಕ ಸ್ಥಿತಿಗೆ ಮರುಗಿ ವಾಲ್ಮೀಕಿ ಮಹಾಮುನಿ ಪೊರೆಯುವುದು, ಲವಕುಶರ ಜನನ, ರಾಮನ ಅಶ್ವಮೇಧಯಾಗ, ತಂದೆಮಕ್ಕಳ ಹೋರಾಟ ಮುಂತಾದ ಸನ್ನಿವೇಶಗಳು ಚಿತ್ರಣಗೊಂಡಿವೆ ಇಲ್ಲಿ, ವಿವರಗಳು ನಿಮಿತ್ತಗಳಲ್ಲಿ ಬದಲಾವಣೆಗಳು ಕಂಡು ಬಂದರೂ ಸೀತೆಯ ಚಾರಿತ್ರ್ಯದ ಬಗೆಗೆ ಹುಟ್ಟಿಕೊಂಡ ಅನುಮಾನಗಳು, ರಾಮನು ಅವಳನ್ನು ಸ್ವೀಕರಿಸಿದ್ದರ ಬಗೆಗೆ ಪ್ರಜಾಜನರ ಅಸಮಾಧಾನ, ಸೀತೆಯನ್ನು ಬಿಡುವ ಕುರಿತು ರಾಮನು ಆಪ್ತರೊಂದಿಗೆ ಚರ್ಚಿಸಿದನೋ ತಾನೇ ನಿರ್ಧರಿಸಿದನೋ ಒಟ್ಟಿನಲ್ಲಿ ಆ ಅಸಮಾಧಾನ ಹಾಗೂ ನಿರ್ಧಾರಗಳಲ್ಲಿ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ನಿರ್ಬಂಧಗಳು ಕಾಣಿಸಿಕೊಂಡಿವೆ. ಸ್ತ್ರೀಯರನ್ನು ಕುರಿತಾದ ದತ್ತವಾದ ಚೌಕಟ್ಟುಗಳು, ಮತ್ತೆ ಮತ್ತೆ ಸಾಬೀತು ಪಡಿಸಬೇಕಾಗಿ ಬರುವ ತನ್ನ

ಸತೀತ್ವ, ಸಮಾಜ ಒಪ್ಪುವ ಪತಿವ್ರತಾ ಸ್ತ್ರೀ ಮಾದರಿಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಅಶ್ವಮೇಧಯಾಗದ ಬದಲಿಗೆ ಜೈನ ಕಥಾ ಪರಂಪರೆಯು ಲವಕುಶರ ಕಾಳಗಕ್ಕೆ ಬೇರೆ ಬಗೆಯ ಕಾರಣವನ್ನು ಹುಡುಕಿಕೊಂಡಿರುವುದು ಸಮಂಜಸವಾಗೇ ಇದೆ. ಲವಕುಶರು ತನ್ನ ಮಕ್ಕಳು ಅಸಮಾನ್ಯ ಪರಾಕ್ರಮಿಗಳೆಂದು ತಿಳಿದು ಸಂತೋಷದಿಂದ ಅವರನ್ನು ಅಪ್ಪಿಕೊಳ್ಳುವ ರಾಮನು ಸೀತೆಯನ್ನು ಸ್ವೀಕರಿಸಲು ಸಿದ್ಧನಿಲ್ಲ! ಲೋಕಾಪವಾದವನ್ನು ಕಳೆಯಲು ಶಪಥ ಮಾಡಬೇಕೆಂದು ಅವಳಿಗೆ ಹೇಳಿ ಕಳಿಸುತ್ತಾನೆ. ರಾಮನಲ್ಲದೇ ಅನ್ಯರನ್ನು ನೆನೆದವಳಾದರೆ ಅಗ್ನಿಯು ತನ್ನನ್ನು ದಹಿಸಲೆಂದು ಶಪಥ ಮಾಡಿ ದಳ್ಳುರಿಯನ್ನು ಹೊಕ್ಕಾಗ ಅದು ಸರೋಜಷಂಡವಾಗುತ್ತದೆ! ರಾಮನೊಂದಿಗೆ ಅಯೋಧ್ಯೆಗೆ ಸೀತೆ ಬರುತ್ತಾಳೆ. ರಾಮನು ತಪ್ಪನ್ನು ಕ್ಷಮಿಸೆಂದು ಕೇಳಿದರೂ 'ಕೇಡುಳ್ಳ ಈ ಹಾಳು ಸಂಸಾರ'ದ ಬಗೆಗೆ ಜಿಗುಪ್ಸೆ ತಾಳಿ ಸೀತೆ ತನ್ನ ಕೂದಲನ್ನು ಕಿತ್ತು ರಾಮನ ಮುಂದಿಟ್ಟು ಸಮವಸರಣಕ್ಕೆ ನಡೆದು ಬಿಡುತ್ತಾಳೆ! (ನಾಗರಾಜಕವಿ) "ವೈದೀಕ ರಾಮಾಯಣ ಪರಂಪರೆಯಲ್ಲಿಯೂ ರಾಮನಿಗೂ, ಅವನು ಮೆಚ್ಚುವ ಸಮಾಜಕ್ಕೂ ಅವನ ಸಂಸಾರಕ್ಕೂ ವಿಮುಖಳಾಗಿ ಭೂದೇವಿಯ ಮಡಿಲನ್ನು ಸೇರುವುದು ಹೆಣ್ಣಿನ ತಣ್ಣನೆಯ ಪ್ರತಿರೋಧವೇ ಆಗಿದೆ.

ರಾಮಾವತಾರದ ಅಂತ್ಯ ಜೈನ ಪರಂಪರೆಯಲ್ಲಿ ವೈದೀಕ ರಾಮಾಯಣ ಪರಂಪರೆಗಿಂತ ಭಿನ್ನವಾಗಿದೆ. ರಾಮನ ಪರಿನಿರ್ವಾಣ ಪ್ರಸಂಗ ತೀವ್ರವಾಗಿ ತಟ್ಟುತ್ತದೆ. ಸೀತೆ, ಹನುಮಂತ, ಲಕ್ಷ್ಮಣನ ಮಕ್ಕಳು ಎಲ್ಲರೂ ತಪಸ್ಸಿಗೆ ತೆರಳಿದರೂ ಲಕ್ಷ್ಮಣನಮೇಲಿನ ವ್ಯಾಮೋಹದಿಂದ ರಾಮ ತಪಸ್ಸನ್ನು ಉಪೇಕ್ಷಿಸುತ್ತಾನೆ. ರಾಮನು ನಿರ್ಜೀವವಾದನೆಂಬ ವದಂತಿನಂಬಿ ಲಕ್ಷ್ಮಣ ಆಘಾತಗೊಂಡು ಸತ್ತುದರಿಂದ ರಾಮನು ಕಂಗಾಲಾಗುತ್ತಾನೆ. ಶೋಕಾತಿರೇಕದಿಂದ ಭ್ರಾಂತನಾಗಿ ಲಕ್ಷ್ಮಣನ ದೇಹವನ್ನು ಅಂತ್ಯಸಂಸ್ಕಾರಕ್ಕೂ ಬಿಡದೆ ಹೊತ್ತುಕೊಂಡು ಆರು ತಿಂಗಳು ಹುಚ್ಚನಂತೆ ತಿರುಗಾಡುತ್ತಾನೆ. ನಂತರ ಬ್ರಾಂತಿಕಳೆದು ತಪಸ್ಸಿಗೆ ತೆರಳುತ್ತಾನೆ. ಚಿತ್ತಭ್ರಾಂತ ರಾಮನ ಈ ಚಿತ್ರಣ ಮನಮುಟ್ಟುವಂತಿದೆ.

ಆದರೆ ಈ ವ್ಯಾಮೋಹ ಸೀತೆಯ ಬಗೆಗಿರಲಿಲ್ಲ. ವಾಲ್ಮೀಕಿಯ ಧೀರ ರಾಮನಿಗಿಂತ ಇದು ತೀರ ಭಿನ್ನವಾದ ಚಿತ್ರಣ. (ನಾಗಚಂದ್ರ)

ಲವಕುಶರು ಬೆಳೆದು ದೊಡ್ಡವರಾದ ಮೇಲೆ ಅವರಿಗೆ ವಿವಾಹವನ್ನು ಜರುಗಿಸುವ ಸಂದರ್ಭದಲ್ಲಿ "ಕುಲಗೋತ್ರ ತಿಳಿಯದ ಕುಶನಿಗೆ ಕುವರಿಯನ್ನೀಯಲು" ಪೃಥು ಎಂಬ ಅರಸನು ನಿರಾಕರಿಸುವ ಪ್ರಸಂಗವಿದೆ ಆ ಸಂದರ್ಭದಲ್ಲಿ ಲವಕುಶರು ಅವನ ಮೇಲೆ ಯುದ್ಧಮಾಡಿ ಸೋಲಿಸಿ ಅವನಮಗಳು ಕನಕಮಾಲೆಯನ್ನು ಕುಶ ವಿವಾಹವಾಗುತ್ತಾನೆ ಎಂಬ ಕಥೆಯ ಎಳೆಯಿದೆ. ಅಲ್ಲದೆ ಬೆಳೆದು ಶಸ್ತ್ರಾಸ್ತ್ರ ನಿಪುಣರಾದ ಲವಕುಶರು ನಾರದರಿಂದ ರಾಮ ಲಕ್ಷ್ಮಣರಂತಾಗಿರೆಂದು ಆಶೀರ್ವಾದವನ್ನು ಪಡೆದ ಸಂದರ್ಭದಲ್ಲಿ ಅವರಿಂದ ತಮ್ಮ ತಾಯಿ ಸೀತೆಯ ಹಾಗೂ ರಾಮಲಕ್ಷ್ಮಣರ ಕಥೆಯನ್ನು ತಿಳಿದುಕೊಳ್ಳುತ್ತಾರೆ. ರಾಮನು ತಮ್ಮ ತಂದೆ ಎಂಬುದು ಅವರಿಗೆ ಸಂತೋಷವನ್ನು ತರುವ ಬದಲು ಅವರು ತಮ್ಮ ತಾಯಿಗೆ ಒದಗಿದ ಕಷ್ಟಕ್ಕಾಗಿ ಮರುಗುತ್ತಾರೆ, ಮತ್ತು ರಾಮನ ಮೇಲೆ ಕ್ರೋಧಗೊಂಡು ಸೈನ್ಯ ಸಮೇತರಾಗಿ ಯುದ್ಧಕ್ಕೆ ಹೊರಡುತ್ತಾರೆ ಎಂಬ ಕಥೆಯ ಎಳೆಯಲ್ಲಿಯೂ ಕಂಡು ಬರುವುದು ಗಂಡನಿಂದ ಪರಿತ್ಯಕ್ತಳಾದ ಹೆಣ್ಣು ಮತ್ತು ಅವಳ ಮಕ್ಕಳನ್ನು ಕುರಿತಂತೆ ಸಮಾಜದಲ್ಲಿರುವ ಕೀಳುಭಾವನೆ ಹಾಗೂ ಅಂತಹ ಅವಮಾನಕರವಾದ ಸ್ಥಿತಿಯು ತಿರಸ್ಕೃತ ಮಕ್ಕಳಲ್ಲಿ ಒಂದು ಬಗೆಯ ಬಂಡಾಯ ಮನೋಭಾವವನ್ನೂ ಬೆಳೆಸುತ್ತಿತ್ತೆಂಬುದನ್ನು ಅಂತಹ ವ್ಯವಸ್ಥೆಯಲ್ಲಿ ತಮ್ಮನ್ನು ಸಾಬೀತು ಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತಿತ್ತೆಂಬುದನ್ನು ಇವು ಧ್ವನಿಸುತ್ತವೆ.

ರಾಮನ ನಡೆಯನ್ನು ಕುರಿತಂತೆ ನಮ್ಮ ಸಂಸ್ಕೃತಿಯಲ್ಲಿ ಎದ್ದಿರುವ ಒಂದು ಅಸಮಾಧಾನ, ಪ್ರತಿರೋಧವನ್ನು ಗಂಭೀರವಾಗಿ ಪರಿಗಣಿಸಿ ಆ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಉದ್ದಕ್ಕೂ ಕವಿಗಳು ಪ್ರಯತ್ನಿಸಿದ್ದಾರೆ. ತಮ್ಮ ತಮ್ಮ ಮೂಗಿನ ನೇರಕ್ಕೆ ಪರಂಪರೆ, ಸಂಸ್ಕೃತಿಯ ನೆರಳಿನಡಿಯಲ್ಲಿ ರಾಮನ ಪರವಾಗಿ ವಕಾಲತ್ತು ವಹಿಸಿದ್ದಾರೆ. ಡಿ.ವಿ. ಜಿಯವರು ರಾಮನ ರಾಜಧರ್ಮ, ಕರ್ತವ್ಯ, ಪ್ರಜಾಪ್ರಭುತ್ವದ ನಿಷ್ಠೆಯನ್ನೇ ಎತ್ತಿಹಿಡಿದಿದ್ದಾರೆ. ಉತ್ತರಕಾಂಡದ ಅಂತ್ಯವನ್ನು ಸುಖಾಂತವಾಗಿ ಮಾಡಿ ರಾಮ ಸೀತೆಯರನ್ನು ಒಂದಾಗಿಸಲು ಪ್ರಯತ್ನಿಸಿದ್ದಾರೆ.

ಜಾನಪದ ಕಾವ್ಯಗಳ ಪ್ರಭಾವಕ್ಕೆ ಒಳಗಾಗಿ ರಚಿತವಾಗಿರುವ ಅನೇಕ ಕೃತಿಗಳು ಸಹ ಈ ಸನ್ನಿವೇಶದಲ್ಲಿ ರಾವಣನ ಚಿತ್ರಪಟದ ನಿಮಿತ್ತವಾಗಿ ರಾಮನಲ್ಲಿ ಮೂಡಿದ ಅನುಮಾನಗಳು ಸೀತೆಯನ್ನು ಕುರಿತ ಅಸಮಾಧಾನಗಳನ್ನು ಮುನ್ನೆಲೆಗೆ ತಂದಿವೆ. ಕಲಾವಿದೆಯಾದ ಕಿರಣಮಂಡಳೆಯು "ಪುರುಷರ ನಿಜರೂಪಂ ಬರೆವುದು ತಾಂ ಧರ್ಮವಲ್ತು ಪುಣ್ಯಾಂಗನೆಯರ್ ಬರವರುಳಿದವರ್ ಬರದಡೆ ಪುರುಷನ ಚಿತ್ತದೊಳ್ ತೋರ್ಪುದತಿ ವಿಪರೀತಮ್" ಎಂದು ತನ್ನ ಮೈದುನನ ಚಿತ್ರಬಿಡಿಸಲು ಒತ್ತಾಯಿಸಿದ ಗೆಳತಿಯರಿಗೆ ಹೇಳುತ್ತಾಳೆ.[42] ಆದರೆ ಸಖಿಯರ ಒತ್ತಾಯಕ್ಕಾಗಿ ಮೈದುನನ ಚಿತ್ರಪಟ ಬಿಡಿಸಿದ್ದಕ್ಕಾಗಿ, ನಿದ್ರೆಯಲ್ಲಿ ಮೈದುನನ ಹೆಸರನ್ನು ಕನವರಿಸಿದ್ದಕ್ಕಾಗಿ ಅವಳ ಗಂಡ ಅನುಮಾನ ಪಡುತ್ತಾನೆ ಮತ್ತು ಕೋಪಗೊಂಡು ಪತ್ನಿಯನ್ನು ತ್ಯಜಿಸುತ್ತಾನೆಂಬ ಒಳಗಥೆಯೊಂದನ್ನು ಹೇಳಲಾಗಿದೆ. 'ಕಲೆಗಾಗಿ ಬರೆದದ್ದು ತಪ್ಪಿಲ್ಲ'ವೆಂದು ಅವಳ ಗೆಳತಿಯರು ಅವಳ ಗಂಡನೊಡನೆ ವಾದಿಸುವುದನ್ನು ಕಾಣಬಹುದು. ಈ ಕಥೆಯಂತೆ ಸೀತೆಯು ರಾವಣನ ಚಿತ್ರ ಬರೆದು ರಾಮನ ಸಂಶಯಕ್ಕೆ ಗುರಿಯಾಗಿ ತ್ಯಜಿಸಲ್ಪಡುವ ಕಥೆಯನ್ನು ಪುಣ್ಯಾಸ್ರವದಲ್ಲಿ ಹೇಳಿದೆ. ಹೆಳವನ ಕಟ್ಟೆ ಗಿರಿಯಮ್ಮನ ಲವಕುಶ ಕಾಳಗ ಹಾಗೂ ಕವಿಯತ್ರಿ ಯಶೋಧೆಯ ಲವಕುಶರ ಕಥೆ ಮುಂತಾದುವುಗಳಲ್ಲಿ ಈ ಚಿತ್ರಪಟರಾವಣನ ಸನ್ನಿವೇಶವೇ ಮುಖ್ಯವಾಗಿ ಬರುತ್ತದೆ.

ಒಂದು ಜಾನಪದ ತ್ರಿಪದಿಯಂತೂ "ಬಾಳೆಯ ಕಡಿದಾರೆ ತೋಟ ಹಾಳಾಗುವುದೆ ಬಾಳೀಸಲಾರದೆ ಮಡದೀಯ ಬಿಟ್ಟಾರೆ ಬಾಳೆ ಹಣ್ಣೇನೆ ಕೊಳಿಯಾಕೆ" ಎಂದು ಸೀತೆಯ ಪರವಾದ ದಿಟ್ಟತನದ ಉತ್ತರವನ್ನು ನೀಡಿದೆ. ಹೆಣ್ಣು, ಕತ್ತರಿಸಿದರೂ ಮತ್ತೆ ಸುಳಿತೆಗೆದು ಬೆಳೆವ ಬಾಳೆಯೇ ಹೊರತು ಕೊಳೆತುಹೋಗುವ ಬಾಳೆಯ ಹಣ್ಣಲ್ಲವೆಂಬ ಈ ಮಾತು ಸೀತೆ ಸಾಯುವ ಕಡೆಗೆ ಯೋಚಿಸದೆ ಜೀವನ್ಮುಖಿಯಾಗಿ ಚಿಂತಿಸಬೇಕೆಂದು ಧೈರ್ಯತುಂಬಿದೆ. ಆ ಮೂಲಕ ಪಿತೃಪ್ರಧಾನ ನಿರ್ಧಾರಕ್ಕೆ ಒಂದು ಸಣ್ಣ ಪ್ರತಿರೋಧವನ್ನು ಒಡ್ಡಿದೆ.

ಆಧುನಿಕ ಕಾಲದ ಕನ್ನಡ ಕವಿಗಳು ಬರಹಗಾರರು ನಾಟಕಕಾರರೂ ಈ ಸಮಸ್ಯೆಯನ್ನು ಮುಖ್ಯವಾಗಿ ಪರಿಗಣಿಸಿದ್ದಾರೆ. ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ ಕುವೆಂಪುರವರು ಸೀತೆಯಂತೆ ರಾಮನೂ ಅಗ್ನಿಪ್ರವೇಶ ಮಾಡಿ ತನ್ನ ಶೌಚವನ್ನು ಸಾಬೀತು ಪಡಿಸುವಂತೆ ಮಾಡಿದ್ದಾರೆ, ಲಕ್ಷ್ಮೀಶ ಸೀತೆ ರಾಮರನ್ನು ಒಟ್ಟಾಗಿಸುತ್ತಾನೆ, ಎಚ್.ಎಸ್. ಸಾವಿತ್ರಮ್ಮನವರು ಸೀತೆಯು ರಾಮನಿಗೆ ವಿಮುಖಳಾಗಿ ಆಶ್ರಮಕ್ಕೆ ಹೊರಟು ಹೋಗುತ್ತಾಳೆಂದು ಚಿತ್ರಿಸಿ ಅವಳ ಮೌನ ಪ್ರತಿರೋಧವನ್ನು ಸೂಚಿಸುತ್ತರೆ. ಮಹಿಳಾ ಚಿಂತಕಿಯರು, ಸೀತೆಯ ಮೌನವನ್ನು ಖಂಡಿಸಿದ್ದಾರೆ. ಅನುಪಮನಿರಂಜನರವರು "ಸೀತೆ ನೀನೇಕೆ ತಲೆ ತಗ್ಗಿಸಿಯೇ ಇದ್ದೆ ಎಂತಹ ಕೆಟ್ಟ ಮಾದರಿ ಕೊಟ್ಟೆ ನಮಗೆ?" ಎಂದು ಅಸಮಧಾನವನ್ನು ಹೊರಹಾಕಿದ್ದಾರೆ.

ವೈದೀಕ ವಾಙ್ಮಯದಲ್ಲಿ ವಿಷ್ಣುವಿನ ದಶಾವತಾರಗಳಲ್ಲಿ ರಾಮಾವತಾರವೂ ಒಂದೆಂದು ನಂಬಲಾಗಿದೆ. ರಾಮನು ಅವತಾರಪುರುಷ, ಸಕಲಗುಣ ಸಂಪನ್ನನಾದ ಮಾನವರೂಪಿ ದೈವವೇ ಆಗಿದ್ದಾನೆ. ಸ್ವಾರ್ಥವಿಲ್ಲದ ಪ್ರಜಾವತ್ಸಲ ಅವನು. ಅವನದು ಆದರ್ಶ ರಾಜ್ಯಭಾರ. ಲೋಕೋದ್ಧಾರಕ್ಕಗಿಯೇ ಬಂದವನು. ರಾವಣ ನಿಗ್ರಹ ಅವನಗುರಿ. ಮಾನವನೊಬ್ಬನು ಭಗವದವತಾರನು ಆಗಬಹುದಾದ ದಿವ್ಯವಾದ, ಘನವಾದ ವ್ಯಕ್ತಿತ್ವವನ್ನು ವಿಕಸನಮಾಡಿಕೊಂಡು ಅವನ ಮೇಲ್ಮುಖ ಚಲನೆಗೆ ಮಾದರಿಯಾಗಿ ಚಿತ್ರಿಸಲ್ಪಟ್ಟಿದ್ದಾನೆ. ರಾಮಾಯಣದಲ್ಲಿ ಎರಡು ಬಗೆಯ ಪ್ರಯಾಣವನ್ನು ರಾಮ ಕೈಗೊಳ್ಳುತ್ತಾನೆ. ಒಂದು ಸತ್ವ, ಸಾಮರ್ಥ್ಯ, ವಿದ್ಯಾರ್ಜನೆಗಾಗಿ ಗುರು ವಿಶ್ವಾಮಿತ್ರರೊಂದಿಗಿನ ಪಯಣವಾದರೆ ಮತ್ತೊಂದು ತಾನು ಗಳಿಸಿಕೊಂಡ ಜ್ಞಾನ, ಸಾಮರ್ಥ್ಯ, ಸಜ್ಜನಿಕೆಗಳ ವಿನಿಯೋಗಕ್ಕಾಗಿ ಕೈಗೊಂಡ ಪಯಣ. ಹೀಗೆ ಗಳಿಸಿಕೊಳ್ಳುವ ಮತ್ತು ವಿನಿಯೋಗಿಸುವ ತತ್ವಗಳನ್ನು, ಪ್ರತಿಯೊಬ್ಬ ಮನುಷ್ಯನೂ ಕೈಗೊಳ್ಳಬೇಕಾದ ಆಂತರಿಕ ಮತ್ತು ಬಾಹ್ಯ ಪಯಣಗಳೆರಡನ್ನೂ ವೈದೀಕ ವಾಲ್ಮೀಕಿ ಸಂಪ್ರದಾಯದ ರಾಮಾಯಣಗಳು ತಿಳಿಸಿಕೊಟ್ಟಿದೆ.

**ಒಟ್ಟಿನಲ್ಲಿ ಕನ್ನಡದ ರಾಮಾಯಣಗಳು ವಿವಿಧ ಬಗೆಯ ಮಾನವ ಸಂಬಂಧಗಳ ಸೂಕ್ಷ್ಮತೆಯನ್ನು ಅವುಗಳಲ್ಲಿನ ಸಣ್ಣ ಏರುಪೇರುಗಳಿಂದ ಬಂದೊದಗಬಹುದಾದ, ಅನುಮಾನಗಳು, ಅನಾಹುತಗಳನ್ನೂ ಎಳೆಎಳೆಯಾಗಿ ಬಿಡಿಸಿಟ್ಟಿವೆ. ಇಲ್ಲಿ ಹಲವು ಬಗೆಯ ಸೋದರರು ಕಾಣಿಸಿಕೊಳ್ಳುತ್ತಾರೆ. ರಾಮ-ಲಕ್ಷ್ಮಣ, ಭರತ-ಶತೃಜ್ಞರು; ವಾಲಿ-ಸುಗ್ರೀವರು,**

**ರಾವಣ–ಕುಂಭಕರ್ಣ, ರಾವಣ–ವಿಭೀಷಣರು ; ಎಷ್ಟು ಬಗೆಯ ತಾಯಂದಿರು! ಎಷ್ಟು ಬಗೆಯ ದಂಪತಿಗಳು! ಒಂದಂದರಲ್ಲೂ ನಮಗೊಂದು ಶಿಕ್ಷಣ. ನೈತಿಕ ನಡಾವಳಿಗಳ ಪಾಠವಿದೆ.**

ಧರ್ಮವಲ್ಲದ ಕಾಮ ನಿಷಿದ್ಧವೆಂಬ ವಿಚಾರವನ್ನು ಕನ್ನಡ ರಾಮಾಯಣಗಳಲ್ಲಿ ಹಲವು ಘಟನೆಗಳಲ್ಲಿ ನಿರೂಪಿಸಲಾಗಿದೆ. ಅಹಲ್ಯಾ ವೃತ್ತಾಂತ, ಶೂರ್ಪನಖಿಯ ವೃತ್ತಾಂತ, ರುಮೆ ತಾರೆಯರ ಪ್ರಸಂಗಗಳು, ಸೀತಾಪಹರಣ, ಉತ್ತರ ರಾಮಾಯಣದಲ್ಲಿ ಬರುವ ವೇದವತೀ ಪ್ರಸಂಗ, ಉಪರಂಭೆಯ ಪ್ರಸಂಗ, ಅರಜೆಯ ಪ್ರಸಂಗ ಇವುಗಳ ಮೂಲಕ **ಸ್ತ್ರೀಪುರುಷರ ಸಮಾಗಮವು ಧರ್ಮವಲ್ಲದ ದಾರಿಯಲ್ಲಿ ನಡೆಯ ಹೊರಟರೆ, ನೈತಿಕ ನಿಯಮವನ್ನು ಅತಿಕ್ರಮಿಸಿದರೆ ಉಂಟಾಗುವ ಅಮಂಗಲವನ್ನು ಘೋರ ಪರಿಣಾಮವನ್ನು ಮನಮುಟ್ಟಿಸುವ ಪ್ರಯತ್ನವನ್ನು ಮಾಡಿರುವಂತೆ ತೋರುತ್ತದೆ. ಇಲ್ಲಿ ಶೀಲ ಹಾಗೂ ಶೌಚವು ಸ್ತ್ರೀಪುರುಷರಿಬ್ಬರಲ್ಲೂ ಇರಬೇಕಾದ ಮುಖ್ಯ ಗುಣಗಳು. ಏಕಪತ್ನೀವ್ರತಸ್ಥ, ಬಹುಪತೀಶ, ಪರನಾರೀಸೋದರ, ಸ್ತ್ರೀವಿಮುಖತೆ, ಸ್ತ್ರೀಲೋಲುಪತೆ, ಪರಪತ್ನೀ ಪೀಡಕ, ಸಹಧರ್ಮಿಣಿ, ಪತಿವ್ರತೆ, ಅಗ್ನಿ ದಿವ್ಯಗಳು, ಶಾಪಗಳು** ಇವುಗಳು ಕಥೆಯಲ್ಲಿ ಕಾಣಿಸಿಕೊಳ್ಳುವುದನ್ನು ಗಮನಿಸಿದಾಗ **ಈ ಶೀಲೋನ್ನತಿ ಹಾಗೂ ದಾಂಪತ್ಯ ನಿಷ್ಠೆಗೆ ರಾಮಾಯಣ ಕಥಾಹಂದರವು ಹೆಚ್ಚು ಒತ್ತುನೀಡಿದೆ ಎನಿಸುತ್ತದೆ.** ಒಟ್ಟಿನಲ್ಲಿ ಮನುಷ್ಯ ಧರ್ಮಮಾರ್ಗದಲ್ಲಿ ನಡೆದು ಅರ್ಥ, ಕಾಮ, ಮೋಕ್ಷಗಳನ್ನು ಪಡೆದುಕೊಳ್ಳಬೇಕಾದ ಅವಶ್ಯಕತೆಯನ್ನು ರಾಮಾಯಣವು ಎತ್ತಿಹಿಡಿದಿದೆ.

* * *

**ಟಿಪ್ಪಣಿಗಳು**

1. ಡಾ. ಎಚ್. ಸೀತಾರಾಮ ಆಚಾರ್, ಕುಮಾರ ವಾಲ್ಮೀಕಿ ಒಂದು ಅಧ್ಯಯನ, ಪುಟ 90.
2. ಡಾ. ಎಸ್.ವಿ. ಪ್ರಭಾವತಿ ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ ಪುಟ 31.
3. ಥೈಲೆಂಡಿನ ರಾಮಕೀನ್ ಗ್ರಂಥವನ್ನು ಪ್ರೊ. ಸತ್ಯವ್ರತಶಾಸ್ತ್ರಿ (ಸಂಸ್ಕೃತಕ್ಕೆ) ಹಾಗೂ ರಂಗನಾಥ್ ಎಸ್. ಅವರು 2013ರಲ್ಲಿ ಅನುವಾದ ಮಾಡಿದ್ದಾರೆ. 'ರಾಮಕಿನ್ ಕತೆ'ಯ ಬೇರೆಬೇರೆ ಪಾಠಾಂತರಗಳಿಗೂ ನಮ್ಮ ಜಾನಪದ ರಾಮಾಯಣಗಳಿಗೂ ಹೋಲಿಕೆಗಳಿವೆ
4. ಜಿ.ಶಂ. ಪ. ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು, ಪ್ರಸಾರಾಂಗ, ಮೈಸೂರು. ವಿ.ವಿ. ನಿಲಯ ಮೈಸೂರು 1979.
5. ಡಾ. ಎಸ್.ವಿ. ಪ್ರಭಾವತಿ ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ, ಕ್ರಿ.ಶ. 2005.
6. ಸಂಪಾದಕರು ಡಾ. ಎಸ್.ಡಿ. ಶೆಟ್ಟಿ, ಡಾ. ಎಸ್.ಆರ್. ವಿಘ್ನರಾಜಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ.
7. ಕರ್ನಾಟಕ ಕವಿಚರಿತೆ ಭಾಗ 1
8. ರಾಮವಿಜಯ ಕಾವ್ಯಂ, ದೇವಪ್ಪ ಕವಿ (ಸಂ) ಕೇಶವಭಟ್ಟ, ಭಾರತೀಯ ಜ್ಞಾನಪೀಠ ಪ್ರಕಾಶನ, ದೆಹಲಿ.
9. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ–ಪ್ರಸಾರಾಂಗ. ಬೆಂ. ವಿಶ್ವವಿದ್ಯಾಲಯ.
10. ಚಂದ್ರಸಾಗರವರ್ಣಿ ವಿರಚಿತ ಶ್ರೀರಾಮಾಯಣ, ಪಕಟಣೆ ಶ್ರೀ ಪಾಯಸಾಗರ ಸ್ವಾಮಿಗಳು. 1936
11. ಹಂಪಾನಾಗರಾಜಯ್ಯ, ಚಂದ್ರಸಾಗರವರ್ಣಿ, ಕನ್ನಡ ಸಾಹಿತ್ಯ ಪರಷತ್ಪತ್ರಿಕೆ ಸಂ. 58 ಸಂ. 3 ಡಿಸೆಂಬರ 1973.
12. ಎನ್. ಬಸವಾರಾಧ್ಯ, ತೊರವೆ ರಾಮಾಯಣದ ಮುನ್ನುಡಿ
13. ನರಸಿಂಹಾಚಾರ್, ಕವಿಚರಿತೆ. ಸಂ.
14. ಅ.ರಾ. ಮಿತ್ರ, ಶ್ರೀ ರಾಮ ಸಂಭವ–ತೊರವೆ ರಾಮಾಯಣ, (ಸಂ). ಡಾ.ಜಿ. ವೆಂಕಟಸುಬ್ಬಯ್ಯ
15. ಸಂಕ್ಷಿಪ್ತ ರಾಮಾಯಣ ಮತಿಘಟ್ಟ ಕೃಷ್ಣಮೂರ್ತಿ ; ಹರಿದಾಸ ಸಾಹಿತ್ಯ ಸಮೀಕ್ಷೆ (ಸಂ)ಜಿ. ವರದರಾಜರಾವ್
16. ಡಾ. ಎಸ್.ವಿ. ಪ್ರಭಾವತಿ, ಪೂರ್ವೋಕ್ತ
17. ಅನಂತಪದ್ಮನಾಭರಾವ್ (ಸಂಗ್ರಹ) ಪ್ರಬುದ್ಧಕರ್ನಾಟಕ, 53–4, ಮೈಸೂರು ವಿ.ವಿ. ನಿಲಯ 1972.
18. ಶ್ರೀ ರಾಮಪಟ್ಟಾಭಿಷೇಕಂ–ಮುದ್ದಣ ಪ್ರಶಸ್ತಿಗ್ರಂಥ, ಪ್ರಕಟಣೆ ಕನ್ನಡ ಸಾಹಿತ್ಯ ಕುಟೀರ
19. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂಪುಟ 58 ಸಂಚಿಕೆ 2.

20. ಡಾ. ಎಸ್.ವಿ. ಪ್ರಭಾವತಿ, ಪೂರ್ವೋಕ್ತ.

21. ಬಿ. ರಾಜಶೇಖರಪ್ಪ. ಇತಿಹಾಸ ಕಥನ ಪುಟ 183.

22. ರಾವಳೇಶ್ವರ ಆರಾಧನಾ ಪಂಥ : ಒಂದು ಚಿಂತನೆ–ಡಾ. ಎನ್.ಆರ್. ಲಲಿತಾಂಬ; ರಾವಳೇಶ್ವರ ಸಂಬಂಧಿತ ಆಚರಣೆ, ಆರಾಧನೆ, ನಂಬಿಕೆಗಳು, ಹರೀಶ ಎಂ.ಎ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. 95. ಸಂಚಿಕೆ 02, 2017.

23. ಗೊಂಡರ ರಾಮಾಯಣ., ಬುಡಕಟ್ಟು ರಾಮಾಯಣ (ಸಂ) ಹಿ.ಚಿ. ಬೋರಲಿಂಯ್ಯ.. ಕನ್ನಡ. ವಿ.ವಿ. ಹಂಪಿ.

24. ಜಾನಪದ ರಾಮಾಯಣ (ಸಂ.) ರಾ. ಗೌ. ಪಿ.ಕೆ. ರಾಜಶೇಖರ, ಎನ್. ಬಸವಯ್ಯ, ಕನ್ನಡ ಅಧ್ಯಯನ ಸಂಸ್ಥೆ.

25. ಕನ್ನಡ ಸೇವಾ ಸಂಘ, ಅಮ್ಮೆಂಬಳ.

26. 'ಮುಳಿಯ ತಿಮ್ಮಪ್ಪಯ್ಯನವರ ಕೃತಿಗಳ ಛಂದಸ್ಸು ಮತ್ತು ಶೈಲಿ', ಬೇರು ಕಾಂಡ ಚಿಗುರು ಪುಟ–194.

27. ಹಾ.ಮಾ. ನಾಯಕ – ಶ್ರೀನಿವಾಸ ಸಾಹಿತ್ಯ–ಪುಟ. 338.

28. ಜ್ಞಾನಗಂಗ ಪುಸ್ತಕ ಮಳಿಗೆ ಪಾದೇಕಲ್ಲು ವಿಷ್ಣು ಭಟ್ಟರ ಮುನ್ನುಡಿಯೊಂದಿಗೆ 1960.

29. ಮೊದಲ ಪ್ರಕಟಣೆ 1980 ಮತ್ತು 2011 ಮರು ಮುದ್ರಣಗೊಂಡಿದೆ.

30. ಉದಯ ಪ್ರಕಾಶನ ಬೆಂಗಳೂರು. (2007)

31. ಶ್ರೀಮದ್ರಾಮಾಯಣ ಮಹಾಭಾರತಾದಿ ಪ್ರಕಟನ ಸಮಿತಿ ಬೆಂ. (ಪ್ರ.ಸಂ.) ವಿದ್ವಾನ್ ಎನ್. ರಂಗನಾಥಶರ್ಮ, 1967.)

32. ರವಿಷೇಣ ರಾಮಾಯಣ, ಶಾಂತಿ ಸೇವಾಸದನ, ಸೇಡಬಾಳ 1968.

33. ಪ್ರಕಟಣೆ, ವಿಜಯಲಕ್ಷ್ಮೀ ಮುದ್ರಾಕ್ಷರ ಶಾಲೆ, ಬೆಂ. ಕ್ರಿ.ಶ. 1896–1897.

34. 'ತೊರವೆರಾಮಾಯಣ ಒಂದು ಅಧ್ಯಯನ' ಎಸ್.ಎಸ್. ಬ್ಯಾತನಾಳ; 'ಕನ್ನಡ ರಾಮಾಯಣಗಳು' ಟಿ.ವಿ. ವೆಂಕಟಾಚಲಶಾಸ್ತ್ರಿ.

35. ಡಾ. ವಿಜಯಾದಬ್ಬೆ–ನಿಲ್ಲನಿಲ್ಲೆಲೆ ನೋಟ, ಅಂಕಣಬರಹ ಆಂದೋಲನ ಪತ್ರಿಕೆ 1998.

36. ಹೆಚ್.ಡಿ. ಸಂಕಾಲಿಯ 'ಇತಿಹಾಸದ ಕಣ್ಣಲ್ಲಿ ರಾಮಾಯಣ', ನವಕರ್ನಾಟಕ ಪ್ರಕಾಶನ 1947.

37. ಪುಟಗಳು 287, ಚಾರುಮತಿ ಪ್ರಕಾಶನ, 2010.

38. ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ – 2004.

39. ಪುಟಗಳು 208, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ–2008.

40. ವೈಷ್ಣವಿ ಪ್ರಕಾಶನ–2015, ಪುಟ 216.

41. ಮೈಸೂರು ಕುವೆಂಪುರವರ 'ರಾಮಾಯಣ ದರ್ಶನಂ' ಕುರಿತು ಲೆಕ್ಕವಿಲ್ಲದಷ್ಟು ವಿಮರ್ಶೆಗಳು ಬಂದಿವೆ.

42. ಪುಣ್ಯಾಸ್ರವ 7ನೇ ಅಧಿಕಾರ–30ನೇ ಪದ್ಯ.

❑

Message of Ramay
National Conference - July 6 - 8, 2018

*Presentation of Music based on Ramayana*

# descriptions of lord ramachandra in chaitanya charitamrita



**Shri Stoka Krishna Dasa, ISKCON**

The Chaitanya Charitamrita describes that the Absolute truth can be understood in three aspects namely Brahman, Paramatma and Bhagavan. Of these three aspects, realisation of the Bhagavan aspect is complete realisation of the Absolute truth in all the three features of sat, chit and ananda.

## Who is Lord Ramachandra?

Lord Ramachandra is the Supreme Personality of Godhead. He is the Absolute truth*Bhagavän* who is full in six opulences. The *Viñëu Puräëa* gives a definition of *Bhagavän.*

***aiçvaryasya samagrasya***
***véryasya yaçasaù çriyaù***
***jïäna-vairägyayoç caiva***
***saëëäà bhaga itiìgana***
***(Viñëu Puräëa** 6.5.47)*

*Bhagavän, the Supreme Personality of Godhead, is thus defined as one who is full in six opulences—who has full strength, fame, wealth, knowledge, beauty, and renunciation.*

The Chaitanya Charitamrita describes that the Absolute truth can be understood in three aspects namely Brahman, Paramatma and Bhagavan. Of these three aspects, realisation of the Bhagavan aspect is complete realisation of the Absolute truth in all the three features of sat, chit and ananda. The following verse from the Srimad Bhagavatam describes the three aspects of the Absolute truth:

***vadanti tat tattva-vidas***
***tattvaà yaj jïänam advayam***
***brahmeti paramätmeti***
***bhagavän iti çabdyate***

*"Learned transcendentalists who know the Absolute Truth call this nondual substance Brahman, Paramätmä or Bhagavän." (Srimad Bhagavatam 1.2.11)*

***yad advaitaà brahmopaniñadi tad apy asya tanu-bhä***
***ya ätmäntar-yämé puruña iti so 'syäàça-vibhavaù***
***ñaò-aiçvaryaiù pürëo ya iha bhagavän sa svayam ayaà***
***na caitanyät krñëäj jagati para-tattvaà param iha***

*What the Upaniñads describe as the impersonal Brahman is but the effulgence of His body, and the Lord known as the Supersoul is but His localized plenary portion. Lord Caitanya is the Supreme Personality of Godhead, Kåñëa Himself, full with six opulences. He is the Absolute Truth, and no other truth is greater than or equal to Him. (CC Adi 1.3)*

The compilers of the Upaniñads speak very highly of the impersonal Brahman. The Upaniñads, which are considered the most elevated portion of the Vedic literatures, are meant for persons who desire to get free from material association and who therefore approach a bona fide spiritual master for enlightenment. The prefix upa- indicates that one must receive knowledge about the Absolute Truth from a spiritual master. One who has faith in his spiritual master actually receives transcendental instruction, and as his attachment for material life slackens, he is able to advance on the spiritual path. Knowledge of the transcendental science of the Upaniñads can free one from the entanglement of existence in the material world, and when thus liberated, one can be elevated to the spiritual kingdom of the Supreme Personality of Godhead by advancement in spiritual life.

The beginning of spiritual enlightenment is realization of impersonal Brahman. Such realization is effected by gradual negation of material variegatedness. Impersonal Brahman realization is the partial, distant experience of the Absolute Truth that one achieves through the rational approach. It is compared to one's seeing a hill from a distance and taking it to be a smoky cloud. A hill is not a smoky cloud, but it appears to be one from a distance because of our imperfect vision. In imperfect or smoky realization of the Absolute Truth, spiritual variegatedness is conspicuous by its absence. This experience is therefore called advaita-väda, or realization of the oneness of the Absolute.

The impersonal glowing effulgence of Brahman consists only of the personal bodily rays of the Supreme Godhead, Çré Kåñëa. Since Çré Gaurasundara, or Lord Çré Caitanya Mahäprabhu, is identical with Çré Kåñëa Himself, the Brahman effulgence consists of the rays of His transcendental body.

Similarly, the Supersoul, which is called the Paramätmä, is a plenary representation of Caitanya Mahäprabhu. The antar-yämé, the Supersoul in everyone's heart, is the controller of all living entities. This is confirmed in the Bhagavad-gétä (15.15), wherein Lord Kåñëa says, sarvasya cähaà hådi sanniviñöaù: “I am situated in everyone's heart.” The Bhagavad-gétä (5.29) also states, bhoktäraà yajïa-tapasäà sarva-loka-maheçvaram, indicating that the Supreme Lord, acting in His expansion as the Supersoul, is the proprietor of everything. Similarly, the Brahma-saàhitä (5.35) states, aëòäntara-stha-paramäëu-cayäntara-stham. The Lord is present everywhere, within the heart of every living entity and within each and every atom as well. Thus by this Supersoul feature the Lord is all-pervading.

Furthermore, Lord Caitanya is also the master of all wealth, strength, fame, beauty, knowledge and renunciation because He is Çré Kåñëa Himself. He is described as pürëa, or complete. In the feature of Lord Caitanya, the Lord is an ideal renouncer, just as Çré Räma was an ideal king. Lord Caitanya accepted the order of sannyäsa and exemplified exceedingly wonderful principles in His own life. No one can compare to Him in the order of sannyäsa. Although in Kali-yuga acceptance of the sannyäsa order is generally forbidden, Lord Caitanya accepted it because He is complete in renunciation. Others cannot imitate Him but can only follow in His footsteps as far as possible. Those who are unfit for this order of life are strictly forbidden by the injunctions of the çästras to accept it. Lord Caitanya, however, is complete in renunciation as well as all other opulences. He is therefore the highest principle of the Absolute Truth.

By an analytical study of the truth of Lord Caitanya, one will find that He is not different from the Supreme Personality of Godhead Kåñëa; no one is greater than or even equal to Him. In the Bhagavad-gétä (7.7) Lord Kåñëa says to Arjuna, mattaù parataraà nänyat kiïcid asti dhanaïjaya: “O conqueror of wealth [Arjuna], there is no truth superior to Me.” Thus it is here confirmed that there is no truth higher than Lord Çré Kåñëa Caitanya.

The impersonal Brahman is the goal of those who cultivate the study of books of transcendental knowledge, and the Super soul is the goal of those who perform the yoga practices. One who knows the Supreme Personality of Godhead surpasses realization of both Brahman and Paramätmä because Bhagavän is the ultimate platform of absolute knowledge.

The Personality of Godhead is the complete form of sac-cid-änanda (full life, knowledge and bliss). By realization of the sat portion of the Complete Whole (unlimited existence), one realizes the impersonal Brahman aspect of the Lord. By realization of the cit portion of the Complete Whole (unlimited knowledge), one can realize the localized aspect of the Lord, the Paramätmä. But neither of these partial realizations of the Complete Whole can help one realize änanda, or complete bliss. Without such realization of änanda, knowledge of the Absolute Truth is incomplete.

This verse of the Caitanya-caritämåta by Kåñëadäsa Kaviräja Gosvämé is confirmed by a parallel statement in the Tattva-sandarbha, by Çréla Jéva Gosvämé. In the Eighth Part of the Tattva-sandarbha it is said that the Absolute Truth is sometimes approached as impersonal Brahman, which, although spiritual, is only a partial representation of the Absolute Truth. Näräyaëa, the predominating Deity in Vaikuëöha, is to be known as an expansion of Çré Kåñëa, but Çré Kåñëa is the Supreme Absolute Truth, the object of the transcendental love of all living entities.

Brahman is the impersonal aspect of the Absolute truth realised as the all pervading spiritual effulgence. This is a partial realisation of the Absolute truth, since in this feature one can realise only the sat feature of the Absolute truth. Paramatma is the localised aspect of the Absolute truth realised as the Supersoul present in the heart of all living beings. This is also a partial realisation of the Absolute truth since in this feature one can realise only the sat and cit features of the Absolute truth. Bhagavan is the personal aspect of the Absolute truth realised as the Supreme Personality of Godhead. This is complete realisation of the Absolute truth in all the three features of sat, cit and ananda.

The Brahma samhita describes the Absolute truth in the following way:

***éçvaraù paramaù kåñëaù***
***sac-cid-änanda-vigrahaù***
***anädir ädir govindaù***
***sarva-käraëa-käraëam***

*"Kåñëa who is known as Govinda is the Supreme Godhead. He has an eternal blissful spiritual body. He is the origin of all. He has no other origin and He is the prime cause of all causes." (Brahma Samhita 5.1)*

In the ultimate issue the Absolute truth is sat-cit-ananda vigraha or the transcendental form of sat-cit-ananda, the Personality of Godhead Sri Krishna. Citing the Srimad Bhagavatam, it is explained in the Chaitanya Charitamrita that the Supreme Lord Sri Krishna incarnates in the material world in many different spiritual forms. The form of Lord Ramachandra is one of the incarnations of the Supreme Absolute truth Personality of Godhead.

## Sri Chaitanya Mahaprabhu formerly incarnated as Sri Ramachandra

Once Sri Chaitanya Mahaprabhu displayed His six-armed form to Nityananda Prabhu in which He showed that He had incarnated as Lord Ramachandra in Treta yuga and Lord Krishna in Dvapara yuga and now in Kali yuga He has incarnated as Lord Chaitanya.In the Chaitanya Charitamrita Adi Lilaverse 17.12 it is said:

***tabe nityänanda-svarüpera ägamana***
***prabhuke miliyä päila ñaò-bhuja-darçana***

*"After this function at the house of Çréväsa Öhäkura, Nityänanda Prabhu appeared, and when He met with Lord Chaitanya He got the opportunity to see Him in His six-armed form."*

The form of *Ñaò-bhuja*, the six-armed Lord Chaitanya, is a representation of three incarnations. The form of Çré Rämacandra is symbolized by a bow in one hand and an arrow in another, the form of Lord Çré Kåñëa is symbolized by a stick and a flute like those generally held by a cowherd boy, and Lord Chaitanya Mahäprabhu is symbolized by a sannyäsa-daëòa and a kamaëòalu, or waterpot.

## Sri Chaitanya Mahaprabhu reveals the truth about Sitadevi

In the Chaitanya Charitamrita there is a description of Sri Chaitanya Mahaprabhu's visit to Madurai, during which he met a brahmana devotee of Lord Ramachandra and revealed the truth about Sitadevi to him.

When Çré Chaitanya Mahäprabhu arrived at southern Mathurä (Madurai) from Kämakoñöhé, He met a brähmaëa.The brähmaëa who met Çré Chaitanya Mahäprabhu invited the Lord to his home. This brähmaëa was a great devotee and an authority on Lord Çré Rämacandra. He was always detached from material activities.After bathing in the river Kåtamälä, Çré Chaitanya Mahäprabhu went to the brähmaëa's house to take lunch, but He saw that the food was unprepared because the brähmaëa had not cooked it.Seeing this, Çré Chaitanya Mahäprabhu said, "My dear sir, please tell Me why you have not cooked. It is already noon."The brähmaëa replied, "My dear Lord, we are living in the forest. For the time being we cannot get all the ingredients for cooking.When Lakñmaëa brings all the vegetables, fruits and roots from the forest, Sétä will do the necessary cooking."Çré Chaitanya Mahäprabhu was very satisfied to hear about the brähmaëa's method of worship. Finally, the brähmaëa hastily made arrangements for cooking.Çré Chaitanya Mahäprabhu took His lunch at about three o'clock, but the brähmaëa, being very sorrowful, fasted.

While the brähmaëa was fasting, Çré Chaitanya Mahäprabhu asked him, "Why are you fasting? Why are you so unhappy? Why are you so worried?"The brähmaëa replied, "I have no reason to live. I shall give up my life by entering either fire or water.My dear Sir, mother Sétä is the mother of the universe and the supreme goddess of fortune. She has been touched by the demon Rävaëa, and I am troubled upon hearing this news.Sir, due to my unhappiness I cannot continue living. Although my body is burning, my life is not leaving."Çré Chaitanya Mahäprabhu replied, "Please do not think this way any longer. You are a learned paëòita. Why don't you consider the case?Sétädevé, the dearmost wife of the Supreme Lord Rämacandra, certainly has a spiritual form full of bliss. No one can see her with material eyes, for no materialist has such power.To say nothing of touching mother Sétä, a person with material senses cannot even see her. When Rävaëa kidnapped her, he kidnapped only her material, illusory form.As soon as Rävaëa arrived before Sétä, she disappeared. Then just to cheat Rävaëa she sent an illusory, material form.Spiritual substance is never within the jurisdiction of the material conception. This is always the verdict of the Vedas and Puräëas."

Çré Chaitanya Mahäprabhu then assured the brähmaëa, "Have faith in My words and do not burden your mind any longer with this misconception." Although the brähmaëa was fasting, he had faith in the words of Çré Chaitanya Mahäprabhu and accepted food. In this way his life was saved.After thus assuring the brähmaëa, Çré Chaitanya Mahäprabhu proceeded further into southern India and finally arrived at Setubandha [Rämeçvara], where He took His bath at the place called Dhanus-tértha. From there He visited the Rämeçvara temple and then took rest.

There, among the brähmaëas, Çré Chaitanya Mahäprabhu listened to the Kürma Puräëa, wherein is mentioned the chaste woman's narration. "Çrématé Sétädevé is the mother of the three worlds and the wife of Lord Rämacandra. Among chaste women she is supreme, and she is the daughter of King Janaka.When Rävaëa came to kidnap mother Sétä and she saw him, she took shelter of the fire-god, Agni. The fire-god covered the body of mother Sétä, and in this way she was protected from the hands of Rävaëa.The fire-god, Agni, took away the real Sétä and brought her to the place of Pärvaté, goddess Durgä. An illusory form of mother Sétä was then delivered to Rävaëa, and in this way Rävaëa was cheated.After Rävaëa was killed by Lord Rämacandra, Sétädevé was brought before the fire and tested.When the illusory Sétä was brought before the fire by Lord Rämacandra, the fire-god made the illusory form disappear and delivered the real Sétä to Lord Rämacandra."

When Çré Chaitanya Mahäprabhu heard this story, He was very pleased, and He remembered the words of Rämadäsa Vipra.Indeed, when Çré Chaitanya Mahäprabhu heard these conclusive statements from the Kürma Puräëa, He felt great happiness. After asking the brähmaëas' permission, He took possession of the manuscript leaves of the Kürma Puräëa.Since the Kürma Puräëa was very old, the manuscript was also very old. Çré Chaitanya Mahäprabhu took possession of the original leaves in order to have direct evidence. The text was copied onto new leaves in order that the Puräëa be replaced.Çré Chaitanya Mahäprabhu returned to southern Mathurä [Madurai] and delivered the original manuscript of the Kürma Puräëa to Rämadäsa Vipra.The two verses from the Kürma Puräëa which describe the above incident are as follows:

***sétayärädhito vahniç***
***chäyä-sétäm ajéjanat***
***täà jahära daça-grévaù***
***sétä vahni-puraà gatä***
***parékñä-samaye vahnià***
***chäyä-sétä viveça sä***
***vahniù sétäà samänéya***
***tat-purastäd anénayat***

*"When he was petitioned by mother Sétä, the fire-god, Agni, brought forth an illusory form of Sétä, and Rävaëa, who had ten heads, kidnapped the false Sétä. The original Sétä then went to the abode of the fire-god. When Lord Rämacandra tested the body of Sétä, it was the false, illusory Sétä that entered the fire. At that time the fire-god brought the original Sétä from his abode and delivered her to Lord Rämacandra."*

Rämadäsa Vipra was very pleased to receive the original leaf manuscript of the Kürma Puräëa, and he immediately fell down before the lotus feet of Çré Chaitanya Mahäprabhu and began to cry.He said, "Sir, You are Lord Rämacandra Himself and have come in the dress of a sannyäsé to give me audience.My dear Sir, You have delivered me from a very unhappy condition. I request that You take Your lunch at my place. Please accept this invitation.Due to my mental distress I could not give You a very nice lunch the other day. Now, by good fortune, You have come again to my home."Saying this, the brähmaëa very happily cooked food, and a first-class dinner was offered to Çré Chaitanya Mahäprabhu.

### Çré Chaitanya Mahäprabhu delivers seven palm trees

Within the Daëòakäraëya forest Çré Chaitanya Mahäprabhu then visited a place called Saptatäla. The seven palm trees there were very old, very bulky and very high.Upon seeing the seven palm trees, Çré Chaitanya Mahäprabhu embraced them. As a result, they all returned to Vaikuëöhaloka, the spiritual world.After the seven palm trees had departed for Vaikuëöha, everyone was astonished to see that they were gone. The people then began to say, "This sannyäsé called Çré Chaitanya Mahäprabhu must be an incarnation of Lord Rämacandra.Only Lord Rämacandra has the power to send seven palm trees to the spiritual Vaikuëöha planets."

### Muräri Gupta is an incarnation of Hanumän

There was a devotee of Sri Chaitanya by name Murari Gupta who used to chant the name of Lord Ramachandra. In the following description from Chaitanya Charitamrita, Çré Chaitanya Mahäprabhu reveals that Muräri Gupta is an incarnation of Hanumän.

Çré Chaitanya Mahäprabhu said, "Previously I induced Muräri Gupta again and again to be allured by Lord Kåñëa. I said to him, 'My dear Gupta, Lord Çré Kåñëa, Vrajendra-kumära, is the supreme sweetness.Kåñëa is the Supreme Personality of Godhead, the origin of all incarnations and the source of everything. He is pure transcendental love itself, and He is the reservoir of all pleasure.Kåñëa is the reservoir of all transcendental qualities. He is like a mine of gems. He is expert at everything, very intelligent and sober, and He is the summit of all transcendental humors.His character is very sweet, and His pastimes are melodious. He is expert in intelligence, and thus He enjoys all His pastimes and mellows.'I then requested Muräri Gupta, 'Worship Kåñëa and take shelter of Him. But for His service, nothing appeals to the mind.'In this way, he heard from Me again and again. By My influence, his mind was a little converted.

Muräri Gupta then replied, 'I am Your servant and Your order-carrier. I have no independent existence.'After this, Muräri Gupta went home and spent the whole night thinking how he would have to give up the association of Raghunätha, Lord Rämacandra. Thus, he was overwhelmed.Muräri Gupta then began to pray at the lotus feet of Lord Rämacandra. He prayed that death would come that night because it was not possible for him to give up the service of the lotus feet of Raghunätha.Thus, Muräri Gupta cried the entire night. There was no rest for his mind; therefore, he could not sleep but stayed awake the entire night.In the morning Muräri Gupta came to see Me. Catching hold of My feet and crying, he submitted an appeal.Muräri Gupta said, 'I have sold my head unto the lotus feet of Raghunätha. I cannot withdraw my head, for that would give me too much pain.It is not possible for me to give up the service of Raghunätha's lotus feet. At the same time, if I do not do so I shall break Your order. What can I do?'

In this way Muräri Gupta appealed to Me, saying, 'You are all-merciful, so kindly grant me this mercy: Let me die before You so that all my doubts will be finished.'Hearing this, I became very happy. I then raised Muräri Gupta and embraced him.I said to him, 'All glories to you, Muräri Gupta! Your method of worship is very firmly fixed—so much so that even upon My request your mind did not turn.The servitor must have love and affection for the lotus feet of the Lord exactly like this. Even if the Lord wants separation, a devotee cannot abandon the shelter of His lotus feet.Just to test your firm faith in your Lord, I requested you again and again to change your worship from Lord Rämacandra to Kåñëa. In this way, I congratulated Muräri Gupta, saying, 'Indeed, you are the incarnation of Hanumän. Consequently, you are the eternal servant of Lord Rämacandra. Why should you give up the worship of Lord Rämacandra and His lotus feet?'

### Lord Ramachandra's promise to His devotees

While describing the process of devotional service to Sanatana Gosvami, Sri Chaitanya Mahaprabhu says:

***'kåñëa, tomära haìa' yadi bale eka-bära***
***mäyä-bandha haite kåñëa täre kare pära***

*"One is immediately freed from the clutches of mäyä if he seriously and sincerely says, 'My dear Lord Kåñëa, although I have forgotten You for so many long years in the material world, today I am surrendering unto You. I am Your sincere and serious servant. Please engage me in Your service." (Chaitanya Charitamrita Madhya Lila 22.33)*

Then He cites the Ramayana to describe the promise made by Lord Ramachandra to His devotees:

***sakåd eva prapanno yas***
***taväsméti ca yäcate***
***abhayaà sarvadä tasmai***
***dadämy etad vrataà mama***

*"It is My vow that if one only once seriously surrenders unto Me, saying 'My dear Lord, from this day I am Yours,' and prays to Me for courage, I shall immediately award courage to that person, and he will always remain safe from that time on." (Chaitanya Charitamrita Madhya Lila 22.34)*

## Sanatana Gosvami describes his brother's devotion to Lord Ramachandra

"From the very beginning of his childhood, my younger brother Vallabha was a great devotee of Raghunätha [Lord Rämacandra], and he worshiped Him with great determination.He always chanted the holy name of Raghunätha and meditated upon Him. He continuously heard about the activities of the Lord from the Rämäyaëa and chanted about them. Rüpa Gosvami and I are his elder brothers. He stayed with us continuously.He heard Çrémad-Bhägavatam and talks about Lord Kåñëa with us, and both of us examined him. We said 'Dear Vallabha,please hear from us. Lord Kåñëa is supremely attractive. His beauty, sweetness and pastimes of love are without limit.Engage yourself in devotional service to Kåñëa with the two of us. We three brothers shall stay together and enjoy discussing the pastimes of Lord Kåñëa.'

"In this way we spoke to him again and again, and because of this persuasion and his respect for us, his mind turned somewhat toward our instructions.Vallabha replied, 'My dear brothers, how can I disobey your orders? Initiate me into the Kåñëa mantra so that I may perform devotional service to Lord Kåñëa.'After saying this, at night he began to think, 'How shall I give up the lotus feet of Lord Raghunätha?'He stayed up all night and cried. In the morning, he came to us and submitted the following plea.'I have sold my head at the lotus feet of Lord Rämacandra. I cannot take it away. That would be too painful for me.The two of you please be merciful to me and order me in such a way that life after life I may serve the lotus feet of Lord Raghunätha.It is impossible for me to give up the lotus feet of Lord Raghunätha. When I even think of giving them up, my heart breaks.'Upon hearing this, we each embraced him and encouraged him by saying, 'You are a great saintly devotee, for your determination in devotional service is fixed.' In this way we praised him.

❑

# ರಾಮಾಯಣದಲ್ಲಿ ಸುಭಾಷಿತಗಳು

ವಿದ್ವಾನ್ ಜಿ.ಎಸ್. ನಟೇಶ್

**ರಾ**ಮಾಯಣದ ಪಾರಾಯಣದ ಜೊತೆಗೆ ರಾಮಾಯಣದ ತತ್ತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು, ಸಮಾಜದ ಹಿತ ಹಾಗೂ ಆತ್ಮೋದ್ಧಾರಕ್ಕಾಗಿ ಬದುಕಿದರೆ ರಾಮಾಯಣದ ಸಂಪೂರ್ಣ ಸಾರ್ಥಕತೆ. ಇಲ್ಲಿ ನಿತ್ಯ ಜೀವನೋಪಯೋಗೀ ಸಾವಿರಾರು ಸುಭಾಷಿತಗಳು ನಮ್ಮ ದೈನಂದಿನ ಬದುಕನ್ನು ಬೆಳಗಲು ಸಹಾಯಕವಾಗಿದೆ. ಯದ್ಯಪಿ ಆಯಾ ಸಂದರ್ಭಗಳ ಪಾತ್ರಗಳ ಮಾತುಗಳು ಅವಾಗಿದ್ದರೂ, ನೇರವಾಗಿ ಓದುಗರಿಗೆ ಅನ್ವಯವಾಗುವಂತಿವೆ. ರಾಮಾಯಣದ ವಿವಿಧ ಕಾಂಡಗಳಿಂದ ಆಯ್ದ ಕೆಲವು ಸುಭಾಷಿತಗಳ ಬಗ್ಗೆ ಬೆಳಕು ಚೆಲ್ಲಲು ಇಲ್ಲಿ ಪ್ರಯತ್ನ ನಡೆಸಲಾಗಿದೆ.

**"ವಿನಾವೇದಂ ವಿನಾಗೀತಂ ವಿನಾ ರಾಮಾಯಣೀ ಕಥಾಂ ।**
**ವಿನಾ ಕವಿಂ ಕಾಳಿದಾಸಂ ಭಾರತಂ ಭಾರತಂ ನಹಿ" ॥**

ವೇದಗಳು, ಭಗವದ್ಗೀತೆ, ರಾಮಾಯಣ, ಮಹಾಕವಿ ಕಾಳಿದಾಸ ಇಷ್ಟನ್ನು ಹೊರತುಪಡಿಸಿದರೆ ಭಾರತ ಶೂನ್ಯವೇ ಸರಿ. ಆದ್ದರಿಂದ ಭಾರತದ ನಿಜವಾದ ಸಾಂಸ್ಕೃತಿಕ ಸಂಪತ್ತುಗಳೇ ಇವು. 'ರಾಮಾಯಣ' ಪ್ರಧಾನವಾಗಿ ರಾಮ ನಡೆದ ದಾರಿ. ಆದರ್ಶ ಸಮಾಜದ ನಿರ್ಮಾಣಕ್ಕೆ ಅವನೇ ಪ್ರಧಾನ ಸ್ಫೂರ್ತಿ ರಾಮಾಯಣವು ಒಂದು ಪ್ರೀತಿಕಾವ್ಯವೂ ಹೌದು, ನೀತಿ ಕಾವ್ಯವೂ ಹೌದು. ವಾಲ್ಮೀಕಿ ಮಹಾಮುನಿಗಳು ರಾಮಾಯಣದಲ್ಲಿ ಕರುಣರಸವನ್ನು ಪ್ರಧಾನವಾಗಿ ಅಳವಡಿಸಿದ್ದರೂ ಶೃಂಗಾರಾದಿ ಇತರ ರಸಗಳೂ ಅಲ್ಲಿ ಹಾಸುಹೊಕ್ಕಾಗಿವೆ. ಎಲ್ಲ ರಸಗಳನ್ನೂ ತನ್ನಲ್ಲಿ ಲಯಗೊಳಿಸಿಕೊಳ್ಳುವ ಶಾಂತರಸವೂ ಇದರಲ್ಲಿ ಅಂತರ್ವಾಹಿನಿಯಾಗಿದೆ. ಇಲ್ಲಿ ಆದರ್ಶ ಪುರುಷಾರ್ಥಗಳಿವೆ, ತತ್ತ್ವದ ಉಪದೇಶವಿದೆ. ನಮ್ಮ ಸಂಸ್ಕೃತಿಗೆ ಮೂಲವಾದ ವೇದಗಳ ಪ್ರತಿರೂಪವೆಂದೂ ಇದನ್ನು ತಿಳಿಯಲಾಗಿದೆ.

ರಾಮಾಯಣದ ಪಾರಾಯಣದ ಜೊತೆಗೆ ರಾಮಾಯಣದ ತತ್ತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು, ಸಮಾಜದ ಹಿತ ಹಾಗೂ ಆತ್ಮೋದ್ಧಾರಕ್ಕಾಗಿ ಬದುಕಿದರೆ ರಾಮಾಯಣದ ಸಂಪೂರ್ಣ ಸಾರ್ಥಕತೆ. ಇಲ್ಲಿ ನಿತ್ಯ ಜೀವನೋಪಯೋಗೀ ಸಾವಿರಾರು ಸುಭಾಷಿತಗಳು ನಮ್ಮ ದೈನಂದಿನ ಬದುಕನ್ನು ಬೆಳಗಲು ಸಹಾಯಕವಾಗಿದೆ. ಯದ್ಯಪಿ ಆಯಾ ಸಂದರ್ಭಗಳ ಪಾತ್ರಗಳ ಮಾತುಗಳು ಅವಾಗಿದ್ದರೂ, ನೇರವಾಗಿ ಓದುಗರಿಗೆ ಅನ್ವಯವಾಗುವಂತಿವೆ. ರಾಮಾಯಣದ ವಿವಿಧ ಕಾಂಡಗಳಿಂದ ಆಯ್ದ ಕೆಲವು ಸುಭಾಷಿತಗಳ ಬಗ್ಗೆ ಬೆಳಕು ಚೆಲ್ಲಲು ಇಲ್ಲಿ ಪ್ರಯತ್ನ ನಡೆಸಲಾಗಿದೆ.

ಬದುಕಿನಲ್ಲಿ ಹಣದ ಅವಶ್ಯಕತೆಯನ್ನು ದೃಢಪಡಿಸುವ ರಾಮಾಯಣದ ಯುದ್ಧಕಾಂಡದ ಈ ಶ್ಲೋಕ ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ.

**ಅರ್ಥೇನ ಹಿ ವಿಯುಕ್ತಸ್ಯ ಪುರುಷಸ್ಯಾಲ್ಪ ತೇಜಸಃ ।**
**ವ್ಯುಚ್ಛಿದ್ಯಂತೇ ಕ್ರಿಯಾಃ ಸರ್ವಾ ಗ್ರೀಷ್ಮೇ ಕುಸರಿತೋಯಥಾ ॥**

ಮನುಷ್ಯನಿಗೆ ಧನ ಸಂಪತ್ತಿರಬೇಕು. ಇಲ್ಲವಾದರೆ ಪರಾಕ್ರಮವಾದರೂ ಇರಬೇಕು. ಅಲ್ಪಪರಾಕ್ರಮಿಯಾಗಿದ್ದು, ಧನಹೀನನೂ ಆಗಿದ್ದಲ್ಲಿ ಅವನು ಮಾಡಿದ ಕಾರ್ಯಗಳೆಲ್ಲವೂ ವ್ಯರ್ಥವಾಗುತ್ತವೆ. ಗ್ರೀಷ್ಮಕಾಲದಲ್ಲಿ ತಾವಾಗಿಯೇ ಇಂಗಿ ಹೋಗುವ ಚಿಕ್ಕ ಹಳ್ಳಗಳಂತೆ. ನೀರಿನ ಸಂಗ್ರಹ ಹೆಚ್ಚಾಗಿದ್ದರೆ ಅವು ಅಷ್ಟು ಬೇಗ ಆರುವುದಿಲ್ಲ. ಇಲ್ಲವಾದರೆ ನೀರಿನ ಒರತೆಗಳಾದರೂ ಇರಬೇಕು. ಒಟ್ಟಿನಲ್ಲಿ ಪರಾಕ್ರಮ ಹಾಗೂ ಹಣ ಬದುಕಿಗೆ ಸದಾ ಇಂಬುಕೊಡುವಂಥವು.

ರಾಮಾಯಣದ ಅರಣ್ಯಕಾಂಡದ ಇನ್ನೊಂದು ಶ್ಲೋಕ ದುಷ್ಟರ ಸಹವಾಸ ಎಷ್ಟು ಅಪಾಯಕಾರಿ ಎಂಬುದನ್ನು ತಿಳಿಸುತ್ತದೆ.

**ಅಕುರ್ವಂತೋಪಿ ಪಾಪಾನಿ ಶುಚಯಃ ಪಾಪ ಸಂಶ್ರಯಾತ್ ।**
**ಪರಪಾಪೈರ್ವಿನಶ್ಯಂತಿ ಮತ್ಸ್ಯಾ ನಗ ಹ್ರದೇಯಥಾ ॥**

ಈ ಮಾತನ್ನು ಮಾರೀಚ ರಾವಣನಿಗೆ ಉಪದೇಶ ಮಾಡುವ ಸಂದರ್ಭದಲ್ಲಿ ಎಚ್ಚರಿಕೆಯನ್ನು ನೀಡುತ್ತಾ ಹೇಳುತ್ತಾನೆ. ರಾವಣ ಸೀತಾಪಹರಣದಂತಹ ಕೆಟ್ಟ ಕೆಲಸಕ್ಕೆ ಕೈಹಾಕುವುದರಿಂದ ಅವನ ಆಶ್ರಯವನ್ನು ಪಡೆದ ಸಜ್ಜನರೂ ನಾಶವಾಗುತ್ತಾರೆ ಎಂಬುದನ್ನು ತಿಳಿಸಿಕೊಡುತ್ತಾ ಒಂದು ಸುಂದರ ಉದಾಹರಣೆಯನ್ನು ನೀಡುತ್ತಾನೆ. ಪರಿಶುದ್ಧ ಚಾರಿತ್ರ್ಯವುಳ್ಳವರಾದರೂ, ಪಾಪಕೃತ್ಯವನ್ನು ಮಾಡದಿದ್ದರೂ ಪಾಪಿಗಳ ಸಹವಾಸದಿಂದಾಗಿ ನಾಶ ಹೊಂದುತ್ತಾರೆ. ಸರ್ಪಗಳ ಸರೋವರವನ್ನು ಆಶ್ರಯಿಸಿದ ಮೀನುಗಳು ಗರುಡನ ವೈರಿಗಳಾಗಿರದಿದ್ದರೂ ಆಶ್ರಯದಿಂದಾಗಿ ನಾಶ ಹೊಂದುತ್ತವೆ. ಗರುಡ ಸರ್ಪಗಳನ್ನು ತಿನ್ನುವುದರ ಜೊತೆಗೆ ಅವುಗಳ ಜೊತೆಗಿರುವ ಮೀನುಗಳನ್ನೂ ತಿಂದುಹಾಕುತ್ತದೆ. ದುಷ್ಟರ ಸಂಸರ್ಗ ಎಂದೂ ಒಳ್ಳೆಯದಲ್ಲ ಎಂಬ ನೀತಿಯನ್ನು ಈ ಪದ್ಯ ತಿಳಿಸಿಕೊಡುತ್ತದೆ.

ಕಿಷ್ಕಿಂದಾ ಕಾಂಡದ ಇನ್ನೊಂದು ಶ್ಲೋಕ ನೀಚವ್ಯಕ್ತಿಗಳು ಯಾರೆಂಬುದನ್ನು ತಿಳಿಸಿಕೊಡುತ್ತದೆ.

**ಅರ್ಥಿನಾಮುಪಪನ್ನಾನಾಂ ಪೂರ್ವಂ ಚಾಪ್ಯುಪಕಾರಿಣಾಂ ।**
**ಆಶಾಂ ಸಂಶ್ರುತ್ಯ ಯೋ ಹಂತಿ ಸಲೋಕೇ ಪುರುಷಾಧಮಃ ॥**

ಹಿಂದೆ ಉಪಕರಿಸಿದವರು ಹಾಗೂ ಸಹಾಯ ಬೇಡಿ ಬಂದವರಿಗೆ ಆಸೆ ತೋರಿಸಿ ಅವರನ್ನು ಯಾವನು ಕೊಲ್ಲುತ್ತಾನೋ ಅವನು ಅತ್ಯಂತ ನೀಚವ್ಯಕ್ತಿಯೇ ಸರಿ. ಉಪಕಾರಸ್ಮರಣೆ ಸಜ್ಜನರ ಸ್ವಭಾವ. ಅದಕ್ಕೆ ಬದಲಾಗಿ ಉಪಕೃತರನ್ನು ಆಸೆ ತೋರಿಸಿ ನಾಶ ಮಾಡುವುದು ಕೃತಘ್ನರ ಲಕ್ಷಣ.

**ನಾಗ್ನಿರ್ನಾನ್ಯಾನಿ ಶಸ್ತ್ರಾಣಿ ನನಃ ಪಾಶಾ ಭಯವಹಾಃ ॥**
**ಘೋರಾಃ ಸ್ವಾರ್ಥ ಪ್ರಯುಕ್ತಾಸ್ತು ಜ್ಞಾತಯೋ ಭಯಾವಹಾಃ॥**

ಯುದ್ಧಕಾಂಡದಲ್ಲಿ ಕಾಡಾನೆಗಳು ಆಡಿಕೊಳ್ಳುವ ಮಾತಿದು. ಅಗ್ನಿಯಾಗಲೀ, ಇತರೇ ಶಸ್ತ್ರಗಳಾಗಲೀ, ಪಾಶಗಳಾಗಲೀ ನಮಗೆ ಭಯವನ್ನುಂಟು ಮಾಡುವುದಿಲ್ಲ. ಆದರೆ ಸ್ವಾರ್ಥದಿಂದ ಕೂಡಿದ ಪಳಗಿಸಿದ ಆನೆಗಳಾದ ನಮ್ಮವರೇ ನಮಗೆ ಭಯಂಕರ ಶತ್ರುಗಳು. ಲೋಕದಲ್ಲಿ ಹೊರಗಿನ ಶತ್ರುಗಳನ್ನು ಎದುರಿಸಬಹುದು. ಆದರೆ, ನಮ್ಮವರೇ ಆಗಿದ್ದು, ಸ್ವಾರ್ಥಕ್ಕಾಗಿ ತಮ್ಮ ಹಿತ ಸಾಧನೆಗಾಗಿ ನಮಗೇ ವಂಚನೆ ಮಾಡುವವರನ್ನು ಎದುರಿಸುವುದು ಬಹಳ ಕಷ್ಟ. ನಯವಂಚಕರ ಗುಣಸ್ವಭಾವಗಳನ್ನು ಅರಿಯುವುದು ಕಷ್ಟಸಾಧ್ಯ. ಆದ್ದರಿಂದ ಶತ್ರುಗಳಿಗಿಂತ ನಮ್ಮ ಹಿತ ಶತ್ರುಗಳು ಬಹಳ ಅಪಾಯಕಾರಿಯಾಗಿರುತ್ತಾರೆ.

**ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ ।**
**ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷಯಥಾ ತವ ॥**

ರಾಮಾಯಣವನ್ನು ಆಧರಿಸಿ ವಿದೇಶಿ ಭಾಷೆಗಳಲ್ಲಿ ಕೂಡ ಚಲನಚಿತ್ರಗಳು ಬಂದಿವೆ. 'ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ' (1992) ಮತ್ತು 'ರಾಮಾಯಣ ದಿ ಎಪಿಕ್' ಎನ್ನುವ ಎರಡು ಹಾಲಿವುಡ್ ಚಿತ್ರಗಳು ನಿರ್ಮಾಣವಾಗಿವೆ. 'ದಿ ಲಿಟಲ್ ಪ್ರಿನ್ಸೆಸ್' ಎನ್ನುವ ಜಪಾನಿ ಚಿತ್ರ 1995ರಲ್ಲಿ ಬಂದರೆ 2008ರಲ್ಲಿ 'ಒಪೆರಾ ಜಾವಾ' ಎನ್ನುವ ಇಂಡೋನೇಷಿಯನ್ ಚಿತ್ರ ಕೂಡ ಬಂದಿತ್ತು. ರಾಮಾಯಣದ ವಸ್ತುವನ್ನು ವಿಭಿನ್ನ ನೆಲೆಯಲ್ಲಿ ನೋಡುವ ಕೆಲವು ವಿಶಿಷ್ಟವಾದ ಪ್ರಯತ್ನಗಳೂ ನಡೆದಿವೆ. 1977ರಲ್ಲಿ ತೆರೆ ಕಂಡ ಜಿ. ಅರವಿಂದನ್ ಅವರ ಮಲೆಯಾಳಂ ಚಿತ್ರ 'ಕಾಂಚನ ಸೀತಾ' ಇಂತಹ ಪ್ರಯತ್ನ. ಇದು ರಾಮಾಯಣದ ಉತ್ತರ ಕಾಂಡವನ್ನು ಸ್ತ್ರೀವಾದಿ ನೆಲೆಯಲ್ಲಿ ನೋಡುವ ವಿಶಿಷ್ಟವಾದ ಪ್ರಯತ್ನ. ಸಿ.ಎನ್. ಶ್ರೀಕಂಠನ್ ನಾಯರ್ ಅವರ ನಾಟಕವನ್ನು ಆಧರಿಸಿದ ಈ ಚಿತ್ರ ಶ್ರೀರಾಮನು ಅಯೋಧ್ಯಗೆ ಮರಳಿದ ನಂತರ ಲೋಕಾಪವಾದಕ್ಕೆ ಹೆದರಿ ಸೀತೆಯನ್ನು ಮರಳಿ ಕಾಡಿಗೆ ಅಟ್ಟಿದ ನಂತರದ ವಸ್ತುವನ್ನು ಹೊಂದಿತ್ತು. ಉರ್ಮಿಳೆ, ಭರತ ಸೇರಿದಂತೆ ರಾಮಾಯಣದ ಪ್ರಮುಖರು ಈ ನಿರ್ಧಾರಕ್ಕಾಗಿ ರಾಮನನ್ನು ನಿಂದಿಸುವುದು, ಅಶ್ವಮೇಧ ಯಾಗದಲ್ಲಿ ಬಂಗಾರದ ಸೀತೆಯನ್ನು ನಿರ್ಮಿಸಿ ಕೊಂಡು ವ್ರತಸ್ಥನಾದ ರಾಮ ನಂತರ ಕುದುರೆಯನ್ನು ಬಿಟ್ಟಾಗ ಲವ ಕುಶರ ಮುಖಾಮುಖಿ ಹೀಗೆ ಕಥೆ ಬೆಳೆಯುತ್ತದೆ. ವಿಶೇಷವೆಂದರೆ ಇಡೀ ಚಿತ್ರದಲ್ಲಿ ಸೀತೆ ಕಾಣಿಸುವುದೇ ಇಲ್ಲ ಪ್ರಕೃತಿಯ ಮೂಲಕವೇ ಅವಳ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ. ಸಾಂಖ್ಯ ಯೋಗದ ಪ್ರಕೃತಿ ಪುರುಷರ ಪ್ರಶ್ನೆಯನ್ನು ಗಂಭೀರವಾಗಿ ಬಳಸಿಕೊಂಡ ಚಿತ್ರ ಹಲವು ಚಿಂತನಶೀಲ ಅಂಶಗಳನ್ನು ಹೊಂದಿತ್ತು. ಶ್ರೀರಾಮ ಪ್ರಸ್ಥಾನದೊಂದಿಗೆ ಚಿತ್ರ ಮುಗಿಯುವಲ್ಲಿ ಕೂಡ ಸಂಕೇತಿಕತೆ ಇತ್ತು. ಮಣಿರತ್ನಂ ಅವರ 'ರಾವಣ' ಚಿತ್ರ ಆಧುನಿಕ ನೆಲೆಗೆ ರಾಮಾಯಣವನ್ನು ಹೊಂದಿಸುವ ಮಹತ್ವದ ಪ್ರಯತ್ನವಾಗಿತ್ತು. ರಾಮ, ಸೀತೆ, ರಾವಣ ಮೂರು ಪಾತ್ರಗಳನ್ನು ಚಿತ್ರದಲ್ಲಿ ಆಧುನಿಕ ನೆಲೆಯಲ್ಲಿ ಇಡಲಾಗಿತ್ತು. ಕನ್ನಡದಲ್ಲಿ ವಾದಿರಾಜ್ ಅವರ 'ಸೀತಾ' ರಾಮಾಯಣದ ಸೀತೆಯ ಪಾತ್ರವನ್ನು ಆಧುನಿಕ ಸಂದರ್ಭಕ್ಕೆ ಹೊಂದಿಸಿದಂತಹ ಪ್ರಯೋಗವಾಗಿತ್ತು. ಪುಟ್ಟಣ್ಣ ಕಣಗಾಲ್ 'ಶರಪಂಜರ' ಚಿತ್ರದಲ್ಲಿ 'ಹದಿನಾಲ್ಕು ವರ್ಷ ವನವಾಸದಿಂದ' ಗೀತೆಯ ಮೂಲಕ ನಾಯಕಿಯ ನೋವಿಗೆ ಸೀತೆಯ ಚಿರ ವಿರಹದ ಬಿಂಬವನ್ನು ಕೊಡುವ ಪ್ರಯತ್ನವನ್ನು ಮಾಡಿದ್ದರು.

ರಾಮಾಯಣದ ಅಗಾಧ ಸಾಧ್ಯತೆಯನ್ನು ಗಮನಿಸಿದಾಗ ಬೆಳ್ಳಿತೆರೆಯಲ್ಲಿ ಅದನ್ನು ಸಮರ್ಥವಾಗಿ ಬಳಸಿ ಕೊಂಡಿಲ್ಲವೆಂದೇ ಹೇಳಬೇಕು. ಅಂತಹ ಪ್ರಯತ್ನಗಳಿಗೆ ಉತ್ಸಾಹಿಗಳಿಗೆ ಇಂದಿಗೂ ಅವಕಾಶ ಇದ್ದೇ ಇದೆ.

❑

# vitality of ramayana:
# the ramnami cult

**Pralhad B. Mahishi**

We can try to understand the Ramnami cult, which started and flourished in the eastern districts of Chhattisgharh region. The sect was formed in 1890, by a person called Parasuram.

The cult passed through various stages.

The Ramnam became a mantra, a symbol, a drawing, a tattoo, and whatever physical and oral form it could attain, it pervaded all aspects of the sect's life.

An epic represents the perennial memory of the society to which it belongs. *Ramayana*, or the story of Rama, is an epic which is deeply rooted in the soil and minds of generations of people of India. Each place in India, rightly or wrongly, claims an association with this great epic. Some village claims that Rama spent a day in the forest of their village; another village claims that Sita washed her cloths in the stream in their village; and another place claims that Sita lost her nose ring in the stream of their village, and Hanuman, with his tail sweeping the river bed, got the ring back for her. Recently, the Uttar Pradesh Government has announced the development of *Ramayana* trail, a development of all the places Rama is said to have visited, so that the visitors can acquaint themselves with the epic by going round the places. Such is the influence of this great epic.

The influence is not limited to India. South East Asian countries, like Thailand, Burma, Indonesia, Cambodia, and Nepal have their own *Ramayana* tradition. The main story remains the same, with some small differences, which are regional, and worthy of study to understand the region's ethos and culture. For example, Thailand is called the Kingdom of Ayutaya and the king of Thailand is called Rama III. The island of Bali in Indonasia has its own version of *Ramkatha*, and is enacted as a ballet all over the island. Similarly, *Ramayana* in Mymnar also has its local flavour, even though the basic contents of the Rama story remain the same.

Within India, the story of Rama has kindled the interests of dramatists since a long time, to compose dramas based on this subject. Bhavabhooti's *Uttararamacharita* and *Maharaveera charita*, Bhasa's *Abhishekanatakam* and *Pratimanatakam*, are some examples. Sometimes, the authors have departed from the main text, but keeping the spirit of the story intact. In *Pratimanatakam*, prince Bharata comes to know about the death of his father, Dasharatha, through the statue erected in his memory, not having received the tidings of his father's death. The dramatist's imagination is totally within the storyline, departing from the main narration only in matters of detail.

The regional rendering of the great epic throws light on the social milieu of that particular region, keeping the main body intact. An example in case is *Krttivasa Ramayana* of Bengal. The author incorporates many social details in his narration. One such detail is the wedding of Rama. There is an institution in Bengal called 'Ghataka', which means the 'match maker'. Krittivasa Oza (1400-1500) states that King Janaka dispatched Sage Viswamitra to bring Dasaratha to the wedding, whereas in the original Valmiki *Ramayana*, it is stated that the king Janaka dispatched messengers to bring Dasaratha to the wedding of Srirama, and even Tulasidasa adopts the same line as Valmiki. Viswamitra is ecstatic on his way to Ayodhya, 'since I become the Ghataka for the wedding of Rama, my fame will spread in all directions'. (Ramnath Tripathi). Sri Tripathi claims that Krittivasa's departure impressed even Tulasidas, who in his later work on same subject, invented the institution of match maker, and made Shatananada, the priest of Janaka, the match maker and dispatches him as a messenger to Dasharatha. This departure is in *Gitavali* (1628-31), a later work of Tulasidas.

There is an attempt in regional versions of Ramayana to remove the stigma that Rama gets due to his acts like killing of Vali and deserting of Sita after he vanquishes Ravana. Regarding deserting Sita, Krittivasa states that Sita suffered the curses of Tara, wife of Vali, and Mandodari, the wife of Ravana. Both these women curse Sita, stating that she should suffer loneliness and destitution, since her husband killed their husbands. This devise of Krittivasa is his own, which is not to be found in Valmiki Ramayana. Similarly, some authors try to absolve Rama of his sin in killing Vali, when he was not armed, and was killed from behind. In Valmiki, his act is justified, for committing a great sin of coveting his brother's wife, but in *Anandaramayana*, (1400 to 1500) Rama is repentant for his killing of Vali, and exhorts Vali to kill him in Dwapara Yuga, for his pleasure. Here we can recollect the tale of a hunter who shoots an arrow at lord Krishna's foot, mistaking it to be a bird, when he was lying down.

### *Rama as the patron deity of India*

Why did Rama emerge as the patron deity of India, among all the avatars of Vishna? Many scholars believe that the two Acharyas from South India, Sri Ramanujacharya, who founded the Vishishtadwaita school of philosophy, and Sri Madhwacharya, who founded the school of Dwaita spread the worship of Rama. It seems that these two great acharyas chose Rama to represent the Vaishnava Godhead, as he was the epitome of all virtues, and known for his ethical treatment and a "personification of 'Dharma'," as Maricha states in his advice to Ravana, pleading that he should not go to war with Rama.

### *The popular Rambhakti Movements*

Ramananda, a great devotee of Rama, who llived in 15th century, was responsible for the spread of Rambhakti in north India, especially in Gangetic and Yamuna river belts. During his visit to Garwal, he is said to have laid the foundation of a Rambhakti cult, called "Ramavat", which became well known and popular among the devotees of Rama. (D.P.Sakalani, 'The Ramayana tradition in Central Himalayas', Annals of Bhandarkar Oriental Research Institute, vol. 84, pages 117- 126.). He was a Brahmin, and took within his fold people of all castes and creeds. This 'Ramavat', a popular Rambhakti cult, seems to be the first one, followed by Kabir panthis, the Ramsnehi cult, and finally, the Ramnami cult about which this paper will deal extensively.

### *The time of composition of Ramcharitamanas, by Goswami Tulsidas.*

Abundant research has been done in understanding the time and circumstances of composition of this great work, also known as the '*Fifth Veda'* or the '*Hindi Veda'* in Hindi belt. Goswami Tulasidas has made two valiant attempts in his work, to bring about reconciliation among two conflicting ideas, which must be vying with each other for dominant position during his time. One is the conflict between Advaita and Dwaita, and other is between Shivabhakti and Vishnubhakti. He has made an attempt to bring both of them together, and hence is known as the 'Samanvaya Kavi', or poet of reconciliation or coordination.

Advaita philosophy describes Brahman, or the Supreme Godhead, as 'nirguna' and 'nirakara', which when translated, would mean, 'property-less', or 'quality-less', or 'beyond any trait', and 'nirakara' would mean, 'formless'. As a midway between these two concepts, emerged the concept of "Nirgun Ram", who was made popular by Kabir, through his *dohas*. The same concept was adopted by Tulasidas, who sang the praise of 'Nirgun Ram'.

For those who read the *Ramayana* of Valmiki, the concept seems hard to digest. Valmiki describes Rama as epitome of all the virtues, in the world, and does not miss a single opportunity to describe his divine qualities. Whether it is child Ram, or young man, or one who is grieving the departure of Sita due to Ravana's machination, or the fighter, or the victor in war, his good qualities have been brought to light and lionized. When it is so, it is hard to understand how a devotee can conceive a property-less, quality-less, and virtue-less Ram. However, the concept has come to stay in the minds of people, and is frequently referred to.

Another concept is reconciliation between Shaiva and Vaishnava cults. Tulasidas portrays Shiva as a great friend of Rama, and in Tulasi's narration of his epic, he brings about a situation where part of *Ramacharitamanas* is narrated by Shiva to Parvati. In the same text, Tulasi makes Ram say, 'One who is not devoted to Shiva cannot be my devotee'. Thus Tulasi makes an attempt to bring about reconciliation between Shaivas and Vaishnavas, between whom, rivalry must have been raging at that time.

### *The Ramnami cult: Beginning*

In this background, we can try to understand the Ramnami cult, which started and flourished in the eastern districts of Chhattisgharh region. The sect was formed in 1890, by a person called Parasuram, who belonged to the profession of leather workers, who today belong to the scheduled caste, and are included in the Schedule to the Constitution. Parasuram's father has been a great Ram devotee, and listened to and memorized the verses in *Ramcharitamanas* (hereafter will be referred as RcM.). According to the oral accounts, Parasuram contacted leprosy when he was in his mid twenties, and was cured by an ascetic belonging to Ramanand's order, which has been referred above. The ascetic told Parasuram to practice Rambhakti and recite RcM and devote his life to propagation of the same. All this information is based on oral hagiography, and there is no material evidence. The good word spread, and illiterate villagers were attracted to his teachings. Most of the people attracted belonged to his own caste, that of leather workers.

The cult passed through various stages. It started with oral tradition, with its head reciting from the text, those portions which he had memorized, as he was not literate. The book enjoyed the status of an idol, which would be handled with reverence, even though people around could not read it and memorize it. So, the Ramnam became a mantra, a symbol, a drawing, a tattoo, and whatever physical and oral form it could attain, it pervaded all aspects of the sect's life. The sect lived and breathed Ramnam, even though most of them were illiterate, but adopted various symbols to make up the deficiency of literacy. They had it written everywhere, wore shawls printed with Ramnam, and showed an unflinching expression of their commitment: they had Ramnam tattooed all over their bodies.

### *Texts used by followers*

As time passed, more people became literate, and started reading the RcM. With the starting of the first World War, demand for leather and leather goods increased, as the countries had to provide boots to the soldiers and saddles to the horses. It brought about some kind of economic relief to the leather workers, who could improve their standard of living to some extent. The number of literate persons increased in the cult, and they started sourcing the praise of Ram from other texts, keeping RcM as the basic text.

The texts which could appeal to them most were the ones which dealt with 'Nirgun Ram'. The first one to popularize the concept of Nirgun Ram was Kabir, and Kabir's poetry and sayings became very popular in this cult. Already Kabirpanth was in existence in Madhya Pradesh region for more than two hundred years, and Kabir's repeated assertion of importance of Ramnam attracted the members of this cult, and they incorporated many of Kabir's poetry into their daily Bhajans. Kabir's pithy and direct statements suited the ethos of the cult, and they accepted them gladly.

Another work which attracted this cult was a book by name, '*Visram Sagar*', written by Raghunathadas, founder of the Ramsnehi cult, which was popular in Madhya Pradesh and Uttar Pradesh. Written in 19th century, it also eulogises the concept of Nirgun Ram, and hence it is dear to the Ramnamis, and occupies a position second only to RcM.

In addition to these texts, the sect has also borrowed from other texts of Tulasidas, and also from various other writers, who subscribe to a 'non Vedic' and 'non *Puranic*' tradition. Thus, the Ramnamis have made their own anthology of literature, which suits their ethos.

### *Bhajan*

The cult's practice of Ramnam can be divided into three kinds. One is the simple Bhajan, which is done in chorus. In the middle of this chorus, some of the participants introduce a '*Doha*', or a '*Choupai*', which are two lined and four lined poems with different meters. The person who introduces this poem, mainly sourced from RcM and occasionally from other texts, indicates his wish to intervene, and he is provided an opportunity. Ramnamis place a copy of RcM in the middle of their Bhajan session, on a bookstand, or on a piece of cloth. Around this the program is conducted. The Bhajan session attracts many passersby, as they are attracted by the peacock feather caps, bright yellow shawls inscribed with Ramnam which is worn by the participants, and the tattoos on their bodies. The Ramnamis believe that more persons hearing the Ramnam, better it is for the society, as benefit is shared by more. Every participant has an urge to introduce a new 'Doha' or a new 'Choupai', and as a result, one does not hear the repetition at all, and that too, if heard, is very rare. Generally, the Ramnamis use about five to six hundred verses from RcM and about a hundred or so from other texts.

### *Special feature of Ramnami tradition*

A prominent feature of the 'doha' or 'choupai' is that those verses, wherever the word 'Brahmin' occurs, it is replaced by 'Ramnam'. Similarly, in the verses that are unfavourable to women, animals, and some classes are either omitted, or the unfavorable word is replaced by 'Ramnam'. For example there is a verse,

> ***The Lord took human form to help Brahmins, cows, gods, and holy men.***
>
> This gets replaced by the following line.
>
> ***The Lord took human form to help gods and holy men by giving them the practice of Ramnam.***

(Source:Ramdas Lamb,1991)

### *Conversation*

The second format of Ramnamis is conversation. The conversation is carried out by selecting lines from the RcM and other sources, mentioned above, so that a meaningful conversation is made. If a person wants to engage another in conversation, he may give a clue. He may adopt the lines of Shabari, the woman who waited to see Rama. He may tell the person, whom he approaches, using the words of Shabari, "I have been longing to see you. My wish is fulfilled". To this another person, who was addressed, may reply, "Yes. The Darshan which even sages wish to have, but do not get, is now available to the low born like me." Here the other person is adopting the conversation of Vibheeshan, Ravana's brother.

The Ramnamis generally adopt the conversations of Hanuman, Vibheeshan, and Nishadraj, who are unflinching devotees of Rama, and hence, every word spoken by them can be used in conversation. The individuals, who want to make an intelligent conversation, have to study more and more of RcM. As a rule, the conversation should end with singing the glory of Ram and Ramnam.

### *Takkar*

The third format is called *takkar*, which when translated would mean debate, confrontation, or argument. This involves a good knowledge of RcM, and other texts used by the Ramnamis. Not all who can conduct conversation can engage themselves in *takkar*, as it requires understanding the nuances of various concepts used in conversation, and capability to be ready with wise and appropriate answers. The people participating in *takkar* are called *Vidwans*, and now they are called *Gyanis*, to take away the element of cleverness in the knowledge, but to indicate divine knowledge. The *takkar* may last for a few minutes, involving a few exchanges, or it may be a long affair, like rallies for a match point. Ultimate winner has to be Ramnam, whosoever wins. But the participants can show their depth of knowledge, wisdom, ready wittedness, and understanding.

The *takkars* are of two kinds. One is *Gyan takkar* where the participants exhibit their knowledge of arguing skills, and another is *Leela takkar*, which is playful, and joyous, giving pleasure to listeners. Both kinds of *takkars* have to come to an end with a ***Samarthak***, which is the conclusive verdict in favour of Ramnam. Every *Gyani* creates his own repertoire of verses, either playing a pro-Ram role, like Laxman, Bharat, Hanuman, etc., or anti Ram role like Ravan, Kumbhakarn, Indrajit, or Kaikayee. The words praising Brahmins are put in the mouths of demons, like Ravana, who himself was a Brahmin, or in the mouths of characters opposed to Rama.

Here, a *Gyan takkar* is reproduced, ( Ramdas Lamb, ibid.), which took place in the Ramnami Festival in 1989. The Ramnamis hold annual festivals in different parts of the region, which are largely attended, and skilled *Gyanis* participate. A *Gyani* throws up the challenge like this.

> ***According to Vedas, itihasas and puranas, God's creation is filled with both good and evil.***
>
> Accepting his challenge, the participating *gyani* replies.
>
> ***God created all existence as a mixture of good and evil. Swanlike saints drink the nectar of goodness, leaving behind the waters of imperfection.***
>
> Resounding the first *Gyani* replies using two verses, consecutively, the second aimed at bolstering the view presented in the first:
>
> ***Planets, medicinal plants, water, wind, and clothing become useful or harmful in accordance with their good and bad associations. Only a clever and thoughtful person can know the difference.***
>
> ***Only when the Creator gives on discriminative wisdom does the mind turn from sin to goodness.***
>
> The second *gyani* makes a rejoiner, which can be called a '*samarthak*':
>
> ***Knowing the world to be permeated by Ram's name, I bow with joined hands.***
>
> Here, the *gyani*, to corroborate his viewpoint, uses *Hamsaksheera Nyaya.*

Over the years, the number of *Gyanis* or *Vidwans* is increasing, with more and more literate persons taking to study *Ramcharitamanas*. Even other texts are being studied, and the circles of Ramnamis where such conversations and debates take place are becoming specialized, and more focused. The tradition of Ramnamis is growing, and providing more and more experimentation. They have increased the vitality of *Ramayana*, especially *Ramcharitamanas*, and providing themselves a group identity and a social cause.

This is the character of a great epic, which runs in the veins of a nation. It provides all things to all men, all the time.

**References:**

*Valmiki Ramayana*, Gita press, Gorakhpur.

Goswami Tulasidas, *Ramcharitmanas*, Gita Press, Gorakhpur.

Ramdas Lamb Ramnamis, doctoral thesis *Ramnamis, Ramanam and The Role of Low Caste in Rambhakti Tradition* (1991), University of California.

Philip Lutgendorf, 'The Power of Sacred Story: "Rāmāyan a" Recitation in Contemporary North India', *Journal of Ritual Studies,* Vol. 4, No. 2, Ritual and Power (Summer 1990), pp. 115-147

Ramanath Tripathi's doctoral thesis - *Krttivasi - Bengala Ramayana aur Ramacaritamanasa ka Tulanatmak Adhyayan* (Comparison Between Tulasidas's Ram Charita Manas and Krittivasa Ramayana), Bharat Prakashan Mandir, Subhash Road, Aligarh.

D.P. Sakalani, 'Traditions of Ramayana,' *Annals of Bhandarkar Institute*.

❑

# ರಾಮಾಯಣ ಆಧಾರಿತ ಆಧುನಿಕ ಸಂಸ್ಕೃತ ನಾಟಕಗಳು ಒಂದು ಸಮೀಕ್ಷೆ

ಪ್ರಸ್ತುತ ಈ ಲೇಖದಲ್ಲಿ ರಾಮಾಯಣ ಆಧಾರಿತ ನಾಟಕ ನಿರ್ಮಾಣ ಮಾಡಿದ ಆಧುನಿಕ ನಾಟಕಕಾರರಾದ ಕರ್ನಾಟಕದವರೇ ಆದ ಜಗ್ಗೂ ವಕುಲ ಭೂಷಣ, ಮಧ್ಯಪ್ರದೇಶದವರಾದ ವನಮಾಲಾ ಭವಾಲ್ಕರ್, ಮಹಾರಾಷ್ಟ್ರದವರಾದ ವರ್ಣೇಕರ್, ಎಸ್.ಬಿ. ವೇಲಂಕರ್, ಕರ್ನಾಟಕದವರೇ ಆದ ಕೆ.ಟಿ. ಪಾಂಡುರಂಗಿ, ಆಂದ್ರದವರಾದ ಓಗೇಟಿ ಪರೀಕ್ಷೀತ್ ಶರ್ಮಾ, ಕಾಲೂರಿ ಹನುಮಂತ ರಾವ್, ವಿ. ಆಂಜನೇಯ ಶರ್ಮಾ, ಉತ್ತರ ಪ್ರದೇಶದ ರಾಮ ಕಿಶೋರ ಮಿಶ್ರಾ, ದಿಲ್ಲಿಯವರಾದ ರಮಾಕಾಂತ ಶುಕ್ಲಾ, ಕರ್ನಾಟಕದವರಾದ ಗುರುಪಾದ ಕೆ.ಹೆಗಡೆ, ಭೋಪಾಲದ ಮಧ್ಯಪ್ರದೇಶದ ಭಾಸ್ಕರಾಚಾರ್ಯ ತ್ರಿಪಾಟಿಯವರ ನಾಟಕಗಳನ್ನು ಸಮೀಕ್ಷೆ ಮಾಡಲಾಗಿದೆ.

ಡಾ. ಎಸ್. ರಂಗನಾಥ್

ಆದಿ ಕಾವ್ಯವೆಂದೇ ಖ್ಯಾತವಾಗಿರುವ ಶ್ರೀಮುದ್ರಾಮಾಯಣ ಭಾರತೀಯ ಸಂಸ್ಕೃತಿ, ಸದಾಚಾರ, ಸನ್ನಡತೆಗಳ ಸಾಕಾರ ಗ್ರಂಥವೆಂಬುದು ನಿರ್ವಿವಾದ. ಭಾರತೀಯ ಭಾಷೆಗಳಿಗೆ ಅಲ್ಲದೆ ವಿದೇಶೀ ಭಾಷೆಗಳಿಗೂ ಸಹ ಅನುವಾದಿತವಾದ ಪ್ರಭಾವ ಬೀರಿರುವ ಜನಪ್ರಿಯ ಗ್ರಂಥ ವಾಲ್ಮೀಕಿ ರಾಮಾಯಣ. A GREAT WORK IS THAT WHICH STANDS THE TEST OF TIME ಎನ್ನುವ ನಾಣ್ಣುಡಿಗೆ ಜ್ವಲಂತ ನಿದರ್ಶನವಾಗಿ ನಮ್ಮೆದುರು ತೋರುವ ಕೃತಿಯೇ ರಾಮಾಯಣ. ಇಂತಹ ರಾಮಾಯಣವನ್ನು ಸ್ಫೂರ್ತಿಯನ್ನಾಗಿಟ್ಟುಕೊಂಡು ಅನೇಕ ಕವಿವರೇಣ್ಯರು ಮಹಾಕಾವ್ಯ, ಖಂಡಕಾವ್ಯ, ಗದ್ಯಕಾವ್ಯ, ದೂತಕಾವ್ಯ, ಚಂಪೂಕಾವ್ಯ, ಸ್ತೋತ್ರಕಾವ್ಯ, ನಾಟಕ ಇತ್ಯಾದಿ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಕೃಷಿ ಮಾಡುತ್ತಿರುವುದು ನಮಗೆ ವೇದ್ಯವಾದುದೇ ಆಗಿದೆ. ಈ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ದೃಶ್ಯಕಾವ್ಯವೆಂದೇ ಖ್ಯಾತವಾಗಿರುವ ನಾಟಕ ಅತ್ಯಂತ ಜನಪ್ರಿಯವೂ, ಜನಾದರಣೀಯವೂ ಆಗಿರುವುದರಲ್ಲಿ ಸಂದೇಹವಿಲ್ಲ. ಈ ನಿಟ್ಟಿನಲ್ಲಿ ಭಾಸ, ಭವಭೂತಿ, ದಿನ್ನಾಗ, ಮುಂತಾದವರು ಪ್ರತಿಮಾ ನಾಟಕ, ಅಭಿಷೇಕ ನಾಟಕ, ಮಹಾವೀರಚರಿತೆ, ಉತ್ತರ ರಾಮಚರಿತೆ, ಕುಂದಮಾಲಾ ಮುಂತಾದ ಮನೋಜ್ಞವೂ, ಚೇತೋಹಾರಿಯೂ ಆದ ನಾಟಕಗಳನ್ನು ರಾಮಾಯಣದಿಂದ ಸ್ಪೂರ್ತಿ ಪಡೆದು ರಚಿಸಿ ಅಮರರಾಗಿದ್ದಾರೆ. ಪ್ರತಿಭಾಷೆಯೂ ಸಹ ಸಮಾಜದ ಬದಲಾವಣೆ, ಪ್ರಸಕ್ತ ಸ್ಥಿತಿಗತಿಗಳು, [ಕವಿ ಸಮಯಕ್ಕೆ ಅನುಗುಣವಾಗಿ ಪರಂಪರೆಯನ್ನು ಬಿಡದೆ ಹೊಸ ಬದಲಾಣೆಗಳನ್ನು ಅಳವಡಿಸಿಕೊಂಡು ಕಾವ್ಯವನ್ನು ಸಮೃದ್ಧಗೊಳಿಸುವಂತೆ ಸಂಸ್ಕೃತದ ಆಧುನಿಕ ಕವಿಗಳೂ ಸಹ ತಮ್ಮ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾರೆ.] ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಮುಂಬೈನಿಂದ ಕಲ್ಕತ್ತಾದವರೆಗೆ ಅತ್ಯಂತ ಪ್ರತಿಭಾವಂತ ಕವಿಗಳು ಕಾವ್ಯದ ವಿಭಿನ್ನ ಪ್ರಕಾರವಾದ ಮಹಾಕಾವ್ಯಗಳು, ಖಂಡಕಾವ್ಯಗಳು, ದೂತಕಾವ್ಯಗಳು, ಚಂಪೂಸಾಹಿತ್ಯ, ಸ್ತೋತ್ರ ಸಾಹಿತ್ಯ, ಗೀತಕಾವ್ಯಗಳು, ನಾಟಕಗಳನ್ನು ರಚಿಸುತ್ತಿರುವುದು ಕೇವಲ ಗಾತ್ರ ದೃಷ್ಟಿಯಿಂದ ಮಾತ್ರವಲ್ಲದೆ ವಿಷಯವೈವಿಧ್ಯತೆಯ ದೃಷ್ಟಿಯಿಂದಲೂ ಹೊರಹೊಮ್ಮುತ್ತಿರುವುದು ನಿಜಕ್ಕೂ ಅದ್ಭುತವೇ ಸರಿ.

ಪ್ರಸ್ತುತ ಈ ಲೇಖದಲ್ಲಿ ರಾಮಾಯಣ ಆಧಾರಿತ ನಾಟಕ ನಿರ್ಮಾಣ ಮಾಡಿದ ಆಧುನಿಕ ನಾಟಕಕಾರರಾದ ಕರ್ನಾಟಕದವರೇ ಆದ ಜಗ್ಗೂ ವಕುಲ ಭೂಷಣ, ಮಧ್ಯಪ್ರದೇಶದವರಾದ ವನಮಾಲಾ ಭವಾಲ್ಕರ್, ಮಹಾರಾಷ್ಟ್ರದವರಾದ ವರ್ಣೇಕರ್, ಎಸ್.ಬಿ. ವೇಲಂಕರ್, ಕರ್ನಾಟಕದವರೇ ಆದ ಕೆ.ಟಿ. ಪಾಂಡುರಂಗಿ, ಆಂದ್ರದವರಾದ ಓಗೇಟಿ ಪರೀಕ್ಷೀತ್ ಶರ್ಮಾ, ಕಾಲೂರಿ ಹನುಮಂತ ರಾವ್, ವಿ. ಆಂಜನೇಯ ಶರ್ಮಾ, ಉತ್ತರ ಪ್ರದೇಶದ ರಾಮ ಕಿಶೋರ ಮಿಶ್ರಾ, ದಿಲ್ಲಿಯವರಾದ ರಮಾಕಾಂತ ಶುಕ್ಲಾ, ಕರ್ನಾಟಕದವರಾದ ಗುರುಪಾದ ಕೆ.ಹೆಗಡೆ, ಭೋಪಾಲದ ಮಧ್ಯಪ್ರದೇಶದ ಭಾಸ್ಕರಾಚಾರ್ಯ ತ್ರಿಪಾಟಿಯವರ ನಾಟಕಗಳನ್ನು ಸಮೀಕ್ಷೆ ಮಾಡಲಾಗಿದೆ.

ಜಗ್ಗೂ ವಕುಲ ಭೂಷಣರಿಂದ ಹಿಡಿದು ಭಾಸ್ಕರಾಚಾರ್ಯ ತ್ರಿಪಾಟಿಯವರವರೆಗೆ ಮಾಡಿಕೊಂಡಿರುವ ಈ ಅನುಕ್ರಮಣಿ ಜನ್ಮ ದಿನಾಂಕದ ಆಧಾರದ ಮೇಲೆ ಮಾಡಿಕೊಳ್ಳಲಾಗಿದೆ.

### I ಜಗ್ಗೂ ವಕುಲಭೂಷಣ

ಜಗ್ಗೂ ವಕುಲಭೂಷಣ ಎಂಬ ಕಾವ್ಯನಾಮವುಳ್ಳ ಜಗ್ಗೂ ಅಳ್ವಾರ್ ಅಯ್ಯಂಗಾರರು 1902ರಲ್ಲಿ ಮೇಲುಕೋಟೆಯ ಸಮೀಪವಿರುವ ಛತ್ರಘೋಷ ಎಂಬಲ್ಲಿ ಜನಿಸಿ ನಾಟಕಗಳು, ಪದ್ಯಕಾವ್ಯಗಳು, ಚಂಪೂಕಾವ್ಯಗಳು, ಗದ್ಯಕಾವ್ಯಗಳು, ಸ್ತೋತ್ರಕಾವ್ಯಗಳು ಇತ್ಯಾದಿ ಸಂಸ್ಕೃತದ ವಿಭಿನ್ನ ಪ್ರಕಾರಗಳಲ್ಲಿ ಕಾವ್ಯರಚನೆ ಮಾಡಿದ್ದಾರೆ.

ಇವರ ರಾಮಾಯಣ ಆಧಾರಿತ ನಾಟಕಗಳು ಇಂತಿವೆ :–

### 1. ಮಂಜುಲಮಂಜೀರಂ

ಎಂಟು ಅಂಕಗಳಿಂದ ಕೂಡಿದ್ದು ವಾಲ್ಮೀಕಿಯ ರಾಮಾಯಣದಿಂದ ಸ್ಫೂರ್ತಿ ಪಡೆದು ಹೆಣೆಯಲ್ಪಟ್ಟ ನಾಟಕವೇ ಮಂಜಲಮಂಜೀರ. ಮಂಜೀರ ಎಂದರೆ ನೂಪುರ ಅಥವಾ ಗೆಜ್ಜೆ. ರಾಮಾಯಣದಲ್ಲಿ ಲಕ್ಷ್ಮಣನು ಕಿಷ್ಕಿಂದಾ ಕಾಂಡದಲ್ಲಿ ಹೇಳುವಂತಹ **ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಂಡಲೇ ನೂಪುರೇತ್ವಭಿಜಾನಾಮಿ ನಿತ್ಯಂ**

**ಪಾದಾಭಿವಂಧನಾತ್** ಎಂಬ ವಾಕ್ಯವೇ ಈ ನಾಟಕದ ಶೀರ್ಷಿಕೆಗೆ ಸ್ಫೂರ್ತಿ ನೀಡಿರಬಹುದು.

ಮೂರು ಮಂಗಳ ಶ್ಲೋಕಗಳ ನಂತರ ಸೂತ್ರಧಾರನ ಪ್ರವೇಶವಾಗಿ ಅವನು ವಾಲ್ಮೀಕಿಯನ್ನು ಸ್ಮರಿಸುತ್ತಾನೆ :

**ಸಂಸಾರದಾವಾನಲದಹ್ಯಮಾನಾನ್ ಯಶ್ಚೇತನಾನ್ನಾಮ ಕಥಾಮೃತಾಘೈಃ ।**
**ಅಪ್ಯಾಯಯಾಮಾಸ ಕವೀಶ್ವರಂ ತಂ ಪ್ರಾಚೇತಸಂ ಚೇತಸಿ ವಾಸಯಾಮಿ ॥**

ಮತ್ತೆ ಸೂತ್ರಧಾರನ ಉದ್ಗಾರ ವಾಲ್ಮೀಕಿಯನ್ನು ಬಿಟ್ಟು ನನ್ನ ಹೃದಯ ಮತ್ತಾರಲ್ಲಿ ಭಕ್ತಿಯನ್ನು ತೋರಿಸೀತು ಎಂಬ ಮಾತು ಕವಿಗೆ ವಾಲ್ಮೀಕಿ ಬಗ್ಗೆ ಇದ್ದ ಆದರ ಪುಷ್ಟೀಕರಿಸುತ್ತದೆ.

**"ವಾಲ್ಮೀಕಿಂ ತಂ ವಿಹಾಯ ಕ್ವನು ಮಮ ಹೃದಯಂ**
**ದರ್ಶಯೇದ್ ಬ್ರೂಹಿ ಭಕ್ತಿಮ್ ।"**

ಈ ನಾಟಕದ ಕಥಾವಸ್ತು ರಾಮಾಯಣದ ಬಾಲಕಾಂಡದಿಂದ ಮೊದಲ್ಗೊಂಡು ರಾಮ ಪಟ್ಟಾಭಿಷೇಕದವರೆಗೆ ಹೆಣೆಯಲ್ಪಟ್ಟದೆ. ಇದರಲ್ಲಿ ಶೀರ್ಷಿಕೆಗನುಗುಣವಾಗಿ ಮಂಜೀರ ಅಥವಾ ನೂಪುರದ ಕಲ್ಪನೆ ಆಕರ್ಷಕವಾಗಿ ಐದನೆಯ ಅಂಕದಲ್ಲಿ ಅಳವಡಿಸಲಾಗಿದೆ. ಸೀತೆಗೆ ಅನುಸೂಯೆಕೊಟ್ಟ ಒಡವೆಗಳಲ್ಲಿ ಮಂಜೀರವೂ ಒಂದಾಗಿದ್ದು ಅದರ ಬಗ್ಗೆ ಅನುಸೂಯೆ ನಿವೇದಿಸುತ್ತಾಳೆ. ಜಾನಕಿ,

**"ಗೃಹಾಣೇನಂ ಮಾಯಾಂ ಶಿಕಾಭಿದಂ ಮಂಜೀರಂ"**

### 2. ದಾಶರಥಿದರ್ಶನಂ

ನಂದಿಗ್ರಾಮದಲ್ಲಿ ವಾಸ ಮಾಡುವ ಭರತ ವನವಾಸದಿಂದ ಹಿಂದಿರುಗುವ ರಾಮನನ್ನು ಕಾಣುವ ಸನ್ನಿವೇಶವೇ ಈ ನಾಟಕಕ್ಕೆ ಮೂಲಾಧಾರ. ಹದಿನಾಲ್ಕು ವರ್ಷಗಳ ಕಾಲ ರಾಮ ವಿರಹದ ಕಷ್ಟದಿಂದ ಕಾಲಯಾಪನೆ ಮಾಡಿದ ಭರತನ ದುಗುಡ, ನಿರಾಸೆ, ರಾಮಗಮನದ ನಂತರ ಅವನಿಗಾಗುವ ಸಂಭ್ರಮ, ಸಡಗರ ಇಲ್ಲಿ ಸುಂದರವಾಗಿ ಮೂಡಿ ಬಂದಿದೆ.

### 3. ಯೌವರಾಜ್ಯಂ

ಈ ಏಕಾಂಕನಾಟಕ ಲಕ್ಷ್ಮಣ ಊರ್ಮಿಳೆಯರ ಸುಧೀರ್ಘ ವಿರಹದ ನಂತರ ಸುಖವಾಗಿರುವ ಸನ್ನಿವೇಶವನ್ನು ನಿರೂಪಿಸುತ್ತದೆ. ಲಕ್ಷ್ಮಣನಿಗೆ ಯುವರಾಜಾಭಿಷೇಕ ಮಾಡಬೇಕಂಬ ಪ್ರಸ್ತಾಪವಿರುವಾಗ ಅವನು ತಾನು ರಾಮನ ದಾಸನೆಂದೂ ತನಗೆ ಅಧಿಕಾರ ಬೇಡವೆಂದು ಹೇಳಿದಾಗ ಎಲ್ಲರೂ ಭರತನನ್ನು ಒಪ್ಪಿಸಿ ಅವನಿಗೇ ಯುವರಾಜ ಪಟ್ಟ ಕಟ್ಟುತ್ತಾರೆ.

## II ವನಮಾಲಾ ಭವಾಲ್ಕರ್

ಶ್ರೀಮತಿ ವನಮಾಲಾ ಭವಾಲ್ಕರ್ ಅವರು 1914ರಲ್ಲಿ ಕರ್ನಾಟಕದ ಬೆಳಗಾವಿಯಲ್ಲಿ ಜನಿಸಿ, ಮಧ್ಯಪ್ರದೇಶದ ಸಾಗರ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಎಂ.ಎ, ಪಿಹೆಚ್.ಡಿ ಪದವೀಧರೆಯಾಗಿ ಸಾಗರ ವಿಶ್ವವಿದ್ಯಾಲಯದಲ್ಲೇ ಸಂಸ್ಕೃತ ವಿಭಾಗದಲ್ಲಿ ಸೇವೆ ಸಲ್ಲಿಸಿ ಪ್ರವಾಚಕಿಯಾಗಿ ನಿವೃತ್ತರಾದರು. ಈಗ ಇವರ ರಾಮಾಯಣಾಧಾರಿತ "ರಾಮವನಗಮನಂ" ಬಗ್ಗೆ ಗಮನಹರಿಸಬಹುದು.

### ರಾಮವನಗಮನಂ

ಮೂರು ದೃಶ್ಯಗಳಿಂದ ಕೂಡಿರುವ ಈ ನೃತ್ಯನಾಟಕ ಶ್ರೀರಾಮವನಗಮನದ ದೃಶ್ಯಗಳಿಂದ ಕೂಡಿದ್ದು ಭೋಜನ ಚಂಪೂರಾಮಾಯಣ ಹಾಗೂ ವಾಲ್ಮೀಕಿ ರಾಮಾಯಣವನ್ನು ಆಧಾರವಾಗಿಟ್ಟುಕೊಂಡು ಉಪಜಾತಿ, ಅನುಷ್ಠುಪ್, ಮಂದಾಕ್ರಾಂತಾ, ಹರಿಣೀ, ವಿಯೋಗಿನೀ, ವಂಶಸ್ಥ, ಮಾಲಿನೀ, ಆರ್ಯಾ, ವಿದ್ಯುನ್ಮಾಲಾ, ಶಾರ್ದೂಲ ವಿಕ್ರೀಡಿತ, ಇಂದ್ರವಜ್ರಾ, ಶಿಖರೀಣೀ, ವಸಂತತಿಲಕ ಮುಂತಾದ ವೃತ್ತಗಳಿಂದ ಕೂಡಿದ್ದು ಹಿಂದೂಸ್ತಾನೀ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತ ರಾಗಗಳಾದ ಯಮನ್, ಹಮೀರ, ಸಾರಂಗ, ಕಾಪೀ, ಪೀಲು, ಕೇದಾರ, ಕಲಾವತೀ, ಕಾನಡಾ, ಬಾಗೇಶ್ರೀ, ತೋಡೀ, ಭೈರವೀ, ಮುಂತಾದವುಗಳು ಅತ್ಯಂತ ಪಾಂಡಿತ್ಯಪೂರ್ಣವಾಗಿ ಸಂಯೋಜಿಸಲ್ಪಟ್ಟಿದೆ. ಕೈಕೇಯಿ, ಸುಮಿತ್ರೆ, ಮಂಥರೆ, ಕೌಸಲ್ಯೆ, ಸೀತೆ ಎಂಬ ಐದು ಸ್ತ್ರೀ ಪಾತ್ರಗಳೂ, ದಶರಥ, ರಾಮ, ಲಕ್ಷ್ಮಣ ಹಾಗೂ

ವಸಿಷ್ಠ ಎಂಬ ನಾಲ್ಕು ಪುರುಷ ಪಾತ್ರಗಳೂ ಕೂಡಿದ್ದು ಒಟ್ಟು ಒಂಭತ್ತು ಪಾತ್ರಗಳು ಈ ನೃತ್ಯ ನಾಟಿಕೆಯಲ್ಲಿದೆ.

### III ಎಸ್.ಬಿ. ವೇಲಂಕರ್

ಎಸ್.ಬಿ. ವೇಂಲಕರ್‌ರವರು 22–04–1915ರಂದು ಜನಿಸಿ, ವಿಲ್ಸನ್ ಕಾಲೇಜು ಮುಂಬೈನಲ್ಲಿ ವಿದ್ಯಾಭ್ಯಾಸ ಮಾಡಿ, ದೆಹಲಿಯಲ್ಲಿ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ವಿಪುಲವಾದ ಸಾಹಿತ್ಯ ರಚನೆ ಮಾಡಿದ್ದಾರೆ. ಇವರ ಕೊಡುಗೆಯನ್ನು ಕಾವ್ಯಗಳು, ನಾಟಕಗಳು, ಕಥಾ ಸಾಹಿತ್ಯ, ಚರ್ಚಾಸಾಹಿತ್ಯ, ಸುಭಾಷಿತ, ಸಂಗೀತ ಗ್ರಂಥಗಳು ಸಂಪಾದಿತ ಕೃತಿಗಳು ಎಂದು ವಿಂಗಡಿಸಬಹುದು.

ಇವರ ರಾಮಾಯಣ ಆಧಾರಿತ ನಾಟಕ **ಜನ್ಮ ರಾಮಾಯಣಸ್ಯ**

ವಾಲ್ಮೀಕ ಮಹರ್ಷಿಗಳು ತಮಸಾನದಿಯ ದಡದಲ್ಲಿ ನಡೆದು ಹೋಗುತ್ತಿದ್ದಾಗ ಒಬ್ಬ ಬೇಡರವನು ನಿಷ್ಕಾರಣವಾಗಿ ಗಂಡು ಕ್ರೌಂಚಪಕ್ಷಿಯನ್ನು ಹೊಡೆದಾಗ, ಹೆಣ್ಣು ಕ್ರೌಂಚಪಕ್ಷಿಯ ಕರುಣಾಜನಕವಾದ ವ್ಯಥೆಯಿಂದ ಮರುಕಗೊಂಡ ಮುನಿಗಳ ಬಾಯಿಂದ ಹೊರಬಂದ ಮಾನಿಷಾದ ಪ್ರತಿಷ್ಠಾ ತ್ವಮಗಮ: ಶಾಶ್ವತೀ ಸಮಾ: ಎಂಬ ಶಾಪದ ಪರಿಣಾಮವಾಗಿ ಚತುರ್ಮುಖಬ್ರಹ್ಮ ವಾಲ್ಮೀಕಿಯ ಮುಂದೆ ಪ್ರತ್ಯಕ್ಷವಾಗಿ

**ಪಾದಬದ್ಧಃ ಅಕ್ಷರಸಮಃ ತಂತ್ರೀಲಯ ಸಮನ್ವಿತಃ ॥**
**ಮಚ್ಛಂದಾದೇವ ತೇ ಬ್ರಹ್ಮನ್ ಆಗತೇಯಂ ಸರಸ್ವತೀ ॥**

ಎಂದು ಹೇಳಿ ವಾಲ್ಮೀಕೆ ರಾಮಾಯಣಕ್ಕೆ ನಾಂದಿಯಾದ ವಿಷಯವನ್ನೇ ಇಲ್ಲಿ ಆದರಿಸಿ ಆಳವಡಿಸಲಾಗಿದೆ.

ವೇಲಂಕರ್‌ರವರು ಪ್ರಸ್ತಾವನೆಯಲ್ಲಿ ಹೇಳಿರುವಂತೆ ಭೋಪಾಲದಲ್ಲಿದ್ದ ಶ್ರೀಮತಿ. ಭಾಸ್ಕರ್‌ರವರ ಅಭಿರುಚಿಯಂತೆ ಎರಡು ದಿನಗಳಲ್ಲಿ ಕ್ರೌಂಚವಧೆಯನ್ನಾಧರಿಸಿ ಬರೆದಂತಹ ನಾಟಕವಿದು.

### IV ಕೆ. ಟಿ. ಪಾಂಡುರಂಗಿ

ಕೆ.ಟಿ. ಪಾಂಡುರಂಗಿಯವರು 1–2–1918ರಂದು ಧಾರವಾಡದಲ್ಲಿ ಜನಿಸಿ ಶಂಕರಾಚಾರ್ಯ ಪಾಠಶಾಲಾ ಧಾರವಾಡ, ಶ್ರೀಮನ್ಮಹಾರಾಜಾ ಸಂಸ್ಕೃತ ಕಾಲೇಜು ಮೈಸೂರು, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಕಾಶಿ, ಅಣ್ಣಮಲೈ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರು ವಿಶ್ವವಿದ್ಯಾಲಯಲ್ಲಿ ಸಂಸ್ಕೃತ ವಿಭಾಗದ ಸ್ನಾತಕೋತ್ತರ ಪದವಿಯಲ್ಲಿ ಬೋಧನೆ ಮಾಡಿದ್ದಾರೆ. ಇವರ ರಾಮಾಯಣ ಆಧಾರಿತ ಸಂಸ್ಕೃತ ನಾಟಕ ಸೀತಾತ್ಯಾಗ.

ಸೀತಾಪರಿತ್ಯಾಗವು ರಾಮಾಯಣದ ಉತ್ತರಕಾಂಡ, ಕಾಳಿದಾಸನ ರಘುವಂಶ ಹಾಗೂ ಭವಭೂತಿಯ ಉತ್ತರರಾಮ ಚರಿತದಲ್ಲಿ ಬಂದರೂ ಸಹ ಇಲ್ಲಿ ಮೂರು ದೃಶ್ಯಗಳಲ್ಲಿ ಧ್ವನಿ ತರಂಗಗಳ ಮುಖಾಂತರ ಪ್ರಸ್ತುತಪಡಿಸಿರುವುದು ಅತೀವ ಆಕರ್ಷಕವಾಗಿದೆ.

### V ಶ್ರೀಧರ ಭಾಸ್ಕರ ವರ್ಣೇಕರ್

ವರ್ಣೇಕರ್‌ರವರು 31–07–1918ರಲ್ಲಿ ಜನಿಸಿ ಸಂಸ್ಕೃತ, ಮರಾಠೀ, ಹಿಂದಿ, ಆಂಗ್ಲ, ಪಾಳೀ, ಫ್ರೆಂಚ್ ಭಾಷೆಗಳಲ್ಲಿ ನಿಷ್ಣಾತರಾಗಿದ್ದು ನಾಗ್ಪುರ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು, ರಸ್ತೆಯ ಅಪಘಾತದಲ್ಲಿ ದುರ್ಮರಣ ಹೊಂದಿದ್ದು, ನಿಜಕ್ಕೂ ಶೋಚನೀಯವೇ ಸರಿ. ಇವರ ರಾಮಾಯಣ ಆಧಾರಿತ ಗೀತ ನಾಟಕ ಶ್ರೀರಾಮ ಸಂಗೀತಿಕಾ.

ಗೀತಮಯ ನೃತ್ಯನಾಟಕವಾದ ಈ ಕೃತಿ ಲೇಖಕರಾದ ನಾಟಕಕಾರರಿಂದಲೇ ರಾಗ ಸಂಯೋಜನೆ ಮಾಡಲ್ಪಟ್ಟು ಜಯಪುರದಿಂದ ಪ್ರಕಾಶಿತವಾಗಿದ್ದು, ಮಧ್ಯಪ್ರದೇಶ ಸಂಸ್ಕೃತ ಆಕಾಡೆಮಿಯಿಂದ 1983ರಲ್ಲಿ ಕಾಳಿದಾಸ ಸನ್ಮಾನದಿಂದ ಅನುಗ್ರಹೀತವಾಗಿದೆ.

ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದ ಸಂಸ್ಥಾಪಕರಾದ ಶ್ರೀ.ಏಕನಾಥಜೀ ರಾನಡೆಯವರಿಂದ ಪ್ರೇರಣೆಯನ್ನು ಹೊಂದಿ ಈ ಕೃತಿ

ರಚನೆ ಮಾಡಿದ್ದಾರೆ. ಈ ಕೃತಿ ಕವಧವೀಥೀ, ಸೀತಾಸ್ವಯಂವರ ವೀಥೀ, ಸೀತಾಪಹರಣಂ, ಸೀತಾನ್ವೇಷಣವೀಥೀ, ಲಂಕಾದಹನವೀಥೀ, ಸೇತುಬಂದನವೀಥೀ, ರಾವಣವಧವೀಥೀ, ಸೀತಾಶೋಧನವೀಥೀ, ಸೀತಾನಿರ್ವಾಸನವೀಥೀ ಎಂಬ ಹನ್ನೆಡರು ವಿಭಾಗಗಲ್ಲಿ ವಿಭಕ್ತವಾಗಿದೆ.

## VI ಓಗೇಟಿ ಪರೀಕ್ಷಿತ್ ಶರ್ಮಾ

20–18–1930ರಲ್ಲಿ ಗುಂಟೂರು ಜಿಲ್ಲೆಯ ಬಾಪಟ್ಲಾ ತಾಲ್ಲೂಕಿನ ಓಗೇಟಿ ಗ್ರಾಮದಲ್ಲಿ ಜನಿಸಿದ ಪರೀಕ್ಷಿತ್ ಶರ್ಮಾರವರು ಕವಿಸಮ್ರಾಟ್ ಜ್ಞಾನಪೀಠ ಪುರಸ್ಕೃತ ವಿಶ್ವನಾಥ ಸತ್ಯನಾರಾಯಣ ಅವರ ಶಿಷ್ಯರಾಗಿ ಸಂಸ್ಕೃತ ಹಾಗೂ ಆಂಗ್ಲ ಭಾಷೆಯಲ್ಲಿ ಎಂ.ಎ. ಪದವಿಯನ್ನು, ಮುಂಬೈ ವಿಶ್ವವಿದ್ಯಾಲಯದಿಂದ ಪಡೆದು, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ತಿರುಪತಿಯಿಂದ ವಾಷಸ್ಪತಿಪುರಸ್ಕೃತರಾಗಿ, "ಗೀರ್ಣಾಣಗೇಯ ಕವಿ ಮಂಡಲ ಚಕ್ರವರ್ತಿ" ಎಂಬ ಬಿರುದಾಂಕಿತರಾಗಿ ಮಹಾಕಾವ್ಯ, ಜಾನಪದ ಸಾಹಿತ್ಯ, ನೀತಿ ಕಾವ್ಯ, ಆತ್ಮ ಕಥೆ, ನಾಟಕ ಸಾಹಿತ್ಯ ಇತ್ಯಾದಿ ಪ್ರಕಾರಗಳಿಗೆ ಕೊಡುಗೆ ನೀಡಿ ಅಖಿಲಭಾರತೀಯ ಕಾಳಿದಾಸ ಪುರಸ್ಕಾರ (1979), ಸಾಹಿತ್ಯ ಆಕಾಡೆಮಿ ಪುರಸ್ಕಾರ (1990) ಹಾಗೂ ಶ್ರೀ ಕಲಾಪೂರ್ಣ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಇವರ ರಾಮಾಯಣ ಆಧಾರಿತ ನಾಟಕಗಳು ಶ್ರಾವಣಂ, ಧನುರ್ಭಂಗಂ, ಕಾವ್ಯಾವತರಣಂ.

### ಶ್ರಾವಣಂ

ರಾಮಾಯಣದಲ್ಲಿ ಬರುವ ಶ್ರವಣಕುಮಾರ ಪ್ರಸಂಗವು ಕಾಳಿದಾಸನ ರಘುವಂಶ ಹಾಗೂ ಕುಮಾರದಾಸನ ಜಾನಕೀಹರಣ ಮಹಾಕಾವ್ಯಗಳಲ್ಲೂ ಬಂದಿರುವಂತಯೇ ಇಲ್ಲೂ ಸಹ ಕೆಲವು ಮಾರ್ಪಾಡುಗಳೊಂದಿಗೆ ತರಲಾಗಿದೆ.

### ಧನುರ್ಭಂಗಂ

ರಾಮ ಶಿವಧನುಸ್ಸನ್ನು ಮುರಿಯುವ ಸೀತಾಸ್ವಯಂವರ ಪ್ರಸಂಗವನ್ನು ಮೂರು ದೃಶ್ಯಗಳಲ್ಲಿ ಈ ನಾಟಕ ವರ್ಣಿಸುತ್ತದೆ.

### ಕಾವ್ಯಾವತರಣಂ

ರಾಮಾಯಣದ ಹುಟ್ಟನ್ನು ವರ್ಣಿಸುವ ಒಂಭತ್ತು ದೃಶ್ಯಗಳಿಂದ ಕೂಡಿರುವ ಈ ನಾಟಕ ಕ್ರೌಂಚವಧ ಪ್ರಸಂಗಕ್ಕಿಂತಲೂ ಹೆಚ್ಚಾಗಿ ರತ್ನಾಕರ ಬೇಡನಾಗಿದ್ದವನು ನಾರದರ ಅನುಗ್ರಹದಿಂದ ವಾಲ್ಮೀಕಿಯಾದುದು ಒತ್ತಿ ಹೇಳಲಾಗಿದೆ.

## VII ಕಾಲೂರಿ ಹನುಮಂತರಾವ್

ಕಾಲೂರಿ ಹನುಮಂತರಾಯರು 20–09–1931ರಲ್ಲಿ ಜನಿಸಿ ಸಂಸ್ಕೃತ ಹಾಗೂ ತೆಲಗು ಭಾಷೆಗಳಲ್ಲಿ ಕೃತಿ ರಚನೆ ಮಾಡಿ ಕಾಲೇಜ್ ಆಫ್ ಟೆಕ್ನಾಲಜೀ, ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಉತ್ತರಪ್ರದೇಶ ಸರ್ಕಾರದಿಂದ ಪ್ರಶಸ್ತಿ ಭಾಜನರಾಗಿದ್ದಾರೆ.

### ಸೀತಾಹರಣಂ

ಶ್ರೀಮದ್ರಾಮಾಯಣದ ಆಧಾರದ ಮೇಲೆ ಬರೆಯಲ್ಪಟ್ಟಿರುವ ಐದು ಅಂಕಗಳಿಂದ ಕೂಡಿರುವ ಈ ನಾಟಕ 1987ರಲ್ಲಿ ಹೈದರಾಬಾದಿನಿಂದ ಪ್ರಕಟವಾಯಿತು. ಬಾಲಕಾಂಡ, ಅಯೋಧ್ಯಾಕಾಂಡದ ಕಥೆ ಇಲ್ಲಿ ಸಂಪೂರ್ಣವಾಗಿ ಅಳವಡಿಸಲಾಗಿದೆ.

## VIII ವಿ. ಆಂಜನೇಯ ಶರ್ಮಾ

19–02–1937ರಂದು ಜನಿಸಿದ ಆಂಜನೇಯ ಶರ್ಮಾರವರು ತಿರುಪತಿಯ ಶ್ರೀ ವೆಂಕಟೇಶ್ವರ ವಿದ್ಯಾವಿದ್ಯಾಲಯದಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿದ್ದಾರೆ. ಇವರ ರಾಮಾಯಣ ಆಧಾರಿತ ನಾಟಕ ಶಬರೀಸಪರ್ಯಾ.

### ಶಬರೀಸಪರ್ಯಾ

ರಾಮಾಯಣದ ಅರಣ್ಯಕಾಂಡದಲ್ಲಿ ಬರುವ ಶಬರೀ ಪಾತ್ರವನ್ನು ಆಧಾರವಾಗಿಟ್ಟುಕೊಂಡು ರಚಿಸಿರುವ ಭಕ್ತಿ ಪ್ರಧಾನವಾದ ಏಕಾಂಕ ನಾಟಕವಿದು. ಈ ನಾಟಕದಲ್ಲಿ ಶ್ರೀರಾಮನು ಲಕ್ಷ್ಮಣ ಹಾಗೂ ಶಬರಿಯ ಭಕ್ತಿಕೈಂಕರ್ಯಕ್ಕೆ ಮೆಚ್ಚಿ ಅವರಿಬ್ಬರಿಗೂ ತನ್ನ ವಿಶ್ವರೂಪವನ್ನು ತೋರುವುದೇ ಗಮನಾರ್ಹ ಅಂಶವಾಗಿದೆ. ವನದೇವತೆಗಳನ್ನು ಪಾತ್ರವಾಗಿಟ್ಟುಕೊಂಡು ಸಂಭಾಷಣೆಗೆ ಯೋಗ್ಯರನ್ನಾಗಿ ಮಾಡಿಕೊಂಡಿರುವುದು ಮತ್ತೊಂದು ಹೊಸ ಅಂಶ. ಶಬರಿ ರಾಮನನ್ನು ಸ್ತುತಿಸುವ ಶ್ಲೋಕಗಳಲ್ಲಿ ಭಕ್ತಿಯ ಹೊನಲೇ ಹರಿದಿದೆ.

### IX ರಾಮಕಿಶೋರಮಿಶ್ರಾ

ಉತ್ತರ ಪ್ರದೇಶದ ಸೋರೋ ಗ್ರಾಮದಲ್ಲಿ 1938ರಲ್ಲಿ ಜನಿಸಿದ ರಾಮಕಿಶೋರ ಮಿಶ್ರಾರವರು ಸಂಪೂರ್ಣನಂದ ಸಂಸ್ಕೃತ ವಿಶ್ವವಿದ್ಯಾಲಯ ಕಾಶಿಯಿಂದ ವ್ಯಾಕರಣ ಹಾಗೂ ಸಾಹಿತ್ಯ ಶಾಸ್ತ್ರಗಳಲ್ಲಿ ಆಚಾರ್ಯ ಪದವಿ ಪಡೆದು ಎಂ.ಎ. ಆಗ್ರಾವಿಶ್ವವಿದ್ಯಾಲಯದಿಂದಲೂ, ಪಿಹೆಚ್.ಡಿ ಮೀರತ್ ವಿಶ್ವವಿದ್ಯಾಲಯದಿಂದಲೂ ಪಡೆದು ಉತ್ತರ ಪ್ರದೇಶ ಶಾಸನದಿಂದ ಮೂರು ಬಾರಿ ಪುರಸ್ಕೃತರಾಗಿ ಮಾಲವೀಯಾ ಮಹಾವಿದ್ಯಾಲಯ ಖೇಕಡಾ, ಮೀರತ್‌ನಲ್ಲಿ ಸಂಸ್ಕೃತ ವಿಭಾಗಾಧ್ಯಕ್ಷರಾಗಿ ಸೇವೆಗೈದು ನಿವೃತ್ತರಾಗಿದ್ದಾರೆ. ಇವರ ರಾಮಾಯಣ ಆಧಾರಿತ ನಾಟಕ ಅಭಿಶಪ್ತದಶರಥಂ.

### ಅಭಿಶಪ್ತದಶರಥಂ

ನಾಟ್ಯಶೃತಿ ನಾಟಕ ಸಂಕಲನದಲ್ಲಿ ಬರುವ ಹದಿಮೂರು ಏಕಾಂಕ ನಾಟಕಗಳಲ್ಲಿ ರಾಮಾಯಣ ಕಥಾಧಾರಿತವಾದ ಮುನಿಯಿಂದ ಶಪ್ತನಾದ ದಶರಥನ ವೃತ್ತಾಂತವನ್ನಾಧರಿಸಿ ಬರೆದಿರುವ ನಾಟಕವೇ ಅಧಿಶಪ್ತದಶರಥಂ, ಏಕಾಂಕ ಹಾಗೂ ಮೂರು ದೃಶ್ಯಗಳಿರುವ ಈ ನಾಟಕದಲ್ಲಿ ಸೂತ್ರಧಾರ, ಸಹಾಯಕ, ದಶರಥ, ಸಾರಥೀ, ಶ್ರವಣ, ಪಿತಾ, ಮಾತಾ ಎಂಬ ಪಾತ್ರಗಳಿಂದ ಕೂಡಿದೆ. ನಾಟಕದ ಭಾಷೆ, ಸಂಭಾಷಣೆ, ಪದ್ಯಗಳು ಸರಳ ಹಾಗೂ ಸ್ಪಷ್ಟವಾಗಿದ್ದು ಶಾಲಾ ಮಕ್ಕಳಿಂದ ಈ ನಾಟಕವನ್ನು ಶಾಲಾ ವಾರ್ಷಿಕೋತ್ಸವಾದಿ ಸಂದರ್ಭಗಳಲ್ಲಿ ಆಡಿಸಲು ಯೋಗ್ಯವಾಗಿದೆ.

### X ರಮಾಕಾಂತ ಶುಕ್ಲ

24-12-1940ರಲ್ಲಿ ಉತ್ತರ ಪ್ರದೇಶವಾದ ಖುರ್ಜಾದಲ್ಲಿ ಜನಿಸಿದ ರಮಾಕಾಂತಶುಕ್ಲಾ ತಂದೆಯವರಾದ ಬ್ರಹ್ಮಾನಂದ ಶುಕ್ಲಾರವರಿಂದ ಸಂಸ್ಕೃತ ಪಾರಂಪರಿಕವಾಗಿ ಅಭ್ಯಾಸ ಮಾಡಿ ಸಾಹಿತ್ಯ, ಸಾಂಖ್ಯಯೋಗದಲ್ಲಿ ಆಚಾರ್ಯ ಪದವಿ ಪಡೆದು ಜೈನಾಚಾರ್ಯ ರವಿಷೇಣ ಕೃತ ಪದ್ಮ ಪುರಾಣ ಹಾಗೂ ತುಲಸೀ ದಾಸಕೃತ ರಾಮಚರಿತ ಮಾನಸದ ತುಲನಾತ್ಮಕ ವಿಷಯದ ಬಗ್ಗೆ ಸಂಶೋಧನೆ ಮಾಡಿ ಪಿಹೆಚ್.ಡಿ ಪಡೆದು ದಿಲ್ಲಿಯ ರಾಜಧಾನಿ ಕಾಲೇಜಿನಲ್ಲಿ ಹಿಂದೀ ಪ್ರಧ್ಯಾಪಕರಾಗಿದ್ದು ನಿವೃತ್ತರಾಗಿ ಆಧುನಿಕ ಸಂಸ್ಕೃತ ಸಾಹಿತ್ಯವನ್ನು ಜನಪ್ರಿಯಗೊಳಿಸಲು "ಅರ್ವಾಚೀನ ಸಂಸ್ಕೃತಂ" ಎಂಬ ತ್ರೈಮಾಸಿಕ ಸಂಸ್ಕೃತ ಪತ್ರಿಕೆಯನ್ನು ಪ್ರಾರಂಭಿಸಿ ಕಳೆದ 25 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಇವರ ರಾಮಾಯಣ ಆಧಾರಿತ ರೇಡಿಯೋ ರೂಪಕ **"ಆಲೋಕಿನಿ"**.

### ಆಲೋಕಿನಿ

ಈ ಏಕಾಂತ ರೇಡಿಯೋ ರೂಪಕದಲ್ಲಿ 14 ಪುರುಷ ಪಾತ್ರಗಳು, 5 ಸ್ತ್ರೀ ಪಾತ್ರಗಳೂ ಇದೆ.

ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನ ರಾಜಧಾನಿಯಾದ ಅಯೋಧ್ಯಾನಗರಿಯ ವರ್ಣನೆ ಈ ನಾಟಕದ ನಾಂದಿಯಲ್ಲಿದೆ.

ನಾಟಕದ ಶೀರ್ಷಿಕೆ ಭರತವಾಕ್ಯದಲ್ಲಿ ತರಲಾಗಿದೆ. "ರಾಜತಾಂ ದೀಪ ಮಾಲೇಯಮಾಲೋಕಿನೀಂ". ಈ ನಾಟಕವನ್ನು ರಂಗದ ಮೇಲೆ ಸುಲಭವಾಗಿ ತರಬಹುದು. ನಾಟಕಕಾರರಿಗೆ ಸ್ರಗ್ವಿಣೀ ವೃತ್ತದ ಮೇಲಿರುವ ಹಿಡಿತ ಅದ್ಭುತವಾಗಿದೆ.

## XI ಗುರುಪಾದ ಕೆ. ಹೆಗಡೆ

28–05–1941ರಂದು ಸಿರ್ಸಿ ತಾಲ್ಲೂಕಿನ ಉಂಬಲ ಕೊಪ್ಪದಲ್ಲಿ ಜನಿಸಿದ ಗುರುಪಾದ ಹೆಗಡೆಯವರು ಲಾಲ್‌ಬಹದ್ದೂರ್ ಶಾಸ್ತ್ರೀ ಕಾಲೇಜು ಸಾಗರದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿದ್ದಾರೆ. ಇವರು ರಾಮಾಯಣವನ್ನಾಧರಿಸಿ "ತೇಜಸ್ಸಂಕ್ರಾಮ": ಎಂಬ ನಾಟಕವನ್ನು ರಚಿಸಿದ್ದಾರೆ.

### ತೇಜಸ್ಸಂಕ್ರಾಮ

ಶ್ರೀರಾಮ ಹಾಗೂ ಪರುಶುರಾಮರು ಒಬ್ಬರನ್ನೊಬ್ಬರು ಸಂಧಿಸುವ ವಿಷಯವನ್ನೊಳಗೊಂಡ ಏಕಾಂಕ ನಾಟಕವಾದ ಈ ಕೃತಿ 1999ರಲ್ಲಿ ಮಲ್ನಾಡ್ ರಿಸರ್ಚ್ ಅಕಾಡೆಮಿ, ಶಿವಮೊಗ್ಗದಿಂದ ಪ್ರಕಟವಾಯಿತು. ರಾಮಾಯಣವನ್ನೇ ಆಧರಿಸಿ ಬರೆದಿದ್ದರೂ ಕವಿ ಮಾಡಿಕೊಂಡಿರುವ ಕೆಲವು ಬದಲಾಣೆಗಳು ಮನೋಜ್ಞವಾಗಿದೆ. ರಾಮಾಯಣದಲ್ಲಿ ಪರಶುರಾಮ ಶ್ರೀರಾಮನ ವಿವಾಹದ ನಂತರ ಅಯೋಧ್ಯೆಗೆ ಮರಳಿದರೆ ಇಲ್ಲಿ ರಸಿಕರ ಮನ ತಣಿಸಲು ಪರಶುರಾಮನೆ ಜನಕನ ಆಸ್ಥಾನಕ್ಕೆ ಬರುತ್ತಾನೆ. ದಶರಥ ಹಾಗೂ ಜನಕರೆಂಬ ಬೀಗರು ಒಬ್ಬರನ್ನೋಬ್ಬರು ಮಾತನಾಡಿಸುವ ಸನ್ನಿವೇಶ ಆಧುನಿಕ ಕಾಲದ ಮದುವೆಯ ಮಂಟಪವನ್ನು ಗಮನಕ್ಕೆ ತರುತ್ತದೆ. ವಿಶ್ವಾಮಿತ್ರನು ತನ್ನ ಆಶ್ರಮಕ್ಕೆ ಹಿಂದಿರುಗಲು ಬಯಸುತ್ತಾನೆ. ಆ ಹೊತ್ತಿಗೆ ಪರಶುರಾಮನ ವಾಣಿ ಕೇಳಿಬರುತ್ತದೆ. ಪರಶುರಾಮನ ಕ್ರೌರ್ಯವನ್ನು ಮನಗಂಡ ದಶರಥ ವಿಶ್ವಾಮಿತ್ರನನ್ನು ಹೋಗದಂತೆ ತಡೆಯುತ್ತಾನೆ. ರಾಮ ಸಪತ್ನೀಕನಾಗಿ ಲಕ್ಷ್ಮಣನೊಡನೆ ಹಿರಿಯರಿಗೆ ನಮಸ್ಕರಿಸಲು ಅಲ್ಲಿಗೆ ಬರುತ್ತಾನೆ. ಅಲ್ಲಿ ರಾಮ, ಪರಶುರಾಮರ ಪರಸ್ಪರ ಮಿಲನವಾಗುತ್ತದೆ. 1972ರಲ್ಲಿ ಈ ನಾಟಕ ಅಭಿನೀತವಾಗಿದ್ದು, 1973ರಲ್ಲಿ ಬೆಂಗಳೂರು ಆಕಾಶವಾಣಿಯಲ್ಲೂ ಈ ನಾಟಕ ಪ್ರಸಾರವಾಗಿದೆ.

## XII ಭಾಸ್ಕರಾಚಾರ್ಯ ತ್ರಿಪಾಟಿ

23–09–1942ರಂದು ಚಿತ್ರಕೂಟದಲ್ಲಿ ಜನಿಸಿದ ಇವರು ಅಲಹಾಬಾದ್ ವಿಶ್ವವಿದ್ಯಾಲಯದಿಂದ ಎಂ.ಎ. ಡೀ.ಲಿಟ್ ಪಡೆದು ಮಧ್ಯಪ್ರದೇಶದ ವಿಭಿನ್ನ ಕಾಲೇಜುಗಳಲ್ಲಿ ಸೇವೆ ಮಾಡಿ ಆಶುಕವಿಗಳಾಗಿದ್ದು ಇತ್ತೀಚೆಗಷ್ಟೇ ದೈವಾಧೀನರಾದರು. ಇವರ ರಾಮಾಯಣ ಆಧಾರಿತ ನಾಟಕ "ಸ್ನೇಹ ಸೌವೀರಂ".

### ಸ್ನೇಹ ಸೌವೀರಂ

ನಿಲಿಂಪ ಕಾವ್ಯದ ತೃತೀಯ ಸ್ಪಂದವಾಗಿ ಐದು ಅಂಕಗಳಿಂದ ಕೂಡಿರುವ ಈ ನಾಟಕ 1997ರಲ್ಲಿ ದಿಲ್ಲಿಯಿಂದ ಪ್ರಕಟವಾಯಿತು.

ಶಬರಿಯನ್ನು ನಾಯಿಕೆಯನ್ನಾಗುಳ್ಳ ಐದು ಅಂಕಗಳಿಂದ ಕೂಡಿರುವ ಈ ನಾಟಕ ಪ್ರಧಾನವಾಗಿ ಶಬರಿಯ ಪರೋಪಕಾರ ನಿರತತೆ ಇತ್ಯಾದಿ ಗುಣವನ್ನು ರಾಮಾಯಣಾಧಾರ ಹಾಗೂ ಸ್ವತಃ ಪರಿಕಲ್ಪನೆಯಿಂದಲೂ ಸೇರಿಸಿ ಹೆಣೆಯಲ್ಪಟ್ಟಿದೆ. ವೇದಿಕಾವಿರಹ, ದೀಕ್ಷಾಮಂಗಲ, ಸಾಕೇತಸಂದೇಶ, ಸೌರವೀಸಾರ ಹಾಗೂ ದಯಿತ ದರ್ಶನ ಎಂಬುದೇ ಐದು ಅಂಕಗಳಿಗೆ ಕೊಟ್ಟಿರುವ ಹೆಸರುಗಳು. 15 ಪಾತ್ರಗಳಿಂದ ಕೂಡಿರುವ ಈ ನಾಟಕದಲ್ಲಿ ಶಬರಿಯೇ ಪ್ರಧಾನ ಪಾತ್ರ. 12 ಪುರುಷ ಪಾತ್ರಗಳು, 3 ಸ್ತ್ರೀ ಪಾತ್ರಗಳು ಈ ನಾಟಕದಲ್ಲಿದೆ. ನಾಟಕದ ಐದನೇ ಅಂಕದಲ್ಲಿ ಅದ್ಭುತರಸದ ಅಡಕವಿದೆ. ಮುದ್ಗಲಚರಿತದಲ್ಲಿ ಹಾಸ್ಯರಸ, ಶಬರಿಯ ಸರ್ವಭೂತಾನುಕಂಪದಲ್ಲಿ ಧರ್ಮವೀರವಿದೆ. ಭಾಷೆ ಪ್ರಸಾದ ಗೂಣದಿಂದ ಕೂಡಿದೆ.

### ನಿಷ್ಕರ್ಷೆ

ರಾಮಾಯಣದ ಪ್ರಮುಖ ಪ್ರಸಂಗಗಳಾದ ಸೀತಾತ್ಯಾಗವಾಗಲೀ, ಶಬರಿಯ ಪ್ರಸಂಗವಾಗಲೀ, ಶ್ರವಣ ಕುಮಾರನ ಪ್ರಸಂಗವಾಗಲೀ ಎಷ್ಟು ಜನ ಆಧುನಿಕ ನಾಟಕಕಾರಿಗೆ ಎಷ್ಟು ರೀತಿ ಪ್ರೇರಣೆ ನೀಡಿ ಎಷ್ಟು ಸೊಗಸಾಗಿ ಮೂಡಿ ಬಂದಿದೆ ಎನ್ನುವುದು ಇಲ್ಲಿಯವರೆಗೆ ಪ್ರತಿಪಾದಿಸಿ ನಿರೂಪಿಸಿರುವ ನಾಟಕಗಳ ಸಾಮಾನ್ಯ ಅವಲೋಕನದಿಂದ ಮನಗಾಣಬಹುದಾಗಿದೆ.

ಈ ಸಮೀಕ್ಷೆಯಲ್ಲಿ ಆಯ್ದುಕೊಂಡ 12 ಲೇಖಕರು 1902 ರಿಂದ 1942ರ ವರೆಗೆ 40 ವರ್ಷಗಳಲ್ಲಿ ಜನಿಸಿದವರಾಗಿ ಸಮಗ್ರ ಭಾರತದ ವಿಭಿನ್ನ

ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಮಹಾರಾಷ್ಟ್ರ ಇತ್ಯಾದಿಗಳಿಂದ ಬಂದವರಾಗಿ ರಾಮಾಯಣದ ಆಧುನಿಕ ನಾಟಕಗಳು ಸಮಗ್ರ ಭಾರತದ ಏಕತೆ, ಅಖಂಡತೆಯನ್ನು ಪ್ರತಿಪಾದಿಸುತ್ತದೆಂದು ಸೂಚಿಸುತ್ತದೆ.

ಸಂಸ್ಕೃತ ನಾಟಕ ರೂಪದಲ್ಲಿ ಹೊಸ ಪ್ರಯೋಗಗಳು, ಹೊಸ ಆವಿಷ್ಕಾರಗಳು, ರಾಮಾಯಣದಿಂದ ಸ್ಫೂರ್ತಿ ಪಡೆದು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಹೋಗಲು ಸಂಸ್ಕೃತ ಸಜೀವ, ಸಶಕ್ತ, ಸಮರ್ಥ, ಸದೃಢ, ಜೀವಂತ ಎಂಬುದು ವಿನಮ್ರವಾಗಿ ಅರಿಕೆ ಮಾಡಲು ಈ ಲೇಖನ ಒಂದು ದಿಕ್ಸೂಚಿ ಮಾತ್ರ.

**ಇದಂ ಕವಿಭ್ಯ: ನವ್ಯೇಭ್ಯ: ನಮೋವಾಕಂಪ್ರಶಾಸ್ಮಹೇ ।**
**ವಂದೇ ಮಹಿಚತಾಂ ವಾಣೀಂ ಅಮೃತಾಮಾತ್ಮನ: ಕಲಾಂ ॥**

## ಗ್ರಂಥಋಣ

1. **ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠ ಶಾಲಪತ್ರಿಕಾ** – ಸಂಚಿಕೆ 1939 ಡಿಸೆಂಬರ್‌ನಿಂದ 1946ನೇ ಡಿಸೆಂಬರ್, ಮೈಸೂರು
2. **ವಕುಲಭೂಷಣ ರೂಪಕ ವಿತಾನಂ** – ಬಾಲಧನ್ವಿ ಜಗ್ಗೂ ಆಳ್ವಾರಯ್ಯಂಗಾರ್, ಆನಂದನಗರ, ಬೆಂಗಳೂರು – 24– 1993.
3. **ವಕುಳ ಪರಿಮಳಂ** – ಜಗ್ಗೂ ಪ್ರಕಾಶನ, ಆನಂದನಗರ, ಬೆಂಗಳೂರು – ಅಕ್ಟೋಬರ್ 2004.
4. **ಶ್ರೀ ಜಗ್ಗೂ ವಕುಲಭೂಷಣ ಕಾವ್ಯಮಾಲಾ** – ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠಂ – ತಿರುಪತಿ, 2007.
5. **ಜಗ್ಗೂವಕುಳಭೂಷಣ** – ಎಸ್. ಆರ್. ಲೀಲಾ, ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್, ಬೆಂಗಳೂರು, ಆಗಸ್ಟ್ 1991.
6. **ರಾಮವನಗಮನಂ** – ವನಮಾಲಾಭವಾಲ್ಕರ್ – ಸಂಸ್ಕೃತ ಪರಿಷತ್ ಸಾಗರ್ (ಮಧ್ಯಪ್ರದೇಶ) 1965.
7. **ಜನ್ಮರಾಮಾಯಣಸ್ಯ** – ಎಸ್.ಬಿ. ವೇಲಂಕರ್, ಮುಂಬೈ 1972.
8. **ಸೀತಾತ್ಯಾಗ** : – ನ್ಯೂ ಎಕ್ಸ್‌ಪರಿಮೆಂಟ್ಸ್ ಇನ್ ಕಾಳಿದಾಸ ಪ್ಲೇಸ್, ಸತ್ಯವ್ರತಶಾಸ್ತ್ರೀ, ಈಸ್ಟ್ರನ್ ಬುಕ್ ಲಿಂಕರ್ಸ್, ದಿಲ್ಲಿ, 1994
9. **ಶ್ರೀರಾಮಸಂಗೀತಿಕಾ** – ನಾಗ್ಪುರ, 1983
10. **ಶ್ರಾವಣಂ, ಧನುರ್ಭಂಗಂ, ಕಾವ್ಯಾವತರಣಂ, ಪರೀಕ್ಷೀನ್ನಾಟಕಚಕ್ರಂ,** ಪುಣೆ – 1983
11. **ಸೀತಾಹರಣಂ** – ಕಾಲೂರಿ ಹನುಮಂತರಾವ್, ಹೈದರಾಬಾದ್, 1983.
12. **ಶಬರೀಸಪರ್ಯಾ** – ವಿ. ಆಂಜನೇಯಶರ್ಮಾ, ತಿರುಪತಿ
13. **ಅಭಿಶಪ್ತದಶರಥಂ** – ರಾಮಕಿಶೋರಮಿಶ್ರಾ, ನಾಟ್ಯಶೃತಿ:, ಮೀರತ್ 2004.
14. **ನಾಟ್ಯಸಪ್ತಪದಂ** – ರಮಾಕಾಂತಶುಕ್ಲಾ, ದೇವವಾಣೀ ಪರಿಷತ್, ದಿಲ್ಲಿ, 1992.
15. **ತೇಜಸ್ಸಂಕ್ರಾಮಃ** – ಗುರುಪಾದ ಕೆ. ಹೆಗಡೆ, ಮಲ್ನಾಡ್ ರಿಸರ್ಚ್ ಆಕಾಡೆಮೆ, ಶಿವಮೊಗ್ಗ, 1999.
16. **ಸ್ನೇಹಸೌವೀರಂ** – ಭಾಸ್ಕರಾಚಾರ್ಯ ತ್ರಿಪಾಟಿ, ನಾಗ್ ಪ್ರಕಾಶನ, ದಿಲ್ಲಿ, 1997.

❑

# ಭವಭೂತಿಯ ಮೇಲೆ ವಾಲ್ಮೀಕಿಯ ಪ್ರಭಾವ

**ವಿದ್ವಾನ್ ಡಾ ॥ ಟಿ.ವಿ. ಸತ್ಯನಾರಾಯಣ**
ಎಂ.ಎ., ಪಿ.ಹೆಚ್.ಡಿ.

ಭವಭೂತಿಯು ಬರೆದಿರುವ ನಾಟಕಗಳಲ್ಲೆಲ್ಲಾ 'ಉತ್ತರರಾಮಚರಿತ'ವೇ ಸರ್ವೋತ್ಕೃಷ್ಟವಾದ ನಾಟಕ. 'ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ' (ಉತ್ತರರಾಮಚರಿತ ನಾಟಕದಲ್ಲಿ ಭವಭೂತಿಯು ವಿಶಿಷ್ಟ ಸಿದ್ಧಿಯನ್ನು ಪಡೆದಿದ್ದಾನೆ) ಎಂಬುದು ಭವಭೂತಿಗೆ ದೊರೆತಿರುವ ಪ್ರಶಂಸಾವಾಕ್ಯ.

ಮೂಲ ವಾಲ್ಮೀಕಿ ರಾಮಾಯಣದ ಪ್ರಶ್ನಾರ್ಹವಾದ ಎಷ್ಟೋ ಸನ್ನಿವೇಶಗಳನ್ನು ತೆಗೆದುಕೊಂಡು ಭವಭೂತಿಯು ಅನೇಕ ಬದಲಾವಣೆಗಳನ್ನು ಉತ್ತರರಾಮಚರಿತ ನಾಟಕದಲ್ಲಿ ಮಾಡಿಕೊಂಡಿದ್ದಾನೆ.

ಸಂಸ್ಕೃತ ಕಾವ್ಯ ಪ್ರಪಂಚದಲ್ಲಿ ಆದಿಕವಿ ವಾಲ್ಮೀಕಿ ಅವರಿಂದ ರಚಿತವಾದ ಶ್ರೀಮದ್ರಾಮಾಯಣವು ಆದಿ ಕಾವ್ಯವೆನಿಸಿದೆ. ವಾಲ್ಮೀಕಿಯಿಂದ ರಚಿತವಾದ ರಾಮಾಯಣವನ್ನು ಆಧರಿಸಿ, ಅದರ ಅನೇಕ ಕಥಾವಸ್ತುಗಳನ್ನು ತೆಗೆದುಕೊಂಡು, ಭಾಸ, ಕಾಳಿದಾಸ, ಭೋಜರಾಜ, ಶಕ್ತಿಭದ್ರ ಮೊದಲಾದ ಮಹಾಕವಿಗಳು, ನಾಟಕಕಾರರು, ಇತರ ಕಾವ್ಯರಚನಾಕಾರರು, ತಮ್ಮ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಮುಂದೆ ಮುಂದೆ ಕನ್ನಡ, ತೆಲುಗು, ತಮಿಳು, ಹಿಂದೀ ಮೊದಲಾದ ಆಯಾಯಾ ದೇಶಭಾಷಾ ಕವಿಗಳೂ ಸಹ ಶ್ರೀಮದ್ರಾಮಾಯಣದ ಕಥಾವಸ್ತುಗಳನ್ನು ಒಂದಲ್ಲ ಒಂದು ರೀತಿಯಿಂದ ತೆಗೆದುಕೊಂಡು ಕಾವ್ಯಕೃತಿಗಳನ್ನು ರಚಿಸಿದ್ದಾರೆ. ವಾಲ್ಮೀಕಿಯ ಕಾವ್ಯರಚನಾಪ್ರಕಾರ, ಶೈಲಿ, ವರ್ಣನಾವೈವಿಧ್ಯ, ಕಥಾಸಂವಿಧಾನ, ಗುಣ–ಅಲಂಕಾರ–ವಕ್ರೋಕ್ತಿ–ರೀತಿ–ಔಚಿತ್ಯಗಳ ಸಂಘಟನೆಯನ್ನು ಅನುಸರಿಸಿಯೇ ಮುಂದಿನವರೆಲ್ಲಾ ತಮ್ಮ ಕೃತಿಗಳಲ್ಲಿ ಸಾಹಿತ್ಯಿಕವಾದ ಗುಣ–ಧರ್ಮಗಳನ್ನು ಅವಲಂಬಿಸಿ, ಅನುಸರಿಸಿ ಕಾವ್ಯಗ್ರಂಥಗಳನ್ನು ರಚಿಸಿ ಕೃತಕೃತ್ಯರಾಗಿದ್ದಾರೆ. ಅಂತಹವರಲ್ಲಿ ಸಂಸ್ಕೃತ ನಾಟಕಕಾರನಾದ ಭವಭೂತಿಯೂ ಒಬ್ಬನು. ವಾಲ್ಮೀಕಿ ರಾಮಾಯಣದ ಸಮಗ್ರ ಅಂಶಗಳನ್ನೆಲ್ಲಾ ಓದಿ, ಅರ್ಥ ಮಾಡಿಕೊಂಡು, ಯಥಾಶಕ್ತಿ ತನ್ನ ಕೃತಿಗಳಲ್ಲಿ ರಾಮಾಯಣದ ಗುಣಧರ್ಮಗಳನ್ನು ಸಂಘಟಿಸಿ, ಸಂಸ್ಕೃತದಲ್ಲಿ ಒಬ್ಬ ಪ್ರಸಿದ್ಧ ನಾಟಕಕಾರನೆಂಬ ಹೆಸರನ್ನು ಪಡೆದಿದ್ದಾನೆ. ವಾಲ್ಮೀಕಿಯ ಪ್ರಭಾವವು ಭವಭೂತಿಯ ಮೇಲೆ ಸಾಕಷ್ಟು ಆಗಿರುವುದರ ಜೊತೆಗೆ, ಅವನ ಕೃತಿಗಳಲ್ಲೂ ರಾಮಾಯಣದ ಆದರ್ಶ ನೈತಿಕ ನುಡಿ–ನಡೆಗಳು, ಜೀವನಧರ್ಮಗಳು ಎಲ್ಲವೂ ಅತ್ಯಂತ ಪ್ರಭಾವವನ್ನು ಬೀರಿವೆ.

ಸಂಸ್ಕೃತವಾಙ್ಮಯದಲ್ಲಿ ಅಷ್ಟೇಕೆ ಇತರ ಭಾಷಾವಾಙ್ಮಯಗಳಲ್ಲೂ ವಾಲ್ಮೀಕಿಯ ಹೆಸರನ್ನು ಕೇಳದವರೇ ಇಲ್ಲ. ಆದಿಕವಿ ಎಂಬ ಬಿರುದಿನಿಂದ ಪ್ರಸಿದ್ಧರಾದ ವಾಲ್ಮೀಕಿಯಿಂದ ರಚಿತವಾದ ನವರಸಭರಿತವಾದ, ಮಾಧುರ್ಯ – ಓಜಸ್ಸು – ಪ್ರಸಾದಗುಣಗಳಿಂದ ಕೂಡಿದ ಶ್ರೀಮದ್ರಾಮಾಯಣವು ಆದಿಕಾವ್ಯವಷ್ಟೇ ಆಗಿರದೆ, ಜೀವನದ ಆದರ್ಶಮೌಲ್ಯಗಳನ್ನು ಮನಮುಟ್ಟುವಂತೆ ತಿಳಿಸಿಕೊಡುವ ಆದಿಕಾವ್ಯವಾಗಿದೆ. ಏಳುಕಾಂಡಗಳಿಂದ ಕೂಡಿ, 24,000 ಶ್ಲೋಕಗಳಿಂದ ರಚಿತವಾಗಿರುವ ಶ್ರೀಮದ್ರಾಮಾಯಣವು ಹಿಂದೆಯೂ ಅನೇಕ ಮಹಾಕವಿಗಳಿಗೆ ಕೃತಿರಚನೆಗೆ ಮೂಲವೂ ಪ್ರೇರಕವೂ ಹೇಗೆ ಆಗಿದೆಯೋ, ಹಾಗೆಯೇ ಈಗಲೂ ಆಗಿದೆ, ಮುಂದೆಯೂ ಆಗಲಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಂಸ್ಕೃತ ನಾಟಕಕಾರನಾದ ಭವಭೂತಿಯೂ ಸಹ ವಾಲ್ಮೀಕಿಯ ಬಗ್ಗೆ ಅವರ ರಾಮಾಯಣದ ಬಗ್ಗೆ ಗೌರವಪೂಜ್ಯಭಾವವನ್ನು ತಾಳುವುದರ ಜೊತೆಗೆ, ಅದರ ಕಥಾಂಶಗಳನ್ನೇ ತೆಗೆದುಕೊಂಡು ತನ್ನ ಎರಡೂ ನಾಟಕಗಳನ್ನು ಸಂಸ್ಕೃತದಲ್ಲಿ ರಚಿಸಿ ಅತ್ಯಂತ ಪ್ರಸಿದ್ಧನಾಗಿದ್ದಾನೆ. ರಾಮಾಯಣಕಾವ್ಯ ಕಲಾಕೌಶಲಪ್ರಭಾವವು ಭವಭೂತಿಯ ಮೇಲೆ ನೂರಕ್ಕೆ ನೂರರಷ್ಟು ಆಗಿದ್ದು, ಅದನ್ನು ಆಧರಿಸಿ ಕೃತಿಗಳನ್ನು ರಚಿಸಿರುವ ಭವಭೂತಿಯು ಕೃತಾರ್ಥನಾಗಿದ್ದಾನೆ, ಕೃತಕೃತ್ಯನಾಗಿದ್ದಾನೆ.

**ಭವಭೂತಿಯ ಕೃತಿ–ದೇಶ–ಕಾಲವಿಚಾರ :**

ಸಂಸ್ಕೃತದ ಪ್ರಸಿದ್ಧ ನಾಟಕಕಾರರಲ್ಲಿ ಕವಿ–ನಾಟಕಕಾರ ಭವಭೂತಿಯೂ ಒಬ್ಬನು. ಸಂಸ್ಕೃತದ ದಶರೂಪಕದಲ್ಲಿ ಪ್ರಸಿದ್ಧವಾದ ಹತ್ತು ರೂಪಕಪ್ರಭೇದಗಳಲ್ಲಿ 'ಮಹಾವೀರಚರಿತ', 'ಉತ್ತರರಾಮಚರಿತ' ಎಂಬ ಎರಡು ನಾಟಕಗಳನ್ನು, 'ಮಾಲತೀಮಾಧವ' ಎಂಬ ಕಲ್ಪಿತ ಪ್ರಕರಣವನ್ನು ಭವಭೂತಿಯು ರಚಿಸಿದ್ದಾನೆ. ಮಹಾವೀರಚರಿತ ನಾಟಕವು ಇವನ ಮೊದಲ ಕೃತಿ ಹಾಗೂ ಶ್ರೀರಾಮನ ಪಟ್ಟಾಭಿಷೇಕದವರೆಗಿನ ಕಥೆಯನ್ನೊಳಗೊಂಡಿದೆ. ಉತ್ತರರಾಮಚರಿತ ನಾಟಕವು, ಇದರ ನಂತರದ ಕಥೆಯನ್ನು ತಿಳಿಸುವುದರ ಜೊತೆಗೆ, ರಾಮ–ಸೀತೆಯರ ಪುನಸ್ಸಮಾಗಮ ಹಾಗೂ ಕುಶ–ಲವರೆಂಬ ಇಬ್ಬರು ಮಕ್ಕಳ ಸಂಪ್ರಾಪ್ತಿಯ ಜೊತೆಗೆ, ತಾಯಿಯರು, ಬಂಧುಬಾಂಧವರು, ಗುರುಗಳು, ಇಷ್ಟಮಿತ್ರರೆಲ್ಲರೂ ಒಟ್ಟಾಗಿ ಸುಖ–ಸಂತೋಷಗಳಲ್ಲಿ ಮುಳುಗಿ ಕೃತಾರ್ಥರಾದರೆಂಬ ಮಂಗಳಮಯ ವಿಷಯವನ್ನು ತಿಳಿಸುತ್ತದೆ. ಮಹಾವೀರಚರಿತದ ಮೊದಲನೆಯ ಅಂಕದ ಪ್ರಸ್ತಾವನೆಯಲ್ಲಿ ನಾಟಕಕಾರ ಭವಭೂತಿಯು ತನ್ನ ಕುಲ–ಗೋತ್ರ–ವಿದ್ಯೆ ಮೊದಲಾದ ವಿಷಯಗಳನ್ನು ತಿಳಿಸಿಕೊಂಡಿದ್ದಾನೆ. ಅದು ಹೀಗಿದೆ – ಸೂತ್ರಧಾರನು ಹೇಳುವ ಮಾತುಗಳಿಂದ ಕವಿಯು ತನ್ನ ಪರಿಚಯವನ್ನು ತಾನೇ ಮಾಡಿಕೊಂಡಿದ್ದಾನೆ.

**“ವಶ್ಯವಾಚಃ ಕವೇಃ ಕಾವ್ಯಂ ಸಾ ಚ ರಾಮಾಶ್ರಯಾ ಕಥಾ ।**
**ಲಬ್ಧಶ್ಚ ವಾಕ್ಯನಿಸ್ಯಂದನಿಷ್ಪೇಷನಿಕಷೋ ಜನಃ ॥”**

**ಸೋಽಹಮೇತದ್ವಿಜ್ಞಾಪಯಾಮಿ । ಅಸ್ತಿ ದಕ್ಷಿಣಾಪಥೇ ಪದ್ಮಪುರಂ ನಾಮ ನಗರಮ್ । ತತ್ರ ಕೇಚಿತ್ತೈತ್ತಿರೀಯಾಃ ಕಾಶ್ಯಪಾಶ್ಚರಣಗುರವಃ ಪಂಕ್ತಿಪಾವನಾಃ ಪಂಚಾಗ್ನಯೋ ಧೃತವ್ರತಾಃ ಸೋಮಪೀಥಿನಃ ಉಡ್ಡಂಬರಾಃ (ಉದುಂಬರಾಃ) ಬ್ರಹ್ಮವಾದಿನಃ ಪ್ರತಿವಸಂತಿ । ತದಾಮುಷ್ಯಾಯಣಸ್ಯ ತತ್ರಭವತೋ ವಾಜಪೇಯಯಾಜಿನೋ ಮಹಾಕವೇಃ ಪಂಚಮಃ ಸುಗೃಹೀತನಾಮ್ನಃ ಭಟ್ಟಗೋಪಾಲಸ್ಯ ಪೌತ್ರಃ ಪವಿತ್ರಕೀರ್ತೇಃ ನೀಲಕಂಠಸ್ಯ ಆತ್ಮಸಂಭವಃ ಶ್ರೀಕಂಠಪದಲಾಂಛನಃ ಭವಭೂತಿರ್ನಾಮ ಜತುಕರ್ಣೀಪುತ್ರಃ ಕವಿರ್ಮಿತ್ರಧೇಯಮಸ್ಮಾಕಮಿತ್ಯತ್ರಭವಂತೋ ವಿದಾಂಕುರ್ವಂತು ।**

**ಶ್ರೇಷ್ಠಃ ಪರಮಹಂಸಾನಾಂ ಮಹರ್ಷೀಣಾಮಿವಾಂಗಿರಾಃ ।**
**ಯಥಾರ್ಥನಾಮಾ ಭಗವಾನ್ ಯಸ್ಯ ಜ್ಞಾನನಿಧಿರ್ಗುರುಃ ॥**

ಎಂಬುದು ಪ್ರಸ್ತಾವನೆಯಲ್ಲಿ ಬರುವ ಮಾತುಗಳು. ಇದರಲ್ಲಿ ಕವಿಯು ತನ್ನ ಸಮಗ್ರ ಪರಿಚಯ ಮಾಡಿಕೊಂಡಿದ್ದಾನೆ.

“ದಕ್ಷಿಣಾಪಥವಾದ ದಕ್ಷಿಣಭಾರತದಲ್ಲಿ ಪದ್ಮಪುರವೆನ್ನುವ ನಗರವಿದೆ. ಇದು ವಿದರ್ಭದೇಶದ ನಾಗಪುರದ ಹತ್ತಿರವಿರುವ ಒಂದು ಹಳ್ಳಿಯೆಂದು ವಿದ್ವಾಂಸರು ಊಹೆ ಮಾಡಿದ್ದಾರೆ. ಇಲ್ಲಿ ನಾಲ್ಕು ವೇದಗಳಲ್ಲಿ ಆರು ವೇದಾಂಗಗಳಲ್ಲಿ ಸಾಧಕರಾದ, ಶ್ರೋತ್ರಿಯರು ಇದ್ದಾರೆ. ಅವರಲ್ಲಿ ಭವಭೂತಿಯ ವಂಶಜರೂ ವಾಸಿಸುತ್ತಿದ್ದರು. ಇವರು ಕಾಶ್ಯಪಗೋತ್ರದವರು. ಧರ್ಮಾನುಷ್ಠಾನ ಮಾಡುವವರು, ಪಂಕ್ತಿಪಾವನರು ಅಂದರೆ ಎಲ್ಲೆಡೆ ಮುಖ್ಯಸ್ಥಾನವನ್ನು ಹೊಂದಿದವರಾಗಿದ್ದರು. ಇವರೆಲ್ಲ ಕೃಷ್ಣಯಜುರ್ವೇದ ತೈತ್ತಿರೀಯ ಶಾಖಾನುಯಾಯಿಗಳು. ಗಾರ್ಹಪತ್ಯ, ಆಹವನೀಯ, ದಾಕ್ಷಿಣಾಗ್ನಿ, ಸಭ್ಯ, ಆವಸಥ್ಯಗಳೆಂಬ ಐದು ಅಗ್ನಿಗಳನ್ನು ಉಪಾಸನೆ ಮಾಡಿದವರು, ಅನೇಕ ವ್ರತಗಳನ್ನು ಮಾಡಿರುವವರು, ಇವರ ಪೂರ್ವಜರು ಸೋಮಯಾಗವನ್ನು ಮಾಡಿ ಸೋಮಪಾನ ಮಾಡಿದವರಾದ್ದರಿಂದ ಇವರೆಲ್ಲ ಸೋಮಯಾಜಿಗಳೆಂದು ಹೆಸರು ಗಳಿಸಿದ್ದರು. ಇವರು ಅಪ್ರತಿಮ ವಿದ್ವಾಂಸರು, ಬ್ರಹ್ಮವೇತ್ತರೂ ಆಗಿದ್ದರು.

ಇಂತಹ ಪ್ರಸಿದ್ಧವಾದ ಕುಲದಲ್ಲಿ ಭವಭೂತಿಯು ಐದನೆಯ ತಲೆಮಾರಿನವನು. ಇವನ ತಾತ ಗೋಪಾಲಭಟ್ಟರು ಪ್ರಸಿದ್ಧ ವೈದಿಕರು. ಗೋಪಾಲಭಟ್ಟರ ಮಗನೇ ನೀಲಕಂಠ. ನೀಲಕಂಠನ ಹೆಂಡತಿ ಜತುಕರ್ಣಿ. ಈ ದಂಪತಿಗಳ ಮಗನೇ ಭವಭೂತಿ. ಇವನಿಗೆ ನಾಮಕರಣವಾದ ಹೆಸರು ಶ್ರೀಕಂಠ. ಈ ಶ್ರೀಕಂಠನು

**“ಕಾಂ ತಪಸ್ವೀ ಗತೋಽವಸ್ಥಾಮಿತಿ ಸ್ಮೇರಾವಿವ ಸ್ತನೌ ।**
**ವಂದೇ ಗೌರೀಘನಾಶ್ಲೇಷಭವಭೂತಿಸಿತಾನನೌ ॥”**
(ಸದುಕ್ತಿಕರ್ಣಾಮೃತ 1–10–4 ರಲ್ಲಿ ಭವಭೂತಿಯದೆಂದು ಉದ್ಧೃತ)

**“ಸಾಂಬಾ ಪುನಾತು ಭವಭೂತಿಪವಿತ್ರಮೂರ್ತಿಃ ।”**
(ವೀರರಾಘವದಲ್ಲಿ ಉದ್ಧೃತ)

ಶಿವನ ದೇಹಕ್ಕೆ ಬಳಿದುಕೊಂಡ ಪವಿತ್ರ ವಿಭೂತಿಯಿಂದ

ಬಿಳಿಬಣ್ಣದವಳಾಗಿ ಗೌರೀ ಎನಿಸಿದ – ಉಮೆಯು ಎಲ್ಲರನ್ನೂ ಕಾಪಾಡಲಿ ಎಂದು ವರ್ಣಿಸಿರುವುದರಿಂದ ಇವನಿಗೆ ಭವಭೂತಿಯೆಂದು ಹೆಸರು ಬಂತೆಂದು ತಿಳಿದವರು ಹೇಳುತ್ತಾರೆ. ಈ ಶ್ರೀಕಂಠನೂ ತನ್ನ ತಂದೆ, ತಾತ, ಪೂರ್ವಜರಂತೆ ವೇದ–ವೇದಾಂಗಗಳಲ್ಲಿ, ನ್ಯಾಯ, ವ್ಯಾಕರಣ, ಪೂರ್ವಮೀಮಾಂಸಾ, ಉತ್ತರಮೀಮಾಂಸಾ (ವೇದಾಂತ) ಮೊದಲಾದ ಶಾಸ್ತ್ರಗಳಲ್ಲಿ ಉತ್ತಮ ಪರಿಣತಿಯನ್ನು ಪಡೆದ ವಿದ್ವಾಂಸನಾಗಿದ್ದನು. ಇವನು ಸಂಸ್ಕೃತದಲ್ಲಿ ಪ್ರಸಿದ್ಧ ಕವಿ ಹಾಗೂ ನಾಟಕಕಾರನೂ ಆಗಿದ್ದನು. ಇವನ ಗುರು ಜ್ಞಾನನಿಧಿ. ಇವರೂ ಸಹ ವೇದ, ವೇದಾಂಗ ಹಾಗೂ ಅನೇಕ ಶಾಸ್ತ್ರಗಳಲ್ಲಿ ನಿಷ್ಣಾತರಾಗಿದ್ದು ಪರಮಹಂಸರೆಂದು ಶ್ರೇಷ್ಠರಾದ ಮಹರ್ಷಿಗಳ ಮಧ್ಯೆ ಅಂಗಿರಸ್ ಮಹರ್ಷಿಗಳು ಹೇಗೆ ಪ್ರಸಿದ್ಧರಾಗಿದ್ದರೋ ಹಾಗೆ ಪವಿತ್ರರಾದ, ಭವಭೂತಿಯ ಗುರುಗಳಾದ ಜ್ಞಾನನಿಧಿಗಳು ಹೆಸರಿಗೆ ತಕ್ಕಂತೆ ಜ್ಞಾನಗಳ ನಿಧಿಯೇ ಆಗಿದ್ದರು. ಭವಭೂತಿಯ ವಂಶದಲ್ಲಿದ್ದ ಐದನೆಯ ತಲೆಮಾರಿನ ಹಿಂದಿನ ಶ್ರೋತ್ರಿಯರೊಬ್ಬರು ವಾಜಪೇಯ ಯಾಗವನ್ನು ಮಾಡಿದ್ದರೆಂದೂ ತಿಳಿದುಬರುತ್ತದೆ. ಹೀಗಾಗಿ ಭವಭೂತಿಯ ನಿಜ ಹೆಸರು ಶ್ರೀಕಂಠ. ಇವನ ಹುಟ್ಟಿದ ಊರು ದಕ್ಷಿಣಾಪಥದ ಪದ್ಮಪುರವೆಂಬ ಹಳ್ಳಿ

ಎಂದು ಗೊತ್ತಾಗುತ್ತದೆ. ಗುರುಗಳಾದ ಜ್ಞಾನನಿಧಿಯೇ ಕುಮಾರಿಲಭಟ್ಟರು. ಇವರು ಪೂರ್ವಮೀಮಾಸಾಶಾಸ್ತ್ರದಲ್ಲಿ ನಿಷ್ಣಾತರಾದ ವಿದ್ವಾಂಸರು. ಇವರ ಶಿಷ್ಯನೇ ಭವಭೂತಿ ಎಂದೂ ಕೆಲವು ವಿಮರ್ಶಕರು ಹೇಳುತ್ತಾರೆ. ಆದರೆ ಭವಭೂತಿಯು ಜ್ಞಾನನಿಧಿ ಎಂದಷ್ಟೇ ತನ್ನ ಗುರುವಿನ ಹೆಸರನ್ನು ಹೇಳುತ್ತಾನೆ.

ಕವಿ ರಾಜಶೇಖರನು (ಕ್ರಿ.ಶ.900) ತನ್ನ **'ಬಾಲರಾಮಾಯಣ'**ದಲ್ಲಿ (1–16) ತನ್ನನ್ನು ಭವಭೂತಿಯಂತೆ ವಾಲ್ಮೀಕಿಯ ಅವತಾರವೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ವಾಮನನು (ಕ್ರಿ.ಶ. 800) ತನ್ನ **'ಕಾವ್ಯಾಲಂಕಾರಸೂತ್ರವೃತ್ತಿ'**ಯಲ್ಲಿ ಮಹಾವೀರಚರಿತನಾಟಕದ **'ದೋರ್ಲೀಲಾಂಚಿತ'** (1–54) ಎಂಬ ಪದ್ಯವನ್ನು ಉದಾಹರಿಸಿದ್ದಾನೆ. ಕಲ್ಹಣನು ತನ್ನ **'ರಾಜತರಂಗಿಣಿ'**ಯಲ್ಲಿ (4–144) ಭವಭೂತಿ ಮತ್ತು ವಾಕ್ಪತಿರಾಜ ಇಬ್ಬರೂ ರಾಜ ಯಶೋವರ್ಮನ ಆಶ್ರಯದಲ್ಲಿದ್ದರೆಂದು ಹೇಳುತ್ತಾನೆ. ವಾಕ್ಪತಿರಾಜನು ಬರೆದ **'ಗೌಡವಹೋ ಪ್ರಾಕೃತಕಾವ್ಯ'**ದಲ್ಲಿ (799ನೇ ಪದ್ಯ) ಭವಭೂತಿಯ ಪ್ರಶಂಸೆಯಿದೆ. ಯಶೋವರ್ಮನ ಕಾಲ ಕ್ರಿ.ಶ. 736 ಎಂದರೆ ಭವಭೂತಿಯು ಕ್ರಿ.ಶ. 736ಕ್ಕಿಂತ ಸ್ವಲ್ಪ ಹಿಂದೆ ಇದ್ದಿರಬೇಕು. ಹಾಗಾಗಿ ಭವಭೂತಿಯ ಕಾಲವನ್ನು ಕ್ರಿ.ಶ.700 ಎಂದು ಅಂದಾಜಿನಲ್ಲಿ ಹೇಳಬಹುದು.

### ಭವಭೂತಿಯ ಉತ್ತರರಾಮಚರಿತೆ :

ವಾಲ್ಮೀಕಿರಾಮಾಯಣದ ಉತ್ತರಕಾಂಡದ ಪ್ರಭಾವದಿಂದ ಭವಭೂತಿಯು **'ಉತ್ತರರಾಮಚರಿತೆ'** ಎಂಬ ನಾಟಕವನ್ನು ಬರೆದಿರುವಂತೆ ಕಾಣುತ್ತದೆ. ಇದರಲ್ಲಿ ಒಟ್ಟು ಏಳು ಅಂಕಗಳಿವೆ. ಉತ್ತರಕಾಂಡದಿಂದ ಕಥಾವಸ್ತುವನ್ನು ತೆಗೆದುಕೊಂಡಿರುವುದರಿಂದಲೋ, ರಾಮನ ಪಟ್ಟಾಭಿಷೇಕವಾದ ನಂತರದ ವಿದ್ಯಮಾನಗಳು ಇಲ್ಲಿರುವುದರಿಂದಲೋ ಅಥವಾ ಭವಭೂತಿಯೇ ಬರೆದಿರುವ **'ಮಹಾವೀರಚರಿತ'** ನಾಟಕಕ್ಕೆ ಪೋಷಕವಾಗಿರುವುದರಿಂದಲೋ ಏನೋ ಈ ನಾಟಕಕ್ಕೆ ಭವಭೂತಿಯು **'ಉತ್ತರರಾಮಚರಿತ'** ಎಂಬ ಹೆಸರನ್ನೇ ಇಟ್ಟಿರುವಂತೆ ತೋರುತ್ತದೆ. ಉತ್ತಮೋತ್ತಮವಾದ ರಾಮನ ಚರಿತೆ ಎಂಬ ಕಾರಣದಿಂದಲೂ ಈ ಹೆಸರು ಬಂದಿರಬಹುದು. ಭವಭೂತಿಯು ಬರೆದಿರುವ ನಾಟಕಗಳಲ್ಲೆಲ್ಲಾ **'ಉತ್ತರರಾಮಚರಿತ'**ವೇ ಸರ್ವೋತ್ಕೃಷ್ಟವಾದ ನಾಟಕ. **'ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ'** (ಉತ್ತರರಾಮಚರಿತ ನಾಟಕದಲ್ಲಿ ಭವಭೂತಿಯು ವಿಶಿಷ್ಟ ಸಿದ್ಧಿಯನ್ನು ಪಡೆದಿದ್ದಾನೆ) ಎಂಬುದು ಭವಭೂತಿಗೆ ದೊರೆತಿರುವ ಪ್ರಶಂಸಾವಾಕ್ಯ.

### ಉತ್ತರರಾಮಚರಿತೆಯ ಏಳು ಅಂಕಗಳ ಕಥಾಸಾರಾಂಶವು ಹೀಗಿದೆ –

ಋಷ್ಯಶೃಂಗನ ಆಶ್ರಮದಲ್ಲಿ ನಡೆಯುವ ಯಜ್ಞಕ್ಕೆ ಬರಬೇಕೆಂದು ಅಲ್ಲಿಂದ ಅಯೋಧ್ಯೆಯಲ್ಲಿನ ರಾಮಾದಿಗಳಿಗೆ ಆಹ್ವಾನ ಬಂದಿರುತ್ತದೆ. ಸೀತೆಯು ತುಂಬು ಬಸುರಿಯಾಗಿದ್ದರಿಂದ ಅವಳು ಅರಮನೆಯಲ್ಲೇ ಇರಲಿ ಎಂದು ಹಿರಿಯರೆಲ್ಲ ಹೇಳಿ, ಅವಳ ಸಹಾಯಕ್ಕೆ ರಾಮಲಕ್ಷ್ಮಣರೂ ಇರಲೆಂದು ಹೇಳಿ ಮಿಕ್ಕವರೆಲ್ಲ ಋಷ್ಯಶೃಂಗನ ಆಶ್ರಮಕ್ಕೆ ಹೋಗಿರುತ್ತಾರೆ. ಸೀತೆಯನ್ನು ಸಂತೋಷಪಡಿಸುವುದಕ್ಕಾಗಿ ರಾಮನು ಹೇಳಿದ್ದಂತೆ ಚಿತ್ರಕಾರನು ರಾಮಾಯಣದ ಕಥೆಯನ್ನಾಧರಿಸಿ ಚಿತ್ರಪಟಗಳನ್ನು ಬರೆದು ತಂದಿರುತ್ತಾನೆ. ರಾಮಲಕ್ಷ್ಮಣರು ವಿಶ್ವಾಮಿತ್ರರಿಂದ ಜೃಂಭಕಾಸ್ತ್ರವನ್ನು ಪಡೆಯುವುದರಿಂದ ಆರಂಭಿಸಿ, ಲಂಕೆಯಲ್ಲಿ ಸೀತೆಯು ಅಗ್ನಿಪ್ರವೇಶ ಮಾಡಿ ಶುದ್ಧಳಾಗಿ ಹೊರ ಬರುವವರೆಗಿನ ಚಿತ್ರಪಟಗಳು ಅಲ್ಲಿದ್ದು ಅವನ್ನು ಅರಮನೆಯ ಒಂದು ಭಾಗದ ಬೀದಿಯಲ್ಲಿ ಜೋಡಿಸಿಟ್ಟಿರುತ್ತಾರೆ. ಲಕ್ಷ್ಮಣನು ರಾಮನಿಗೆ ಈ ವಿಷಯವನ್ನು ಹೇಳಿದಾಗ, ರಾಮನು ಸೀತೆಗೆ ಆ ಚಿತ್ರಗಳನ್ನು ತೋರಿಸುತ್ತಾ ಬರುತ್ತಾನೆ. ಚಿತ್ರಗಳನ್ನು ನೋಡುತ್ತಿದ್ದ ಸೀತೆಯು ಆಯಾಸಗೊಂಡು ರಾಮನ ಎದೆಯ ಮೇಲೆ ತಲೆಯನ್ನಿಟ್ಟು ಮಲಗಿ ಬಿಟ್ಟಿದ್ದಾಳೆ. ಸೀತೆಯನ್ನು ಕಂಡ, ಅವಳ ಮೃದುಸ್ಪರ್ಶದಿಂದ ಪುಳಕಿತನಾದ ರಾಮನು, ಪ್ರಿಯ ಮಡದಿ ಸೀತೆಯನ್ನು ಒಂದು ಕ್ಷಣವೂ ಎಂದಿಗೂ ಬಿಡಲಾರೆ ಎಂದು ಹೇಳಿಕೊಳ್ಳುತ್ತಾನೆ. ಅವಳ ಪ್ರೀತಿಯನ್ನು ಮೆಲುಕು ಹಾಕುತ್ತಿರುತ್ತಾನೆ. ಅದೇ ಸಮಯಕ್ಕೆ ದುರ್ಮುಖನೆಂಬ ಗೂಢಚಾರನು ಅಲ್ಲಿಗೆ ಬಂದು ಸೀತೆಯ ಬಗ್ಗೆ ಬಂದಿರುವ ಜನಾಪವಾದವನ್ನು ಹೇಳುತ್ತಾನೆ. ಚಿತ್ರಗಳನ್ನು ನೋಡುತ್ತಿದ್ದಾಗ ತಪೋವನಗಳನ್ನು ನೋಡಿದ ಸೀತೆ ತಾನು ಮತ್ತೆ ಋಷ್ಯಾಶ್ರಮಕ್ಕೆ ಹೋಗಿ ಬರಬೇಕೆಂಬ ಆಸೆಯನ್ನು ಹೇಳಿರುತ್ತಾಳೆ. ರಾಮನು ಅದನ್ನೇ

ನೆಪವಾಗಿಟ್ಟುಕೊಂಡು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರಲು ಲಕ್ಷ್ಮಣನಿಗೆ ಆದೇಶಿಸುತ್ತಾನೆ. ಲಕ್ಷ್ಮಣನು ಸೀತೆಯನ್ನು ರಥದಲ್ಲಿ ಕೂರಿಸಿಕೊಂಡು ಕರೆದೊಯ್ಯುತ್ತಾನೆ (ಅಂಕ 1).

ಪಂಚವಟಿಯಲ್ಲಿ ಆತ್ರೇಯೀ ವಾಸಂತಿಯರು ಮಾತನಾಡುತ್ತಿರುವಾಗ ವಾಲ್ಮೀಕಿಗಳ ಆಶ್ರಮದಲ್ಲಿ ಲವಕುಶರು ಬಂದಿರುವ ವಿಚಾರ ತಿಳಿಯುತ್ತದೆ. ಅವರ ಬೆಳವಣಿಗೆ, ಜೃಂಭಕಾಸ್ತ್ರದಲ್ಲಿ ಅವರು ಸಿದ್ಧಿ ಪಡೆಯುವುದು, ವೇದ–ವೇದಾಂಗಶಾಸ್ತ್ರಾದಿಗಳಲ್ಲಿ, ಅಸ್ತ್ರ–ಶಸ್ತ್ರ ವಿದ್ಯೆಗಳಲ್ಲಿ, ಸಂಗೀತ ಮೊದಲಾದ ಕಲೆಗಳಲ್ಲಿ ಅವರ ವಿದ್ಯಾಭ್ಯಾಸ ನಡೆಯುತ್ತಿರುತ್ತದೆ. ವಾಲ್ಮೀಕಿಗಳು ರಾಮಾಯಣವನ್ನು ರಚಿಸಿ, ಅದಕ್ಕೆ ರಾಮ–ಸೀತೆಯರನ್ನೇ ನಾಯಕ–ನಾಯಕಿಯರನ್ನಾಗಿ ಮಾಡುವರು. ಇತ್ತ ಅಯೋಧ್ಯೆಯಲ್ಲಿ ರಾಮನು ಸುವರ್ಣಸೀತೆಯ ಪ್ರತಿಮೆಯನ್ನು ಮಾಡಿಸಿ, ಅಶ್ವಮೇಧಯಾಗವನ್ನು ಮಾಡಲು ಸಂಕಲ್ಪಿಸಿ, ಲಕ್ಷ್ಮಣನ ಮಗ ಚಂದ್ರಕೇತುವನ್ನು ಯಜ್ಞ ಕುದುರೆಯ ರಕ್ಷಣೆಗಾಗಿ ಕಳುಹಿಸುವನು. ರಾಮನು ಶಂಬೂಕನೆಂಬ ಶೂದ್ರತಪಸ್ವಿಯನ್ನು ವಧಿಸಲು ಪಂಚವಟೀ ಹತ್ತಿರದ ಜನಸ್ಥಾನವೆಂಬ ಕಾಡಿಗೆ ಬರುತ್ತಾನೆ. ರಾಮಬಾಣದಿಂದ ಹತನಾದ ಶಂಬೂಕನು ಒಬ್ಬ ದಿವ್ಯ ಪುರುಷನಾಗಿ ರಾಮನಿಗೆ ಒಳ್ಳೆಯದನ್ನು ಹಾರೈಸಿ ಅದು ಜನಸ್ಥಾನವೆಂದು ಹೇಳಿ ತೆರಳುವನು. ಆಗ ರಾಮನು ಹಿಂದೆ ತಾನು ಸೀತೆಯೊಡನೆ ಇದ್ದ ಸಂಗತಿಗಳನ್ನೆಲ್ಲಾ ನೆನಪಿಸಿಕೊಂಡು ಶೋಕಿಸುತ್ತಾನೆ (ಅಂಕ 2).

ಇದೇ ಸಮಯಕ್ಕೆ ಸರಿಯಾಗಿ ಸೀತೆಯು ತನ್ನ ಮಕ್ಕಳ ಹನ್ನೆರಡನೆಯ ವರ್ಷದ ಹುಟ್ಟುಹಬ್ಬಕ್ಕಾಗಿ ಪಾತಾಳಲೋಕದಿಂದ ಬಂದು ಗೋದಾವರೀ ನದಿಯ ಹತ್ತಿರದಲ್ಲಿದ್ದಾಳೆ. ರಾಮನೂ ಅಲ್ಲಿಗೆ ವಿಮಾನದಿಂದ ಬಂದಿಳಿಯುತ್ತಾನೆ. ಸೀತೆಯ ಜೊತೆಗೆ ತಮಸಾ ನದಿಯೂ, ರಾಮನ ಜೊತೆಗೆ ವಾಸಂತಿಯೂ ಇರುತ್ತಾರೆ. ಸೀತೆಯು ತಮಸೆಗೆ ಮಾತ್ರ ಕಾಣುತ್ತಿರುತ್ತಾಳೆ. ಉಳಿದವರ ಯಾರ ಕಣ್ಣಿಗೂ ಅವಳು ಕಾಣಿಸುವುದಿಲ್ಲ. ವಾಸಂತಿಯು ರಾಮನಿಗೆ ಅಲ್ಲಿ ನಡೆದ ಹಿಂದಿನ ವೃತ್ತಾಂತಗಳನ್ನೆಲ್ಲಾ ಹೇಳಿ, ಅಲ್ಲಿದ್ದ ವಸ್ತುಗಳನ್ನೆಲ್ಲಾ ತೋರಿಸಿ, ಸೀತಾಪರಿತ್ಯಾಗದ ವಿಷಯವನ್ನು ಹೇಳಿ, ವಿಮರ್ಶಿಸಿ ರಾಮನು ಕೊರಗುವಂತೆ ಮಾಡುತ್ತಾಳೆ. ಈ ವೃತ್ತಾಂತಗಳನ್ನು ಕೇಳಿ, ಹಿಂದಿನ ಜಾಗಗಳನ್ನೆಲ್ಲಾ ನೋಡಿ ಬಾರಿ ಬಾರಿಗೂ ರಾಮಸೀತೆಯರು ಮೂರ್ಛಿತರಾಗುತ್ತಾರೆ. ತಮಸೆಯು ಸೀತೆಯನ್ನು ಸಮಾಧಾನಪಡಿಸುತ್ತಾಳೆ. ಅದೃಶ್ಯಳಾಗಿರುವ ಸೀತೆ ಮೂರ್ಛಿತನಾದ ರಾಮನ ಮೈದಡವಿ ಎಚ್ಚರಿಸುತ್ತಾಳೆ. ರಾಮನಿಗೆ ಸೀತೆಯೇ ಮತ್ತೆ ಬಂದು ಸಮಾಧಾನಪಡಿಸುತ್ತಿದ್ದಾಳೆ ಎನಿಸಿದರೂ ಸೀತೆಯು ಕಾಣುವುದಿಲ್ಲ. ಕಡೆಗೆ ದುಃಖಿತನಾದ ರಾಮನು ಅಯೋಧ್ಯೆಯ ಕಡೆಗೆ, ಸೀತೆಯು ವಾಲ್ಮೀಕಿಯ ಆಶ್ರಮದ ಕಡೆಗೆ ತೆರಳುತ್ತಾರೆ (ಅಂಕ 3).

ವಾಲ್ಮೀಕಿಯ ಆಶ್ರಮಕ್ಕೆ ತನ್ನ ಆಶ್ರಮದಿಂದ ಜನಕನೂ, ಋಷ್ಯಶೃಂಗನ ಆಶ್ರಮದಿಂದ ವಸಿಷ್ಠ, ಕೌಸಲ್ಯೆ ಮೊದಲಾದವರು ಬಂದಿರುತ್ತಾರೆ. ಸೀತೆಯಿಲ್ಲದ ಅಯೋಧ್ಯೆಗೆ ನಾವು ಹೋಗುವುದಿಲ್ಲವೆಂದು ಅವರ ಸಂಕಲ್ಪ. ಸೀತೆಯನ್ನು ಕಾಡಿಗೆ ಕಳುಹಿಸಿದ ಬಗ್ಗೆಯೇ ಎಲ್ಲರೂ ಮಾತಾಡಿಕೊಂಡು ಬೇಸರಗೊಂಡಿರುತ್ತಾರೆ. ಅಲ್ಲಿ ಲವನನ್ನೂ, ಅವನಲ್ಲಿ ಸೀತಾರಾಮರ ಹೋಲಿಕೆಯನ್ನು ಕಂಡು ಆಶ್ಚರ್ಯದಿಂದ ಅವನನ್ನು ಮಾತನಾಡಿಸುತ್ತಿರುತ್ತಾರೆ. ಆಗ ಆಶ್ರಮಕ್ಕೆ ರಾಮನ ಯಜ್ಞಕುದುರೆಯು ಬಂದಿತೆಂದು ಕೇಳಿ ಲವನು ಹೋಗಿ ಅದನ್ನು ಕಟ್ಟಿಹಾಕುವನು (ಅಂಕ 4).

ಲಕ್ಷ್ಮಣನ ಮಗ ಚಂದ್ರಕೇತುವು ಯಜ್ಞದ ಕುದುರೆಯನ್ನು ಕಟ್ಟಿ ಹಾಕಿದ ಲವನನ್ನು ಎದುರಿಸುವನು. ಲವನು ಜೃಂಭಕಾಸ್ತ್ರವನ್ನು ಪ್ರಯೋಗಿಸಿ ಚಂದ್ರಕೇತುವನ್ನು ಅವನ ಸೈನ್ಯವನ್ನು ನಿಶ್ಚೇತನಗೊಳಿಸುವನು. ಲವನು ರಾಮನ ಚರಿತ್ರೆಯನ್ನು ಹೇಳಿ ಹಂಗಿಸಲು ತೊಡಗಿದಾಗ, ಕೋಪಗೊಂಡ ಚಂದ್ರಕೇತುವು ಲವನೊಡನೆ ಯುದ್ಧ ಮಾಡಲು ತೊಡಗುತ್ತಾನೆ (ಅಂಕ 5).

ವಿದ್ಯಾಧರ ದಂಪತಿಗಳಿಂದ ಲವಚಂದ್ರಕೇತುಗಳ ಯುದ್ಧವು ಯಜ್ಞಕುದುರೆಗಾಗಿ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ಅಲ್ಲಿಗೆ ರಾಮನೂ ಶಂಬೂಕನನ್ನು ಕೊಂದು ಹಿಂದಿರುಗಿ ಬಂದು ಇಲ್ಲಿಗೇ ಬಂದಿಳಿಯುವನು. ರಾಮನು ಲವನನ್ನು, ಲವನು ರಾಮನನ್ನೂ ನೋಡಿ ಅವರಲ್ಲಿ ಅನ್ಯೋನ್ಯ ಪ್ರೇಮವುಂಟಾಗುವುದು. ಲವನು ರಾಮನ

ಮಾತಿನಂತೆ ತಾನು ಬಿಟ್ಟಿದ್ದ ಜೃಂಭಕಾಸ್ತ್ರವನ್ನು ಹಿಂದಕ್ಕೆ ತೆಗೆದುಕೊಳ್ಳುವನು. ಭರತಮುನಿಯ ಆಶ್ರಮಕ್ಕೆ ಹೋಗಿದ್ದ ಕುಶನೂ ವಾಲ್ಮೀಕಿಯ ಆಶ್ರಮಕ್ಕೆ ಹಿಂದಿರುಗಿ ಬರುವನು. ಲವಕುಶರಿಗೆ ವಾಲ್ಮೀಕಿಗಳು ರಾಮಾಯಣದ ಕಥೆಯನ್ನು ಸಂಗೀತರೂಪದಲ್ಲಿ ಕಲಿಸಿದ್ದರು. ರಾಮನು ಲವಕುಶರಲ್ಲಿ ತನ್ನ, ಸೀತೆಯ ಹೋಲಿಕೆಗಳನ್ನು ಕಾಣುವನು. ಲವಕುಶರು ಹಾಡಿದ ರಾಮಾಯಣದ ಕಥಾಶ್ಲೋಕಗಳನ್ನು ಕೇಳಿ ರಾಮನು ಹಿಂದಿನ ಘಟನೆಗಳನ್ನೆಲ್ಲಾ ನೆನಪಿಸಿಕೊಂಡು ಶೋಕಿಸುವನು. ಇಷ್ಟರಲ್ಲಿ ವಸಿಷ್ಠ, ಜನಕ, ಅರುಂಧತೀ, ಕೌಸಲ್ಯಾ, ಸುಮಿತ್ರಾ, ಕೈಕೇಯಿಯರು ಮಕ್ಕಳು ಯುದ್ಧ ಮಾಡುತ್ತಿರುವರೆಂದು ಕೇಳಿ ಗಾಬರಿಯಿಂದ ಅಲ್ಲಿಗೆ ಓಡಿ ಬರುತ್ತಾರೆ. ರಾಮನ ತಾಯಿಯರು ರಾಮನ ಅವಸ್ಥೆಯನ್ನು ಕಂಡು ಮೂರ್ಛೆ ಹೋಗುತ್ತಾರೆ. ನಂತರ ರಾಮನು ಅವರನ್ನು ಸಂತೈಸಲು ಏಳುತ್ತಾನೆ. ಹುಡುಗರು ಅವನನ್ನು ಹಿಂಬಾಲಿಸುತ್ತಾರೆ (ಅಂಕ 6).

ವಾಲ್ಮೀಕಿಮುನಿಗಳು ಗಂಗಾನದಿಯ ದಡದಲ್ಲಿ ದೇವತೆಗಳು, ಅಸುರರು, ಮನುಷ್ಯರು, ಉರಗಗಳು, ಇತರ ಪಟ್ಟಣಿಗರನ್ನು, ಗ್ರಾಮಮುಖಂಡರನ್ನು ಸೇರಿಸಿ ಅವರ ಎದುರು, ಸೀತಾಪರಿತ್ಯಾಗದಿಂದ ಮುಂದಿನ ಕಥೆಯನ್ನು ಅಭಿನಯಿಸಲು ವ್ಯವಸ್ಥೆ ಮಾಡಿರುತ್ತಾರೆ. ಅದರಲ್ಲಿ ಸೀತೆ ಗಂಗೆಯೊಳಗೆ ಬಿದ್ದು ಮಕ್ಕಳನ್ನು ಹಡೆದಾಗ ಗಂಗಾದೇವಿ, ಭೂದೇವಿಯರು ಅವಳನ್ನು ಪಾತಾಳಕ್ಕೆ ಕರೆದುಕೊಂಡು ಹೋಗುವರು. ನಂತರ ಗಂಗಾ–ಭೂದೇವಿಯರು ಸೀತೆಯನ್ನು ವಸಿಷ್ಠರ ಹೆಂಡತಿ ಅರುಂಧತಿಗೆ ತಂದು ಒಪ್ಪಿಸುತ್ತಾರೆ. ಆಗ ಅವಳು ಸೀತೆಯನ್ನು ಹೊಗಳಿ ಮಹಾಜನರ ಎದುರು ರಾಮನಿಗೆ ಒಪ್ಪಿಸುವಳು. ವಾಲ್ಮೀಕಿಗಳು ಲವಕುಶರನ್ನು ಕರೆತಂದು, ತಾಯಿ–ತಂದೆಯರೊಡನೆ ಸೇರಿಸುವರು. ಲವಣಾಸುರನನ್ನು ಕೊಂದು ಶತ್ರುಘ್ನನೂ ಹಿಂದಿರುಗಿ ಬರುತ್ತಾನೆ. ಶಾಂತಾ–ಋಷ್ಯಶೃಂಗ ಮೊದಲಾದವರೂ ಬಂದು ಸೇರುತ್ತಾರೆ. ಎಲ್ಲರೂ ಆನಂದಗೊಳ್ಳುತ್ತಾರೆ. ಎಲ್ಲವೂ ಸುಖ–ಸಂತೋಷದಲ್ಲಿ ಕೊನೆಗೊಳ್ಳುತ್ತದೆ (ಅಂಕ 7).

### ಉತ್ತರರಾಮಚರಿತ ನಾಟಕ ರಚನೆಗೆ ಆಧಾರ ಮತ್ತು ಪ್ರೇರಣೆ :

ವಾಲ್ಮೀಕಿ ರಾಮಾಯಣದ ಕೊನೆಯ ಉತ್ತರಕಾಂಡವೇ '**ಉತ್ತರರಾಮಚರಿತ**'ಕ್ಕೆ ಆಧಾರವೆಂದು ಭಾವಿಸಬಹುದು. ವಾಲ್ಮೀಕಿ ರಾಮಾಯಣದ ಉತ್ತರಕಾಂಡದ ಪ್ರಕಾರ ರಾಮ ಪಟ್ಟಾಭಿಷೇಕವಾದ ಮೇಲೆ ಹತ್ತು ಸಾವಿರ ವರ್ಷಗಳ ನಂತರ ಸೀತೆಯು ಗರ್ಭಿಣಿಯಾಗಿ ಋಷಿಗಳ ತಪೋವನಗಳನ್ನು ನೋಡಬೇಕೆಂದು ಆಶಿಸುತ್ತಾಳೆ. ಕಾಲ ಕಳೆದಂತೆ ರಾಮನು ಭದ್ರನೆಂಬ ಗುಪ್ತಚರನಿಂದ ಲೋಕಾಪವಾದವನ್ನು ತಿಳಿದು, ಅವಳನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ಲಕ್ಷ್ಮಣನಿಗೆ ಹೇಳಲು, ಆಗ ಅವನು ಅವಳನ್ನು ವಾಲ್ಮೀಕಿಮುನಿಗಳ ಆಶ್ರಮದ ಹತ್ತಿರ ಬಿಟ್ಟು ಬರುತ್ತಾನೆ. ಒಂಟಿಯಾಗಿದ್ದ ಸೀತೆಯು ಅಸಹಾಯಕಳಾಗಿ ದುಃಖಿಸುತ್ತಿರುವಾಗ ಅಲ್ಲಿಗೆ ಬಂದ ವಾಲ್ಮೀಕಿಗಳು ಅವಳನ್ನು ತನ್ನ ಆಶ್ರಮಕ್ಕೆ ಕರೆತಂದು ಕಾಪಾಡುತ್ತಾರೆ. ಆಗ ಅಲ್ಲಿಯೇ ಲವಕುಶರು ಹುಟ್ಟುತ್ತಾರೆ. ಆ ರಾತ್ರಿ ಶತ್ರುಘ್ನನು ಲವಣಾಸುರನನ್ನು ಕೊಲ್ಲಬೇಕೆಂದು ಹೊರಟಿದ್ದವನು ವಾಲ್ಮೀಕಿ ಆಶ್ರಮದಲ್ಲಿ ತಂಗಿರುತ್ತಾನೆ. ಆಮೇಲೆ ಲವಣನನ್ನು ವಧಿಸಿ ಹನ್ನೆರಡು ವರ್ಷಗಳ ನಂತರ ಮತ್ತೆ ವಾಲ್ಮೀಕಿಗಳ ಆಶ್ರಮಕ್ಕೆ ಬಂದು ಅಲ್ಲಿದ್ದು ಅಯೋಧ್ಯೆಗೆ ಹೋಗಿ ಅಲ್ಲಿ ಬಂದು ಒಂದು ವಾರವಿದ್ದು ಮತ್ತೆ ಹಿಂದಿರುಗುತ್ತಾನೆ. ಈ ಮಧ್ಯೆ ರಾಮನು ಜನಸ್ಥಾನದಲ್ಲಿ ಶಂಬೂಕನನ್ನು ಕೊಂದು, ನಂತರ ನೈಮಿಷಾರಣ್ಯದಲ್ಲಿ ಸುವರ್ಣಸೀತೆಯೊಡನೆ ಅಶ್ವಮೇಧಯಾಗವನ್ನು ಮಾಡುತ್ತಾನೆ.

ಆಗ ಅಲ್ಲಿಗೆ ವಾಲ್ಮೀಕಿಗಳು ಲವಕುಶರೊಡನೆ ಬಂದಿರುತ್ತಾರೆ. ಲವಕುಶರು ರಾಮಾಯಣವನ್ನು ಗಾನವಾಗಿ ಹಾಡುತ್ತಾರೆ. ಆಗ ಲವಕುಶರ ಪೂರ್ವಾಪರಗಳನ್ನೆಲ್ಲಾ ಕೇಳಿ ತಿಳಿದ ರಾಮನು ವಾಲ್ಮೀಕಿಗಳ ಆಶ್ರಮದಲ್ಲಿದ್ದ ಸೀತೆಗೆ ಅಲ್ಲಿಗೆ ಬರುವಂತೆ ಹೇಳಿಕಳುಹಿಸುತ್ತಾನೆ. ಆಗ ರಾಮನು ತನ್ನ ಮನಸ್ಸಿಗೆ ನಂಬಿಕೆ ಬರುವಂತೆ ಶಪಥ ಮಾಡಬೇಕೆಂದು ಕೇಳಿದಾಗ ಮನನೊಂದ ಸೀತೆಯು ಭೂದೇವಿಯನ್ನು ಪ್ರಾರ್ಥಿಸಿದಾಗ, ಭೂಮಿಯು ಬಿರಿದು ಒಳಗಿನಿಂದ ಭೂದೇವಿಯು ಮೇಲೆ ಬಂದು ಸೀತೆಯನ್ನು ತನ್ನೊಡನೆ ಕರೆದುಕೊಂಡು ಹೊರಟುಹೋಗುತ್ತಾಳೆ. ಕಡೆಗೆ ರಾಮನು ಮಕ್ಕಳಿಗೆ, ತಮ್ಮಂದಿರಿಗೆ ರಾಜ್ಯಭಾರವನ್ನು ಒಪ್ಪಿಸಿ ಸರಯೂ ನದಿಯಲ್ಲಿ ತನ್ನ ಶರೀರವನ್ನು ಬಿಟ್ಟು ವೈಷ್ಣವತೇಜಸ್ಸನ್ನು ಪಡೆದು ವೈಕುಂಠಲೋಕಕ್ಕೆ ಹೋಗುತ್ತಾನೆ. ಇದು ಮೂಲ ವಾಲ್ಮೀಕಿಯ ರಾಮಾಯಣದ ಕಥೆ.

ಮೂಲರಾಮಾಯಣದಲ್ಲಿ ಲವಕುಶರ ಯುದ್ಧ ಪ್ರಸಂಗವೇ ಇಲ್ಲ. ಯಜ್ಞದ ಕುದುರೆಯು ಬೇರೆ ಬೇರೆ ದೇಶಗಳಲ್ಲಿ ಹಾದು ಬಂದ ವಿಚಾರವೂ ಇಲ್ಲ. ರಾಮ, ಸೀತೆ, ಲವಕುಶರು ವಾಲ್ಮೀಕಿಯ ಆಶ್ರಮದಲ್ಲಿ ಸೇರುವುದಿಲ್ಲ. ಕಥೆಯ ಕೊನೆಯು ದುಃಖದಲ್ಲಿ ಸಮಾಪ್ತಿಯಾಗುತ್ತದೆ. ಪದ್ಮಪುರಾಣದ ಪಾತಾಳಖಂಡದಲ್ಲಿ (ಅಧ್ಯಾಯ 1–68) ರಾಮಸೀತೆಯರ ಕಥೆ ಬರುತ್ತದೆ. ಅಲ್ಲಿ ಯಾಗದ ಕುದುರೆಯು ಅನೇಕ ದೇಶಗಳಲ್ಲಿ ಸಂಚರಿಸಿ ಬಂದದ್ದು, ಮಧ್ಯೆ ಮಧ್ಯೆ ಲವಕುಶರು ಬೇರೆ ಬೇರೆ ದೇಶಗಳ ರಾಜರೊಡನೆ ಇದರ ಸಂಬಂಧವಾಗಿ ಯುದ್ಧ ಮಾಡಿದ್ದು ಮುಂತಾದ ವಿಷಯಗಳು ಬರುತ್ತವೆ. ಕಥೆಯು ಸುಖಾಂತ್ಯವಾಗುತ್ತದೆ. ಪದ್ಮಪುರಾಣದಲ್ಲಿ ಭರತನ ಮಗ ಪುಷ್ಕಲನು ಕುದುರೆಯ ಹಿಂದೆ ಹೋಗುತ್ತಾನೆ. ಅವನ ಜೊತೆ ಶತ್ರುಘ್ನ, ಹನುಮಂತ, ಸುಗ್ರೀವ ಮೊದಲಾದವರೂ ಇರುತ್ತಾರೆ. ಲವಕುಶರ ವಯಸ್ಸು ಹದಿನಾರು. ಕುಶನು ಮಹಾಕಾಲಪುರದಿಂದ ಬರುತ್ತಾನೆ. ರಾಮನು ಯುದ್ಧರಂಗಕ್ಕೆ ಹೋಗುವುದಿಲ್ಲ. ಅವನು ತನ್ನ ಮಕ್ಕಳನ್ನು ನೋಡುವುದು ಅಯೋಧ್ಯೆಯಲ್ಲಿ.

ಭವಭೂತಿಯು ವಾಸಿಸುತ್ತಿದ್ದ ಜಾಗ ಮತ್ತು ಇದ್ದ ಕಾಲದಲ್ಲಿ ವಾಲ್ಮೀಕಿ ರಾಮಾಯಣದ ಯಾವ ಯಾವ ಆನುಪೂರ್ವಿಗಳು ಇದ್ದುವು, ಅವುಗಳಲ್ಲಿ ಯಾವುದನ್ನು ಹೇಗೆ ಭವಭೂತಿಯು ಉಪಯೋಗಿಸಿಕೊಂಡಿದ್ದಾನೆ ಎನ್ನುವುದೂ ಸರಿಯಾಗಿ ತಿಳಿಯುವುದಿಲ್ಲ. ಆದರೂ ವಾಲ್ಮೀಕಿಕೃತ ಮೂಲರಾಮಾಯಣವನ್ನೇ ಆಧಾರ ಮಾಡಿಕೊಂಡು ಭಾಸನಂತೆ ಯಥೇಚ್ಛವಾಗಿ ಬದಲಾವಣೆ ಮಾಡಿಕೊಂಡು ಕಥಾಹಂದರವನ್ನು ಹೆಣೆದಿದ್ದಾನೆ ಎಂದು ಹೇಳಬಹುದು. ಮುಖ್ಯವಾದ ಕೆಲವು ಘಟನೆಗಳನ್ನು ಕೆಲವು ಪಾತ್ರಗಳನ್ನು ಬಿಟ್ಟರೆ, ಉಳಿದವೆಲ್ಲಾ ಹೊಸದಾದದ್ದೇ ಆಗಿವೆ. ಕಥೆ ಹಳೆಯದು, ಕಲೆಯು ಹೊಸದು. ಉತ್ತರರಾಮಚರಿತೆಯ ಮೊದಲನೆಯ ಅಂಕದ ಕಥೆ ಸೀತಾಪರಿತ್ಯಾಗ. ಆದರೆ ಅದು ಪೂರ್ತಿ ಕವಿಕಲ್ಪಿತವಾದ ಸನ್ನಿವೇಶ.

ಅಯೋಧ್ಯೆಯ ಅರಮನೆಯಲ್ಲಿ ಗುರುಹಿರಿಯರಿಲ್ಲದ ಕಾಲದಲ್ಲಿ ರಾಮನು ಸೀತೆಯನ್ನು ತೊರೆಯುತ್ತಾನೆ. ಅವರೆಲ್ಲ ಮನೆಯಲ್ಲಿದ್ದಿದ್ದರೆ ಈ ದುರಂತವನ್ನು ನಡೆಯಲು ಬಿಡುತ್ತಿರಲಿಲ್ಲವೇನೋ, ಪ್ರಜಾರಂಜನೆ, ಲೋಕಪಾಲನೆಯು ರಾಜನು ಮಾಡಬೇಕಾದ ವ್ರತ. ದಶರಥನು ಅದನ್ನು ರಾಮನಿಗೆ ವಹಿಸಿಕೊಟ್ಟು ತಾನು ಪ್ರಾಣಬಿಟ್ಟನು. ಅಂಥವನ ಮಗ ರಾಮನ ಪಟ್ಟಾಭಿಷೇಕವಾದ ಕೂಡಲೇ ಎಲ್ಲ ಕಡೆ ಅಪವಾದ ವಿಷಯವು ಹುಚ್ಚುನಾಯಿಯ ವಿಷದಂತೆ ಹರಡುತ್ತದೆ.

“ರಾಮ :– (ಸಮಾಧಾನದಿಂದ)

**ಹಾ ಹಾ ಧಿಕ್ ಪರಗೃಹವಾಸದೂಷಣಂ ಯದ್–**  
**ವೈದೇಹ್ಯಾಃ ಪ್ರಶಮಿತಮದ್ಭುತೈರುಪಾಯೈಃ ।**  
**ಏತತ್ತತ್ಪುನರಪಿ ದೈವದುರ್ವಿಪಾಕಾ–**  
**ದಾಲರ್ಕಂ ವಿಷಮಿವ ಸರ್ವತಃ ಪ್ರಸುಪ್ತಮ್ ॥**  
(ಉತ್ತರರಾಮಚರಿತ, 1.40)

ಮಂಗಳಕಾರ್ಯಗಳಿಂದ ಮರೆಯಾಗಿದ್ದ, ಸೀತೆಯ ಪರಪುರುಷ ಗೃಹವಾಸವೆಂಬ ಅಪವಾದವು, ದುರ್ದೈವದಿಂದ ಈಗ ಹುಚ್ಚುನಾಯಿ ಕಡಿದ ವಿಷವು ದೇಹವನ್ನೆಲ್ಲಾ ವ್ಯಾಪಿಸುವಂತೆ, ಎಲ್ಲೆಡೆ ಹರಡಿದೆಯಲ್ಲಾ ಎಂತಹ ಪರಿಸ್ಥಿತಿ ಇದು ಎಂದು ರಾಮನು ದುಃಖಿಸುವನು. ಆದರೆ ಈ ಲೋಕಾಪವಾದವನ್ನು ಉಪೇಕ್ಷೆ ಮಾಡುವಂತಿಲ್ಲ. ಏಕೆಂದರೆ ವಸಿಷ್ಠರು ಆಗ ತಾನೇ ರಾಮನಿಗೆ,

**ಜಾಮಾತೃಯಜ್ಞೇನ ವಯಂ ನಿರುದ್ಧಾಃ**  
**ತ್ವಂ ಬಾಲ! ಏವಾಸಿ ನವಂ ಚ ರಾಜ್ಯಮ್ ।**  
**ಯುಕ್ತಃ ಪ್ರಜಾನಾಮನುರಂಜನೇ ಸ್ಯಾ–**  
**ಸ್ತಸ್ಮಾದ್ಯಶೋ ಯತ್ಪರಮಂ ಧನಂ ವಃ ॥** (ಉತ್ತರರಾಮಚರಿತ, 1.11)

ನಮ್ಮ ಮನೆ ಅಳಿಯ ಋಷ್ಯಶೃಂಗನ ಯಾಗಕ್ಕಾಗಿ ನಾವು ಇಲ್ಲಿ ಬಂದಿದ್ದೇವೆ. ಆದರೆ ನೀನು ಈಗ ತಾನೇ ರಾಜನಾಗಿದ್ದೀಯೆ. ವಯಸ್ಸು ಚಿಕ್ಕದು. ಪ್ರಜಾಪರಿಪಾಲನೆಯೇ ನಿನ್ನ ಮುಖ್ಯ ಕರ್ತವ್ಯ. ಅದರಿಂದಲೇ ನಿನಗೆ ಕೀರ್ತಿ. ನಮಗೆ ಪರಮಸಂಪತ್ತು. ಹಾಗಾಗಿ

ಪ್ರಜಾಪರಿಪಾಲನೆಯಲ್ಲಿ ಎಚ್ಚರ ತಪ್ಪಬೇಡ ಎಂದು ಸಂದೇಶ ಕಳುಹಿಸಿದ್ದರು. ಆಗ ರಾಮನು ವಸಿಷ್ಠರು ಆದೇಶಿಸಿದಂತೆ, ನಾನು

**ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿ ವಾ ಜಾನಕೀಮಪಿ ।**
**ಆರಾಧನಾಯ ಲೋಕಸ್ಯ ಮುಂಚತೋ ನಾಸ್ತಿ ಮೇ ವ್ಯಥಾ ॥**
(ಉತ್ತರರಾಮಚರಿತ, 1.12)

ಲೋಕದಲ್ಲಿರುವ ಜನರ ಸಂತೋಷಕ್ಕಾಗಿ ನನ್ನ ಮನದಾಳದಲ್ಲಿರುವ ಸ್ನೇಹವನ್ನು, ಕರುಣೆಯನ್ನು, ನನ್ನ ಸುಖವನ್ನು, ಅಷ್ಟೇಕೆ ಸೀತೆಯನ್ನೂ ಸಹ ಬೇಕಾದರೆ ಬಿಡುತ್ತೇನೆ. ಇದರಿಂದ ನನಗೆ ಯಾವ ಕೊರಗೂ ಇಲ್ಲ, ಎಂದು ಪ್ರತ್ಯುತ್ತರವನ್ನು ಕಳುಹಿಸಿರುತ್ತಾನೆ. ದೇಶದ ಪ್ರಜಾಜನರ ಬಗ್ಗೆ ರಾಮನಿಗೆ ಗೌರವವಿತ್ತು, ಪ್ರೀತಿಯಿತ್ತು, ನಂಬಿಕೆ ಇತ್ತು. ಗೂಢಚಾರ ದುರ್ಮುಖನು ಸೀತಾರಾಮರ ಬಗ್ಗೆ ಅಪವಾದ ಮಾತುಗಳನ್ನಾಡಿದ ಜನರನ್ನು ದುಷ್ಟರು ಎಂದು ಹೇಳಿದಾಗ ರಾಮನು ಅದನ್ನು ಒಪ್ಪದೆ –

**ಇಕ್ಷ್ವಾಕುವಂಶೋಽಭಿಮತಃ ಪ್ರಜಾನಾಂ**
**ಜಾತಂ ಚ ದೈವಾದ್ರಚನೀಯಬೀಜಮ್ ।**
**ಯಚ್ಚಾದ್ಭುತಂ ಕರ್ಮ ವಿಶುದ್ಧಿಕಾಲೇ**
**ಪ್ರತ್ಯೇತು ಕಸ್ತದ್ಯದಿ ದೂರವೃತ್ತಮ್ ॥** (ಉತ್ತರರಾಮಚರಿತ, 1.44)

ಪ್ರಜೆಗಳಿಗೆ ನಮ್ಮ ಇಕ್ಷ್ವಾಕುವಂಶವು ಇಷ್ಟವಾಗಿದೆ. ಲೋಕಾಪವಾದವು ದೌರ್ಭಾಗ್ಯದಿಂದ ಮೇಲೆದ್ದಿದೆ ಅಷ್ಟೆ. ಸೀತೆಯ ಅಗ್ನಿಪ್ರವೇಶ ಪರೀಕ್ಷೆ ನಡೆದುದು ಲಂಕೆಯಲ್ಲಿ. ಅದನ್ನು ನೋಡದ, ಕೇಳದ ಅಯೋಧ್ಯೆಯ ಜನರು ಅದನ್ನು ಹೇಗೆ ನಂಬುತ್ತಾರೆ ಎಂದು ಪ್ರಜೆಗಳ ಪರವಾಗಿಯೇ ಮಾತನಾಡುತ್ತಾನೆ.

ಹಾಗಂದ ಮಾತ್ರಕ್ಕೆ ರಾಮನು ಜಾನಕಿಯನ್ನು ಕೊಳೆತ ಹಣ್ಣನ್ನು ಬಿಸಾಡುವಂತೆ ಹೊರಗೆಸೆಯಲೂ ಆಗುವುದಿಲ್ಲ. ಸಿದ್ಧನೂ ಇಲ್ಲ. ಸೀತೆಯು ದಿನ ತುಂಬಿದ ಬಸುರಿ; ತನಗೆ ಮನೋವಲ್ಲಭೆ, ತನ್ನ ಜೊತೆಯಲ್ಲೇ ಕಾಡಿನಲ್ಲಿ ಅಲೆದಾಡಿದವಳು. ರಾಕ್ಷಸರ ಕೈಗೆ ಸಿಕ್ಕಿ ಕಡೆಯ ತನಕ ಸಂಕಟಪಡುತ್ತಾ ತನ್ನ ಬಗ್ಗೆಯೇ ಸದಾ ಯೋಚನೆ ಮಾಡುತ್ತಿದ್ದವಳು. ಈಗ ಚಿತ್ರಗಳನ್ನು ನೋಡ ನೋಡುತ್ತಲೇ ಆಯಾಸಗೊಂಡು ನನ್ನ ಎದೆಗೆ ಒರಗಿ ನಿದ್ದೆ ಮಾಡಿದ್ದಾಳೆ ಎನ್ನುವುದನ್ನು ಪ್ರತ್ಯಕ್ಷ ಕಂಡಿದ್ದಾನೆ ರಾಮ. ಆಗ ರಾಮನು ಹೇಳುವ ಮಾತಿದು –

**ಇಯಂ ಗೇಹೇ ಲಕ್ಷ್ಮೀರಿಯಮಮೃತವರ್ತಿರ್ನಯನಯೋಃ**
**ಅಸಾವಸ್ಯಾಃ ಸ್ಪರ್ಶಃ ವಪುಷಿ ಬಹುಲಶ್ಚಂದನರಸಃ ।**
**ಅಯಂ ಬಾಹುಃ ಕಂಠೇ ಶಿಶಿರಮಸೃಣೋ ಮೌಕ್ತಿಕಸರಃ**
**ಕಿಮಸ್ಯಾ ನ ಪ್ರೇಯೋ ಯದಿ ಪರಮಸಹ್ಯಸ್ತು ವಿರಹಃ ॥**
(ಉತ್ತರರಾಮಚರಿತ, 1.38)

ಇವಳು ನನ್ನ ಗೃಹಲಕ್ಷ್ಮಿ. ಇವಳು ನನ್ನ ಎರಡು ಕಣ್ಣುಗಳಿಗೆ ಅಮೃತದ ಬತ್ತಿಯಾಗಿದ್ದಾಳೆ. ನನ್ನ ದೇಹಕ್ಕೆ ಇವಳ ಮೃದುವಾದ ಸ್ಪರ್ಶವು, ಶ್ರೀಗಂಧದ ರಸಲೇಪನದಂತೆ ಆನಂದ ನೀಡುತ್ತಿದೆ. ನನ್ನ ಕೊರಳನ್ನು ತಬ್ಬಿ ಹಿಡಿದಿರುವ ಇವಳ ಕೋಮಲವಾದ ಕೈ ತಂಪನ್ನೆರೆಯುವ ಕೋಮಲವಾದ ಮುತ್ತಿನ ಸರದಂತಿದೆ. ಇಂತಹ ಈ ನನ್ನ ಮನದನ್ನೆಯ ವಿರಹವನ್ನು ಇನ್ನು ನಾನೆಂದೂ ಸಹಿಸಲಾರೆ' ಎಂದು ಹೇಳುತ್ತಿದ್ದಂತೆ, ಗುಪ್ತಚರ ದುರ್ಮುಖನು ಬಂದು ಲೋಕಾಪವಾದ ವಿಷಯವನ್ನು ರಾಮನಿಗೆ ಹೇಳುತ್ತಾನೆ. ಆಗ ರಾಮನ ಮನಸ್ಸಿಗೆ ಹೇಗಾಗಿರಬೇಕು? ಇದನ್ನು ಕೇಳಿದ ರಾಮನು ಪ್ರಜ್ಞೆ ತಪ್ಪುತ್ತಾನೆ. ನಂತರ ಎಚ್ಚರಗೊಂಡು "ಭಾಗ್ಯಹೀನನಾದ ನಾನು ಈಗ ಏನು ಮಾಡಲಿ? ಎಂದು ಕೊರಗುತ್ತಾನೆ. ಈಗ ಅವನಿಗೆ ಧರ್ಮಸಂಕಟ. ಪತಿಯಾಗಿ ಸೀತೆಯನ್ನು ಬಿಡದಿದ್ದರೆ ರಾಜಧರ್ಮ ಹಾಳಾಗುತ್ತಿತ್ತು. ಪ್ರಜಾಧರ್ಮವನ್ನು ಒಪ್ಪಿದರೆ ಪತಿಧರ್ಮವು ನಾಶವಾಗುತ್ತಿತ್ತು. ಈ ಮನಸ್ಸಿನ ದೋಲಾಯಮಾನ ಸ್ಥಿತಿ ಒಂದು ಕ್ಷಣ ಮಾತ್ರ. ಆಮೇಲೆ ರಾಮನು ತನ್ನ ಪ್ರಜಾಧರ್ಮ, ಕುಲಗೌರವ, ರಾಜನ ಕರ್ತವ್ಯಗಳನ್ನು ನೆನೆದು ಕೂಡಲೇ ಸೀತೆಯನ್ನು ತ್ಯಾಗ ಮಾಡಲು ಸಿದ್ಧನಾಗುತ್ತಾನೆ. ಮನೆಯಲ್ಲೇ ಸಾಕಿದ ಹೆಣ್ಣುಹಕ್ಕಿಯನ್ನು ಕಟುಕನಿಗೆ ಕೊಟ್ಟಂತೆ ಆಯಿತು, ಸೀತೆಯನ್ನು ಬಿಡುತ್ತಿರುವುದು –

**ಶೈಶವಾತ್ಪ್ರಭೃತಿಪೋಷಿತಾಂ ಪ್ರಿಯೈಃ**
**ಸೌಹೃದಾದಪೃಥಗಾಶ್ರಯಾಮಿಮಾಮ್ ।**
**ಛದ್ಮನಾ ಪರಿದದಾಮಿ ಮೃತ್ಯವೇ**
**ಶೌನಿಕೋ ಗೃಹಶಕುಂತಿಕಾಮಿವ ॥** (ಉತ್ತರರಾಮಚರಿತ, 1.45)

ಎಂದು ಮರುಗುತ್ತಾನೆ. ಆದರೂ ಧೈರ್ಯದಿಂದ ಅವಳನ್ನು ಕಾಡು ಪಾಲು ಮಾಡಲು ನಿಶ್ಚಯಿಸುತ್ತಾನೆ. ಇದರಿಂದ ನಾನು ದೊಡ್ಡದಾದುದನ್ನು ಸಾಧಿಸಿ ಬಿಟ್ಟೆ ಎಂದು ರಾಮನು ಭಾವಿಸುವುದಿಲ್ಲ. ಬದಲಾಗಿ ಸೀತೆಯನ್ನು ಬಿಡುತ್ತಿರುವುದರಿಂದ ನಾನು ಅಸ್ಪೃಶ್ಯನಾದ ಪಾಪಿಯಾದೆ. ಹಾಗಾಗಿ ಪ್ರಿಯಳಾದ ದೇವಿ ಸೀತೆಯನ್ನು ಮುಟ್ಟಿ ಅವಳನ್ನೇಕೆ ಮೈಲಿಗೆ ಮಾಡಲಿ" ಎಂದು ತನ್ನನ್ನೇ ಬೈದುಕೊಳ್ಳುತ್ತಾಳೆ. ಕಡೆಗೆ ಅವಳನ್ನು ಮೆಲ್ಲಗೆ ನೆಲದ ಮೇಲೆ ಮಲಗಿಸುತ್ತಾನೆ. ನಾನು 'ಅಪೂರ್ವ ಕರ್ಮಚಂಡಾಲ, ದುಷ್ಟ, ಕರುಣಾಹೀನ' ಎಂದೆಲ್ಲ ತನ್ನನ್ನು ಬೈದುಕೊಳ್ಳುತ್ತಾನೆ. ಇಲ್ಲಿ ರಾಜಧರ್ಮವು ಮೇಲಾದರೂ ಪತಿಧರ್ಮವು ದೂರವಾಗಲಿಲ್ಲ. ಪ್ರೇಮವು ಅಡಗಲಿಲ್ಲ. ಮುಂದೆ ಬರಲಿರುವುದನ್ನು ಆಗಲೇ ಅನುಭವಿಸಿದೆನೇನೋ ಏನೋ ಎಂಬಂತೆ ಮಲಗಿದ್ದ ಸೀತೆ **'ಆರ್ಯಪುತ್ರ, ರಾಮ, ಎಲ್ಲಿದ್ದೀಯೋ'** ಎಂದು ಕನವರಿಸುತ್ತಾಳೆ. ಆದರೂ ಇನ್ನು ಕೆಲವೇ ಕ್ಷಣಗಳಲ್ಲಿ ಮುಂದೆ ದುರಂತವು ತನಗೆ ಬರಲಿದೆ ಎನ್ನುವುದನ್ನು ಅವಳು ತಿಳಿಯದಾಗಿದ್ದಳು. ಋಷ್ಯಾಶ್ರಮಕ್ಕೆ ಹೋಗಿ ಋಷಿಪತ್ನಿಯರಿಗೆ ಬಾಗಿನ ಕೊಡಬೇಕು ಎನ್ನುವ ನೆಪವನ್ನೇ ಮುಂದೆ ಮಾಡಿ ರಾಮನು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರಲು ಭರತ, ಶತ್ರುಘ್ನ, ಹನುಮಂತರಿಗೆ ಹೇಳುತ್ತಾನೆ. ಆದರೆ ಅವರು ಒಪ್ಪುವುದಿಲ್ಲ. ಕಡೆಗೆ ಲಕ್ಷ್ಮಣನು ವಿಧಿಯಿಲ್ಲದೆ ರಾಮಾಜ್ಞೆಯಂತೆ ಸೀತೆಯನ್ನು ಕಾಡಿಗೆ ಕರೆದೊಯ್ಯುತ್ತಾನೆ. ರಾಮನು ಸೀತೆಗೆ ಚಿತ್ರದರ್ಶನ ಮಾಡಿಸುತ್ತಿರುವಾಗ ವಿಶ್ವಾಮಿತ್ರರು ಜೃಂಭಕಾಸ್ತ್ರಗಳನ್ನು ಉಪದೇಶಿಸಿದ ಚಿತ್ರವನ್ನು ತೋರಿಸುತ್ತಾ, ಸೀತೆ ಮುಂದೆ ನಿನಗೆ ಹುಟ್ಟಲಿರುವ ಮಕ್ಕಳೂ ಸಹ ಈ ಅಸ್ತ್ರಗಳನ್ನು ಅರಿಯಲಿ ಎಂದು ಹೇಳುತ್ತಾನೆ. ಈ ಮಾತೇ ಮುಂದೆ ಲವಕುಶರು ಹುಟ್ಟಿ ದಿವ್ಯಾಸ್ತ್ರಗಳನ್ನು ಕಲಿತುದಕ್ಕೆ ಮುನ್ಸೂಚನೆಯಾಗಿದೆ. ಗಂಗಾನದಿಯನ್ನು ಚಿತ್ರದಲ್ಲಿ ನೋಡಿದಾಗ ರಾಮನು **'ಸಾ ತ್ವಮಂಬ ಸ್ನುಷಾಯಾಮ್ ಅರುಂಧತೀವ ಸೀತಾಯಾಂ ಶಿವಾನುಧ್ಯಾನಾ ಭವ'** (ಉತ್ತರರಾಮಚರಿತ, 1.23) "ಅಮ್ಮ, ವಧೂ ಸೀತೆಯಲ್ಲಿ ಅರುಂಧತಿಯು ಮಂಗಳವನ್ನು ಬಯಸಿದಂತೆ, ನೀನೂ ಸೀತೆಗೆ ಮಂಗಳವನ್ನು ಕೋರು" ಎಂದು ಹೇಳುತ್ತಾನೆ.

ಸೀತೆಯನ್ನು ಬಿಡುವ ಕಾಲದಲ್ಲಿ **'ಭಗವತಿ ವಸುಂಧರೇ! ಸುಶ್ಲಾಘ್ಯಾಂ ದುಹಿತರಮವೇಕ್ಷಸ್ವ ಜಾನಕೀಮ್'** (ಉತ್ತರರಾಮಚರಿತ, 1.50) 'ತಾಯಿ, ಭೂದೇವಿ, ಪ್ರಶಂಸನೀಯಳಾದ ನಿನ್ನ ಮಗಳು ಸೀತೆಯನ್ನು ನೀನು ನೋಡಿಕೋ' ಎಂದು ಹೇಳುತ್ತಾನೆ. ಈ ಮಾತುಗಳು ಗಂಗೆ-ಭೂದೇವಿಯರಿಗೆ ಕೇಳಿಸಿರಬೇಕೇನೋ? ಮುಂದೆ ಇವರಿಬ್ಬರೂ ಸೀತೆಯನ್ನು ಕಾಪಾಡಲು ಮುಂದಾಗುತ್ತಾರೆ. ಸೀತಾರಾಮಲವಕುಶರ ಸಮಾಗಮ ಕಾಲದಲ್ಲಿ ಈ ಮಾತನ್ನು ಕವಿಯು ನೆನಪಿಸುತ್ತಾನೆ. ಹೀಗೆ ಮುಂದೆ ನಡೆಯುವ ಕಥೆಯ ಹಂದರಗಳು ಮೊದಲೇ ಇಲ್ಲಿ ನಾಟಕದಲ್ಲಿ ಹೆಣೆದುಕೊಂಡಿವೆ. ಚಿತ್ರದರ್ಶನದ ನೆಪದಲ್ಲಿ ಕವಿ ಭವಭೂತಿಯು ರಾಮಾಯಣದ ಕಥೆಯನ್ನು ಸಂಗ್ರಹವಾಗಿ ಹೇಳಿಬಿಟ್ಟಿದ್ದಾನೆ. ಚಿತ್ರದರ್ಶನ ಪ್ರಸಂಗವು ಈ ನಾಟಕದ ಮೂಲಕ್ಷೇತ್ರವಾದರೆ, ಅಷ್ಟಾವಕ್ರ ಪಾತ್ರದ ಪ್ರವೇಶವು ಬೀಜಬಿತ್ತನೆಯ ಕಾರ್ಯವಾಗಿದೆ. ಗೂಢಚಾರ ದುರ್ಮುಖನ ರಹಸ್ಯ ವರದಿಯಿಂದು ರಾಮನ ಮುಂದೆ ಬಂದು ಇದು ಮೊಳಕೆಯೊಡೆಯುತ್ತದೆ. ಮುಂದೆ ಅದು ಹೆಮ್ಮರವಾಗಿ ಬೆಳೆದು ಕರುಣವೆಂಬ ಹಣ್ಣನ್ನು ಬಿಡುತ್ತದೆ.

ಪ್ರೇಯಸಿ ಸೀತೆಯ ದರ್ಶನ, ಸ್ಪರ್ಶಗಳು ರಾಮನ ಮನದಲ್ಲಿ ಮಧುರ ಶೃಂಗಾರಭಾವಗಳನ್ನು ಮೂಡಿಸುತ್ತವೆ. ಬಹುಕಾಲದ ವಿರಹದ ನಂತರ ಸಿಕ್ಕಿದ ಗಂಡ-ಹೆಂಡಿರ ಮಿಲನವಿದು. ಈ ಸಂತೋಷದ ಸಮಯದಲ್ಲೇ ಬಂದ ದುರ್ಮುಖನ ರಹಸ್ಯ ಸುದ್ದಿ ರಾಮನ ಹೃದಯಕ್ಕೆ ಸಿಡಿಲಿನಂತೆ ಎರಗುತ್ತದೆ. ಸಾಕಿದ ಹಕ್ಕಿಯನ್ನು ಕಟುಕನಿಗೆ ಒಪ್ಪಿಸುವಂತೆ ಈಗ ರಾಮನು ತನ್ನ ಮನೋವಲ್ಲಭೆ ಸೀತೆಯನ್ನು ಕಾಡಿಗೆ ಅಟ್ಟಬೇಕಾಗಿದೆ. ಹಿಂದೆ ಯಾರೂ ಮಾಡದ ಕೆಟ್ಟ ಕೆಲಸವನ್ನು ಮಾಡಿದ ಚಾಂಡಾಲ ನಾನು, ಕಟುಕ ನಾನು ಎಂದು ತನ್ನನ್ನು ಬೈಯ್ದು ಕೊಳ್ಳುತ್ತಿರುವಾಗಲೇ ಮುನಿಗಳು ಬಂದು ಲವಣಾಸುರನಿಂದ ಆಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತಾರೆ. ಇದರಿಂದ ರಾಮನು ಕೋಪಗೊಳ್ಳುತ್ತಾನೆ. ಅರೆಗಳಿಗೆಯಲ್ಲಿ ಮಿಂಚಿನ ವೇಗದಿಂದ ರಾಮನ

ಮನದಲ್ಲಿ ಏಕಕಾಲಕ್ಕೆ ಸುಖ, ದುಃಖ, ಕೋಪಗಳು ಚಿಲುಮೆಯಂತೆ ಹೊರಚಿಮ್ಮುತ್ತವೆ. ಸುಖವನ್ನು ದುಃಖವೂ, ದುಃಖವನ್ನು ಕೋಪವೂ ಮೆಟ್ಟಿನಿಲ್ಲುತ್ತವೆ.

ವಾಲ್ಮೀಕಿ ರಾಮಾಯಣದಲ್ಲಿ ಬೇಡನು ಕ್ರೌಂಚ ಹಕ್ಕಿಯನ್ನು ಕೊಲ್ಲುವುದನ್ನು ನೋಡಿದ ವಾಲ್ಮೀಕಿಯ ಮನದಿಂದ ಶೋಕವು ಮುಂದೆ ಹೇಗೆ ಶ್ಲೋಕವಾಯಿತೋ ಹಾಗೆಯೇ ಸೀತಾಪರಿತ್ಯಾಗದ ಪ್ರಸಂಗದಿಂದ ಭವಭೂತಿಯ ಹೃದಯದಲ್ಲಿ ಮೂಡಿದ ದುಃಖದ ಫಲವೇ ಈ **'ಉತ್ತರರಾಮಚರಿತ'** ನಾಟಕದ ರಚನೆಗೆ ಮುನ್ನುಡಿಯಾಗಿದೆ. ಒಂಭತ್ತು ರಸಗಳಲ್ಲೆಲ್ಲಾ ಕರುಣರಸವೇ ಸರ್ವಶ್ರೇಷ್ಠವೆಂದು ಭವಭೂತಿಗೆ ಅನ್ನಿಸಿತು. ಅದನ್ನೇ ಭವಭೂತಿ ಹೇಳುತ್ತಾನೆ –

**ಏಕೋ ರಸಃ ಕರುಣ ಏವ ನಿಮಿತ್ತಭೇದಾ–**
**ದ್ಭಿನ್ನಃ ಪೃಥಕ್ಪೃಥಗಿವ ಶ್ರಯತೇ ವಿವರ್ತಾನ್ ।**
**ಆವರ್ತಬುದ್ಬುದತರಂಗಮಯಾನ್ ವಿಕಾರಾನ್**
**ಅಂಭೋ ಯಥಾ ಸಲಿಲಮೇವ ಹಿ ತತ್ಸಮಸ್ತಮ್ ॥**
(ಉತ್ತರರಾಮಚರಿತ, 3.47)

ಸಮುದ್ರ ಅಥವಾ ನದಿಯಲ್ಲಿರುವ ಒಂದೇ ನೀರು ಸುಳಿಯಾಗಿ, ಗುಳ್ಳೆಯಾಗಿ, ಅಲೆಯಾಗಿ ಮೇಲೆದ್ದು ಬೇರೆ ಬೇರೆಯಾಗಿ ಕಾಣಿಸಿದರೂ ಅದು ಕಡೆಗೆ ನೀರೇ ಆಗುತ್ತದೋ ಅದರಂತೆ ಕರುಣರಸವೊಂದೇ ನಾಟಕಾದಿಗಳಲ್ಲಿ ಕಾರಣಭೇದಗಳಿಂದ ಶೃಂಗಾರ, ವೀರ, ಹಾಸ್ಯ, ಅದ್ಭುತ, ಭಯಾನಕ, ಬೀಭತ್ಸ, ರೌದ್ರ, ಶಾಂತಗಳೆಂಬ ರಸರೂಪವನ್ನು ಪಡೆಯುತ್ತದೆ. ಕಡೆಗೆ ಕರುಣವೊಂದೇ ಉಳಿಯುತ್ತದೆ ಎಂಬುದನ್ನು ಅರಿತ ಕವಿ ನಾಟಕಕಾರ ಭವಭೂತಿಯು ಕರುಣರಸವೇ ಮುಖ್ಯವಾಗಿರುವ 'ಉತ್ತರ ರಾಮಚರಿತ'ವೆಂಬ ನಾಟಕವನ್ನು ಬರೆದನು. ಇದರಿಂದ ಅಲಂಕಾರಲಕ್ಷಣಕಾರರ ಮೂಲ ನಿಯಮಗಳು ಹಿಂದೆ ಸರಿದು ನಾಟಕದಲ್ಲಿ ಕರುಣರಸಕ್ಕೂ ಪ್ರಾಧಾನ್ಯ ದೊರಕಿತು. ಇದು ಭವಭೂತಿಯ ಶ್ರೇಷ್ಠ ಸಾಧನೆ.

ಈ ಉತ್ತರರಾಮಚರಿತ ನಾಟಕದಲ್ಲಿ ರಾಮ–ಸೀತೆ–ಮಕ್ಕಳನ್ನು ಒಂದುಗೂಡಿಸಲು ಬರುವ ವ್ಯಕ್ತಿಗಳು ತಮಸೆ, ಮುರಲೆ, ಗೋದಾವರಿ, ಭಾಗೀರಥಿ, ವಸುಂಧರೆ, ಸರಯೂ ಮತ್ತು ವಾಸಂತಿಯರು. ಇವರಲ್ಲಿ ಸರಯೂ ಮತ್ತು ವಾಸಂತಿಯರು ರಂಗದ ಮೇಲೆ ಬರುವುದಿಲ್ಲ. ಇವರು ನೇಪಥ್ಯದಲ್ಲೇ ಇದ್ದು ಸಹಾಯ ನೀಡುತ್ತಾರೆ. ವಾಸಂತಿ ವನದೇವತೆ. ವಸುಂಧರೆ ಭೂತಾಯಿ. ಮಿಕ್ಕವರು ನದೀದೇವತೆಗಳು. ಚೇತನಯುತರಾದ ಜನರು, ಸೀತೆಯ ಬಗ್ಗೆ ಉದಾಸೀನರಾಗಿ ತಟಸ್ಥರಾದರೆ, ಅಚೇತನರಾದ ನದಿ, ಕಾಡು, ಭೂಮಿ ಎಲ್ಲವೂ ಕರಗಿ ಕೊರಗುತ್ತವೆ. ಈ ನಾಟಕದಲ್ಲಿ ಇವೆಲ್ಲಾ ಮನುಷ್ಯರಂತೆ ರೂಪ ತಾಳಿ ಓಡಾಡುತ್ತವೆ. ಸುಖದುಃಖಗಳಲ್ಲಿ ಪಾಲ್ಗೊಳ್ಳುತ್ತವೆ.

ಉತ್ತರರಾಮಚರಿತೆಯ ಮೂರನೆಯ ಅಂಕವಂತೂ ಶ್ರೀರಾಮನ ಹೃದಯವಿದ್ರಾವಕ ವಿರಹಸಂತಾಪವನ್ನೇ ಮುಖ್ಯವಾಗಿ ಚಿತ್ರಿಸುತ್ತದೆ. ಅಗಸ್ತ್ಯಮಹರ್ಷಿಗಳ ಹೆಂಡತಿ ಲೋಪಾಮುದ್ರೆಗೆ ರಾಮನ ಭಯಂಕರವಾದ ದುಃಖವು ಅಸಹಾಯಕವಾಗಿ ಅವನು ಪಂಚವಟೀ ಪರಿಸರದಲ್ಲಿ ಬಂದರೆ ಮರಣವನ್ನು ತಂದೀತೇನೋ ಎಂಬ ಹೆದರಿಕೆಯಿದೆ. ಹಾಗಾಗಿಯೇ ಅವಳು ತಂಗಾಳಿಯನ್ನು ಮರೆಯದೆ ಬೀಸುವಂತೆ ನೋಡಿಕೊಳ್ಳಬೇಕೆಂದು ಮೊದಲೇ ನದೀದೇವತೆ ಗೋದಾವರಿಗೆ ಹೇಳಿ ಅಲ್ಲಿಗೆ ಅವಳನ್ನು ಕಳುಹಿಸಿರುತ್ತಾಳೆ. ನದೀದೇವತೆ ಭಾಗೀರಥಿಯೂ ಸಹ ರಾಮನು ಜನಸ್ಥಾನವೆಂಬ ಕಾಡಿಗೆ ಹೋಗುತ್ತಿದ್ದಾನೆ ಎಂದು ತಿಳಿದುಕೊಂಡೇ ಇಲ್ಲಿಯತನಕ ಪಾತಾಳದಲ್ಲಿ ಯಾರಿಗೂ ಗೊತ್ತಿಲ್ಲದಂತಿದ್ದ ಸೀತೆಯನ್ನು ಯಾರಿಗೂ ಕಾಣದಂತೆ ಅದೃಶ್ಯಳಾಗಿದ್ದುಕೊಂಡೇ ವಿರಹಿ ರಾಮನ ಉಪಚಾರ ಮಾಡಬೇಕೆಂದು ಕರೆತಂದಿರುತ್ತಾಳೆ. ಆದರೆ ಈ ವಿಷಯವನ್ನು ಸೀತೆಗೆ ಹೇಳಿಲ್ಲ. ಬದಲಾಗಿ ಕುಶಲವರ ಮಂಗಳ ಕರ್ಮಗಳ ಅಂಗವಾಗಿ ಸೂರ್ಯೋಪಾಸನೆ ಮಾಡಬೇಕೆಂಬ ನೆಪವನ್ನು ಹೇಳಿರುತ್ತಾಳೆ. ರಾಮನ ಹೃದಯಾಂತರಾಳದ ಭಾವಗಳನ್ನು ಸೀತೆ ಅದೃಶ್ಯಳಾಗಿದ್ದೇ ತಿಳಿದುಕೊಂಡರೆ ರಾಮನ ಬಗೆಗಿನ ತಪ್ಪುಕಲ್ಪನೆಗಳು ದೂರವಾಗಿ ಅವಳ ಶೋಕವು ಕಮ್ಮಿಯಾಗ ಬಹುದೆನ್ನುವುದು ಇವಳ ಅಂತರಂಗ ಭಾವನೆ. ಈ ಕಠಿನ ಪರಿಸ್ಥಿತಿಯಲ್ಲಿ ಸೀತೆಯನ್ನು ಉಪಚರಿಸಲು ತಮಸಾನದಿಯನ್ನು ಸಹಾಯಕ್ಕಾಗಿ ಕಳುಹಿಸಿದ್ದಾಳೆ.

ಸೀತೆ ಜನಸ್ಥಾನದಲ್ಲಿ ಹೂಗಳನ್ನು ಕೀಳುತ್ತಿದ್ದಾಳೆ. ಆಗಲೇ ವಾಸಂತಿಯು 'ಕಾಪಾಡಿ', 'ಕಾಪಾಡಿ' ಎಂದು ಕೂಗುತ್ತಾಳೆ. ಸೀತೆ ಸಾಕಿದ್ದ ಆನೆಮರಿಯು ದೊಡ್ಡದಾಗಿ ಹೆಣ್ಣಾನೆಯೊಡನೆ ಸರಸವಾಡುತ್ತಿರುವಾಗಲೇ ಮದಿಸಿದ ಆನೆಯೊಂದು ಅದನ್ನು ಕೊಲ್ಲಲು ಬಂದಿದೆ. ರಾಮನು ಸೀತೆ ಸಾಕಿದ್ದ ಆನೆಯನ್ನು ಕಾಪಾಡಬೇಕೆಂದು ಬರುವುದಕ್ಕೆ ಮುಂಚೆಯೇ ಅದು ಮದಿಸಿದ ಆನೆಯನ್ನು ಸೋಲಿಸಿಯಾಗಿದೆ. ಸೀತೆಯು ತಾನು ಸಾಕಿದ ಆನೆಯನ್ನು ಕಂಡಾಗ ತನ್ನ ಇಬ್ಬರು ಮಕ್ಕಳ ನೆನಪಾಗುತ್ತದೆ. ರಾಮನು ಜನಸ್ಥಾನದಲ್ಲಿನ ಒಂದೊಂದು ಪರಿಚಿತ ಜಾಗವನ್ನು ನೋಡುತ್ತಿದ್ದಾಗಲೂ ಹಿಂದಿನ ಸನ್ನಿವೇಶದ ನೆನಪು ಮೂಡಿ, ದುಃಖಿತನಾಗಿ ಪದೇ ಪದೇ ಮೂರ್ಛಿತನಾಗುತ್ತಾನೆ. ಸೀತೆಯನ್ನು ನೆನೆನೆನೆದು ಅಳುತ್ತಾನೆ. ಅದೃಶ್ಯಳಾಗಿದ್ದ ಸೀತೆ ಪತಿಯ ದುಃಖಾವಸ್ಥೆಯನ್ನು ಕಂಡು, ರಾಮನ ಬಳಿ ಹೋಗಿ ತನ್ನ ಕೈಯಿಂದ ಮೈದಡವಿ ಮೂರ್ಛಿತನಾದ ರಾಮನನ್ನು ಎಚ್ಚರಿಸುತ್ತಾಳೆ. ವಾಸಂತಿಯು ರಾಮನು ಕಲ್ಲುಹೃದಯದವನೆಂದು ಮನನೋಯುವಂತೆ ಮಾತನಾಡಿ, ಇನ್ನಷ್ಟು ಗೋಳಾಡಿಸುತ್ತಾಳೆ. ಈಗ ಸೀತೆಗೆ ರಾಮನು ಎಂತಹವನು, ಅವನಿಗೆ ತನ್ನ ಮೇಲೆ ಎಂತಹ ಪ್ರೀತಿ ಇದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ರಾಮನು ಯಾಗದಲ್ಲೂ ಸೀತೆಯ ಚಿನ್ನದ ಪ್ರತಿಮೆಯನ್ನು ಮಾಡಿಸಿ ತನ್ನ ಪಕ್ಕದಲ್ಲಿಟ್ಟುಕೊಂಡು ಕಾರ್ಯಗಳನ್ನು ಮಾಡಿದುದು ಸೀತೆಯ ಮನಸ್ಸಿಗೆ ಸಮಾಧಾನವನ್ನುಂಟು ಮಾಡುತ್ತದೆ. ಕಡೆಗೆ ರಾಮನು ಅಯೋಧ್ಯೆಗೆ ಹೋದರೆ, ಸೀತೆಯು ಪಾತಾಳಕ್ಕೆ ತೆರಳುತ್ತಾಳೆ. ಈ ಅಂಕದಲ್ಲಿ ರಾಮಸೀತೆಯರಿಬ್ಬರ ಮಧ್ಯೆ ಸೀತೆಯು ಗೋಚರವಾಗದಿರುವುದು ತೆರೆಯಂತೆ ಇದ್ದು ರಾಮನ ವಿರಹತಾಪವನ್ನು ಮತ್ತಷ್ಟು ಹೆಚ್ಚಿಸುತ್ತದೆ. ರಾಮನು ಸೀತೆಯ ಸ್ಪರ್ಶಸುಖವನ್ನು ಅನುಭವಿಸಿದರೂ, ಅವಳನ್ನು ನೋಡಲಾರ, ಅವನು ಇದನ್ನು ಭ್ರಮೆಯೆಂದುಕೊಳ್ಳುತ್ತಾನೆ. ಸೀತೆಯನ್ನು ಕಾಡಿನಲ್ಲಿ ಬಿಟ್ಟ ನಂತರ ರಾಮನ ಶೋಕಕ್ಕೆ ಕೊನೆಯಿಲ್ಲದಂತಾಗಿದೆ. ಇದನ್ನು ಯಾರ ಬಳಿ ಹೇಳಿಕೊಳ್ಳುವುದು, ಅದು ಆಗದೆ ತೊಳಲಾಡುತ್ತಾನೆ. ಮುಂದೆ ಲವಕುಶರು ರಾಮಾಯಣದ ಶ್ಲೋಕಗಳನ್ನು ರಾಗವಾಗಿ ಹಾಡಿದಾಗ, ಸೀತೆಯ ವಿರಹದುಃಖವು ಇನ್ನಷ್ಟು ಮರುಕಳಿಸಿ ಅವನ ಸ್ಥಿತಿ ಚಿಂತಾಜನಕವಾಗುತ್ತದೆ. ಹೀಗೆ, ರಾಮಸೀತೆಯರ ಅಂತರಂಗದ ತೊಳಲಾಟದ ಕರುಣರಸ ಚಿತ್ರಣವನ್ನು ಭವಭೂತಿಯು ಸಹೃದಯರ ಮನಮಿಡಿಯುವಂತೆ ಇಲ್ಲಿ ಚಿತ್ರಿಸಿದ್ದಾನೆ.

### ವಾಲ್ಮೀಕಿಯ ಆಶ್ರಮದಲ್ಲಿನ ಮುಂದಿನ ಘಟನೆಗಳು :

ರಾಮನು ವಾಲ್ಮೀಕಿಯ ಆಶ್ರಮಕ್ಕೆ ಬಂದಾಗ, ಅಲ್ಲಿ ಲವಕುಶರನ್ನು ನೋಡಿ, ಅವರಲ್ಲಿ ತನ್ನ ಮತ್ತು ಸೀತೆಯ ಹೋಲಿಕೆಯನ್ನು ಕಂಡು ಅಚ್ಚರಿಗೊಳ್ಳುತ್ತಾನೆ. ಲವನು, ಚಂದ್ರಕೇತುವಿನ ಮೇಲೆ ಜೃಂಭಕಾಸ್ತ್ರವನ್ನು ಬಿಟ್ಟಾಗ ಇದು ಇವನಿಗೆ ಹೇಗೆ ಸಿದ್ಧಿಸಿತು ಎಂದು ಗೊಂದಲಕ್ಕೊಳಗಾಗುತ್ತಾನೆ. ಇಲ್ಲಿ ಜೃಂಭಕಾಸ್ತ್ರವೇ ಮುಂದೆ ಇವರೆಲ್ಲರನ್ನೂ ಒಂದುಗೂಡಿಸುವುದಕ್ಕೆ ಗುರುತಾಗುತ್ತದೆ.

ನಾಲ್ಕನೆಯ ಅಂಕದಲ್ಲಿ ರಾಮ-ಸೀತೆ-ಕುಶಲವರ ಪುನರ್ಮಿಲನಕ್ಕೆ ಪೋಷಕವಾಗುವಂತೆ, ಜನಕಾದಿಗಳು ರಾಮನ ಲೋಕೋದ್ಧಾರ ಕಾರ್ಯನಿಷ್ಠೆಯನ್ನು ಕಂಡು ಬೇಸರಗೊಳ್ಳುತ್ತಾರೆ. ಇಲ್ಲಿ ಲವಕುಶರ ವರ್ಣನೆಯೂ ಬರುತ್ತದೆ. ಐದನೆಯ ಅಂಕದಲ್ಲಿ ಚಿಕ್ಕ ಹುಡುಗನಾದ ಲವನೂ ಕೂಡ, ತನ್ನ ವೀರಾಟೋಪದ ಭರದಲ್ಲಿ ರಾಮನನ್ನು ತೆಗಳುತ್ತಾನೆ. ರಾಮನ ಪ್ರಜಾನಿಷ್ಠೆ, ರಾಜನ ಕರ್ತವ್ಯನಿಷ್ಠುರತೆಯನ್ನು ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಎಲ್ಲರೂ ತೆಗಳುವವರೇ. ಇದು ಪುನಃ ಸರಿಯಾದ ರೀತಿಯಲ್ಲಿ ತಿಳಿಯದೆ ರಾಮನ ಮನಸ್ಸು ಸಮಾಗಮಕ್ಕೆ ಅನುವಾಗುತ್ತಿರಲಿಲ್ಲ.

ಆರನೆಯ ಪ್ರತ್ಯಭಿಜ್ಞಾನಾಂಕದಲ್ಲಿ ಒಂದೇ ಕ್ಷಣದಲ್ಲಿ ಎಲ್ಲ ಸಮಸ್ಯೆಗಳೂ ಪರಿಹಾರವಾಗುವ ಬದಲು ನಾಟಕೀಯವಾದ ತಿರುವನ್ನು ಪಡೆದುಕೊಳ್ಳುತ್ತವೆ. ರಾಮನ ನಿಷ್ಕಲ್ಮಷವಾದ ದಯಾರ್ದ್ರಹೃದಯವನ್ನು ತಿಳಿದೊಡನೆ, ಅವನು ವಿರಹದ ಬೆಂಕಿಯಿಂದ ಬೆಂದು ಸೊರಗಿ ಹೋಗಿದ್ದ ನೋಟವನ್ನು ನೋಡಿದ ಕೂಡಲೇ ಜನಕ, ಕೌಸಲ್ಯೆ, ವಸಿಷ್ಠ ಮುಂತಾದವರ ಕೋಪವು ತಟ್ಟನೇ ಶಾಂತವಾಗುತ್ತದೆ. ಮಕ್ಕಳ ಉದ್ಧತನಡೆಗಳು ತಮಗೆ ತಾವೇ ಶಾಂತಗೊಳ್ಳುತ್ತವೆ.

**ಗರ್ಭಾಂಕದ ಚಾತುರ್ಯ :**

ಏಳನೆಯ ಅಂಕದಲ್ಲಿ ಭವಭೂತಿಯು ಗರ್ಭನಾಟಕವೆಂಬ ತಂತ್ರವೊಂದನ್ನು ಜೋಡಿಸಿ, ಎಲ್ಲರ ಸಮಾಗಮವನ್ನು ಸುಖದಲ್ಲಿ ಕೊನೆಗಾಣಿಸಿದ್ದಾನೆ. ಇಲ್ಲಿ ರಾಮಸೀತೆಯರ ಪುನಸ್ಸಮಾಗಮಕ್ಕೆ ಮನೆಯವರ, ಬಂಧುಗಳ ಅಭಿಪ್ರಾಯಕ್ಕಿಂತಲೂ, ಪ್ರಜಾಭಿಮತವೇ ಅಡ್ಡಿಯಾಗಿತ್ತು. ಅದನ್ನು ದೂರಮಾಡಿ, ರಾಮಸೀತೆಯರಲ್ಲಿ ವಿಶ್ವಾಸಭಾವವನ್ನು ಮೂಡಿಸುವುದೇ ಭವಭೂತಿಯ ಗುರಿಯಾಗಿತ್ತು. ಅದಕ್ಕಾಗಿಯೇ ನಾಟಕದೊಳಗೆ ಮತ್ತೊಂದು ನಾಟಕವನ್ನು ತಂದು, ತನ್ನ ಗುರಿಯನ್ನು ಸಾಧಿಸಿದ್ದಾನೆ. ಏಳನೆಯ ಅಂಕದ ಕಥಾವಸ್ತು ಹೀಗಿದೆ. ವಾಲ್ಮೀಕಿಮಹರ್ಷಿಗಳು ತಾವೇ ಬರೆದಿದ್ದ ರಾಮಾಯಣನಾಟಕವನ್ನು ಜನರ ಮುಂದೆ ಆಡಿ ತೋರಿಸಲು ನಿಶ್ಚಯಿಸುತ್ತಾರೆ. ಗಂಗಾನದಿಯ ದಡದಲ್ಲಿ ಈ ನಾಟಕವನ್ನು ಆಡಿಸಲು ದೊಡ್ಡದಾದ ರಂಗಮಂಟಪವು ಸಿದ್ಧವಾಗಿದೆ. ಈ ನಾಟಕವನ್ನು ನೋಡಲೆಂದೇ ಅಯೋಧ್ಯೆಯ ಜನರು, ದೇವತೆಗಳು, ಅಸುರರು, ಇತರ ಪಟ್ಟಣಿಗರೆಲ್ಲರೂ ಬರಲೆಂದು ಆಹ್ವಾನ ನೀಡಿದ್ದಾರೆ. ಅದರಂತೆ ಎಲ್ಲರೂ ನೆರೆದಿದ್ದಾರೆ. ರಾಮ, ಲಕ್ಷ್ಮಣ, ಕುಶ, ಲವ, ಚಂದ್ರಕೇತು ಮೊದಲಾದವರೂ ಇದನ್ನು ನೋಡಲು ಬಂದಿದ್ದಾರೆ. ರಾಮನಿಂದ ತ್ಯಜಿಸಲ್ಪಟ್ಟ ತುಂಬಿದ ಬಸುರಿ ಸೀತೆ, ಶೋಕಭರಿತಳಾಗಿ, ಪ್ರಸವವೇದನೆ ತಾಳಲಾರದೆ ಗಂಗಾನದಿಯಲ್ಲಿ ಬೀಳುತ್ತಾಳೆ. ಅಲ್ಲೇ ಎರಡು ಮಕ್ಕಳನ್ನು ಸೀತೆ ಹಡೆಯುತ್ತಾಳೆ. ಆಗ ಸೀತೆಯು ಬೀಳದಂತೆ ಭೂಮಿ, ಗಂಗೆಯರು ಹಿಡಿದುಕೊಂಡು, ಅವಳಿ ಮಕ್ಕಳನ್ನು ಎತ್ತಿಕೊಂಡು ಬರುತ್ತಾರೆ. ಸೀತೆಯ ಗೋಳಾಟವು ಭೂಮಿಯನ್ನೂ ಅಳುವಂತೆ ಮಾಡುತ್ತದೆ. ಆದರೂ ಭೂದೇವಿಯು ತನ್ನ ಮಗಳನ್ನು ಈಗಲೇ ತನ್ನಲ್ಲಿ ಅಡಗಿಸಿಕೊಳ್ಳಲು ಬಯಸುವುದಿಲ್ಲ. ಎರಡು ಮಕ್ಕಳಿಗಾಗಿ ಜೀವ ಹಿಡಿದುಕೊಂಡಿರುವಂತೆ ಭೂತಾಯಿಯು ಸೀತೆಯ ಮನವೊಲಿಸುತ್ತಾಳೆ. ಜನರೆದುರು ಭೂಮಿ–ಗಂಗೆಯರು ಸೀತೆ ಎಲ್ಲರಿಗಿಂತಲೂ ಪಾವನೆಯಾದವಳೆಂದು ಹೇಳುತ್ತಾರೆ. ಆದರೆ ರಾಮನು ಇದನ್ನು ಎಲ್ಲ ಜನರೂ ಒಪ್ಪಬೇಕೆಂದು ಆಶಿಸುತ್ತಾನೆ. ಸೀತೆಯ ಎರಡು ಮಕ್ಕಳಿಗೆ ಜೃಂಭಕಾಸ್ತ್ರವು ಬರುತ್ತದೆ. ಮಕ್ಕಳು ತಾಯಿಯ ಎದೆಹಾಲು ಕುಡಿಯುವುದನ್ನು ಬಿಟ್ಟ ಮೇಲೆ ತಾನೇ ಸೀತೆ–ಮಕ್ಕಳನ್ನು ತಂದು ಬಿಡುವುದಾಗಿ ವಾಲ್ಮೀಕಿಗಳಿಗೆ ಗಂಗೆ ಮಾತುಕೊಡುತ್ತಾಳೆ. ಭೂದೇವಿಯು ಸೀತೆಯನ್ನು ಪಾತಾಳಕ್ಕೆ ಕರೆದೊಯ್ಯುತ್ತಾಳೆ.

ಈ ಸಮಯದಲ್ಲಿ ವಾಲ್ಮೀಕಿಗಳ ತಪಃಪ್ರಭಾವದಿಂದ ಚಮತ್ಕಾರವೊಂದು ನಡೆಯುತ್ತದೆ. ಗಂಗೆ, ಭೂಮಿ, ಸೀತೆಯರು ಈಗ ಪ್ರತ್ಯಕ್ಷವಾಗಿಯೇ ಗಂಗಾನದೀ ನೀರಿನಿಂದ ಮೇಲೆದ್ದು ಬರುತ್ತಾರೆ. ಗಂಗೆ–ಪೃಥ್ವಿಯರು ಸೀತೆಯನ್ನು ಅರುಂಧತಿಗೆ ಒಪ್ಪಿಸುತ್ತಾರೆ. ಆಗ ಅರುಂಧತಿಯು ಪ್ರಜೆಗಳ ಅಭಿಪ್ರಾಯವನ್ನು ನೇರವಾಗಿಯೇ ಕೇಳುತ್ತಾಳೆ. ಆಗ ಎಲ್ಲ ಜನರೂ ಸೀತೆ ಪವಿತ್ರಳೆಂದು ಒಕ್ಕೊರಲಿನಿಂದ ಹೇಳುತ್ತಾರೆ. ಜೊತೆಗೆ ಅವಳನ್ನು ತನ್ನ ಧರ್ಮಪತ್ನಿಯಾಗಿ ಮತ್ತೆ ಸ್ವೀಕರಿಸಬೇಕೆಂದು ರಾಮನಿಗೆ ಅರುಂಧತಿಯು ಹೇಳುತ್ತಾಳೆ. ರಾಮ–ಸೀತೆ–ಲವಕುಶರು ಒಟ್ಟಾಗಿ ಸೇರಿ ಆನಂದಗೊಳ್ಳುತ್ತಾರೆ. ಈ ಸಂತೋಷದ ಶುಭ ಅವಸರದಲ್ಲಿಯೇ ಲವಣಾಸುರನನ್ನು ಕೊಂದ ಶತ್ರುಘ್ನನೂ ಅಲ್ಲಿ ಬಂದು ಸೇರುತ್ತಾನೆ. ಎಲ್ಲರೂ ಸಂತಸದಿಂದ ನಲಿಯುತ್ತಾರೆ.

ಈ ನಾಟಕದಲ್ಲಿ ರಾಮನು, ಪ್ರಜಾಧರ್ಮ, ಗಂಡನ ಧರ್ಮಗಳಲ್ಲಿ ಮೊದಲನೆಯ ಪ್ರಜಾಧರ್ಮವೇ ಮುಖ್ಯವೆಂದು ಭಾವಿಸಿ, ಆಜೀವಪರ್ಯಂತ ದುಃಖಿಯಾಗುತ್ತಾನೆ. ಸೀತೆಯಂತೂ ಅರಣ್ಯವಾಸ, ಅಪಹರಣ, ಲೋಕಾಪವಾದ, ಶ್ರೀರಾಮನಿಂದ ಪರಿತ್ಯಾಗ, ಮಕ್ಕಳ ಅಗಲುವಿಕೆಯಿಂದ ನೊಂದು ಬೆಂದು ಹೋಗಿದ್ದಾಳೆ. ರಾಮಸೀತೆಯರ ಪ್ರೇಮಕ್ಕೆ ಮಾತ್ರ ಎಲ್ಲೂ ಚ್ಯುತಿಯಿಲ್ಲ. ಕಳಂಕವಿಲ್ಲ. ಅದು ನಿಷ್ಕಲ್ಮಷವಾದುದು, ಅಜರಾಮರವಾದುದು. ಸೀತಾಪಹರಣವಾದಾಗ ಸೀತೆಯನ್ನು ಕಾಣದ ರಾಮನ ಸ್ಥಿತಿ

**ಅಥೇದಂ ರಕ್ಷೋಭಿಃ ಕನಕಹರಿಣಚ್ಛದ್ಮವಿಧಿನಾ**
**ತಥಾ ವೃತ್ತಂ ಪಾಪೈರ್ವ್ಯಥಯತಿ ಯಥಾ ಕ್ಷಾಲಿತಮಪಿ ।**
**ಜನಸ್ಥಾನೇ ಶೂನ್ಯೇ ವಿಕಲಕರಣೈರಾರ್ಯಚರಿತೈ–**
**ರಪಿ ಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಮ್ ॥**

(ಉತ್ತರರಾಮಚರಿತೆ, 1.28)

“ಸೀತೆಯನ್ನು ಹುಡುಕುತ್ತಾ ಕಾಡಿನಲ್ಲಿ ಕಂಡ ಕಂಡ ಕಡೆ ಲಕ್ಷ್ಮಣನೊಡನೆ ಅಲೆಯುತ್ತಿರುವ ರಾಮನ ಸ್ಥಿತಿಯನ್ನು ನೋಡಿದಾಗ, ಕಠಿನವಾದ ಕಲ್ಲೂ ಕರಗಿ ಅಳುತ್ತದೆ. ಗಟ್ಟಿಯಾದ ವಜ್ರದ ಹೃದಯವೂ ಬಿರಿಯುತ್ತದೆ” ಎಂದು ಕವಿ ಕರುಣಾಂತರಂಗದಿಂದ ಹೇಳುತ್ತಾನೆ. ರಾಮನಿಗೆ ಆಶ್ರಮದಲ್ಲಿನ ವಾಸದ ಅನುಭವವೂ ಇದೆ. ಸುಖಸಂಸಾರದ ಅನುಭವವೂ ಇದೆ. ಕಾಡಿನಲ್ಲಿದ್ದಾಗಲೂ ರಾಮನೊಡನೆ ಸೀತೆಯಿದ್ದಳು. ಈಗ ಸೀತೆ ಅವನಿಂದ ದೂರವಾಗಿರುವುದು ಅವನ ಕರುಳನ್ನು ಹಿಂಡುತ್ತಿದೆ. ಪ್ರಜಾಪೀಡಕರಾದ ರಾಕ್ಷಸರನ್ನು ಕೊಂದ ರಾಮನು ತಪಸ್ವಿಯಾದ ಶಂಬೂಕನನ್ನು ವಧಿಸಬೇಕಾಗಿದೆ. ಅವನನ್ನು ಕೊಲ್ಲಬೇಕೆಂದು ಕೈಎತ್ತಿದಾಗ ತನ್ನ ಬಲಗೈಗೆ ರಾಮನು ಹೇಳುವ ಮಾತು

**ಹೇ ಹಸ್ತ ದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ**
**ಜೀವಾತವೇ ವಿಸೃಜ ಶೂದ್ರಮುನೌ ಕೃಪಾಣಮ್ ।**
**ರಾಮಸ್ಯ ಬಾಹುರಸಿ! ನಿರ್ಭರಗರ್ಭಖಿನ್ನ-**
**ಸೀತಾವಿವಾಸನಪಟೋಃ ಕರುಣಾ ಕುತಸ್ತೇ ॥**
(ಉತ್ತರರಾಮಚರಿತೆ, 2.10)

ಎಲೈ ಬಲಗೈಯೇ, ನೀನು ಈಗ ಸತ್ತ ಬ್ರಾಹ್ಮಣ ಬಾಲಕನನ್ನು ಬದುಕಿಸಲು, ಶೂದ್ರಮುನಿ ಶಂಬೂಕನನ್ನು ಕೊಲ್ಲಲು ಏಕೆ ಹಿಂಜರಿಯುತ್ತಿರುವೆ? ಕತ್ತಿಯನ್ನು ಬೀಸು, ನೀನು ಪೂರ್ಣಗರ್ಭಿಣಿಯಾದ, ಗರ್ಭವನ್ನು ಹೊತ್ತು ಹಿಂಸೆ ಪಡುತ್ತಿದ್ದ ಸೀತೆಯನ್ನೇ ಬಿಟ್ಟವನಲ್ಲವೇ! ನಿನಗೆಲ್ಲಿದೆ ಕರುಣೆ! ಇದು ರಾಮನ ಅಂತರಂಗದ ತಳಮಳವನ್ನು ಸೂಚಿಸುತ್ತದೆ.

### ಉತ್ತರರಾಮಚರಿತೆಯಲ್ಲಿ ಭವಭೂತಿಯು ಮಾಡಿಕೊಂಡಿರುವ ಬದಲಾವಣೆಗಳು :

ಮೂಲ ವಾಲ್ಮೀಕಿ ರಾಮಾಯಣದ ಪ್ರಶ್ನಾರ್ಹವಾದ ಎಷ್ಟೋ ಸನ್ನಿವೇಶಗಳನ್ನು ತೆಗೆದುಕೊಂಡು ಭವಭೂತಿಯು ಅನೇಕ ಬದಲಾವಣೆಗಳನ್ನು ಉತ್ತರರಾಮಚರಿತ ನಾಟಕದಲ್ಲಿ ಮಾಡಿಕೊಂಡಿದ್ದಾನೆ. ರಾಮಾಯಣದ ಮೊದಲಿನಿಂದ ಕೊನೆಯ ತನಕ, ರಾಮಸೀತೆಯರ ನಿಷ್ಕಲ್ಮಷವಾದ ಪವಿತ್ರವಾದ ಪ್ರೀತಿಯನ್ನು ಬಗೆಬಗೆಯಾಗಿ ಬಣ್ಣಿಸಿದ ವಾಲ್ಮೀಕಿಯು ಉತ್ತರಕಾಂಡದಲ್ಲಿ ಸೀತಾಪರಿತ್ಯಾಗದಿಂದ ಗ್ರಂಥವನ್ನು ಕೊನೆಗಾಣಿಸುವುದಾಗಲಿ ಅಥವಾ ಸೀತೆಯನ್ನು ಭೂಮಿಯು ಬಾಯ್ದೆರೆದು, ತನ್ನೊಳಗೆ ಸೇರಿಸಿಕೊಳ್ಳುವುದಾಗಲಿ ಆದರ್ಶ ಕಾವ್ಯಕ್ಕೆ ಸರಿಯೆನಿಸುವುದಿಲ್ಲವೆನ್ನುವುದು ಭವಭೂತಿಯ ಭಾವನೆ. ಸೀತೆ ನಿಜವಾಗಿಯೂ ಪತಿವ್ರತೆ, ಸಾಧ್ವೀರತ್ನ ಎಂಬುದನ್ನು ಅಗ್ನಿಪರೀಕ್ಷೆಯಿಂದ ನಿಸ್ಸಂಶಯವಾಗಿ ಗೊತ್ತಾದ ಮೇಲೂ ಅವಳನ್ನು ಮತ್ತೆ ಕಾಡಿಗಟ್ಟುವುದು ಆದರ್ಶ ರಾಜನಿಗೆ ತರವಲ್ಲ, ಒಬ್ಬ ಸಾಮಾನ್ಯ ಪ್ರಜೆಯ ಅಕಾಲಮರಣದ ಜವಾಬ್ದಾರಿಯನ್ನು ತಾನೇ ಹೊರುವಂತಹ ಪ್ರಜಾಪಾಲಕ ರಾಮನು, ಪವಿತ್ರಾತ್ಮಳಾದ ಕೈಹಿಡಿದ ಹೆಂಡತಿಗೆ ಅನ್ಯಾಯ ಮಾಡುವುದನ್ನು ಸರಿಯೆಂದು ಹೇಳಲಾದೀತೆ? ತನ್ನ ಕುಟುಂಬವನ್ನೇ ಕಾಪಾಡದವನು ಇನ್ನು ಲೋಕವನ್ನು ಹೇಗೆ ಪಾಲಿಸುವನು? ರಾಮನ ಬುದ್ಧಿಗೆ ಮಂಕು ಕವಿಯಿತೆಂದಿದ್ದರೂ, ಜ್ಞಾನಿಗಳಾದ ಕುಲಪುರೋಹಿತರಾದ ವಸಿಷ್ಠರು ರಾಮನಿಗೆ ಬುದ್ಧಿ ಹೇಳಬಹುದಿತ್ತಲ್ಲವೆ? ಮಹಿಮಾನ್ವಿತಳಾದ ಭೂದೇವಿಯು ತನ್ನ ಮಗಳಿಗಾದ ಅನ್ಯಾಯವನ್ನು ಹೇಗೆ ಸಹಿಸಿಕೊಂಡಳು? ಮಹಾಪತಿವ್ರತೆ ಅರುಂಧತಿದೇವಿಯು ಇದು ಗೊತ್ತಿದ್ದರೂ ಏಕೆ ಏನನ್ನೂ ಹೇಳಲಿಲ್ಲ? ಸೀತೆಯನ್ನು ಕಾಡಿನಲ್ಲಿ ಬಿಟ್ಟ ವಿಷಯ ತಿಳಿದ ಜನಕ ಮಹಾರಾಜನಿಗೆ, ರಾಮನನ್ನು ಶಿಕ್ಷಿಸುವಷ್ಟು ಕೋಪವಾಗಲಿ, ರಾಮಗೆ ತಿಳಿವಳಿಕೆ ಹೇಳಬೇಕೆನ್ನುವ ಜ್ಞಾನವಾಗಲಿ ಏಕೆ ಬರಲಿಲ್ಲ? ಸೀತೆಯ ಇಬ್ಬರು ಮಕ್ಕಳಾದರೂ ಸಹ ತಮ್ಮ ತಾಯಿಗಾದ ಅಪಮಾನವನ್ನು ಹೋಗಲಾಡಿಸಲು ಏಕೆ ಮುಂದಾಗಲಿಲ್ಲ? ಮುಂತಾದ ಅನೇಕ ಪ್ರಶ್ನೆಗಳು ನಮ್ಮ ಮನದಲ್ಲಿ ಏಳುತ್ತವೆ. ಇದನ್ನೆಲ್ಲಾ ಚಿಂತಿಸಿದ ಕವಿ ಭವಭೂತಿಯು ರಾಮ-ಸೀತೆಯರ ಪ್ರೇಮ, ಗುಣಗಳು ಸದಾ ಶುದ್ಧವಾದವುಗಳು ಎನ್ನುವುದನ್ನು ತಿಳಿಸುವುದಕ್ಕಾಗಿಯೇ ತನ್ನ ಉತ್ತರರಾಮಚರಿತ ನಾಟಕದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅವುಗಳೆಂದರೆ –

1. ಚಿತ್ರದರ್ಶನ ವೃತ್ತಾಂತ
2. ಗಂಗಾನದಿಯ ದಡದಲ್ಲಿ ವನರಾಜಿಗಳಲ್ಲಿ ಸುತ್ತಾಡಬೇಕೆಂದು ಸೀತೆಗೆ ಬಯಕೆಯುಂಟಾಗುವುದು.

3. 12 ವರ್ಷಗಳ ಕಾಲ ನಡೆಯುತ್ತಿರುವ ಋಷ್ಯಶೃಂಗನ ಯಾಗಕ್ಕೆ ರಾಮ, ಸೀತೆ, ಲಕ್ಷ್ಮಣ ಇತ್ಯಾದಿ ಕೆಲವರನ್ನು ಬಿಟ್ಟು ಎಲ್ಲರೂ ತುಂಬಿದ ಬಸುರಿ ಸೀತೆ ಒಬ್ಬಳನ್ನೇ ಬಿಟ್ಟು ಹೋಗಿರುವುದು.

4. ರಾಜಸಿಂಹಾಸನದಲ್ಲಿ ಕುಳಿತಿರುವ ನೀನು ಇನ್ನೂ ಬಾಲಕ, ಹಾಗಾಗಿ ಪ್ರಜಾಪರಿಪಾಲನಾ ಕರ್ತವ್ಯದಲ್ಲಿ ಜಾಗರೂಕನಾಗಿರು ಎಂದು ವಸಿಷ್ಠರು ರಾಮನಿಗೆ ಕಳುಹಿಸುವ ಸಂದೇಶ.

5. ರಾಮನಿಂದ ಬಿಡಲ್ಪಟ್ಟ ಸೀತೆ ರಾಮನಿಗೆ ಕಠೋರ ಸಂದೇಶವನ್ನು ಮೂಲರಾಮಾಯಣದಲ್ಲಿ ಕೊಡುತ್ತಾಳೆ. ಆದರೆ ಇಲ್ಲಿ ಅದಿಲ್ಲ.

6. ಕಾಡಿನಲ್ಲಿ ಬಂದ ಸೀತೆಯನ್ನು ವಾಲ್ಮೀಕಿಗಳು ಕಾಪಾಡುವುದಿಲ್ಲ. ಬದಲಾಗಿ ಸೀತೆ ಆತ್ಮಹತ್ಯೆ ಮಾಡಿಕೊಳ್ಳಲು ಗಂಗಾನದಿಗೆ ಬಿದ್ದಾಗ ಗಂಗೆ ಮತ್ತು ಪೃಥ್ವಿಯರು ಅವಳನ್ನು ಕಾಪಾಡುತ್ತಾರೆ.

7. ಗಂಗೆ, ಪೃಥ್ವಿ, ವಾಸಂತಿ, ತಮಸೆ, ಅರುಂಧತಿ, ಯಾರೊಬ್ಬರೂ ಮೂಲಕಥೆಯಲ್ಲಿ ಬರುವುದಿಲ್ಲ. ಈ ನಾಟಕದಲ್ಲಿ ಅವರೇ ಮುಖ್ಯರಾಗಿ, ಸೀತಾರಕ್ಷಣೆಗೆ ನಿಲ್ಲುತ್ತಾರೆ. ಛಾಯಾಸೀತೆ, ಅದೃಶ್ಯಸೀತೆ, ರಾಮನ ಮೈದಡವುದು ಇತ್ಯಾದಿ ಮೂಲದಲ್ಲಿಲ್ಲ. ಅದಿಲ್ಲಿ ಸಂಘಟಿತವಾಗಿ ರಾಮ–ಸೀತೆಯರು ಒಬ್ಬರನ್ನೊಬ್ಬರು ಅರಿಯಲು ಸಹಾಯವಾಗುತ್ತದೆ.

8. ಮೂಲದಲ್ಲಿ ಎಲ್ಲೋ ಬರುವ ಶಂಬೂಕನ ವೃತ್ತಾಂತವು, ಇಲ್ಲಿ ರಾಮನು ಪಂಚವಟಿಗೆ ಬರಲು ಕಾರಣವಾಗುತ್ತದೆ. ರಾಮಸೀತೆಯರ ಪುನರ್ಮಿಲನಕ್ಕೆ ಸೇತುವಾಗುತ್ತದೆ.

9. ಮೂಲರಾಮಾಯಣದಲ್ಲಿ ಜನಕ, ಕೌಸಲ್ಯೆ, ವಸಿಷ್ಠ ಮೊದಲಾದವರು ವಾಲ್ಮೀಕಿಗಳ ಆಶ್ರಮಕ್ಕೆ ಬರುವುದಿಲ್ಲ. ಆದರೆ ಈ ನಾಟಕದಲ್ಲಿ ಅದೇ ಮುಖ್ಯ ಕೇಂದ್ರಬಿಂದುವಾಗಿದೆ. ಎಲ್ಲರೂ ಒಂದಾಗಲೂ ಮೂಲ ಸೆಲೆಯಾಗುತ್ತದೆ.

10. ಲವಕುಶರ ಯುದ್ಧವನ್ನು ವಿಸ್ತಾರ ಮಾಡಿ, ಸೀತೆ ಬರುವಂತೆ ಮಾಡುವ ಬದಲು, ಭವಭೂತಿ ಅದನ್ನು ಸಂಗ್ರಹಿಸಿ ರಾಮನೇ ಅನಿವಾರ್ಯವಾಗಿ ಅಲ್ಲಿಗೆ ಬರುವಂತೆ ಮಾಡುತ್ತಾನೆ. ಲಕ್ಷ್ಮಣನ ಮಗ ಚಂದ್ರಕೇತುವು, ಯಜ್ಞಾಶ್ವದ ರಕ್ಷಣೆಗೆ ಬರುವುದು, ಲವನೊಡನೆ ಯುದ್ಧಕ್ಕೆ ನಿಲ್ಲುವುದು ಎಲ್ಲವೂ ಕವಿ ಭವಭೂತಿಯ ಸೃಷ್ಟಿಯೇ!

11. ಕುಶಲವರನ್ನು ನೋಡಿದ ರಾಮ, ಜನಕ, ಕೌಸಲ್ಯೆ ಮೊದಲಾದವರಿಗೆ ಇವರು ರಾಮನ ಮಕ್ಕಳೇ ಎಂಬ ಶಂಕೆ ಬರುವಂತಹ, ಸಾಮ್ಯಗಳು ಕಾಣುವುದು.

12. ಸೀತೆಯ ಮೇಲೆ ಅಪವಾದ ಹೊರಿಸಿದ ಪ್ರಜೆಗಳ ಮನಸ್ಸೇ ಬದಲಾಗಿ ಅವರೇ ಸೀತೆಯನ್ನು ರಾಮನು ಸ್ವೀಕರಿಸಬೇಕೆಂದು ಹೇಳುವಂತೆ ಮಾಡುವ ಗರ್ಭಾಂಕನಾಟಕ ಸೃಷ್ಟಿ.

13. ವಾಲ್ಮೀಕಿ ಮುನಿಗಳ ದಿವ್ಯಭವ್ಯಪ್ರಭಾವದಿಂದ ಪೃಥ್ವಿಗಂಗೆಯರೇ ಸೀತೆಯ ಜೊತೆ ಬರುವುದು. ಇವೆಲ್ಲ ಭವಭೂತಿ ಮಾಡಿಕೊಂಡಿರುವ ಬದಲಾವಣೆಗಳು.

ಉತ್ತರರಾಮಚರಿತೆ ನಾಟಕದಲ್ಲಿ ವಾಲ್ಮೀಕಿಗಳೇ ಸೀತೆಯ ಉತ್ತರಕಥೆಯನ್ನು ನಾಟಕರೂಪದಲ್ಲಿ ದುಃಖಾಂತರಂಗರಾಗಿ ಬರೆಯುತ್ತಾರೆ. ಹೀಗೆ ಬರೆಯಲು ಪ್ರಬಲ ಕಾರಣ ಯಾವ ಪ್ರಜೆಗಳು ಸೀತೆಯ ಮೇಲೆ ಅಪವಾದಗೈದು, ಅವರಿಬ್ಬರು ಒಂದಾಗಿರಲು ಅಡ್ಡಿಯಾಗಿದ್ದರೋ ಅಂತಹ ಜನರ ಮುಂದೆಯೇ ಈ ಘೋರ ವೃತ್ತಾಂತವನ್ನು ಅಭಿನಯಿಸಿ ತೋರಿಸಿ, ಅದರ ಮೂಲಕ ಅವರ ಹೃದಯವನ್ನು ಬದಲಾಯಿಸಬೇಕು ನಂತರ, ರಾಮಸೀತೆಯರು ಒಂದಾಗುವುದನ್ನು ತೋರಿಸಬೇಕೆನ್ನುವುದು. ಲಂಕೆಯಲ್ಲಿ ಅಗ್ನಿಪರೀಕ್ಷೆ ಮಾಡಿಸಿದಂತೆ, ಇನ್ನೊಮ್ಮೆ ಗಂಗೆ–ಪೃಥ್ವಿಯರು ತಾವಾಗಿಯೇ ಪ್ರಜೆಗಳ ಮುಂದೆ ಬಂದು ಸತ್ಯ ಹೇಳಿದರೆ, ಸೀತೆಯ ಪಾವಿತ್ರ್ಯದ ಬಗೆಗೆ ಸಾಕ್ಷಿ ನುಡಿದರೆ ಪ್ರಜೆಗಳು ಖಂಡಿತವಾಗಿಯೂ ನಂಬುವರು ಎನ್ನುವುದು ವಾಲ್ಮೀಕಿಗಳ ಮನದಾಳದ ಆಶಯ. ಪ್ರತ್ಯಕ್ಷ ಸಾಕ್ಷಿ ರಾಮನಿಗೆ ಬೇಕಾಗಿಲ್ಲ. ಬದಲಿಗೆ ಲಂಕೆಯಲ್ಲಿ ಆದ ಘಟನೆಯನ್ನು ನೋಡದ ಅಯೋಧ್ಯಾಪ್ರಜೆಗಳ ಸಲುವಾಗಿ ಈ ಸಾಕ್ಷಿ ಬೇಕು ಎಂಬುದನ್ನು ತೋರಿಸುವುದಕ್ಕಾಗಿಯೇ ಅಂತರ್ನಾಟಕದ ರಚನೆ ಎನ್ನುವುದನ್ನು ಕವಿ ಭವಭೂತಿಯೇ ಸೂಚ್ಯವಾಗಿ ತಿಳಿಸಿದ್ದಾನೆ.

### ಉತ್ತರರಾಮಚರಿತ ನಾಟಕದಲ್ಲಿನ ಬದಲಾವಣೆಗೆ ಬೇಕಾದ ಕಾರಣಾಂಶಗಳು:

ರಾಮನು ಸೀತೆಯನ್ನು ಏಕೆ ತ್ಯಾಗ ಮಾಡಿದ, ಕಾಡಿಗೆ ಏಕೆ ಕಳುಹಿಸಿದ ಎನ್ನುವುದಕ್ಕೆ ಸಮರ್ಥಕಾಂಶಗಳನ್ನು ಹೇಳಿ ಮತ್ತೆ ಸೀತಾರಾಮರನ್ನು ಒಂದು ಮಾಡಬೇಕೆನ್ನುವುದೇ ಈ ನಾಟಕದ ಮುಖ್ಯ ಗುರಿ. ನಾಟಕದಲ್ಲಿ ಕೊನೆಯಲ್ಲಿ ಆಗುವ ಈ ಪುನರ್ಮಿಲನಕ್ಕೆ ಪ್ರತಿಯೊಂದು ಅಂಕದಲ್ಲೂ ಸೂಚನೆಗಳು ಸಿಗುತ್ತವೆ. ಮೊದಲನೆಯ ಅಂಕದಲ್ಲಿ ಸೀತಾರಾಮರ ಅಪೂರ್ವ ಪ್ರೇಮದ ಜೊತೆಗೆ ಸೀತಾಪರಿತ್ಯಾಗದ ವಿಷಯವೂ ಬರುತ್ತದೆ. ಎರಡು, ಮೂರನೆಯ ಅಂಕಗಳಲ್ಲಿ ಇವರಿಬ್ಬರ ಮಾನಸಿಕ ಸಂದೇಹಗಳು ದೂರವಾಗುತ್ತಾ ಬಂದು ಮತ್ತೆ ಇವರಿಬ್ಬರೂ ಸೇರುತ್ತಾರೆ ಎನ್ನುವ ಸಾಧ್ಯತೆ ಸ್ಪಷ್ಟವಾಗುತ್ತದೆ. ನಾಲ್ಕು, ಐದು, ಆರನೆಯ ಅಂಕಗಳಲ್ಲಿ ಇವರು ಮತ್ತೆ ಒಂದಾಗಿ ಸೇರುವುದಕ್ಕೆ ಪೂರಕವಾದ ಘಟನೆಗಳು ಬರುತ್ತವೆ. ಕೊನೆಗೆ ಇವರ ಪುನಸ್ಸಮಾಗಮವು ಅನಾಯಾಸವಾಗಿ ನಡೆದುಹೋಗುತ್ತದೆ.

ರಾಮನ ಮನದಲ್ಲಿ ಹುದುಗಿದ್ದ ಭಾವನೆಗಳನ್ನು ಸೀತೆಯ ಪರವಾಗಿ ಹೊರಹಾಕುವ ವಾಸಂತಿ ಭವಭೂತಿಯ ಸ್ವಂತ ಸೃಷ್ಟಿ. ಸೀತೆಯು ಸ್ವಯಂ ತಾನಾಗಿಯೇ ಛಾಯಾರೂಪದಿಂದ ರಾಮನ ಮನದಾಳದ ಭಾವನೆಗಳನ್ನು ತಿಳಿಯುತ್ತಾಳೆ. ಸೀತೆಯ ಯಾತನೆಗಳನ್ನು ನೋಡುತ್ತಾನೆ. ಹಾಗಾಗಿ ಇವರಿಬ್ಬರ ಸಮಾಗಮವು ಮತ್ತೆ ಆಗಬೇಕಾದರೆ ಈ ಗಂಡ-ಹೆಂಡಿರ ಪ್ರೇಮವು ಅಷ್ಟೇ ಅಮರವಾಗಿರಬೇಕು, ಪವಿತ್ರವಾಗಿರಬೇಕು ಎನ್ನುವುದನ್ನು ಭವಭೂತಿಯು ಈ ನಾಟಕದಲ್ಲಿ ಪದೇ ಪದೇ ವರ್ಣನೆ ಮಾಡಿ ಹೇಳಿದ್ದಾನೆ.

### ಉತ್ತರರಾಮಚರಿತದಲ್ಲಿ ಕರುಣರಸ ಪ್ರತಿಪಾದನೆ :

ರಾಮಾಯಣದಲ್ಲಿ ಪ್ರಧಾನವಾದ ರಸ ಕರುಣ. ಇದನ್ನು ವಾಲ್ಮೀಕಿಗಳು ಇಡೀ ರಾಮಾಯಣದಲ್ಲಿ ಅಲ್ಲಲ್ಲಿ ಅನೇಕ ಸನ್ನಿವೇಶಗಳಲ್ಲಿ ಸುದೀರ್ಘವಾಗಿ, ವಿಶದವಾಗಿ ಚಿತ್ರಿಸಿದ್ದಾರೆ. ವಾಲ್ಮೀಕಿಗಳಿಂದ ವಿವರವಾಗಿ ಹೇಳಲಾದ ಕರುಣರಸದ ಚಿತ್ರಣವನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ, ಸಹೃದಯರ ಮನಬಿರಿಯುವಂತೆ ಚಿಕ್ಕದಾಗಿ, ಚೊಕ್ಕವಾಗಿ ಚಿತ್ರಿಸಿ ಹೇಳುವ ಭವಭೂತಿಯ ಶೈಲಿ ಅನನ್ಯ, ಅಪೂರ್ವ ಹಾಗೂ ಕಷ್ಟಸಾಧ್ಯ. ಭವಭೂತಿಯು ಕರುಣರಸದ ಚಿತ್ರಣದಲ್ಲಿ ಗೆದ್ದಿದ್ದಾನೆ.

**ಅನಿರ್ಭಿನ್ನೋ ಗಭೀರತ್ವಾದಂತರ್ಗೂಢಘನವ್ಯಥಃ ।**
**ಪುಟಪಾಕಪ್ರತೀಕಾಶೋ ರಾಮಸ್ಯ ಕರುಣೋ ರಸಃ ॥**
(ಉತ್ತರರಾಮಚರಿತೆ, 3.1)

"ರಾಮನು ಗಂಭೀರ ಮನದವನಾದ್ದರಿಂದ ಅವನ ಮನದೊಳಗೆ ಕುದಿಯುತ್ತಿರುವ ಶೋಕವು, ಹೊರಗೆ ಕಾಣದಿದ್ದರೂ, ಒಳಗೊಳಗೇ, ಪುಟಕಟ್ಟಿ ಬೆಂಕಿಯಲ್ಲಿ ಹಾಕಿದ ಔಷಧಿಯ ಮೇಲಿನ ಮಣ್ಣು ಆರಿದರೂ ಒಳಗೆ ಅತಿ ಬಿಸಿಯಾಗಿರುವಂತೆ, ಮನವನ್ನು, ಸ್ನೇಹವನ್ನು ಸುಡುತ್ತಿದೆ" ಎಂದು ರಾಮನ ದುಃಖವನ್ನು ಭವಭೂತಿ ಚಿತ್ರಿಸುತ್ತಾನೆ. ಹಾಗೆಯೇ ಪಂಚವಟಿಯಲ್ಲಿ ಬರುವ ಅದೃಶ್ಯಸೀತೆ –

**ಪರಿಪಾಂಡುದುರ್ಬಲಕಪೋಲಸುಂದರಂ**
**ದಧತೀ ವಿಲೋಲಕಬರೀಕಮಾನನಮ್ ।**
**ಕರುಣಸ್ಯ ಮೂರ್ತಿರಥವಾ ಶರೀರಿಣೀ**
**ವಿರಹವ್ಯಥೇವ ವನಮೇತಿ ಜಾನಕೀ ॥**
(ಉತ್ತರರಾಮಚರಿತೆ, 3–4)

ರಾಮನ ವಿರಹದಿಂದ ಸೀತೆಯ ಮುಖ, ಕೆನ್ನೆಗಳು ಬಿಳಿಚಿಕೊಂಡು ಕೃಶವಾಗಿವೆ. ಅವಳ ಕೇಶಪಾಶಗಳು ಕೆದರಿ ಮುಖದ ತುಂಬಾ ಹರಡಿವೆ. ವಿರಹವ್ಯಥೆಯಿಂದಲೋ ಏನೋ ಎಂಬಂತೆ ಕರುಣೆಯ ಮೂರ್ತಿಯೋ ಅಥವಾ ಕರುಣೆಯೇ ದೇಹ ತಳೆದುಬಂದಿದೆಯೋ ಎಂಬಂತೆ ಇರುವ ಸೀತೆಯು ಈ ಕಾಡಿಗೆ ಬಂದಿದ್ದಾಳೆ.

**ಹೃದಿ ನಿತ್ಯಾನುಷಕ್ತೇನ ಸೀತಾಶೋಕೇನ ತಪ್ಯತೇ ।**
**ಅಂತಃಪ್ರಸೃಪ್ತದಹನೋ ಜರನ್ನಿವ ವನಸ್ಪತಿಃ ॥**
(ಉತ್ತರರಾಮಚರಿತೆ, 4.2)

ಜೀರ್ಣವಾದ ಮರದ ಪೊಟರೆಯೊಳಗೆ ಬೆಂಕಿ ಬಿದ್ದು ಹೇಗೆ ಆ ಮರವನ್ನು ಒಳಗೇ ಸುಡುತ್ತದೋ, ಹಾಗೇ ವಯಸ್ಸಾದ ಜನಕನ

ಮನವನ್ನು ಸೀತೆ ಇಲ್ಲದಿರುವ ಶೋಕಾಗ್ನಿಯು ಸುಡುತ್ತಿದೆ. ಕೌಸಲ್ಯೆ, ಅರುಂಧತೀ, ಭಾಗೀರಥಿ, ಭೂದೇವಿ, ಆತ್ರೇಯೀ, ವಾಸಂತೀ ಎಲ್ಲರೂ ಶೋಕಪ್ರವಾಹದ ಸೆಳೆತಕ್ಕೆ ಸಿಕ್ಕಿ ಜರ್ಝರಿತರಾಗಿದ್ದಾರೆ. ತಂದೆ–ತಾಯಿಗಳಿದ್ದು, ಪರದೇಶಿಗಳಂತೆ ಎಲ್ಲೋ ಬೆಳೆಯುತ್ತಿರುವ ಲವಕುಶರ ಸ್ಥಿತಿಯೂ ದುಃಖಜನಕವೇ ಆಗಿದೆ. ಸೀತೆಯ ಪ್ರಾಣಪರಿತ್ಯಾಗದ ಹೃದಯವಿದ್ರಾವಕ ದೃಶ್ಯವಂತೂ ಎಲ್ಲರ ಕಣ್ಣಲ್ಲೂ ನೀರು ತರುತ್ತದೆ. ಉತ್ತರರಾಮಚರಿತ ನಾಟಕದ ಆರಂಭದಿಂದ ಕೊನೆಯತನಕವೂ ಬೇರೆ ಬೇರೆ ಪಾತ್ರಗಳಿಂದಲೂ, ಬಾರಿ ಬಾರಿಗೂ ದುಃಖವೇ ಉಕ್ಕಿ ಬರುತ್ತದೆ. ಇವು ನೂತನರೂಪಗಳನ್ನು ತಾಳುತ್ತವೆ. ಆದರೂ ದೇವತೆಗಳ, ಋಷಿಮುನಿಗಳ ಪುಣ್ಯ ಆಶೀರ್ವಾದ ಪ್ರಭಾವಗಳಿಂದ ದುಃಖಿತರಾದವರೆಲ್ಲಾ ಕಡೆಗೆ ಒಂದಾಗಿ ಶಾಂತಿ ಪಡೆಯುತ್ತಾರೆ. ಇಡೀ ನಾಟಕದ ಉದ್ದಕ್ಕೂ ಒಂದಲ್ಲ ಒಂದು ರೀತಿ ಬೇರೆ ಬೇರೆ ಸ್ಥಾಯಿಗಳಲ್ಲಿ ಶೋಕವು ಉಕ್ಕಿ ಕರುಣಾರಸವಾಗಿ ಹರಿದು ಪ್ರೇಕ್ಷಕರ ಹೃದಯವನ್ನು ಕರಗಿಸಿಬಿಡುತ್ತದೆ.

ಆದರ್ಶ ಪ್ರೇಮಿಗಳ ದುಃಖಮಯವಾದ ಅಂತರಂಗದ ಜೀವನವನ್ನು ಭವಭೂತಿಯು ಈ ನಾಟಕದಲ್ಲಿ ಕಲ್ಲೂ ಕರಗುವಂತೆ ವಜ್ರದ ಮಧ್ಯವೂ ಸಿಡಿಯುವಂತೆ, ಎಲ್ಲರ ಕರುಳು ಕರಗುವಂತೆ ಚಿತ್ರಿಸಿರುವುದು ಸಹೃದಯ ರಸಿಕರೆಲ್ಲರ ಮೆಚ್ಚುಗೆಯನ್ನು ಗಳಿಸುತ್ತದೆ. ಸೀತಾರಾಮರು ಆದರ್ಶ ಪುರುಷರು. ಅಂಥವರೂ ಈ ಕಷ್ಟಕೋಟಲೆಗಳಿಗೆ, ದುಃಖದುಮ್ಮಾನಗಳಿಗೆ ಸಿಲುಕಿಬಿಟ್ಟರಲ್ಲ ಎನ್ನುವುದು ಎಲ್ಲರ ಕೊರಗು. ಜೀವನವೇ ಒಂದು ಭೇದಿಸಲಾಗದ ಸಮಸ್ಯೆ ಎಂದು ಈ ನಾಟಕದ ಕಥೆ ಸಾರುತ್ತದೆ. ಈ ನಾಟಕದಲ್ಲಿ ಸೀತೆ ವಾಲ್ಮೀಕಿಗಳ ಆಶ್ರಮದಲ್ಲಿ ತಾಪಸಿಯರಿಂದ ಸೇವೆ ಪಡೆದು ಅನಾಯಾಸವಾಗಿ ಮಕ್ಕಳನ್ನು ಹಡೆಯುವುದಿಲ್ಲ. ಬದಲಾಗಿ ದುಃಖವನ್ನು ಸಹಿಸಲಾರದೆ, ಗಂಗೆಯಲ್ಲಿ ಬಿದ್ದು ಮಕ್ಕಳನ್ನು ಹೆರುವಳು, ಸೀತೆಯ ಪ್ರಿಯಪತಿ ರಾಮನಾದರೋ ಎಲ್ಲಿರಲಿ, ಯಾವುದನ್ನು ನೋಡಲಿ, ಏನನ್ನು ಮಾಡಲಿ, ಎಲ್ಲದರಲ್ಲೂ ಸೀತೆಯನ್ನು ನೆನೆನೆನೆದು ತನ್ನ ದುಷ್ಕೃತ್ಯವನ್ನು ಬೈದುಕೊಂಡು ಪರಿತಪಿಸುವನು.

ಇಲ್ಲಿ ನಾಟಕದ ಉದ್ದಕ್ಕೂ ಗೋಳಾಟವೇ, ತೊಳಲಾಟವೇ!

**ಅನಿರ್ಭಿನ್ನೋ ಗಭೀರತ್ವಾದಂತರ್ಗೂಢಘನವ್ಯಥಃ ।**
**ಪುಟಪಾಕಪ್ರತೀಕಾಶೋ ರಾಮಸ್ಯ ಕರುಣೋ ರಸಃ ॥** (ಉತ್ತರರಾಮಚರಿತೆ, 3.1)

ರಾಮನ ದುಃಖವಂತೂ ತಡೆದುಕೊಳ್ಳಲೂ ಆಗದು, ತಪ್ಪಿಸಿಕೊಳ್ಳಲೂ ಆಗದು ಹಾಗಿದೆ. ಕೊನೆಯ ಅಂಕದಲ್ಲಿಯೂ ಅದ್ಭುತರಸಕ್ಕಿಂತ ಕರುಣರಸವೇ ಹೆಚ್ಚಾಗಿದೆ. ಸಂಸ್ಕೃತದಲ್ಲಿ ಕರುಣರಸವನ್ನು ಮುಖ್ಯವಾಗಿ ಪ್ರತಿಪಾದಿಸಿರುವ ನಾಟಕವು **'ಉತ್ತರರಾಮಚರಿತ'** ಒಂದೇ ಎಂದು ಹೇಳಬಹುದು. ಕರುಣರಸವೂ ನಾಟಕದಲ್ಲಿ ಪ್ರಧಾನರಸವಾಗಬಹುದು ಎನ್ನುವುದನ್ನು ಆಲಂಕಾರಿಕಲಕ್ಷಣಕಾರರೆಲ್ಲರೂ **'ಉತ್ತರರಾಮಚರಿತ'** ನಾಟಕವನ್ನು ಓದಿ, ಒಪ್ಪಿಕೊಂಡು ಬಿಟ್ಟಿದ್ದಾರೋ ಎನ್ನುವಷ್ಟರಮಟ್ಟಿಗೆ ಕವಿ ಭವಭೂತಿಯು ಕರುಣರಸ ಚಿತ್ರಣದಲ್ಲಿ ಕೃತಕೃತ್ಯನಾಗಿದ್ದಾನೆ.

ಆದರ್ಶಪ್ರೇಮದ ಸಾರವನ್ನು ಕವಿ, ನಾಟಕಕಾರ ಭವಭೂತಿಯು

**ಅದ್ವೈತಂ ಸುಖದುಃಖಯೋರನುಗತಂ ಸರ್ವಾಸ್ವವಸ್ಥಾಸು ಯದ್**
**ವಿಶ್ರಾಮೋ ಹೃದಯಸ್ಯ ಯತ್ರ ಜರಸಾ ಯಸ್ಮಿನ್ನಹಾರ್ಯೋ ರಸಃ ।**
**ಕಾಲೇನಾವರಣಾತ್ಯಯಾತ್ ಪರಿಣತೇ ಯತ್ಸ್ನೇಹಸಾರೇ ಸ್ಥಿತಂ**
**ಭದ್ರಂ ತಸ್ಯ ಸುಮಾನುಷಸ್ಯ ಕಥಮಪ್ಯೇಕಂ ಹಿ ತತ್ ಪ್ರಾಪ್ಯತೇ ॥**
(ಉತ್ತರರಾಮಚರಿತೆ, 1.39)

ಸುಖದುಃಖಗಳೆರಡರಲ್ಲೂ ಯಾವುದು ಒಂದೇ ರೀತಿಯಲ್ಲಿ, ಎಲ್ಲ ಅವಸ್ಥೆಗಳಲ್ಲೂ ಒಂದೇ ಸಮನಾಗಿರುವುದೋ, ಎಲ್ಲಿ ಹೃದಯವು ಪೂರ್ಣಶಾಂತಿಯನ್ನು ಪಡೆಯುವುದೋ ಜೊತೆಗೆ ಸವಿ ಮುಪ್ಪಿನಿಂದಲೂ ಮಾಸುವುದಿಲ್ಲವೋ, ಕಾಲಕಳೆದಂತೆ ಆವರಣಗಳೆಲ್ಲ ಸಡಿಲವಾದ ಮೇಲೆ ಯಾವುದು ಮಾಗಿ ಪ್ರೇಮಸಾರವಾಗಿ ನಿಲ್ಲುವುದೋ ಆ ಶುಭಕರವಾದ ಮಂಗಳಮಯವಾದ ಅದ್ವಯ ಅನುಭವವು ಅಂದರೆ ದಂಪತಿಗಳ ಏಕೀಭಾವವು ಧನ್ಯರಾದವರಿಗೆ ಮಾತ್ರ ಎಲ್ಲಿಯಾದರೊಮ್ಮೆ ಸಿಗುತ್ತದೆ. ಅಂತಹ ಅದ್ವಯವಾದ ದಾಂಪತ್ಯಭಾವವನ್ನು ನಾನು ಸೀತೆಯೊಡನೆ ಹಿಂದೆ ಪಡೆದಿದ್ದೇನೆ ಎಂದು ಹೇಳುವ ರಾಮನ ಮಾತು ಕಠಿನಹೃದಯದವರ ಮನವನ್ನು ಕರಗಿಸಿಬಿಡುತ್ತದೆ.

ಪುತ್ರವಾತ್ಸಲ್ಯವನ್ನು ಭವಭೂತಿ ಅಮರವಾಗಿ ತೋರಿಸಿದ್ದಾನೆ. ಲವಕುಶರು ಯಾರೆಂದು ಇನ್ನೂ ಗೊತ್ತಿಲ್ಲದಿರುವಾಗಲೇ 'ಕಣ್ಣರಿಯದಿದ್ದರೂ ಕರುಳು ತಿಳಿಯದೇ' ಎನ್ನುವಂತೆ, ಜನಕ, ಕೌಸಲ್ಯೆ, ಶ್ರೀರಾಮ ಎಲ್ಲರೂ ಮಕ್ಕಳನ್ನು ಕಂಡು ಏನೋ ಹೇಳಲಾಗದ ಆನಂದವನ್ನು ಅನುಭವಿಸುವರು. ಈ ವಿಸ್ತಾರವಾದ ಆನಂದದ ವರ್ಣನೆ ಎಂತಹವರ ಎದೆಯನ್ನಾದರೂ ಕರಗಿಸಿಬಿಡುತ್ತದೆ, ಕೋಮಲವಾಗಿಸುತ್ತದೆ. ಉತ್ತರರಾಮಚರಿತೆಯು ರಸಿಕರ ಪ್ರಶಂಸೆಗೆ ಪಾತ್ರವಾಗಿರುವುದಕ್ಕೆ ಮಕ್ಕಳು ಕಾಣುವುದರಿಂದ ಸಂಸಾರಿಗಳು ಹೊಂದುವ ನಿಷ್ಕಲ್ಮಷ ಸುಖದ ವರ್ಣನೆಯೂ ಒಂದು ಕಾರಣವೆಂದು ಹೇಳಬಹುದು. ಭವಭೂತಿಯ ಒಂದೊಂದು ಮಾತೂ ಸಹ ಎಲ್ಲ ಗೃಹಸ್ಥರ ಅನುಭವವನ್ನು ಅಮರವಾಗಿಸಿ, ಆಡುನುಡಿಯಾದ ಗಾದೆಯಾಗಿ ಬಿಟ್ಟಿದೆ.

**ವ್ಯತಿಷಜತಿ ಪದಾರ್ಥಾನಾಂತರಃ ಕೋಽಪಿ ಹೇತುಃ**
**ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ ।**
**ವಿಕಸತಿ ಹಿ ಪತಂಗಸ್ಯೋದಯೇ ಪುಂಡರೀಕಂ**
**ದ್ರವತಿ ಚ ಹಿಮರಶ್ಮಾವುದ್ಗತೇ ಚಂದ್ರಕಾಂತಃ ॥** (ಉತ್ತರರಾಮಚರಿತೆ, 6.12)

'ಹೃದಯಾಂತರಾಳದ ಯಾವುದೋ ಹೇಳಲಾಗದ ಕಾರಣ ಮಾತ್ರ ಗಂಡಹೆಂಡಿರಿಬ್ಬರನ್ನೂ ಒಂದುಗೂಡಿಸುತ್ತದೆ. ಪ್ರೀತಿಗಳು ಹೊರಗಿನ ಕಾರಣಗಳನ್ನು ಅವಲಂಬಿಸಿ ಇರುವುದಿಲ್ಲ. ಹಗಲಿನಲ್ಲಿ ಪೂರ್ವದಲ್ಲಿ ಸೂರ್ಯ ಹುಟ್ಟಿದ ಕೂಡಲೇ ಕಮಲವು ಅರಳಿಬಿಡುತ್ತದೆ. ರಾತ್ರಿಯಲ್ಲಿ ಆಕಾಶದಲ್ಲಿ ಚಂದ್ರನ ಬೆಳದಿಂಗಳು ಮೂಡಿದ ಕೂಡಲೇ ಚಂದ್ರಕಾಂತಮಣಿಯು ಕರಗಿ ನೀರು ಸುರಿಸುತ್ತದೆ.' ವಾಲ್ಮೀಕಿಯ ಆಶ್ರಮದಲ್ಲಿ ರಾಮನನ್ನು ಕಂಡು ಕುಶನು ಅವನಿಗೆ ನಮಸ್ಕಾರ ಮಾಡುತ್ತಾನೆ, ಆಗ ರಾಮನು ಅವನನ್ನು ತಬ್ಬಿಕೊಂಡಾಗ, ಹೇಳಲಾಗದ ಭಾವವೊಂದು ಮೂಡುತ್ತದೆ ರಾಮನಲ್ಲಿ. ಆಗ ರಾಮನ ಮನದಲ್ಲಿ ಏಳುವ ಭಾವ ಹೀಗಿದೆ –

**ಅಂಗಾದಂಗಾತ್ಸೃತ ಇವ ನಿಜಸ್ನೇಹಜೋ ದೇಹಸಾರಃ**
**ಪ್ರಾದುರ್ಭೂಯ ಸ್ಥಿತ ಇವ ಬಹಿಶ್ಚೇತನಾಧಾತುರೇಕಃ ।**
**ಸಾಂದ್ರಾನಂದಕ್ಷುಭಿತಹೃದಯಪ್ರಸ್ರವೇನೇವ ಸೃಷ್ಟೋ**
**ಗಾತ್ರಂ ಶ್ಲೇಷೇ ಯದಮೃತರಸಸ್ರೋತಸಾ ಸಿಂಚತೀವ ॥**
(ಉತ್ತರರಾಮಚರಿತೆ, 6.22)

"ಈ ಬಾಲಕನನ್ನು ತಬ್ಬಿಕೊಂಡದ್ದರಿಂದ ನನ್ನ ಇಡೀ ಮೈಯನ್ನೆಲ್ಲಾ ಅಮೃತರಸದ ಹೊಳೆಯಲ್ಲಿ ಅದ್ದಿದಂತಾಗಿದೆ. ನನ್ನ ಪ್ರೀತಿ, ದೇಹದ ಸಾರವನ್ನೆಲ್ಲಾ ಒಂದೊಂದು ಅವಯವದಲ್ಲೂ ಹರಿಸಿದ ಪ್ರವಾಹವೇ ಇವನಿರಬಹುದೇ! ನನ್ನ ಶರೀರದೊಳಗಿರುವ ಚೇತನಾಧಾತುವೇ ಹೊರಗೆ ಮೈದಳೆದು ಈ ರೀತಿ ಬಾಲಕನ ಆಕಾರವನ್ನು ತಳೆದಿದೆಯೋ ಎಂಬಂತಿದೆ! ಅಪರಿಮಿತವಾದ ಆನಂದದಿಂದ ನನ್ನ ಹೃದಯವು ಕರಗಿ ನೀರಾಗಲು, ಆ ಆನಂದಜಲದಿಂದ ಇವನು ಹುಟ್ಟಿ ಬಂದಿದ್ದಾನೋ ಎನ್ನುವಂತಿದೆ" ಎಂದು ಮನದಲ್ಲಿ ಅಂದುಕೊಂಡಾಗ ಭವಭೂತಿಯು ಜೀವನದಲ್ಲಿ ಸಂಸಾರಿಗನಾಗಿ ಕಂಡ ತನ್ನ ಜೀವನದ ಸುಖಾನುಭವವನ್ನೆಲ್ಲಾ ಇಲ್ಲಿ ಭಟ್ಟಿಯಿಳಿಸಿರುವನೋ ಎಂದು ಅಚ್ಚರಿ ಹುಟ್ಟುತ್ತದೆ.

ಹೀಗೆ ಭವಭೂತಿಯು ವಾಲ್ಮೀಕಿರಾಮಾಯಣದ ದಿವ್ಯ ಭವ್ಯ ಪ್ರಭಾವದಿಂದ ಸಂಸ್ಕೃತನಾಟಕ ಪ್ರಪಂಚದಲ್ಲಿ ಕರುಣರಸವನ್ನು ಪ್ರಧಾನವಾಗಿ ಚಿತ್ರಿಸಿ, **'ನ ಭೂತೋ ನ ಭವಿಷ್ಯತಿ'** ಎಂಬಂತೆ ಆಗಿದ್ದಾನೆ. ಇವನ ನಾಟಕದ ಶೈಲಿ ಸರಳವಾಗಿದ್ದು, ಅನುಪಮವೂ, ಸುಕೋಮಲವೂ ಆಗಿದೆ. ತನ್ನ ನಾಟಕದಲ್ಲಿ ಇವನು ಚಿತ್ರಿಸಿರುವ ಶಬ್ದಾಲಂಕಾರಗಳು, ಅರ್ಥಾಲಂಕಾರಗಳೆಲ್ಲವೂ ನೂತನವಾಗಿಯೇ ಕಾಣುತ್ತವೆ. ಛಂದಸ್ಸುಗಳನ್ನು ಆಯ್ದುಕೊಂಡು, ಉತ್ತಮೋತ್ತಮ ವೃತ್ತಗಳಿಂದ ಪದ್ಯಗಳನ್ನು ಹೆಣೆದಿರುವುದೂ ಸಹ ಅಪೂರ್ವವೆಂದೇ ಹೇಳಬಹುದು. ಕರುಣರಸ ಪ್ರತಿಪಾದನೆಯಲ್ಲಿ ವಾಲ್ಮೀಕಿಯು ಗುರುವಾದರೆ, ಭವಭೂತಿಯು ಶಿಷ್ಯನಾಗಿದ್ದಾನೆ. ಇವರಿಬ್ಬರನ್ನೂ ಸರಿಗಟ್ಟುವ ಮತ್ತೊಬ್ಬ ಕವಿ, ನಾಟಕಕಾರ ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ಹುಟ್ಟಿಲ್ಲವೆಂದೇ ಹೇಳಬೇಕು. ಒಟ್ಟಾರೆ ನಾಟಕಕಾರ ಭವಭೂತಿಯು ವಾಲ್ಮೀಕಿಗೆ, ಇವರಿಂದ ರಚಿತವಾದ ರಾಮಾಯಣಕ್ಕೆ ಸದಾ ಋಣಿಯಾಗಿದ್ದಾನೆ.

## ಮಹಾವೀರಚರಿತ ನಾಟಕ

ಮಹಾವೀರಚರಿತನಾಟಕವನ್ನು ಭವಭೂತಿಯು ಮೊದಲು ಬರೆದನೆಂದು ತೋರುತ್ತದೆ. ಇದು ಏಳು ಅಂಕಗಳಿಂದ ಕೂಡಿದೆ. ಇದರ ಕಥಾಸಾರ ಹೀಗಿದೆ–

"ಮಹರ್ಷಿ ವಿಶ್ವಾಮಿತ್ರರು ತನ್ನ ಯಜ್ಞರಕ್ಷಣೆಗಾಗಿ ಅಯೋಧ್ಯೆಯಿಂದ ರಾಮ–ಲಕ್ಷ್ಮಣರನ್ನು ತನ್ನ ಆಶ್ರಮಕ್ಕೆ ಕರೆತಂದಿದ್ದಾರೆ. ಈ ಯಾಗವನ್ನು ನೋಡಲು ಜನಕರಾಜನ ತಮ್ಮ ಕುಶಧ್ವಜನು ಸೀತೆ–ಊರ್ಮಿಳೆಯರೊಡನೆ ವಿಶ್ವಾಮಿತ್ರನ ಆಶ್ರಮಕ್ಕೆ ಬರುತ್ತಾನೆ. ರಾವಣನ ಪುರೋಹಿತ ಸರ್ವಮಾಯನೆಂಬ ವೃದ್ಧರಾಕ್ಷಸನು, ಸೀತೆಯನ್ನು ರಾವಣನಿಗೆ ತಂದುಕೊಳ್ಳಬೇಕೆಂದು ಕೇಳಲು ಅಲ್ಲಿಗೆ ಬರುತ್ತಾನೆ. ಮೊದಲು ಮಿಥಿಲೆಗೆ ಹೋಗಿ ಜನಕನನ್ನು ಅವನು ಕೇಳಲು, ಅವರ ವಿವಾಹದ ಭಾರವನ್ನು ಕುಶಧ್ವಜನಿಗೆ, ವಿಶ್ವಾಮಿತ್ರರಿಗೆ ಒಪ್ಪಿಸಿದ್ದೇನೆ, ಅವರನ್ನು ಕೇಳಬೇಕೆಂದು ತಿಳಿಸಿರುತ್ತಾನೆ. ಈ ಮಧ್ಯೆ ರಾಮಲಕ್ಷ್ಮಣರು ತಾಟಕೆಯನ್ನು ಕೊಂದಿರುತ್ತಾರೆ. ಅವರಿಗೆ ವಿಶ್ವಾಮಿತ್ರನು ಜೃಂಭಕಾಸ್ತ್ರವನ್ನು ಉಪದೇಶ ಮಾಡುತ್ತಾನೆ. ನಂತರ ರಾಮನು ಶಿವಧನುಸ್ಸನ್ನು ವಿಶ್ವಾಮಿತ್ರನ ಆಶ್ರಮದಲ್ಲೇ ಮುರಿಯುತ್ತಾನೆ. ಕುಶಧ್ವಜನು ಸೀತೆಯನ್ನು ರಾಮನಿಗೆ, ಊರ್ಮಿಳೆಯನ್ನು ಲಕ್ಷ್ಮಣನಿಗೆ ಮದುವೆ ಮಾಡಿಕೊಳ್ಳಲು ಕೊಡುವನು; ಮಾಂಡವಿಯನ್ನು ಭರತನಿಗೆ, ಶ್ರುತಕೀರ್ತಿಯನ್ನು ಶತ್ರುಘ್ನನಿಗೆ ಮದುವೆ ಮಾಡುವುದೆಂದು ನಿಶ್ಚಯಿಸಿ, ಇದನ್ನು ನಾನು ಜನಕನಿಗೆ ಹೇಳಿ ಅವನನ್ನು ಒಪ್ಪಿಸುತ್ತೇನೆಂದು ವಿಶ್ವಾಮಿತ್ರನು ಅವರ ವಿವಾಹ ಭಾರವನ್ನು ವಹಿಸಿ, ಈ ಎಲ್ಲ ವಿಷಯಗಳನ್ನು ದಶರಥ, ವಸಿಷ್ಠ ಮೊದಲಾದವರಿಗೆ ಹೇಳಿ ಕಳುಹಿಸುವನು. ರಾಮನು ಮತ್ತೆ ಸುಬಾಹುವನ್ನು ಕೊಲ್ಲುವನು. ರಾವಣನ ಪುರೋಹಿತ ಸರ್ವಮಾಯನು ಇವೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡುತ್ತಿದ್ದರೂ, ಏನೂ ಮಾಡಲಾರದೆ, ಎಲ್ಲವನ್ನೂ ಮಾಲ್ಯವಂತನಿಗೆ ತಿಳಿಸುತ್ತೇನೆಂದು ಹೋಗುವನು (ಅಂಕ 1).

ಮಾಲ್ಯವಂತನು ರಾವಣನಿಗೆ ಸೋದರಮಾವ ಜೊತೆಗೆ ಅವನ ಮಂತ್ರಿ ಬೇರೆ. ಅವನು ರಾವಣನ ಗೆಳೆಯನಾದ, ಶಿವಭಕ್ತ ಪರಶುರಾಮನಿಗೆ ಶಿವಧನುಸ್ಸನ್ನು ರಾಮನು ಮುರಿದನೆಂದು ಹೇಳಿ ರಾಮನನ್ನು ಶಿಕ್ಷಿಸುವಂತೆ ಪ್ರೇರೇಪಿಸುತ್ತಾನೆ. ಕೋಪಗೊಂಡ ಪರಶುರಾಮನು ಜನಕನ ಅಂತಃಪುರಕ್ಕೆ ಬಂದು ರಾಮನನ್ನು ಕೆಣಕುವನು. ರಾಮನು ಕಂಕಣ ವಿಸರ್ಜನೆ ಮಾಡಿಕೊಂಡು ಬರುವವರೆಗೂ ವಿಶ್ವಾಮಿತ್ರ, ಶತಾನಂದ, ಜನಕ, ದಶರಥ ಎಲ್ಲರೂ ಪರಶುರಾಮನನ್ನು ಸಮಾಧಾನಪಡಿಸಲು ತೊಡಗುತ್ತಾರೆ. ಆದರೆ ಅವನು ಶಾಂತನಾಗುವುದಿಲ್ಲ. ಕೊನೆಗೆ ರಾಮನೇ ಬಂದು ಪರಶುರಾಮನನ್ನು ಕರೆದೊಯ್ಯುವನು. ಅವರಿಬ್ಬರಿಗೂ ಯುದ್ಧ, ಪರಶುರಾಮನ ಸೋಲು (ಅಂಕ 2–3).

ಮಾಲ್ಯವಂತನು ಹೇಳಿದಂತೆ ರಾವಣನ ತಂಗಿ ಶೂರ್ಪಣಖಿಯು ಮಂಥರೆಯಲ್ಲಿ ಆವಿಷ್ಟಳಾಗಿ, ಕೈಕೇಯಿಯಿಂದ ಒಂದು ಕಾಗದವನ್ನು ತಂದು ದಶರಥನಿಗೆ ಕೊಡುತ್ತಾಳೆ. ಭರತನಿಗೆ ಪಟ್ಟಾಭಿಷೇಕ ಮಾಡಬೇಕು, ಸೀತಾರಾಮಲಕ್ಷ್ಮಣರು ಕಾಡಿಗೆ ಹೋಗಬೇಕು ಎಂದು ಅದರಲ್ಲಿ ಬರೆದಿರುತ್ತದೆ. ಹೀಗೆ ಮಾಡಿದರೆ ಕಾಡಿನಲ್ಲಿ ಸೀತೆಯನ್ನು ಕದ್ದೊಯ್ದು ರಾವಣನಿಗೆ ಸೀತೆಯನ್ನು ಮದುವೆ ಮಾಡಿಸಬಹುದು. ಆಗ, ಸೀತೆಯ ವಿರಹದಿಂದಲೋ, ಅಥವಾ ವಾಲಿಯ ಕೈಯಿಂದಲೋ ರಾಮನು ಸಾಯುವನು ಎನ್ನುವುದು ಮಾಲ್ಯವಂತನ ಲೆಕ್ಕಾಚಾರ. ರಾಮನಿಗಾದರೋ ತಾನು ಕಾಡಿಗೆ ಹೋಗಬೇಕೆಂದಿದ್ದೆ, ಅದು ಅನಾಯಾಸವಾಗಿ ಸಿದ್ಧಿಸಿತಲ್ಲ ಎನ್ನುವುದು ಸಂತೋಷದ ವಿಷಯ. ಪರಾಜಿತನಾದ ಪರಶುರಾಮನು ಕೋಪ ಬಿಟ್ಟು ಶಾಂತನಾಗಿ, ರಾಮನ ಬಳಿಗೆ ಮತ್ತೆ ಬಂದು ವೈಷ್ಣವ ಧನುಸ್ಸನ್ನು ರಾಮನಿಗೆ ಕೊಟ್ಟು, ಗುರುಹಿರಿಯರೆಲ್ಲರ ಆಶೀರ್ವಾದವನ್ನು ಪಡೆದು ಹೊರಟುಹೋಗುವನು. ಭರತ, ಯುಧಾಜಿತ್ತರು ಅಲ್ಲಿಗೆ ಬಂದು ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಹೇಳುವರು. ದಶರಥನೂ ಇದಕ್ಕೆ ಒಪ್ಪುವನು. ಈ ಉತ್ಸಾಹದಲ್ಲಿ ತಾನು ಈಗ ಏನು ಮಾಡಬೇಕೆಂದು ದಶರಥನು ಎಲ್ಲರನ್ನೂ ಕೇಳಿದಾಗ, ರಾಮನೇ ತನ್ನ ಚಿಕ್ಕಮ್ಮ ಕೈಕೇಯಿಯು ಕೇಳಿದ ವರಗಳನ್ನು ನಡೆಸುವಂತೆ ಹೇಳಿ ತಾನು ಕಾಡಿಗೆ ಹೊರಡಲು ಸಿದ್ಧನಾಗುವನು. ಕಾಡಿಗೆ ಹೊರಟ ರಾಮನನ್ನು ಭರತ ಮೊದಲಾದವರೆಲ್ಲಾ ಹಿಂಬಾಲಿಸುವರು. ರಾಮನೇ ಅವರೆಲ್ಲರನ್ನೂ ಕಾಡಿಗೆ ಬರದಂತೆ ತಡೆದು ಕಾಡಿಗೆ ಹೋಗುವನು (ಅಂಕ 4).

ಕಾಡಿನಲ್ಲಿ ಸಂಪಾತಿ ಜಟಾಯುಗಳು ಮಾತನಾಡಿಕೊಳ್ಳುತ್ತಿರುವರು. ಇವರ ಮಾತಿನಿಂದ ವಿರಾಧನ ವಧೆ, ಶರಭಂಗಾಶ್ರಮಕ್ಕೆ ರಾಮಾದಿಗಳು ಬಂದು,

ಪಂಚವಟಿಯಲ್ಲಿ ವಾಸಿಸುತ್ತಿದ್ದಾರೆ, ಶೂರ್ಪಣಖಿಯ ಗರ್ವಭಂಗವಾಗಿದೆ. ಖರದೂಷಣಾದಿಗಳು ಹತರಾಗಿದ್ದಾರೆ. ಸೀತೆಯನ್ನು ಯಾರೋ ಕದ್ದೊಯ್ದಿದ್ದಾರೆ, ಜಟಾಯು ಮೃತನಾಗಿದ್ದಾನೆ ಎನ್ನುವ ವಿಷಯಗಳು ಗೊತ್ತಾಗುತ್ತದೆ. ಮಾಲ್ಯವಂತನು ನೇಮಿಸಿದ್ದ ದನುವೆಂಬ ರಾಕ್ಷಸನು, ಶಾಪದಿಂದ ಬಿಡುಗಡೆ ಹೊಂದಿ, ರಾಮನಿಗೆ ವಾಲಿ–ರಾವಣರ ಸ್ನೇಹವನ್ನು ತಿಳಿಸುವನು. ರಾಮನು ದುಂದುಭಿಯ ದೇಹವನ್ನು ಮೇಲಕ್ಕೆ ಚಿಮ್ಮಿಸುವನು. ರಾಮನು ವಾಲಿಯನ್ನು ಭೇಟಿಯಾಗುವನು. ವಾಲಿಗೆ ರಾಮನಲ್ಲಿ ಭಕ್ತಿ, ರಾವಣನಲ್ಲಿಯೂ ಸ್ನೇಹ. ಈ ದ್ವಂದ್ವದಲ್ಲಿ ಕಡೆಗೆ ಅವನು ಯೋಚಿಸಿ, ರಾಮನೊಡನೆ ಯುದ್ಧ ಮಾಡಲು ಬರುವನು. ರಾಮಬಾಣದಿಂದ ಗಾಯಗೊಂಡ ವಾಲಿಯು ಸಾಯುವ ಕಾಲದಲ್ಲಿ ರಾಮ–ಸುಗ್ರೀವರಿಗೆ ತಾನೇ ಸ್ನೇಹ ಮಾಡಿಸುತ್ತಾನೆ (ಅಂಕ 5).

ಇದನ್ನೆಲ್ಲ ಕಂಡ ಮಾಲ್ಯವಂತನು ದುಃಖಗೊಳ್ಳುವನು. ಹನುಮಂತನಿಂದ ಲಂಕೆಯ ದಹನ, ಅಕ್ಷಕುಮಾರನನ್ನು ಕೊಲ್ಲುವುದು, ಸೀತೆಗೆ ರಾಮನ ಉಂಗುರವನ್ನು ಕೊಡುವುದು, ರಾವಣ–ಮಂಡೋದರಿಯರ ಸಂವಾದ, ಕಪಿಸೇನೆಯು ಲಂಕೆಗೆ ಮುತ್ತಿಗೆ ಹಾಕುವುದು, ರಾಮನು ರಾವಣನ ಬಳಿ ಅಂಗದನನ್ನು ದೂತನನ್ನಾಗಿ ಕಳುಹಿಸುವುದು. ಆದರೂ ಯುದ್ಧ ಅನಿವಾರ್ಯವಾಗುತ್ತದೆ. ವಾಸವ–ಚಿತ್ರರಥರು ರಾಮ–ರಾವಣರ ಯುದ್ಧವನ್ನು ವರ್ಣಿಸುತ್ತಾರೆ. ರಾವಣನು ಹತನಾಗುತ್ತಾನೆ (ಅಂಕ 6).

ಲಂಕೆ–ಅಲಕೆಯರು ಮಾತನಾಡಿಕೊಳ್ಳುತ್ತಿರುತ್ತಾರೆ. ಅವರ ಸಂಭಾಷಣೆಯಿಂದ ಸೀತೆಯು ಬೆಂಕಿಯಲ್ಲಿ ಹೊಕ್ಕಿದ್ದು, ಕುಬೇರನು ಪುಷ್ಪಕ ವಿಮಾನವನ್ನು ಸ್ವೀಕರಿಸಿದ್ದು, ವಿಭೀಷಣನಿಗೆ ಪಟ್ಟಾಭಿಷೇಕವಾದುದು ತಿಳಿಯುತ್ತದೆ. ರಾಮ–ಸೀತೆ ಎಲ್ಲರೂ ಪುಷ್ಪಕ ವಿಮಾನ ಏರಿ, ಅಯೋಧ್ಯೆಗೆ ಹೊರಡುತ್ತಾರೆ. ಹೀಗೆ ಬರುವಾಗ ದಾರಿಯಲ್ಲಿ ಕಂಡ ಬೆಟ್ಟ–ಗುಡ್ಡಗಳು, ಪರ್ವತಗಳು, ನದೀ–ನದಗಳು, ಕಾಡುಗಳು ಹಾಗೂ ಅಲ್ಲಲ್ಲಿ ನಡೆದ ಹಿಂದಿನ ಘಟನೆಗಳು ಎಲ್ಲವನ್ನೂ ನೆನಪಿಸಿಕೊಳ್ಳುವರು. ರಾಮನು ಭರತನ ಬಳಿಗೆ ಬರುವನು. ರಾಮ–ಭರತರ ಸಮಾಗಮ. ಆಗ ವಸಿಷ್ಠ ಮೊದಲಾದವರು ಅಲ್ಲಿಗೆ ಬರುತ್ತಾರೆ. ರಾಮನು ಕಾಡಿಗೆ ಹೋಗಲು ಮಾಲ್ಯವಂತ–ಶೂರ್ಪಣಖಿಯರು ಕಾರಣರು, ಬೇರೆ ಯಾರೂ ಅಲ್ಲ ಎಂದು ಅರುಂಧತಿಯು ಎಲ್ಲರಿಗೂ ನಿಜಸಂಗತಿಯನ್ನು ತಿಳಿಸುವಳು. ವಿಶ್ವಾಮಿತ್ರರು ಅಲ್ಲಿಗೆ ಬರುವರು, ಎಲ್ಲರ ಸಮಕ್ಷಮದಲ್ಲಿ ರಾಮನಿಗೆ ಪಟ್ಟಾಭಿಷೇಕವಾಗುತ್ತದೆ. ರಾಮನನ್ನು ಎಲ್ಲರೂ ಹರಸುವರು (ಅಂಕ 7). ಇದು ಮಹಾವೀರಚರಿತ ನಾಟಕದ ಸಮಗ್ರ ಕಥಾವಸ್ತು.

ಭಾಸಮಹಾಕವಿಯು ಅಯೋಧ್ಯಾಕಾಂಡದ ಹಿಂದಿನ ಬಾಲಕಾಂಡದ ವಾಲ್ಮೀಕಿರಾಮಾಯಣದ ಕಥೆಯನ್ನು ಪ್ರತಿಮಾನಾಟಕದಲ್ಲಿ ಹೇಳಿದ್ದನು. ಭವಭೂತಿಯು ಬಾಲಕಾಂಡದ ಸ್ವಲ್ಪ ಕಥಾಭಾಗವನ್ನು ಬಿಟ್ಟು ಉಳಿದೆಲ್ಲ ಕಥೆಯನ್ನು ತನ್ನ ಮಹಾವೀರಚರಿತ ನಾಟಕದಲ್ಲಿ ತಂದಿದ್ದಾನೆ. ವಿಶ್ವಾಮಿತ್ರರ ಆಶ್ರಮದಲ್ಲಿಯೇ ರಾಮನು ಶಿವಧನುಸ್ಸನ್ನು ಮುರಿಯುತ್ತಾನೆ. ರಾಮನು ಮಿಥಿಲೆಯಿಂದಲೇ ಕಾಡಿಗೆ ಹೊರಡುತ್ತಾನೆ. ನಾಟಕದ ಬಹಳಷ್ಟು ಕಥಾಂಶಗಳು ತೆರೆಯ ಮರೆಯಲ್ಲಿ ನಡೆಯುತ್ತವೆ. ವಿಷ್ಕಂಭಕ, ಪ್ರವೇಶಕಗಳಿಂದ ನಡೆದ ಕಥೆಗಳು ತಿಳಿಯುತ್ತವೆ. ರಾಮನು ಕಾಡಿಗೆ ಹೋಗುವುದಕ್ಕೆ ರಾವಣನ ಕಡೆಯವರು, ಮಾಲ್ಯವಂತ, ಶೂರ್ಪಣಖಿಯರು ಕಾರಣವೇ ಹೊರತು, ಕೈಕೇಯೀ, ಮಂಥರೆ ಕಾರಣರಲ್ಲ. ಕೈಕೆಯೀ ದೇವಿಗೆ ದುರಾಸೆಯಿಲ್ಲ. ಶೂರ್ಪಣಖಿಯು ಮಂಥರೆಯಲ್ಲಿ ಪ್ರವೇಶಿಸಿ, ರಾಮನು ಕಾಡಿಗೆ ಹೋಗುವಂತೆ ಹೇಳುತ್ತಾಳೆ. ಆದರೆ ರಾಮನು ತಾನಾಗಿಯೇ ಕಾಡಿಗೆ ಹೋಗಲು ಬಯಸುತ್ತಾನೆ. ಸೀತೆ ಅಪಹರಣವಾದ ವಿಷಯವು ಸಂಪಾತಿ–ಜಟಾಯುಗಳ ಮಾತುಕತೆಯಿಂದ ಗೊತ್ತಾಗುತ್ತದೆ. ಇಲ್ಲಿ ಸೀತೆಯು ಲಕ್ಷ್ಮಣನನ್ನು ಜರಿಯುವ ಸಂದರ್ಭವು ಇಲ್ಲ. ಹಾಗಾಗಿ ಮಂಥರೆ, ಕೈಕೇಯೀ, ಸೀತೆಯರು ಉದಾತ್ತ ವ್ಯಕ್ತಿಗಳಾಗಿ ಇಲ್ಲಿ ಚಿತ್ರಿತರಾಗಿದ್ದಾರೆ. ನಾಟಕದ ಕೊನೆಯಲ್ಲಿ ಇಂದ್ರ ಮೊದಲಾದ ದೇವತೆಗಳು ಬಂದು ರಾಮನನ್ನು ಹೊಗಳುತ್ತಾರೆ. ಆದರೆ ಯಾರೂ ಸೀತೆಯ ಹೆಸರನ್ನೇ ಹೇಳುವುದಿಲ್ಲ. ಇದೊಂದು ಸೋಜಿಗ.

ಮಹಾವೀರಚರಿತದಲ್ಲಿ ವೀರರಸವು ಮುಖ್ಯವಾಗಿ ಚಿತ್ರಿತವಾಗಿದೆ.

**ಮಹಾಪುರುಷಸಂರಂಭಃ ಯತ್ರ ಗಂಭೀರಭೀಷಣಃ ।**
**ಪ್ರಸನ್ನಕರ್ಕಶಾ ಯತ್ರ ವಿಪುಲಾರ್ಥಾ ಚ ಭಾರತೀ ॥**

**ಅಪ್ರಾಕೃತೇಷು ಪಾತ್ರೇಷು ಯತ್ರ ವೀರಃ ಸ್ಥಿತೋ ರಸಃ ।**
**ಭೇದೈಸ್ಸೂಕ್ಷ್ಮೈರಭಿವ್ಯಕ್ತೈಃ ಪ್ರತ್ಯಾಧಾರಂ ವಿಭಜ್ಯತೇ ॥**
(ಮಹಾವೀರಚರಿತ, ಪ್ರಸ್ತಾವನೆ, ಸೂತ್ರಧಾರನ ಮಾತು)

ಇಲ್ಲಿ ದೊಡ್ಡ ದೊಡ್ಡ ಜನರ ಸಂಭ್ರಮವಿದೆ. ಮಾತುಗಳು ಗಂಭೀರವಾದದ್ದು, ಕಠೋರವಾದದ್ದು, ಕೆಲವು ಸಮಯ ಮಾತುಗಳು ಮೃದುವೂ, ನೇರವೂ ಆಗಿದ್ದು, ವಿಶಾಲವಾದ ಅರ್ಥಗಳನ್ನು ಹೊರಹಾಕುತ್ತವೆ. ಅನೇಕ ಘಟನೆಗಳಿಂದ ಮಹಿಮಾನ್ವಿತರಾದ ಪುರುಷರ ಶೌರ್ಯವು ವಿಜೃಂಭಿಸುತ್ತದೆ. ವೀರರಸವು ಈ ನಾಟಕದಲ್ಲಿ ಮುಖ್ಯವಾಗಿ ಎದ್ದು ತೋರುತ್ತದೆ, ಇದು ಕವಿಯ ಜಾಣ್ಮೆ.

ಶಿವಧನುಸ್ಸನ್ನು ರಾಮನು ಮುರಿದನೆಂದು ಕೋಪಗೊಂಡ ಪರಶುರಾಮನು ರಾಮನ ಮೇಲೆ ಯುದ್ಧಕ್ಕೆ ಬಂದಾಗ ವಸಿಷ್ಠ, ವಿಶ್ವಾಮಿತ್ರ, ಶತಾನಂದ, ಜನಕ, ದಶರಥರು ಬೇಡವೆನ್ನುತ್ತಾರೆ. ಈ ಸಮಯದಲ್ಲಿ ಇವರ ಮಾತುಗಳು ಉದಾತ್ತವಾಗಿವೆ. ಪರಶುರಾಮನ ಅಕಾರ್ಯಕ್ಕೆ ಕೋಪಿಸಿಗೊಂಡ ಶತಾನಂದನು **"ಧಿಗ್ ಬ್ರಾಹ್ಮಣ್ಯಂ ಧಿಗಂಗಿರಸಃ ಕುಲಮ್"** (ಅಂಕ 2.17) ಎಂದು ಹೇಳಿ ಎದುರು ನಿಲ್ಲುತ್ತಾನೆ.

ಜನಕನಾದರೋ ಕೋಪದಿಂದ –

**ಜ್ಯಾಜಿಹ್ವಯಾ ವಲಯಿತೋತ್ಕಟಕೋಟಿದಂಷ್ಟ್ರ–**
**ಮುದ್ಗಾರಿಘೋರಘನಘರ್ಘರಘೋಷಮೇತತ್ ।**
**ಗ್ರಾಸಪ್ರಸಕ್ತಹಸದಂತಕವಕ್ತ್ರಯಂತ್ರ–**
**ಜೃಂಭಾವಿಡಂಬಿ ವಿಕಟೋದರಮಸ್ತು ಚಾಪಮ್ ॥**
(ಮಹಾವೀರಚರಿತ, 3.29)

ಎಂದು ಪರಶುರಾಮನ ಮೇಲೆ ಬಿಲ್ಲೆತ್ತುತ್ತಾನೆ. ವಿಶ್ವಾಮಿತ್ರನೂ ಸಹ ಉದ್ರಿಕ್ತನಾಗಿ ನಿಂದಿಸುತ್ತಿರುವ ಪರಶುರಾಮನನ್ನು ಕಂಡು –

**ಅಬ್ರಹ್ಮವರ್ಚಸಮಿವ ಅಂಭಸಿ ಅಶಸ್ತ್ರಸಾಮರ್ಥ್ಯಮ್ ।**
**ಅರೇ ಜಾಮದಗ್ನ್ಯ! ಮನ್ಯಸೇ –**

**ಬ್ರಹ್ಮಕ್ಷತ್ರಸಮಾಜಮಾಕ್ಷಿಪಸಿ ಮದ್ವತ್ಸೇ ಚ ಘೋರಾಶಯ–**
**ಸ್ತೇನಾತಿಕ್ರಮಣೇನ ದುಃಖಯಸಿ ನಃ ಪಾಲ್ಯೋಽಸಿ ಸಂಬಂಧತಃ ।**
**ಅಂತಸ್ತ್ವಾಂ ಪ್ರತಿ ಕೋಪನಸ್ಯ ತರಲಃ ಶಾಪೋದಕಂ ದಕ್ಷಿಣಃ**
**ಪ್ರಾಕ್ಸಂಸ್ಕಾರವಶೇನ ಚಾಪಮಿತರಃ ಪಾಣಿರ್ಮಮಾನ್ವಿಷ್ಯತಿ ॥**
(ಮಹಾವೀರಚರಿತ, 3.43)

"ಎಲೈ ಭಾರ್ಗವನೇ! ನೀನು, ಬ್ರಾಹ್ಮಣ್ಯವನ್ನು, ಕ್ಷತ್ರಿಯತ್ವವನ್ನು ನಿಂದಿಸುತ್ತಿರುವೆ, ರಾಮನಲ್ಲಿ ಪಾಪಭಾವ ನಿನಗೆ, ಮಾಡಬಾರದ ಕೆಲಸವನ್ನು ಮಾಡಲು ಹೊರಟಿರುವ ನಿನಗೆ, ನನ್ನ ಬಲಗೈ ಶಾಪ ಜಲ ಹಿಡಿದು ಶಾಪ ಕೊಡಬೇಕೆಂದು ತವಕಿಸುತ್ತಿದೆ. ನನ್ನ ಎಡಗೈ ಬಿಲ್ಲನ್ನು ಹಿಡಿದು ನಿನ್ನ ಮೇಲೆ ಯುದ್ಧಕ್ಕೇರಲು ಸಿದ್ಧವಾಗುತ್ತಿದೆ" ಎನ್ನುತ್ತಾನೆ. ಆಗ ಪರಶುರಾಮನು ವಿಶ್ವಾಮಿತ್ರನಿಗೆ –

**ತ್ವಂ ಬ್ರಹ್ಮವರ್ಚಸಧರೋ ಯದಿ ವರ್ತಮಾನೋ**
**ಯದ್ವಾ ಸ್ವಜಾತಿಸಮಯೇನ ಧನುರ್ಧರಃ ಸ್ಯಾಃ ।**
**ಉಗ್ರೇಣ ಭೋಸ್ತವ ತಪಸ್ತಪಸಾ ವಹಾಮಿ**
**ಪಕ್ಷಾಂತರೇ ಚ ಸದೃಶಂ ಪರಶುಃ ಕರೋತು ॥**

(ಮಹಾವೀರಚರಿತ, 3.44)

ಎಲೈ ವಿಶ್ವಾಮಿತ್ರನೇ, ನೀನು ಬ್ರಹ್ಮವರ್ಚಸ್ಸಿನಿಂದ ಇದ್ದರೆ ಆಗ ನಾನು ನನ್ನ ಉಗ್ರ ತಪಃಶಕ್ತಿಯಿಂದ ನಿನ್ನನ್ನು ಸುಟ್ಟು ಬಿಡುತ್ತೇನೆ. ಒಂದು ವೇಳೆ ಪೂರ್ವಜನ್ಮ ಸ್ಮರಣೆಯಿಂದ ಕ್ಷತ್ರಿಯನಾಗಿ ಯುದ್ಧಕ್ಕೆ ಬಂದರೆ ನಿನ್ನನ್ನು ಕೊಲ್ಲಲು ನನ್ನ ಕೊಡಲಿ ಸಿದ್ಧವಾಗಿದೆ ಎಂದು ವೀರಾವೇಶದಿಂದ ಹೇಳುತ್ತಾನೆ.

ಈ ರೀತಿ ನಾಟಕದಲ್ಲಿ ವೀರರಸವನ್ನು ಅಭಿವ್ಯಕ್ತಗೊಳಿಸುವ ಸಂದರ್ಭಗಳು, ಮಾತುಗಳೇ ಹೆಚ್ಚಾಗಿ ಬರುತ್ತವೆ. ರಾಮನ ವೀರಾವೇಶದ ದೃಶ್ಯಗಳು ನಾಟಕದಲ್ಲಿ ಕಾಣಲಾರವು. ಬದಲಾಗಿ ಮಾತುಗಳಲ್ಲೇ ತೋರುತ್ತವೆ. ರಾಮನು ಗುರುವಿಗೆ ವಿಧೇಯನಾಗಿ, ಸಾತ್ತ್ವಿಕವಾಗಿ ಚಿತ್ರಿತನಾಗಿದ್ದಾನೆ. ಜಟಾಯು, ಸಂಪಾತಿ ಮೊದಲಾದವರು ಉದ್ಧತತನದಿಂದ ಮಾತನಾಡುತ್ತಾರೆ. ಶಬ್ದಾಡಂಬರದ ಮಾತುಗಳೇ ಹೆಚ್ಚು. ಕವಿಯಾದ ಭವಭೂತಿಯು ಈ ನಾಟಕದ ಭರತವಾಕ್ಯದಲ್ಲಿ –

**ಕ್ಷ್ಮಾಪಾಲಾಃ ಕ್ಷೀಣತಂದ್ರಾಃ ಕ್ಷಿತಿವಲಯಮಿದಂ ಪಾಂತು ತೇ ಕಾಲವರ್ಷಾ**
**ವಾರ್ವಾಹಾಃ ಸಂತು ರಾಷ್ಟ್ರಂ ಪುನರಖಿಲಮಪಾಸ್ತೇತಿ ಸಂಪನ್ನಶಸ್ಯಮ್ ।**
**ಲೋಕೇ ನಿತ್ಯಪ್ರಮೋದಂ ವಿದಧತು ಕವಯಃ ಶ್ಲೋಕಮಾಪ್ತಪ್ರಸಾದಂ**
**ಸಂಖ್ಯಾವಂತೋಽಪಿ ಭೂಮ್ನಾ ಪರಕೃತಿಷು ಮುದಂ**
**ಸಂಪ್ರಧಾರ್ಯ ಪ್ರಯಾಂತು** ॥ (ಮಹಾವೀರಚರಿತ, 7.43)

ರಾಜರು ಸದಾ ಜಾಗರೂಕರಾಗಿ ಈ ಭೂಮಂಡಲವನ್ನು ಕಾಪಾಡಲಿ. ಮೋಡಗಳು ಕಾಲಕಾಲಕ್ಕೆ ಮಳೆ ಸುರಿಸಲಿ, ದೇಶದಲ್ಲಿ ಯಾವ ಕಷ್ಟಗಳಿಲ್ಲದೆ ಸುಭಿಕ್ಷವು ನೆಲಸಲಿ, ಯುದ್ಧಾದಿಗಳಿಲ್ಲದೆ ಜನರು ಸಂತಸ ಪಡಲಿ. ಕವಿಗಳು ಸದಾ ಕಾಲ ಆನಂದವನ್ನುಂಟುಮಾಡುವ ಕಾವ್ಯಾದಿಗಳನ್ನು ರಚಿಸಲಿ. ವಿದ್ಯಾವಂತರಾದ ಜ್ಞಾನಿಗಳು ಇತರರು ರಚಿಸಿದ ಕೃತಿಗಳನ್ನು ಸಹೃದಯತೆಯಿಂದ ಓದಿ ಆನಂದಿಸುವಂತಹವರಾಗಲಿ ಎಂದು ಹೇಳಿರುವುದು ಗಮನಾರ್ಹವಾಗಿದೆ.

ಒಟ್ಟಾರೆ ಕವಿ ಭವಭೂತಿಯು ತನ್ನ ಮಹಾವೀರಚರಿತೆ ನಾಟಕದಲ್ಲೂ ಸಹ, ವಾಲ್ಮೀಕಿಯಿಂದ ಪ್ರಭಾವಿತನಾಗಿ, ಅವರ ಕೃತಿ ರಾಮಾಯಣದಿಂದ ಶಿಕ್ಷಿತನಾಗಿ, ತನ್ನದೇ ಆದ ಹೊಸತನದಿಂದ ರಾಮಾಯಣದ ಕಥೆಯನ್ನು ಅಪೂರ್ವವಾಗಿ, ಅಸದೃಶವಾಗಿ ಚಿತ್ರಿಸಿ, ಚಿರಸ್ಮರಣೀಯನಾಗಿದ್ದಾನೆ.

ಶಾಂತನಾದ ಪರಶುರಾಮನನ್ನು ಕುರಿತು ದಶರಥನು –

**ನಿಸರ್ಗತಃ ಪವಿತ್ರಸ್ಯ ಕಿಮನ್ಯತ್ಪಾವನಂ ತವ ।**
**ತೀರ್ಥೋದಕಂ ಚ ವಹ್ನಿಶ್ಚ ನಾನ್ಯತಃ ಶುದ್ಧಿಮರ್ಹತಃ** ॥ (4.27)

'ಹುಟ್ಟಿನಿಂದಲೇ ಪವಿತ್ರನಾದ ನಿನಗೆ ಬೇರೇನೂ ಪಾವಿತ್ರ್ಯ ಬೇಕು? ಅದರ ಅವಶ್ಯಕತೆಯಿಲ್ಲ. ಪವಿತ್ರ ತೀರ್ಥಜಲ ಹಾಗೂ ಬೆಂಕಿ ಇವೆರಡೂ ಸ್ವಾಭಾವಿಕವಾಗಿಯೇ ಪವಿತ್ರವಾದವುಗಳು. ಅವುಗಳನ್ನು ಶುದ್ಧಿಗೊಳಿಸಲು ಬೇರೆ ಯಾವುದರ ಅವಶ್ಯಕತೆಯೂ ಇಲ್ಲ' ಎಂದು ಹೇಳುವ ಮಾತು ಸ್ವೀಕಾರಾರ್ಹವಾಗಿದೆ. ❑

*Section of the audience during the Conference*

*With Best Compliments from:*

**Tirumala Tirupati Devasthanams**
**(TTD)**

TTD Administrative Building,
K.T. Road Tirupati 517 501,
Andhra Pradesh, India.

*With best compliments from :*

# PATHI SRIDHARA SHANTHA

## CHARITABLE TRUST

No. 60/62, 8th Main, 4th Block,
Jayanagar, Bengaluru - 560 011.

*With best compliments from :*

**SRI MANANDI N. SURESH**

**AND**

**SMT. MANANDI SRIMATHI SURESH**

*With best compliments from :*

**MALPANI CHARITABLE TRUST**

**BENGALURU**

आ नो भद्रा : क्रतवो यन्तु विश्वत : ।
"Let Noble Thoughts Come To Us From Every Side"
- Rig Veda 1-89-i

Admissions
OPEN
for 2018-20
Batch

Approved by **AICTE** & Affiliated to **Bangalore University**

# MBA Degree Programme TWO YEAR FULL-TIME

## Dual Specialisation of Your Choice*

| Marketing | Finance | HRM |
|---|---|---|
| Health Care Management | | |
| Banking Finance & Insurance Services Management | | |
| Startups & SMEs Management | | |

**Subject to Minimum intake*

NAAC
NATIONAL ASSESSMENT AND ACCREDITATION COUNCIL
**NAAC Accredited Institution**

भारतीय मानक ब्यूरो IS / ISO 9001
BUREAU OF INDIAN STANDARDS QMS
**IS / ISO 9001:2008 Certified Institution**

## Highlights of MPBIM

- Admissions through good CAT/MAT/CMAT Scores.
- Most sought after B-School in Bengaluru.
- Competent Faculty & Mentoring system.
- The best of Management Faculty of Bengaluru teach here.
- Special Seminars & Workshops based on industry needs.
- Synergy of Corporate Leadership & Institution of National Eminence.
- State-of-the-art corporate ambience.
- Fee includes Laptop, Text Books, Study Material & Blazer.
- Weekly interactions with Corporate & Business Leadership.
- Wi-Fi Enabled Campus.
- Personal Growth Laboratory.
- Well recognised out-bound & corporate training.
- Placement Assistance through Institute's UDYOG BHARATI.

**Bharatiya Vidya Bhavan's**

## M P Birla Institute of Management

#43, Race Course Road, Bengaluru 560 001
•Phone: +91-80-4277 2000 •Fax: +91-80-2238 9635
•E-mail: admission@mpbim.com
www.mpbim.com

**Ranked 21st among top 100 B Schools Surveyed by SILICON INDIA EDUCATION in the survey "What if not IIMs - B-School survey 2017"**

silicon india Education

*With best compliments from:*

विजया बैंक

**VIJAYA BANK**

(A GOVT. OF INDIA UNDERTAKING)

**A friend you can bank upon**

*With best compliments from:*

MICRO LABS

**MICRO LABS LIMITED**

No. 26, Race Course Road, Bengaluru - 560 001.

TVS Racing

NOT JUST THE RACER'S CHOICE.

Apache RTR 200 4V

RACING DNA UNLEASHED

The TVS Apache RTR 200 4V bags the JK Tyre Indian **Motorcycle of the Year 2017** in addition to winning the CNBC-TV18 - Overdrive **Jury Motorcycle of the Year** and the Viewers' Choice Bike of the Year as well as the Best **Motorcycle up to 250cc** in the NDTV Car and Bike awards.

*With Best Compliments From :*

**Prathibha**

1/1 Raja Ram Mohan Ray Road, Richmond Circle,
Bangalore - 560 025
Ph : 080 - 41145500 / 22213548
info@prathibha.com, valet parking

*With best compliments from :*

**SHRI DAYANAND PAI**

YOURS FAITHFULLY SINCE 1925 से आपका विश्वसनीय

विश्वसनीय मैत्रीपूर्ण
Faithful. Friendly
सिंडिकेटबैंक
SyndicateBank
भारत सरकार का उपक्रम A Govt. of India Undertaking

# Your dream home... We make it a reality!

## SyndNivas
Home Loan
• Buy • Build • Renovate

- Affordable rate of interest
- Repayment: up to 30 years or 75 years of age, whichever is earlier
- Hassle-free processing & quick sanction
- No pre-payment charges

Save up to ₹2.67 lakhs*
as subsidy
under
PMAY

Follow us on

* conditions apply

Toll Free: 1800 3011 3333 | 1800 208 3333

www.syndicatebank.in

Bharatiya Vidya Bhavan
BENGALURU

Srila Prabhupada's
ISKCON
BANGALORE

# Message of Ramayana

A unique three-day National Conference on the

## Message of Ramayana

July 6, 7 & 8th 2018